# ಅಪಸ್ವರ-ಅಪಜಯ

ತ್ರಿವೇಣಿ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಅಪಸ್ವರ–ಅಪಜಯ

(ಸಾಮಾಜಿಕ ಕಾದಂಬರಿ)

ತ್ರಿವೇಣಿ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

**APASWARA-APAJAYA :** A Social Novel by **Triveni,** Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

**ಮುದ್ರಿತ ವರ್ಷ** : ೨೦೧೧
**ಪ್ರತಿಗಳು** : ೧೦೦೦
ಪುಟಗಳು : xvi + ೪೦೪
ಬೆಲೆ : ರೂ. ೯೦/-

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು - ೫೬೦ ೦೨೦ ದೂ : ೨೩೩೪೨೭೨೪

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

# ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)

ದಿನಾಂಕ ೨೪.೦೧.೨೦೧೧

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು - ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ- ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೦೧.೨೦೧೧

(ಗೋವಿಂದ ಎಂ. ಕಾರಜೋಳ)

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಕಷ್ಟಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ !

**ಎಲ್.ಎಸ್. ಶೇಷಗಿರಿ ರಾವ್**

ಅಧ್ಯಕ್ಷ

ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

## ಹೊನ್ನುಡಿ

ನಾಡಿನ ಭಾಷೆ, ಸಂಸ್ಕೃತಿ ಮತ್ತು ಜನಜೀವನದ ಪರಿಮಾಣವನ್ನು ಅಳೆಯುವುದರಲ್ಲಿ ಅಲ್ಲಿನ ಸಾಹಿತ್ಯದ ಕೃತಿಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಸುಮಾರು ಎರಡು ಸಾವಿರದ ಐದನೂರು ವರ್ಷಗಳಿಗೂ ದೀರ್ಘವಾದ ಐತಿಹಾಸಿಕ ಪರಂಪರೆ ಚೆಲುವ ಕನ್ನಡ ನಾಡಿನದು. ಹಾಗೆಯೇ ಅದರ ಸಾಹಿತ್ಯ ಕೂಡ ಪಂಪ, ಕುಮಾರವ್ಯಾಸ, ಶರಣರು, ದಾಸರು ಮೊದಲಾದವರಿಂದ ಸಮೃದ್ಧವಾಗಿ ಬೆಳೆದಿದೆ. ಅದರ ಸಮೃದ್ಧತೆಗೆ ಏಳು ಜ್ಞಾನಪೀಠಗಳ ಗರಿಮೆಯೇ ಸಾಕ್ಷಿ.

ಕರ್ನಾಟಕವು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಈ ಸಂದರ್ಭದಲ್ಲಿ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಆಚರಿಸುತ್ತಿರುವುದು ಒಂದು ಐತಿಹಾಸಿಕವೂ ಹಾಗೂ ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ.

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಅಂಗವಾಗಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕನ್ನಡ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಹಾಗೂ ಸೃಜನೇತರ ಪ್ರಕಾರದ ೧೦೧ ಕೃತಿಗಳನ್ನು, ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ.

ಈ ವಿಶಿಷ್ಟ ಕೃತಿಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ನನ್ನ ವಂದನೆಗಳು. ಈ ಸಾಹಿತ್ಯ ಮಾಲಿಕೆಯನ್ನು ಸಾಹಿತ್ಯಾಭಿಮಾನಿಗಳು ಸ್ವಾಗತಿಸುವ ಮೂಲಕ ಈ ಕೃತಿಗಳ ಸದುಪಯೋಗ ಪಡೆದುಕೊಳ್ಳುತ್ತಾರೆಂದು ಭಾವಿಸಿದ್ದೇನೆ.

(ಐ.ಎಂ. ವಿಠ್ಠಲಮೂರ್ತಿ)
ವಿಶೇಷಾಧಿಕಾರಿಗಳು
ವಿಶ್ವ ಕನ್ನಡ ಸಮ್ಮೇಳನ

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

(ರಮೇಶ್ ಬಿ.ಝಳಕಿ)
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

## ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕ್ಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

## ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**

ಪ್ರೊ. ಎಲ್.ಎಸ್. ಶೇಷಗಿರಿ ರಾವ್

**ಸದಸ್ಯರು**

ಡಾ॥ ಚಂದ್ರಶೇಖರ ಕಂಬಾರ

ಡಾ॥ ಎಂ.ಎಂ. ಕಲಬುರ್ಗಿ

ಡಾ॥ ದೊಡ್ಡರಂಗೇಗೌಡ

ಡಾ॥ ಅರವಿಂದ ಮಾಲಗತ್ತಿ

ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಡಾ॥ ಪ್ರಧಾನ್ ಗುರುದತ್ತ

ಡಾ॥ ಹಂಪ ನಾಗರಾಜಯ್ಯ

ಡಾ॥ ಎಚ್.ಜೆ. ಲಕ್ಕಪ್ಪಗೌಡ

ಶ್ರೀಮತಿ ಸಾರಾ ಅಬೂಬಕ್ಕರ್

ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**

ಶ್ರೀ ಮನು ಬಳಿಗಾರ್, ಕ.ಆ.ಸೇ.

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಮೊದಲ ಮಾತು

ನಾಲ್ಕು ವರ್ಷಗಳ ಹಿಂದೆ ಪ್ರಕಟವಾದ ನನ್ನ 'ಅಪಸ್ವರ' ಕಾದಂಬರಿ ಯನ್ನೋದಿದ ಅನೇಕರು, ಕತೆಯ ಮುಕ್ತಾಯ ಅಪೂರ್ಣವಾಯಿತೆಂದು ಅಭಿಪ್ರಾಯಪಟ್ಟು, ಎರಡನೆಯ ಭಾಗವನ್ನೇಕೆ ಬರೆಯಬಾರದೆಂದು ಪ್ರಶ್ನಿಸಿದರು. ಅಪಜಯ, ಅಪಸ್ವರದ ಮುಂದಿನ ಭಾಗವಾಗಬೇಕೆಂದು ಉದ್ದೇಶವಾದರೂ, ಇದನ್ನು ಸ್ವತಂತ್ರ ಕೃತಿಯೆಂದು ಭಾವಿಸಿದರೂ ತಪ್ಪಾಗಲಾರದು.

ತ್ರಿವೇಣಿ

# ಪರಿವಿಡಿ


| | |
|---|---|
| ಶುಭ ಸಂದೇಶ | iii |
| ಚೆನ್ನುಡಿ | Iv |
| ಅಧ್ಯಕ್ಷರ ಮಾತು | v |
| ಹೊನ್ನುಡಿ | vi |
| ಎರಡು ನುಡಿ | vii |
| ಪ್ರಕಾಶಕರ ಮಾತು | viii |
| ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ | x |
| ಮೊದಲ ಮಾತು | xiii |
| ೧. ಅಪಸ್ವರ | ೧-೨೦೦ |
| ೨. ಅಪಜಯ | ೨೦೧-೪೦೪ |

# ಅಪಸ್ವರ–ಅಪಜಯ

# ಅಪಸ್ವರ

# ರಾಗ

ಜಟಕ ಗಾಡಿಯೊಂದು ಚಾಮರಾಜಪೇಟೆ ರಸ್ತೆಯಲ್ಲಿ ನಿಧಾನವಾಗಿ ಹೋಗುತ್ತಿತ್ತು. ಗಾಡಿಗೆ ಬಡಕಲು ಮೈಯ ಸೊರಗಿದ ಕುದುರೆಯೊಂದನ್ನು ಕಟ್ಟಿತ್ತು. ಜಟಕಾ ಸಾಬಿ ಆರಾಮವಾಗಿ ಸಿಳ್ಳೆ ಹಾಕುತ್ತ ಕುದುರೆಯನ್ನು ಮೆಲ್ಲಗೆ ಓಡಿಸುತ್ತಿದ್ದ.

"ಬೇಗ ಗಾಡಿ ಹೊಡಿ ಸಾಬ್. ಆಮೇಲೆ ನಮಗೆ ಟ್ರೈನು ತಪ್ಪಿ ಹೋದೀತು." ಒಳಗಿನಿಂದ ಗೊಗ್ಗರ ದನಿಯೊಂದು ಆನಂದದಲ್ಲಿ ಮೈಮರೆತಿದ್ದ ಸಾಬಿಯನ್ನು ಎಚ್ಚರಿಸಿತು.

"ಆರಾಮ ಕುಳಿತುಕೊಳ್ಳಿ ಸಾಮಿ. ನಿಮ್ಮನ್ನು ಸರಿಯಾದ ಟೈಮಿಗೆ ಟೇಸರ್‌ಗೆ ಕರೆದುಕೊಂಡು ಹೋಗಿ ಬಿಡ್ತೀನಿ. ಇಪ್ಪತ್ತು ವರ್ಷದಿಂದ ಈ ಊರ್‍ನಾಗೆ ಗಾಡಿ ಹೊಡೀತೀನಿ. ರೈಲು ಟೇಮು ನನಗೆ ಗೊತ್ತಿಲ್ಲವೇ?" ಎನ್ನುತ್ತಾ ಸಾಬಿ 'ಹೇಯ್' ಎಂದು ಕುದುರೆಯನ್ನು ಎರಡು ಬಾರಿ ಚಾಟಿಯಿಂದ ಹೊಡೆದ. ಕುದುರೆ ತನ್ನ ಓಟವನ್ನು ಚುರುಕು ಮಾಡಿತು.

"ಇನ್ನೂ ವಸಿ ಮುಂದಕ್ಕೆ ಬನ್ನಿ ಮಹಾರಾಜ್."

"ಎಷ್ಟು ಮುಂದಕ್ಕೆ ಬರಲೋ? ಇನ್ನೂ ಮುಂದೆ ಬಾ ಎಂದರೆ ಬಂದು ಕುದುರೆಯ ಮೇಲೆ ಕುಳಿತುಕೊಳ್ಳಬೇಕಾಗುತ್ತದೆ" ಕೃಷ್ಣಪ್ಪನವರು ಸ್ವಲ್ಪ ಜುಗುಪ್ಸೆಯಿಂದ ನುಡಿದು ಮತ್ತಷ್ಟು ಮೇಲಕ್ಕೆ ಸರಿದರು.

ಕೃಷ್ಣಪ್ಪನವರಿಗೆ ಸುಮಾರು ನಲವತ್ತೈದು ವರ್ಷಗಳಾಗಿತ್ತು. ಮುಖದಲ್ಲಿ ದಯೆ, ದೊಡ್ಡಸ್ತಿಕೆ ಎದ್ದು ತೋರುತ್ತಿದ್ದವು. ಅವರು ಧರಿಸಿದ್ದ ಉಡುಪುಗಳು ಅವರ ಮಧ್ಯಮತರದ ಜೀವನವನ್ನು ಸಾರುತ್ತಿದ್ದವು. ಬಾದಾಮಿ ಬಣ್ಣದ ಚೆಕ್ಕಿನ ಕೋಟು, ಶುಭ್ರವಾಗಿದ್ದ ಕಚ್ಚೆಪಂಚೆ, ತಲೆಯ ಮೇಲೆ ಕಪ್ಪುಬಣ್ಣದ ಟೋಪಿ ಹಾಕಿಕೊಂಡು ಕಣ್ಣಿಗೆ ಕನ್ನಡಕ ಹಾಕಿದ್ದರು.

"ಎಲ್ಲೀಗೆ ಸಾಮಿ ತಾವೀಗ ಹೋಗೋದು?"

"ಮೈಸೂರಿಗೆ."

"ಎಜ್ಜಿಬಿಷನ್ ನೋಡೋಕಾ ಸಾಮಿ?"

"ಅಲ್ಲ ಕಣೋ. ನಮ್ಮ ಸ್ಥಳವೇ ಮೈಸೂರು. ಏನೋ ಕೆಲಸದ ಮೇಲೆ ಬೆಂಗಳೂರಿಗೆ ಬಂದಿದ್ದೆ ಅಷ್ಟೆ" ಎನ್ನುತ್ತ ಕೃಷ್ಣಪ್ಪನವರು ಜೋಬಿನೊಳಗೆ ಕೈಹಾಕಿ

ಕರೀಮರದಿಂದ ಮಾಡಿದ್ದ ಪುಟ್ಟ ನಶ್ಯದ ಡಬ್ಬಿಯನ್ನು ಈಚೆಗೆ ತೆಗೆದು, ಒಂದು ಚಿಟಿಕೆ ಮೂಗಿಗೇರಿಸಿ ಕೊಳಕು ಕಂದು ಬಣ್ಣದ ಕರ್ಚೀಫಿನಿಂದ ಮೂಗೊರೆಸಿ ಕೊಂಡರು. ಜಟಕದ ಮೂಲೆಯೊಂದರಲ್ಲಿ ಹುದುಗಿಕೊಂಡು ಕುಳಿತು, ತನ್ನ ಮೊಣಕಾಲುಗಳ ಸಂದಿಯಲ್ಲಿ ಮುಖ ಮುಚ್ಚಿಕೊಂಡು ಆಗಾಗ್ಗೆ ಬಿಕ್ಕುತ್ತಿದ್ದ ಪುಟ್ಟ ಹುಡುಗಿಯೊಬ್ಬಳ ಕಡೆ ತಿರುಗಿ,

"ಮೀರಾ, ಇಲ್ಲಿ ನೋಡು. ಈ ಡಬ್ಬೀಮೇಲೆ ಎಷ್ಟು ಒಳ್ಳೇ ಚಿತ್ರವಿದೆ. ಚೆನ್ನಾಗಿದೆಯೋ ಇಲ್ಲವೋ ನೋಡು" ಎನ್ನುತ್ತ ಡಬ್ಬಿಯನ್ನು ಮೀರಳ ಮುಂದೆ ಚಾಚಿದರು. ಮೀರ ಬಿಕ್ಕಳಿಸುತ್ತ ತನ್ನ ಮುಖ ಮೇಲೆತ್ತಿ ನೀರು ತುಂಬಿದ ಕಣ್ಣು ಗಳಿಂದ ಡಬ್ಬಿಯ ಕಡೆ ನೋಡಿದಳು. ಮುಖವೆಲ್ಲ ಕಣ್ಣೀರಿನಿಂದ ತೊಯ್ದು ಹೋಗಿತ್ತು. ಮುಂದಲೆಯ ಕೂದಲಿನ ಎಸಳುಗಳು ಒದ್ದೆಯಾಗಿ ಕೆನ್ನೆಗೆ ಅಂಟಿ ಕೊಂಡಿದ್ದವು. ಕಣ್ಣುಗಳೆರಡೂ ಕೆಂಪಗಾಗಿದ್ದವು.

"ಹೇಗಿದೆ ಚಿತ್ರ?"

ಮೀರ ಡಬ್ಬಿಯ ಮೇಲಿದ್ದ ಕುದುರೆ ಸಾರೋಟಿನ ಚಿತ್ರವನ್ನು ಎವೆಯಿಕ್ಕದೆ ನೋಡಿದಳು.

"ಹೇಗಿದೇಮ್ಮಾ?"

ಮೀರ ಉತ್ತರ ಹೇಳುವ ಬದಲು ಮುಖ ಮುಚ್ಚಿಕೊಂಡು ಅಳತೊಡಗಿ ದಳು. ಕೃಷ್ಣಪ್ಪನವರು ಸ್ವಲ್ಪ ಬೇಸರದ ದನಿಯಲ್ಲಿ,

"ಅಳಬೇಡಾಂತ ಎಷ್ಟು ಸಲ ಹೇಳೋದು? ಅಳುವ ಹಾಗಿದ್ದರೆ ನಿನ್ನ ಇಲ್ಲೇ ಇಳಿಸಿ ನಾನೊಬ್ಬನೇ ಮೈಸೂರಿಗೆ ಹೊರಟುಹೋಗುತ್ತೇನೆ" ಎಂದು ಗದರಿದರು.

ಮೀರ ಹೆದರಿ ಉಸಿರು ಬಿಗಿ ಹಿಡಿದಳು. ಮೀರಳ ದುಃಖವನ್ನು ಮೊದಲಿ ನಿಂದಲೂ ಗಮನಿಸಿದ್ದ ಸಾಬಿ ಹಿಂದಿರುಗಿ

"ಯಾಕ್ಸಾಮಿ, ಬಚ್ಚಾ ಅಳ್ತದೆ?" ಎಂದ.

"ಯಾಕೋ ಗೊತ್ತಿಲ್ಲ" ಎಂದು ಕೃಷ್ಣಪ್ಪನವರು ಮೊಟಕಾಗಿ ನುಡಿದು ಬೇರೆಕಡೆ ಮುಖ ತಿರುಗಿಸಿದರು. ಗಾಡಿ ಸ್ಟೇಷನ್ನು ತಲುಪುವವರೆಗೂ ಮೀರಳ ಅಳು ಒಂದೇ ಸಮ ಸಾಗಿತ್ತು. ಕೃಷ್ಣಪ್ಪನವರು ಗಾಡಿಯಿಂದಿಳಿದು ಮೀರಳನ್ನು ಎತ್ತಿ ಇಳಿಸಿದರು. ಗಾಡಿಯವನಿಗೆ ಬಾಡಿಗೆ ಕೊಟ್ಟು ಟಿಕೀಟು ತರಲು ಹೋದರು. ಮೀರ ದೊಡ್ಡಪ್ಪನ ಹಿಂದೆಯೇ ಅಳುಕುತ್ತ ಹೊರಟಳು. ಕೃಷ್ಣಪ್ಪನವರು ಮೀರ ತಮ್ಮ ಹಿಂದೆಯೇ ಬರುವುದನ್ನು ನೋಡಿ

'ನನ್ನ ಜೊತೆ ಬರಬೇಡ. ಸಾಮಾನುಗಳನ್ನು ನೋಡಿಕೊಂಡು ಇಲ್ಲೇ ನಿಂತಿರು" ಎಂದು ಹೇಳಿ 'ಕ್ಯೂ' ನಿಂತರು. ಮೀರ ಜನರ ಗುಂಪು ನೋಡಿ ತನ್ನ

ದುಃಖಕ್ಕೆ ವಿರಾಮ ಕೊಟ್ಟಿದ್ದಳು. ಜನರ ಗುಂಪಿನ ಕಡೆ ಹೆದರಿದ ದೃಷ್ಟಿ ಬೀರಿ, ಆಗಾಗ್ಗೆ ದೊಡ್ಡಪ್ಪನ ಕಡೆ ತಿರುಗಿ ಸಮಾಧಾನ ಪಡೆಯುತ್ತಿದ್ದಳು. ಅವಳ ಸುತ್ತ ಒಂದು ಗೋಣಿಚೀಲದ ತುಂಬ ಪಾತ್ರೆಗಳು, ಹಾಸಿಗೆಯ ಸುರುಳಿ, ಎರಡು ಟ್ರಂಕು, ಒಂದು ಬುಟ್ಟಿ ಮಲಗಿದ್ದವು. ಕೃಷ್ಣಪ್ಪನವರು ಟಿಕೀಟು ತೆಗೆದುಕೊಂಡು ಬಂದು, 'ಕೂಲಿ, ಕೂಲಿ ಬೇಕೇನಮ್ಮ' ಎಂದು ಮೀರಳನ್ನು ಹೆದರಿಸುತ್ತಿದ್ದ ಕೂಲಿಯವರನ್ನು ದೂರ ಹೊರಡಿಸಿ ಒಬ್ಬನಿಗೆ ಸಾಮಾನು ತೆಗೆದುಕೊಂಡು ಬರಲು ಹೇಳಿದರು.

ಕೃಷ್ಣಪ್ಪನವರು ಸಾಮಾನುಗಳನ್ನು ಟ್ರೈನಿನಲ್ಲಿರಿಸಿ ಮೀರಳಿಗೆ ಕುಳಿತು ಕೊಳ್ಳಲು ಸ್ಥಳ ಮಾಡಿಕೊಟ್ಟು,

"ಮಗು, ಹಸಿವಾಗುತ್ತದೆಯೇ?" ಎಂದರು.

"ಹ್ಞೂ. ತುಂಬಾ ಹಸಿವು."

"ಹಾಗಾದರೆ ಇಲ್ಲೇ ಕುಳಿತಿರು. ನಾನು ಹೋಗಿ ಕಾಫಿ, ತಿಂಡಿ ತರುತ್ತೇನೆ" ಎನ್ನುತ್ತ ಕೃಷ್ಣಪ್ಪನವರು ಕೆಳಗಿಳಿದು ಹೋದರು. ಮೀರ ಅವರು ಹೋದ ದಾರಿ ಯನ್ನೇ ನೋಡತೊಡಗಿದಳು. ಕಾಲುಗಂಟೆಯ ನಂತರ ಕೃಷ್ಣಪ್ಪನವರು ಒಂದು ಲೋಟ ಕಾಫಿ, ಎರಡು ಇಡ್ಲಿ ಕಟ್ಟಿಸಿಕೊಂಡು ಬಂದರು. ಮೀರಳ ಎದುರಿಗೆ ತಿಂಡಿ, ಕಾಫಿ ಇಟ್ಟು

"ತಿನ್ನು ಮಗು" ಎಂದರು. ಮೀರ ಆತುರದಿಂದ ತಿನ್ನತೊಡಗಿದಳು.

ಎದುರಿಗೆ ಕುಳಿತಿದ್ದ ಪೊದೆಹುಬ್ಬಿನ, ಗಿಣಿಮೂಗಿನ ಮುದುಕರೊಬ್ಬರು ತಾವು ಹೊದೆದಿದ್ದ ಹಸಿರು ಶಾಲನ್ನು ಮೈಗೆ ಮತ್ತಷ್ಟು ಬಿಗಿಯಾಗಿ ಸುತ್ತಿಕೊಳ್ಳುತ್ತ,

"ನಿಮ್ಮದೇ ಸಾರ್ ಮಗು?" ಎಂದರು.

"ಅಲ್ಲ, ನನ್ನ ತಮ್ಮನ ಮಗಳು."

"ಹುಡುಗಿ ತುಂಬಾ ಸುಟಿಯಾಗಿದೆ. ಮುಖದಲ್ಲಿ ಸರಸ್ವತೀ ಕಳೆ ಹೇಗಿದೆ ನೋಡಿ."

ಮುದುಕರ ಮಾತು ಸುಳ್ಳಾಗಿರಲಿಲ್ಲ. ಮೀರ ಕೊಳೆಯಾಗಿದ್ದ ಹಳದೀ ಚೀಟಿಯ ಜಂಪರ್ ತೊಟ್ಟು, ಟಿಕ್ಕು ಅರ್ಧಂಬರ್ಧ ಗೀರುಗೀರಿನ ಲಂಗ ತೊಟ್ಟಿ ದ್ದಳು. ಅವಳದು ಮೊದಲೇ ಪುಟ್ಟ ಪುಟ್ಟ ಗುಂಗುರುಗಳಿಂದ ತುಂಬಿದ ತಲೆ. ಕೂದಲಿಗೆ ಬಾಚಣಿಗೆ, ಎಣ್ಣೆ ಹಾಕಿ ಒಂದು ದಿನವಾಗಿತ್ತು. ಕೂದಲು ಚೆಲ್ಲಾ ಪಿಲ್ಲಿಯಾಗಿ ಕೆದರಿ ಭುಜ, ಕೊರಳನ್ನು ಅರ್ಧ ಮುಚ್ಚಿದ್ದವು. ಕೈಗಳಲ್ಲಿ ಒಂದು ಜೊತೆ ಬೆಳ್ಳಿಯ ಬಳೆ, ಕೊರಳಿನಲ್ಲಿ ಬೆಳ್ಳಿಯಿಂದ ಸುತ್ತಿಸಿದ ಕೆಂಪುಮಣಿಯ ಸರ.... ಈ ಉಡುಗೆ ತೊಡುಗೆಯಲ್ಲೂ ಮುಖದ ಲಕ್ಷಣ ಮಲಿನವಾಗಿರಲಿಲ್ಲ. ನಸು ನೀಳವಾದ ಮುಖ, ತುಂಬಿದ ಕೆನ್ನೆಗಳು, ಸ್ವಲ್ಪ ದಪ್ಪ ಎನಿಸುವ ತುಟಿಗಳು, ಎಲ್ಲ

ಕ್ಕಿಂತ ಮಿಗಿಲಾಗಿ ತುಂಟತನ, ಸ್ವಪ್ರತಿಷ್ಠೆ ಎನಿಸುವ ಸ್ವಾಭಿಮಾನ ಚೆಲ್ಲುವ ಕಣ್ಣು ಗಳು ಮೀರಳನ್ನು 'ಲಕ್ಷಣವಂತೆ' ಎಂದು ಹೇಳುತ್ತಿದ್ದವು. ಮನ ಸೆಳೆಯುವ ಮೋಹಿನಿಯರ ಗುಂಪಿಗೆ ಅವಳನ್ನು ಸೇರಿಸಲಾಗದಿದ್ದರೂ ಏನೋ ಒಂದು ಬಗೆಯ ಸುಪ್ತಲಾವಣ್ಯ ನೋಟಕರ ಕಣ್ಣುಗಳನ್ನು ಸೆಳೆಯುತ್ತಿದ್ದವು.

ಟ್ರೈನು ಹೊರಡುವ ಸಮಯವಾಯಿತು. ಬೂದುಬಣ್ಣದ ಕೋಟಿನ ವ್ಯಕ್ತಿಯೊಬ್ಬರು ಕೈಯಲ್ಲೊಂದು ಚೀಲ ಹಿಡಿದು ಆತುರದಿಂದ ಬಾಗಿಲು ತೆಗೆದುಕೊಂಡು ಬಂದರು. ಆತ ಕೃಷ್ಣಪ್ಪನವರನ್ನು ನೋಡಿದ ಕೂಡಲೇ ಪರಿಚಯದ ನಗು ನಕ್ಕು,

"ನಮಸ್ಕಾರ ಎಲ್ಲಿಗೆ ದಯಮಾಡಿಸುತ್ತಿರುವಿರಿ?" ಎಂದರು.

"ಮೈಸೂರಿಗೆ ಹೋಗುತ್ತಿದ್ದೀನಿ ದೇವ್ರು."

"ಸುದ್ದಿ ಕೇಳಿದೆ ಸಾರ್. ನಿಮ್ಮ ತಮ್ಮ ಹೋಗಿಬಿಟ್ಟರಂತೆ. ಪಾಪ! ಏನಾಗಿತ್ತೋ?"

"ನ್ಯೂಮೋನಿಯಾ ಆಗಿತ್ತು."

"ಅವರು ಹೋಗಿ ಎಷ್ಟು ದಿನವಾಯ್ತು?"

"ಆಗಲೇ ಹದಿನೈದು ದಿನವಾಯ್ತು."

"ಬಹಳ ಅನ್ಯಾಯವಾಯಿತು ಸಾರ್. ಪಾಪ! ಇನ್ನೂ ಅಷ್ಟೇನೂ ವಯಸ್ಸಾಗಿರಲಿಲ್ಲ" ಎನ್ನುತ್ತ ಹತ್ತಿರ ಬಂದು ಮತ್ತಷ್ಟು ದನಿ ತಗ್ಗಿಸಿ "ಸ್ವಲ್ಪ ಜರುಗಿ ಸಾರ್. ಇಲ್ಲೇ ಮದ್ದೂರಲ್ಲಿ ಇಳಿದುಬಿಡುತ್ತೇನೆ" ಎಂದರು.

ಕೃಷ್ಣಪ್ಪನವರು ಸ್ವಲ್ಪ ಜರುಗಿ ಸ್ಥಳ ಮಾಡಿಕೊಟ್ಟರು. ಆತ ತಮ್ಮ ಟೋಪಿಯನ್ನು ತೆಗೆದು ಬೆಂಚಿನ ಮೇಲಿರಿಸಿ ನುಣ್ಣಗೆ ಹೊಳೆಯುತ್ತಿದ್ದ ತಮ್ಮ ತಲೆಯನ್ನು ಕರ್ಚೀಫಿನಿಂದ ಒರೆಸಿಕೊಂಡು ಪುನಃ ಟೋಪಿ ಹಾಕಿಕೊಂಡರು. ಕೃಷ್ಣಪ್ಪನವರು ಸರಿದು ಸ್ಥಳ ಮಾಡಿಕೊಟ್ಟ ಜಾಗದಲ್ಲಿ ಕುಳಿತು ಸಹಾನುಭೂತಿಯ ಸ್ವರದಿಂದ

"ಪಾಪ! ಆತನ ಹೆಂಡತಿ ಮಕ್ಕಳ ಗತಿ ಏನು ಸಾರ್?" ಎಂದರು.

"ಹೆಂಡತಿ ಪುಣ್ಯವಂತೆ ನರಸಿಂಹಯ್ಯ. ಅವಳು ಕಣ್ಣುಮುಚ್ಚಿ ಆಗಲೇ ಆರು ತಿಂಗಳಾಯಿತು. ಇದೊಂದು ಹುಡುಗಿ ಅವರ ಮನೆ ಹೆಸರು ಹೇಳುವುದಕ್ಕೆ ಇದೆ."

"ಇನ್ನು ಮೇಲೆ ನೀವೇ ಪೋಷಕರು ಅಂತ ತೋರುತ್ತದೆ."

"ಹೌದು ಸ್ವಾಮಿ. ಇನ್ನು ಅದಕ್ಕೆ ಯಾರು ದಿಕ್ಕು?"

"ಹೋಗಲಿ ಬಿಡಿ. ನಿಮಗೆ ನಾಲ್ಕು ಜನ ಗಂಡುಮಕ್ಕಳು ಮಾತ್ರ ಇದ್ದರು. ಅವರೊಡನೆ ಮಗಳಾಗಿ ಇವಳೊಬ್ಬಳಿರುತ್ತಾಳೆ" ಎನ್ನುತ್ತ ತಮ್ಮ ಸಂಭಾಷಣೆಯನ್ನು ಕೇಳುತ್ತ ಕುಳಿತಿದ್ದ ಮೀರಳ ಕಡೆ ತಿರುಗಿ

"ನಿನ್ನ ಹೆಸರೇನಮ್ಮಾ, ಮಗು?" ಎಂದರು.

"ಮೀರ."

"ಮುಖದಲ್ಲಿ ಕಳೆ ಹೇಗಿದೆ ನೋಡಿ ಸ್ವಾಮಿ!"

ಕೃಷ್ಣಪ್ಪನವರು ಅರ್ಧ ಬೇಸರದಿಂದಲೂ ಅರ್ಧ ವಿನೋದದಿಂದಲೂ 'ಕಳೆ ಬಿಟ್ಟು ಕೊಳೆ ಇದೆ' ಎಂದರು. ಪೊದೆ ಹುಬ್ಬಿನ ಮುದುಕ, ಬೋಳುತಲೆಯ ನರಸಿಂಹಯ್ಯ ಇಬ್ಬರೂ ನಕ್ಕರು. ಮೀರ ನಾಚಿಕೆ, ಅಸಮಾಧಾನ ಬೆರೆತ ನಗೆಯನ್ನು ತುಟಿಗಳ ಮೇಲೆ ಸುಳಿಸಿ ತಟಕ್ಕನೆ ಕಿಟಕಿಯ ಕಡೆ ತಿರುಗಿದಳು.

ಮೀರಳಿಗೆ ರೈಲು ಪ್ರಯಾಣ ಬಹಳ ಅಪರೂಪವಾಗಿತ್ತು. ಅವಳು ಮನಃ ಪೂರ್ತಿಯಾಗಿ ಪ್ರಯಾಣದ ಆನಂದವನ್ನು ಅನುಭವಿಸಿದಳು. ಓಡುವ ಗಿಡಮರ ಗಳು, ತೇಲುವ ಮೋಡ, ಹಾಡುವ ಹಕ್ಕಿಗಳು ಮೀರಳಿಗೆ ಮಧುರವಾಗಿ ಜೋಗುಳ ಹಾಡಿದವು. ಮೀರ ಕುಳಿತಲ್ಲಿಯೇ ತೂಕಡಿಸತೊಡಗಿದಳು. ಅವಳಿಗೆ ಎಚ್ಚರ ವಾದಾಗ ಮದ್ದೂರು ಸಮೀಪಿಸುತ್ತಿತ್ತು. ಮದ್ದೂರು ತಲುಪಿದ ಕೂಡಲೇ ನರ ಸಿಂಹಯ್ಯನವರು ಟೋಪಿಯೇರಿಸಿ ಚೀಲ ಹಿಡಿದು ಕೆಳಗಿಳಿದರು. ಐದು ನಿಮಿಷದ ನಂತರ ಕೈಯಲ್ಲಿ ಎರಡು ಕಿತ್ತಲೇಹಣ್ಣು ಸ್ವಲ್ಪ ಪೆಪ್ಪರಮೆಂಟು ಕೊಂಡು ತಂದು ಮೀರಳಿಗೆ "ತಗೋ ಮಗು" ಎಂದರು.

ಮೀರ ಅನುಮಾನಿಸುತ್ತ 'ನನಗೆ ಬೇಡ" ಎಂದಳು.

'ನೋಡಿದಿರಾ ಕೃಷ್ಣಪ್ಪನವರೇ, ಈ ವಯಸ್ಸಿನಲ್ಲಿ ಎಷ್ಟು ಬಿಗುಮಾನ" ಎಂದರು ನರಸಿಂಹಯ್ಯ.

"ತಗೋಮ್ಮ ಪರವಾಗಿಲ್ಲ" ಎಂದು ದೊಡ್ಡಪ್ಪ ಹೇಳಿದ ನಂತರ ಮೀರ ಕೈ ನೀಡಿದಳು.

ರೈಲು ಮೈಸೂರನ್ನು ತಲುಪಿದಾಗ ಹನ್ನೊಂದೂವರೆ ಗಂಟೆಯಾಗಿತ್ತು.

ಗಾಡಿ ಚಾಮರಾಜಪುರಂನಲ್ಲಿದ್ದ ಅಗ್ರಹಾರಗಳ ಮನೆಯೊಂದರ ಮುಂದೆ ನಿಂತಾಗ ಮೀರ ಪರಿಚಯವಿಲ್ಲದ ಮನೆಗೆ ತಾನು ಬಂದಿರುವುದನ್ನು ನೋಡಿ ಹೆದರಿದಳು. ಮನೆಯ ಮುಂದಿದ್ದ ವಿಶಾಲವಾದ ಕಾಂಪೌಂಡಿನಲ್ಲಿ ಎರಡು ತೆಂಗಿನಮರ, ಒಂದು ಪಾರಿಜಾತದ ಮರ, ಎರಡು ನಂದಿಬಟ್ಟಲು ಗಿಡಗಳು ಹೊರತು ಬೇರೇನೂ ಇರಲಿಲ್ಲ. ವಿಶಾಲವಾದ ಉಳಿದ ಭೂಮಿ ಕಲ್ಲು, ಮುಳ್ಳು ಗಳಿಗೆ ಆಶ್ರಯ ಕೊಟ್ಟಿತ್ತು.

ಮನೆಯ ಮುಂದೆ ಗಾಡಿ ನಿಂತಂತಾಗಲು ಆಗ ತಾನೆ ಊಟ ಮಾಡಿ ಕೈ ತೊಳೆದುಕೊಂಡು ಚಾಪೆಯ ಮೇಲೆ ಮಲಗಿದ್ದ ಕಮಲಮ್ಮ ಎದ್ದುಬಂದು ಕಿಟಕಿಯಲ್ಲಿ ನಿಂತರು. ಮೊದಲು ಯಜಮಾನರು ಗಾಡಿಯಿಂದ ಕೆಳಗೆ ಧುಮುಕಿ ದರು. ಗಾಡಿಯೊಳಗಿನಿಂದ ಬೆಳ್ಳಿಯ ಚೈನು ಹಾಕಿಕೊಂಡಿದ್ದ ಎರಡು ಪುಟ್ಟ

ದ್ದೇವೆ?" ಎಂದರು. ತಮ್ಮನ ಮಗಳ ಅಸಹಾಯಕತೆ, ತಬ್ಬಲಿತನ ಕೃಷ್ಣಪ್ಪನವರ ಮನಸ್ಸನ್ನು ಕರಗಿಸಿತ್ತು. ಆದುದರಿಂದಲೇ ಸ್ವಲ್ಪ ಒರಟಾಗಿ ಉತ್ತರ ಕೊಟ್ಟರು.

"ಹಾಗಾದರೆ ಅವಳನ್ನು ಕಾಡುಪಾಲು ಮಾಡಿ ಬರಬೇಕಾಗಿತ್ತು ಅನ್ನುತ್ತೀಯೇನು?"

"ನಾನು ಹಾಗೆ ಹೇಳಲಿಲ್ಲ. ಬೇರೆ ಏನಾದರೂ ವ್ಯವಸ್ಥೆ ಮಾಡಬೇಕಾಗಿತ್ತು ಎಂದೆ."

"ನೋಡು ಕಮಲೂ, ಮೀರಳ ತಾಯಿ ಹೋದಾಗ ತವರುಮನೆಯ ಕಡೆಯವರು ಯಾರಾದರೂ ಬಂದು ವಿಚಾರಿಸಿದರೇ ಎನ್ನುವುದು ನಿನಗೆ ಗೊತ್ತಿದೆ. ವಳ ಕರುಳಿನ ಚೂರು ಹೋದಾಗಲೇ ಈ ಕಡೆ ಮುಖ ಇಡದಿದ್ದವರು ಇನ್ನು ಅಳಿಯ ಹೋದಾಗ ಬರುತ್ತಾರೆಯೇ? ಏನ್ನಾಗಲಿ ಮೀರ ನನ್ನ ತಮ್ಮನ ಮಗಳು. ಅವಳನ್ನು ಬೀದಿಗಟ್ಟಲು ನನಗಿಷ್ಟವಿಲ್ಲ. ನಿನ್ನ ತಂಗಿಯ ಮಗಳು ಹೀಗೆ ಅನಾಥೆಯಾಗಿದ್ದರೆ ನೀನು ಸುಮ್ಮನಿರುತ್ತಿದ್ದೆಯಾ? ನಮಗೆ ಕಾರು, ರೇಡಿಯೋ ಇಟ್ಟುಕೊಂಡು ಅಧಿಕಾರ ನಡೆಸುವ ಚೈತನ್ಯ ದೇವರು ಕೊಡದಿದ್ದರೂ ಎರಡು ಹೊತ್ತಿನ ಅನ್ನಕ್ಕೆ ಸಾಕಷ್ಟು ಅನುಕೂಲವಿದೆ. ನಾಲ್ಕು ಮಕ್ಕಳ ಜೊತೆಗೆ ಇದೂ ಒಂದು ಹೆಣ್ಣುಮಗಳು ಅಂತ ಭಾವಿಸು."

"ಈಗೇನೋ ಹೀಗೆ ಹೇಳುತ್ತೀರಿ. ಹೆಣ್ಣುಮಕ್ಕಳ ಜವಾಬ್ದಾರಿಯೇನು ಸ್ವಲ್ಪವೇ? ಆಮೇಲೆ ಅವಳಿಗೆ ಸರಿಯಾದ ಕಡೆ ನೋಡಿ ಮದುವೆ ಮಾಡಬೇಡವೇ?"

"ಈಗಿನಿಂದ ಅದರ ಯೋಚನೆ ಯಾಕೆ? ಒಂದು ದಿಂಬು ತಗೊಂಡು ಬಾ. ಹಾಗೇ ಸ್ವಲ್ಪ ಮಲಗಿಕೊಳ್ಳುತ್ತೇನೆ."

ಕಮಲಮ್ಮ ಒಂದು ಗಳಿಗೆ ಸುಮ್ಮನೆ ಕುಳಿತಿದ್ದು ಅನಂತರ ಎದ್ದು ಹೋದರು. ಮೀರಳಿಗೆ ಎಚ್ಚರವಾದಾಗ ಮಧ್ಯಾಹ್ನ ನಾಲ್ಕು ಗಂಟೆಯಾಗಿತ್ತು. ಹಾಸಿಗೆಯ ಮೇಲೆ ಎದ್ದು ಕುಳಿತು ಅರ್ಧ ಗಾಬರಿಯಿಂದಲೂ, ಕಳವಳದಿಂದಲೂ ಸುತ್ತಲೂ ನೋಡಿದಳು. ತಾನೆಲ್ಲಿರುವೆನೆಂಬುದು ತಿಳಿಯಲು ಐದು ನಿಮಿಷ ಬೇಕಾಯಿತು. ಒಳಗೆ ಎದ್ದುಹೋಗುವ ಧೈರ್ಯವಿಲ್ಲದೆ ಅವಳು ಹಾಸಿಗೆಯ ಮೇಲೆ ಕುಳಿತಿದ್ದಳು. ಕಮಲಮ್ಮನವರಲ್ಲಿ ಮೀರಳಿಗೆ ಪ್ರೀತಿಯಾಗಲಿ ಆದರವಾಗಲಿ ಹುಟ್ಟಲಿಲ್ಲ. ಅವರ ಎತ್ತರವಾದ ನಿಲುವು, ಕೆಂಪು ಛಾಯೆಯ ಮೇಲಿದ್ದ ಬಣ್ಣ, ಮುಖಕ್ಕೆ ಅತಿ ದೊಡ್ಡದೆನಿಸುವ ಕಿವಿಗಳು, ಪುಟ್ಟದಾದರೂ ತೀಕ್ಷ್ಣವಾದ ಕಣ್ಣುಗಳು, ಹೌದೋ ಅಲ್ಲವೋ ಎನ್ನುವಷ್ಟು ಉಬ್ಬಿದ ಹಲ್ಲುಗಳ ಮೇಲಿದ್ದ ದಪ್ಪತುಟಿ, ಮೊಂಡುಮೂಗು ಇವುಗಳು ದೂರಕ್ಕೆ ಚೆಂದವಾಗಿ ಕಂಡರೂ ಹತ್ತಿರ ಬಂದಂತೆ ವಿಚಿತ್ರವಾಗಿ ಕಂಡುಬಂದು, ಅವಳಲ್ಲಿ ಹೆದರಿಕೆಯನ್ನು ಹುಟ್ಟಿಸಿದ್ದವು.

ದ್ದೇವೆ?" ಎಂದರು. ತಮ್ಮನ ಮಗಳ ಅಸಹಾಯಕತೆ, ತಬ್ಬಲಿತನ ಕೃಷ್ಣಪ್ಪನವರ ಮನಸ್ಸನ್ನು ಕರಗಿಸಿತ್ತು. ಆದುದರಿಂದಲೇ ಸ್ವಲ್ಪ ಒರಟಾಗಿ ಉತ್ತರ ಕೊಟ್ಟರು.

"ಹಾಗಾದರೆ ಅವಳನ್ನು ಕಾಡುಪಾಲು ಮಾಡಿ ಬರಬೇಕಾಗಿತ್ತು ಅನ್ನುತ್ತೀಯೇನು?"

"ನಾನು ಹಾಗೆ ಹೇಳಲಿಲ್ಲ. ಬೇರೆ ಏನಾದರೂ ವ್ಯವಸ್ಥೆ ಮಾಡಬೇಕಾಗಿತ್ತು ಎಂದೆ."

"ನೋಡು ಕಮಲೂ, ಮೀರಳ ತಾಯಿ ಹೋದಾಗ ತವರುಮನೆಯ ಕಡೆಯವರು ಯಾರಾದರೂ ಬಂದು ವಿಚಾರಿಸಿದರೇ ಎನ್ನುವುದು ನಿನಗೆ ಗೊತ್ತಿದೆ. ಮಗಳ ಕರುಳಿನ ಚೂರು ಹೋದಾಗಲೇ ಈ ಕಡೆ ಮುಖ ಇಡದಿದ್ದವರು ಇನ್ನು ಅಳಿಯ ಹೋದಾಗ ಬರುತ್ತಾರೆಯೇ? ಏನಾಗಲಿ ಮೀರ ನನ್ನ ತಮ್ಮನ ಮಗಳು. ಅವಳನ್ನು ಬೀದಿಗಟ್ಟಲು ನನಗಿಷ್ಟವಿಲ್ಲ. ನಿನ್ನ ತಂಗಿಯ ಮಗಳು ಹೀಗೆ ಅನಾಥೆಯಾಗಿದ್ದರೆ ನೀನು ಸುಮ್ಮನಿರುತ್ತಿದ್ದೆಯಾ? ನಮಗೆ ಕಾರು, ರೇಡಿಯೋ ಇಟ್ಟುಕೊಂಡು ಅಧಿಕಾರ ನಡೆಸುವ ಚೈತನ್ಯ ದೇವರು ಕೊಡದಿದ್ದರೂ ಎರಡು ಹೊತ್ತಿನ ಅನ್ನಕ್ಕೆ ಸಾಕಷ್ಟು ಅನುಕೂಲವಿದೆ. ನಾಲ್ಕು ಮಕ್ಕಳ ಜೊತೆಗೆ ಇದೂ ಒಂದು ಹೆಣ್ಣುಮಗಳು ಅಂತ ಭಾವಿಸು."

"ಈಗೇನೋ ಹೀಗೆ ಹೇಳುತ್ತೀರಿ. ಹೆಣ್ಣುಮಕ್ಕಳ ಜವಾಬ್ದಾರಿಯೇನು ಸ್ವಲ್ಪವೇ? ಆಮೇಲೆ ಅವಳಿಗೆ ಸರಿಯಾದ ಕಡೆ ನೋಡಿ ಮದುವೆ ಮಾಡಬೇಡವೇ?"

"ಈಗಿನಿಂದ ಅದರ ಯೋಚನೆ ಯಾಕೆ? ಒಂದು ದಿಂಬು ತಗೊಂಡು ಬಾ. ಹಾಗೇ ಸ್ವಲ್ಪ ಮಲಗಿಕೊಳ್ಳುತ್ತೇನೆ."

ಕಮಲಮ್ಮ ಒಂದು ಗಳಿಗೆ ಸುಮ್ಮನೆ ಕುಳಿತಿದ್ದು ಅನಂತರ ಎದ್ದು ಹೋದರು. ಮೀರಳಿಗೆ ಎಚ್ಚರವಾದಾಗ ಮಧ್ಯಾಹ್ನ ನಾಲ್ಕು ಗಂಟೆಯಾಗಿತ್ತು. ಹಾಸಿಗೆಯ ಮೇಲೆ ಎದ್ದು ಕುಳಿತು ಅರ್ಧ ಗಾಬರಿಯಿಂದಲೂ, ಕಳವಳದಿಂದಲೂ ಸುತ್ತಲೂ ನೋಡಿದಳು. ತಾನೆಲ್ಲಿರುವೆನೆಂಬುದು ತಿಳಿಯಲು ಐದು ನಿಮಿಷ ಬೇಕಾಯಿತು. ಒಳಗೆ ಎದ್ದುಹೋಗುವ ಧೈರ್ಯವಿಲ್ಲದೆ ಅವಳು ಹಾಸಿಗೆಯ ಮೇಲೆ ಕುಳಿತಿದ್ದಳು. ಕಮಲಮ್ಮನವರಲ್ಲಿ ಮೀರಳಿಗೆ ಪ್ರೀತಿಯಾಗಲಿ ಆದರವಾಗಲಿ ಹುಟ್ಟಲಿಲ್ಲ. ಅವರ ಎತ್ತರವಾದ ನಿಲುವು, ಕೆಂಪು ಛಾಯೆಯ ಮೇಲಿದ್ದ ಬಣ್ಣ, ಮುಖಕ್ಕೆ ಅತಿ ದೊಡ್ಡದೆನಿಸುವ ಕಿವಿಗಳು, ಪುಟ್ಟದಾದರೂ ತೀಕ್ಷ್ಣವಾದ ಕಣ್ಣುಗಳು, ಹೌದೋ ಅಲ್ಲವೋ ಎನ್ನುವಷ್ಟು ಉಬ್ಬಿದ ಹಲ್ಲುಗಳ ಮೇಲಿದ್ದ ದಪ್ಪತುಟಿ, ಮೊಂಡುಮೂಗು ಇವುಗಳು ದೂರಕ್ಕೆ ಚೆಂದವಾಗಿ ಕಂಡರೂ ಹತ್ತಿರ ಬಂದಂತೆ ವಿಚಿತ್ರವಾಗಿ ಕಂಡುಬಂದು, ಅವಳಲ್ಲಿ ಹೆದರಿಕೆಯನ್ನು ಹುಟ್ಟಿಸಿದ್ದವು.

ಹಾಲಿನ ದೊಡ್ಡ ಗಡಿಯಾರ ನಾಲ್ಕೂ ಮುಕ್ಕಾಲನ್ನು ತೋರಿಸುತ್ತಿದ್ದಂತೆಯೇ ಸುಮಾರು ಏಳು ವರ್ಷದ ಹುಡುಗನೊಬ್ಬ ಕೈಲೊಂದು ಚೀಲ ಹಿಡಿದು 'ಅಮ್ಮಾ' ಎಂದು ಕೂಗುತ್ತ ಬಂದ. ಮೀರಳನ್ನು ನೋಡಿದೊಡನೆ ತಟ್ಟನೆ ನಿಂತು ಅವಳ ಕಡೆ ದಿಟ್ಟಿಸಿ ನೋಡಿದ. ಅವಳ ಪರಿಚಯ ತಿಳಿದಂತೆಲ್ಲಾ ನಸುನಗು ಮುಖದಲ್ಲಿ ತಲೆದೋರಿತು. ಆದರೂ ಖಂಡಿತ ಮಾಡಿಕೊಳ್ಳಲೆಂದು ಕೇಳಿದ,

"ನೀನು ಮೀರ ಅಲ್ಲವೇ?"

ಮೀರ ಮಾತನಾಡಲಿಲ್ಲ. ಅವಳಿಗೆ ಅವನ ಪರಿಚಯ ಮರೆತುಹೋಗಿತ್ತು. ಶ್ರೀಪಾದು ಮೀರಳನ್ನು ಹೆಚ್ಚು ಮಾತನಾಡಿಸದೇ ಒಳಗೆ ಹೋದ. ಕಮಲಮ್ಮ ನವರು ಕಾಫಿಯನ್ನು ಒಲೆಯ ಮೇಲಿಟ್ಟು ಬಿಸಿ ಮಾಡುತ್ತಿದ್ದರು. ಶ್ರೀಪಾದು ಕಮಲಮ್ಮನವರ ಕೊನೆಯ ಮಗನಾದುದರಿಂದ ಮನೆಯಲ್ಲಿ ಅಕ್ಕರೆಯ ಹುಡುಗ ನಾಗಿದ್ದ. ತಾಯಿಯ ಬಳಿ ಕುಳಿತು ಮುದ್ದುಗರೆಯುತ್ತ,

"ಅಮ್ಮಾ, ಬಂದಿರೋಳು ಮೀರ ಅಲ್ಲವೇನಮ್ಮ?" ಎಂದ.

ಕಮಲಮ್ಮನವರು ತಾತ್ಸಾರವಾಗಿ "ಹ್ಞೂ, ಮೀರಾನೇ ಬಂದಿರೋದು. ಅವಳನ್ನೂ ಕಾಫಿಗೆ ಕರೆದುಕೊಂಡು ಬಾ. ಹಾಗೇ ಇವರು ಎದ್ದಿದ್ದಾರೇನೋ ನೋಡಿ ಕೊಂಡು ಬಾ" ಎಂದರು. ಶ್ರೀಪಾದು ಎದ್ದು ಬಂದು ತಂದೆ ಮಲಗಿ ನಿದ್ರಿಸುತ್ತಿದ್ದ ರೂಮಿನಲ್ಲಿ ಇಣಿಕಿನೋಡಿದ. ಕೃಷ್ಣಪ್ಪನವರು ಮುಸುಕಿಟ್ಟು ಮಲಗಿದ್ದರು. ಮುಸುಕಿನಿಂದೀಚೆ ಅವರ ತಲೆಯ ಜುಟ್ಟು ಮಾತ್ರ ಕಾಣಿಸುತ್ತಿತ್ತು. ಶ್ರೀಪಾದು ಉಕ್ಕಿಬರುವ ನಗುವನ್ನು ಬಿಗಿ ಹಿಡಿದು ಮೀರಳ ಹತ್ತಿರ ಬಂದುನಿಂತು "ಅಮ್ಮ ಕರೀತಿದಾಳೆ" ಎಂದ.

"ನೀನು ಶ್ರೀಪಾದನೋ, ಶ್ರೀಹರೀನೋ?"

"ನೀನೇ ಹೇಳು ನೋಡೋಣ."

ಶ್ರೀಪಾದು ತುಂಟನಗೆಯೊಡನೆ ಹೇಳಿದ. ಶ್ರೀಪಾದು ಮೀರಳಿಗಿಂತ ಮೂರು ತಿಂಗಳು ದೊಡ್ಡವನು. ಹಿಂದೆ ಮೀರ ಅವನನ್ನು ನೋಡಿದಾಗ ಇಬ್ಬರೂ ಒಂದೇ ಎತ್ತರವಿದ್ದರು. ಈಗ ಶ್ರೀಪಾದು ಅವಳಿಗಿಂತ ಒಂದು ಗೇಣು ಎತ್ತರವಿದ್ದ. ಆದುದರಿಂದ ಅವನು ಶ್ರೀಹರಿಯಿರಬೇಕೆಂದು ಭಾವಿಸಿ ಮೀರ

"ನೀನು ಶ್ರೀಹರಿ" ಎಂದಳು.

ಶ್ರೀಪಾದು ಜೋರಾಗಿ ನಗತೊಡಗಿದ.

"ಅಲ್ಲ, ನಾನು ಶ್ರೀಪಾದು. ಸಾತಕ್ಕನ ಮದುವೇಲಿ ನಾವಿಬ್ಬರೂ ಸೀಬೆಗಿಡ ಹತ್ತಿ ಕಾಯಿ ತಿಂದಿದ್ದು ಎಲ್ಲಾ ಮರೆತುಹೋಯಿತೇ?"

"ಹೌದು, ಮರೆತುಹೋಗಿತ್ತು" ಎಂದು ಮೀರ ಹೇಳುವಷ್ಟರಲ್ಲಿ ಕೃಷ್ಣಪ್ಪ

ನವರ ಎರಡನೆಯ, ಮೂರನೆಯ ಗಂಡುಮಕ್ಕಳು ಗೋವಿಂದ, ಶ್ರೀಹರಿ ಒಳಗೆ ಬಂದರು. ಶ್ರೀಪಾದು ಶ್ರೀಹರಿಯ ಕಡೆ ಬೆರಳು ತೋರಿಸಿ "ಅವನು ಶ್ರೀಹರಿ" ಎಂದ. ಮೀರ ತನ್ನ ಕಣ್ಣನ್ನು ತಾನೇ ನಂಬಲಾರದಾದಳು. ಸಾತಕ್ಕನ ಮದುವೇಲಿ ಬೆಳ್ಳಗೆ ಗುಂಡಗಿದ್ದ ಶ್ರೀಹರಿಯ ಮುಖ ಈಗ ಸಿಡುಬಿನ ಕಲೆಗಳಿಂದ ತುಂಬಿ ಹೋಗಿತ್ತು. ಶ್ರೀಪಾದು ತನ್ನ ಕಡೆ ಬೆರಳು ತೋರಿಸಿದೊಡನೆ ಶ್ರೀಹರಿ ನಾಚಿಕೆಯಿಂದ ಕೆಂಪಾಗಿ, ಪುಸ್ತಕದಿಂದ ತನ್ನ ಮುಖ ಮುಚ್ಚಿಕೊಂಡು ಒಳಗೆ ಹೋದ. ಶ್ರೀಹರಿಯ ಅತ್ಯಂತ ಸಂಕೋಚ ಪ್ರವೃತ್ತಿಗೆ ಸಿಡುಬಿನ ಕಲೆ ಒಂದು ಮುಖ್ಯ ಕಾರಣವಾಗಿತ್ತು. ಗೋವಿಂದ ತಾಯಿಯಂತೆ ಎತ್ತರಕ್ಕೆ, ತಂದೆಯಂತೆ ಕಪ್ಪಗಿದ್ದ.

ಮೀರ ಕಾಫಿ ಕುಡಿಯುತ್ತಿದ್ದಾಗ ಕಮಲಮ್ಮನವರ ಹಿರಿಯ ಮಗ ಗೋಪಾಲ ಒಳಗೆ ಬಂದ. ಅವನಿಗೆ ಹದಿನಾರು ವರ್ಷವಾಗಿತ್ತು. ಹೈಸ್ಕೂಲು ಮೂರನೆಯ ತರಗತಿಯಲ್ಲಿ ಓದುತ್ತಿದ್ದ. ಆಗಲೇ ದೊಡ್ಡಪ್ಪನಿಗಿಂತಲೂ ಎತ್ತರ ವಾಗಿ ಬೆಳೆದಿದ್ದ ಗೋಪಾಲನನ್ನು ನೋಡಿ ಮೀರಳಿಗೆ ತಾನು ತೀರ ಕುಳ್ಳ ಎನ್ನಿಸಿತು. ನಾಲ್ಕು ಜನ ಅಣ್ಣತಮ್ಮಂದಿರಲ್ಲಿ ಮೀರಳಿಗೆ ಗೋಪಾಲನಲ್ಲಿ ಹೆಚ್ಚು ಆದರ ಮೂಡಿತು. ತಾಯಿಯ ಬಿಳಿಮಿಶ್ರ ಕೆಂಪು ಬಣ್ಣ, ಕರುಣೆ ಹಾಸ್ಯದಿಂದ ಮಿಂಚುತ್ತಿದ್ದ ಕಣ್ಣುಗಳು, ದಟ್ಟವಾದ ತಲೆಗೂದಲು, ಪ್ರಸನ್ನವದನ ಮೀರಳ ಸ್ನೇಹಮಯ ಹೃದಯವನ್ನು ಸೆಳೆದಿದ್ದವು. ಅವನನ್ನು ಮಾತನಾಡಿಸಲು ಮನಸ್ಸು ತವಕಿಸಿದರೂ, ಅವನು ಅಲಕ್ಷ್ಯ ಮಾಡಿದರೇನು ಗತಿ ಎಂಬ ಸ್ವಾಭಿಮಾನ ಅವಳ ನಾಲಿಗೆಯನ್ನು ತಡೆಯಿತು.

ಗೋಪಾಲ ಮೀರಳ ಕಡೆ ನೋಡಿ ನಕ್ಕು "ಆಗಲೇ ನನ್ನ ಗುರುತು ಮರೆತು ಹೋಯಿತೇ ಮೀರ" ಎನ್ನುತ್ತಾ ಅವಳ ಮೋಟು ಜಡೆಯನ್ನು ಹಿಡಿದೆಳೆದ. ಮೀರ ಳಿಗೆ ನೋವಾದರೂ ಆ ನೋವನ್ನು ಮುಖದ ಮೇಲೆ ತೋರಿಸಲಿಲ್ಲ. ಗೋಪಾಲನ ಚೇಷ್ಟೆಯನ್ನು ಅದೇ ತಾನೆ ಬಾಗಿಲಿನಲ್ಲಿ ಬಂದು ನಿಂತಿದ್ದ ಕೃಷ್ಣಪ್ಪನವರು ನೋಡಿ ಗದರಿದರು.

"ಲೋ, ಕೀಟಲೆ ಮಾಡಬೇಡ. ನೋವಾದರೆ ಅಳುತ್ತಾಳೆ" ಎಂದರು. ಗೋಪಾಲ ಮುಖ ಚಿಕ್ಕದು ಮಾಡಿಕೊಂಡು ನಿಂತ. ಅವನ ಮುಖವನ್ನು ನೋಡಿ ಮೀರ,

'ನನಗೇನೂ ನೋವಾಗಲಿಲ್ಲ ದೊಡ್ಡಪ್ಪ" ಎಂದಳು.

ಗೋಪಾಲ ಅವಳನ್ನು ಅರ್ಥ ಮಾಡಿಕೊಂಡವನಂತೆ ಕೃತಜ್ಞತೆಯ ನಗೆ ನಕ್ಕ.

ಮಾರನೆಯ ದಿನ ಕೃಷ್ಣಪ್ಪನವರು ಮೀರಳನ್ನು ಮನೆಯಿಂದ ಅರ್ಧ ಮೈಲಿ

ದೂರದಲ್ಲಿದ್ದ ಕಾನ್ವೆಂಟಿಗೆ ಕರೆದುಕೊಂಡುಹೋದರು. ಮೀರಳೊಡನೆ ಅವರು ಕಾನ್ವೆಂಟು ತಲುಪಿದಾಗ ಗಂಟೆ ಹೊಡೆದು ತರಗತಿಗಳಲ್ಲಿ ಪಾಠ ಪ್ರಾರಂಭವಾಗಿತ್ತು. ಹೆಡ್ ಮಿಸ್ಟ್ರೆಸ್ ರೂಮಿನೊಳಗೆ ಹೋಗುವಾಗ ಮೀರಳಿಗೆ ಏನೋ ಒಂದು ಬಗೆಯ ದಿಗಿಲು.

ಕನ್ನಡಕ ಹಾಕಿಕೊಂಡಿದ್ದ ಮುಖ್ಯೋಪಾಧ್ಯಾಯಿನಿ ಕುರ್ಚಿಯ ಮೇಲೆ ಕುಳಿತು ಏನೋ ಕಾಗದಪತ್ರಗಳನ್ನು ನೋಡುತ್ತಿದ್ದಳು. ಕೃಷ್ಣಪ್ಪನವರು ಒಳಗೆ ಬರುತ್ತಲೇ ಪ್ರಶ್ನಾರ್ಥಕವಾಗಿ ಅವರ ಕಡೆ ನೋಡಿದಳು. ಚಾಕೋಲೇಟ್ ಬಣ್ಣದ ಲಂಗ ಹಾಕಿ, ತಲೆತುಂಬ ಮುಸುಕು ಹಾಕಿದ್ದ ಆಕೆಯನ್ನು ನೋಡಿ ಮೀರ ಹೆದರಿದಳು.

"ಕುಳಿತುಕೊಳ್ಳಿ. ಏನಾಗಬೇಕಿತ್ತು?"

"ನಮ್ಮ ಹುಡುಗೀನ ಮಿಡಲ್ ಫಸ್ಟ್ ಇಯರ್‌ಗೆ ಸೇರಿಸಬೇಕಾಗಿತ್ತು."

"ಸರ್ಟಿಫಿಕೇಟ್ ತಂದಿದೀರಾ?"

"ಹೂಂ."

ಆಕೆ ಎದ್ದು ಮೇಜಿನ ಮೇಲೆ ಇದ್ದ ಬೀರುವಿನಿಂದ ಅಪ್ಲಿಕೇಷನ್ ಫಾರಂ ತೆಗೆದುಕೊಟ್ಟು,

"ಇದನ್ನು ತುಂಬಿಸಿ ಫೀಜು ಕಟ್ಟಿಬಿಡಿ" ಎಂದರು.

ಕೃಷ್ಣಪ್ಪನವರು ಜೇಬಿನಿಂದ ಪೆನ್ನು ತೆಗೆದು ಬರೆಯತೊಡಗಿದರು. ಫಾರಂ ತುಂಬಿಸಿ ಫೀಸು ಕೊಟ್ಟು ರಸೀತಿ ಪಡೆದು,

"ಮೀರ ಸಂಜೆ ಸ್ಕೂಲು ಬಿಟ್ಟೊಡನೆ ಮನೆಗೆ ಬಂದುಬಿಡಬೇಕು. ಗೋವಿಂದನ್ನ ಕಳಿಸುತ್ತೇನೆ. ಅದುವರೆವಿಗೂ ಇಲ್ಲೇ ಇರು" ಎಂದು ಹೇಳಿ ಹೊರಟುಹೋದರು. ಮೀರ ತನಗೆ ದಾರಿ ತೋರಿಸುತ್ತ ಮುನ್ನಡೆದ ಜವಾನನನ್ನು ಹಿಂಬಾಲಿಸಿದಳು. ಅವನು ಫಸ್ಟ್ ಇಯರ್ ತರಗತಿಯಲ್ಲಿ ಮೀರಳನ್ನು ಕುಳಿತುಕೊಳ್ಳಲು ಹೇಳಿ ಹೊರಟುಹೋದ.

ಮೀರ ಒಳಗೆ ಬಂದೊಡನೆ ಪಾಠ ಮಾಡುತ್ತಿದ್ದ ಸಿಸ್ಟರ್ ತಲೆ ಎತ್ತಿ ನೋಡಿದರು.

"ಇಲ್ಲಿ ಬಾ ಮಗು."

ಮೀರ ಹೋಗಿ ಅವರ ಮೇಜಿನ ಪಕ್ಕದಲ್ಲಿ ನಿಂತಳು.

"ನಿನ್ನ ಹೆಸರೇನು ಮಗು?"

"ಮೀರಾ."

"ನಿನಗೆ A B C D ಬರೆಯಲು ಬರುತ್ತದೇನು?"

"ಹ್ಞೂ."

ಸಿಸ್ಟರ್ ಚಾಕ್‌ಪೀಸನ್ನು ಮೀರಳ ಕೈಗೆ ಕೊಟ್ಟು "ಎಲ್ಲಿ ಬೋರ್ಡ್ ಮೇಲೆ ಬರಿ ನೋಡೋಣ" ಎಂದರು. ಮೀರ ತುದಿಗಾಲಿನ ಮೇಲೆ ನಿಂತು ಬೋರ್ಡನ್ನು ಎಟುಕಿಸಿಕೊಂಡು ಬರೆದಳು.

"ಗುಡ್. ಎಲ್ಲಿ ಈ ಪಾಠ ಓದು" ಎನ್ನುತ್ತಾ ತಮ್ಮ ಕೈಲಿ ಹಿಡಿದಿದ್ದ ಇಂಗ್ಲಿಷ್ ಪುಸ್ತಕ ಕೊಟ್ಟರು. ಮೀರ ಸ್ವಲ್ಪವೂ ತಡವರಿಸದೆ ಧೈರ್ಯವಾಗಿ ಓದಿದಳು.

"ರಾಜೇಶ್ವರಿ, ನಿನ್ನ ಪಕ್ಕದಲ್ಲಿ ಈ ಮಗೂಗೆ ಸ್ವಲ್ಪ ಜಾಗ ಕೊಡು."

ಎರಡು ಜಡೆ ಹೆಣೆದುಕೊಂಡು, ಕೆಂಪು ರಿಬ್ಬನ್ ಕಟ್ಟಿಕೊಂಡಿದ್ದ ದುಂಡಗಿದ್ದ ಹುಡುಗಿಯೊಬ್ಬಳು ಪಕ್ಕಕ್ಕೆ ಸರಿದು ಕುಳಿತಳು. ರಾಜೇಶ್ವರಿ ಹೊಸಬಳ ಸ್ನೇಹಕ್ಕೆ ಆತುರಳಾಗಿದ್ದಳು. ಉಪಾಧ್ಯಾಯಿನಿಗೆ ಕೇಳಿಸದಂತೆ ಮೆಲ್ಲನೆ ಪಿಸುಗುಟ್ಟ ತೊಡಗಿದಳು.

"ನಿನ್ನ ಹೆಸರೇನು?"

"ಮೀರಾ."

"ನಿಮ್ಮ ಮನೆ ಎಲ್ಲಿದೆ?"

"ಇಲ್ಲಿಗೆ ಸ್ವಲ್ಪ ದೂರದಲ್ಲಿದೆ."

"ರಾಜೇಶ್ವರೀ, ಮೀರಾ ಮಾತನಾಡಬೇಡಿ. ಹೊರಗೆ ಕಳಿಸುತ್ತೇನೆ." ಸಿಸ್ಟರ್ ಮಾತನಾಡುತ್ತಿದ್ದ ಇಬ್ಬರು ಹುಡುಗಿಯರನ್ನೂ ಎಚ್ಚರಿಸಿದರು.

ಗಂಟೆಗಳು ಉರುಳಿ ಮನೆಗೆ ಹೋಗುವ ಸಮಯ ಬಂದಿತು. ರಾಜೇಶ್ವರಿಯ ಮನೆಯಿಂದ ಜವಾನ ಸೈಕಲ್‌ತಂದಿದ್ದ. ಅವಳ ಚೀಲವನ್ನು ಸೈಕಲ್ ಹಿಡಿಗೆ ತೂಗು ಹಾಕಿ, ಸೀಟಿನ ಮೇಲೆ ಅವಳನ್ನು ಕೂರಿಸಿ ಸೈಕಲ್ ತಳ್ಳಿಕೊಂಡು ಹೊರಟ. 'ಟಾಟ' ಎಂದು ಕೈಬೀಸಿ ರಾಜೇಶ್ವರಿ ಮರೆಯಾದಳು.

ಬೆಲ್ಲು ಹೊಡೆದು ಅರ್ಧ ಗಂಟೆಯ ನಂತರ ಗೋವಿಂದ ದೂರದಲ್ಲಿ ಕಾಲೆಳೆದುಕೊಂಡು ಬರುತ್ತಿರುವುದು ಮೀರಳಿಗೆ ಕಾಣಿಸಿತು. ಗೋವಿಂದ ಮನೆಗೆ ಹಿಂದಿರುಗುತ್ತ ಹೇಳಿದ,

"ದಾರಿ ಸರಿಯಾಗಿ ಗುರುತಿಟ್ಟುಕೋ ಮೀರ. ನಾಳೆಯಿಂದ ನೀನೊಬ್ಬಳೇ ಬಂದುಹೋಗಿ ಮಾಡಬೇಕಾಗುತ್ತದೆ. ಯಾರಾದರೂ ಸ್ನೇಹಿತರು ಸಿಕ್ಕಿದರೆ?"

"ಹ್ಞೂಂ. ರಾಜೇಶ್ವರಿ ಅಂತ...."

"ಅದೇ ಎರಡು ಜಡೆಯವಳು. ಜವಾನನ ಸೈಕಲ್ ಮೇಲೆ...."

"ಹ್ಞೂ, ಹ್ಞೂ. ಅವಳೇ. ನಿನಗೆ ಹೇಗೆ ಗೊತ್ತಾಯಿತು?"

"ನಮ್ಮನೆ ಸಾಲಿನಲ್ಲೇ ಇದ್ದಾಳೆ. ಕಾಲೇಜು ಮೇಸ್ಟರ ಮಗಳು. ನಾವೆಲ್ಲಾ ಅವಳಿಗೆ 'ಬೊಂಬಾಯಿ ಬೋಂಡಾ' ಎಂದು ಹೆಸರಿಟ್ಟಿದ್ದೇವೆ."

ಮೀರ ಮನೆಗೆ ಬಂದೊಡನೆ ಕೃಷ್ಣಪ್ಪನವರು ಆ ದಿನ ಶಾಲೆಯಲ್ಲಿ ನಡೆದ ಪಾಠಗಳನ್ನು ವಿಚಾರಿಸಿದರು. ಮೀರ ಉತ್ಸಾಹದಿಂದ ಶಾಲೆಯ ವರದಿಯನ್ನು ಒಪ್ಪಿಸಿದಳು. ಕೃಷ್ಣಪ್ಪನವರು ಹೆಮ್ಮೆಯಿಂದ ಮೀರಳ ಬುದ್ಧಿಯನ್ನು ಹೆಂಡತಿ ಎದುರು ಹೊಗಳಿದರು. ಕಮಲಮ್ಮನವರು ತಿರಸ್ಕಾರದಿಂದ ಮುಖ ತಿರುಗಿಸಿ ಪತಿಯ ಉತ್ಸಾಹಕ್ಕೆ ಕಡಿವಾಣ ಹಾಕಿದರು.

"ಮೀರ, ಆಡೋಣ ಬಾರೆ" ಎಂದು ಶ್ರೀಪಾದು ಮೀರಳ ಕೈ ಹಿಡಿದೆಳೆದ. ಮೀರ ದೊಡ್ಡಪ್ಪನ ಮುಖ ನೋಡಿದಳು.

"ಹೋಗು, ಶ್ರೀಪಾದು ಜೊತೆ ಆಟವಾಡಿಕೋ" ಎಂದರು ದೊಡ್ಡಪ್ಪ. ಮೀರ ಅವನೊಡನೆ ಹೊರಗೆ ಓಡಿದಳು.

ದೊಡ್ಡಪ್ಪನ ಮನೆಗೆ ಬಂದ ತರುಣದಲ್ಲಿ ಮೀರ ಸಂಕೋಚ, ದಾಕ್ಷಿಣ್ಯ ದಿಂದ ಯಾವ ಕೆಲಸ ಮಾಡಲೂ ಹಿಂಜರಿಯುತ್ತಿದ್ದಳು. ದೊಡ್ಡಮ್ಮ ನೇರವಾಗಿ ತನ್ನನ್ನು ನಿಂದಿಸದಿದ್ದರೂ, ಅಂತರಂಗದಲ್ಲಿ ಅವರಿಗೆ ತಾನು ಇಷ್ಟವಿಲ್ಲವೆಂದು ಮೀರ ತಿಳಿದಿದ್ದಳು. ಆದರೆ ದೊಡ್ಡಪ್ಪನ ಪ್ರೀತಿ, ನಾಲ್ಕು ಜನ ಅಣ್ಣಂದಿರ ಸ್ನೇಹ ಮೀರಳಿಗೆ ತುಂಬಾ ಸಮಾಧಾನ ನೀಡುತ್ತಿದ್ದವು. ನಾಲ್ಕು ಜನ ಅಣ್ಣಂದಿರೂ ಮೀರಳನ್ನು ತುಂಬಾ ಪ್ರೀತಿಯಿಂದ ಕಾಣುತ್ತಿದ್ದರು. ಮನೆಯಲ್ಲಿ ಹೆಣ್ಣುಮಕ್ಕಳಿಲ್ಲ ದುದರಿಂದ ಮೀರಳ ಮಾತುಕತೆ, ಆಟವನ್ನು ಅವರು ಕೌತುಕದಿಂದ ನೋಡು ತ್ತಿದ್ದರು. ಗೋವಿಂದ ಮೀರಳಿಗಾಗಿ ಗಾಳಿಪಟ ಕಟ್ಟಿಕೊಟ್ಟರೆ, ಗೋಪಾಲ ರಾತ್ರಿ ಊಟವಾದ ಮೇಲೆ ಎಲ್ಲರನ್ನೂ ಕೂರಿಸಿಕೊಂಡು ತಮಾಷೆಯಾದ ಕತೆಗಳನ್ನು ಹೇಳುತ್ತಿದ್ದ. ಮೊದಮೊದಲು ಶ್ರೀಹರಿ ಮೀರಳೊಡನೆ ಮಾತನಾಡಲು ಸಂಕೋಚಪಡುತ್ತಿದ್ದರೂ ಕ್ರಮೇಣ ಅವನ ಸಂಕೋಚ ಮರೆಯಾಗಿ ಸಲಿಗೆಗೆಡೆ ಕೊಟ್ಟಿತ್ತು. ಅವನು ತನ್ನ ಸ್ನೇಹಿತನ ಮನೆಯಿಂದ ಗುಲಾಬಿ ಹೂಗಳನ್ನು ತಂದು ಮೀರಳಿಗೆ ಮುಡಿಯಲು ಕೊಡುತ್ತಿದ್ದ. ಶ್ರೀಪಾದು, ಮೀರ ಸಮವಯಸ್ಕರಾದುದ ರಿಂದ ಆಟ, ಪಾಠದಲ್ಲಿ ಎಂದೂ ಜೊತೆ ತಪ್ಪಿದ್ದಿಲ್ಲ. ಮಕ್ಕಳ ನಿಷ್ಕಲ್ಮಷವಾದ ಸ್ನೇಹ ನೋಡಿ ಕೃಷ್ಣಪ್ಪನವರು ಸಂತೋಷಪಡುತ್ತಿದ್ದರು.

ಆದರೆ ಕಮಲಮ್ಮನವರಿಗೆ ತಬ್ಬಲಿ ಮೀರಳನ್ನು ತಮ್ಮ ಮಕ್ಕಳಂತೆ ಕಾಣಲು ಒಪ್ಪುತ್ತಿರಲಿಲ್ಲ. ಶ್ರೀಪಾದುವನ್ನು ಕಾಣುವ ದೃಷ್ಟಿಗೂ, ಮೀರಳನ್ನು ಕಾಣುವ ರೀತಿಗೂ ಬಹಳ ಅಂತರವಿತ್ತು. ಮೀರಾ ಚಿಕ್ಕವಳಾದರೂ ಈ ವ್ಯತ್ಯಾಸವನ್ನು ಗಮನಿಸದೇ ಇರಲಿಲ್ಲ. ಮೀರಳನ್ನು ಹೊಡೆದು ಬಡಿಯುವ ಧೈರ್ಯ ಕಮಲಮ್ಮ

ನವರಿಗಿಲ್ಲದಿದ್ದರೂ, ಸಮಯ ಸಿಕ್ಕಿದಾಗ ಹಂಗಿಸುವ ನುಡಿಗಳಿಂದ ಅವಳ ಎಳೆಯ ಮನಸ್ಸನ್ನು ನೋಯಿಸುತ್ತಿದ್ದರು. ಇದನ್ನು ಕಂಡು ಮೀರಳ ಮನಸ್ಸು ಕೆಲವು ಬಾರಿ ಖಿನ್ನವಾಗುತ್ತಿದ್ದರೂ ದೊಡ್ಡಪ್ಪನ ಪ್ರೀತಿ, ಮಕ್ಕಳ ಸ್ನೇಹ ಅವಳೆಲ್ಲ ಚಿಂತೆಗಳನ್ನು ಮರೆಸಿತ್ತು. ಸಾಧ್ಯವಾದಷ್ಟು ಸಮಯವನ್ನು ದೊಡ್ಡಪ್ಪ-ಅಣ್ಣಂದಿರೊಡನೆ ಕಳೆದು, ಆಕೆ ದೊಡ್ಡಮ್ಮನಿಂದ ದೂರವಾಗಿರುತ್ತಿದ್ದಳು.

ಕಮಲಮ್ಮನವರು ಮೀರ ತಮ್ಮಿಂದ ದೂರವಿರಲು ಪ್ರಯತ್ನಿಸುವುದನ್ನು ಕಂಡು ಕೋಪಗೊಂಡರು. ಒಂದು ದಿನ ಮೀರ ಗೋಪಾಲನೊಡನೆ ಪಂಥ ಕಟ್ಟಿ ಬುಗುರಿ ಆಡಿಸುತ್ತಿದ್ದಳು. ಗಂಡ ಮನೆಯಲ್ಲಿಲ್ಲವೆಂದೇ ತಿಳಿದ ಕಮಲಮ್ಮ ಮಾತಿಗೆ ಮೊದಲು ಮಾಡಿದರು:

"ಮೀರ, ನೀನು ಹೆಣ್ಣು ಹುಡುಗಿ. ಯಾವಾಗಲೂ ಹುಡುಗರ ಜೊತೆ ಆಟವಾಡಿಕೊಂಡು ಹೊರಟ್ಟಾಗಿರುವುದು ಸರಿಯಲ್ಲ. ನೀನು ನಾಳೆ ಗಂಡನ ಮನೆಗೆ ಹೋಗುವವಳು. ಇಲ್ಲಿ ನನಗೆ ಸ್ವಲ್ಪ ಸಹಾಯ ಮಾಡಿಕೊಂಡು ಮನೆಗೆಲಸ ಕಲಿತಿದ್ದರೆ, ನಿನಗೂ ಒಳ್ಳೆಯ ಹೆಸರು, ನಮಗೂ ಒಳ್ಳೆಯ ಹೆಸರು ಬರುತ್ತದೆ" ಎಂದು ಒಂದೇ ಸಮ ಮಾತನಾಡಿದರು.

ಬುಗುರಿಗೆ ದಾರ ಸುತ್ತುತ್ತಿದ್ದ ಮೀರ ಪೆಚ್ಚಾಗಿ ಗೋಪಾಲನ ಕಡೆ ನೋಡಿದಳು.

"ಸರಿ, ನೀನು ಬಿಡಮ್ಮ. ಹೆಂಗಸರು ಮನೆ ಕೆಲಸ ಮಾಡಿ ಕಲಿತುಕೊಳ್ಳಬೇಕೆ? ಅಡಿಗೆ ಮಾಡುವುದು, ಸಂಸಾರ ಮಾಡುವುದು ಹೆಂಗಸರಿಗೆ ರಕ್ತಗತವಾಗಿ ಬಂದಿರುತ್ತದೆ. ಮೀರ ಇನ್ನೂ ಚಿಕ್ಕ ಹುಡುಗಿ. ನಿಧಾನವಾಗಿ ಕಲಿತುಕೊಳ್ಳುತ್ತಾಳೆ. ತಲೆ ಮೇಲೆ ಜವಾಬ್ದಾರಿ ಬಿದ್ದರೆ ಎಲ್ಲಾ ಕೆಲಸಾನೂ ಮಾಡ್ತಾಳೆ. ಈಗೊಂದೆರಡು ದಿನ ಆಟವಾಡಿಕೊಂಡಿರುವುದೇ ಬಂತು."

ಗೋಪಾಲ ತಮ್ಮ ಮೇಲೆ ತಿರುಗಿ ಬೀಳಬಹುದೆಂದು ಕಮಲಮ್ಮ ನಿರೀಕ್ಷಿಸಿರಲಿಲ್ಲ. ಕಮಲಮ್ಮನವರ ಮುಖ ಕೋಪದಿಂದ ಕೆಂಪಾಯಿತು.

"ಸಾಕು, ನೀನು ಸುಮ್ಮನಿರು. ದೊಡ್ಡ ವೇದಾಂತಿಯ ಹಾಗೆ ಮಾತನಾಡಬೇಡ. ಮುಂದಿನ ವರ್ಷ ಕಾಲೇಜಿಗೆ ಹೋಗುವ ಹುಡುಗ. ಆ ಮೀರನ ಜೊತೆ ಸದಾ ಬುಗುರಿ ಆಡುತ್ತಿದ್ದರೆ ಚೆನ್ನಾಗಿಯೇ ಪಾಸಾಗುತ್ತೀಯ. ಮೀರ ನನ್ನ ಶತ್ರುವಲ್ಲ. ಅವಳ ಹಿತಕ್ಕೋಸ್ಕರವೇ ನಾನು ಹೇಳೋದು."

"ಅತ್ತೇ ಮನೆಗೆ ಹೋದ ಮೇಲೆ ಇಲ್ಲಿರುವ ಹಾಗೆ ಇರುವುದಕ್ಕೆ ಆಗುತ್ತದೆಯೆ? ಇಲ್ಲಿ ಒಂದೆರಡು ದಿನವಾದರೂ ಆಟವಾಡಿಕೊಂಡು ಸುಖವಾಗಿರಲಿ."

"ಈಗಿನಿಂದ ಸ್ವಲ್ಪವಾದರೂ ಕಲಿತಿರಬೇಡವೇ ಗೋಪಿ?"

"ನೀನೇ ಅವತ್ತು ಹೇಳುತ್ತಿದ್ದೆಯಲ್ಲಮ್ಮಾ–ನಾನು ಇಲ್ಲಿಗೆ ಬಂದಾಗ ಏನು ಕೆಲಸವೂ ಬರುತ್ತಿರಲಿಲ್ಲ. ಈಗ ನನಗೆ ಬರದೇ ಇರುವ ಕೆಲಸವೇ ಇಲ್ಲಾಂತ."

"ಸುಮ್ಮನಿರು. ನಿನ್ನ ಕೈಲಿ ಮಾತನಾಡಿ ಅಪಮಾನ ಮಾಡಿಸಿಕೊಳ್ಳುವುದಕ್ಕಿಂತ ಮರ್ಯಾದೆಯಾಗಿ ಒಳಗಿರುವುದು ಮೇಲು" ಎನ್ನುತ್ತ ಕಮಲಮ್ಮ ಒಳಗೆ ಹೊರಟುಹೋದರು. ತಮ್ಮ ಕೋಪವನ್ನು ಬಾಗಿಲು ಕಿಟಕಿ ಬಡಿಯುವುದು, ಪಾತ್ರೆ ಕುಕ್ಕಿ ಹಾಕುವುದು ಮುಂತಾದವುಗಳ ಮೂಲಕ ಪ್ರದರ್ಶಿಸಿದರು. ಆ ಸದ್ದುಗಳನ್ನು ಗೋಪಾಲ ಕೇಳಿ ನಸುನಕ್ಕ. ಇದುವರೆವಿಗೂ ತಾಯಿ ಮಗನ ಸಂವಾದವನ್ನು ಕೇಳುತ್ತ ಬೆಪ್ಪಾಗಿ ನಿಂತಿದ್ದ ಮೀರ, ದಾರ ಬುಗುರಿಯನ್ನು ಗೋಪಾಲನ ಕೈಗೆ ಕೊಟ್ಟು,

"ಆಟ ಸಾಕು, ಗೋಪಣ್ಣ" ಎಂದಳು.

ಗೋಪಾಲ ಚಕಿತನಾಗಿ ಕೇಳಿದ:

"ಇಷ್ಟು ಬೇಗ ಆಟ ಸಾಕಾಯಿತೇ?"

"ಇಲ್ಲಪ್ಪ ದೊಡ್ಡಮ್ಮ ಸಿಟ್ಟು ಮಾಡಿಕೊಳ್ಳುತ್ತಾರೆ. ನಾನು ಹೋಗುತ್ತೇನೆ" ಎನ್ನುತ್ತ ಮೀರ ಕಣ್ಣಿನಿಂದ ನೀರು ಜಾರಿ ಕೆಳಗೆ ಬೀಳುವ ಮುನ್ನವೇ ಆ ಜಾಗವನ್ನು ಬಿಟ್ಟು ಹೋದಳು. ನೀರು ತುಂಬಿ ಹೊಳೆಯುತ್ತಿದ್ದ ಕಣ್ಣಿನಲ್ಲಡಗಿದ್ದ ದುಃಖದ ಬೇಗೆಯನ್ನರಿತು ಗೋಪಾಲ ಅವಳ ಹಿಂದೆಯೇ ಹೋದ. ಮೀರ ಮೌನವಾಗಿ ಅಳುತ್ತ ಆಗಾಗ್ಗೆ ತನ್ನ ಅಂಗಿಯ ತುದಿಯಿಂದ ನೀರು ಒರೆಸಿಕೊಳ್ಳುತ್ತಿದ್ದಳು.

"ಇದೇನು ಮೀರಾ, ಅಳುತ್ತಿರುವೆಯಾ?"

ಮೀರ ಮಾತನಾಡಲಿಲ್ಲ.

"ಹುಚ್ಚಿ, ಅಮ್ಮನ ಮಾತು ಕೇಳಿ ನೀನಳಬೇಕೆ? ನಾನೂ ಈಗ ಅಮ್ಮನ ಕೈಲಿ ಬೈಸಿಕೊಂಡೆ. ಆದರೆ ನಿನ್ನ ಹಾಗೆ ಅಳುತ್ತಿದ್ದೇನೆಯೇ?"

ಮೀರಳಿಗೆ ಆ ಗಳಿಗೆಯಲ್ಲಿ ಎಲ್ಲ ಮಕ್ಕಳೂ ತಾವಿರಬೇಕಾದ ಸರಿಯಾದ ಸ್ಥಳದಲ್ಲಿರುವಂತೆ ತಾನು ತನ್ನ ಜಾಗದಲ್ಲಿಲ್ಲವೆನ್ನಿಸಿತು. ದಾರಿ ತಪ್ಪಿ ಎಲ್ಲಿಗೋ ಬಂದು ಬಿದ್ದಿರುವ ಹಾಗೆ ಭಾಸವಾಯಿತು.

"ಮೀರ, ಅಳಬೇಡಮ್ಮ. ಶ್ರೀಪಾದು ಮಾತನಾಡುತ್ತಿದ್ದಾನೆ."

ಗೋಪಾಲನ ಮಾತು ಪೂರ್ಣವಾಗುವ ಮುನ್ನ ಶ್ರೀಪಾದು ಉತ್ಸಾಹದಿಂದ ಕೂಗುತ್ತಾ ಒಳಗೆ ಬಂದ.

"ಮೀರಾ, ಎಷ್ಟೊಂದು ಸೀಬೆಕಾಯಿ ತಂದಿದೀನಿ ನೋಡು. ನನ್ನ ಸ್ನೇಹಿತ ವಿಶ್ವನ ಮನೆಯಿಂದ ಕಿತ್ತುಕೊಂಡು ಬಂದೆ" ಎಂದು ತನ್ನ ಷರಟಿನೊಳಗೆ ತುಂಬಿ ಕೊಂಡಿದ್ದ ದೋರೆಕಾಯಿಗಳನ್ನು ಮೀರಳ ಮುಂದೆ ಸುರಿದ. ಮೀರ ಅರ್ಧ

ಹಣ್ಣಾಗಿದ್ದ ಒಂದು ಕಾಯನ್ನು ಸ್ವಲ್ಪ ಕಚ್ಚಿ,

"ಗೋಪಣ್ಣ, ಕಾಯಿ ಸಕ್ಕರೆಗಿಂತಲೂ ಸಿಹಿಯಾಗಿದೆ. ನೀನೂ ತಿಂದು ನೋಡು" ಎಂದಳು. ಒಂದೆರಡು ನಿಮಿಷದಲ್ಲಿ ಹಿಂದೆ ನಡೆದ ಪ್ರಸಂಗವನ್ನು ಮರೆತು ಮೀರ ಹುಡುಗರೊಡನೆ ಹುಡುಗನಾಗಿ ಆಡಿದಳು.

ಕಾನ್ವೆಂಟಿಗೆ ಸೇರಿದ ಕೆಲವು ದಿನಗಳಲ್ಲೇ ಮೀರ ಉಪಾಧ್ಯಾಯಿನಿಯರ ಮೆಚ್ಚುಗೆ ಪಡೆದಳು. ಕಾನ್ವೆಂಟಿನ ಹುಡುಗಿಯರು ಮೀರಳ ಗೆಳೆತನಕ್ಕಾಗಿ ಧಾವಿಸುತ್ತಿದ್ದರು. ಅವಳ ಹಾಸ್ಯ ತುಂಬಿದ ಮಾತು, ವಿಶಾಲವಾದ ಸ್ನೇಹ ಹೃದಯದಿಂದ ಯಾವ ಗೆಳತಿಯೂ ಹೊರತಾಗಿರಲಿಲ್ಲ. ಅವಳ ಪ್ರೀತಿಯ ಗೆಳತಿಯರು ರಾಜೇಶ್ವರಿ, ನರ್ಮದಾ ಮತ್ತು ಚಂಪಾ. ಸ್ವಲ್ಪ ದುಂಡಗೆ ಮೋಟಾಗಿದ್ದ ರಾಜೇಶ್ವರಿಯನ್ನು ಮೀರ 'ಆನೆಮರಿ' ಎಂದು ಹಾಸ್ಯ ಮಾಡುತ್ತಿದ್ದಳು. ನರ್ಮದಾ ಡಾಕ್ಟರ ಮಗಳು. ಹರಿಯುವ ನದಿಯ ನೀರಿಗಿಂತಲೂ ಅವಳ ಮನಸ್ಸು ಚಂಚಲ. ತುಂಬುರೆಪ್ಪೆಯ ಹುಡುಗಿ ನರ್ಮದಳ ಅಂದವೆಲ್ಲ ಬಾಯಿ ಬಿಟ್ಟರೆ ಬಣ್ಣಗೇಡಾಗುತ್ತಿತ್ತು. ವಕ್ರವಾಗಿದ್ದ ಹಲ್ಲುಗಳು ತಿದ್ದಿಟ್ಟ ಮುಖಕ್ಕೆ ಮಸಿ ಬಳಿದಂತಿತ್ತು. ಚಂಪಾ ಬಹಳ ಮತ್ಸರದ ಹುಡುಗಿ. ಸಣ್ಣ ಸಣ್ಣ ಮಾತಿಗೆಲ್ಲಾ ಜಗಳ ಕಾದುಬಿಡುತ್ತಿದ್ದಳು. ಅವಳು ಕೆಲವು ಬಾರಿ ಪ್ರಸನ್ನವಾಗಿದ್ದರೂ, ಯಾವಾಗ ಜಗಳ ಎತ್ತುವುದಕ್ಕೂ ಹಿಂಜರಿಯುತ್ತಿರಲಿಲ್ಲ. ಜಗಳ ಕಾದು ಸಂಗ ಬಿಟ್ಟು 'ಎನ್ಮಿ'ಗಳಾಗಿದ್ದು ಪುನಃ ಒಂದೆರಡು ಗಂಟೆಗಳಲ್ಲಿಯೇ ಸಂಗ ಕಟ್ಟುತ್ತಿದ್ದಳು.

ನಾಲ್ವರು ಗೆಳತಿಯರೂ ಟೆಸ್ಟಿನಲ್ಲಿ ಪ್ರಥಮ ಸ್ಥಾನ ಪಡೆಯಲು ಹೋರಾಟ ನಡೆಸುತ್ತಿದ್ದರು. ಕಾನ್ವೆಂಟಿನಲ್ಲಿ ಆಗಾಗ್ಗೆ ಆಡಿಸುತ್ತಿದ್ದ ನಾಟಕಗಳಲ್ಲಿ ಪ್ರಧಾನ ಪಾತ್ರ ಮೀರಳಿಗೆ ಮೀಸಲು. ಅವಳ ಸುಂದರ ಮುಖ, ಸಣ್ಣದಾದರೂ ಬಹಳ ದೂರ ಗಂಟೆಯಂತೆ ಕೇಳುವ ಧ್ವನಿ, ಭಾವೋದ್ವೇಗಗಳಿಗೆ ತಕ್ಕಂತೆ ಮುಖಭಾವವನ್ನು ತಟ್ಟನೆ ಬದಲಾಯಿಸುವ ಚಾತುರ್ಯಕ್ಕೆ ನಾಟಕ ಕಲಿಸುವ ಸಿಸ್ಟರ್ ಮನಸೋತಿದ್ದರು. ಮೀರಳನ್ನು ಮುದ್ದಿನಿಂದ 'ಚಿಕ್ಕ ನಟಿ' ಎಂದು ಕರೆಯುತ್ತಿದ್ದರು.

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಗೋಪಾಲ ಮೊದಲನೆಯ ತರಗತಿಯಲ್ಲಿ ತೇರ್ಗಡೆ ಹೊಂದಿದ. ಪರೀಕ್ಷೆ ಫಲಿತಾಂಶ ಹೊರಬಿದ್ದ ದಿನ ಗೋಪಾಲನಿಗಿಂತಲೂ ಮೀರ ಹೆಚ್ಚು ಸಂತೋಷಪಟ್ಟಳು. ಗೋಪಾಲ ಫಲಿತಾಂಶ ತಿಳಿದು ಬರಲು ಹೋಗಿದ್ದಾಗ ಮುಂಬಾಗಿಲಿನಲ್ಲಿಯೇ ಕಾದು ನಿಂತಿದ್ದು ಫಲಿತಾಂಶ ತಿಳಿದು 'ದೊಡಮಡ್ಮಾ' ಎಂದು ಕೂಗುತ್ತಾ ಒಳಗೋಡಿ ಬಂದಳು.

ದೊಡ್ಡಮ್ಮ ಗಾಬರಿಯಿಂದ "ಏನಾಯಿತೇ" ಎಂದರು.

"ಮತ್ತೆ.... ಗೋಪಣ್ಣನಿಗೆ.... ಫಸ್ಟ್ ಕ್ಲಾಸಿನಲ್ಲಿ ಪಾಸಾಯಿತು. ಎಲ್ಲಿ

ಎಲ್ಲಿ ಸಕ್ಕರೆ ಡಬ್ಬಾ...."

"ತಾಳು. ಕೊಬ್ಬರಿ ಸಕ್ಕರೆ ಮಾಡಿಕೊಡುತ್ತೇನೆ" ಎಂದು ಕಮಲಮ್ಮ ತುರಿಯುವ ಮಣೆಯನ್ನು ಮುಂದಿಟ್ಟುಕೊಂಡು ಕೊಬ್ಬರಿ ತುರಿಯತೊಡಗಿದರು.

ಕೃಷ್ಣಪ್ಪನವರು ಮನೆಗೆ ಬಂದಾಗ ಮಗನಿಗಾದ ಗೆಲುವಿನಿಂದ ಅವರ ಮುಖ ಹಿಗ್ಗಿತು. ಕಮಲಮ್ಮನವರು ತಂದುಕೊಟ್ಟ ಕೊಬ್ಬರಿ ಸಕ್ಕರೆಯನ್ನು ಸ್ವಲ್ಪ ಸ್ವಲ್ಪವಾಗಿ ಬಾಯಿಗೆ ಹಾಕಿಕೊಳ್ಳುತ್ತಾ ಕೇಳಿದರು:

"ಮುಂದೇನು ಮಾಡುತ್ತೀಯಪ್ಪಾ ಗೋಪಿ?"

"ಇಂಟರ್‌ಮೀಡಿಯಟ್‌ಗೆ ಸೇರಿಕೊಳ್ಳುತ್ತೀನಿ ಅಣ್ಣಾ."

"ಆಪ್ಷನಲ್ಸ್ ಏನು ತೆಗೆದುಕೊಳ್ಳುತ್ತೀಯಾ?"

"ಸಿ.ಬಿ.ಜಡ್. ತಗೊಳ್ಳೋಣಾಂತ ಇದೀನಿ. ಮುಂದೆ ಮೆಡಿಕಲ್ ಕಾಲೇಜಿಗೆ ಸೇರಲು ಅನುಕೂಲವಾಗುತ್ತದೆ."

ಕೃಷ್ಣಪ್ಪನವರು ವಿಷಾದದ ನಗೆ ನಕ್ಕು "ನೀನು ಬಯಸಿದ್ದು ಓದಿಸಲು ನನಗೂ ಆಸೆ ಗೋಪಿ. ಆದರೆ ಮೊದಲನೆಯದಾಗಿ ನಮಗೆ ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಕ್ಕುವುದು ಕಷ್ಟ. ಸಿಕ್ಕಿದರೂ ಓದಿಸುವ ಚೈತನ್ಯ ನನ್ನಲ್ಲಿಲ್ಲ."

ಗೋಪಾಲ ಕೊಂಚ ಆವೇಶದಿಂದಲೇ ಹೇಳಿದ "ಚೆನ್ನಾಗಿ ಓದಿ ಫಸ್ಟ್ ಕ್ಲಾಸಿನಲ್ಲಿ ಪಾಸು ಮಾಡಿದರೆ ಸೀಟು ಸಿಗದೆ ಏನಣ್ಣಾ? ಸೀಟು ಸಿಕ್ಕಿದರೆ ಹೇಗಾದರೂ ಓದಬಹುದು."

ಮಗನಿಗೆ ಡಾಕ್ಟರಾಗುವ ಅಪೇಕ್ಷೆ ಬಲವಾಗಿ ಬೇರೂರಿರುವುದನ್ನು ನೋಡಿ ಕೃಷ್ಣಪ್ಪನವರು ಮಾತನಾಡಲಿಲ್ಲ. ಮಗನಿಗಾದ ವಿಜಯವನ್ನು ತಮ್ಮ ಗೆಳೆಯರಿಗೆ ಹೇಳಿಕೊಳ್ಳಲು ಹೋದರು. ಅವರು ಎದ್ದುಹೋದ ಕೂಡಲೇ ಮೀರ ಕೇಳಿದಳು:

"ಮೆಡಿಕಲ್ ಕಾಲೇಜ್ ಅಂದರೆ ಏನು ಗೋಪಣ್ಣಾ?"

"ಮೆಡಿಕಲ್ ಕಾಲೇಜಿನಲ್ಲಿ ಓದಿದರೆ ಡಾಕ್ಟರಾಗಬಹುದು."

"ನಿನಗೆ ಡಾಕ್ಟರಾಗಲು ಆಸೆಯೇನು?"

"ಹ್ಞೂ. ನಿನಗೆ ಆಸೆಯಿಲ್ಲವೇ?"

ಮೀರಳ ಕಣ್ಣುಮುಂದೆ ನರ್ಮದೆಯ ತಂದೆ ಸುಬ್ಬರಾಯರ ಚಿತ್ರ ಸುಳಿದು ಹೋಯಿತು. ಅವರು ಸರಕಾರೀ ಡಾಕ್ಟರಾಗಿದ್ದರು. ಅವರ ಠೀವಿ, ದರ್ಪ ಮೀರಳ ಮನಸ್ಸನ್ನು ಸೆಳೆದಿತ್ತು. ಲಕ್ಷ್ಮಿ, ಸರಸ್ವತಿಯರಿಬ್ಬರೂ ಅವರಿಗೆ ಪ್ರಸನ್ನರಾಗಿದ್ದುದರಿಂದ ಕಾರು, ದೊಡ್ಡ ಬಂಗಲೆ, ರೇಡಿಯೋ, ಆಳುಗಳು ಎಂದು ರಾಜವೈಭವ ನಡೆಸುತ್ತಿದ್ದರು. ಜನ ಅವರಿಗೆ ತೋರುವ ಮರ್ಯಾದೆ ಮೀರಳನ್ನು ಬೆರಗುಗೊಳಿಸಿತ್ತು. ಇವರ ರಾಜವೈಭವ ನೆನೆದೇ ಮೀರ ಹೇಳಿದಳು:

"ಹ್ಞೂ. ನನಗೂ ಡಾಕ್ಟರಾಗಲು ತುಂಬಾ ಆಸೆ ಗೋಪಣ್ಣ. ಡಾಕ್ಟರಾದರೆ ನರ್ಮದಾ ತಂದೆಯ ಹಾಗೆ ಯಾವಾಗಲೂ ಕಾರಿನಲ್ಲಿ ಓಡಾಡಬಹುದು."

"ಯಾವ ನರ್ಮದಾ? ಡಾಕ್ಟರ್ ಸುಬ್ಬರಾಯರ ಮಗಳು ನರ್ಮದಾನೇ? 'ದಂತವಕ್ರ' ಅಲ್ಲವೇ?"

"ಅವಳನ್ನು ನೀನೇಕೆ ಹಾಸ್ಯ ಮಾಡಬೇಕು? ನೀನೇನು ಅವಳನ್ನು ಮದುವೆ ಮಾಡಿಕೊಳ್ಳಬೇಕೆ?"

ಮೀರ ಗೆಳತಿಯ ಪರ ವಹಿಸಿ ಮಾತನಾಡಿದಳು.

"ಸಧ್ಯ, ಅವಳನ್ನು ಯಾರು ಮಾಡಿಕೊಳ್ಳುತ್ತಾರೆ ಹೇಳು. ಹಲ್ಲು ನೋಡಿದರೆ ಸಾಕು ಹಿಂಜರಿಯೋಣ ಎನ್ನಿಸುತ್ತದೆ."

"ಸಾಕು ಸುಮ್ಮನಿರಪ್ಪ ಹಲ್ಲು ಚೆನ್ನಾಗಿಲ್ಲದಿದ್ದರೇನು? ಮುಖ ಚೆನ್ನಾಗಿದೆ."

"ಮುಖವೇನೋ ಪರವಾಗಿಲ್ಲ. ಅವಳಿಗೆ ಹೆಚ್ಚು ನಗಬೇಡವೆಂದು ಹೇಳು."

ಮೀರಾ ನಕ್ಕಳು. ಅವಳ ಪುಟ್ಟ ಹಲ್ಲುಗಳು ಕೆಂಪು ತುಟಿಯ ಹಿಂದೆ ಮಿನುಗಿದವು.

ಎರಡು ವರ್ಷಗಳು ಉರುಳಿದವು.ಗೋಪಾಲ ತನ್ನಾಸೆ ಈಡೇರಿಸಿಕೊಳ್ಳುವ ಉದ್ದೇಶದಿಂದ ಮೊದಲಿನಿಂದಲೂ ಪಾಠಗಳಲ್ಲಿ ಶ್ರದ್ಧೆಯಿಟ್ಟು ಓದತೊಡಗಿದ. ಗೋಪಾಲ ನಿರೀಕ್ಷಿಸಿದ್ದಂತೆ ಇಂಟರ್‌ನಲ್ಲಿ ಫಸ್ಟ್‌ಕ್ಲಾಸು ಬಂತು. ಮೀರಳಿಗೆ ಗೋಪಣ್ಣನಷ್ಟು ಬುದ್ಧಿವಂತರು ಈ ಪ್ರಪಂಚದಲ್ಲೇ ಇಲ್ಲ ಎನಿಸಿತು.

ರಿಸಲ್ಟ್ ಬಂದ ಮಧ್ಯಾಹ್ನ ಎಲ್ಲರೂ ಊಟ ಮಾಡಿ ಹಾಲಿನಲ್ಲಿ ಮಾತ ನಾಡುತ್ತ ಕುಳಿತಿದ್ದರು. ಶ್ರೀಪಾದು ಗೋಪಾಲನ ಬೆನ್ನಿನ ಮೇಲೆ ಗುದ್ದುತ್ತ "ತಿಂಡಿ ಕೊಡಿಸೋ" ಎಂದು ಪೀಡಿಸುತ್ತಿದ್ದ.

ಮೀರ ನಸುನಗೆಯಿಂದ,

"ದೊಡ್ಡಪ್ಪ, ಇಷ್ಟು ದಿವಸ ನಾನು ನಿಮಗೊಂದು ಸಂಗತಿ ಹೇಳದೇ ಮುಚ್ಚಿಟ್ಟುಕೊಂಡಿದ್ದೆ" ಎಂದಳು.

"ಏನೇ ಅದು ಕಳ್ಳಿ, ನನಗೂ ಹೇಳಬೇಡವೇ?"

"ನಮ್ಮ ಕಾನ್ವೆಂಟಿನಲ್ಲಿ ಇವತ್ತು 'ಪೇರೆಂಟ್ಸ್ ಡೇ' ದೊಡ್ಡಪ್ಪಾ. ಅದಕ್ಕೆ ಇವತ್ತು ಸಂಜೆ ನಾಟಕ ಇಟ್ಟುಕೊಂಡಿದ್ದಾರೆ...."

"ಇಷ್ಟು ದಿನ ಹೇಳಲೇಬೇಡವೇ?'

"ಸಿಸ್ಟರು ಯಾರಿಗೂ ಹೇಳಬೇಡಿ ಅಂತ ಹೇಳಿದ್ದರು. 'ಈ ಸುದ್ದಿ ಬಿಸಿ ಬಿಸಿಯಾಗಿದ್ದರೇ ರುಚಿ. ಮೊದಲಿನಿಂದಲೂ ಮನೆಯವರಿಗೆ ಹೇಳಿ ತಂಗಳು ಮಾಡಬೇಡಿ' ಎಂದಿದ್ದರು."

ಮಧ್ಯಾಹ್ನದ ತಿಂಡಿಗೆಂದು ಬದನೆಕಾಯಿ ಬಿಲ್ಲೆಗಳನ್ನು ಕೊರೆಯುತ್ತಿದ್ದ ಕಮಲಮ್ಮ "ನಾಟಕದಲ್ಲಿ ನೀನು ಪಾರ್ಟು ಮಾಡಿಲ್ಲ ತಾನೇ!" ಎಂದರು. ಮೀರಾ ಪೆಚ್ಚಾಗಿ ಗೋಪಾಲನ ಕಡೆ ನೋಡಿದಳು. ಗೋಪಾಲ ಹೇಳಿದ:

"ನಾಟಕದಲ್ಲಿ ಪಾರ್ಟು ಮಾಡಿದರೇನಮ್ಮ ತಪ್ಪು? ಮೀರಾ ಇನ್ನೂ ಚಿಕ್ಕ ಹುಡುಗಿ."

"ಚಿಕ್ಕ ಹುಡುಗಿ ಅಂದರೆ ಏನೋ? ಆಗಲೇ ಒಂಭತ್ತು ವರ್ಷ ಆಯಿತು."

"ಒಂಭತ್ತು ವರ್ಷವಾದರೆ ಮುದುಕಿಯಾಗಿ ಹೋದಳೇ? ಆಡುವ ವಯಸ್ಸು. ಆಟವಾಡುತ್ತಾಳೆ."

"ಬಿಡು ಕಮಲೂ. ಮೀರಾ ಇನ್ನೂ ಮಗು. ಈಗೊಂದೆರಡು ದಿನ ಆಟ ವಾಡಲಿ. ನೀನು ಸುಮ್ಮನಿರು ಗೋಪು. ಇವತ್ತು ಸಂಜೆ ಮೀರಳ ಅಭಿನಯ ನೋಡಿ ಅವಳೇ ಮುಗ್ಧಳಾಗುತ್ತಾಳೆ."

ಶ್ರೀಹರಿ ಕೇಳಿದ, "ಯಾವ ನಾಟಕ ಮೀರಾ?"

" 'ಸಿಂಡ್ರೆಲಾ' ನಾಟಕ."

ಶ್ರೀಪಾದು ಕುತೂಹಲದಿಂದ ಕೇಳಿದ, "ನೀನು ಯಾವ ಪಾರ್ಟು ಹಾಕು ತ್ತೀಯಾ?"

"ಸಿಂಡ್ರೆಲಾ."

ಗೋಪಾಲ ಹೇಳಿದ, "ಹಾಗಾದರೆ ನಾಟಕ ನೋಡಲೇಬೇಕು."

"ಇಂಗ್ಲಿಷ್ ನಾಟಕವೋ, ಕನ್ನಡ ನಾಟಕವೋ?" ಎಂದು ಕೃಷ್ಣಪ್ಪನವರು ಕೇಳಿದರು.

"ಇಂಗ್ಲಿಷ್ ನಾಟಕ."

"ನೀವಾಡುವ ಮಾತಿಗೆ ಅರ್ಥವೆಲ್ಲಾ ನಿಮಗೆ ತಿಳಿದಿದೆಯೇ?"

"ಓಹೋ ಎಲ್ಲಾ ಅರ್ಥವೂ ಗೊತ್ತು. ಕನ್ನಡ ಮೇಷ್ಟರು ಅರ್ಥ ತಿಳಿಸಿದ್ದಾರೆ" ಎನ್ನುತ್ತ ಮೀರ ಒಳಗೆದ್ದು ಹೋಗಿ ತನ್ನ ಪುಸ್ತಕದಲ್ಲಿಟ್ಟುಕೊಂಡಿದ್ದ ಆಹ್ವಾನ ಪತ್ರಿಕೆಯನ್ನು ತಂದು ಕೃಷ್ಣಪ್ಪನವರ ಕೈಗಿತ್ತಳು.

ಸಂಜೆ ಐದು ಗಂಟೆಗೇ ಜನ ಕಾನ್ವೆಂಟಿಗೆ ಬರಲಾರಂಭಿಸಿದರು. ಗಿಳಿ ಹಸಿರು ಬಣ್ಣದ ಲಂಗ, ಬಿಳಿ ಸಿಲ್ಕಿನ ಜಂಪರ್ ಹಾಕಿದ್ದ ಹುಡುಗಿಯೊಬ್ಬಳು ಕಾನ್ವೆಂಟಿನ ಬಾಗಿಲಿನಲ್ಲಿ ನಿಂತು ಕುತೂಹಲದಿಂದ ಜನರ ಗುಂಪನ್ನು ಹುಡುಕು ಕಣ್ಣುಗಳಿಂದ ನೋಡುತ್ತಿದ್ದಳು. ನರ್ಮದಾ ಒಳಗಿನಿಂದ ಈಚೆಗೆ ಬಂದು "ಬಾರೇ ಮೀರಾ, ಸಿಸ್ಟರ್ ಕರೀತಿದಾರೆ. ಡ್ರೆಸ್ ಮಾಡಿಕೊಳ್ಳುವುದಕ್ಕೆ ಬರಬೇಕಂತೆ" ಎಂದಳು.

"ಸ್ವಲ್ಪ ತಾಳು ನರ್ಮದಾ. ದೊಡ್ಡಪ್ಪ, ಗೋಪಣ್ಣ ಎಲ್ಲರೂ ಐದುಗಂಟೆಗೆ

ಬರುತ್ತೇವೆ ಅಂತ ಹೇಳಿದ್ದರು. ಬಂದರೋ ಇಲ್ಲವೋ ಅಂತ ನೋಡುತ್ತಿದ್ದೇನೆ" ಎಂದಳು. ಜನರ ಗುಂಪಿನಲ್ಲಿ ಎಲ್ಲರಿಗಿಂತ ಮುಂದೆ ಓಡಿಬರುತ್ತಿದ್ದ ಶ್ರೀಪಾದೂನ ನೋಡಿ ಮೀರ ಸಮಾಧಾನದ ಉಸಿರುಗರೆದು ಒಳಗೆ ಹೋದಳು.

ಆ ದಿನ ಚರ್ಚಿನ ಬಿಷಪ್ಪರೊಬ್ಬರು ಅಧ್ಯಕ್ಷತೆ ವಹಿಸಿದ್ದರು. ಐದೂವರೆಗೆ ಸರಿಯಾಗಿ ಕಾರ್ಯಕ್ರಮ ಮೊದಲಾಯಿತು. ಪ್ರಾರ್ಥನೆಯಾದ ನಂತರ ಆಟಗಳಲ್ಲಿ ಗೆದ್ದ ಹುಡುಗಿಯರಿಗೆ ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು. ಮೀರ ತನಗೆ ಬಂದ ನಾಲ್ಕು ಬಹುಮಾನಗಳನ್ನು ಬಲಗೈಯಿಂದ ತನ್ನೊಡಲಿಗೊತ್ತಿಕೊಂಡು ಹೊರಟಾಗ, ಎಲ್ಲರಿಗಿಂತ ಮುಂದಾಗಿ ಚಪ್ಪಾಳೆ ಹೊಡೆಯಲು ಪ್ರಾರಂಭಿಸಿ, ಎಲ್ಲರಿಗಿಂತ ಕೊನೆಯಲ್ಲಿ ನಿಲ್ಲಿಸಿದವನು ಶ್ರೀಪಾದು. 'ಕಂದಾರಿಯವರ ನೃತ್ಯ', 'ಜಪಾನಿಯರ ನೃತ್ಯ'ದ ನಂತರ 'ಸಿಂಡ್ರೆಲಾ' ನಾಟಕ ಆರಂಭವಾಯಿತು. ಮೀರ ತನ್ನ ಶಕ್ತಿಮೀರಿ ಅಭಿನಯಿಸಿದ್ದಳು. ಅವಳ ಸುಂದರ ಮುಖ, ಮುದ್ದಾದ ಅಭಿನಯ, ಹಾವಭಾವಗಳು ಪ್ರೇಕ್ಷಕರ ಮನಸ್ಸನ್ನು ಸೆರೆ ಹಿಡಿದವು. ದೇವತೆ ಪ್ರತ್ಯಕ್ಷವಾಗಿ ತನ್ನ ದಂಡದಿಂದ ಸಿಂಡ್ರೆಲಾಳನ್ನು ಸ್ಪರ್ಶಿಸಿದ ಕೂಡಲೇ ಒಂದು ಗಳಿಗೆಯಲ್ಲಿ ಹರಕಲು ಮೇಲುಹೊದಿಕೆಯನ್ನು ಕಿತ್ತೆಸೆದು ಸರ್ವಾಲಂಕಾರಭರಿತಳಾಗಿ ನಿಂತಿದ್ದ ಸಿಂಡ್ರೆಲಾಳ ಕೈಚಳಕವನ್ನು ಎಲ್ಲರೂ ಹೊಗಳಿದರು. ರಾಜಕುಮಾರನೊಡನೆ ಕೈಹಿಡಿದು ಮಾಡಿದ ನೃತ್ಯ, ಹಾಲಿವುಡ್ಡಿನ ನೃತ್ಯಕ್ಕಿಂತಲೂ ಮನೋಹರವಾಗಿತ್ತೆಂದು ಗೋಪಾಲ ಹೊಗಳಿದನು.

ನಾಟಕ ಮುಗಿಯಿತು. ಅಧ್ಯಕ್ಷರು ನಾಟಕ ದಿಗ್ದರ್ಶಿಸಿದ್ದ ಸಿಸ್ಟರ್ ಮೇರಿಯನ್ನೂ, ಪಾತ್ರಗಳಿಗೆ ಜೀವಂತಕಳೆ ತುಂಬಿದ ನಟಿಯರನ್ನೂ ಮನಃಪೂರ್ವಕವಾಗಿ ಹೊಗಳಿದರು. ಎಲ್ಲರ ಮೆಚ್ಚುಗೆ, ಹೊಗಳಿಗೆಯ ಬಹುಭಾಗ ಮೀರಳ ಪಾಲಿಗೆ ಸೇರಿತ್ತು.

ಕೃಷ್ಣಪ್ಪನವರು ದಾರಿಯುದ್ದಕ್ಕೂ ಮೀರಳ ಭಾವಪೂರ್ಣ ಅಭಿನಯವನ್ನು ಹೊಗಳುತ್ತ ಬಂದರು. ಕಮಲಮ್ಮನವರು ಪತಿಯ ಹೊಗಳಿಗೆ ಕೇಳಿ ಬೇಸತ್ತು,

"ಸಾಕು ಸುಮ್ಮನಿರಿ. ಹೇಳಿಕೊಟ್ಟರೆ ಯಾರು ಬೇಕಾದರೂ ಮಾಡುತ್ತಾರೆ. ಅಭಿನಯವೆಂದರೆ ಬ್ರಹ್ಮವಿದ್ಯೆಯೇ? ಈಗಿನಿಂದ ಇವಳು ಹೀಗೆ ನಾಟಕದಲ್ಲಿ ಪಾರ್ಟು ಮಾಡುತ್ತಿರಲಿ. ಮುದೆ ಮದುವೆ ಮಾಡಿಕೊಂಡವನು ಬಹಳ ಸುಖ ಪಡುತ್ತಾನೆ" ಎಂದು ಸಿಡುಗುಟ್ಟಿದರು. ಇದುವರೆಗೂ ಸುಮ್ಮನಿದ್ದ ಗೋಪಾಲ ಹೇಳಿದ:

"ಅಮ್ಮಾ, ನೀನು ಅವಳಿಗೆ ನಿರುತ್ಸಾಹವನ್ನುಂಟು ಮಾಡಬೇಡ. ಚಿಕ್ಕ ಹುಡುಗಿಯರು ಯಾವಾಗಲೂ ಚಟುವಟಿಕೆಯಾಗಿದ್ದರೇ ಚೆನ್ನ."

ಮೀರ ಗೋಪಾಲನ ಕಡೆ ಕೃತಜ್ಞತೆಯಿಂದ ನೋಡಿದಳು.

ಗೋಪಾಲ ತನ್ನಭಿಲಾಷೆಯಂತೆ ಮೆಡಿಕಲ್ ಕಾಲೇಜಿಗೆ ಅಪ್ಲಿಕೇಷನ್ ಹಾಕಿದ್ದ. ಇಂಟರ್‌ವ್ಯೂಗೆ ಕರೆ ಬಂದಿತ್ತು. ಅವನೆಣಿಕೆಯಂತೆ ಚುನಾವಣಾ ಸಮಿತಿಯವರು ಗೋಪಾಲನಿಗೆ ಕಾಲೇಜಿಗೆ ಸೇರಲು ತಮ್ಮ ಸಮ್ಮತಿ ಕೊಟ್ಟಿದ್ದರು. ಕೃಷ್ಣಪ್ಪನವರೂ ದೇವರ ಮೇಲೆ ಭಾರ ಹಾಕಿ ತಮ್ಮ ಮಗನ ಆಸೆಯನ್ನು ಪೂರೈಸಲು ಮನಸ್ಸು ಮಾಡಿದ್ದರು. ಮೀರಳಿಗೆ ಎಲ್ಲರಿಗಿಂತಲೂ ಹೆಚ್ಚು ಆನಂದ. ಹೆಮ್ಮೆಯಿಂದ ಗೆಳತಿಯರಲ್ಲಿ 'ನಮ್ಮ ಗೋಪಣ್ಣ ಡಾಕ್ಟರಾಗುತ್ತಾನೆ ಕಣೇ' ಎಂದು ಹೇಳಿಕೊಂಡಳು. ಗೋಪಾಲಣ್ಣ ಕಾಲೇಜು ಲೈಬ್ರರಿಯಿಂದ ತರುತ್ತಿದ್ದ ದಪ್ಪ ದಪ್ಪ ಇಂಗ್ಲಿಷ್ ಪುಸ್ತಕಗಳನ್ನು ನೋಡಿ ಮೀರ ಬೆರಗಾಗಿದ್ದಳು.

ಒಂದು ಭಾನುವಾರ ಮಧ್ಯಾಹ್ನ ಕಮಲಮ್ಮನವರು ತಿಂಡಿ ಮಾಡಿ ಮೀರಳಿಗೆ "ಮೀರಾ, ಗೋಪೂನ ತಿಂಡೀಗೆ ಕರೆದುಕೊಂಡು ಬಾ" ಎಂದರು.

ಸದ್ದಾಗದಂತೆ ಗೋಪಾಲನ ರೂಮನ್ನು ಪ್ರವೇಶಿಸಿದಳು ಮೀರ. ಗೋಡೆಯ ಮೇಲೆ ಭೂಪಟದಂತೆ ಹಾಕಿದ್ದ ಮನುಷ್ಯನ ಚಿತ್ರವೊಂದು ಅವಳ ಗಮನವನ್ನು ಸೆಳೆಯಿತು. ಆ ಚಿತ್ರವನ್ನು ಅವಳು ಎಂದೂ ನೋಡಿರಲಿಲ್ಲ. ನರಗಳನ್ನೂ, ಎಲುಬುಗಳನ್ನೂ ನಿಚ್ಚಳವಾಗಿ ಎತ್ತಿ ತೋರಿಸುತ್ತಿದ್ದ ಚಿತ್ರವದು. ಗೋಪಣ್ಣ ಮಂಚದ ಮೇಲೆ ನಿದ್ರಿಸುತ್ತ ಮಲಗಿದ್ದ.

"ಗೋಪಣ್ಣ" ಮೀರ ಮೆಲ್ಲನೆ ಕೂಗಿದಳು.

ಗೋಪಾಲ ಕಣ್ಣುಬಿಟ್ಟು "ಏನು?" ಎಂದ.

"ದೊಡ್ಡಮ್ಮ ಕರೀತಾರೆ."

ಗೋಪಾಲ ಎದ್ದು ಕುಳಿತು ಮೈಮುರಿದು ಆಕಳಿಸಿದ. ಮೇಜಿನ ಮೇಲಿದ್ದ ಬಿಳಿಯ ಮಣ್ಣಿನಿಂದ ಮಾಡಿದಂತಹ ವಸ್ತುವೊಂದರಲ್ಲಿ ಮೀರಳ ದೃಷ್ಟಿ ನೆಟ್ಟಿತು.

"ಇದೇನಿದು ಗೋಪಣ್ಣ?"

"ಮನುಷ್ಯನ ತಲೆಬುರುಡೆ."

"ಅಂದರೆ?"–ಮೀರ ಅರ್ಥವಾಗದ ದನಿಯಲ್ಲಿ ಕೇಳಿದಳು.

"ಅಂದರೆ...." ಎನ್ನುತ್ತ ಗೋಪಾಲ ಮಂಚದಿಂದಿಳಿದು ಬಂದು ಮೀರಳ ಮೋಟು ಜಡೆಯನ್ನೆಳೆದು, ತಲೆ ಹಿಡಿದು ಹಿಂದಕ್ಕೂ ಮುಂದಕ್ಕೂ ಅಲುಗಾಡಿಸಿ

"ಇದೇ ತಲೆಬುರುಡೆ" ಎಂದ.

ಮೀರ ಗಾಬರಿಯಿಂದ 'ಇದು ನನ್ನ ತಲೆ ಬುರುಡೇನಾ?" ಎಂದಳು.

"ಅಲ್ವೇ ಪೆದ್ದೂ.ಇದು ಯಾರೋ ಬೇವಾರ್ಸಿಯ ತಲೆಬುರುಡೆ. ಈಗ ನೋಡಮ್ಮಾ. ನಮ್ಮ ತಲೇ ಹೊರಗೆ ಕೂದಲು, ಚರ್ಮ, ಕಣ್ಣು, ಮೂಗು

ಎಲ್ಲಾ ಇದೆ. ಇದೆಲ್ಲಾ ನಮ್ಮ ದೇಹದ ಹೊರಗಿನ ಪರದೆ. ಇದರೊಳಗೆ ರಕ್ತ ಮಾಂಸ ಎಲ್ಲಾ ಇದೆ. ಬೆರಳು ಕುಯಿದುಕೊಂಡರೆ ರಕ್ತ ಬರುವುದನ್ನು ನೀನು ನೋಡಿದ್ದೀಯೋ ಇಲ್ಲವೋ?"

"ನೋಡಿದ್ದೀನಿ."

"ಇವುಗಳೆಲ್ಲದರ ಒಳಗೆ ಮೂಳೆ ಇದೆ. ಈಗ ನಿನ್ನ ಕೈ ಮೆಲ್ಲಗೆ ಅದುಮಿ ನೋಡು. ಮೃದುವಾಗಿ ಸಿಗುವುದು ಮಾಂಸ. ಸ್ವಲ್ಪ ಬಲವಾಗಿ ಒತ್ತಿದರೆ ಗಟ್ಟಿಯಾಗಿ ಸಿಗುವುದು ಮೂಳೆ. ಇದು ನಮ್ಮ ತಲೆ ಮೂಳೆ."

"ಹಾಗೇನು?" ಮೀರಾ ತಲೆಬುರುಡೆಯನ್ನೇ ನೋಡುತ್ತಾ ಕೇಳಿದಳು.

ಗೋಪಾಲ ನಿಲುವುಗನ್ನಡಿಯ ಎದುರಿಗೆ ಮೀರಳನ್ನು ನಿಲ್ಲಿಸಿ ಅವಳ ತಲೆ ಯನ್ನು ಹೋಲಿಸುತ್ತಾ,

'ನೋಡು ಮೀರಾ, ಇಲ್ಲಿ ಎರಡು ಗೂಡುಗಳಿವೆಯಲ್ಲಾ. ಇವು ಕಣ್ಣುಗಳ ಸ್ಥಾನ. ಇಲ್ಲಿ ಮೂಗು, ಇಲ್ಲಿ ತುಟಿ, ಇದು ಹಲ್ಲು, ಇದು ಕೆನ್ನೆ" ಎಂದು ಕೈ ಬೆರಳುಗಳಿಂದ ಪ್ರತಿಯೊಂದು ಸ್ಥಳವನ್ನೂ ನಿರ್ದೇಶಿಸಿದ. ಮೀರ ತನ್ನ ಕಿವಿಗಳನ್ನೇ ನಂಬದಾದಳು.

"ಥೂ, ನಾವು ಇಷ್ಟೊಂದು ಅಸಹ್ಯವಾಗಿರುತ್ತೇವಾ?"

"ಹ್ಞೂ. ನೀನೂ ಡಾಕ್ಟರ್ ಪರೀಕ್ಷೆಗೆ ಓದು. ಮನುಷ್ಯನ ದೇಹ ಎಷ್ಟು ವಿಚಿತ್ರ ಎನ್ನುವುದು ನಿನಗೇ ಗೊತ್ತಾಗುತ್ತದೆ. ಡಾಕ್ಟರಾದರೆ ಜನರಿಗೆ ಬಂದ ರೋಗ ಗಳನ್ನು ವಾಸಿ ಮಾಡಬಹುದು. ಕೈತುಂಬಾ ಹಣ ಸಂಪಾದಿಸಬಹುದು. ನಿನಗೆ ಡಾಕ್ಟರಾಗಲು ಆಸೆಯಿಲ್ಲವೇ?"

"ಹ್ಞೂ. ತುಂಬಾ ಆಸೆಯಿದೆ."

ಮೊದಲು ಕೇವಲ ವೈಭವಪಡಲು ಡಾಕ್ಟರಾಗಲು ಆಶಿಸುತ್ತಿದ್ದ ಮೀರ ಈಗ ದೇಹದ ವೈಚಿತ್ರ್ಯಗಳನ್ನರಿಯಲು ಡಾಕ್ಟರಾಗಲು ಆಶಿಸಿದಳು. ಅವಳ ಕಣ್ಣು ಗಳಲ್ಲಿ ಆಸೆ ಕನಸಾಗಿ ನಿಂತಿತ್ತು.

"ಗೋಪಣ್ಣಾ ಅಮ್ಮ ಕರೀತಾಳೆ ಬಾರೋ" ಎಂದು ಗೋವಿಂದ ಕೂಗಿದ. ಗೋಪಾಲ ತಲೆಬುರುಡೆಯನ್ನು ಮೇಜಿನ ಮೇಲಿಟ್ಟು ಹೊರಗೆ ಹೋದ. ಮೀರ ಮೇಜಿನ ಮೇಲಿದ್ದ ಬುರುಡೆಯನ್ನು ಮೃದುವಾಗಿ ಎತ್ತಿಕೊಂಡು ಸವರಿದಳು. ಅದನ್ನು ಸವರುತ್ತ ಕನಸು ಕಾಣತೊಡಗಿದಳು. ತಾನು ಪ್ರಸಿದ್ಧ ವೈದ್ಯಳಾದಂತೆಯೂ, ಜನರ ರೋಗಗಳನ್ನೆಲ್ಲಾ ವಾಸಿ ಮಾಡುತ್ತಿದ್ದಂತೆಯೂ, ಕೈತುಂಬ ಹಣ ಬಂದಂ ತೆಯೂ ಭಾವಿಸಿ ಹಿಗ್ಗಿದಳು.

'ಡಾಕ್ಟರಾದರೆ ಎಷ್ಟು ಚೆಂದ' ಎಂದು ಮೆಲ್ಲಗೆ ಹೇಳಿಕೊಂಡಳು. ಎಳೆಯ

ಮನಸ್ಸಿನ ಮೇಲೆ ಗೋಪಾಲ ಬಣ್ಣಿಸಿದ ಚಿತ್ರ ಬಲವಾಗಿ ಮೂಡಿತು. ಮೀರ ಬೆಳೆದಂತೆ ಅವಳಾಸೆಯೂ ಬೆಳೆದು ಬಂದು, ಗೋಪಾಲ ತರುತ್ತಿದ್ದ ಪುಸ್ತಕಗಳನ್ನು ಹಿಡಿದು ತನಗರ್ಥವಾಗದ ಚಿತ್ರಗಳನ್ನು ಗಂಟೆಗಟ್ಟಲೆ ಎವೆಯಿಕ್ಕದೆಯೆ ನೋಡು ತ್ತಿದ್ದಳು. ಗೋಪಾಲ ಬಿಡುವಾಗಿದ್ದರೆ ಸಮಯ ಸಾಧಿಸಿ ಅವನ ಬಳಿ ನಿಂತು "ಗೋಪಣ್ಣಾ, ಈ ಚಿತ್ರ ಯಾವುದು?" ಎಂದು ಕೇಳುತ್ತಿದ್ದಳು. ಅವಳ ಬಾಲ್ಯ ಸ್ವಭಾವಕ್ಕೆ ಸಹಜವಾದ ಕುತೂಹಲವನ್ನು ಕಂಡು ಗೋಪಾಲ ನಸುನಕ್ಕು ಅವಳ ಎಳೆಯ ಬುದ್ಧಿಗೆ ಅರ್ಥವಾಗುವ ರೀತಿಯಲ್ಲಿ ವಿವರಿಸುತ್ತಿದ್ದ. ದೊಡ್ಡದೊಂದು ಆಸೆ ಅವಳ ಪುಟ್ಟ ಹೃದಯದಲ್ಲಿ ಬೇರೂರಿತು.

ಗೋಪಾಲ ಪ್ರತಿ ವರ್ಷವೂ ಯಶಸ್ವಿಯಾಗಿ ತೇರ್ಗಡೆ ಹೊಂದುತ್ತಿದ್ದ. ಅವನು ಮೆಡಿಕಲ್ ಕಾಲೇಜಿನಿಂದ ಬಿಡುಗಡೆ ಹೊಂದಿದಾಗ ಮೀರ ಹೈಸ್ಕೂಲ್ ಎರಡನೇ ತರಗತಿಯಲ್ಲಿ ಓದುತ್ತಿದ್ದಳು.

"ಗೋಪಣ್ಣಾ, ನೀನು ಈ ಊರಿನಲ್ಲೇ ಡಾಕ್ಟರಾಗಿಬಿಡು" ಎಂದಾಗ ಗೋಪಾಲ,

"ಹಾಗೇ ಆಗಲಮ್ಮ. ನೀನೊಂದು ಆಸ್ಪತ್ರೆ ಕಟ್ಟಿಸಿಬಿಡು" ಎಂದ.

"ಹಾಗಾದರೆ ದೂರ ಹೊರಟುಹೋಗುತ್ತೀಯಾ ಗೋಪಣ್ಣಾ?"

"ಹೌಸ್ ಸರ್ಜನ್ ಆಗಿ ಆರು ತಿಂಗಳು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಕೆಲಸ ಮಾಡಿ ನೋಡುತ್ತೇನೆ. ಆಮೇಲೆ ನೋಡಿಕೊಳ್ಳುತ್ತೇನೆ. ಬೊಂಬಾಯಿನಲ್ಲಿ ಒಂದು ಕೆಲಸ ಖಾಲಿ ಇದೆ. ನನ್ನ ಸ್ನೇಹಿತ ಅಲ್ಲಿಂದ ಕಾಗದ ಬರೆದಿದಾನೆ. ಅಲ್ಲಿಗೆ ಅಪ್ಲಿಕೇಷನ್ ಹಾಕಿರುತ್ತೇನೆ. ಈಗಲೇ ಯಾವುದೂ ಹೇಳಲಾರೆ."

ಗೋಪಾಲ ದೂರ ಹೊರಟುಹೋಗುವನೆಂದು ಯೋಚಿಸಿದಾಗ ಮೀರಳಿಗೆ ದುಃಖವಾಗುತ್ತಿತ್ತು. ವಯಸ್ಸಿನಲ್ಲಿ ತನಗಿಂತ ಬಹಳ ಹಿರಿಯವನಾಗಿದ್ದರೂ, ಅವಳಾಸೆಗಳಿಗೆ ಪ್ರೋತ್ಸಾಹ ಕೊಟ್ಟು, ದುಃಖದ ಸಮಯದಲ್ಲಿ ಸಮಾಧಾನ ಹೇಳಿ ಗೋಪಾಲ ಅವಳ ಸ್ನೇಹಿತನಾಗಿದ್ದ ಕಮಲಮ್ಮನವರು ಮೀರಳ ಮೇಲೆ ದಬ್ಬಾಳಿಕೆ ನಡೆಸಲು ಪ್ರಯತ್ನಿಸಿದಾಗ ಗೋಪಾಲ ಅದನ್ನು ಖಂಡಿಸುತ್ತಿದ್ದ. ಗೋಪಾಲ ದೂರ ಹೋದರೆ ತನ್ನ ಆತ್ಮೀಯನೊಬ್ಬನನ್ನು ಕಳೆದುಕೊಂಡ ಭಾವನೆ ಮೀರಳಿ ಗಾಗುತ್ತಿತ್ತು.

ಗೋಪಾಲ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಹೌಸ್ ಸರ್ಜನ್ ಆಗಿ ಕೆಲಸ ಮಾಡತೊಡಗಿದ. ಕೃಷ್ಣಪ್ಪನವರಿಗೆ ಮಗ ದೂರ ಹೋಗುವುದು ಇಷ್ಟವಿರಲಿಲ್ಲ. ಗೋವಿಂದ ಎಂ.ಎ. ಕ್ಲಾಸಿನಲ್ಲಿದ್ದ. ಶ್ರೀಹರಿ ಸೀನಿಯರ್ ಬಿ.ಎಸ್ಸಿ. ಓದುತ್ತಿದ್ದ. ಶ್ರೀಪಾದ ಲೋಯರ್ ಸೆಕೆಂಡರಿಯಲ್ಲಿ ಎರಡು ಬಾರಿ ಮುಗ್ಗರಿಸಿ, ಮೀರ

ಹೈಸ್ಕೂಲಿಗೆ ಬಂದಿದ್ದರೂ ಮಿಡಲ್ ಸ್ಕೂಲನ್ನು ಬಿಟ್ಟಿರಲಿಲ್ಲ. ಕಮಲಮ್ಮನವರಿಗೆ ತಮ್ಮ ಅಚ್ಚುಮೆಚ್ಚಿನ ಕೊನೆಯ ಮಗ ಫೇಲಾಗುತ್ತಿರುವುದೂ, ಮೀರ ತರಗತಿಗೇ ಮೊದಲನೆಯವಳಾಗಿ ಪಾಸು ಮಾಡುತ್ತಿರುವುದೂ ಬಹಳ ಅಸಮಾಧಾನವನ್ನುಂಟು ಮಾಡಿತ್ತು.

ಮೀರ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಮೊದಲನೆಯ ಬಾರಿಗೇ ತೇರ್ಗಡೆ ಹೊಂದಿದಾಗ, ಶ್ರೀಪಾದ ನಪಾಸಾದನೆಂಬ ಸಂತಾಪದಲ್ಲಿ ಕಮಲಮ್ಮನವರು ಮೀರಳ ಮುಂದಿನ ಅಭ್ಯಾಸವನ್ನು ಪ್ರತಿಭಟಿಸಿದರು. ಆದರೆ ಕೃಷ್ಣಪ್ಪನವರು ಹೆಂಡತಿಯ ಸೂಚನೆಯನ್ನು ಮನ್ನಿಸಲಿಲ್ಲ.

ಕಮಲಮ್ಮನವರು ಕೈಬಳೆಗಳನ್ನು ತಿರುಗಿಸುತ್ತ "ಹೆಂಗಸರಿಗೇಕೆ ವಿದ್ಯೆ? ಮೀರ ಓದಿದ್ದು ಸಾಕು. ಒಂದಿಷ್ಟು ದಿನ ಮನೆಗೆಲಸ ಕಲಿತುಕೊಳ್ಳಲಿ. ಆಮೇಲೆ ಎಲ್ಲಾದರೂ ಗಂಡು ಹುಡುಕಿ ಮದುವೆ ಮಾಡಿಬಿಡಿ" ಎಂದರು.

"ಗಂಡು ಸಿಗುವವರೆಗಾದರೂ ಮೀರ ಓದುತ್ತಿರಲಿ."

"ನನ್ನ ಮಾತು ಸ್ವಲ್ಪ ಕೇಳಿ. ಇನ್ನು ಅವಳಿಗೆ ಬೇರೆ ಫೀಸು ಕೊಡಬೇಕು."

"ದೇವರು ಹೇಗೋ ನಡೆಸುತ್ತಾನೆ, ಕಮಲೂ."

"ಆ ಹುಡುಗೀನ ಕಂಡರೆ ನಿಮಗೆ ಸ್ವಂತ ಮಕ್ಕಳಿಗಿಂತಲೂ ಹೆಚ್ಚು ವಾತ್ಸಲ್ಯ."

ಎಂದು ಕಮಲಮ್ಮನವರು ಮೂದಲಿಸಿದಾಗ ಕೃಷ್ಣಪ್ಪನವರು ಶಾಂತವಾದ ದನಿಯಲ್ಲಿ

"ಹೌದು ಕಣೆ. ನಿನ್ನ ಮಾತು ನಾನು ಒಪ್ಪಿದೆ. ತಂದೆ ತಾಯಿ ಯಾರೂ ಇಲ್ಲದ ಮೀರಳನ್ನು ಕಂಡರೆ ನನಗೆ ಪ್ರೀತಿ. ನಾವಲ್ಲದೆ ಅವಳಿಗೆ ಬೇರೆ ಯಾರು ದಿಕ್ಕು?" ಎಂದರು.

ಕೃಷ್ಣಪ್ಪನವರ ಹಠದ ಮುಂದೆ ಕಮಲಮ್ಮನವರ ಹಂಚಿಕೆ ಮುರಿದು ಬಿತ್ತು. ಕಮಲಮ್ಮನವರು ಸೋತರೂ ಮತ್ತೊಂದು ಹಂಚಿಕೆಯನ್ನು ಗಂಡನ ಮುಂದಿಟ್ಟರು.

'ನಾನು ಒಬ್ಬ ವರನ್ನ ಹೇಳುತ್ತೀನಿ.ಸೀತಮ್ಮನವರ ಅಣ್ಣನ ಭಾವಮೈದುನ. ನೋಡೋಕೆ ಹುಡುಗ ಸ್ವಲ್ಪ ಕಪ್ಪಗಿದ್ದಾನೆ. ಗಂಡಸರಿಗೆಂತಹ ಬಣ್ಣ ಬೇಕು ಹೇಳಿ. ಒಂದೇ ಮನಸ್ಸು ಮಾಡಿ ಮೀರಳನ್ನು ಅವನಿಗೆ ಕೊಟ್ಟು ಮದುವೆ ಮಾಡಿಬಿಡಿ."

ಕೃಷ್ಣಪ್ಪನವರು ಔದಾಸೀನ್ಯದಿಂದಲೇ ಹೆಂಡತಿಯ ಯೋಚನೆಯನ್ನು ತಳ್ಳಿಹಾಕಿದರು.

ಕಮಲಮ್ಮನವರು ನೂರು ಮಾತುಗಳನ್ನಾಡಿ ಪತಿಯನ್ನು ಒಲಿಸಿಕೊಳ್ಳುವ ಸಲುವಾಗಿ ಕಣ್ಣಿಗೆ ಬಿದ್ದ ವರಗಳನ್ನು ಸೂಚಿಸುತ್ತಿದ್ದರು. ಕೃಷ್ಣಪ್ಪನವರು ಖಂಡಿತ

ವಾಗಿಯೂ ಹೇಳಿಬಿಟ್ಟರು:

"ಸದ್ಯಕ್ಕೆ ನನಗೆ ಮೀರಳ ಮದುವೆಯ ಯೋಚನೆ ಇಲ್ಲ."

• • •

ಗೋಪಾಲ ಡಾಕ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣನಾದೊಡನೆ ಅನೇಕ ಕನ್ಯಾಪಿತೃಗಳು ಬರತೊಡಗಿದರು. ಕಮಲಮ್ಮ ವರನ ತಾಯಂದಿರಿಗೆ ಸಹಜವಾದ ಬಿಗುಮಾನ, ದರ್ಪವನ್ನು ತೋರತೊಡಗಿದರು. ಹುಡುಗಿಯ ತಾಯಂದಿರು ಸಂಕೋಚದಿಂದಲೂ ದೈನ್ಯದಿಂದಲೂ,

"ದೊಡ್ಡ ಮನಸ್ಸು ಮಾಡಿ ನಮ್ಮ ಮಗಳನ್ನು ತಂದುಕೊಳ್ಳಬೇಕು"

ಎಂದಾಗ ಕಮಲಮ್ಮ ಬಿಗುವಾದ ದನಿಯಲ್ಲಿ,

"ಈಗಲೇ ನಮ್ಮ ಗೋಪಿಗೆ ಮದುವೆಗೆ ಏನು ಆತುರವಮ್ಮ? ಮೀರಾ ಮದುವೆ ಮೊದಲಾಗಲಿ. ಆಮೇಲೆ ಅವನಿಗೆ ಮಾಡುತ್ತೇವೆ" ಎಂದು ಹೇಳಿ ಬಿಡುತ್ತಿದ್ದರು.

ಮೀರಳ ಗೆಳತಿ ನರ್ಮದೆಯ ತಂದೆ ಡಾ. ಸುಬ್ಬರಾಯರು ತಮ್ಮ ಹಿರಿಯ ಮಗಳು ರಾಧಾಳನ್ನು ಗೋಪಾಲನಿಗೆ ಕೊಡಲು ಬಂದಾಗ ಕೃಷ್ಣಪ್ಪನವರು, ಶ್ರೀಮಂತರು ತಮ್ಮ ಬೀಗರಾಗಲು ಬಂದಿರುವುದನ್ನು ನೋಡಿ ಹಿಗ್ಗಿದರು.

ಕೃಷ್ಣಪ್ಪನವರು ಮೀರಳ ಕೈವಾಡದಿಂದ ಕಂಗೊಳಿಸುತ್ತಿದ್ದ ತರಕಾರಿ ತೋಟದಲ್ಲಿ ಕುಳಿತು ಹುರುಳಿಯ ಗಿಡದ ಪಾತಿಗಳಲ್ಲಿದ್ದ ಹುಲ್ಲನ್ನು ಕೀಳುತ್ತಿದ್ದರು.

"ನಮಸ್ಕಾರ, ಏನು ಮಾಡುತ್ತಿದ್ದೀರಿ ಸ್ವಾಮಿ?"

ಗೇಟಾಚೆಯಿಂದ ಅಷ್ಟೇನೂ ಪರಿಚಯವಲ್ಲದ ದನಿಯೊಂದು ಕೇಳಿತು. ಕೃಷ್ಣಪ್ಪನವರು ತಲೆ ಎತ್ತಿ ನೋಡಿದರು.

ಕಂದು ಬಣ್ಣದ ಉಲ್ಲನ್ ಸೂಟು ಧರಿಸಿ, ತಲೆಗೆ ಗೇಣಗಲ ಜರತಾರಿ ಅಂಚಿದ್ದ ಪೇಟ ಹಾಕಿಕೊಂಡು, ಕೈಲಿ ಹಿಡಿದಿದ್ದ ವಾಕಿಂಗ್ ಸ್ಟಿಕ್ಕನ್ನು ತಿರುವುತ್ತ ಸುಬ್ಬರಾಯರು ನಿಂತಿದ್ದರು.

"ಬನ್ನಿ, ಬನ್ನಿ. ಇದೇನು ಬಹಳ ಅಪರೂಪವಾಗಿ ಬಂದಿರಿ?"

ಕೃಷ್ಣಪ್ಪನವರು ಕೈಗೆ ಅಂಟಿಕೊಂಡಿದ್ದ ಮಣ್ಣನ್ನು ಕೊಡವುತ್ತ ಕೇಳಿದರು.

"ಅಪರೂಪವೆಲ್ಲಿ ಬಂತು? ಬೆಳಗಿನ ವಾಕಿಂಗಿಗೆ ಹೋಗಿ ಹಿಂದಿರುಗಿ ಬರುತ್ತಾ ಇದ್ದೀನಿ. ನೀವು ಹೊರಗಿರುವುದನ್ನು ನೋಡಿ ಬಂದೆ."

ಎನ್ನುತ್ತ ಸುಬ್ಬರಾಯರು ಗೇಟಿನ ಬಾಗಿಲನ್ನು ತೆಗೆದುಕೊಂಡು ಒಳಗೆ ಬಂದರು. ಸುತ್ತಲು ತುಂಬಿ ನಿಂತಿದ್ದ ಹಸಿರು ಗಿಡಗಳನ್ನು ನೋಡಿ,

"ಏನು ಸ್ವಾಮಿ, ತರಕಾರಿ ಗಿಡಗಳನ್ನು ಹಾಕಿದ್ದೀರಿ. ಕೊಳ್ಳುವುದೇ ಇಲ್ಲ

ವೇನೋ" ಎಂದರು.

"ಎಲ್ಲಾ ನಮ್ಮ ಮೀರಳದೇ ಕೆಲಸ. ತರಕಾರಿ ಬೆಳೆಯುವುದೆಂದರೆ ಅವಳಿಗೆ ತುಂಬಾ ಇಷ್ಟ. ಸಂಜೆ ಸುಮ್ಮನೆ ಕಾಲ ಕಳೆಯಲು ಬೇಜಾರು. ಏನಾದರೂ ಹವ್ಯಾಸ ಇರಬೇಕು ಅಂತ ತಾನಾಗಿ ಗಿಡಗಳನ್ನು ಬೆಳೆಸಿದಾಳೆ. ಕಾಡಾಗಿದ್ದ ಕಾಂಪೌಂಡು ಈಗ ನಂದನವನವಾಗಿದೆ. ವರಾಂಡದಲ್ಲಿ ಕುರ್ಚಿಯಿದೆ, ಕುಳಿತುಕೊಳ್ಳಿ. ನಾನು ಕೈತೊಳೆದುಕೊಂಡು ಬರುತ್ತೇನೆ" ಎನ್ನುತ್ತಾ ಕೃಷ್ಣಪ್ಪನವರು ನಲ್ಲಿಯ ಬಳಿಗೆ ಹೋದರು.

ಅವರು ಒಳಗೆ ಬಂದಾಗ ಸುಬ್ಬರಾಯರು 'ತಾಯಿನಾಡು' ಹಾಳೆಗಳನ್ನು ಮಗುಚುತ್ತ ಕುಳಿತಿದ್ದರು. ನುಣುಪಾಗಿ ಚೌರ ಮಾಡಿಕೊಂಡಿದ್ದ ಅವರ ಮುಖ ನೋಡಿ ಕೃಷ್ಣಪ್ಪನವರ ಕೈ ತಾನಾಗಿ ಮುಖದ ಮೇಲೆ ಹರಿದಾಡಿ ಹರಕಲು ಗಡ್ಡವನ್ನು ಪರೀಕ್ಷಿಸಿತು.

ಅವರ ಹರಟೆಯಲ್ಲಿ ಪ್ರವೇಶಿಸದ ವಿಷಯವಿರಲಿಲ್ಲ. ರಾಜಕೀಯ, ವಾಯುಗುಣ, ಪದಾರ್ಥದ ಬೆಲೆಯ ಏರಿಳಿತ, ಸಿನಿಮಾ ಪತ್ರಿಕೆಗಳು ಎಲ್ಲವನ್ನೂ ಕುರಿತು ಚರ್ಚಿಸಿದರು. ಗೋಪಾಲ ಆಸ್ಪತ್ರೆಗೆ ಹೊರಡಲು ಸಿದ್ಧನಾಗಿ ಈಚೆಗೆ ಬಂದ. ಎತ್ತರವಾದ ನಿಲುವು, ಅದಕ್ಕೆ ತಕ್ಕ ಗಾತ್ರ, ಶುಭ್ರವಾದ ಬಿಳಿಯ ಷರಾಯಿ, ಷರಟು, ಕಾಲಿಗೆ ಹೊಳೆಯುವ ಕಪ್ಪು ಷೂಸು, ಆರೋಗ್ಯ ಸೂಸುವ ದೇಹಕಾಂತಿ ನೋಡಿ ಸುಬ್ಬರಾಯರು ಬೆರಗಾದರು. ಗೋಪಾಲ ಸಣ್ಣಗೆ ಸಿಳ್ಳೆ ಹಾಕುತ್ತ ಸೈಕಲನ್ನು ವರಾಂಡದಿಂದ ತಳ್ಳಿಕೊಂಡು ಹೊರಗೆ ಹೋದ. ಜೇಬಿನಿಂದ 'ಗಾಗಲ್ಸ್' ತೆಗೆದು ಹಾಕಿಕೊಂಡು, ಕೋಟಿನ ಒಂದು ತೋಳನ್ನು ಮಾತ್ರ ಭುಜಕ್ಕೆ ಸಿಕ್ಕಿಸಿಕೊಂಡು ಕಣ್ಮರೆಯಾದ.

"ನಿಮ್ಮ ಮಗ ಅಲ್ವೇ ರಾಯರೇ? ಎಷ್ಟು ಬೇಗ ಬೆಳೆದಿದ್ದಾನೆ?"

"ಹೌದು. ನನ್ನ ಹಿರಿ ಮಗ, ಗೋಪಾಲ."

"ಈ ಸಲ ಮೆಡಿಕಲ್‌ನಲ್ಲಿ ಪಾಸಾದವನು ಇವನೇ ಅಲ್ಲವೇ?"

"ಹೌದು."

"ಅದೇ ನೋಡಿ ಬಂದಿರೋದು ತಾಪತ್ರಯ. ಹೌಸ್ ಸರ್ಜನ್ ಆಗಿ ನಾಲ್ಕು ತಿಂಗಳಾಯಿತು. ಆಮೇಲೆ ಉತ್ತರ ಇಂಡಿಯಾ ಕಡೆ ಹೋಗ್ತೀನಿ ಅಂತಿದಾನೆ. ಮುಂದಾಗುವುದನ್ನು ಯಾರು ಬಲ್ಲರು ಸ್ವಾಮಿ."

"ನಿಮ್ಮ ಮಗನಿಗೆ ಯಾವಾಗ ಮದುವೆ ರಾಯರೇ?"

"ಸರಿಯಾದ ಕೆಲಸ ಸಿಕ್ಕಲಿ ಡಾಕ್ಟರೇ, ಆಮೇಲೆ ಮದುವೆಯ ಯೋಚನೆ."

"ಇವತ್ತು ಸಂಜೆ ನಿಮ್ಮ ಮಗನನ್ನು ನಮ್ಮ ಮನೆಗೆ ಕಳಿಸಿ. ನಾನು ಹುಡುಗ

ನೊಡನೆ ಮಾತನಾಡಿ ನೋಡುತ್ತೇನೆ. ಬೊಂಬಾಯಿನಲ್ಲಿಒಂದು ಕೆಲಸ ಖಾಲಿ ಇದೆ. ರೆಕಮೆಂಡೇಷನ್ ಕಾಗದ ಬರೆದು ಕೊಡುತ್ತೇನೆ. ಅದೃಷ್ಟವಿದ್ದರೆ ಆ ಕೆಲಸ ನಿಮ್ಮ ಮಗನದಾಗುತ್ತದೆ."

ಕೃಷ್ಣಪ್ಪನವರು ಚಕಿತರಾದರು. ತಾವಾಗಿ ಕೆಲಸ ಕೊಡಿಸುತ್ತೇವೆಂದು ಮುಂದೆ ಬಂದಿರುವ ಸುಬ್ಬರಾಯರ ಅಂತರಾಳ ಮೊದಲು ಸರಳ ಹೃದಯಿಯಾದ ಕೃಷ್ಣಪ್ಪನವರಿಗೆ ತಿಳಿಯಲಿಲ್ಲ. ಏನೂ ತೋರದೆ,

"ಹಾಗೇ ಆಗಲಿ. ಸಂಜೆ ಗೋಪಾಲನ್ನ ಕಳಿಸುತ್ತೇನೆ" ಎಂದರು.

"ಇನ್ನೊಂದು ವಿಚಾರ ಕೇಳಬೇಕೆಂದಿದ್ದೇನೆ. ನಿಮ್ಮ ಮಗನ ಜಾತಕ ಇದ್ದರೆ ಬೇಕಾಗಿತ್ತು."

"ಅವನಿಗೆ.... ಅದೇ ನಮ್ಮ ಗೋಪಣ್ಣನಿಗೆ ಈಗಲೇ ಮದುವೆ ಯೋಚನೆ ಇಲ್ಲ." ಕೃಷ್ಣಪ್ಪನವರು ತಡವರಿಸುತ್ತ ಹೇಳಿದರು.

"ಎಲ್ಲ ಹುಡುಗರೂ ಮದುವೆಗೆ ಮುಂಚೆ ಹಾಗೇ ಹೇಳ್ತಾರೆ ರಾಯರೆ. ನಮ್ಮ ರಾಧಾನೂ ಮದುವೆ ಬೇಡಾಂತಾನೇ ಇದಾಳೆ. ಮೊದಲು ನೀವು ಜಾತಕ ಕೊಡಿ. ಜಾತಕಾನುಕೂಲವಾದರೆ ನೀವು ದೊಡ್ಡ ಮನಸ್ಸು ಮಾಡಿಬಿಡಿ."

ಕೃಷ್ಣಪ್ಪನವರು ಎದುರು ಮಾತನಾಡಲಾರದೇ ಎದ್ದು ಒಳಗೆ ಹೋದರು. ಅಡಿಗೆ ಮನೆಯಲ್ಲಿ ಕೆಲಸದಲ್ಲಿದ್ದ ಕಮಲಮ್ಮನವರನ್ನು ಕೂಗಿ,

"ಕಮಲೂ, ಗೋಪಾಲನ ಜಾತಕ ಕೊಡು" ಎಂದರು.

"ಅಯ್ಯೋ ಹೋಗೀಂದ್ರೆ. ಮೊದಲು ಮೀರಾ ಮದುವೆಯಾಗಲಿ."

"ಶ್ ಶ್. ನಾನು ಹೇಳಿದ ಹಾಗೆ ಮಾಡು. ಜಾತಕ ಕೇಳಿರುವವರು ಯಾರು ಗೊತ್ತೆ? ಡಾ. ಸುಬ್ಬರಾಯರು. ಗೋಪಾಲನಿಗೆ ಬೊಂಬಾಯಿನಲ್ಲಿ ಕೆಲಸ ಕೊಡಿಸು ತ್ತೇನೆ ಎಂದಿದ್ದಾರೆ. ಅಲ್ಲಿಯ ಡಾಕ್ಟರುಗಳೆಲ್ಲಾ ಅವರಿಗೆ ಪರಿಚಯವಂತೆ."

ಸುಬ್ಬರಾಯರ ಹೆಸರು ಕೇಳಿದೊಡನೆ ಕಮಲಮ್ಮನವರು ಮೆತ್ತಗಾದರು. ಸುಬ್ಬರಾಯರ ಮನೆಯ ಶ್ರೀಮಂತಿಕೆಯ ಅರಿವು ಕಮಲಮ್ಮನವರಿಗಾಗಿತ್ತು. ಶ್ರೀಮಂತರು ತಾವಾಗಿ ಬಂದು ಜಾತಕ ಕೇಳುತ್ತಿರುವುದು ಅವರಿಗೆ ಸಂತೋಷ ವನ್ನುಂಟು ಮಾಡಿತು.

ಜಾತಕ ಕೈಗೆ ಬಂದೊಡನೆ ಸುಬ್ಬರಾಯರು ಎದ್ದು ನಿಂತು ದೇಶಾವರಿ ನಗೆ ನಕ್ಕು "ತುಂಬಾ ಉಪಕಾರವಾಯಿತು ರಾಯರೇ. ನಾನಿನ್ನು ಬರುತ್ತೇನೆ. ಸಂಜೆ ನಿಮ್ಮ ಮಗನ್ನ ಕಳಿಸಿ. ಇಲ್ಲದಿದ್ದರೆ ನಾನೇ ಬರುತ್ತೇನೆ...."

"ಛೇ ಛೇ, ನಾನು ಗೋಪಾಲನ್ನ ಕಳಿಸುತ್ತೇನೆ. ತಾವು ತೊಂದರೆ ಮಾಡಿ ಕೊಳ್ಳಬಾರದು."

"ಹಾಗೇ ಆಗಲಿ. ನಾನಿನ್ನು ಬರುತ್ತೇನೆ. ನಮಸ್ಕಾರ" ಎಂದು ಕೈ ಮುಗಿದು ವಾಕಿಂಗ್ ಸ್ಟಿಕ್ ತಿರುವುತ್ತ ಸುಬ್ಬರಾಯರು ಹೊರಟುಹೋದರು.

ಸಂಜೆ ಗೋಪಾಲ ಮನೆಗೆ ಬಂದಾಗ ಈ ಸುದ್ದಿ ತಿಳಿದು ಹಾರಾಡಿದ.

"ನಾನೀಗಲೇ ಮದುವೆ ಮಾಡಿಕೊಳ್ಳುವುದಿಲ್ಲ. ಅವರ ಮಗಳೂ ಬೇಡ, ಅವರು ಕೊಡಿಸುವ ಕೆಲಸವೂ ಬೇಡ" ಎಂದು ಕೂಗಾಡಿದ.

ಕೃಷ್ಣಪ್ಪನವರು ಅವನ ಆಟವೆಲ್ಲಾ ಮುಗಿಯುವ ತನಕ ಸುಮ್ಮನಿದ್ದು,

"ಗೋಪಣ್ಣ, ನನ್ನ ಮಾತು ಸ್ವಲ್ಪ ಕೇಳು. ಸುಬ್ಬರಾಯರಿಗೆ ಇವತ್ತು ಸಂಜೆ ನಿನ್ನ ಕಳುಹಿಸುವುದಾಗಿ ಹೇಳಿ ಮಾತು ಕೊಟ್ಟಿದ್ದೇನೆ. ನನ್ನ ಮಾತು ಉಳಿಸಲು ಅವರ ಮನೆಗೆ ಹೋಗು. ಆಮೇಲೆ ನಿನಗಿಷ್ಟ ಬಂದಂತೆ ಮಾಡು" ಎಂದರು.

"ನನ್ನ ಕೇಳದೇ ನೀವು ಏಕೆ ಮಾತು ಕೊಟ್ಟಿರಿ?"

ಎಂದು ಗೊಣಗುತ್ತ ಗೋಪಾಲ ರೂಮಿಗೆ ಹೋದ. ಬದನೆ ಸಸಿಗಳಿಗೆ ನೀರು ಹರಿಸುತ್ತ ನಿಂತಿದ್ದ ಮೀರಳ ಬಳಿ ಗೋಪಾಲ ನಿಂತು ಮೆಲ್ಲನೆ "ಮೀರಾ" ಎಂದು ಕೂಗಿದ.

"ಏನು ಗೋಪಣ್ಣ?"

"ಅಣ್ಣ ಸುಬ್ಬರಾಯರ ಮನೆಗೆ ಹೋಗು ಅಂತ ಹೇಳಿದಾರೆ...."

ಮೀರ ತುಂಟನಗೆ ಬೀರಿ "ರಾಯರ ಅಲಂಕಾರ ನೋಡೇ ಗೊತ್ತಾಯಿತು" ಎಂದಳು.

"ನನ್ನ ಡ್ರೆಸ್ಸಿನಲ್ಲೇನಿದೆಯಮ್ಮ ಅಂತಹ ಸುದ್ದಿ?"

"ಪಾಪ! ಅಷ್ಟು ಗೊತ್ತಾಗುವುದಿಲ್ಲವೇನೋ? ಈಗ ಉಲ್ಲನ್ ಸೂಟ್ ಯಾಕಪ್ಪ? ಸಿಲ್ಕ್ ಕರ್ಚೀಫ್, ಸೆಂಟು ಯಾಕೆ? ಜೊತೆಗೆ ಹೆಂಗಸರಿಗಿಂತ ಹೆಚ್ಚಾಗಿ ಪೌಡರ್ ಬಳಿದುಕೊಂಡಿದೀಯ, ಆಮೇಲೆ...."

"ಸಾಕು, ಮಾತು ನಿಲ್ಲಿಸಮ್ಮ. ಅವರ ಮಗಳನ್ನು ನೀನು ನೋಡಿದ್ದೀಯಾ?"

"ಓಹೋ, ನೋಡದೇ ಏನು? ನಾನು, ನರ್ಮದಾ ಒಂದೇ ಕ್ಲಾಸಲ್ಲವೇ?"

"ನರ್ಮದಾ ಅಲ್ಲ. ಅವಳಕ್ಕನ್ನ ನಾನು ಕೇಳಿದ್ದು...."

"ಓಹೋ, ರಾಧಾನೇ? ನೋಡಿದೀನಿ."

ಗೋಪಾಲ ಉತ್ಸುಕತೆಯಿಂದ ಕೇಳಿದ "ಹೇಗಿದಾಳೆ?"

ಮೀರ ಮುಖದಲ್ಲಿ ನಿರಾಶೆಯನ್ನು ತಂದು "ಇದಾಳೆ ಸುಮಾರಾಗಿ" ಎಂದಳು.

'ನರ್ಮದಾ ಹಾಗೇ ಹಲ್ಲುಬ್ಬೋ?"

"ನರ್ಮದಾ ಎಷ್ಟೋ ವಾಸಿ. ನಿನಗೆ ಅವಳು ಯಾರ ಹಾಗಿದ್ದರೆ ಸಾಕು?"

"ನಿನ್ನಲ್ಲಿರುವ ಚೆಲುವು ಅವಳಿಗಿದ್ದರೆ ಸಾಕು."

"ಅಯ್ಯೋ, ನಾನೆಲ್ಲಿ ಅವಳೆಲ್ಲಿ? ಅವಳು ತುಂಬಾ ಕಪ್ಪು, ವಿಪರೀತ ದಪ್ಪ. ಒಳ್ಳೇ ಪೂತನಿ ಗೋಪಣ್ಣಾ ಅವಳು. ಹೆಸರು ಮಾತ್ರ ರಾಧಾ ಅಂತ ಇಟ್ಟಿದ್ದಾರೆ. ಅವಳ ತಂಗಿ ದಂತವಕ್ರ ಅಂತ ನೀನೇ ಹೇಳಿದೀಯ. ಅಂದಮೇಲೆ ಅವಳು ಶಿಶುಪಾಲ...."

ಗೋಪಾಲ ಸಿಟ್ಟಿನಿಂದ ಪಾತಿಯಲ್ಲಿದ್ದ ನೀರನ್ನು ಬೊಗಸೆಯಲ್ಲಿ ತುಂಬಿ ಕೊಂಡು ಮೀರಳ ತಲೆಯ ಮೇಲೆ ಸುರಿದು ಹೊರಟುಹೋದ.

ಸುಬ್ಬರಾಯರ ಮನೆ ಮುಂದೆ ನಿಂತು "ಸಾರ್" ಎಂದ.

"ಯಾರು?" ಎಂಬ ಕೋಕಿಲ ನಿನಾದದೊಡನೆ ಕೈಬಳೆಗಳ ಝಣತ್ಕಾರವೂ ಸೇರಿ ಕಿವಿಗೆ ಹಿತವನ್ನುಂಟು ಮಾಡಿತು. ಹದಿನೇಳು, ಹದಿನೆಂಟು ವರ್ಷದ ಹುಡುಗಿಯೊಬ್ಬಳು ಬೆಡಗಿನಿಂದ ಬಂದು ಬಾಗಿಲು ತೆಗೆದಳು.

ಅವಳುಟ್ಟಿದ್ದ ತಿಳಿಹಸಿರು ಜಾರ್ಜೆಟ್ ಸೀರೆ, ಹಳದಿ ಸಿಲ್ಕಿನ ಚೋಲಿ, ಸಡಿಲವಾದ ಹೆರಳು, ಮುಡಿದಿದ್ದ ಕೆಂಗುಲಾಬಿ, ಹೊಳೆಯುತ್ತಿದ್ದ ತೂಗುದೀಪ ಗಳು, ಹಸಿರು ಗಾಜಿನ ಬಳೆಗಳು, ಕಾಲಿನಲ್ಲಿದ್ದ ಹಸಿರು ಮಕಮಲ್ಲಿನ ಸ್ಲಿಪ್ಪರು.... ಕಣ್ಣಿಗೆ ಕಾಡಿಗೆ ಎಲ್ಲವೂ 'ನಿನಗಾಗಿ ನಾನು' ಎಂದು ಕೂಗಿ ಹೇಳಿದವು. ಗೋಪಾಲ ಬೆದರಿದ ಕಣ್ಣುಗಳನ್ನೂ, ನವಿಲಿನಂತಹ ಬೆಡಗಿಯನ್ನೂ ನೋಡಿ ಹುಲಿಯನ್ನು ಕಂಡುದಕ್ಕಿಂತಲೂ ಹೆಚ್ಚು ಅಧೀರನಾದ.

"ಸುಬ್ಬರಾಯರು ಮನೇಲಿದಾರೆಯೇ?"

"ಇಲ್ಲ. ಇನ್ನೇನು ಬರುತ್ತಾರೆ. ಕುಳಿತುಕೊಳ್ಳಿ" ಎಂದು ಅವಳು ಸೋಫಾ ಕಡೆ ಬೆರಳು ತೋರಿಸಿದಳು. ಗೋಪಾಲ ಸೋಫಾದ ಮೇಲೆ ಕುಳಿತ.

"ಬೇಕಾದರೆ ಓದುತ್ತಿರಬಹುದು."

ಅವಳು 'ಫಿಲ್ಮ್ ಇಂಡಿಯಾ' ಹಿಡಿದು ನಿಂತಳು. ಗೋಪಾಲ ಧೈರ್ಯವಾಗಿ ತಲೆ ಎತ್ತಿ ಅವಳ ಮುಖವನ್ನು ದಿಟ್ಟಿಸಿ ನೋಡಿದ.

"ತೆಗೆದುಕೊಳ್ಳಿ" ಎಂದು ಅವಳು ಪುಸ್ತಕ ಮುಂದೆ ಮಾಡಿದಾಗ ಗೋಪಾಲ ಕೈನೀಡಿದ. ಅವನಿಗೆ ಪುಸ್ತಕದೊಳಗಿನ ಬೆಡಗಿಯರಿಗಿಂತಲೂ ಸಜೀವವಾಗಿ, ಎದುರಿಗೆ ನಿಂತಿದ್ದ ಚೆಲುವೆ ಹೆಚ್ಚು ಮೋಹಕವಾಗಿ ತೋರಿದಳು.

"ಕಾಲೇಜಿನಲ್ಲಿ ಓದುತ್ತಿರುವಿರೇನೋ?"

"ಹ್ಞೂ."

"ಯಾವ ಕ್ಲಾಸು?"

"ಸೀನಿಯರ್ ಇಂಟರ್."

"ಆಪ್ಷನಲ್ಸ್ ಏನು ತೆಗೆದುಕೊಂಡಿರುವಿರಿ?"

"ಪಿ.ಸಿ.ಎಂ."

"ನಿಂತೇ ಇದ್ದೀರಲ್ಲಾ, ಕುಳಿತುಕೊಳ್ಳಿ."

ರಾಧಾ ನಸು ನಾಚಿ, ಒಳಬಾಗಿಲ ಕಡೆಗೊಂದು ಬಾರಿ ನೋಡಿ ಅಲ್ಲಿಯೇ ಇದ್ದ ಕುರ್ಚಿಯ ಮೇಲೆ ಕುಳಿತಳು.

"ಪರೀಕ್ಷೆಗೆ ತುಂಬ ಓದುತ್ತಾ ಇದ್ದೀರೇನೋ?"

"ಸುಮಾರಾಗಿ ಅಷ್ಟೆ."

"ಸುಬ್ಬರಾಯರು ನಿಮಗೇನಾಗಬೇಕು?"

ರಾಧಾ ನಸುನಕ್ಕು, "ಅವರು ನಮ್ಮ ಭಾವ" ಎಂದಳು.

ಗೋಪಾಲನ ಮುಖ ಬಾಡಿಹೋಯಿತು. ಕುಗ್ಗಿದ ದನಿಯಿಂದ,

"ಹಾಗೇ, ನಾನು ಅವರ ಮಗಳು ಅಂತ ತಿಳಿದಿದ್ದೆ."

"ಮಗಳೂ ಇದ್ದಾಳೆ. ಎಲ್ಲೋ ಹೊರಗೆ ಹೋಗಿದ್ದಾಳೆ."

"ಕ್ಷಮಿಸಿ, ಗೋಪಾಲ್. . ." ಎನ್ನುತ್ತಾ ಸುಬ್ಬರಾಯರು ಮೆಟ್ಟಿಲೇರಿ ಬಂದರು. ರಾಧಾ ಮಿಂಚಿನಂತೆ ಮಾಯವಾದಳು. ಗೋಪಾಲ ಸ್ವಲ್ಪ ತಬ್ಬಿಬ್ಬಾದ.

"ತಡವಾಯಿತು. ನನ್ನ ಮಗಳು ನಿಮ್ಮನ್ನು ಬೇಜಾರಾಗದ ಹಾಗೆ ಮಾತ ನಾಡಿಸುತ್ತಿದ್ದಳಲ್ಲಾ. ಈಗ ವಿಪರೀತ ನಾಚಿಕೆ ನೋಡಿ ರಾಧಾಗೆ."

ಗೋಪಾಲನ ಮುಖ ಇದ್ದಕ್ಕಿದ್ದಂತೆಯೇ ಗೆಲುವಾಯಿತು. ಮನಸ್ಸಿನ ಅಂಕೆಯನ್ನು ನಿರ್ಲಕ್ಷಿಸಿ ನಾಲಿಗೆ ಪ್ರಶ್ನೆ ಮಾಡಿತು.

"ರಾಧಾ ನಿಮ್ಮ ಮಗಳೇ?"

"ಹ್ಞೂಂ. ಅವಳೇ ನನ್ನ ದೊಡ್ಡ ಮಗಳು. ರಾಧಾ, ಕಾಫಿ ತಗೊಂಡು ಬಾಮ್ಮಾ."

ಎರಡು ನಿಮಿಷದ ನಂತರ ರಾಧಾ ಕಾಫಿ ತಟ್ಟೆ ಹಿಡಿದುಕೊಂಡು ಒಳಗೆ ಬಂದಳು. ತಂದೆಯ ಮುಂದೆ ಲೋಟವಿಟ್ಟು ಗೋಪಾಲನ ಮುಂದೆ ಮತ್ತೊಂದು ಬಟ್ಟಲಿಡುವಾಗ ತಂದೆಗೆ ತಿಳಿಯಬಾರದೆಂದು ತಲೆ ಎತ್ತದೆ ಕಣ್ಣು ಮಾತ್ರ ಮೇಲೆತ್ತಿ ಗೋಪಾಲನ ಕಡೆ ನೋಡಿದಳು. ಗೋಪಾಲ, ಸುಬ್ಬರಾಯರು ಏನು ತಿಳಿದು ಕೊಂಡಾರೆಂಬ ಆತಂಕವಿಲ್ಲದೆ ತದೇಕಚಿತ್ತದಿಂದ ರಾಧಾಳ ಸೊಬಗನ್ನು ಮನಸಾರೆ ಹೀರುತ್ತಿದ್ದ. ರಾಧಾ ತನ್ನೆಡೆಗೆ ನೋಟ ಬೀರಿದೊಡನೆ ತನ್ನ ಕಣ್ಣುಗಳಲ್ಲಿ ನಗೆಯ ಹೂವರಳಿಸಿದ.

"ನಾನು ಒಪ್ಪಿಗೆಯಾ?" ಎಂದವಳ ಕಣ್ಣುಗಳು ಮೌನವಾಗಿ ಪ್ರಶ್ನಿಸಿದವು.

"ಅದನ್ನು ನೀನು ಹೇಳಬೇಕು" ಎಂದು ಗೋಪಾಲನ ಕಣ್ಣುಗಳು ಪ್ರತ್ಯುತ್ತರ

ಕೊಟ್ಟವು.

ತನ್ನ ಪ್ರಶ್ನೆಗೆ ಉತ್ತರ ಸಿಕ್ಕಿದೊಡನೆ ರಾಧಾ ಕಣ್ಣು ತಗ್ಗಿಸಿ ಗಂಭೀರವಾಗಿ ಹೊರಟುಹೋದಳು. ರಾಧಾಳ ಹಿಂದೆ ಓಡುತ್ತಿದ್ದ ಗೋಪಾಲನ ಮನಸ್ಸನ್ನು ಸುಬ್ಬ ರಾಯರು ತಮ್ಮ ಪ್ರಶ್ನೆಗಳ ಕಡಿವಾಣದಿಂದ ಹಿಡಿದು ನಿಲ್ಲಿಸಿದರು. ಅವರ ಪ್ರಶ್ನೆ ಗಳಿಗೆ ಅರೆ ಮನಸ್ಸಿನಿಂದ ಉತ್ತರ ಕೊಡುತ್ತ ಗೋಪಾಲ ಸುತ್ತಮುತ್ತ ನೋಡು ತ್ತಿದ್ದ. ಬಾಗಿಲಿನ ಪರದೆ ಗಾಳಿಗೆ ಸ್ವಲ್ಪ ಅಲುಗಿದರೂ ಗೋಪಾಲ ತಟ್ಟನೆ ತಿರುಗಿ ನೋಡುತ್ತಿದ್ದ.

"ನಾನಿನ್ನು ಬರುತ್ತೇನೆ" ಎಂದವನು ಎದ್ದಾಗ ಅವನ ಕಣ್ಣುಗಳು ಮಿಂಚಿ ಮಾಯವಾದ ಚೆಲುವೆಯನ್ನು ಹುಡುಕಿದವು.

ಗೋಪಾಲ ಮನೆಗೆ ಬಂದಾಗ ದೀಪ ಹಚ್ಚಿತ್ತು. ಕೃಷ್ಣಪ್ಪನವರು ಮಗನನ್ನು ಎದುರು ನೋಡುತ್ತಾ ವರಾಂಡದಲ್ಲಿ ಕುಳಿತಿದ್ದರು.

"ಏನು ಹೇಳಿದರು ಗೋಪಿ?"

"ಕಾಗದ ಬರೆದು ಶಿಫಾರಸ್ಸು ಮಾಡ್ತೀನಿ ಅಂತ ಹೇಳಿದರು ಅಣ್ಣಾ" ಎನ್ನುತ್ತ ಗೋಪಾಲ ರೂಮಿನೊಳಗೆ ಹೋದ. ಕೋಟನ್ನು ಬಿಚ್ಚಿ ಮಂಚದ ಮೇಲೆ ಬಿಸಾಡಿ, ಕುರ್ಚಿಯ ಮೇಲೆ ಕುಳಿತು ಮೇಜಿನ ಮೇಲೆ ಕಾಲು ನೀಡಿ

ನಾಗರ ಕುಚ್ಚಿನ ನಿಡುಜಡೆಯವಳು,
ಈಕೆಯು ಬಂದುದು ಎಲ್ಲಿಂದ....

ಎಂದು ಹಾಡತೊಡಗಿದ.

"ಆಕೆ ಬಂದುದು ಸುಬ್ಬರಾಯರ ಮನೆಯಿಂದ" ಎಂದವನ ಹಾಡಿಗೆ ಹಿಂದಿ ನಿಂದ ಯಾರೋ ಉತ್ತರ ಹೇಳಿದರು. ಗೋಪಾಲ ಹಾಡು ನಿಲ್ಲಿಸಿ ಹಿಂತಿರುಗಿ ನೋಡಿದ. ಮೀರ ನಗುತ್ತ ನಿಂತಿದ್ದಳು.

"ರಾಧಾ ಹೇಗಿದಾಳೆ ಗೋಪಣ್ಣ? ಪೂತನಿ, ಶಿಶುಪಾಲ...."

"ಮೀರಾ, ನಿನ್ನ ಏನು ಮಾಡಬೇಕು ಗೊತ್ತೆ?"

"ಏನು?"

"ಚೆನ್ನಾಗಿ ಒಲಿ ಹಾಕಬೇಕು."

"ಯಾಕಪ್ಪ?"

"ರಾಧಾ. ಆ ಹೆಸರೇ ಸುಂದರ. ಹೆಸರಿಗಿಂತಲೂ ಅವಳು ಸುಂದರಿ. ಅವಳ ಮಾತು ಮತ್ತೂ ಇಂಪು."

"ಸಾಕು ನಿಲ್ಲಿಸು ಗೋಪಣ್ಣ. ನೀನು ಯಾರನ್ನೋ ನೋಡಿದೀಯ ಅಂತ ತೋರುತ್ತದೆ."

"ನೋಡು ಮೀರಾ, ಈ ಗಂಡಸರಷ್ಟು ಮೃದುವಾದ ಮನಸ್ಸಿನವರು ಯಾರೂ ಇಲ್ಲ. ಮದುವೆ ಅಂತ ಹೇಳಿದರೇನೇ ಹಾರಾಡುತ್ತಿದ್ದೆ. ನಾನು ಹೋದಾಗ ಡಾಕ್ಟರು ಮನೆಯಲ್ಲಿರಲಿಲ್ಲ. ರಾಧಾನೆ ಬಂದು ಬಾಗಿಲು ತೆಗೆದಳು...."

"ಸರಿ. ನಿನ್ನ ಹೃದಯ ಕರಗಿ ನೀರಾಗಿ ಅವಳ ಕಾಲ ಬಳಿ ಹರಿದು ಹೋಯಿತು. ಸರಿ ತಾನೇ?"

"ಹೆಚ್ಚು ಕಡಿಮೆ ಹಾಗೇ ಆಯಿತು. ಅವಳೇನು ಹೇಳಿದಳು ಗೊತ್ತೆ, ಸುಬ್ಬರಾಯರು ನನಗೆ ಭಾವನಾಗಬೇಕು ಎಂದು ಹೇಳಿದಳು."

"ಓಹೋ, ಆಗಲೇ ಪ್ರಣಯಿಗಳ ಸರಸ ಸಂಭಾಷಣೆಯೂ ಆಗಿ ಹೋಯಿತು!"

"ನಾನು ಹೇಳುವುದು ಕೇಳು. ಡಾಕ್ಟರು ತುಂಬಾ ಬುದ್ಧಿವಂತರು. ನಾನು ಹೋದಾಗ ಅವರು ಬೇಕೆಂದೇ ಮನೆಯಲ್ಲಿರಲಿಲ್ಲ. ರಾಧಾನ ಉದ್ದೇಶಪೂರ್ವಕ ವಾಗಿ ಬಾಗಿಲು ತೆಗೆಯಲು ಕಳಿಸಿದಾರೆ. ಅವರ ಮಗಳ ಬಲೆಗೆ ನಾನು ತಿಳಿದೂ ಬಿದ್ದೆ."

"ಪಾಪ! ನಿನ್ನ ನೋಡಿದರೆ ಕನಿಕರವಾಗುತ್ತದೆ ಗೋಪಣ್ಣಾ. ನಿನಗೆ ಕಷ್ಟ ಬರಬಾರದು."

"ಓಹ್, ರಾಧಾ ಎಂತಹ ಬ್ಯೂಟಿ ಅಂತೀಯಾ ಮೀರಾ...."

"ಸರಿ, ನಾನಿನ್ನು ಹೊರಡುತ್ತೇನೆ. ಇನ್ನು ನಿನ್ನ ಪುರಾಣ ಬೆಳಗಿನ ತನಕ ಆಗುತ್ತದೆ" ಎನ್ನುತ್ತ ಮೀರಾ ಹೊಸಲಿನಿಂದಾಚೆ ಕಾಲಿಟ್ಟಳು.

ಮಾರನೆಯ ದಿನ ಸುಬ್ಬರಾಯರು ಹುಡುಗಿಯನ್ನು ಕೃಷ್ಣಪ್ಪನವರ ಮನೆಗೆ ಕರೆದುಕೊಂಡು ಬರುವುದಾಗಿ ಹೇಳಿ ಕಳಿಸಿದ್ದರು. ಮೀರ ಬೆಳಗಿನಿಂದ ಮನೆಯನ್ನು ಓರಣ ಮಾಡಿದ್ದಳು. ಶ್ರೀಪಾದು ಮೀರಳ ಹಿಂದೆ ಓಡಾಡುತ್ತ ಅವಳಿಗೆ ಸಹಾಯಕ ನಾಗಿದ್ದ. ಕಮಲಮ್ಮನವರು ಬೋಂಡ, ಕೇಸರೀಭಾತು ಮಾಡಿ ತಮ್ಮ ಶ್ರೀಮಂತ ಬೀಗರನ್ನು ಎದುರುಗೊಳ್ಳಲು ಸಿದ್ಧರಾಗಿದ್ದರು.

ಸಂಜೆ ನಾಲ್ಕು ಗಂಟೆಗೆ ಸುಬ್ಬರಾಯರು, ಕಾವೇರಮ್ಮ, ರಾಧಾ, ನರ್ಮದಾ ಬಂದರು. ರಾಧಾ ತರುಣ ಮಗನ ಹೃದಯವನ್ನು ಗೆದ್ದು, ಹಿರಿಯ ತಾಯಿ ತಂದೆಗಳ ಮನಸ್ಸು ಗೆಲ್ಲುವ ಸಲುವಾಗಿ ನೀಲಿ ರೇಷ್ಮೆಯ ಸೀರೆಯುಟ್ಟು, ಬಿಳಿ ಸಿಲ್ಕಿನ ರವಿಕೆ ತೊಟ್ಟು ನೀಳವಾದ ಜಡೆಯನ್ನು ತುರುಬು ಹಾಕದೆ ಜಡೆ ಹೆಣೆದು, ಮುಡಿಯ ತುಂಬ ಹೂವು ಮುಡಿದಿದ್ದಳು.

ಮೀರ ಎಲ್ಲರಿಗೂ ತಿಂಡಿ, ಕಾಫಿ ತಂದಿಟ್ಟು ಒಳಗೆ ಹೋದಳು. ಗೋಪಾಲ ಸಮಯ ಸಾಧಿಸಿ ಕೇಳಿದ:

"ಮೀರಾ, ರಾಧಾಗೆ ನನ್ನ ಮದುವೆಯಾಗಲು ಒಪ್ಪಿಗೆ ಇದೆಯೋ ಇಲ್ಲವ್ವೋ ತಿಳಿದುಕೊಳ್ಳಬೇಕಲ್ಲೇ?"

ಮೀರ ಅವನನ್ನು ಕೀಟಲೆ ಮಾಡಲು "ಅದಕ್ಕೇನು, ನಾನು ಕೇಳಿ ಹೇಳು ತ್ತೇನೆ" ಎಂದಳು.

"ನಾನೇ ಕೇಳಬೇಕಲ್ಲಾ...."

ಮೀರಾ ಒಂದು ಗಳಿಗೆ ಯೋಚಿಸಿ ಹೇಳಿದಳು:

"ನೀನು ಹಿಂದುಗಡೆ ಮಲ್ಲಿಗೆ ಪೊದೆಯ ಬಳಿ ನಿಂತಿರು. ನಾನು ರಾಧಾನ ಉಪಾಯವಾಗಿ ಕರೆದುಕೊಂಡು ಬರುತ್ತೇನೆ."

"ಅವಳೊಬ್ಬಳನ್ನೇ ಕರೆದು ತರಬೇಕು."

"ಹಾಗಾದರೆ ನಾನು ಬರಬಾರದೇ?"

"ನೀನು ಬಾ, ಪರವಾಗಿಲ್ಲ. ಅವಳೊಡನೆ ಬೇರೆ ಯಾರೂ ಇರಬಾರದು."

ಮೀರ ರಾಧಾಳ ಬಳಿ ಕುಳಿತು ಉಪಚಾರ ಮಾಡಿದಳು.

"ಇನ್ನೂ ಸ್ವಲ್ಪ ಕೇಸರಿಭಾತ್ ತರಲೇ?'

"ಬೇಡ ಮೀರ, ಸಾಕಾಯಿತು."

ಮೀರ ನರ್ಮದಾ, ಕಾವೇರಮ್ಮನ ಕಡೆ ನೋಡಿದಳು. ಅವರಿಬ್ಬರೂ ನಿಧಾನವಾಗಿ ತಿನ್ನುತ್ತಿರುವುದನ್ನು ನೋಡಿ,

"ಬನ್ನಿ, ನಲ್ಲೀಲೇ ಕೈ ತೊಳೆದುಕೊಳ್ಳುವಿರಂತೆ" ಎನ್ನುತ್ತ ಎದ್ದಳು. ರಾಧಾ ಅವಳ ಹಿಂದೆ ಬಂದಳು. ಮೀರ ಮಲ್ಲಿಗೆ ಪೊದೆಯ ಹತ್ತಿರ ಇದ್ದ ನಲ್ಲಿಯನ್ನು ತೋರಿಸಿದಳು. ರಾಧಾ ಕೈತೊಳೆದು ಕರ್ಚೀಫಿನಿಂದ ಕೈ ಒರೆಸಿಕೊಳ್ಳುತ್ತಾ

"ಮೀರಾ, ಎಷ್ಟೊಂದು ಗಿಡ ಹಾಕಿದೀಯ...." ಎನ್ನುತ್ತ ಹಿಂತಿರುಗಿದಳು. ಮೀರಳ ಪಕ್ಕದಲ್ಲಿ ಗೋಪಾಲ ನಗುತ್ತಾ ನಿಂತಿದ್ದ. ರಾಧಾ ನಾಚಿ ತಲೆ ತಗ್ಗಿಸಿದಳು.

ಇಬ್ಬರೂ ಮಾತನಾಡದೆ ಮೌನವಾಗಿ ಒಬ್ಬರನ್ನೊಬ್ಬರು ನೋಡುತ್ತ ನಿಂತಿರುವುದನ್ನು ನೋಡಿ ಮೀರ, ಹಿರಿಯರು ಬರಬಹುದೆಂದು ಹೆದರಿ,

"ಗೋಪಣ್ಣ, ಏನು ಕೇಳ್ತೀಯೋ ಬೇಗ ಕೇಳಪ್ಪ" ಎಂದಳು.

"ನಿನಗೆ ನಾನು ಒಪ್ಪಿಗೆಯೇ?" ಗೋಪಾಲ ಕೇಳಿದ.

ರಾಧಾ ಉತ್ತರ ಕೊಡಲಿಲ್ಲ.

"ಬೇಗ ಹೇಳಿ. ಯಾರಾದರೂ ಬಂದುಬಿಡಬಹುದು" ಎಂದಳು ಮೀರ.

"ಹ್ಞೂಂ. ಆದರೆ ನಾನು....?" ರಾಧಾ ಮೆಲ್ಲಗೆ ನುಡಿದಳು.

ಗೋಪಾಲ ಉತ್ತರ ಕೊಡುವುದಕ್ಕೆ ಮುಂಚೆಯೇ ಮೀರ "ಅವನಿಗೆ ಹಗಲೆಲ್ಲಾ ನಿಮ್ಮದೇ ಧ್ಯಾನ. ರಾತ್ರಿಯೆಲ್ಲಾ ನಿಮ್ಮ ಕನಸು" ಎಂದಳು.

ರಾಧಾ, ಗೋಪಾಲರ ಮದುವೆ ನಿಶ್ಚಯವಾಯಿತು. ಒಂದು ದಿನ ಶುಭ ಮುಹೂರ್ತದಲ್ಲಿ ರಾಧಾ, ಗೋಪಾಲರು ಸತಿಪತಿಗಳಾದರು.

ಮದುವೆಯಾದ ಒಂದು ತಿಂಗಳಲ್ಲಿ ಗೋಪಾಲನಿಗೆ ಬೊಂಬಾಯಿನಲ್ಲಿ ಕೆಲಸ ಸಿಕ್ಕಿತು. ತಮ್ಮ ಶಿಫಾರಸ್ಸಿಗೆ ಮನ್ನಣೆ ದೊರಕಿದುದು ಸುಬ್ಬರಾಯರಿಗೆ ತುಂಬಾ ಸಂತೋಷವನ್ನುಂಟು ಮಾಡಿತು. ಗೋಪಾಲ ತನ್ನ ನವವಧುವಿನೊಡನೆ ಬೊಂಬಾಯಿಗೆ ಹೊರಡಲು ಸಿದ್ಧನಾದ.

ಗೋಪಣ್ಣ ದೂರ ಹೋಗುವ ಸುದ್ದಿ ಮೀರಳಿಗೆ ಪ್ರಿಯವಾಗಿರಲಿಲ್ಲ. ಇದುವರೆವಿಗೂ ಅಣ್ಣನಿಗಿಂತಲೂ ಹೆಚ್ಚಾಗಿ ಸ್ನೇಹಿತನಾಗಿದ್ದ ಗೋಪಣ್ಣ ದೂರ ಹೋಗುವ ಸುದ್ದಿ ಅವಳ ಮನಸ್ಸನ್ನು ಚುಚ್ಚುತ್ತಿತ್ತು. ಮೀರಳ ವ್ಯಥೆ ಅವನಿಗೆ ತಿಳಿದಿತ್ತು. ಹೊರಡುವ ದಿನ ಎಂದಿನಂತೆಯೇ ನಗುತ್ತ ಅವಳ ಜಡೆ ಹಿಡಿದೆಳೆದು,

"ಮೀರಾ, ಎಲ್ಲಿದ್ದರೂ ನಾವು ಸ್ನೇಹಿತರು. ದೂರದಲ್ಲಿದ್ದರೂ ಸ್ನೇಹ ಕುಂದುವುದಿಲ್ಲ. ನನ್ನ ಮರೆಯಬೇಡ. ಆಗಾಗ್ಗೆ ಕಾಗದ ಬರೆಯುತ್ತಿರು" ಎಂದು ಹೇಳಿ ಹೊರಟ. ಅವನಿಗೆ ಮೀರಳಿಂದ ದೂರ ಹೋಗುವುದು ಸ್ವಲ್ಪ ವ್ಯಥೆಯನ್ನುಂಟು ಮಾಡಿದರೂ ಹೆಂಡತಿಯ ಹೊಸ ಸಹವಾಸ ಅವನ ಮನಸ್ಸನ್ನು ಉಲ್ಲಾಸದಿಂದ ತುಂಬಿತ್ತು.

# ತಾನ

ಮೀರ ಎಸ್.ಎಸ್.ಎಲ್.ಸಿ.ಯಲ್ಲಿ ಸಂಸ್ಥಾನಕ್ಕೆ ಮೊದಲನೆಯವಳಾಗಿ ತೇರ್ಗಡೆ ಹೊಂದಿದಳು. ಗೋಪಾಲ ಪಾಸಾದ ದಿನ ಸಹ ಕೃಷ್ಣಪ್ಪನವರು ಅಷ್ಟು ಸಂತೋಷಪಟ್ಟಿರಲಿಲ್ಲ. ಫಲಿತಾಂಶ ತಿಳಿದ ಗಳಿಗೆಯಿಂದ ಮೊದಲುಗೊಂಡು ಕಮಲಮ್ಮನವರು ಗಂಡನೊಡನೆ ಕದನ ಪ್ರಾರಂಭಿಸಿದರು.

"ಇನ್ನು ಮೀರಾ ಓದಿದ್ದು ಸಾಕು. ಹೆಣ್ಣು ಹುಡುಗೀಗೆ ಕಾಲೇಜು ವಿದ್ಯಾಭ್ಯಾಸ ಬೇಡ. ಸ್ವಲ್ಪ ಮನೆಗೆಲಸ ಕಲಿತುಕೊಳ್ಳಲಿ. ಆಮೇಲೆ ವರ ಹುಡುಕಿ ಮದುವೆ ಮಾಡಿ."

ಕೃಷ್ಣಪ್ಪನವರು "ವರನನ್ನೇನೋ ಹುಡುಕುತ್ತೇನೆ. ಆದರೆ ಕೂಡಲೇ ಸರಿಯಾದ ಕಡೆ ಸಿಗುವುದಿಲ್ಲ. ಆದುದರಿಂದ ಸರಿಯಾದ ಹುಡುಗ ಸಿಗುವವರೆಗೆ ಮೀರ ಓದುತ್ತಿರಲಿ" ಎಂದರು.

"ಬೇಡೀಂದ್ರೆ. ನನ್ನ ಮಾತು ಸ್ವಲ್ಪ ಕೇಳಿ. ಮೀರಾ ಓದಿ ಕೆಲಸ ಮಾಡಬೇಕಾಗಿಲ್ಲ. ಈಗಿನ ಕಾಲದ ಹೆಣ್ಣುಮಕ್ಕಳು ಅತೀ ಓದುತ್ತಿರುವುದರಿಂದಲೇ ನಿಶ್ಶಕ್ತರಾಗುತ್ತಿದ್ದಾರೆ. ಮೀರಳನ್ನು ಓದಿಸಬೇಡಿ."

ಆದರೆ ಕೃಷ್ಣಪ್ಪನವರು ಹೆಂಡತಿಯ ಮಾತನ್ನು ಮನ್ನಿಸಲಿಲ್ಲ.

ಕಮಲಮ್ಮನವರು ಕೋಪದಿಂದ "ಹ್ಞೂಂ, ನನಗೇನಾಗಬೇಕಾಗಿದೆ. ಎಷ್ಟಾಗಲಿ ನಿಮ್ಮ ತಮ್ಮನ ಮಗಳು ನಿಮಗೆ ಹೆಚ್ಚು. ಓದಿಸುವವರು ನೀವುಂಟು, ಓದುವವಳು ಅವಳುಂಟು. ಓದಿಸಿ. ಸ್ಕೂಲು, ನಾಟಕದಲ್ಲಿ ಪಾರ್ಟು ಮಾಡಿಸುತ್ತಿರಿ, ನನಗೇನು" ಎಂದು ಪಟಗುಟ್ಟುತ್ತ ಅಡಿಗೆಮನೆಯೊಳಗೆ ಹೊರಟುಹೋದರು.

ಮೀರಾ ಮಹಾರಾಣೀ ಕಾಲೇಜು ಸೇರಿದಳು. ಅವಳ ಗೆಳತಿಯರು ರಾಜೇಶ್ವರಿ, ನರ್ಮದಾ, ಚಂಪಾ ಸಹ ಕಾಲೇಜಿಗೆ ಸೇರಿದ್ದರು. ಪ್ರಾಕ್ಟಿಕಲ್ ಕ್ಲಾಸಿಗಾಗಿ ಮೀರ ಹುಡುಗರ ಕಾಲೇಜಿಗೆ ಹೋಗಬೇಕಾಗಿತ್ತು. ಗಂಡು ಹುಡುಗರ ವರ್ತನೆ, ಟೀಕೆ, ಟಿಪ್ಪಣಿಗಳನ್ನು ಕಂಡು ಮೀರ ಹೇಸಿದ್ದಳು. ನರ್ಮದಾಳೊಡನೆ ಮನೆಬಿಟ್ಟು ಹೊರಟರೆ 'ಕರ್ಲಿಲಾಕ್ಸ್', 'ರಾಜಹಂಸ' ಎಂದು ಅಡ್ಡ ಹೆಸರಿನಿಂದ ಕೂಗುವುದನ್ನು ಕೇಳಿ ಅವರ ಕಿವಿ ತೂತಾಗಿತ್ತು.

ಮೀರಳ ತಲೆಗೂದಲು ಬಹಳ ಗುಂಗುರಾಗಿತ್ತು. ಸಣ್ಣ ಸಣ್ಣ ಗುಂಗುರುಗಳು ಅವಳ ಅಂಕೆ ಮೀರಿ ತಲೆ ತುಂಬಾ ದಟ್ಟವಾಗಿ ಹರಡಿಕೊಂಡು ಬೆನ್ನಿನ ಮೇಲೆ ಜಾರಿದ್ದವು. ಜಡೆ ಸ್ವಲ್ಪ ಮೋಟಾದರೂ ಕಪ್ಪಗೆ ದಪ್ಪಗಿತ್ತು. ಗುಂಗುರು ಕೂದಲು ಅವಳ ಮುಖಕ್ಕೆ ಅಪೂರ್ವ ಲಾವಣ್ಯವನ್ನು ಕೊಟ್ಟಿದ್ದವು.

ನರ್ಮದಾ ಮೀರಳಿಗಿಂತ ಬಿಳಿಪಾದರೂ ಸಪ್ಪೆ ಮುಖ, ಕಾಂತಿ ಇಲ್ಲದ

ದೊಡ್ಡ ಕಣ್ಣುಗಳು ಹುಡುಗರಿಗೆ ಆಕರ್ಷಣೀಯವಾಗಿರಲಿಲ್ಲ. ಮೀರಳ ಜೀವ ತುಂಬಿದ ಕಣ್ಣುಗಳು, ಅವಳ ಲಕ್ಷಣವಾದ ಮುಖಕ್ಕೆ ಬೆರಗಾದ ಹುಡುಗರು ದಾರಿಯಲ್ಲಿ ಕೀಟಲೆ ಮಾಡುತ್ತಿದ್ದರು. ಆದರೆ ಮೀರ ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ ಉದಾಸೀನದಿಂದಿದ್ದಳು.

ಮುನ್ನುಗ್ಗುವಿಕೆ, ಧೈರ್ಯ, ಮುಂದಾಳುತನ, ಚಟುವಟಿಕೆ ಮೀರಳಿಗೆ ಹುಟ್ಟುಗುಣವಾಗಿತ್ತು. ಒಂದು ನಿಮಿಷ ಕೆಲಸವಿಲ್ಲದೆ ಸೋಮಾರಿಯಾಗಿ ಕಾಲ ಕಳೆಯುವುದೆಂದರೆ ಮೀರಳ ಮನಸ್ಸು ಒದ್ದಾಡುತ್ತಿತ್ತು. ಅವಳ ಚಲನವಲನಗಳು ಕಾಲೇಜಿನ ಉಪಾಧ್ಯಾಯಿನಿಯರ ಗಮನಕ್ಕೆ ಬಂದಿದ್ದವು.

ಕ್ರೀಡಾರಂಗದಲ್ಲಿ ಅವಳೇ ಮುಂದಾಳು. ಪ್ರತಿಯೊಂದು ನಾಟಕದಲ್ಲೂ ಮೀರಳದೇ ಪ್ರಧಾನ ಪಾತ್ರ. ಕಾಲೇಜು ಯೂನಿಯನ್ನಿನ ಸೆಕ್ರೆಟರಿ ಅವಳು. ಮೀರಳಿಲ್ಲದೇ ಯಾವ ಕಾರ್ಯವೂ ಸಲೀಸಾಗಿ ಜರುಗುತ್ತಿರಲಿಲ್ಲ. ಸುತ್ತಮುತ್ತ ಗೆಳತಿಯನ್ನು ಕೂರಿಸಿಕೊಂಡು, ಒಂದು ನಿಮಿಷವೂ ಬಿಡುವಿಲ್ಲದೆ ಮಾತನಾಡುತ್ತ, ಎಲ್ಲರನ್ನೂ ಹಾಸ್ಯ ಮಾಡುತ್ತ ಕಾಲ ಕಳೆಯುವ ಅವಳ ಸ್ನೇಹಸ್ವಭಾವವೇ ಅವಳನ್ನು ಜನಪ್ರಿಯವಾಗಿ ಮಾಡಿದ್ದವು.

ಗೋಪಾಲ ಹದಿನೈದು ದಿನ ರಜ ಪಡೆದು ಹೆಂಡತಿಯನ್ನು ಕರೆದುಕೊಂಡು ಊರಿಗೆ ಬರುವನೆಂಬ ಸುದ್ದಿ ಕೇಳಿ ಮೀರ ಹಿಗ್ಗಿದಳು. ಗೋಪಾಲನನ್ನು ಎದುರುಗೊಳ್ಳಲು ಶ್ರೀಪಾದು, ಶ್ರೀಹರಿಯೊಡನೆ ಮೀರ ಸ್ಟೇಷನ್ನಿಗೆ ಹೊರಟಳು.

ಟ್ರೈನು ನಿಂತೊಡನೆ ಮೀರಳ ಕಣ್ಣುಗಳು ಪ್ರತಿಯೊಂದು ಗಾಡಿಯನ್ನೂ ದಿಟ್ಟಿಸಿ ನೋಡಿದವು. ಗೋಪಾಲ ಗಾಡಿಯೊಂದರ ಬಾಗಿಲು ತೆರೆದು ನಗುತ್ತ ನಿಂತಿದ್ದ. ಅವನು ಕೆಳಗೆ ಧುಮುಕಿದ ನಂತರ ರಾಧಾ ನಿಧಾನವಾಗಿ ಕೆಳಗಿಳಿದಳು.

"ಹುಷಾರಾಗಿದೀರ ಅತ್ತಿಗೆ?"

"ಹ್ಞೂ."

"ರಾಧಾ, ಮೀರಾನ ನೋಡು. ಹೇಗೆ ಬೆಳೆದುಬಿಟ್ಟಿದ್ದಾಳೆ! ನಾವು ಬೊಂಬಾಯಿಗೆ ಹೊರಟಾಗ ಲಂಗದ ಹುಡುಗಿಯಾಗಿದ್ದವಳು ಈಗ ಸೀರೆಯ ಹುಡುಗಿಯಾಗಿದ್ದಾಳೆ" ಎನ್ನುತ್ತಾ ಗೋಪಾಲ ಅವಳ ಮೋಟು ಜಡೆಯನ್ನೆಳೆದ.

"ನಾನು ಬೆಳೆದಿರೋದು ಅಷ್ಟರಲ್ಲೇ ಇದೆ."

"ನೀನು ಹೀಗೇ ಬೆಳೀತಾ ಇದ್ದರೆ ತೆಂಗಿನ ಮರವಾಗಿ ಬಿಡುತ್ತೀಯ."

"ಮನೇಲಿ ಜಗಳ ಕಾಯುವಿರಂತೆ ಬನ್ನಿ" ಎಂದು ಶ್ರೀಹರಿ ಎಚ್ಚರಿಸಿದ.

ಮನೆ ಬಾಗಿಲಿನಲ್ಲಿ ಕೃಷ್ಣಪ್ಪನವರು ಮಗ, ಸೊಸೆಯನ್ನು ಎದುರು ನೋಡುತ್ತ ನಿಂತಿದ್ದರು. ರಾಧಾ ಮಾವನವರನ್ನು ನೋಡಿ ಸ್ವಲ್ಪ ಮರೆಯಾಗಿ ನಿಂತಳು.

"ಹುಷಾರಾಗಿದೀಯಾ ತಾಯಿ."

"ಹ್ಞೂಂ." ಎಂದು ಹೇಳಿ ರಾಧಾ ಸಂಕೋಚದಿಂದ ಒಳಗೆ ಹೋದಳು.

"ಗೋಪಣ್ಣ ಬಡವಾಗಿದೀಯಲ್ಲಪ್ಪ" ಎನ್ನುತ್ತ ಕಮಲಮ್ಮನವರು ಅಕ್ಕರೆಯಿಂದ ಮಗನ ತಲೆಯನ್ನು ನೇವರಿಸಿದರು. ಅವರಿಗೆ ತಮ್ಮ ಎಲ್ಲ ಮಕ್ಕಳಿಗಿಂತಲೂ ಗೋಪಣ್ಣನ ಮೇಲೆ ಹೆಚ್ಚು ಅಭಿಮಾನವಿತ್ತು. ಮಗ ತಮ್ಮಿಂದ ದೂರ ವಿದ್ದುದು ಇದೇ ಮೊದಲನೆಯ ಬಾರಿಯಾದುದರಿಂದ ಅವನನ್ನು ನೋಡಿ ಬಹಳ ವರ್ಷಗಳಾಗಿದ್ದಂತೆ ಅವರಿಗೆ ಭಾಸವಾಗುತ್ತಿತ್ತು.

ಗೋಪಾಲನೊಡನೆ ಮಾತನಾಡುವ ಸಂಭ್ರಮದಲ್ಲಿ ಮೀರ ತನ್ನ ಕಾಲೇಜನ್ನು ಮರೆತುಬಿಟ್ಟಳು. ಎಲ್ಲರೂ ಹರಟೆ ಹೊಡೆಯುತ್ತ ಕುಳಿತಿದ್ದಾಗ ಗೋಪಾಲ,

"ನೀನೇನಮ್ಮ, ಕಾಲೇಜು ಕುಮಾರಿ" ಎಂದು ರೇಗಿಸಿದ.

"ನೀನೇ ಮೇಲ್ಪಂಕ್ತಿ ಹಾಕಿ ತೋರಿಸಿದೆಯಲ್ಲ, ಗೋಪಣ್ಣ?"

"ಇಂಟರ್ ಆದ ಮೇಲೆ ಏನು ಮಾಡುತ್ತೀಯ, ಮೀರಾ?"

"ಮೆಡಿಕಲ್ ಕಾಲೇಜಿಗೆ ಸೇರಿಕೊಳ್ಳುತ್ತೇನೆ."

ಮೀರ ಉತ್ಸುಕತೆಯಿಂದ ನುಡಿದಳು.

"ಅಬ್ಬ! ನಿನಗೆ ಎಷ್ಟೊಂದು ನೆನಪು! ಚಿಕ್ಕ ಹುಡುಗಿಯಾಗಿದ್ದಾಗ ಹೇಳಿದ ಮಾತನ್ನೇ ಇನ್ನೂ ನೆನಪಿನಲ್ಲಿಟ್ಟುಕೊಂಡಿದೀಯಾ?"

"ಆ ಆಸೆಯನ್ನು ಮರೆಯಲು ಸಾಧ್ಯವಿಲ್ಲ ಗೋಪಣ್ಣ. ಅದೊಂದು ಆಸೆ ನನ್ನ ಹೃದಯಕ್ಕೆ ಹತ್ತಿಹೋಗಿದೆ. ನೀನು ನನ್ನ ಮನಸ್ಸಿನಲ್ಲಿ ಬಿತ್ತಿದ ಬೀಜ ಈಗ ಮರವಾಗಿದೆ."

"ನಿನ್ನಾಸೆ ಪೂರ್ಣವಾಗಲಿ" ಎಂದು ಗೋಪಾಲ ಹರಸಿದ.

ರಾಧಾ ಎರಡು ದಿನ ಅತ್ತೆಯ ಮನೆಯಲ್ಲಿದ್ದು ಅನಂತರ ತವರು ಮನೆಗೆ ಹೊರಟುಹೋದಳು. ಕಾವೇರಮ್ಮ, ಸುಬ್ಬರಾಯರು ಮಗಳು ಅಳಿಯನ್ನ ಕರೆಯಲು ಬಂದಿದ್ದರು. ಮಗಳ ಚೊಚ್ಚಲ ಹೆರಿಗೆ ತಮ್ಮ ಮನೆಯಲ್ಲಿ ಆಗಬೇಕೆಂದು ಕಾವೇರಮ್ಮ ಬಯಸಿದ್ದರು. ಗೋಪಾಲ ಅತ್ತೆಯ ಮನೆಗೂ, ತಾಯಿ ಮನೆಗೂ ಓಡಾಡಿಕೊಂಡು ಕಾಲ ಕಳೆಯುತ್ತಿದ್ದ.

ಗೋಪಾಲ ಬೊಂಬಾಯಿನಿಂದ ಮೀರಳಿಗಾಗಿ ಬಿಳಿಯ ಜಾರ್ಜೆಟ್ ಸೀರೆಗೆ ಕೆಂಪು ಸೆರಗು ಸೇರಿಸಿದ್ದ ಸೀರೆಯನ್ನು ತಂದಿದ್ದ. ಮೀರ ಸೀರೆಯ ಸೆರಗು, ಒಡಲು ಪರೀಕ್ಷಿಸಿ,

"ತುಂಬಾ ಚೆನ್ನಾಗಿದೆ ಗೋಪಣ್ಣ. ನೀನು ಆರಿಸಿ ತಂದ ಮೇಲೆ ಕೇಳಬೇಕೆ?"

ಎನ್ನುವವರೆಗೆ ಅವನಿಗೆ ತೃಪ್ತಿಯಿರಲಿಲ್ಲ.

ಮೀರ ಆ ಸೀರೆಯುಟ್ಟು ಬೆಡಗಿನ ರಾಣಿಯಂತೆ ಬಳುಕುತ್ತ ಅವನೆದುರಿಗೆ ನಿಂತು 'ಹೇಗಿದೆ' ಎಂದು ಕೇಳಿ 'ನೀನುಟ್ಟ ಮೇಲೆ ಹೇಳಬೇಕೆ' ಎಂದ ಮೇಲೆ ಮೀರಳಿಗೆ ತೃಪ್ತಿಯಾಯಿತು.

ಹದಿನೈದು ದಿನ ಮನೆಯನ್ನು ಗಲಾಟೆ, ನಗು, ಹಾಸ್ಯದಲ್ಲಿ ಮುಳುಗಿಸಿದ್ದ ಗೋಪಾಲ ರಜ ಮುಗಿದೊಡನೆ ಬೊಂಬಾಯಿಗೆ ಹೊರಟುಹೋದ. ಗೋಪಾಲ ಬೊಂಬಾಯಿಗೆ ಹೋದ ಎರಡು ತಿಂಗಳಿನೊಳಗೆ ರಾಧಾ ಗಂಡು ಮಗುವಿನ ತಾಯಿಯಾದಳು. ಸುಬ್ಬರಾಯರು ಮೊಮ್ಮಗನ ನಾಮಕರಣಕ್ಕೆ ಬರಬೇಕೆಂದು ಅಳಿಯನಿಗೆ ಕಾಗದ ಬರೆದರು. ಆದರೆ ಗೋಪಾಲನಿಗೆ ರಜ ಸಿಗದ್ದರಿಂದ ಅವನಿಲ್ಲದೆಯೇ ನಾಮಕರಣವಾಯಿತು. ರಾಧಾಳ ಅಪೇಕ್ಷೆಯಂತೆ 'ಕಿಶೋರ' ಎಂದು ಹೆಸರಿಟ್ಟರು.

ಒಂದು ಶನಿವಾರ, ಆ ದಿನ ಮೀರಳಿಗೆ ಕಾಲೇಜಿರಲಿಲ್ಲ. ಮೀರ 'ಹೂವಿನ ಆಸೆ' ಎಂಬ ನಾಟಕದ ಪುಸ್ತಕವೊಂದನ್ನು ಕೈಲಿ ಹಿಡಿದು ನಾಯಕಿಯ ಮಾತುಗಳನ್ನು ಉರು ಹಾಕುತ್ತಿದ್ದಳು.

"ಮೀರಾ...."

ಅರ್ಧ ಮಲಗಿ ಓದುತ್ತಿದ್ದ ಮೀರ ಎದ್ದು ಕುಳಿತು "ಏನು ದೊಡ್ಡಪ್ಪ" ಎಂದಳು.

ಕೃಷ್ಣಪ್ಪನವರು ಬಾಗಿಲಿನಲ್ಲಿದ್ದ ಚಪ್ಪಲಿಯನ್ನು ಮೆಟ್ಟಿಕೊಳ್ಳುತ್ತ,

"ಮಾರ್ಕೆಟ್ಟಿಗೆ ಹೋಗಿ ಬರುತ್ತೇನೆ. ಕಮಲೂನ ಕೇಳಿ ಒಂದು ಚೀಲ ತೆಗೆದುಕೊಂಡು ಬಾ" ಎಂದರು.

ಮೀರ ಎದ್ದು ಒಳಗೆ ಹೋಗಿ ಖಾದಿಯ ಚೀಲವನ್ನು ತಂದು ಕೈಗೆ ಕೊಟ್ಟಳು.

"ಮುಂಬಾಗಿಲು ಹಾಕಿಕೋ" ಎನ್ನುತ್ತ ಛತ್ರಿ ಕೈಲಿ ಹಿಡಿದು ಕೃಷ್ಣಪ್ಪನವರು ಹೊರಗೆ ಹೊರಟರು. ಮಾರ್ಕೆಟ್ಟಿನಲ್ಲಿ ತರಕಾರಿ ವ್ಯಾಪಾರ ಮಾಡಿ ತಮ್ಮ ಮೊಮ್ಮಗನಿಗೆ ಸೊಳ್ಳೆಪರದೆ ತೆಗೆದುಕೊಂಡು ಮನೆಯ ಕಡೆ ಹೊರಟರು.

ಸೂರ್ಯ ನಡುನೆತ್ತಿಯ ಮೇಲೆ ಬಂದಿದ್ದ. ಮುಖದಲ್ಲಿ ಸುರಿಯುತ್ತಿದ್ದ ಬೆವರನ್ನು ಕರವಸ್ತ್ರದಲ್ಲಿ ಒರೆಸಿಕೊಳ್ಳುತ್ತ ಬೀದಿಯ ಮೂಲೆಯನ್ನು ತಿರುಗಿದರು. ಮೂಲೆಯ ತಿರುವಿನಲ್ಲಿ ಬರುತ್ತಿದ್ದವರನ್ನು ನೋಡಿ ಕೃಷ್ಣಪ್ಪನವರು ಒಂದು ಗಳಿಗೆ ನಿಂತು ದಿಟ್ಟಿಸಿ ನೋಡಿದರು. ಆತ ಒಂದು ಬಾರಿ ಕೃಷ್ಣಪ್ಪನವರ ಕಡೆ ನೋಡಿ ಮುಂದೆ ಹೊರಟರು. ಕೃಷ್ಣಪ್ಪನವರು ಅನುಮಾನಿಸುತ್ತ,

'ನೀವು ಶಾಮಣ್ಣ ಅಲ್ಲವೇ?" ಎಂದರು.

ಆತ ನಿಂತು ಸಂದೇಹದಿಂದ ಕೃಷ್ಣಪ್ಪನವರ ಕಡೆ ನೋಡಿ,

"ಹೌದು. ಆದರೆ ತಾವು ಯಾರೋ ತಿಳಿಯಲಿಲ್ಲ" ಎಂದರು.

"ಇದೇನಪ್ಪಾ, ಶಾಮು, ಆಗಲೇ ಮರೆತುಬಿಟ್ಟಿದೀಯಾ? ನಾನು ನೋಡಿದಾಗ ಸಣ್ಣ ಹುಡುಗ ನೀನು. ಚಡ್ಡಿ ಹಾಕಿಕೊಂಡು ಓಡಾಡುತ್ತಿದ್ದೆ...."

ತನ್ನನ್ನು ಅಕ್ಕರೆಯಿಂದ ಮಾತನಾಡಿಸುತ್ತಿದ್ದ ಕೃಷ್ಣಪ್ಪನವರ ಪರಿಚಯ ಶಾಮುವಿಗಿರಲಿಲ್ಲ. ನಾಚಿಕೆಯಿಂದ ಮೊದಲೇ ಕೆಂಪಗಿದ್ದ ಮುಖ ಮತ್ತಷ್ಟು ಕೆಂಪಾಗಿತ್ತು. ಸಂಕೋಚದಿಂದ ಕೇಳಿದ,

"ತಾವು ಯಾರೂಂತ...."

"ನಾನು ಕೃಷ್ಣಪ್ಪ ಕಣೋ ಮಗು. ನನಗೂ, ನಿನ್ನ ತಂದೆಗೂ ಒಂದೇ ಕತ್ತಿನಲ್ಲಿ ಪ್ರಾಣ. ನಾನು ನಿಮ್ಮನೆಗೆ ಬರುತ್ತಿದ್ದಾಗ ನೀನು ಇನ್ನೂ ಹುಡುಗ."

ಶಾಮುವಿಗೆ ತಟ್ಟನೆ ಜ್ಞಾಪಕಕ್ಕೆ ಬಂತು.

"ಈಗ ಗೊತ್ತಾಯಿತು ಮಾವ. ಇಷ್ಟು ದಿನದ ಮೇಲೆ ನಡುರಸ್ತೇಲಿ ನೀವು ಸಿಗುವಿರಿ ಅಂತ ನಾನು ಎಣಿಸಿರಲಿಲ್ಲ" ಎಂದ.

"ಈಗ ಎಲ್ಲಿದ್ದೀಯಾ, ಏನು ಮಾಡ್ತಾ ಇದ್ದೀಯ ಮಗು?" ಎಂದು ಕೃಷ್ಣಪ್ಪನವರು ಪ್ರಶ್ನೆಗಳ ಸುರಿಮಳೆ ಸುರಿಸಿದರು.

"ನಾನು ಹಳ್ಳಿಯಲ್ಲೇ ಗದ್ದೆ, ತೋಟ ನೋಡಿಕೊಂಡಿದೀನಿ ಮಾವ."

"ಬಹಳ ಸಂತೋಷಪ್ಪಾ. ನಿನಗೇನು ಪಿತ್ರಾರ್ಜಿತ ಆಸ್ತಿ ಬೇಕಾದ ಹಾಗಿದೆ. ಅದೇನು ಈಗ ಮೈಸೂರಿಗೆ ಬಂದಿದೀಯಾ?"

"ತೆಂಗಿನಕಾಯನ್ನು ಮಾರ್ಕೆಟ್ಟಿಗೆ ಹಾಕಿಸಬೇಕಾಗಿತ್ತು. ಆದುದರಿಂದ ಬಂದೆ."

"ನಿಮ್ಮ ತಂದೆ ಹೋದ ಮೇಲೆ ನಾನು ಹಳ್ಳಿ ಕಡೆ ಬಂದೇ ಇಲ್ಲ. ಈಗ ಮೈಸೂರಿನಲ್ಲಿ ಎಲ್ಲಿ ಇಳಿದುಕೊಂಡಿದೀಯಾ?"

"ಮಾಡರನ್ ಹಿಂದೂ ಹೋಟಲಿನಲ್ಲಿ ಇಳಿದುಕೊಂಡಿದೀನಿ. ನಾಳೆ ಹಳ್ಳಿಗೆ ಹೊರಟುಹೋಗುತ್ತೇನೆ."

"ಮನೆಗೆ ಬರದೇ ಹೋಗ್ತೀಯಾ ಶಾಮಣ್ಣಾ? ಹೋಟಲಿಗೆ ಹೋಗಿ ಸಾಮಾನು ತೆಗೆಸಿಕೊಂಡು ಮನೆಗೆ ಹೋಗೋಣ ನಡಿ."

ಶಾಮು ಹಿಂದೆ ಮುಂದೆ ನೋಡುತ್ತ, "ಇಲ್ಲ ಮಾವ. ಈ ಸಲ ನಿಮಗೆ ಸುಮ್ಮನೆ ತೊಂದರೆ ಕೊಡುವುದಿಲ್ಲ. ಇನ್ನೊಂದು ಸಲ ಬಂದಾಗ ಖಂಡಿತ ನಿಮ್ಮನೆಗೇ ಬರುತ್ತೇನೆ" ಎಂದ.

"ಊಹ್ಞೂ. ಆಗೋದಿಲ್ಲ. ಮುದುಕನ ಮನಸ್ಸನ್ನು ನೋಯಿಸಬೇಡ. ನಾನು, ನಿನ್ನ ತಂದೆ ಎಷ್ಟೊಂದು ಸ್ನೇಹಿತರು. ನೀನೂ ನನಗೆ ಮಗನ ಹಾಗೇ ಆಗಬೇಕು, ನಡಿ" ಎಂದು ಬಲವಂತ ಮಾಡಿದರು. ನಿರ್ವಾಹವಿಲ್ಲದೆ ಶಾಮು

ಅವರೊಡನೆ ಹೊರಟ. ದಾರಿಯುದ್ದಕ್ಕೂ ಕೃಷ್ಣಪ್ಪನವರು ಶಾಮೂನ ತಂದೆ ಯೊಡನೆ ತಾವು ಕಳೆದ ದಿನಗಳನ್ನು ವರ್ಣಿಸುತ್ತ ಹೊರಟರು. ಶಾಮು ಹೆಚ್ಚು ಮಾತನಾಡದೆ ಎಲ್ಲಕ್ಕೂ ಹ್ಞೂಗುಟ್ಟುತ್ತ ನಡೆದ.

"ಅದೇ ಮನೆ ಶಾಮಣ್ಣಾ. ಮುಂದುಗಡೆ ಎರಡು ತೆಂಗಿನ ಮರ, ಒಂದು ಪಾರಿಜಾತದ ಗಿಡ ಇದೆಯಲ್ಲಾ...." ಎನ್ನುತ್ತಾ ಕೃಷ್ಣಪ್ಪನವರು ಬೆರಳಿನಿಂದ ಮನೆಯನ್ನು ತೋರಿಸಿದರು.

ಗೇಟಿನ ಸದ್ದು ಕೇಳಿದ ಕೂಡಲೆ ಮೀರ ಓಡಿಬಂದು ಮುಂಬಾಗಿಲಿ ತೆಗೆದಳು. ದೊಡ್ಡಪ್ಪನೊಡನೆ ಅಪರಿಚಿತರೊಬ್ಬರನ್ನು ನೋಡಿ ಮೀರ ಒಳಗೆ ಸರಿಯು ವಷ್ಟರಲ್ಲಿ ಕೃಷ್ಣಪ್ಪನವರು,

"ಮೀರಾ, ಈ ಚೀಲ ತಕೊಂಡು ಹೋಗಿ ಒಳಗಿಡಮ್ಮಾ" ಎಂದರು. ಮೀರ ಚೀಲವನ್ನು ತೆಗೆದುಕೊಳ್ಳುತ್ತಿದ್ದಂತೆಯೇ ಕೃಷ್ಣಪ್ಪನವರು,

"ಕಮಲೂಗೆ ನನ್ನ ಹಳೇ ಸ್ನೇಹಿತನ ಮಗ ಶಾಮು ಬಂದಿದಾನೆ ಅಂತ ಹೇಳಿ ಎರಡು ಎಲೆ ಹಾಕಿಸು" ಎಂದರು.

ಮೀರ ಒಳಗೆ ಹೋದಳು.

"ಶಾಮು, ಸಂಕೋಚ ಮಾಡಿಕೊಳ್ಳಬೇಡಪ್ಪ, ನಿನ್ನ ಮನೆ ಎಂದೇ ಭಾವಿಸು. ಬಿಸಿ ನೀರಿದೆ. ಸ್ನಾನ ಮಾಡುವ ಹಾಗಿದ್ದರೆ ಮಾಡು."

ಶಾಮು ಸ್ನಾನಕ್ಕೆ ಹೋದ ಕೂಡಲೇ ಕೃಷ್ಣಪ್ಪನವರು ಅಡಿಗೆಯ ಮನೆಗೆ ಬಂದು,

"ಕಮಲೂ, ಏನಡಿಗೆ ಮಾಡಿದೀಯಾ?" ಎಂದರು.

"ಬದನೆಕಾಯಿ ಹುಳಿ, ಅನ್ನ ಮಾಡಿದೀನಿ."

"ಬಾಗೇ ಸ್ವಲ್ಪ ಕಾಯಿ ಚಟ್ನಿ ಮಾಡಿ, ಹಪ್ಪಳ ಸಂಡಿಗೆ ಕರಿದುಬಿಡು. ಇವತ್ತು ಅಕಸ್ಮಾತ್ತಾಗಿ ಸಿಕ್ಕಿದ. ನಮ್ಮನೇಗೆ ಯಾಕೆ ಬರುತ್ತಾರೆ."

ಸ್ವಲ್ಪ ಹೊತ್ತಿನ ಮೇಲೆ ಕರೆ ಬಂತು. ಶಾಮು, ಕೃಷ್ಣಪ್ಪನವರು ಒಳಗೆ ಹೋಗಿ ಹಾಕಿದ್ದ ಮಣೆಗಳ ಮೇಲೆ ಕುಳಿತರು. ಕಮಲಮ್ಮ, ಮೀರ ಬಡಿಸ ತೊಡಗಿದರು. ಶಾಮು ಬಹಳ ಸಂಕೋಚದಿಂದ ತಲೆ ತಗ್ಗಿಸಿ ಊಟ ಮಾಡ ತೊಡಗಿದ. ಕೃಷ್ಣಪ್ಪನವರು ಬಾಯಿ ತುಂಬಾ ಉಪಚಾರ ಮಾಡಿದರು.

"ಸಂಕೋಚ ಮಾಡಿಕೊಳ್ಳಬೇಡ ಶಾಮಣ್ಣಾ. ಈ ಸಲ ನೀನು ಬಂದಿದ್ದು ಬಂದ ಹಾಗೇ ಆಗಲಿಲ್ಲ. ಇನ್ನೊಂದು ಸಲ ಬರುವಾಗ ನಿನ್ನ ಹೆಂಡತಿ, ಮಕ್ಕಳನ್ನೂ ಖಂಡಿತಾ ಕರೆದುಕೊಂಡು ಬಾ."

ಶಾಮುವಿನ ಬಣ್ಣ ಮೊದಲೇ ಕೆಂಪು. ನಾಚಿಕೆಯಿಂದ ಅವನ ಮುಖ

ರಕ್ತವರ್ಣ ತಾಳಿತು. ಬಗ್ಗಿದ್ದ ತಲೆಯನ್ನು ಮತ್ತಷ್ಟು ತಗ್ಗಿಸಿ,

"ಇನ್ನೂ ಮದುವೆ ಮಾಡಿಕೊಂಡಿಲ್ಲ" ಎಂದ.

ಕೃಷ್ಣಪ್ಪನವರು ದೊಡ್ಡದಾಗಿ ನಕ್ಕರು.

"ಓಹೋ, ಮದುವೆ ಇನ್ನೂ ಆಗಿಲ್ಲವೋ? ನಿಮ್ಮಂತಹ ಲಕ್ಷ್ಮೀಪುತ್ರರು ಮದುವೆ ಯಾಕಯ್ಯ ಮಾಡಿಕೊಂಡಿಲ್ಲ. ನಿಮ್ಮಂತಹವರಿಗೆ ಹೆಣ್ಣು ಕೊಡುವವರು ಕಡಿಮೆಯೇ?"

ಶಾಮು ಸಂಕೋಚದಿಂದ ಹೇಳಿದ, "ಎಲ್ಲೂ ಸರಿಯಾದ ಕಡೆ ಸಿಕ್ಕಿಲ್ಲ."

"ನಿನಗೆ ಸರಿಯಾದ ಕಡೆ ಸಿಗುವುದು ಕಷ್ಟವೇ? ಕಮಲೂ, ಶಾಮೂಗೆ ಇನ್ನೊಂದೆರಡು ಸಂಡಿಗೆ ಹಾಕು."

"ಬೇಡಿ ಸಾಕು."

"ಊಟ ಮಾಡುವಾಗ ಸಂಕೋಚ ಮಾಡಿಕೊಳ್ಳಬಾರದು ಶಾಮಣ್ಣ." ಊಟ ಮುಗಿಯಿತು. ಶಾಮು ಕೈ ತೊಳೆದುಕೊಂಡು ಹಾಲಿಗೆ ಬಂದ.

"ಎಲೆ ಅಡಿಗೆ ಹಾಕುವ ಪದ್ಧತಿ ಉಂಟೇನಯ್ಯ?"

"ಹ್ಞೂ, ಎಷ್ಟಾಗಲಿ ನಾವು ಹಳ್ಳಿಯ ಜನ. ಎಲೆ ಅಡಿಕೆ ಇಲ್ಲದೆ ನಮಗೆ ಬೆಳಗಾಗುವುದೇ ಇಲ್ಲ."

"ಮೀರಾ, ತಟ್ಟೇಲಿ ಎಲೆ, ಅಡಿಕೆ ತೆಗೆದುಕೊಂಡು ಬಾಮ್ಮಾ."

ಮೀರ ಬೆಳ್ಳಿಯ ತಟ್ಟೆಯಲ್ಲಿ ಚಿಗುರೆಲೆ ಆರಿಸಿಟ್ಟು, ಅಡಿಕೆ, ಸುಣ್ಣ ತಟ್ಟೆಗಳ ಒಂದು ಮೂಲೆಯಲ್ಲಿ ಓರಣವಾಗಿ ಜೋಡಿಸಿ ತಂದು,

"ತಗೊಳ್ಳಿ ದೊಡ್ಡಪ್ಪ" ಎಂದಳು.

"ಮೊದಲು ಅವರಿಗೆ ಕೊಡು. ಆಮೇಲೆ ನಾನು ಹಾಕಿಕೊಳ್ಳುತ್ತೇನೆ."

ಮೀರ ಶಾಮುವಿನೆದುರಿಗೆ ತಟ್ಟೆ ಇಟ್ಟು ಒಳಗೆ ಹೋದಳು. ಶಾಮು ಚಿಗುರೆಲೆಗೆ ಸುಣ್ಣ ಬಳಿದು ಒಂದೊಂದಾಗಿ ಎಲೆಗಳನ್ನು ಅಗಿಯತೊಡಗಿದ. ಒಂದು ಗಳಿಗೆಯಲ್ಲಿ ತುಂಬಿದ್ದ ತಟ್ಟೆ ಬರಿದಾಯಿತು.

"ಇನ್ನೊಂದು ಸ್ವಲ್ಪ ಎಲೆ ತರಿಸಲೇ?" ಎಂದು ಹೇಳಿ ಕೃಷ್ಣಪ್ಪನವರು ಶಾಮುವಿನ ಉತ್ತರಕ್ಕೆ ಕಾಯದೆ ಮೀರಳಿಗೆ ಮತ್ತೊಂದಿಷ್ಟು ಎಲೆ ತರಲು ಹೇಳಿದರು.

"ನಿದ್ದೆ ಬಂದರೆ ಹಾಗೇ ಸ್ವಲ್ಪ ಮಲಗು ಶಾಮಣ್ಣ."

ಶಾಮು ಎದ್ದು ತನ್ನ ಹಾಸಿಗೆಯಿರಿಸಿದ್ದ ರೂಮಿಗೆ ಹೋಗಿ ಹಾಸಿಗೆಯನ್ನು ಬಿಚ್ಚಿ ಹಾಗೆಯೇ ಉರುಳಿದ.

"ಸುಬ್ಬು, ನಾನೇಕಪ್ಪ ಹೂ ಮುಡಿದುಕೋಬಾರದು" ಎಂಬ ಮಾತುಗಳು ಪಕ್ಕದ ಕೊಠಡಿಯಿಂದ ಕೇಳಿ ಬಂದುವು. ಶಾಮು ತಟ್ಟನೆ ಎದ್ದು ಕುಳಿತು ಅನಂತರ

ಆ ಮಾತುಗಳನ್ನು ಆಲಿಸುತ್ತ ಹಾಗೇ ಮಲಗಿ ಕಣ್ಣು ಮುಚ್ಚಿದ. ನಿದ್ದೆಯಲ್ಲಿ ಅವನಿಗೊಂದು ಕನಸು ಬಿತ್ತು. ಕನಸಿನಲ್ಲಿ ಅವನಿಗೆ ತಾನೊಂದು ಹೂವಿನ ತೋಟದಲ್ಲಿ ತಿರುಗಾಡುತ್ತಿರುವಂತೆ ಭಾವನೆ. ಸುಂದರವಾದ ಹುಡುಗಿಯೊಬ್ಬಳು ಹೂವಿಲ್ಲದ ತನ್ನ ಜಡೆಯನ್ನು ತೋರಿಸಿ "ನಾನೇಕೆ ಹೂ ಮುಡಿಯಬಾರದು?" ಎಂದು ಪ್ರಶ್ನಿಸುತ್ತಾಳೆ.

"ಇಲ್ಲಿರುವ ಹೂವೆಲ್ಲ ನೀನೇ ಮುಡಿದುಕೋ" ಎನ್ನುತ್ತ ಶಾಮು ಹೂವಿನ ಗೊಂಚಲನ್ನು ಕಿತ್ತು ಅವಳಿಗೆ ಮುಡಿಸಿದ.

ಶಾಮುವಿಗೆ ತಕ್ಷಣ ಎಚ್ಚರವಾಯಿತು. ಆಗಲೇ ಮಧ್ಯಾಹ್ನ ಮೂರು ಗಂಟೆಯಾಗಿತ್ತು. ಶಾಮು ಹಾಸಿಗೆಯ ಮೇಲೆ ಎದ್ದು ಕುಳಿತು ಕಣ್ಣುಜ್ಜಿದ. ಬಾಗಿಲ ಬಳಿ ಕೈಬಳೆಗಳ ಸದ್ದು ಕೇಳಿಸಿದವು. ಸುಂದರ ಮುಖವೊಂದು ಬಾಗಿಲಿನೊಳಗೆ ಹಣಕಿ ನೋಡಿತು. ವಿಶಾಲವಾದ ಒಂದು ಜೊತೆ ಕಪ್ಪು ಕಣ್ಣುಗಳು ಶಾಮುವಿನೆಡೆ ನೋಡಿ "ಒಳಗೆ ಬರಬಹುದೇ?" ಎಂದು ಪ್ರಶ್ನಿಸಿದವು.

"ಬನ್ನಿ." ಶಾಮು ಗಾಬರಿಯಿಂದಲೂ, ನಾಚಿಕೆಯಿಂದಲೂ ಎದ್ದು ಹಾಸಿಗೆ ಸುತ್ತಿದ.

ಮೀರ ಒಳಗೆ ಬಂದಳು.

ಶಾಮು ಮೀರಳನ್ನು ಮೊದಲನೆಯ ಬಾರಿ ಸರಿಯಾಗಿ ನೋಡಿದ.

ಕೆಂಪು ಮುಖಕ್ಕೆ ಕಪ್ಪು ಚೌಕಟ್ಟು ಹಾಕಿದಂತಿದ್ದ ಅವಳ ಗುಂಗುರು ಕೂದಲು ಅವನಿಗೆ ಬಹಳ ಆಕರ್ಷಣೀಯವಾಗಿ ತೋರಿತು. ದೊಡ್ಡ ಕಣ್ಣುಗಳ ಹೊಳಪನ್ನೂ, ಪುಟ್ಟಬಾಯಿಯ ಸೊಬಗನ್ನೂ, ದೇಹದ ಮಾಟವನ್ನೂ ಶಾಮು ನಿಧಾನವಾಗಿ ನೋಡತೊಡಗಿದ. ಅಪೂರ್ವ ವಸ್ತು ತನ್ನೆದುರಿಗೆ ನಿಂತಿರುವ ಭಾವನೆ ಅವನಿಗೆ. ತನ್ನ ಸ್ವಭಾವವಾದ ಸಂಕೋಚವನ್ನು ಮೂಲೆಗೊತ್ತಿ, ಮುದ್ದಾದ ಹುಡುಗಿಯೊಬ್ಬಳನ್ನು ನೋಡುವ ಸೌಂದರ್ಯದ ಆರಾಧಕನಾದ.

ಮೀರ, ಶಾಮುವಿನ ಲಜ್ಜಾರಹಿತ ನೋಟದೆದುರಿಗೆ ತಲೆಬಾಗಿದಳು. ಅವಳ ಸ್ವಭಾವವಾದ ಧೈರ್ಯ, ಮಾತುಗಾರಿಕೆ, ದಾಷ್ಟಿಕ, ಶಾಮುವಿನ ತೀಕ್ಷ್ಣ ನೋಟದೆದುರಿನಲ್ಲಿ ಹಿಮ್ಮೆಟ್ಟಿದವು. ಮೀರಳಿಗೆ ಮೊದಲನೆಯ ಸಲ ತಾನು ಹೆಂಗಸೆಂಬುದರ ಅರಿವಾಯಿತು. ಸೆರಗನ್ನು ಸರಿಪಡಿಸಿಕೊಂಡು,

'ಈ ದಿನ ನೀವು ಇಲ್ಲೇ ಇರುತ್ತೀರಲ್ಲವೇ?" ಎಂದಳು.

"ಹ್ಞೂ."

"ನಮ್ಮ ಕಾಲೇಜಿನಲ್ಲಿ ಬಡ ವಿದ್ಯಾರ್ಥಿನಿಯರಿಗಾಗಿ ಮನರಂಜನೆಯ ಕಾರ್ಯಕ್ರಮ ಇಟ್ಟುಕೊಂಡಿದ್ದಾರೆ. ನೀವು ಒಂದು ಟಿಕೇಟು ತೆಗೆದುಕೊಳ್ಳುವಿರಾ?"

"ಏನೇನು ಕಾರ್ಯಕ್ರಮವಿದೆ?"

"ನರ್ತನ, ಟ್ಯಾಬ್ಲೋ, ನಾಟಕ, ಆರ್ಕೆಸ್ಟ್ರಾ ಎಲ್ಲಾ ಇದೆ."

"ಒಂದು ಟಿಕೀಟು ಕೊಡಿ."

ಮೀರ ಉತ್ಸಾಹದಿಂದ ಕೈಲಿ ಹಿಡಿದ್ದ ಚೀಲವನ್ನು ತೆಗೆಯುತ್ತಾ "ಎಷ್ಟರ ಟಿಕೀಟು ಹರಿಯಲಿ?" ಎಂದಳು. ಈಗ ಅವಳ ಸಂಕೋಚ ಮರೆಯಾಗಿತ್ತು. ವ್ಯಾಪಾರಿ ತನ್ನ ಗಿರಾಕಿಯನ್ನು 'ಯಾವ ಸಾಮಾನು ಬೇಕು' ಎಂದು ಪ್ರಶ್ನಿಸುವ ಭಾವ ಅವಳ ದನಿಯಲ್ಲಡಗಿತ್ತು.

"ಎಷ್ಟರ ಟಿಕೀಟುಗಳಿವೆ?"

"ಒಂದು ರೂಪಾಯಿನಿಂದ ಹಿಡಿದು ಇಪ್ಪತ್ತು ರೂಪಾಯಿನವರೆಗೆ ಇದೆ."

"ನನಗೆ ಐದು ರೂಪಾಯಿನ ಟಿಕೀಟು ಸಾಕು."

ಮೀರ ತಲೆ ಎತ್ತಿ ಬಲವಂತ ಮಾಡುವ ದನಿಯಿಂದ,

"ಇಪ್ಪತ್ತು ರೂಪಾಯಿನ ಟಿಕೀಟನ್ನು ಹರಿಯುತ್ತೇನೆ" ಎಂದಳು. ಹಾಗೆ ಹೇಳುವಾಗ ಅವಳ ಕಣ್ಣುಗಳು ಶಾಮುವಿನ ಎಡಗೈಲಿದ್ದ ಚಿನ್ನದ ಗಡಿಯಾರದ ಮೇಲೆ ನೆಟ್ಟಿದ್ದವು. ಚೆಲುವೆಯಾದ ಹುಡುಗಿಯ ಮಾತಿಗೆ ಪ್ರತಿ ಹೇಳುವ ಕಲ್ಲು ಮನಸ್ಸಿಲ್ಲದೆ ಶಾಮು,

"ಹಾಗೇ ಆಗಲಿ" ಎಂದ.

ಮೀರ ಉತ್ಸಾಹದಿಂದ ಟಿಕೀಟು ಪುಸ್ತಕ ತೆಗೆದು ಒಂದು ಟಿಕೀಟನ್ನು ಹರಿದು ಶಾಮುವಿನ ಕೈಗೆ ಕೊಟ್ಟಳು. ಶಾಮು ಕೋಟಿನಿಂದ ಪರ್ಸು ತೆಗೆದು ಹತ್ತು ರೂಪಾಯಿನ ಎರಡು ನೋಟುಗಳನ್ನು ಮೀರಳಿಗೆ ಕೊಟ್ಟ.

"Thanks" ಎಂದು ಹೇಳಿ ಮೀರ ಹೊರಟುಹೋದಳು.

ಮೀರ ಹೊರಟುಹೋದ ಮೇಲೆ ಶಾಮುವಿನ ಮನಸ್ಸಿಗೆ ಮಂಕು ಕವಿಯಿತು. ಅವನು ಹಳ್ಳಿಯವನಾದುದರಿಂದ ಸಾಮಾನ್ಯವಾಗಿ ಹುಡುಗಿಯರೊಡನೆ ಮಾತನಾಡಲು ಹಿಂಜರಿಯುತ್ತಿದ್ದ. ಆದರೆ ಮೀರಳನ್ನು ಮಾತನಾಡಿಸುವಾಗ ಶಾಮುವಿಗೆ ಸ್ವಲ್ಪವೂ ಸಂಕೋಚವಾಗಲಿಲ್ಲ. ಅವಳೆದುರಿಗೆ ತನ್ನ ಧೈರ್ಯ ಪ್ರದರ್ಶನ ಮಾಡುವುದು ಅವನಿಗೇ ಆಶ್ಚರ್ಯವನ್ನುಂಟು ಮಾಡಿತ್ತು. ಮೀರಳನ್ನು ನೋಡಿದಾಗ ಅವಳು ಅಪರಿಚಿತಳು ಎಂಬ ಭಾವನೆ ಅವನಿಗೆ ಬರಲಿಲ್ಲ. ತಾವಿಬ್ಬರೂ ಬಹಳ ವರ್ಷಗಳಿಂದಲೂ ಚಿರಪರಿಚಿತರು ಎಂಬ ಭಾವನೆ ಮೂಡಿ ಅವನು ಧೈರ್ಯವಾಗಿ ಮಾತನಾಡಿದ್ದ. ತಾನು ಕನಸಿನಲ್ಲಿ ಕಂಡ ಬರಿತಲೆಯ ಹುಡುಗಿಯ ಮುಖಕ್ಕೂ, ಮೀರಳ ಮುಖಕ್ಕೂ ಸಾಮ್ಯವಿರುವುದನ್ನು ಕಂಡು ಶಾಮುವು ಚಕಿತನಾದ.

ಮೀರ ಸಂಜೆ ನಾಲ್ಕು ಗಂಟೆಗೆ ಮನೆ ಬಿಟ್ಟು ಹೊರಟಳು. ಹೊರಗೆ ಹೊರಡುವುದಕ್ಕೆ ಮುನ್ನ ಶಾಮುವಿನ ರೂಮಿನ ಬಾಗಿಲ ಬಳಿ ನಿಂತು,

"ನಿಮಗೆ ಕಾಲೇಜು ಎಲ್ಲಿದೆ ಅಂತ ಗೊತ್ತಿರಬಹುದು" ಎಂದಳು.

ಶಾಮು ಅವಳ ಚೆಂದವನ್ನು ಹೀರುತ್ತ "ಸರಿಯಾಗಿ ಗೊತ್ತಿಲ್ಲ" ಎಂದ.

"ಶ್ರೀಪಾದು, ಶ್ರೀಹರಿ ಬರುತ್ತಾರೆ. ಅವರೊಡನೆ ನೀವೂ ಬನ್ನಿ. ಬರಲು ಮರೆಯಬೇಡಿ" ಎಂದು ಎರಡು ಬಾರಿ ಒತ್ತಿ ಹೇಳಿ ಹೋದಳು.

ಎಣ್ಣೆ ನೀರಿನಿಂದ ಅವಳ ಅಂಕೆ ಮೀರಿ ಹಾರಾಡುತ್ತಿದ್ದ ಅಲೆಗೂದಲನ್ನೂ, ಉತ್ಸಾಹದಿಂದ ಕಳೆಯೇರಿದ್ದ ಮುಗ್ಧ ಮುಖವನ್ನೂ ಎಂದಿಗಿಂತಲೂ ಸ್ವಲ್ಪ ಹೆಚ್ಚು ಗಮನವಿಟ್ಟು ಅಲಂಕಾರ ಮಾಡಿಕೊಂಡಿದ್ದ ರೂಪಸಿಯ ಮುಖವನ್ನೂ ಶಾಮು ಬಾರಿ ಬಾರಿಗೂ ನೆನೆಯುತ್ತಿದ್ದ.

ಅವಳ ಒತ್ತಾಯದ ಕರೆಗೆ ಸರಿಯಾಗಿ ಉತ್ತರ ಕೊಡುವ ತ್ರಾಣ ಸಹ ಅವನಿಗುಳಿಯಲಿಲ್ಲ.

ಸಂಜೆ ಶ್ರೀಪಾದು, ಶ್ರೀಹರಿಯೊಡನೆ ಕಾಲೇಜಿಗೆ ಹೊರಡಲು ಶಾಮು ಸಿದ್ಧನಾದ.

ಕೃಷ್ಣಪ್ಪನವರು ಆಶ್ಚರ್ಯದಿಂದ "ಎಲ್ಲಿಗೆ ಶಾಮಣ್ಣ?" ಎಂದರು.

"ಕಾಲೇಜಿನಲ್ಲಿ ಇವತ್ತು ನಾಟಕವಿದೆಯಂತೆ ನಿಮ್ಮ ಮಗಳೂ ನನಗೂ ಒಂದು ಟಿಕೀಟು ಮಾರಿದಾರೆ...."

"ಹಾಗೋ. ಅಬ್ಬ! ಈ ತಂತ್ರದಲ್ಲಿ ನಮ್ಮ ಮೀರಾನ ಬಿಟ್ಟರೆ ಬೇರೆ ಯಾರೂ ಇಲ್ಲ. ಅಗತ್ಯವಾಗಿ ಹೋಗಿಬನ್ನಿ. ಕಾಲೇಜಿನ ಅಚ್ಚುಮೆಚ್ಚಿನ ನಟಿ ನಮ್ಮ ಮೀರಾ."

ಕೃಷ್ಣಪ್ಪನವರು ಹೆಮ್ಮೆಯಿಂದ ಮೀರಳನ್ನು ಹೊಗಳಿದರು.

ಶ್ರೀಪಾದೂಗೆ ಮೀರಳ ನಾಟಕ ನೋಡುವುದೆಂದರೆ ಕಲ್ಲುಸಕ್ಕರೆ ತಿಂದ ಹಾಗೆ. ದಾರಿಯುದ್ದಕ್ಕೂ ಮೀರಳ ಅಭಿನಯ ಹೊಗಳುತ್ತ ಬಂದ.

"ಮೀರ ತುಂಬಾ ಚೆನ್ನಾಗಿ ಮಾಡ್ತಾಳೆ ಶಾಮಣ್ಣ. ಕಾಲೇಜಿನ ಎಲ್ಲಾ ನಾಟಕ ದಲ್ಲೂ ಅವಳೇ ನಾಯಕಿ."

"ಹಾಗೇನು? ಹಾಗಾದರೆ ಇವತ್ತಿನ ನಾಟಕದಲ್ಲಿ ಅವರೂ ಮಾಡಿ ದ್ದಾರೇನು?"

"ಮೀರಳಿಲ್ಲದ ನಾಟಕ ಅಂದರೆ ಚಂದ್ರನಿಲ್ಲದ ಆಕಾಶವಿದ್ದ ಹಾಗೆ ಶಾಮಣ್ಣ. ಅವಳಿಲ್ಲದೇ ನಾಟಕ ಆಡುವುದು ಸಾಧ್ಯವೇ ಇಲ್ಲ."

"ಇವತ್ತಿನ ನಾಟಕ ಯಾವುದು?"

"ಇವತ್ತು 'ಹೂವಿನ ಆಸೆ' ಎನ್ನುವ ನಾಟಕ ಆಡುತ್ತಾರೆ. ಮೀರಾ ಅದರ

ನಾಯಕಿ. 'ಸೀತೆ'ಯ ಪಾತ್ರ ವಹಿಸುತ್ತಾಳೆ."

"ನಾಯಕ ಯಾರು?" ಶಾಮು ಕೊಂಚ ಕಾತುರ, ಅಸಮಾಧಾನದಿಂದ ಪ್ರಶ್ನಿಸಿದ.

"ಸುಬ್ಬರಾಯರ ಮಗಳು ನರ್ಮದಾ ನಾಯಕ 'ಸುಬ್ಬು'ವಿನ ಪಾತ್ರ ವಹಿಸಿದಾಳೆ."

"ಬರೀ ಕಾಲೇಜಿನ ಹುಡುಗಿಯರೇ ಆಡುತ್ತಾರೆ ಅಂತ ತೋರುತ್ತದೆ."

ಶಾಮುವಿನ ದನಿಯಲ್ಲಿ ಸಮಾಧಾನವಿತ್ತು.

ಕಾಲೇಜಿನ ಮುಂಭಾಗ ತಳಿರುತೋರಣಗಳಿಂದ ಅಲಂಕೃತವಾಗಿತ್ತು.

ಬಣ್ಣಬಣ್ಣದ ಸೀರೆಯುಟ್ಟು ಹುಡುಗಿಯರು ಕಾಲೇಜಿಗೆ ಜೀವಕಳೆ ತುಂಬಿ ಓಡಾಡುತ್ತಿದ್ದರು. ಎಲ್ಲೆಲ್ಲಿ ನೋಡಿದರೂ ವಿವಿಧ ರಂಗಿನ ಜಾರ್ಜೆಟ್, ಸಿಲ್ಕ್, ಕ್ರೇಪು, ರೇಷ್ಮೆ ಸೀರೆಗಳುಟ್ಟ ಹುಡುಗಿಯರು ಬಣ್ಣದ ಚಿಟ್ಟೆಗಳಂತೆ ಅತ್ತಿಂದಿತ್ತ ಹಾರಾಡುತ್ತಿದ್ದರು.

ಶ್ರೀಪಾದು, ಶ್ರೀಹರಿ ತಮ್ಮ ಮೂರು ರೂಪಾಯಿನ ಟಿಕೀಟು ತೋರಿಸಿದೊಡನೆ ನೀಲಿ ಮೈಸೂರು ಕ್ರೇಪ್ ಉಟ್ಟಿದ್ದ ನಿಡುಜಡೆಯ ಹುಡುಗಿ "ಬನ್ನಿ ಜಾಗ ತೋರಿಸುತ್ತೇನೆ" ಎಂದು ಮುಂದೆ ಹೋದಳು. ಶ್ರೀಪಾದು, ಶ್ರೀಹರಿ ಅವಳನ್ನು ಹಿಂಬಾಲಿಸಿದರು.

ಶಾಮು ಎಲ್ಲಿಗೆ ಹೋಗುವುದೆಂದು ತೋರದೆ, ಸುಮ್ಮನೆ ನಿಂತು ಸುತ್ತ ನೋಡುತ್ತಿದ್ದ. ಹಳದಿಯ ಸಿಲ್ಕ್ ಸೀರೆಯುಟ್ಟಿದ್ದ ಎರಡು ಜಡೆಯ ಹುಡುಗಿ ಅಲ್ಲೇ ಓಡಾಡುತ್ತಿದ್ದರೂ ಅವಳನ್ನು ಕರೆದು ಕೇಳಲು ಶಾಮುವಿಗೆ ಸಂಕೋಚವಾಯಿತು. ಆ ಹುಡುಗಿಯರ ನಗು, ಮಾತು, ಕೂಗಾಟ, ಉಡುಪಿನ ವೈಖರಿ ನೋಡಿ ಶಾಮು ಬೆರಗಾಗಿ ನಿಂತಿದ್ದ.

ನಕ್ಷತ್ರಗಳು ತುಂಬಿದ ಆಕಾಶದಲ್ಲಿ ಪೂರ್ಣಿಮೆಯ ಚಂದ್ರ ಬೇಗ ಕಣ್ಣಿಗೆ ಬೀಳುವಂತೆ ಹುಡುಗಿಯರ ಆ ಸಮೂಹದಲ್ಲಿ ಶಾಮು ಮೀರಳನ್ನು ತಟ್ಟನೆ ಗುರುತಿಸಿದ. ಎಲ್ಲರಿಗಿಂತಲೂ ಎತ್ತರವಾಗಿದ್ದಳು ಅವಳು. ಗಂಭೀರವಾಗಿ ನಡೆಯುತ್ತ ಆಗಾಗ್ಗೆ ಪಕ್ಕದಲ್ಲಿ ಬರುತ್ತಿದ್ದ ಹುಡುಗಿಯರೊಡನೆ ಏನೋ ಹೇಳಿಕೊಂಡು ನಗುತ್ತಿದ್ದ ಮೀರ, ಶಾಮುವಿನ ಹತ್ತಿರ ಬರುವವರೆಗೂ ಅವನನ್ನು ನೋಡಿರಲಿಲ್ಲ. ತೀರ ಹತ್ತಿರ ಬಂದಾಗ ತಲೆಯೆತ್ತಿ ಶಾಮು ತನ್ನನ್ನು ನೋಡುತ್ತಿರುವುದನ್ನು ನೋಡಿ ಮುಗುಳ್ನಗೆ ಬೀರಿ, ಹತ್ತಿರ ಬಂದು,

"ಯಾವಾಗ ಬಂದಿರಿ?" ಎಂದಳು.

"ನಾನು ಬಂದು ಹತ್ತು ನಿಮಿಷವಾಯಿತು."

"ಶ್ರೀಪಾದು, ಶ್ರೀಹರಿ ಎಲ್ಲಿ?"

"ಅವರು ಒಳಗೆ ಹೋಗಿ ಕುಳಿತಿದ್ದಾರೆ."

ಮೀರ ತನ್ನ ಜೊತೆಯಲ್ಲಿದ್ದ ಹುಡುಗಿಯ ಕಡೆ ತಿರುಗಿ "ಚಂಪಾ ಬಂದೆ. ಒಂದು ನಿಮಿಷ ತಾಳು" ಎಂದು ಶಾಮುವಿನ ಕಡೆ ತಿರುಗಿ "ಬನ್ನಿ" ಎಂದಳು.

ಮೀರ ಮುಂದುಗಡೆ ಹಾಕಿದ್ದ ಸೋಫಾದ ಬಳಿ ಶಾಮುವನ್ನು ಕರೆದು ಕೊಂಡು ಹೋದಳು. ಶಾಮು ಸೋಫಾದ ಮೇಲೆ ಕುಳಿತುಕೊಂಡ ಕೂಡಲೇ

"ನಾನಿನ್ನು ಹೋಗಿಬರಲಾ?" ಎಂದು ಹೇಳುತ್ತ ಮರೆಯಾದಳು.

ಚಂಪಾ ಮೀರಳಿಗಾಗಿ ಕಾಯುತ್ತಾ ನಿಂತಿದ್ದಳು. ಮೀರ ಬಂದೊಡನೆ

"ಮೀರಾ, ಯಾರೇ ಅದು?" ಎಂದಳು.

"ನಮ್ಮ ದೊಡ್ಡಪ್ಪನ ಸ್ನೇಹಿತನ ಮಗ."

"ಅಬ್ಬ! ಎಂತಹ ಪರ್ಸನಾಲಿಟಿ ಇದೆ! ನಮ್ಮ ಪೃಥ್ವೀರಾಜ್ ಕೂಡ ಈತನ ಮುಂದೆ ನಾಚಬೇಕು. ಆ ಮಸಲ್ಸು, ಆ ಕಲರು, ಹೈಟು...."

ಮೀರಾ ಅರ್ಧದಲ್ಲಿಯೇ "ಸಾಕು ನಿಲ್ಲಿಸು, ಚಂಪಾ. ನಿನ್ನ ಮೆಚ್ಚುಗೆ ನನ್ನೆದುರಿಗೆ ಪ್ರದರ್ಶಿಸಿದರೆ ಏನು ಪ್ರಯೋಜನ? ಅವರಿಗೆ ಇಂಟ್ರಡ್ಯೂಸ್ ಮಾಡ್ತೀನಿ. ಬಾ" ಎಂದಳು.

"ಬೇಡ ತಾಯಿ. ನೀನು 'ಜಲಸ್' ಆಗಬಹುದು" ಎಂದಳು ಚಂಪಾ.

ಮೀರಾ ನಕ್ಕು "ಅಸಾಧ್ಯವಾದ ಮಾತನಾಡಬೇಡ" ಎಂದಳು.

ಆರು ಗಂಟೆಗೆ ಸರಿಯಾಗಿ ಕಾರ್ಯಕ್ರಮ ಮೊದಲಾಯಿತು. ಪ್ರಾರ್ಥನೆಯಾದ ನಂತರ ಅಧ್ಯಕ್ಷರು ಆಟದಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದರು. ಮೀರಾ ನಾಲ್ಕೈದು ಆಟಗಳಲ್ಲಿ ಬಹುಮಾನ ಪಡೆದಿದ್ದಳು. ವಾರ್ಷಿಕ ವರದಿಯನ್ನು ಮೀರ ಓದಿದ ನಂತರ ಸಾಮೂಹಿಕ ನರ್ತನವಾಯಿತು. ಆರ್ಕೆಸ್ಟ್ರಾ, ಟ್ಯಾಬ್ಲೋ ಮುಗಿದ ಕೂಡಲೇ 'ಹೂವಿನ ಆಸೆ' ನಾಟಕ ಪ್ರಾರಂಭವಾಯಿತು.

ಮೊದಲನೆಯ ದೃಶ್ಯದಲ್ಲಿ ನಾಯಕ 'ಸುಬ್ಬು' ಪುಸ್ತಕ ಓದುತ್ತ ಕುಳಿತಿದ್ದ. ಬಾಲವಿಧವೆ ಸೀತೆ ರಂಗವನ್ನು ಮೆಲ್ಲನೆ ಪ್ರವೇಶಿಸಿದಳು. ಸೀತೆ ಆಡಂಬರವಿಲ್ಲದ ಸರಳವಾದ ಬಿಳಿ ಸೀರೆ, ಬಿಳಿ ರವಿಕೆ ತೊಟ್ಟು, ಸಡಿಲವಾಗಿ ಜಡೆ ಹಾಕಿಕೊಂಡು ರಂಗದ ಮೇಲೆ ಸುಳಿದಳು. ಬೆಕ್ಕಿನಂತೆ ಹೆಜ್ಜೆಯಿಡುತ್ತ ಹಿಂದಿನಿಂದ ಬಂದು ಸುಬ್ಬುವಿನ ಕಣ್ಣುಗಳನ್ನು ಮುಚ್ಚಿದಲು.

ಮೀರಾ ರಂಗದ ಮೇಲೆ ಬಂದೊಡನೆ ಶಾಮು ನೆಟ್ಟಗೆ ಕುಳಿತು ನಾಟಕ ನೋಡತೊಡಗಿದ. ಪ್ರತಿಯೊಂದು ದೃಶ್ಯವೂ ಮೀರಾಳ ಅಭಿನಯದಿಂದ ತುಂಬಿ ಹೋಗಿತ್ತು. ಶಾಮುವಿನ ಮನಸ್ಸಿನಲ್ಲಿ ಮೀರಾಳ ಪಾತ್ರ ಅಚ್ಚಳಿಯದೆ ನಿಂತಿತ್ತು.

ಕೊನೆಯ ದೃಶ್ಯದಲ್ಲಿ ಮೀರ ಶಾಮುವಿನೆಡೆ ನೋಡಿ ನಕ್ಕಂತೆ ಭಾಸವಾಯಿತು. ನಾಟಕ ಮುಗಿಯಿತು. ನಾಟಕಶಾಲೆ ಜನರ ಚಪ್ಪಾಳೆಗಳಿಂದ ತುಂಬಿ ಹೋಯಿತು. ಜನರು ಒಬ್ಬೊಬ್ಬರಾಗಿ ಹೊರಡತೊಡಗಿದರು. ಶಾಮು ಎದ್ದುನಿಂತು ಹೊರಡುವಷ್ಟರಲ್ಲಿ ಮೀರಾ ಒಳಗಿನಿಂದ ಧಾವಿಸಿ ಬಂದು ಶಾಮುವಿನ ಬಳಿ ನಿಂತು ತನ್ನ ಕೈಲಿ ಹಿಡಿದಿದ್ದ ಬಹುಮಾನದ ಪುಸ್ತಕಗಳನ್ನು ಅವನ ಕೈಲಿ ಕೊಟ್ಟು,

"ನಾನು ಬಣ್ಣ ತೆಗೆದು ಬರುತ್ತೇನೆ. ಶ್ರೀಪಾದೂಗೆ ಹೇಳಿ ಐದು ನಿಮಿಷ ಕಾದಿರಿ ಅಂತ. ತಮಗೆ ಇರಲು ಸಾಧ್ಯವೇ?"

"ನಿಧಾನವಾಗಿ ಬನ್ನಿ. ಮನೆಗೆ ಹೋಗಲು ಆತುರವಿಲ್ಲ."

ಮೀರಾ ಕೃತಜ್ಞತೆಯಿಂದ ವಂದನೆಯರ್ಪಿಸಿ ಒಳಗೆ ಹೋದಳು.

ಶಾಮು ಮೀರಾಗೆ ಬಹುಮಾನವಾಗಿ ಬಂದಿದ್ದ ಪುಸ್ತಕದ ಹಾಳೆಗಳನ್ನು ತಿರುವಿ ಹಾಕುತ್ತ ನಿಂತಿದ್ದ. ಶ್ರೀಪಾದು ಶಾಮುವಿನ ಬಳಿ ಬಂದು,

"ಹೋಗೋಣವೇ ಶಾಮಣ್ಣ?" ಎಂದ.

"ನಿಮ್ಮ ಅಕ್ಕನೂ 'ಬರುತ್ತೇನೆ. ಸ್ವಲ್ಪ ಹೊತ್ತು ಕಾದಿರಿ' ಅಂತ ಹೇಳಿ ಹೋದರು.

ಶಾಮು, ಶ್ರೀಹರಿ, ಶ್ರೀಪಾದು ಮೀರಳಿಗಾಗಿ ಕಾಯುತ್ತಾ ನಿಂತಿದ್ದರು.

ಮೀರಾ ಬಣ್ಣ ತೆಗೆದು ಬರಲು ಸ್ವಲ್ಪ ಸಾವಕಾಶವಾಯಿತು.

"ಕ್ಷಮಿಸಿ, ನಿಮ್ಮನ್ನು ಬಹಳ ಹೊತ್ತು ಕಾಯಿಸಿದೆ" ಎನ್ನುತ್ತ ಮೀರಾ ಬಂದಳು.

"ಹಾಗೇನಿಲ್ಲ."

"ಶ್ರೀಪಾದು, ನಾಟಕ ಹೇಗಿತ್ತೋ? ನೀವು ಎಲ್ಲಿ ಕೂತಿದ್ದಿರೋ ತಿಳಿಯಲಿಲ್ಲ. ನಿನ್ನ, ಶ್ರೀಹರೀನ ನೋಡಲೇ ಇಲ್ಲ. ನಿಮ್ಮನ್ನು ಮಾತ್ರ ನೋಡಿದೆ."

"ನಾವು ಹಿಂದೆ ಕುಳಿತಿದ್ದೆವು ಮೀರಾ. ಆದುದರಿಂದ ನಿನಗೆ ಕಾಣಿಸಲಿಲ್ಲ. ನಾಟಕ ತುಂಬಾ ಚೆನ್ನಾಗಿತ್ತು. ನೀನಿದ್ದ ಮೇಲೆ ಕೇಳಬೇಕೆ?"

"ಅದೇನು, ನಾನಿದ್ದರೆ ನಾಟಕ ಕೆಡಲೇಬಾರದೇನು?"

"ನೀವು ನಾಯಕಿಯ ಪಾತ್ರ ವಹಿಸಿದ ಮೇಲೆ ನಾಟಕ ಕೆಡಲು ಸಾಧ್ಯವೇ ಇಲ್ಲ" ಶಾಮು ಹೇಳಿದ.

ಮೀರಳ ಮುಖ ಆನಂದದಿಂದ ಅರಳಿತು. ಆದರೂ ಔಪಚಾರಿಕವಾಗಿ ಹೇಳಿದಳು,

"ಬಹಳ ದೊಡ್ಡ ಮಾತಾಯಿತು."

ಮಾರನೆಯ ದಿನ ಬೆಳಿಗ್ಗೆ ಮೀರ ಏಳುವುದಕ್ಕೆ ಮುನ್ನ ತನ್ನ ಹಳ್ಳಿಗೆ ಹೊರ

ಟಿದ್ದ ಶಾಮು ಕೃಷ್ಣಪ್ಪನವರಿಂದ ಬೀಳ್ಕೊಂಡಾಗ ಅವನ ಕಣ್ಣುಗಳು ಮೀರಳಿಗಾಗಿ ಹಂಬಲಿಸಿದವು.

ಅದೇ ಗಳಿಗೆಯಲ್ಲಿ ಮೀರ ಹಾಸಿಗೆಯಲ್ಲಿ ಬೆಚ್ಚಗೆ ಹೊದೆದುಕೊಂಡು ಸುಖನಿದ್ರೆಯಲ್ಲಿ ಮೈಮರೆತಿದ್ದಳು.

ಶಾಮು ಕಮಲಮ್ಮನವರಿಗೂ ಹೇಳಿ ಮತ್ತೊಂದು ಬಾರಿ ಮನೆಯಲ್ಲೆಲ್ಲಾ ಕಣ್ಣು ಹರಿದಾಡಿಸಿ ಹೊರಟುಹೋದ.

ಶಾಮು ಹೊರಟುಹೋದೊಡನೆ ಕೃಷ್ಣಪ್ಪನವರು ಆತುರದಿಂದ ಅಡಿಗೆ ಮನೆಯೊಳಗೆ ಬಂದರು. ಕಮಲಮ್ಮನವರು ಕಾಫಿ ಕುಡಿದ ಲೋಟಗಳನ್ನು ತೊಳೆದಿಡುತ್ತಿದ್ದರು.

"ಕಮಲೂ, ನಮ್ಮ ಮೀರಾಗೆ ಎಷ್ಟು ವರ್ಷವಾಯಿತು?"

"ಹದಿನೇಳು ತುಂಬಿತು."

"ಅಬ್ಬ! ಆಗಲೇ ಹದಿನೇಳು ವರ್ಷವಾಯಿತೆ? ಅಂದರೆ ಮದುವೆಗೆ ಸರಿಯಾದ ವಯಸ್ಸು. ಅಲ್ಲವೇ?"

"ಛೇ, ಇನ್ನೂ ಮೀರ ಮಗು. ನಾಟಕದಲ್ಲಿ ಪಾರ್ಟು ಮಾಡಲಿ, ಕಾಲೇಜಿಗೆ ಹೋಗಲಿ. ಬಣ್ಣ ಬಳಿದುಕೊಂಡು ಕುಣಿಯಲಿ ಅಂತ ಮನಸ್ಸು ಬಂದ ಹಾಗೆ ಬೆಳೆಸಿದಿರ ಆ ಮಗೂನ. ಈಗಲೇ ಮದುವೆ ಯಾಕೆ?" ಕಮಲಮ್ಮನವರು ಮೂದಲಿಸಿದರು.

"ಕೋಪ ಮಾಡಿಕೊಳ್ಳಬೇಡ ಕಮಲೂ. ಈಗ ಅವಳಿಗೆ ಲಗ್ನ ಮಾಡಬೇಕೆನಿಸಿದೆ."

"ಸದ್ಯ! ಈಗಲಾದರೂ ಹಾಗೆ ತೋರಿತಲ್ಲ. ಈಗೆರಡು ಮೂರು ವರ್ಷದಿಂದ ನಾನು ಒಂದೇ ಸಮ ಮದುವೆ ಮಾಡಿ ಅಂತ ಹಾತೊರೆದುಕೊಂಡೆ. ಈ ಮನೇಲಿ ನನ್ನ ಮಾತಿಗೆ ಏನು ಬೆಲೆ? ನೀವು, ಗೋಪಿ ಅವಳಿಗೆ ಅತಿ ಸಲಿಗೆ ಕೊಟ್ಟು ಅಟ್ಟದ ಮೇಲೆ ಕೂರಿಸಿದಿರಿ."

"ಇಲ್ಲ ಕಮಲೂ. ಈ ವರ್ಷ ಅವಳಿಗೆ ಮದುವೆ ಮಾಡಿಬಿಡುತ್ತೇನೆ."

ಕೃಷ್ಣಪ್ಪನವರ ದನಿಯಲ್ಲಿ ನಿರ್ಧಾರವಿತ್ತು.

"ಇದೇನು, ನಿಮ್ಮ ಎಳೆ ಕಂದನಿಗೆ ಇದ್ದಕ್ಕಿದ್ದ ಹಾಗೆ ಮದುವೆ ಮಾಡುವ ಯೋಚನೆ ಬಂದಿದೆ?"

"ಮತ್ತೇ.... ನಮ್ಮ ಶಾಮು ಏನಾಗಿದಾನೆ?"

ಕೃಷ್ಣಪ್ಪನವರು ಹೆಂಡತಿಯ ಮುಖವನ್ನು ಕಾತುರದಿಂದ ನೋಡಿದರು.

"ಹುಡುಗನಿಗೇನು? ಕೈತೊಳೆದುಕೊಂಡು ಮುಟ್ಟುವ ಹಾಗಿದಾನೆ. ಕೈ ಹಿಡಿ

ಯೋಕೆ ಹಿಂದಿನ ಜನ್ಮದಲ್ಲಿ ಗೌರೀನ ಗುಲಾಬಿ ಹೂವಿನಿಂದಲೇ ಪೂಜೆ ಮಾಡಿರಬೇಕು. ಆದರೆ ನಿಮ್ಮ ಮುದ್ದಿನ ಮಗಳು ಒಪ್ಪಬೇಕಲ್ಲ?"

"ಒಪ್ಪದೇ ಏನು ಮಾಡುತ್ತಾಳೆ ಕಮಲೂ? ಹುಡುಗ ಮನ್ಮಥನ ಹಾಗಿದ್ದಾನೆ. ತಂದೆ ಬೇಕಾದ ಹಾಗೆ ಆಸ್ತಿ ಮಾಡಿಟ್ಟಿದ್ದಾರೆ. ಒಬ್ಬನೇ ಮಗ. ಕುಳಿತು ತಿಂದರೂ ಸವೆಯದಷ್ಟು ಹಣವಿದೆ. ಆದರೆ...." ಕೃಷ್ಣಪ್ಪನವರು ರಾಗ ಎಳೆದರು.

"ಆದರೇನೂಂದ್ರೆ?"

"ಹುಡುಗ ಹೆಚ್ಚು ಓದಿದವನಲ್ಲ. ಆದರೆ ಅವನ ನಯ, ವಿನಯ ಯಾವ ವಿದ್ಯಾವಂತನಿಗಿಂತಲೂ ಕಡಿಮೆಯಿಲ್ಲ."

"ಎಲ್ಲಿಯವರೆಗೆ ಓದಿದ್ದಾನೆ?"

"ಎಸ್.ಎಸ್.ಎಲ್.ಸಿಯವರೆಗೆ ಹಾಗೂ ಹೀಗೂ ಹತ್ತಿದನಂತೆ. ಆಮೇಲೆ ಪರೀಕ್ಷೇಲಿ ಎರಡು ಸಲ ಹೋದ ಮೇಲೆ ಬಿಟ್ಟುಬಿಟ್ಟನಂತೆ."

ಕಮಲಮ್ಮನವರು ಒಲೆಗೆ ಇದ್ದಲು ತುಂಬುತ್ತ ಹೇಳಿದರು.

"ಅಯ್ಯೋ, ಬೇಕಾದಷ್ಟಾಯಿತು. ಈಗಿನ ಕಾಲದಲ್ಲಿ ಕೆಲಸ ಸಂಪಾದಿಸಿ ಕೊಡಲಾಗದ ವಿದ್ಯೆ ಕಟ್ಟಿಕೊಂಡು ಏನಾಗಬೇಕಾಗಿದೆ? ಅರಕಲಗೂಡು ರಾಮಯ್ಯನವರ ಮಗ ಸೀತಾರಾಮು ಓದು ಮುಗಿಸಿ ಯಾವುದೋ ಕಾಲವಾಯಿತು. ಇನ್ನೂ ಕೆಲಸ ಸಿಕ್ಕಿಲ್ಲ. ಹುಡುಗನಿಗೆ ರೂಪವಿದೆ, ಹಣವಿದೆ. ಮೀರಳಿಗೆ ಇನ್ನೇನಾಗಬೇಕು? ದಮ್ಮಯ್ಯಾಂತ ಒಪ್ಪಿಕೊಳ್ಳುತ್ತಾಳೆ."

"ಹಾಗಲ್ಲ ಕಮಲೂ. ಮೀರಾ ಕಾಲೇಜು ಮೆಟ್ಟಿಲು ಹತ್ತಿದವಳು. ಅವಳ ಸ್ವಭಾವ ತುಂಬಾ ಮೃದು. ಇದುವರೆಗೂ ಮನಸ್ಸಿಗೆ ಯಾವುದೊಂದು ರೀತಿಯಲ್ಲೂ ನೋವಾಗದಂತೆ ಬೆಳೆದಿದ್ದಾಳೆ. ಅವಳು ಹೆಚ್ಚು ಓದಿಲ್ಲದ ಶಾಮೂನ ಒಪ್ಪುತ್ತಾಳೆಯೇ ಎಂದು ಅನುಮಾನ."

"ಒಪ್ಪದೇ ಏನು? ವಿದ್ಯೆ ಕಲಿಯೋದು ಯಾಕೆ ಹೇಳಿ? ಹೊಟ್ಟೆ ಹೊರೆಯೋದು ಅಲ್ಲವೇ? ಬೇಕಾದ ಹಾಗೆ ದುಡ್ಡಿದ್ದರೆ ಓದಿನ ಅವಶ್ಯಕತೆಯೇ ಇಲ್ಲ. ನೀವು ಒಂದೇ ಮನಸ್ಸು ಮಾಡಿ ವಿಚಾರಿಸಿ ಮೀರಳಿಗೆ ಮದುವೆ ಮಾಡಿಬಿಡಿ."

ಕೃಷ್ಣಪ್ಪನವರು ಮನಸ್ಸಿನಲ್ಲಿ ಐದು ನಿಮಿಷ ಲೆಕ್ಕ ಹಾಕಿದರು.

"ನಾನು ವಿಚಾರಿಸುವುದೇನೋ ವಿಚಾರಿಸುತ್ತೇನೆ. ಶಾಮುವಿನ ಸೋದರಮಾವನೇ ಈಗ ಹಿರಿಯ ವ್ಯಕ್ತಿ. ಅವರ ಪರಿಚಯ ನನಗಿದೆ. ಅವರಿಗೆ ಕಾಗದ ಬರೆದು ಶಾಮುವಿನ ಜಾತಕ ತರಿಸಿಕೊಳ್ಳುತ್ತೇನೆ. ಆದರೆ ಮೀರಾ ಒಪ್ಪುವಳೋ ಇಲ್ಲವೋ ಎಂದು ಮನಸ್ಸಿಗೆ ಯೋಚನೆಯಾಗಿದೆ."

"ಅವಳನ್ನು ಒಪ್ಪಿಸುವ ಭಾರ ನನ್ನದು" ಎಂದು ಕಮಲಮ್ಮನವರು ಗಂಡನಿಗೆ

ಭರವಸೆ ಕೊಟ್ಟರು.

ಆ ದಿನ ಮಧ್ಯಾಹ್ನ ಕೃಷ್ಣಪ್ಪನವರು ಶೀನಪ್ಪನವರಿಗೆ ಕಾಗದ ಬರೆದರು:

ಮೈಸೂರು

ಮೇ ೭, ೧೯೪೫

ಶ್ರೀಮಾನ್ ಶ್ರೀನಿವಾಸಯ್ಯನವರಿಗೆ ಸಾಷ್ಟಾಂಗ ನಮಸ್ಕಾರಗಳು. ಸದ್ಯದಲ್ಲಿ ಈ ಕಾಗದ ಬರೆಯುವ ಉದ್ದೇಶವೇನೆಂದರೆ ನನಗೆ ನಿಮ್ಮ ಅಕ್ಕನ ಮಗ ಚಿ|| ಶಾಮಣ್ಣನ ಜಾತಕ ಅಗತ್ಯವಾಗಿ ಬೇಕಾಗಿದೆ. ನನ್ನ ತಮ್ಮನ ಮಗಳು ಚಿ|| ಸೌ|| ಮೀರಳನ್ನು ಶಾಮಣ್ಣನಿಗೆ ಧಾರೆಯೆರೆಯುವ ಸಂಕಲ್ಪ ಬಂದಿದೆ. ತಾವು ಕೃಪೆಯಿಟ್ಟು ಜಾತಕ ಕಳಿಸಿದರೆ, ಅದರ ಅನುಕೂಲ ನೋಡಿಕೊಂಡು ಮುಂದಿನ ವಿಚಾರ ಯೋಚಿಸುತ್ತೇನೆ. ನೀವೆಲ್ಲರೂ ದೊಡ್ಡ ಮನಸ್ಸು ಮಾಡಿ ನಮ್ಮ ಮಗುವನ್ನು ತಂದುಕೊಳ್ಳಬೇಕಾಗಿ ಸವಿನಯ ಬೇಡಿಕೆ.

ನಿಮ್ಮ ವಿಶ್ವಾಸಿ

ಕೃಷ್ಣಪ್ಪ

ಕೃಷ್ಣಪ್ಪನವರು ದೇವರನ್ನು ನೆನೆದು ಕಾಗದವನ್ನು ಟಪಾಲಿಗೆ ಹಾಕಿದರು.

ಎರಡು ದಿನದಲ್ಲಿ ಶಾಮುವಿನ ಸೋದರಮಾವ ಶೀನಪ್ಪನವರಿಂದ ಕಾಗದಕ್ಕೆ ಜವಾಬು ಬಂತು.

"ಶ್ರೀಮಾನ್ ಕೃಷ್ಣಪ್ಪನವರಿಗೆ,

ನಿಮ್ಮ ಕಾಗದ ತಲುಪಿ ಅಭಿಪ್ರಾಯವಾಯಿತು. ಚಿ|| ಶಾಮಣ್ಣನ ಜಾತಕವನ್ನು ಕಳುಹಿಸಿದ್ದೇನೆ. ಶಾಮು ಒಪ್ಪಿದರೆ ಹುಡುಗಿ ನಮ್ಮ ಮನೆ ಸೇರುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಅವನನ್ನು ಒಂದು ಮಾತು ಕೇಳಿ ನೋಡಿ."

ಎಂದು ಮುಕ್ತಾಯಗೊಳಿಸಿದ್ದರು.

ಕೃಷ್ಣಪ್ಪನವರು ಮೊದಲು ಜಾತಕ ನೋಡಿಸಿದ ನಂತರ ಶಾಮುವಿಗೆ ಕಾಗದ ಬರೆಯೋಣವೆಂದು ಸುಮ್ಮನಾದರು.

ಕಾಗದ ಕೈಲಿ ಹಿಡಿದ್ದಂತೆಯೇ "ಶ್ರೀಪಾದೂ" ಎಂದು ಕೂಗಿದರು.

"ಏನಣ್ಣಾ?"

"ರಾಮಾಶಾಸ್ತ್ರಿಗಳನ್ನು ನಾನು ಈಗಲೇ ಬರಹೇಳಿದೆ ಅಂತ ಹೇಳಿ ಕರೆದುಕೊಂಡು ಬಾ."

ಶ್ರೀಪಾದು ಸೈಕಲ್ ತೆಗೆದುಕೊಂಡು ಹೊರಟ. ಅರ್ಧ ಗಂಟೆಯ ನಂತರ ಹಿಂದಿರುಗಿ ಬಂದು,

"ಅಣ್ಣಾ, ಶಾಸ್ತ್ರಿಗಳು ಮನೆಯಲ್ಲಿಲ್ಲ. ಬಂದ ಕೂಡಲೇ ಕಳಿಸುತ್ತೇನೆ ಎಂದು ಅವರ ಹೆಂಡತಿ ಹೇಳಿದರು" ಎಂದ.

ಸಂಜೆ ನಾಲ್ಕು ಗಂಟೆಯ ಹೊತ್ತಿಗೆ ರಾಮಾಶಾಸ್ತ್ರಿಗಳು ಬಂದರು. ಶಾಸ್ತ್ರಿಗಳನ್ನು ಕಂಡರೆ ಕೃಷ್ಣಪ್ಪನವರಿಗೆ ಬಹಳ ಗೌರವ, ಭಕ್ತಿ.

"ನಮಸ್ಕಾರ, ದಯಮಾಡಿಸಬೇಕು ಶಾಸ್ತ್ರಿಗಳು" ಎನ್ನುತ್ತ ಕೃಷ್ಣಪ್ಪನವರು ಎದ್ದು ನಿಂತರು.

ಶಾಸ್ತ್ರಿಗಳು "ತಾವು ಮಧ್ಯಾಹ್ನ ಹೇಳಿಕಳುಹಿಸಿದ್ದಿರಂತೆ. ನಾನು ಮನೆಯಲ್ಲಿರಲಿಲ್ಲ" ಎಂದರು.

ಶಾಸ್ತ್ರಿಗಳದು ಬಹಳ ಸ್ಥೂಲವಾದ ದೇಹ. ವಿಭೂತಿಯ ಕಟ್ಟುಗಳು ಬಲವಾಗಿದ್ದವು. ಅವರ ಕೃಷ್ಣವರ್ಣದ ದೇಹದ ಮೇಲೆ ಬಿಳಿಯ ಪಟ್ಟೆಗಳು ಕಣ್ಣಿಗೆ ಎದ್ದು ಕಾಣುತ್ತಿದ್ದವು. ಅಗಲವಾದ ಚಪ್ಪಟೆಯ ಮುಖದಲ್ಲಿ ಪ್ರಧಾನವಾದ ಮೂಗು. ಶಾಸ್ತ್ರಿಗಳು ಒಂದು ಚಿಟಿಕೆ ನಶ್ಯವೇರಿಸಿ "ಅಪ್ಪಣೆಯಾಗಲಿ" ಎಂದರು.

"ಕಮಲೂ, ಮೀರಾದು, ಶಾಮೂದು ಜಾತಕ ತಂದು ಶಾಸ್ತ್ರಿಗಳಿಗೆ ಕೊಡು."

ಕಮಲಮ್ಮನವರು ಎರಡು ಜಾತಕಗಳನ್ನು ತಂದು ಶಾಸ್ತ್ರಿಗಳ ಕೈಗಿತ್ತು ಸ್ವಲ್ಪ ದೂರದಲ್ಲಿ ಕುಳಿತರು.

ಶಾಸ್ತ್ರಿಗಳು ಅರ್ಧ ಗಂಟೆ ಮನಸ್ಸಿನಲ್ಲಿ ಗುಣಿಸಿ, ಭಾಗಿಸಿ ಏನೇನೋ ಲೆಕ್ಕ ಹಾಕತೊಡಗಿದರು. ಕಮಲಮ್ಮನವರ ಕಾತುರತೆ ನಿಮಿಷ ನಿಮಿಷಕ್ಕೂ ಹೆಚ್ಚುತ್ತಿತ್ತು. ಅರ್ಧ ಗಂಟೆಯ ನಂತರ ಶಾಸ್ತ್ರಿಗಳು ಹೇಳಿದರು,

"ಜಾತಕ ಬಹಳ ಪ್ರಶಸ್ತವಾಗಿದೆ. ಈ ವರನಿಗೆ ಇದೇ ವಧು ಅಂತ ಬ್ರಹ್ಮ ಗಂಟುಹಾಕಿದಾನೆ. ಹುಡುಗ ಬಹಳ ಯೋಗ್ಯ. ಬೇಕಾದ ಹಾಗೆ ದುಡ್ಡಿದೆ. ಒಂದೇ ಮನಸ್ಸು ಮಾಡಿ ಮದುವೆ ಮಾಡಿಬಿಡಿ. ಮೀರಾ ಸುಖವಾಗಿರುತ್ತಾಳೆ."

ಜಾತಕಾನುಕೂಲವಾಗಿದೆಯೆಂದು ತಿಳಿದು ಕೃಷ್ಣಪ್ಪನವರಿಗೆ ಸಮಾಧಾನವಾಯಿತು.

"ಸದ್ಯ, ವೆಂಕಟೇಶ ಅನುಗ್ರಹ ಮಾಡಿದ" ಎಂದು ಕುಳಿತ ಕಡೆಯೇ ತಿರುಪತಿ ದೇವರಿಗೆ ಕೈಮುಗಿದರು.

ಶಾಸ್ತ್ರಿಗಳು ಕಮಲಮ್ಮನವರು ತಂದುಕೊಟ್ಟ, ಹಾಲು, ಹಣ್ಣು ತೆಗೆದುಕೊಂಡು ಹೊರಟುಹೋದರು.

ಅದೇ ದಿನ ರಾತ್ರಿ ಕೃಷ್ಣಪ್ಪನವರಿಂದ ಶಾಮುವಿಗೆ ಕಾಗದ ಹೋಯಿತು. ಕೃಷ್ಣಪ್ಪನವರು ಶಾಮುವಿನಲ್ಲಿದ್ದ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಿ, ಹಿಂದಿನ ಸ್ನೇಹ ಬಂಧನ ಅಳಿಸಿಹೋಗದಂತೆ ಬಾಂಧವ್ಯದ ಬೆಸುಗೆಯಿಂದ ಅದನ್ನು ಬಲಪಡಿಸಿ, ತಮ್ಮ ಮಗಳ ಕೈಹಿಡಿದು ಉದ್ಧಾರ ಮಾಡಬೇಕಾಗಿ ವಿನಯಪೂರ್ವಕವಾಗಿ ಬರೆದಿದ್ದರು.

ಈ ಕಾಗದವನ್ನು ಕೃಷ್ಣಪ್ಪನವರು ಬರೆಯುತ್ತಿದ್ದಾಗ ಶಾಮು ತನ್ನ ಹಳ್ಳಿಯಲ್ಲಿ, ವಿಶಾಲವಾದ ಮನೆಯಲ್ಲಿ ಹಾಸಿಗೆಯ ಮೇಲೆ ಕುಳಿತು ಲಾಂದ್ರ ದಲ್ಲಿದ್ದ ಬತ್ತಿಯನ್ನೇ ನೋಡುತ್ತಿದ್ದ. ಅದೇಕೋ ಬೆಳಗಿನಿಂದಲೂ ಅವನಿಗೆ ಮೀರಳ ನೆನಪು ಮೇಲಿಂದ ಮೇಲೆ ಬರುತ್ತಿತ್ತು. ನಾಟಕದಲ್ಲಿನ ಅಭಿನಯ, ತನಗೆ ಟಿಕೀಟು ಮಾರಿದುದರ ಜಾಣ್ಮೆ, ಸುಂದರ ಮುಖ ಬೆಳಗಿನಿಂದಲೂ ಅವನ ಕಣ್ಣಿಗೆ ಕಟ್ಟಿದಂತಿತ್ತು. ಮದುವೆಯ ವಯಸ್ಸಾಗಿದ್ದರೂ ಶಾಮು ಮದುವೆಯ ಯೋಚನೆ ಯನ್ನು ಮಾಡಿರಲಿಲ್ಲ. ಅವನ ಸೋದರಮಾವ ತನ್ನ ಮಗಳು ಸರಸಿಯನ್ನು ಮದುವೆ ಮಾಡಿಕೊಳ್ಳಬೇಕೆಂದು ಬಲವಂತ ಮಾಡಿ ನಿರಾಶರಾಗಿದ್ದರು. ತನ್ನ ಜೀವನದಲ್ಲಿ ಹೆಂಡತಿಯ ಪಾತ್ರದ ಅವಶ್ಯಕತೆ ಅವನಿಗೆ ತೋರಲಿಲ್ಲ. ಗೆಳೆಯರು, ಬಂಧುಗಳು ಅವನ ಆಸ್ತಿಯ ಕಡೆ ಲಕ್ಷ್ಯವಿಟ್ಟು 'ಮದುವೆಯಾಗು ಶಾಮಣ್ಣ' ಎಂದಾಗ ಶಾಮು ಉಪಾಯವಾಗಿ ಮಾತು ಹಾರಿಸಿಬಿಡುತ್ತಿದ್ದ. ಆದರೆ ಮೈಸೂರಿಗೆ ಬಂದು ಮೀರಳನ್ನು ನೋಡಿದಾಗಿನಿಂದ ಅವನಿಗೆ ತನ್ನ ಜೀವನದ ಅಪೂರ್ಣತೆಯ ಅರಿವಾಗಿ, ತನ್ನ ಹೃದಯ ಏನೇನೋ ಬಯಸುತ್ತಿದೆ ಎಂಬುದರ ಅರಿವಾಯಿತು.

ಮಾರನೆಯ ದಿನ ವೆಂಕಮ್ಮನವರು ಮಾಡಿಕೊಟ್ಟ ದೋಸೆ ತಿಂದು ಶಾಮು ಗದ್ದೆಯ ಕಡೆ ಹೊರಟ.

ಬೆಳಗಿನ ತಂಗಾಳಿ ಹಿತವಾಗಿ ಬೀಸುತ್ತಿತ್ತು. ಕಣ್ಣಿಗೆ ಕಾಣುವಷ್ಟು ದೂರವೂ ಹಸಿರು ಹಬ್ಬಿತ್ತು. ಆ ತಂಗಾಳಿ, ನಿಸರ್ಗದ ಸೌಂದರ್ಯ ಅವನ ಮನಸ್ಸನ್ನು ಪ್ರಸನ್ನಗೊಳಿಸಿದವು. ಸೂರ್ಯೋದಯದ ಚೆಲುವನ್ನು ತಾನೊಬ್ಬನೇ ನಿಂತು ನೋಡುವಾಗ ಆ ಚೆಲುವನ್ನು ತನ್ನೊಡಗೂಡಿ ನಿಂತುನೋಡಲು ಗೆಳತಿಯೊಬ್ಬಳಿಲ್ಲ ವಲ್ಲಾ ಎಂದವನ ಮನಸ್ಸು ಕೊರಗಿತು. ಕೂಡಲೇ ಮೈಸೂರಿನ ಬೆಡಗಿನ ಹುಡುಗಿ ಮೀರ ಅವನ ಮನಸ್ಸಿಗೆ ಮಿರುಮಿಂಚಿದಳು. ಅವಳ ಗುಂಗುರು ಕೂದಲು, ಹೊಳೆ ಯುವ ಕಣ್ಣು, ಎತ್ತರವಾದ ನಿಲುವು, ನಡಿಗೆಯ ಗಾಂಭೀರ್ಯ–ಶಾಮುವಿನ ಮನಸ್ಸು, ಅದರಲ್ಲಿಯೇ ಲೀನವಾಯಿತು. ತೆಂಗಿನ ತೋಟದಲ್ಲಿ ಸುತ್ತಾಡುವಾಗ, ಪೈರಿನ ನಡುವೆ ಬದುಗಳ ಮೇಲೆ ಹಾದು ಹೋಗುವಾಗ, ಮಾವಿನ ತೋಟದಲ್ಲಿ ಮರದ ನೆರಳಿನಲ್ಲಿ ಕಾಲು ನೀಡಿ ಕುಳಿತು ಆಕಾಶ ನೋಡುತ್ತಿದ್ದಾಗ, ಶಾಮುವಿಗೆ ತಾನು ಏಕಾಂಗಿ ಎನಿಸಿತು.

ಅನ್ಯಮನಸ್ಕನಾಗಿ ಮನಸ್ಸು ಬಂದ ಕಡೆ ತಿರುಗಿ ಕಾಲು ನೋಯುವುದಕ್ಕೆ ಆರಂಭವಾದ ಮೇಲೆ ಶಾಮು ಮನೆ ಸೇರಿದ. ವೆಂಕಮ್ಮನವರು ಬಡಿಸುವಾಗ,

"ಹಿಟ್ಟು ಹೇಗಿದೆಯೋ ಶಾಮಣ್ಣ, ಹುಳಿಗೆ ಖಾರ ಸಾಕೇನಪ್ಪ?" ಎಂದು ಕೇಳಿದರು. ಶಾಮುವಿಗೆ ತಾನೇನು ಊಟ ಮಾಡುತ್ತಿರುವೆನೆಂಬುದರ ಅರಿವು ಸಹ

ಇದ್ದಂತೆ ತೋರಲಿಲ್ಲ.

ಸಂಜೆ ಪುನಃ ಹೊಲಗದ್ದೆಗಳಲ್ಲಿ ತಿರುಗಾಡಿದ ಶಾಸ್ತ್ರ ಮಾಡಿ ಮನೆಗೆ ಬಂದನು. ರಾತ್ರಿ ಊಟ ಮುಗಿಸಿ, ನಿದ್ರೆ ಅವನ ಕಣ್ಣಿನ ಮೇಲೆ ಮುದ್ರೆಯೊತ್ತುವವರೆಗೆ ಮೀರಳನ್ನು ನೆನೆಯುತ್ತ ಲಾಂದ್ರವನ್ನೇ ನೋಡುತ್ತಿದ್ದು, ಅನಂತರ ಮಲಗಿದ.

ಮಾರನೆಯ ದಿನ ಮಧ್ಯಾಹ್ನ ಊಟ ಮಾಡಿ, ಒಂದು ಕಟ್ಟು ಎಲೆಯನ್ನೂ ಅಡಿಕೆಯನ್ನೂ ತಟ್ಟೆಯಲ್ಲಿರಿಸಿಕೊಂಡು ಹಾಕಿಕೊಳ್ಳುತ್ತಿದ್ದಾಗ ಪೋಸ್ಟಿನ ರಂಗಪ್ಪ ಕಾಗದ ಕೊಟ್ಟು ಹೋದ. ಶಾಮು ಎಲೆಯ ಸುರುಳಿಯನ್ನು ಬಾಯಿಗೆ ಹಾಕಿಕೊಂಡು ಕಾಗದ ಒಡೆದ. ಕಾಗದವನ್ನು ಓದುತ್ತ ಹೋದಂತೆ ಅವನ ದವಡೆಗಳು ಎಲೆ ಅಡಿಕೆಯನ್ನು ಅಗಿಯುವುದನ್ನು ನಿಲ್ಲಿಸಿದವು. ಶಾಮುವಿಗೆ ಒಂದು ಗಳಿಗೆ ತಾನು ಎಚ್ಚರವಾಗಿರುವೆನೋ, ಕನಸಿನಲ್ಲಿರುವೆನೋ ಎಂಬುದು ಸಹ ತಿಳಿಯಲಿಲ್ಲ. ಕಾಲೇಜು ಕುಮಾರಿ ಮೀರ ನಿಜವಾಗಿಯೂ ತನ್ನಂತಹ ಹಳ್ಳಿಯ ಮುಕ್ಕನ ಕೈ ಹಿಡಿಯಬಹುದೇ ಎಂಬ ಸಂಶಯ ತಲೆದೋರಿತು. ತಾನಾದರೋ ಅವಿದ್ಯಾವಂತ. ಎಸ್.ಎಸ್.ಎಲ್.ಸಿ.ದಾಟಲಾರದೆ ವಿದ್ಯೆಗೆ ಶರಣು ಹೊಡೆದ ಹಳ್ಳಿಗಾಡಿನವನು. ಮೀರ ಪಟ್ಟಣದ ರಂಗಿನ ಹೂವು. ತನ್ನನ್ನು ಒಪ್ಪಬಹುದೆ? ಶಾಮು ಕನ್ನಡಿಯ ಮುಂದೆ ನಿಂತ.

ವಿದ್ಯೆಯಿಲ್ಲದಿದ್ದರೇನು? ತನ್ನಂತಹ ಕಟ್ಟುಮಸ್ತಾದ ತೋಳು, ಉಕ್ಕಿನಂತಹ ದೇಹ ಯಾವ ಪಟ್ಟಣದ ಹುಡುಗನಿಗಿದೆ? ನಿಸರ್ಗದ ಮಡಿಲಿನಲ್ಲಿ ಸ್ವೇಚ್ಛೆಯಾಗಿ ಬೆಳೆದ ಪುತ್ರ ನಾನು. ಶಾಮುವಿಗೆ ತನ್ನ ಮೈಕಟ್ಟಿನಲ್ಲಿ ಪೂರ್ಣ ನಂಬಿಕೆಯಿತ್ತು. ಹಿರಿಯರು ಸಂಪಾದಿಸಿಟ್ಟಿದ್ದ ಆಸ್ತಿ ಇನ್ನೂ ನಾಲ್ಕೈದು ತಲೆಮಾರುಗಳು ಕಳೆದರೂ ಕರಗುವ ಹಾಗಿರಲಿಲ್ಲ. ಹಣ, ದೇಹಸೌಂದರ್ಯವೆರಡೂ ತನಗೊಲಿದಿರುವಾಗ ಯಾವ ಹುಡುಗಿಯಾದರೂ ತನ್ನನ್ನು ಒಪ್ಪಲೇಬೇಕು.

ಶಾಮು ಸಿಳ್ಳೆ ಹಾಕುತ್ತ ತಲೆ ಬಾಚತೊಡಗಿದ. 'ಏನು ಉತ್ತರ ಬರೆಯುವೆ?' ಎಂದು ಮನಸ್ಸು ಪ್ರಶ್ನಿಸಿತು. ತನ್ನ ಆತುರ ಅವರಿಗೆ ತಿಳಿಯಬಾರದೆಂದು ಒಂದು ವಾರ ತಡ ಮಾಡಿ ಕೃಷ್ಣಪ್ಪನವರಿಗೆ ಕಾಗದ ಬರೆದ.

ಶಾಮುವಿನ ಕಾಗದ ಕೃಷ್ಣಪ್ಪನವರಿಗೆ ತುಂಬಾ ಸಂತೋಷವನ್ನುಂಟು ಮಾಡಿತು. ತಾಯಿ ತಂದೆಯರಿಲ್ಲದ ತಬ್ಬಲಿ ಮೀರ ಸರಿಯಾದ ಮನೆ ಸೇರುತ್ತಿರುವುದು ಅವರನ್ನು ತುಂಬಾ ಸುಖಿಯನ್ನಾಗಿ ಮಾಡಿತು. ಮೀರ ಕೈ ಹಿಡಿಯುತ್ತಿದ್ದುದು ತಮ್ಮ ಅಳಿದ ಗೆಳೆಯನ ಏಕಮಾತ್ರ ಪುತ್ರ ಶಾಮುವನ್ನು. ಕೃಷ್ಣಪ್ಪನವರಿಗೂ, ಸ್ವರ್ಗಕ್ಕೂ ಒಂದೇ ಗೇಣುಳಿಯಿತು.

ಕಾಗದ ಕೈಲಿ ಹಿಡಿದುಕೊಂಡು ಅಡಿಗೆಯ ಮನೆಗೆ ಬಂದು

"ಕಮಲೂ, ನಾನು ಆಗಲೇ ಹೇಳಲಿಲ್ಲವೇ? ಶಾಮು ಚಿನ್ನದಂತಹ ಹುಡುಗ, ನನ್ನ ಮಾತು ತೆಗೆದುಹಾಕೋದಿಲ್ಲ ಅಂತ ನನಗೆ ಗೊತ್ತಿತ್ತು. ಅವನಿಗೆ ಈ ಸಂಬಂಧ ಪೂರ್ಣ ಸಮ್ಮತವಿದೆ" ಎಂದರು.

ಕಮಲಮ್ಮ ಮಾಡುತ್ತಿದ್ದ ಕೆಲಸವನ್ನೂ ಬಿಟ್ಟು ಎದ್ದುಬಂದು ದೇವರಿಗೆ ನಮಸ್ಕಾರ ಮಾಡಿ,

"ಶಾಸ್ತ್ರಿಗಳನ್ನು ಕರೆಸಿ ದಿನ ಗೊತ್ತು ಮಾಡಿಬಿಡಿ" ಎಂದರು.

ಮೀರಳಿಗೆ ಮಾತ್ರ ಯಾವ ಸಂಗತಿಯೂ ತಿಳಿದಿರಲಿಲ್ಲ. ಪರೀಕ್ಷೆ ಹತ್ತಿರ ವಾಗುತ್ತಿದ್ದುದರಿಂದ ಅವಳು ಬೇರೆ ಯಾವ ವಿಷಯಕ್ಕೂ ಪ್ರವೇಶಿಸದೆ ಓದು ವುದರಲ್ಲಿ ಮಗ್ನಳಾಗಿದ್ದಳು. ಶಾಮು ಹೊರಟುಹೋದ ಮಾರನೆಯ ದಿನವೇ ಅವಳಿಗೆ ಅವನ ನೆನಪು ಅಳಿಸಿಹೋಗಿತ್ತು. ಕಾಲೇಜು, ಗೆಳತಿಯರು, ಪರೀಕ್ಷೆ ಇವು ಗಳ ಗಲಾಟೆಯಲ್ಲಿ ಮೀರ ಯಾವುದನ್ನೂ ತಿಳಿಯದೆ ನಿರ್ಯೋಚನೆಯಿಂದಿದ್ದಳು.

ಪುಸ್ತಕ ಕೈಲಿ ಹಿಡಿದು ಹಾಳೆಗಳನ್ನು ತಿರುವಿ ಹಾಕುತ್ತಿದ್ದಾಗ ಕೃಷ್ಣಪ್ಪನವರು ರೂಮಿನೊಳಗೆ ಬಂದರು.

"ಏನು ಮಾಡುತ್ತಾ ಇದೀಯಾ ಮೀರಾ?"

"ಕೆಮಿಸ್ಟ್ರಿ ಓದುತ್ತಾ ಇದೀನಿ ದೊಡ್ಡಪ್ಪ."

"ಪರೀಕ್ಷೆ ಹತ್ತಿರ ಬಂತು ಅಲ್ಲವೇ?"

"ಹ್ಞೂ. ಅದಕ್ಕೇ ಈಗ ಪುಸ್ತಕ ಹಿಡಿದಿದೀನಿ."

"ಏನು ಕೆಮಿಸ್ಟ್ರಿಯೋ, ಏನು ಪರೀಕ್ಷೆಯೋ? ಹೆಣ್ಣುಮಕ್ಕಳು ಎಷ್ಟು ಓದಿದರೂ ಗೃಹಿಣಿಯರಾಗಿ ಸೌಟು ಹಿಡಿಯುವುದಂತೂ ತಪ್ಪಿದ್ದಲ್ಲ."

ಕೃಷ್ಣಪ್ಪನವರು ತಾವಾಡಬೇಕೆಂದಿದ್ದ ಮಾತಿಗೆ ಪೀಠಿಕೆ ಹಾಕಿದರು.

"ಅದೇನೋ ನಿಜ ದೊಡ್ಡಪ್ಪ. ಆದರೆ ಹೆಂಗಸರು ಸೌಟು ಹಿಡಿಯಲೇ ಬೇಕೆಂದು ನಿಸರ್ಗ ನಿಯಮವೇನೂ ಇಲ್ಲ. ನಾವು ಓದಿ ಕೆಲಸಕ್ಕೆ ಸೇರಿದರೆ ಸೌಟು ಯಾಕೆ ಹಿಡಿಯಬೇಕು ಹೇಳಿ."

"ಓದಿ ಕೆಲಸಕ್ಕೆ ಸೇರಿದರೂ ಎಷ್ಟು ದಿನಾಂತ ಮದುವೆ ಇಲ್ಲದೆ ಇರುವುದಕ್ಕೆ ಆಗುತ್ತದೆ? ಮದುವೆಯಾದ ಮೇಲೆ ಸಮಯ, ಸಂದರ್ಭ ಹೇಗೆ ಬರುತ್ತದೋ ಯಾರಿಗೆ ಗೊತ್ತು?"

ದೊಡ್ಡಪ್ಪನ ಮಾತಿನ ಜಾಡನ್ನರಿಯದ ಮೀರ, 'ನಿಜ' ಎಂದು ಒಪ್ಪಿ ಕೊಂಡಳು.

"ಮೀರಾ, ನಾನೊಂದು ಮಾತು ಕೇಳಬೇಕೆಂದಿದ್ದೇನೆ. ನೀನು ನನ್ನ ಮಾತು ತೆಗೆದುಹಾಕುವುದಿಲ್ಲ ಅಂತ ನನ್ನ ಭಾವನೆ."

ಮೀರಾ ಪೆನ್ಸಿಲಿನ ತುದಿಯನ್ನು ಉಗುರುಗಳಿಂದ ಕೀಳುತ್ತಾ "ಏನದು?" ಎಂದಳು.

"ನನ್ನ ಸ್ನೇಹಿತನ ಮಗ ಶಾಮೂನ ನೀನು ನೋಡಿದೀಯಲ್ಲವೆ?"

ಮೀರಳಿಗೆ ಆಶ್ಚರ್ಯವಾಯಿತು. "ನೋಡದೇ ಏನು ದೊಡ್ಡಪ್ಪ. ಮೊನ್ನೆ ಬಂದಿದ್ದರಲ್ಲಾ ಅವರು ತಾನೆ? ಅವರಿಗೆ ನಾನು ಟಿಕೀಟು ಸಹ ಮಾರಿದ್ದೆ."

"ಹ್ಞೂ, ಅವನೇ. ಅವನಿಗೆ ನಿನ್ನ ಕೊಡೋಣ ಅಂತ ಮನಸ್ಸು ಮಾಡಿದೀನಿ...."

ಮೀರಳ ಕೈಲಿದ್ದ ಪೆನ್ಸಿಲ್ಲು ಮುಷ್ಟಿಯಿಂದ ಕಳಚಿ ನೆಲದ ಮೇಲೆ ಬಿತ್ತು. ಹಣೆಯ ಮೇಲೆ ನಾಲ್ಕೈದು ಗೆರೆಗಳು ಕಾಣಿಸಿಕೊಂಡವು. ಕಿವಿಯಲ್ಲಿ ಉಯ್ಯಾಲೆ ಯಾಡುತ್ತಿದ್ದ ನೀಲಿ ಹರಳಿನ ಲೋಲಕ್ಕು ತನ್ನೊಡತಿಯ ಅಭಿಪ್ರಾಯ ತಿಳಿಯಲು ಸ್ತಬ್ಧವಾಯಿತು.

ಮೀರಳ ಬಾಯಿಂದ ಮಾತು ಹೊರಡಲಿಲ್ಲ. ಕೃಷ್ಣಪ್ಪನವರು ಅವಳಲ್ಲಾದ ಬದಲಾವಣೆಯನ್ನು ಗಮನಿಸದವರಂತೆ ಮುಂದುವರಿಸಿದರು.

"ನೋಡು ಮೀರಾ, ಶಾಮು ಓದಿದ ಹುಡುಗನಲ್ಲ. ಆದರೆ ಅವನ ವಿನಯ, ಗುಣ ಓದಿದ ಎಷ್ಟು ಜನರಿಗೆ ಇದೆ ಹೇಳು? ಹುಡುಗ ನೋಡಲು ರಾಜಕುಮಾರ ನಂತಿದ್ದಾನೆ. ಅತ್ತೆ, ಮಾವ, ಅತ್ತಿಗೆ, ನಾದಿನಿಯರ ಕಾಟವಿಲ್ಲ. ಬೇಕಾದ ಹಾಗೆ ಆಸ್ತಿಯಿದೆ. ಅಷ್ಟು ದೊಡ್ಡ ಮನೆಗೆ, ಜಮೀನಿಗೆ ರಾಣಿಯಾಗಿ ನೀನಿರಬಹುದು. ಇದಕ್ಕಿಂತ ಹೆಚ್ಚಿಗೆ ನಿನಗೇನಾಗಬೇಕಾಗಿದೆ?" ಎಂದರು.

ಮೀರಳ ಕಣ್ಣುಗಳು ನೆಲವನ್ನೇ ನೋಡುತ್ತಿದ್ದವು. ಮಾತನಾಡುವ ಶಕ್ತಿ ಬಂದೊಡನೆ ಹೇಳಿದಳು:

"ನನಗೀಗಲೇ ಮದುವೆಯಾಗಲು ಇಷ್ಟವಿಲ್ಲ."

"ಹಾಗೆಂದರೆ ಹೇಗೆ ಮೀರಾ? ಆಗಲೇ ನಿನಗೆ ಹದಿನೇಳು ವರ್ಷವಾಯಿತು. ಇನ್ನೂ ಮದುವೆ ಮಾಡದಿದ್ದರೆ ಚೆನ್ನಾಗಿರುವುದಿಲ್ಲ. ನೋಡಿದ ಜನ ಏನಂತಾರೆ. ತಬ್ಬಲಿ ಹುಡುಗೀನ ಸಾಕುವುದಕ್ಕೆ ಕರೆದುಕೊಂಡು ಬಂದ; ಅವಳಿಗೆ ಮದುವೆ ಮಾಡುವ ಯೋಗ್ಯತೆ ಇಲ್ಲದ ಮೇಲೆ ಸಾಕುವ ಜವಾಬ್ದಾರಿ ಯಾಕೆ ವಹಿಸಿಕೊಂಡ ಅಂತ ಜನ ನನ್ನ ಮೂದಲಿಸುತ್ತಾರೆ. ನಿನ್ನ ಸಾಕಿ ವಿದ್ಯೆ, ಬುದ್ಧಿ ಕಲಿಸಿದ್ದಕ್ಕೆ ನೀನು ಇದೊಂದು ಉಪಕಾರ ಮಾಡು."

ಮೀರಳ ದುಂಡುಗೆನ್ನೆಯ ಮೇಲೆ ಹನಿಗಳು ಒಂದೊಂದಾಗಿ ಉರುಳು ತ್ತಿದ್ದವು.

"ಆದರೆ.... ಆದರೆ.... ಅವರು ಒಪ್ಪಿರುವರೇ ದೊಡ್ಡಪ್ಪ?" ಮೀರಳ ದನಿ

ಕಂಪಿಸಿತು.

"ಹ್ಞೂ. ಅವನು ಒಪ್ಪಿರುವುದರಿಂದಲೇ ನಾನು ನಿನ್ನ ಕೇಳ್ತಿದ್ದೇನೆ."

"ಆದರೆ ಪರೀಕ್ಷೆ ಇನ್ನೊಂದು ವಾರ ಇದೆಯಲ್ಲಾ ದೊಡ್ಡಪ್ಪ...."

"ನನಗೆ ಅಷ್ಟು ಬುದ್ಧಿಯಿಲ್ಲವೇ ಮೀರಾ? ಪರೀಕ್ಷೆ ಮುಗಿದ ಮೇಲೆ ಮದುವೆಗೆ ಲಗ್ನ ಇಡಿಸ್ತೇನೆ. ನೀನು ಮಾತ್ರ ದಯವಿಟ್ಟು ಒಪ್ಪಿಬಿಡು. ನನ್ನ ಇದೊಂದು ಕೋರಿಕೆಯನ್ನು ದೊಡ್ಡ ಮನಸ್ಸು ಮಾಡಿ ಒಪ್ಪಿಬಿಡು. ಹುಡುಗನಿಗೆ ಏನು ಕಡಿಮೆಯಾಗಿದೆ ಹೇಳು? ರೂಪಿನಲ್ಲಿ ಕಡಿಮೆಯೇ? ಹಣದಲ್ಲಿ ಕಡಿಮೆಯೆ? ವಿದ್ಯೆ ಕಟ್ಟಿಕೊಂಡು ಈಗಿನ ಕಾಲದಲ್ಲಿ ಏನಾಗಬೇಕಾಗಿದೆ? ವಿದ್ಯೆ, ಬುದ್ಧಿಗೆ ನಮ್ಮ ಸಮಾಜ ಈಗ ಯಾವ ಬೆಲೆ ಕಟ್ಟುತ್ತಿದೆ? ಹಣವಿದ್ದ ಮೇಲೆ ವಿದ್ಯೆ ಯಾಕೆ? ಅವನೂ ಎಸ್.ಎಸ್.ಎಲ್.ಸಿ.ಯವರೆಗೆ ಓದಿದಾನೆ."

"ದೊಡ್ಡಪ್ಪ, ನಾನು ಮೆಡಿಕಲ್ ಕಾಲೇಜಿಗೆ ಸೇರಬೇಕೆಂದಿದ್ದೇನೆ."

ಕೃಷ್ಣಪ್ಪನವರು ಸ್ವಲ್ಪ ಗಾಬರಿಯಿಂದಲೂ, ಅತ್ಯಂತ ಆಶ್ಚರ್ಯದಿಂದಲೂ

"ಮೀರಾ ನನ್ನ ಆರ್ಥಿಕ ಪರಿಸ್ಥಿತಿ ತಿಳಿದೂ, ಬುದ್ಧಿವಂತಳಾದ ನೀನು ಈ ಮಾತನಾಡುತ್ತಿರುವುದು ನನಗೆ ತುಂಬಾ ಆಶ್ಚರ್ಯವನ್ನುಂಟು ಮಾಡಿದೆ. ಈ ಅಭಿಪ್ರಾಯ ನಿನ್ನ ತಲೆಗೆ ಹಾಕಿದವರು ಯಾರು? ಆ ಗೋಪೀನೇ ಇರಬೇಕು. ನನಗೂ ವಯಸ್ಸಾಗುತ್ತಾ ಬಂತು. ಬೇಗ ನಿನಗೆ ಮದುವೆ ಮಾಡಿ ನನ್ನ ಜವಾಬ್ದಾರಿ ಕಳೆದುಕೊಳ್ಳಬೇಕು. ನನ್ನಲ್ಲಿ ನಿನಗೆ ಸ್ವಲ್ಪವಾದರೂ ಕೃತಜ್ಞತೆ ಇದ್ದರೆ ಎದುರು ಮಾತನಾಡಬೇಡ."

ಕೃಷ್ಣಪ್ಪನವರ ದನಿ, ಕಡೆಯ ವಾಕ್ಯ ಹೇಳುವಾಗ ಸ್ವಲ್ಪ ಬಿರುಸಾಯಿತು. ಕಡೆಯ ವಾಕ್ಯದೊಡನೆ ರೂಮಿನಿಂದೆದ್ದು ಆಚೆಗೆ ಹೋದರು.

ಮೀರ ಮೌನವಾಗಿ ಅಳತೊಡಗಿದಳು. ಚಿಕ್ಕಂದಿನಿಂದಲೂ ತಾನು ಬಹಳ ಆಸೆಯಿಂದ ಬೆಳೆಸಿಕೊಂಡು ಬಂದಿದ್ದ ಆಶಾ ಬಳ್ಳಿಯನ್ನು ಮಧ್ಯದಲ್ಲಿಯೇ ಒಣಗಿಸ ಬೇಕಾಗಿ ಬಂದುದು ಮೀರಳಿಗೆ ಹಾಲು ಹಾಕಿ ಬೆಳೆಸಿದ ಮಗುವನ್ನು ಕೈಯಾರೆ ಕತ್ತಿಯಿಂದ ಇರಿಯುವಂತೆ ಭಾಸವಾಯಿತು.

ಮಧುರ ಸಂಗೀತದಂತೆ ಬಾಳಗೀತೆ ನುಡಿಸುತ್ತಿರುವಾಗ, ಮೀರ ಮೊದಲ ನೆಯ ಬಾರಿ ಅಪಸ್ವರವನ್ನು ಕೇಳಬೇಕಾಯಿತು.

ಓದು ಮುಂದೆ ಸಾಗಲಿಲ್ಲ. ಇಷ್ಟು ದಿನಗಳವರೆಗೆ ತಾನು ಪರರ ಆಶ್ರಯ ದಲ್ಲಿರುವೆ. ತಾಯಿ, ತಂದೆಯಿಲ್ಲದ ಅನಾಥಳು ಎಂಬ ಭಾವನೆ ಅವಳ ಮನಸ್ಸಿಗೆ ಬಂದಿರಲಿಲ್ಲ. ಮೀರಳಿಗೆ ತಾಯಿಯ ಅಭಾವದ ಅರಿವು ಈಗಾಯಿತು.

'ಅಮ್ಮಾ.... ನೀನಿದ್ದಿದ್ದರೆ....'

ತಕ್ಷಣ ಅವಳಿಗೆ ಗೋಪಣ್ಣನ ನೆನಪಾಯಿತು.

ನೀರಿನಲ್ಲಿ ಮುಳುಗುವವನು ತೇಲಿ ಹೋಗುವ ಹುಲ್ಲುಕಡ್ಡಿಯ ಆಶ್ರಯ ಬಯಸುವಂತೆ ಮೀರ ಗೋಪಣ್ಣನ ಸಹಾಯವನ್ನು ನಂಬಿ ಧೈರ್ಯ ತಾಳಿದಳು. ತಕ್ಷಣ ಮೇಜಿನಿಂದ ಕಾಗದ ತೆಗೆದು ಬರೆಯತೊಡಗಿದಳು.

ಪ್ರೀತಿಯ ಗೋಪಣ್ಣನಿಗೆ ಮೀರಳ ನಮಸ್ಕಾರಗಳು.

ಗೋಪಣ್ಣ, ನಾನೀಗ ಒಂದು ಮಹಾವಿಪತ್ತಿಗೆ ಸಿಕ್ಕಿದ್ದೇನೆ. ನೀನು ನನಗೆ ಸಹಾಯ ಮಾಡದಿದ್ದರೆ ನನಗೆ ಬೇರೆ ಯಾರೂ ದಿಕ್ಕಿಲ್ಲ. ದೊಡ್ಡಪ್ಪ ನನಗೆ ಮದುವೆ ಮಾಡುವ ಪ್ರಯತ್ನದಲ್ಲಿದ್ದಾರೆ. ನನಗೀಗಲೇ ಮದುವೆಯಾಗಲು ಇಷ್ಟವಿಲ್ಲ. ಬಾಲ್ಯದಿಂದಲೂ ನೀನು ಕೊಟ್ಟ ಸಲಹೆಯನ್ನು ಅಕ್ಷರಶಃ ಪಾಲಿಸುವುದೇ ನನ್ನ ಜೀವನದ ಗುರಿ. ಅದೊಂದು ಧ್ಯೇಯವನ್ನು ಸಾಧಿಸುವುದರಲ್ಲಿ ನನ್ನ ಬದುಕಿನ ಸಾರ್ಥಕತೆ ಐಕ್ಯವಾಗಿದೆ. ವೈದ್ಯಳಾಗಿ ಜನರ ಸೇವೆ ಮಾಡುವ ಹಂಬಲ ನನ್ನ ರಕ್ತದ ಕಣಕಣಗಳಲ್ಲಿಯೂ ಬೇರೂರಿದೆ. ನಾನು ಮದುವೆಯಾಗುವುದನ್ನು ನೀನು ಹೇಗಾದರೂ ತಪ್ಪಿಸು ಗೋಪಣ್ಣ. ವರ ಹಳ್ಳಿಯ ಅವಿದ್ಯಾವಂತ. ನನಗಿಂತ ಕಡಿಮೆ ಓದಿದವರು. ಈ ಮದುವೆ ತಪ್ಪಿಸಿದರೆ ನಾನು ಆಜನ್ಮಪರ್ಯಂತ ನಿನಗೆ ಕೃತಜ್ಞಳು.

-ಮೀರಾ

ಮೀರ ಎರಡು ಬಾರಿ ಪತ್ರವನ್ನು ಓದಿದಳು. ಒಂದೆರಡು ಕಡೆ ಹೊಡೆದು ತಿದ್ದಿದಳು. ಕಾಗದವನ್ನು ಪೋಸ್ಟ್ ಮಾಡಿ ಗೋಪಾಲನಿಂದ ಉತ್ತರ ನಿರೀಕ್ಷಿಸ ತೊಡಗಿದಳು. ಒಂದು ವಾರದ ನಂತರ ಗೋಪಾಲನಿಂದ ಎರಡು ಕಾಗದ ಬಂತು. ಮೀರ ಕೃಷ್ಣಪ್ಪನವರ ಕಾಗದವನ್ನು ಅವರ ಕೈಗಿತ್ತು ರೂಮಿಗೆ ಬಂದು ಬಾಗಿಲು ಹಾಕಿಕೊಂಡಳು. ಕಾಗದ ಒಡೆಯುವಾಗ ಅವಳೆದೆ ಹೊಡೆದುಕೊಳ್ಳುತ್ತಿತ್ತು. ಏನು ಸುದ್ದಿ ತಿಳಿಸಿ ಬರೆದಿರುವನೋ ಎಂದು.

ಮೀರಾ,

ನಿನ್ನ ಕಾಗದ ಬಂತು. ನಿನ್ನ ಇಷ್ಟವನ್ನೂ ಮೂಲೆಗೊತ್ತಿ ಅಣ್ಣ ಮದುವೆ ಗೊತ್ತು ಮಾಡಿರುವ ಸುದ್ದಿ ಕೇಳಿ ವ್ಯಥೆಯಾಯಿತು. ನನಗೆ ತೋರಿದ ನಾಲ್ಕು ಮಾತುಗಳನ್ನು ಅಣ್ಣನಿಗೂ ತಿಳಿಸಿ ಕಾಗದ ಬರೆದಿದ್ದೇನೆ. ನಾನು ಬೊಂಬಾಯಿನಲ್ಲಿ ಕುಳಿತುಕೊಂಡು ಏನು ಮಾಡಬಲ್ಲೆ? ಆದರೆ ಕಾಗದದ ಮೂಲಕ ಅಣ್ಣನ ಮನಸ್ಸು ತಿರುಗಿಸುವುದು ಎಷ್ಟು ಸಾಧ್ಯವೋ ಅಷ್ಟು ಪ್ರಯತ್ನವನ್ನೂ ಮಾಡುತ್ತೇನೆ. ಇದರ ಮೇಲೆ ದೈವೇಚ್ಛೆ. ನಾನು ನಿನಗೆ ಯಾವ ಭರವಸೆಯನ್ನೂ ಕೊಡಲಾರೆ.

ನಿನ್ನ ಗೋಪಣ್ಣ

ಕಾಗದ ಓದಿ ಮೀರಳಿಗೆ ಇದ್ದ ಧೈರ್ಯವೂ ಉಡುಗಿಹೋಯಿತು. ಈ

ಪ್ರಪಂಚದಲ್ಲಿ ನನ್ನವರು ಯಾರೂ ಇಲ್ಲ ಎಂದು ಅವಳ ಮನಸ್ಸು ಕಹಿಯಾಗಿ ನುಡಿಯಿತು. ಕಾಗದವನ್ನು ಪುಸ್ತಕದ ಹಾಳೆಯಲ್ಲಿಟ್ಟು ಹೊರಗೆ ಬಂದಳು. ಅಡಿಗೆ ಮನೆಯಲ್ಲಿ ಕೃಷ್ಣಪ್ಪನವರು ಕಮಲಮ್ಮನವರೊಡನೆ ಮಾತನಾಡುವುದನ್ನು ಕೇಳಿ ಮೀರ ಅಲ್ಲೇ ನಿಂತಳು.

'ನಾವು ಸಾಕಿ ಸಲಹಿದ್ದಕ್ಕೆ ಈ ಮಕ್ಕಳು ನಮ್ಮ ಮೇಲೆ ತಿರುಗಿ ಬೀಳುತ್ತಾರೆ. ಮೀರಾ ಗೋಪಿಗೆ ಕಾಗದ ಬರೆದಿರಬೇಕು–ನೀನಾದರೂ ಈ ಮದುವೆ ನಿಲ್ಲಿಸು ಅಂತ. ಅವನು ನನಗೆ ಬಲವಂತದ ವಿವಾಹದ ಕೆಡುಕುಗಳನ್ನು ಕುರಿತು ನಾಲ್ಕು ಪುಟ ಬರೆದು ಬುದ್ಧಿವಾದ ಹೇಳಿದಾನೆ. ಗಡ್ಡ ಹಣ್ಣಾದ ನಾನು ಈ ಚೋಟುದ್ದ ಪವನ ಕೈಲಿ ಬುದ್ಧಿ ಹೇಳಿಸಿಕೊಳ್ಳಬೇಕೆ?"

ಕಮಲಮ್ಮ ಗಂಡನಿಗೆ ಸಮಾಧಾನ ಹೇಳುವ ಬದಲು ಅವರ ಮೇಲೆ ರೇಗಿದ್ದರು.

"ಅವಳನ್ನು ಓದಿಸಬೇಡಿ ಅಂತ ಮೊದಲಿನಿಂದಲೂ ಹೇಳುತ್ತಾ ಬಂದಿದೀನಿ. ಚಿಕ್ಕ ವಯಸ್ಸಿನಲ್ಲೇ ಮದುವೆ ಮಾಡಿಬಿಟ್ಟರೆ ನಾವು ಕುರುಡನ್ನ ತಂದು ಎದುರಿಗೆ ನಿಲ್ಲಿಸಿದ್ದರೂ ತಾಳಿ ಕಟ್ಟಿಸಿಕೊಳ್ಳುತ್ತಿದ್ದಳು. ನೀವು ಅವಳು ಓದಲಿ, ನಾಟಕದಲ್ಲಿ ಪಾರ್ಟು ಮಾಡಲಿ ಅಂತ ಮುದ್ದಿಸಿ ಬೆಳೆಸಿದಿರಿ. ಈಗ ತಲೇ ಮೇಲೆ ಕುಳಿತುಕೊಳ್ಳು ತ್ತಾಳೆ. ಬುದ್ಧಿಬಲಿತ ಮೇಲೆ ನಮ್ಮ ಮಾತೆಲ್ಲಿ ಕೇಳ್ತಾಳೆ. ನನಗೇನು, ನಿಮ್ಮ ತಮ್ಮನ ಮಗಳುಂಟು, ನೀವುಂಟು" ಎಂದು ವಟಗುಟ್ಟುತ್ತ ರಪರಪನೆ ಒಲೆ ಬೀಸತೊಡಗಿದರು.

ಕೃಷ್ಣಪ್ಪನವರ ಅಭಿಮಾನಕ್ಕೆ ಹೆಂಡತಿಯ ಮಾತು ಬರೆ ಹಾಕಿದಂತಾಯಿತು.

"ಮೀರ ಅದು ಹೇಗೆ ನನ್ನ ಮಾತು ಮೀರುತ್ತಾಳೋ ನೋಡಿಯೇ ಬಿಡು ತ್ತೇನೆ. 'ಈ ವಿಚಾರದಲ್ಲಿ ನೀನು ಪ್ರವೇಶಿಸಬೇಡ. ನಿನಗೂ ಇದಕ್ಕೂ ಸಂಬಂಧ ವಿಲ್ಲ' ಅಂತ ಗೋಪಿಗೆ ಇವತ್ತೇ ಕಾಗದ ಹಾಕಿಬಿಡುತ್ತೇನೆ. ಅವನಿನ್ನೂ ಹುಡುಗ. ಹೆಣ್ಣುಮಕ್ಕಳ ಜವಾಬ್ದಾರಿ ಅವನಿಗೇನು ಗೊತ್ತು? ಮೀರ ನನ್ನ ಮಾತು ಕೇಳದಿರು ವುದು ಸಾಧ್ಯವೇ ಇಲ್ಲ" ಎಂದು ಕೃಷ್ಣಪ್ಪನವರು ಆರ್ಭಟಿಸಿದರು. ದನಿಯಲ್ಲಿ ಖಂಡಿತವಿತ್ತು.

ಮೀರ ಸದ್ದು ಮಾಡದೆ ಅಲ್ಲಿಂದ ಸರಿದುಹೋದಳು.

ಮೀರಳ ಮನಸ್ಸಿಗೆ ಮೋಡ ಮುಸುಕಿದಂತಾಯಿತು. ಮನಸ್ಸಿನಲ್ಲಿ ನೆಲೆಸಿದ್ದ ನೆಮ್ಮದಿ ಅಶಾಂತಿಗೆಡೆಕೊಟ್ಟಿತು. ಮುಖದ ಮೇಲೆ ಯಾವಾಗಲೂ ಮಿನುಗುತ್ತಿದ್ದ ಮಂದಹಾಸ ಮಾಯವಾಗಿತ್ತು.

ಪರೀಕ್ಷೆಯಲ್ಲಿ ಏನು ಬರೆದಳೋ ಅವಳಿಗೇ ಗೊತ್ತಿರಲಿಲ್ಲ. ಪರೀಕ್ಷೆಯ ಕೊನೆಯ ದಿನ ವಿದ್ಯಾಮಂದಿರದಿಂದ ಹೊರಬಿದ್ದು ಮೀರ ತಲೆಯೆತ್ತಿ ಕಟ್ಟಡ

ವನ್ನೊಮ್ಮೆ ನೋಡಿದಳು. ಇನ್ನು ತನಗೂ, ವಿದ್ಯಾಮಂದಿರಕ್ಕೂ ದೂರ ಎಂಬ ವಿಷಯ ಅವಳಿಗೆ ಖಚಿತವಾಗಿತ್ತು. ದೀರ್ಘವಾಗಿ ನಿಟ್ಟುಸಿರೊಂದು ಹೊರಬಿತ್ತು.

"ಮೀರಾ, ಹೇಗೆ ಮಾಡಿದೀಯೆ?" ಎನ್ನುತ್ತಾ ನರ್ಮದಾ ಪ್ರಶ್ನೆಪತ್ರಿಕೆ ಕೈಲಿ ಹಿಡಿದು ಪರೀಕ್ಷಾ ಮಂದಿರದಿಂದ ಹೊರಗೆ ಬಂದಳು.

ಮೀರಾ ನೀರಸವಾಗಿ ಉತ್ತರ ಕೊಟ್ಟಳು.

"ಸುಮಾರಾಗಿ ಮಾಡಿದೀನಿ."

"ನೀನು ಬಿಡಮ್ಮ. ಈಗ ಸುಮಾರಾಗಿ ಮಾಡಿದೀನಿ ಎನ್ನುವುದು, ಆಮೇಲೆ ಮೊದಲನೆಯ ತರಗತಿಯಲ್ಲಿ ಪಾಸಾಗುವುದು. ಅದೀಗ ಜಾಣರ ಲಕ್ಷಣ."

"ಹೇಗೆ ಮಾಡಿದೀರೇ ನರ್ಮದಾ, ಮೀರಾ...." ಎನ್ನುತ್ತ ರಾಜಲಕ್ಷ್ಮಿ, ಚಂಪಾ ಅವರನ್ನು ಸುತ್ತಿಕೊಂಡರು.

"ಸುಮಾರಾಗಿ" ಎಂದು ಉತ್ತರ ಬಂತು.

"ಇದೇನೇ ಚಂಪಾ, ಕೈಯೆಲ್ಲಾ ಇಂಕಾಗಿದೆ?" ನರ್ಮದಾ ಹೇಳಿದಳು.

"ಹಾಳಾದ ಪೆನ್ನು ತುಂಬಾ ಸೋರುತ್ತದೆ ಕಣೆ. ನನ್ನ ಹೊಸಾ ಪಾಟಲಿ ಪಲ್ಲು ಕೂಡ ಕೊಂಚ ಇಂಕಾಗಿದೆ" ಎನ್ನುತ್ತಾ ಚಂಪಾ ಸೆರಗು, ನಿರಿಗಳಿಗೆ ಮಾತ್ರ ಪುಟ್ಟ ಕೆಂಪುಹೂವುಗಳಿದ್ದ ಸೀರೆಯ ಕಡೆ ನೋಡಿದಳು. ರಾಜಲಕ್ಷ್ಮಿ ಮೆಚ್ಚುಗೆಯಿಂದ,

"ಚಂಪಾ ನಿನ್ನ ಧೈರ್ಯವೇ ಧೈರ್ಯ ಕಣೆ. ನನಗೇನೋ ಪರೀಕ್ಷೆ ದಿನ ಹೊಸ ಸೀರೆ ಉಟ್ಟುಕೊಳ್ಳುವುದಕ್ಕೇ ಹೆದರಿಕೆ" ಎಂದಳು.

"ಹ್ಞೂ. ಪರೀಕ್ಷೆಯ ದಿನ ಮುಖವಂತೂ ಸಪ್ಪೆ. ಸೀರೆಯಾದರೂ ಚೆನ್ನಾಗಿರಲಿ ಅಂತ ಹೊಸದು ಉಟ್ಟುಕೊಂಡೆ."

"ಸೀರೆಯಿಂದಲಾದರೂ ಮುಖಕ್ಕೆ ಕಳೆ ಬರಲಿ ಅಂತಲೇನೋ? ಮೀರಾ, ಇವತ್ತು ನಾವನ್-ಆಯಾ-ರೇ ಬಂದಿದೆ. 'ಫಿಲ್ಮ್ ಇಂಡಿಯಾ'ದಲ್ಲಿ ಅದನ್ನು ತುಂಬಾ ಹೊಗಳಿದಾನೆ. ಹೋಗಿ ನೋಡಿಕೊಂಡು ಬರೋಣ."

"ಈ ರಾಜೂನ ಬಿಡಮ್ಮ. ಫಿಲ್ಮ್ ಇಂಜಿಯಾ, ಅದರ ಸಂಪಾದಕ ಅಂದರೆ ಪ್ರಾಣ ಬೇಕಾದರೂ ಕೊಟ್ಟುಬಿಡುತ್ತಾಳೆ."

ಚಂಪಾ ಗೇಲಿ ಮಾಡಿದಳು.

"ಹೌದು, ಎಲ್ಲರೂ ಹೋಗೋಣ. ಕಿಶೋರ್ ಸಾಹು ಎಷ್ಟಾದರೂ ಜೀನಿಯಸ್" ನರ್ಮದಾ ಹೇಳಿದಳು.

"ಹಾಗೇ ಬರುತ್ತಾ 'ನೆಹರು ಲಂಚ್ ಹೋಂ'ಲಿ ತಿಂಡಿ.... ಏನೇ....?"

"ನೀನು ಯಾವಾಗಲೂ ಊಟ, ತಿಂಡಿ, ನಿದ್ದೇಗೆ ಸಾಯ್ತೀಯ. ಹಾಗೆ ತಿಂದರೆ ಮೈ ಬರದೆ ಇನ್ನೇನಾಗುತ್ತದೆ?"

ಮೀರಾ ರಾಜಲಕ್ಷ್ಮಿಯ ದುಂಡುತೋಳನ್ನು ಜಿಗುಟಿದಳು.

"ನೋಯುತ್ತದೆ ಬಿಡೆ."

ನರ್ಮದಾ "ನಾನು, ಮೀರಾ ಮನೆಗೆ ಎರಡೂವರೆಗೆ ಬರುತ್ತೇನೆ. ಅಲ್ಲಿಂದ ಎಲ್ಲರೂ ಹೋಗೋಣ" ಎಂದಳು.

"ನಾನು ಆ ಬಿಸಿಲಿನಲ್ಲಿ ನಡೆಯಲಾರೆನಮ್ಮ, ಗಾಡಿ ಮಾಡುವ ಹಾಗಿದ್ರೇ ನಾನು ಬರುವುದು."

ರಾಜಲಕ್ಷ್ಮಿ ಮಧ್ಯೆ ಕೊಂಕು ತೆಗೆದಳು.

"ನೀನು ಹೀಗೇ ಸುಖಪಡುತ್ತಿರು. ಇನ್ನೆರಡು ವರ್ಷದಲ್ಲಿ ಕುಂಬಳಕಾಯಿ, ರೋಣಗಲ್ಲು, ಆನೆ ಎಲ್ಲದರಿಂದಲೂ ಸ್ವಲ್ಪ ತೆಗೆದು ನಿರ್ಮಿಸಿದ ಹಾಗಾಗಿ ಬಿಡುತ್ತೀಯ. Figure ಇಟ್ಟುಕೊಳ್ಳಬೇಕೇ ರಾಜು. ಹೆಂಗಸರಿಗೆ ಮುಖದ ಚೆನ್ನಕ್ಕಿಂತಲೂ ಅದೇ ಮುಖ್ಯ. ನಮ್ಮ ಮೀರಾ ನೋಡು ಹೇಗಿದಾಳೆ...." ಎನ್ನುತ್ತ ಚಂಪಾ ಸ್ವಲ್ಪ ಹಿಂದೆ ಸರಿದು ಮೀರಳನ್ನೇ ನೋಡುತ್ತ,

"ಆ ಸೊಂಟ, ಆ ಭುಜ, ಆ ಕಟ್ಟು...."

"ಸಾಕು ನಿಲ್ಲಿಸು ಚಂಪಾ, ನಾನು ಕೇಳಲಾರೆ."

ಮೀರ ಬೇಸರದಿಂದ ಹೇಳಿದಳು. ರಾಜಲಕ್ಷ್ಮಿ ಸ್ವಲ್ಪ ಅಸೂಯೆಯಿಂದ ಮೀರಳ ಕಡೆ ನೋಡಿ,

"ಆಗಲಮ್ಮ, ಮೀರಾನೇ ಚೆನ್ನಾಗಿರಲಿ. ನನಗೆ Figure ಇದ್ದು ಏನಾಗ ಬೇಕಾಗಿದೆ? ನಾನೇನು ಬಾಲ್ ಡ್ಯಾನ್ಸ್‌ಗೆ ಹೋಗಬೇಕೆ?" ಎಂದಳು.

"ಸರಿ, ಈಗೇನು ಕಾರ್ಯಕ್ರಮ ಹೇಳಿಬಿಡಿ" ಮೀರ ಹೇಳಿದಳು.

ಅಷ್ಟರಲ್ಲಿ ಕೊನೆಯಗಂಟೆ ಹೊಡೆಯಿತು. ಹುಡುಗಿಯರು ಗಲಾಟೆಮಾಡುತ್ತಾ ಹೊರಗೆ ಬಂದರು. ಆ ಗಲಾಟೆ, ಮಾತುಕತೆಗಳಲ್ಲಿ ಎಲ್ಲರೂ ಮುಳುಗಿ ಹೋದರು.

ಮೀರ ಮನೆಗೆ ಬಂದು ಪುಸ್ತಕಗಳನ್ನು ಮೇಜಿನ ಮೇಲಿಡುತ್ತಿದ್ದಂತೆಯೇ ಶ್ರೀಪಾದು ಹತ್ತಿರ ಬಂದು ಕೇಳಿದ:

"ಹೇಗೆ ಮಾಡಿರುವೆ ಮೀರಾ?"

"ಹೇಗೆ ಮಾಡಿದರೇನೋ ಶ್ರೀಪಾದೂ? ಇನ್ನು ನನಗೆ ಎಲ್ಲಾ ಒಂದೇ."

ಸಹನೆಯ ಕಟ್ಟೆಯೊಡೆದು ಕಂಬನಿ ಕಣ್ಣುಗಳಿಂದ ಉಕ್ಕಿ ಹರಿಯಿತು. ಶ್ರೀಪಾದು ಒಂದು ಗಳಿಗೆ ಬೆಪ್ಪನಂತೆ ಅವಳ ಮುಖವನ್ನೇ ನೋಡುತ್ತ ನಿಂತಿದ್ದು ಹೊರಟುಹೋದ.

ಮೀರ ಒಂದು ಗಳಿಗೆ ಅತ್ತು ಸಮಾಧಾನ ಮಾಡಿಕೊಂಡಳು. ಅತ್ತಿದ್ದ ಗುರುತುಗಳೆಲ್ಲಾ ಮಾಯವಾದ ನಂತರ ದೊಡ್ಡಪ್ಪನ ಬಳಿ ನಿಂತು,

"ದೊಡ್ಡಪ್ಪ, ಇವತ್ತು ಮಧ್ಯಾಹ್ನ ನಾವು ಸ್ನೇಹಿತರೆಲ್ಲಾ ಸಿನಿಮಾಗೆ ಹೋಗ ಬೇಕೂಂತ ಮಾಡಿಕೊಂಡಿದೀವಿ" ಎಂದಳು.

"ಇವತ್ತು ಹೋಗು. ಆದರೆ ನಾಳೆ ದಿನ ಎಲ್ಲಿಗೂ ಹೋಗಬೇಡ. ಶಾಮು ವಿನ ಸೋದರಮಾವ, ಅವರ ಹೆಂಡತಿ ನಿನ್ನ ನೋಡೋಕೆ ಬರುತ್ತಾರೆ."

ಮೀರ ಮರುಮಾತನಾಡಲಿಲ್ಲ.

ಮೀರ ಮಧ್ಯಾಹ್ನ ಗೆಳತಿಯರೊಡನೆ ಸಿನಿಮಾಕ್ಕೆ ಹೊರಟಳು. ಅದರಲ್ಲಿನ ನಾಯಕಿ ಮೀರಳಂತೆ ವಿವಾಹವನ್ನು ಪ್ರಬಲವಾಗಿ ವಿರೋಧಿಸುತ್ತಿದ್ದಳು. ಆದರೆ ಒಂದು ದಿನ ನಿಸರ್ಗದ ಮಡಿಲಿನಲ್ಲಿ ಪಿಕ್‌ನಿಕ್‌ಗೆ ಹೋಗುತ್ತಿದ್ದಾಗ ಅಕಸ್ಮಾತ್ ಕಾಲುಜಾರಿ ಬಿದ್ದ ನಾಯಕಿಗೆ ನಾಯಕ ಸಹಾಯ ಮಾಡಲು ತನ್ನ ಕೈಯನ್ನು ನೀಡು ತ್ತಾನೆ. ನಾಯಕಿ ಅವನ ಕೈ ಹಿಡಿದು ಮೇಲೇಳಲು ಪ್ರಯತ್ನಿಸಿದಾಗ ತರುಣನ ಹಸ್ತ ಸ್ಪರ್ಶದಿಂದ ಅವಳ ಹೃದಯ ಕಂಪಿಸುತ್ತದೆ. ವಿವಾಹದ ಮೇಲಿನ ಪ್ರತಿಭಟನೆ ಓಮ್ಮೆ ಟ್ಟುತ್ತದೆ. ಮದುವೆ ಮಾನವರಿಗೆ ಅಗತ್ಯ ಎಂಬ ಅಂಶ ನಾಯಕಿಗೆ ಗೋಚರವಾಗುತ್ತದೆ.

ಮೀರ ಚಿತ್ರವನ್ನು ನೋಡಿ ವಿಷಾದದಿಂದ ನಕ್ಕಳು. ಮೀರಳಿಗೆ ವಿವಾಹದ ಅವಶ್ಯಕತೆಯಿನ್ನೂ ತೋರಿರಲಿಲ್ಲ. ಮದುವೆಯಿಲ್ಲದೆ ಹೆಂಗಸು ಬದುಕನ್ನು ನೂಕ ಬಲ್ಲಳು ಎಂಬುದು ಅವಳ ಅಭಿಪ್ರಾಯವಾಗಿತ್ತು. ಆದುದರಿಂದ ಚಿತ್ರ ಅವಳ ಮನಸ್ಸಿನ ಮೇಲೆ ಯಾವ ರೀತಿಯ ಪರಿಣಾಮವನ್ನೂ ಉಂಟು ಮಾಡಲಿಲ್ಲ.

ಮಗಳನ್ನು ನೋಡಲು ಬರುವ ಬೀಗರನ್ನು ಎದುರುಗೊಳ್ಳಲು ಮನೆಯಲ್ಲಿ ಎಲ್ಲ ಸಿದ್ಧತೆಗಳೂ ನಡೆದಿತ್ತು.

ಕೃಷ್ಣಪ್ಪನವರು ಸ್ಟೇಷನ್ನಿಗೆ ಹೋಗಿ ಭಾವಿ ಅಳಿಯಂದಿರನ್ನೂ, ಬೀಗರನ್ನೂ ಎದುರುಗೊಂಡರು. ಶೀನಪ್ಪ, ಅವನ ಹೆಂಡತಿ ಸಾವಿತ್ರಮ್ಮ, ಶಾಮು, ಸಾವಿ ತ್ರಮ್ಮನ ಕೈಮಗು ವಿನೋದ ರೈಲಿನಿಂದಿಳಿದ ಕೂಡಲೇ ಕೃಷ್ಣಪ್ಪನವರು ಗಾಡಿ ಮಾಡಿ ಬೀಗರನ್ನು ಮನೆಗೆ ಕರೆದೊಯ್ದರು. ಕಮಲಮ್ಮನವರು ಮುಂಬಾಗಿಲಿನಲ್ಲಿ ನಿಂತಿದ್ದು ಸಾವಿತ್ರಮ್ಮನನ್ನು ಒಳಗೆ ಕರೆದುಕೊಂಡು ಹೋದರು.

"ಪ್ರಯಾಣ ಸುಖವಾಗಿತ್ತೇ?"

"ಹ್ಞೂ."

"ಸ್ನಾನಕ್ಕೆ ಏಳಬಹುದಲ್ಲಾ."

"ಮಾಡಿಕೊಂಡೇ ಬಂದೆವು."

ವಾಂಗೀಭಾತು, ಹಾಲುಖೀರು, ಬೊಂಬಾಯಿ ಬೋಂಡಾದಿಂದ ಕಮಲಮ್ಮನವರು ಭಾವೀ ಬೀಗರನ್ನು ತಣಿಸಿದರು.

ಮೀರ ರೂಮಿನಿಂದ ಹೊರಗೇ ಬಂದಿರಲಿಲ್ಲ. ಕಮಲಮ್ಮನವರ ಬಲ

ವಂತಕ್ಕೆ ಅಂಜೂರ ಬಣ್ಣದ ರೇಷ್ಮೆ ಸೀರೆಯುಟ್ಟು, ಜಡೆ ಹೆಣೆದುಕೊಂಡು ತಲೆ ತುಂಬಾ ಹೂವು ಮುಡಿದಿದ್ದಳು. ನೀಲಿ ಹರಳಿನ ಲೋಲಕು ಚಂಚಲಗತಿಯಿಂದ ತೂಗುತ್ತಿತ್ತು, ಅವಳ ಮನಸ್ಸಿನಂತೆಯೇ.

ಹಾಲಿನಲ್ಲಿ ಎಲ್ಲರೂ ಕುಳಿತು ತಾಂಬೂಲ ಹಾಕಿಕೊಳ್ಳುತ್ತಿದ್ದಾಗ ಶಾಮುವಿನ ಕಣ್ಣುಗಳು ಸುತ್ತಲೂ ಹೊರಳಿದವು. ಅದನ್ನರಿತೋ ಏನೋ ಕೃಷ್ಣಪ್ಪನವರು, "ಮೀರಾ, ಬಾಮ್ಮ" ಎಂದು ಕೂಗಿದರು. ಮೀರ ರೂಮಿನಿಂದ ಹೊರಗೆ ಬಂದು, ಅಲ್ಲೇ ಹಾಸಿದ್ದ ಚಾಪೆಯ ಮೇಲೆ ತಲೆ ತಗ್ಗಿಸಿ ಕುಳಿತಳು. ಶಾಮು ಸುತ್ತ ಇರುವವರು ಏನು ತಿಳಿದುಕೊಳ್ಳುವರೆಂಬ ಲಕ್ಷ್ಯವಿಲ್ಲದೆ ನಿಸ್ಸಂಕೋಚದಿಂದ ಮೀರಳನ್ನು ನೋಡತೊಡಗಿದ.

ಹಿಂದೆ ತಾನು ಬಂದಿದ್ದಾಗ ಮೀರ ತನಗೆ ಟಿಕೀಟು ಮಾರಿದುದನ್ನು ನೆನೆದು ತುಂಟನಗೆ ಅವನ ಮುಖದ ಮೇಲೆ ಹಾದುಹೋಯಿತು. ಮೀರಳಿಗೂ ಅದರ ನೆನಪಾಗಿರಬಹುದೆಂದುಕೊಂಡು ಶಾಮು ಅವಳ ಮುಖವನ್ನು ಸೂಕ್ಷ್ಮವಾಗಿ ನೋಡಿದ. ತಗ್ಗಿಸಿದ ಕಣ್ಣುಗಳ ನೀಳವಾದ ರೆಪ್ಪೆಗಳು, ಹಣೆ, ಬೈತಲೆ ಮಾತ್ರ ಕಾಣಿಸಿದವು. ಮುಖ ಭಾವರಹಿತವಾಗಿತ್ತು. ಗಾಂಭೀರ್ಯದ ಹೊರತು ಬೇರೆ ಯಾವ ವಿಧವಾದ ಭಾವನೆಯೇ ಅವನಿಗೆ ಕಾಣಲಿಲ್ಲ.

ಶಾಮುವಿನ ಮನಸ್ಸು ಉಲ್ಲಾಸದಿಂದ ಎಳೆಗರುವಿನಂತೆ ಹಾರಾಡುತ್ತಿದ್ದಾಗಲೇ ಮೀರಳ ಮನಸ್ಸು ಮುದುಡಿ ಮಲಗಿತ್ತು.

ತಮ್ಮ ಮಗಳು ಸರಸಿಯನ್ನು ನಿರಾಕರಿಸಿ ಶಾಮು ಮೀರಳ ಕೈ ಹಿಡಿಯುವುದರ ಕಾರಣ ಸಾವಿತ್ರಮ್ಮನವರಿಗೆ ಈಗ ತಿಳಿಯಿತು. ಶಾಮುವಿನ ಅಭಿರುಚಿಯನ್ನೂ, ರಸಿಕತೆಯನ್ನೂ ಮನಸ್ಸಿನಲ್ಲೇ ಮೆಚ್ಚಿದರು.

ರಾತ್ರಿ ಒಬ್ಬಟ್ಟು, ಪಾಯಸದ ಔತಣವಾದ ನಂತರ ರಾಮಾಶಾಸ್ತ್ರಿಗಳ ಲಗ್ನಪತ್ರಿಕೆಯನ್ನು ಬರೆದರು–ಬೀಗರಿಗೆ ಪರಸ್ಪರ ಲಗ್ನಪತ್ರಿಕೆ ಕೊಡಿಸಿದರು. ಮೀರಳಿಗೆ ಎಲೆಹಸಿರು ಬಣ್ಣದ ರೇಷ್ಮೆ ಸೀರೆಯನ್ನು ಶಾಮು ಉಡುಗೊರೆಯಾಗಿ ಕೊಟ್ಟ.

ಹೊಲಗದ್ದೆಗಳ ನಡುವೆ ಬೆಳೆದು ಹಸಿರು ಬಣ್ಣವನ್ನು ಸದಾ ನೋಡುತ್ತಿದ್ದ ಶಾಮುವಿಗೆ ಹಸಿರೆಂದರೆ ಬಹಳ ಪ್ರಿಯ. ಸಾವಿತ್ರಮ ಸೀರೆಯನ್ನು ಮೀರಳ ಕೈಗಿತ್ತು ಆಶೀರ್ವಾದ ಮಾಡಿದರು. ಮೀರ ಆ ಸೀರೆ ಉಟ್ಟು ಆಗಲೇ ತನಗೆ ತೋರಿಸಬೇಕು ಎಂದು ಹೇಳುವ ಆತುರ ಶಾಮುವಿಗೆ. ಆದರೆ ಸಂಕೋಚ, ದಾಕ್ಷಿಣ್ಯ ಅವನ ಬಾಯನ್ನು ಕಟ್ಟಿಹಾಕಿತ್ತು. ಆಸೆ ತುಂಬಿದ ಕಣ್ಣುಗಳಿಂದ ಅವಳ ಕಡೆ ನೋಡಿದಾಗ ಮೀರ ಆ ಸೀರೆಯನ್ನು ಅಲಕ್ಷ್ಯದಿಂದ ಕೈಗಳಲ್ಲಿ ಮುದುರಿ ಒಳಗೆ ತೆಗೆದುಕೊಂಡು ಹೋಗುತ್ತಿದ್ದಳು. ಶಾಮುವಿನ ಹೃದಯದಾಸೆ ಅಲ್ಲೇ ಇಂಗಿಹೋಯಿತು.

# ಪಲ್ಲವಿ

ಮೀರಳ ಮದುವೆಯ ಸಿದ್ಧತೆ ಬಹಳ ಸಂಭ್ರಮದಿಂದ ಸಾಗಿತ್ತು. ಯಾರಿಗಾಗಿ ಇಷ್ಟೆಲ್ಲ ವೈಭವಗಳು ನಡೆಯುತ್ತಿದ್ದವೋ ಅವಳ ಮುಖ ಮಾತ್ರ ಕಾಂತಿಹೀನ ವಾಗಿತ್ತು. ವಿರಕ್ತಿ, ಔದಾಸೀನ್ಯದ ತೆರೆಯೊಳಗೆ ಮೀರ ಅಡಗಿಕೊಂಡಳು. ಮದುವೆಯ ದಿನ ಸಮೀಪಿಸುತ್ತಿದ್ದಂತೆ ಬಂಧುಗಳು ಮನೆಗೆ ಬರತೊಡಗಿದರು. ಮನೆಯಲ್ಲಿನ ಗಲಾಟೆಯಿಂದ ಮೀರಳಿಗೆ ಒಂದು ಗಳಿಗೆ ನಿದ್ದೆ ಮಾಡಿ ತನ್ನ ಮನಸ್ಸಿನ ವಿಪ್ಲವವನ್ನು ಮರೆಯುವುದೂ ಸಹ ಸಾಧ್ಯವಾಗಲಿಲ್ಲ. ಈ ಗೊಂದಲ ದಿಂದ ಪಾರಾಗಿ ಎಲ್ಲಿಯಾದರೂ ಏಕಾಂಗಿಯಾಗಿರಬೇಕೆಂಬ ಬಯಕೆ ಆಗಾಗ್ಗೆ ತಲೆದೋರುತ್ತಿತ್ತು. ಆದರೆ ಹಿರಿಯರು ನಿರ್ಮಿಸಿದ್ದ ಆ ನಾಟಕಕ್ಕೆ ಮೀರಾ ನಾಯಕಿ ಯಾದ್ದರಿಂದ ಎಲ್ಲಿ ಹೋಗುವುದೂ ಸಾಧ್ಯವಾಗಲಿಲ್ಲ. ಮದುವೆಯ ದಿನ ಶಾಮು, ಅವನ ನೆಂಟರು ಬಿಡದಿಯ ಮನೆಯಲ್ಲಿ ಇಳಿದುಕೊಂಡರು. ಶಾಮುವಿನ ಸೋದರಮಾವನ ಮಗಳು ಸರಸಿಗೆ ಮೀರಳನ್ನು ನೋಡುವ ಆತುರ. ತನ್ನನ್ನು ತಿರಸ್ಕರಿಸಿದ ಶಾಮು ಮಾವ ಮತ್ತಾವ ರತಿಯ ಕೈ ಹಿಡಿಯುತ್ತಾನೋ ಎಂದು ಅವಳು ನಂಜಿನ ನಗೆ ನಕ್ಕಿದ್ದಳು. ಮೈಸೂರಿಗೆ ಬಂದೊಡನೆ ತನ್ನ ಆತುರವನ್ನು ತನ್ನ ವಯಸ್ಸಿನ ರಂಗಲಕ್ಷ್ಮಿಯೊಡನೆ ಹೇಳಿಕೊಂಡಳು.

"ಬಾರೇ ರಂಗು, ಶಾಮು ಮಾವ ಅದಿನ್ನೆಂತಹ ಸುಂದರಿಯ ಕೈ ಹಿಡಿಯು ತ್ತಾನೋ ನೋಡಿ ಬರೋಣ."

ತಿಂಡಿ, ಕಾಫಿ ಮುಗಿಸಿಕೊಂಡು ರಂಗು, ಸರಸಿ ಹೆಣ್ಣಿನವರ ಮನೆಗೆ ಯಾರಿಗೂ ತಿಳಿಯದಂತೆ ಜಾರಿದರು. ಎಲ್ಲಿ ಹೋಗುವುದು ಎಂದು ತಿಳಿಯದೆ ಅಪರಿಚಿತನಾದ ಶ್ರೀಹರಿಯನ್ನು ಸರಸಿ ಪ್ರಶ್ನಿಸಿದಳು.

"ಮೀರಾ ಎಲ್ಲಿ? ನಾವು ಅವಳ ಸ್ನೇಹಿತರು!"

ಸರಸಿಗೆ ತನ್ನ ಅತ್ತೆಯನ್ನು ನೋಡುವ ಆತುರ ಬಲವಾಗಿತ್ತು. ಶ್ರೀಹರಿ ಮೀರಳ ಎಲ್ಲಾ ಗೆಳತಿಯರನ್ನೂ ನೋಡಿದ್ದ. ಆದರೆ ಈ ಹೊಸ ಗೆಳತಿಯರು ಯಾರೆಂಬುದು ತಿಳಿಯಲಿಲ್ಲ. 'ಬನ್ನಿ' ಎಂದು ಹೇಳಿದ. ಮೀರ ರೂಮಿನಲ್ಲಿ ತನ್ನ ಅಳಿದ ತಾಯಿ ಕಡೆಯ ಸಂಬಂಧಿ ಪದ್ದಕ್ಕನೊಡನೆ ಮಾತನಾಡುತ್ತಾ ಕುಳಿತಿದ್ದಳು. ಶ್ರೀಹರಿ ಒಳಗೆ ಬಂದು,

"ಮೀರ ನಿನ್ನ ಸ್ನೇಹಿತರು ಯಾರೋ ಬಂದಿದ್ದಾರೆ" ಎಂದು ಹೇಳಿ ಹೊರಗೆ ಹೋದ.

"ಸ್ವಲ್ಪ ಇರಿ ಪದ್ದಕ್ಕ. ನನ್ನ ಸ್ನೇಹಿತೆ ಚಂಪಾನೋ, ರಾಜೂನೋ ಬಂದಿರ ಬಹುದು" ಎನ್ನುತ್ತ ಮೀರ ಎದ್ದು ಹೊರಗೆ ಬಂದಳು. ಎದುರಿಗೆ ನಿಂತಿದ್ದ ಸರಸಿ,

ರಂಗಲಕ್ಷ್ಮಿಯನ್ನು ಅನುಮಾನಾಶ್ಚರ್ಯಗಳಿಂದ ನೋಡುತ್ತ ನಿಂತಳು. ಸರಸಿ ವಿಮರ್ಶಕಳಂತೆ ಮುಡಿಯಿಂದ ಅಡಿಯವರೆಗೆ ನಿಟ್ಟಿಸಿ ನೋಡಿ,

"ನಾವು ಶಾಮು ಮಾವನ ಕಡೆಯವರು. ನಿಮ್ಮನ್ನು ನೋಡೋಕೆ ಬಂದೆವು" ಎಂದಳು.

ಶಾಮು ಮಾವ ಎಂದೊಡನೆ ಮೀರಾ ಅವರು ಗಂಡಿನ ಕಡೆಯ ಸಂಬಂಧಿಗಳಿರಬೇಕೆಂದೂಹಿಸಿ, 'ಬನ್ನಿ' ಎಂದು ರೂಮಿಗೆ ಕರೆದೊಯ್ದಳು.

"ಕಾಫಿ, ತಿಂಡಿ ಆಯಿತೇನು?"

ರಂಗು "ಹ್ಞೂ, ಆಯಿತು" ಎಂದಳು.

ಸರಸಿ ನುಂಗುವವಳಂತೆ ಒಂದೇ ಸಮ ಮೀರಳನ್ನು ನೋಡತೊಡಗಿದಳು. ಕಾಲು ಗಂಟೆಯಲ್ಲಿ ಒಂದು ಮಾತನ್ನೂ ಆಡದೆ ಸರಸಿ ವಿಚಿತ್ರ ವಸ್ತುವನ್ನು ನೋಡುವಂತೆ ಮೀರಳನ್ನು ನೋಡಿ ಅನಂತರ ರಂಗಲಕ್ಷ್ಮಿಯನ್ನು ತಿವಿದೆಬ್ಬಿಸಿ "ನಾವಿನ್ನು ಹೋಗ್ತೀವಿ" ಎಂದು ಎದ್ದಳು. ಮೀರ ತಲೆಯಲುಗಾಡಿಸಿ ತನ್ನೊಪ್ಪಿಗೆ ಕೊಟ್ಟಳು. ಅವಳಿಗೆ ಅವರ ಪರಿಚಯವಿರಲಿಲ್ಲ. ಪರಸ್ಪರ ಒಬ್ಬರನ್ನೊಬ್ಬರು ನೋಡುತ್ತ ಕುಳಿತುಕೊಂಡಿದ್ದ ಈ ಸನ್ನಿವೇಶ ಅವಳಿಗೆ ಬೇಸರ ತಂದಿತ್ತು. ಅವರು 'ಹೋಗುತ್ತೇವೆ' ಎಂದೊಡನೆ 'ಆಗಲಿ' ಎಂದಳು.

ಹೊರಬಂದೊಡನೆ ಸರಸಿ ವ್ಯಂಗ್ಯವಾಗಿ ನಕ್ಕು ಹೇಳಿದಳು:

"ನಮ್ಮ ಶಾಮು ಮಾವ ಇನ್ನೆಂಥಾ ಸುರಸುಂದರಿಯ ಕೈ ಹಿಡಿಯುತ್ತಾನೋ ಎಂತಿದ್ದೆ. ಇವಳೇ ಅವನು ಮೆಚ್ಚಿದ ರಂಭೆ! ಥೂ, ಸ್ವಲ್ಪವೂ ಚೆನ್ನಾಗಿಲ್ಲ. ಇವಳಂಥವರು ನಮ್ಮೂರಿನಲ್ಲಿ ಕಾಸಿಗೊಂದು, ಕೊಸರಿಗೆರಡು" ಎಂದಳು.

"ಯಾಕೆ ಸರಸಿ? ನನಗೇನೋ ಹುಡುಗಿ ಚೆನ್ನಾಗಿದ್ದಾಳೆ. ಏನು ಗಂಭೀರ."

"ಸುಮ್ಮನಿರಮ್ಮ, ಗಂಭೀರ ಬಿಟ್ಟು.... ಅದೆಲ್ಲಾ ಜಂಭ. ತಾನೇ ಓದಿರುವ ಸರಸ್ವತಿ ಅಂತ ಜಂಭ ಕಣೇ. ನಾವು ಹೋದರೆ ಮಾತನಾಡಿಸುವುದು ಬಿಟ್ಟು ಬಾಯಿ ಬಿಟ್ಟರೆ ಮುತ್ತು ಸುರಿಯುತ್ತದೆ ಎನ್ನುವ ಹಾಗೆ ಸುಮ್ಮನೆ ಕುಳಿತುಕೊಳ್ಳಬೇಕೆ? ಮುಖ ಮಂಕಾಗಿದೆ."

"ನಿನಗೆ ಜಂಭ ಇಲ್ಲವಲ್ಲಾ, ನೀನೇ ಮೊದಲು ಮಾತನಾಡಿಸಬೇಕಾಗಿತ್ತು."

ಸರಸಿಗೆ ಕೋಪ ಬಂತು. "ಮಹಾ, ಅವಳು ಜಂಭ ಮಾಡಿದರೆ ನಾನೇಕೆ ಮಾತನಾಡಿಸಲಿ? ಅವಳ ಜಡೆ ಎಷ್ಟು ಮೋಟು, ಸ್ವಲ್ಪ ಮಾಲುಗಣ್ಣು...."

"ಹೋಗೇ, ನೀನವಳನ್ನು ಸರಿಯಾಗಿ ನೋಡೇ ಇಲ್ಲ. ಜಡೆ ಮೋಟಾಗಿದ್ದರೂ ಗುಂಗುರಾಗಿ ದಪ್ಪಗಿದೆ. ಅವಳಿಗಿರುವಷ್ಟು ಚೆನ್ನಾಗಿರುವ ಕಣ್ಣು ನಮಗಿದ್ದಿದ್ದರೆ ಎಷ್ಟೋ ಆಗುತ್ತಿತ್ತು."

ಸರಸಿ ತನ್ನ ಟೀಕೆಗೆಲ್ಲ ರಂಗು ಎದುರು ಹೇಳುವುದನ್ನರಿತು ಸುಮ್ಮನಾದಳು.

ಮಾರನೆಯ ದಿನ ಬೆಳಿಗ್ಗೆ ಒಂಭತ್ತು ಗಂಟೆಗೆ ಲಗ್ನ ನಿಶ್ಚಯವಾಗಿತ್ತು. ಮೀರ ಬೆಳಗಾಗುವುದೇ ಬೇಡ ಎಂದು ಮೊರೆಯಿಟ್ಟಳು.

ಬೆಳಿಗ್ಗೆ ಮಂಗಳ ವಾದ್ಯಗಳು ಭೋರ್ಗರೆಯತೊಡಗಿದವು. ಸುಪ್ರಭಾತದಲ್ಲಿ ಮಧುರರವ ಗೈಯುತ್ತಿದ್ದ ವಾದ್ಯಗಳು ಮೀರಳಿಗೆ ಅಪಸ್ವರದಿಂದ ಗೋಳಾಡು ತ್ತಿರುವಂತೆ ಭಾಸವಾಯಿತು.

ಮೀರ ಕನಕಾಂಬರದ ರೇಷ್ಮೆ ಸೀರೆಯುಟ್ಟು, ದೇವರ ಮುಂದೆ ಕುಳಿತಿದ್ದಳು. ಮಾವಿನಕಾಯಿ ಜರಿಯಂಚು ಬೆಳಗಿನ ಕಿರಣದಲ್ಲಿ ಹೊಳೆಯುತ್ತಿದ್ದವು. ನೀಲಿ ಹರಳಿನ ಲೋಲಕ್ಕು ಅವಳ ಕೆಂಪು ದುಂಡು ಕೆನ್ನೆಯ ಮೇಲೆ ನೀಲಿ ಕಿರಣಗಳನ್ನು ಹರಡಿತ್ತು. ಕೈ ತುಂಬಾ ಇದ್ದ ಹಸಿರು ಬಳೆಗಳು ಮೀರ ಪೂಜೆ ಮಾಡಲು ಕೈ ಅಲುಗಿಸುತ್ತಿದ್ದಾಗ ಧ್ವನಿ ಮಾಡುತ್ತಿದ್ದವು. ಹಣೆಯ ಮೇಲಿದ್ದ ಬಾಸಿಂಗದಿಂದಾಗಿ, ಕೆನ್ನೆಯ ಮೇಲೆ ಬಳಿದಿದ್ದ ಅರಿಶಿನದಿಂದಾಗಿ ಮೀರಳ ಚೆಲುವು ಅಂದು ಇಮ್ಮಡಿ ಯಾಗಿದ್ದವು. ನವವಧು ಮೀರ ಅಂದು ಅಪೂರ್ವ ಸುಂದರಿಯಾಗಿದ್ದಳು.

ಪೂಜೆ ಮಾಡುತ್ತಿದ್ದ ಮೀರಳ ಬಳಿ ಕುಳಿತು ಸಾವಿತ್ರಮ್ಮ ಒಡವೆ ಪೆಟ್ಟಿಗೆಯ ಬಾಗಿಲನ್ನು ತೆಗೆದು ಒಂದೊಂದಾಗಿ ಮೀರಳಿಗೆ ಹಾಕತೊಡಗಿದರು. ಶಾಮು ಪುಣ್ಯ ವಂತ ಎಂಬುದು ಎಲ್ಲರಿಗೂ ತಿಳಿದಿತ್ತು. ಅವನು ಹೆಂಡತಿಗೆ ಏನೇನು ಒಡವೆಗಳನ್ನು ಹಾಕುತ್ತಾನೆ ಎಂಬ ವಿಷಯವಾಗಿ ಎಲ್ಲರಿಗೂ ಕುತೂಹಲವಿದ್ದುದರಿಂದ ಮದುವೆ ಮನೆಯ ಹೆಂಗಸರು ಸುತ್ತ ಮುತ್ತಿಕೊಂಡು ನೋಡುತ್ತಿದ್ದರು.

ಸಾವಿತ್ರಮ್ಮ ಕಿವಿಗೆ ವಜ್ರದೋಲೆ ಹಾಕಿ ಕೆನ್ನೆ ಸರಪಳಿ ತಗುಲಿಸಿದರು. ಕೊರಳಿಗೆ ಪದಕ, ಕಾಸಿನ ಸರ, ಚಂದ್ರಹಾರ, ಅವಲಕ್ಕಿ ಸರ ಹಾಕಿದರು. ಕೈಗೆ ಚಿನ್ನದ ಸಿಂಹ ಲಲಾಟ, ಹಳೆಯಕಾಲದ ನಾಲ್ಕು ಜೊತೆ ಬಳೆಗಳನ್ನಿಟ್ಟರು. ಸೀರೆಯ ಸೆರಗು ಸರಿ ಮಾಡಿ ಗೆಜ್ಜೆಯ ಡಾಬನ್ನು ಹಾಕಿದರು. ಆಭರಣಗಳನ್ನು ಒಂದೊಂದಾಗಿ ತೆಗೆದು ಮೀರಳಿಗೆ ಹಾಕುವಾಗ ಒಂದು ಕ್ಷಣ ಅವರ ಮನಸ್ಸು ಮತ್ಸರದಿಂದ ಕುದಿಯಿತು.

"ಸರಸಿಗೆ ಈ ಆಭರಣಗಳ ಒಡತಿಯಾಗುವ ಪುಣ್ಯವಿಲ್ಲವಲ್ಲಾ" ಎಂದು ಕೊಂಡರು.

'ಅವರ ವಂಶಕ್ಕೆಲ್ಲಾ ಒಂದು ಕುಡಿಯಿದೆ. ಗಂಡ ಹೆಂಡತಿ ಎಲ್ಲಾದರೂ ಸುಖವಾಗಿರಲಿ' ಎಂದು ವಿವೇಕ ನುಡಿಯಿತು.

"ಈ ಒಡವೆಗಳೆಲ್ಲಾ ಹೊಸದಾಗಿ ಮಾಡಿಸಿದ ಹಾಗಿಲ್ಲವಲ್ಲ" ಎಂದು ಬೆರಗಾಗಿ ನೋಡುತ್ತ ನಿಂತಿದ್ದ ಪದ್ದಕ್ಕ.

"ಯಾವುದೂ ಹೊಸ ಒಡವೆಗಳಲ್ಲ ಪದ್ದಕ್ಕ. ಎಲ್ಲಾ ಅವನ ತಾಯಿಯ ಒಡವೆಗಳು. ಅರ್ಧ ಒಡವೆ ಹಳ್ಳೀಲೇ ಬಿಟ್ಟು ಸ್ವಲ್ಪ ಮಾತ್ರ ತಂದಿದಾನೆ" ಎಂದರು ಸಾವಿತ್ರಮ್ಮ.

ಕಮಲಮ್ಮ "ನೋಡಿದರೇ ಗೊತ್ತಾಗುತ್ತದೆ. ಎಲ್ಲಾ ಪೂರ್ವಕಾಲದವು, ಏನು ಮಜಬೂತಾಗಿವೆ ನೋಡಿ. ಆ ಡಾಬೊಂದೇ ಏನಿಲ್ಲಾಂದರೂ ಒಂದೂವರೆ ಸೇರು ಚಿನ್ನವಿದೆ" ಎಂದರು.

ಮೀರಳ ಸುತ್ತ ನಿಂತಿದ್ದ ಅವಿವಾಹಿತ ಕನ್ಯೆಯರು ಮತ್ಸರ ತಾಳಿದರು.

ಮೀರಳಿಗೆ ಮಾತ್ರ ಒಡವೆಗಳಿಂದ ಆನಂದವುಂಟಾಗಲಿಲ್ಲ. ತನ್ನ ಕನಸಿನ ಸುಂದರ ಸೌಧ ಭೂಮಿಗೆ ಬಿದ್ದುದನ್ನು ನೆನೆದು ಹೃದಯ ಅಳುತ್ತಿತ್ತು.

"ನಾನೂ ಓದಬೇಕಾಗಿತ್ತು. ನಾನೂ ಗೋಪಣ್ಣನಂತೆ ಡಾಕ್ಟರಾಗಬೇಕಿತ್ತು. ನಾನೂ ಸ್ವತಂತ್ರಳಾಗಿರಬೇಕಾಗಿತ್ತು" ಎಂದು ಮನಸ್ಸು ಕೂಗುತ್ತಿತ್ತು.

ಆದರೆ ಎಲ್ಲಾ ಕೈ ಮೀರಿಹೋಗಿತ್ತು.

ವಧೂವರರು ಹಸೆಯ ಮೇಲೆ ಕುಳಿತಿದ್ದರು. ಪುರೋಹಿತರು ರಾಗವಾಗಿ ಮಂತ್ರ ಹೇಳುತ್ತಾ ಹುಡುಗಿಯ ಕೈಲಿದ್ದ ಅರಳನ್ನು ಆಗಾಗ್ಗೆ ಮುಂದೆ ಉರಿಯುತ್ತಿದ್ದ ಅಗ್ನಿಯಲ್ಲಿ ಸುರಿಸುತ್ತಿದ್ದರು. ಹೊಗೆಯಿಂದಲೋ ಏನೋ ಹುಡುಗಿಯ ಕಣ್ಣುಗಳು ಕೆಂಪಾಗಿದ್ದವು.

ಮದುವೆಗೆ ಬಂದಿದ್ದವರು ತಮ್ಮತಮ್ಮಲ್ಲೇ ಒಂದು ಪುಟ್ಟ ಗುಂಪು ಕಟ್ಟಿಕೊಂಡು ಮನಬಂದಂತೆ ಮಾತನಾಡುತ್ತಿದ್ದರು!

"ನೀವು ಏನೇ ಹೇಳಿ ಪುಟ್ಟಮ್ಮ, ಹುಡುಗಿಯ ಮುಖ ನೋಡಿದರೆ ಈ ಸಂಬಂಧ ಇಷ್ಟವಿರುವ ಹಾಗಿಲ್ಲ."

"ಸುಮ್ಮನಿರಿ ರಾಜಮ್ಮ. ಶಾಮಣ್ಣ ಮೀರಳಿಗಿಂತ ಯಾವ ವಿಧದಲ್ಲಿ ಕಡಿಮೆಯಾಗಿದ್ದಾನೆ? ಬಣ್ಣದಲ್ಲಿ ಮೀರಳಿಗಿಂತಲೂ ಕೊಂಚ ಕೆಂಪಾಗಿದಾನೆ. ಶಾಮಣ್ಣನ ಕೈ ಹಿಡಿಯೋಕೆ ಮೀರ ಪುಣ್ಯಮಾಡಿದ್ದಳು. ಅವನು ಓದಿಲ್ಲಾಂತ ಅವಳ ಮನಸ್ಸಿಗೆ ಸ್ವಲ್ಪ ಬೇಜಾರಾಗಿರಬಹುದು. ವಿದ್ಯೆ ಕಟ್ಟಿಕೊಂಡು ಏನಾಗಬೇಕಾಗಿದೆ ರಾಜಮ್ಮ? ಈಗಿನ ಕಾಲದಲ್ಲಿ ವಿದ್ಯೆ, ಬುದ್ಧಿಗೆ ಬೆಲೆಯಿದೆಯೇ ಹೇಳಿ. ನನ್ನ ಮಗ ಸೋಮು ಎಂ.ಎ.ಲಿ ಫಸ್ಟ್ ಕ್ಲಾಸ್ ತಗೊಂಡು ಆರು ತಿಂಗಳಾಯಿತು. ಇನ್ನೂ ಕೆಲಸ ಸಿಕ್ಕಿಲ್ಲಾ...."

ಇವರಿಬ್ಬರ ಸಂಭಾಷಣೆಯನ್ನು ಅತ್ಯಾಸಕ್ತಿಯಿಂದ ಕೇಳುತ್ತಿದ್ದ ಕಪ್ಪು ಧರ್ಮಾವರದ ಸೀರೆಯ ಗರತಿಯೊಬ್ಬಳು ನಡುವೆ ಬಾಯಿಹಾಕಿ ಕೇಳಿದಳು:

"ವಿದ್ಯೆಯಂತೂ ಇಲ್ಲ. ಹೋಗಲಿ ಹಣವಾದರೂ ಇದೆಯೇ?"

"ದುಡ್ಡಿಗೇನು ಕೊರತೆ? ನನ್ನ ನಿಮ್ಮನ್ನು ಕೊಳ್ಳುವಷ್ಟಿದೆ. ಕುಡಿದ ನೀರು ಅಲುಗಾಡದ ಹಾಗೆ ರಾಣಿಯಂತಿರಬಹುದು."

"ಸೀರೆ ಎಷ್ಟಿಟ್ಟಿದಾರೋ?"

"ಆರು ಧರ್ಮಾವರದ ಸೀರೆ ಇಟ್ಟಿದಾರೆ."

"ಹುಡುಗಿ ಮನೇಲಿ?"

"ಪಾಪ! ಅವರೇನಿಡುತ್ತಾರೆ. ಹುಡುಗೀಗೆ ತಂದೆಯಿಲ್ಲ, ತಾಯಿಯಿಲ್ಲ. ಕಾಲೇಜು ಓದಿಸಿದಾರೆ. ಅವರು ಇಷ್ಟು ಮಾಡಿದ್ದೇ ಹೆಚ್ಚು."

ವಿಶಾಲ ಮನಸ್ಸಿನ ಹಿರಿ ಮುತ್ತೈದೆಯೊಬ್ಬಳು ಮನಃಪೂರ್ವಕವಾಗಿ ಹರಸಿದಳು.

"ಎಲ್ಲಾದರೂ ಹುಡುಗಿ ಚೆನ್ನಾಗಿರಲಮ್ಮ."

ಹೊಗೆ ಜಾಸ್ತಿಯಾದುದರಿಂದಲೋ ಏನೋ ಮೀರಳ ಕಣ್ಣಿನಿಂದ ನೀರು ಹರಿಯುವುದಕ್ಕಾರಂಭಿಸಿತು. ಜೊತೆಗೆ ಒತ್ತಿ ಹಿಡಿದಿದ್ದ ದುಃಖ ಉಕ್ಕಿ ಬಂದಂತೆ ಕಣ್ಣೀರು ಅವಳ ಅರಿಶಿನದ ಕೆನ್ನೆಯನ್ನು ತೋಯಿಸಿತು.

"ಪಾಪ! ತಾಯಿಯನ್ನು ನೆನೆಯುತ್ತಿರಬಹುದು" ಎಂದು ಹಲವರು ಪರಿತಾಪ ಪಟ್ಟರು. ಮೀರಳ ಹೊಸ ಕನಕಾಂಬರದ ಸೀರೆಯ ಸೆರಗೆಲ್ಲಾ ಕಣ್ಣೀರಿನಿಂದ ಒದ್ದೆಯಾಯಿತು. ತನ್ನ ಹೂ ಸರಿಮಾಡಲೆಂದು ಓಂದೆ ಬಾಗಿದ ಕಮಲಮ್ಮನಿಗೆ

"ದೊಡ್ಡಮ್ಮಾ, ತುಂಬಾ ಹೊಗೆ. ಒಂದು ಕರ್ಚೀಫ್ ತಂದುಕೊಡು" ಎಂದಳು. ದೊಡ್ಡಮ್ಮ ಕೆಲಸದ ಗಲಾಟೆಯಲ್ಲಿ ಕರ್ಚೀಫ್ ಮರೆತುಬಿಟ್ಟರು. ಶಾಮು ಎರಡು ನಿಮಿಷ ಕಾದು ನೋಡಿ ಅನಂತರ ತನ್ನ ಬಳಿಯಿದ್ದ ಕರವಸ್ತ್ರವನ್ನು ಮೀರಳಿಗೆ ಕೊಟ್ಟ. ಸುತ್ತ ನಿಂತಿದ್ದ ಜನರೆಲ್ಲ ನಕ್ಕರು.

"ಏನು ಶಾಮು, ಆಗಲೇ ಹೆಂಡತಿಯ ಸೇವೆ ಮಾಡುವುದಕ್ಕೆ ಶುರು ಮಾಡಿಬಿಟ್ಟೆ" ಎಂದು ಸ್ನೇಹಿತನೊಬ್ಬ ಗೇಲಿ ಮಾಡಿದ.

ಮೀರಳ ಮದುವೆ ಒಂದೇ ದಿನಕ್ಕೆ ಮುಗಿದುಹೋಯಿತು. ಮದುವೆಯ ದಿನ ರಾತ್ರಿಯೇ ಎರಡನೆಯ ಶಾಸ್ತ್ರವನ್ನೂ ಮುಗಿಸಿ ಹೆಂಡತಿಯನ್ನು ತನ್ನೊಡನೆ ಕಳುಹಿಸಬೇಕೆಂದು ಶಾಮು ಮಾವನಿಗೆ ತಿಳಿಸಿದ.

ಮೀರ ಈ ಸುದ್ದಿ ಕೇಳಿ ಬೆಚ್ಚಿದಳು. ಕಮಲಮ್ಮನವರ ಬಳಿ ಹೋಗಿ ತನ್ನ ವಿರೋಧವನ್ನು ಸೂಚಿಸಿದಳು.

"ಇವತ್ತು ಬೇಡ ದೊಡ್ಡಮ್ಮ. ನನಗೆ ತುಂಬಾ ಆಯಾಸವಾಗಿದೆ. ಈಗಿನ ಕಾಲದಲ್ಲಿ ಎರಡನೇ ಶಾಸ್ತ್ರವನ್ನು ಯಾರು ಮಾಡುತ್ತಾರೆ?"

ಕಮಲಮ್ಮನವರಿಗೆ ಮೀರಳನ್ನು ಕಂಡರೆ ಅಷ್ಟೇನೂ ಪ್ರೀತಿಯಿರಲಿಲ್ಲ.

ಅವಳಿಗೆ ಮದುವೆಯಾಗಿ ಗಂಡನ ಮನೆಗೆ ಹೋದರೆ ಸಾಕೆಂದು ಬಯಸಿದ್ದರು.

"ಮದುವೆ ಆದ ಮೇಲೆ ನೀನು ಅವರ ವಸ್ತುವಾದೆಯಮ್ಮ. ಅವರು ಹೇಳಿದ ಹಾಗೆ ಕೇಳಬೇಕು" ಎಂದುಬಿಟ್ಟರು.

ಅವಳು ರೂಮಿನೊಳಗೆ ಬಂದಾಗ ಶಾಮುವಿನ ಹೃದಯ ಗಡಿಯಾರಕ್ಕಿಂತಲೂ ಗಟ್ಟಿಯಾಗಿ ಬಡಿದುಕೊಂಡಿತು. ಕೊಠಡಿಯ ದೀಪ ಕೂಡ ಅತ್ಯಾಸೆಯಿಂದ ಮೀರಳ ಕಡೆ ನೋಡುತ್ತ ಕುಳಿತಿತ್ತು. ಮೀರ ಒಳಗೆ ಬಂದು ಬಾಗಿಲು ಹಾಕಿ ಬಾಗಿಲೊರಗಿ ನಿಂತಳು. ಶಾಮು ಅಭಿಮಾನದಿಂದ ತನ್ನ ಮಡದಿಯನ್ನು ನೋಡುತ್ತಿದ್ದ. ದುಂಡುಮುಖ, ಸುಪ್ತಸೌಂದರ್ಯಕ್ಕೆ ತೆರೆ ಹಾಕಿದಂತಿದ್ದ ಕನಕಾಂಬರದ ರೇಷ್ಮೆ ಸೀರೆ, ಹೊಳೆಯುವ ಓಲೆ, ಕರಗಿದ ವಜ್ರದಂತೆ ಹೊಳೆಯುತ್ತಿದ್ದ ಕಣ್ಣುಗಳು.... ಶಾಮುವಿನ ಹೃದಯ ರೂಪಸಿಯ ರೂಪಸಾಗರದಲ್ಲಿ ಮುಳುಗಿತು. ಮೀರ ಕೈಗಳನ್ನು ಬೆನ್ನಿನ ಹಿಂದೆ ಕಟ್ಟಿ, ಕೊಂಚ ತಲೆ ಎತ್ತಿ ಸೊಳ್ಳೆಪರದೆಯನ್ನೇ ದಿಟ್ಟಿಸಿ ನೋಡುತ್ತಿದ್ದಳು. ನೋಟ ಅಲ್ಲಿದ್ದರೂ ಮನಸ್ಸು ಅಲ್ಲಿಲ್ಲವೆಂದು ಅವಳ ಅನ್ಯಮನಸ್ಕತೆ ಕೂಗಿ ಹೇಳಿತು. ಒಡವೆಗಳ ಭಾರದಿಂದಲೂ, ಆಯಾಸದಿಂದಲೂ ಹಣೆಯ ಮೇಲೆ ಬೆವರಿನ ಹನಿಗಳು ನಿಂತಿದ್ದವು. ಶಾಮು ಮೆಲ್ಲನೆ ನಡೆದುಬಂದು ಅವಳ ಕೈ ಹಿಡಿದು,

"ಮೀರಾ" ಎಂದ.

ಅವನ ಒರಟು ಹಿಡಿಯಲ್ಲಿದ್ದ ಮೀರಳ ಕೋಮಲ ಕೈ ಕೊಂಚ ನಡುಗಿತು.

"ಏನು ತುಂಬಾ ಯೋಚನೆ ಮಾಡುತ್ತಿರುವ ಹಾಗಿದೆ? ಇವತ್ತೂ ನನಗೆ ಟಿಕೀಟು ಮಾರುವ ಯೋಚನೆಯೇ?"

"........"

"ನನ್ನನ್ನೇ ಕೊಂಡುಕೊಂಡಿದ್ದೀಯಾ. ಅಂತಹ ಯೋಚನೆ ಏನು?"

ಗಂಡನ ಪ್ರೇಮಪೂರ್ವಕ ಪ್ರಶ್ನೆಗೆ ಮೊಟಕಾಗಿ "ಏನೂ ಇಲ್ಲ" ಎಂದಳು.

"ಹಾಗಾದರೆ ನಿನ್ನ ಮುದ್ದು ಮುಖ ಬಾಡಿದೆಯಲ್ಲಾ?"

ಮೀರ ತಲೆ ತಿರುಗಿಸಿ ನಕ್ಕಳು. ಲೋಲಕ್ಕು ಅವಳ ಹಾಲುಗೆನ್ನೆಯ ಮೇಲೆ ಹೆಮ್ಮೆಯಿಂದ ತೂಗಾಡಿತು. ಶಾಮು ತೂಗುತ್ತಿದ್ದ ಲೋಲಕ್ಕನ್ನು ತನ್ನ ಹಿಡಿಯಲ್ಲಿ ಹಿಡಿದು ನಿಲ್ಲಿಸಿ,

"ಲೋಲಕ್ಕು ನೋಡಿದರೆ ನನಗೆ ತುಂಬಾ ಹೊಟ್ಟೆಕಿಚ್ಚು" ಎಂದ.

"ಯಾಕೆ?"

"ನೋಡು, ಅದು ಯಾವಾಗಲೂ ನಿನ್ನ ಕೆನ್ನೆಯ ಮೇಲೆ ಮಲಗಿರುತ್ತದೆ. ನನಗಿಲ್ಲದ ಪುಣ್ಯ ಅದಕ್ಕಿದೆಯಲ್ಲಾಂತ."

ಮೀರಳ ಕೆನ್ನೆ ಕೆಂಪಾಯಿತು.

"ಆ ಪುಣ್ಯ ನನಗೂ ಬೇಕಲ್ಲ!"

ಶಾಮುವಿನ ದನಿಯಲ್ಲಿ ಬೇಡಿಕೆಯಿತ್ತು.

"........"

"ಒಪ್ಪಿಗೆಯೇ?"

ಮೀರ ಸೀರೆಯ ಸೆರಗನ್ನು ತಿರುಚುತ್ತಿದ್ದಳು. ಅವಳರಿಯದಂತ ಅವಳ ಕೆನ್ನೆ ಅವನ ಬಳಿಗೆ ಬಂದಿತ್ತು. ಶಾಮು ತನ್ನ ಕೆನ್ನೆಯನ್ನು ಅವಳ ಕೆನ್ನೆಗೊತ್ತಿ,

"ಈ ರಾತ್ರಿಯೆಲ್ಲಾ ಹೀಗೇ ಕಳೆಯಬೇಕೆನಿಸಿದೆ" ಎಂದ.

ಮೀರ ನೋವಿನಿಂದ ಮುಖ ಹಿಂಡಿದಳು. ಶಾಮುವಿನ ಮುಖದ ಮೇಲಿದ್ದ ಮೂರು ದಿನದ ಹುಲುಸಾದ ಬೆಳೆ ಮೀರಳ ಮೃದು ಚರ್ಮವನ್ನು ಚುಚ್ಚುತ್ತಿತ್ತು. ಮೀರಾ ಉಪಾಯದಿಂದ ಮುಖ ಸರಿಸಿ ತನ್ನ ಕೆನ್ನೆಯನ್ನು ಅಂಗೈಯಿಂದ ಉಜ್ಜಿ ಕೊಂಡಳು.

"ಏನಾಯ್ತು? ನೋವಾಯಿತೇ? ನಾವು ಹಳ್ಳಿಯವರು. ದಿನಾ ಕ್ಷೌರ ಮಾಡುವ ಪದ್ಧತಿ ಇಲ್ಲ. ದೀಪ ಆರಿಸಲೇ?"

ಮೀರ ಬೇಡವೆಂದು ಸೂಚಿಸಿದಳು. ಎರಡು ಮೂರು ಬಾರಿ ಪ್ರಯತ್ನಿಸಿ ವಿಶ್ವಸಾಹಸ ಮಾಡಿ ಕೊನೆಗೆ ಕೇಳಿದಳು:

"ನಾನೊಂದು ಮಾತು ನಿಮ್ಮನ್ನು ಕೇಳಬೇಕೆಂದಿದ್ದೇನೆ.

"ಕೇಳು ಅದಕ್ಕಿಷ್ಟು ಸಂಕೋಚವೇ? ನಾನು ಕಾಲೇಜು ಹುಡುಗಿಯರೆಂದರೆ ಬಹಳ ಧೈರ್ಯಶಾಲಿಗಳು ಎಂದು ಭಾವಿಸಿದ್ದೆ."

ಮೀರಳ ಬಾಯಿ ಕಟ್ಟಿದಂತಾಗಿತ್ತು. ಶಾಮು ಅವಳ ಕಷ್ಟ ನೋಡಿ ನಸುನಕ್ಕು,

"ಬಾಯಿಗೆ ಹಾಕಿರುವ ಬೀಗ ನಾನು ತೆಗೆಯಲೇ!" ಎನ್ನುತ್ತ ಮುಂದೆ ಬಾಗಿದ. ಆಮೇಲೇನಾಯಿತೆಂದು ಮೀರಳಿಗೆ ತಿಳಿಯಲಿಲ್ಲ. ತಲೆ ತಿರುಗಿದಂತಾಯಿತು. ಬಡಕಲ ನಡುವನ್ನು ಸುತ್ತಿದ್ದ ದೃಢವಾದ ತೋಳುಗಳ ಆಸರೆಯಿಲ್ಲದಿದ್ದರೆ ಮೀರ ಕೆಳಗೆ ಬೀಳುತ್ತಿದ್ದಳು. ಮುಖವೆಲ್ಲ ಬೆವತು ಹೋಯಿತು. ಶಾಮುವಿನ ಮುಖವನ್ನು ಹಿಂದೆ ತಳ್ಳಿ ಮೀರ ಕೇಳಿದಳು:

"ನಾನು ಹೇಳಬೇಕಾಗಿರುವುದನ್ನು ಇನ್ನೂ ಹೇಳಿಲ್ಲ."

ಶಾಮು ತನ್ನ ದುಡುಕಿಗಾಗಿ ನಸು ನಾಚಿ, "ತಪ್ಪಾಯಿತು ರಾಣಿ. ಈಗ ಹೇಳು" ಎಂದ.

"ಮತ್ತೆ.... ಮತ್ತೆ ಹಳ್ಳೀಗೆ ಯಾವಾಗ ಕರೆದುಕೊಂಡು ಹೋಗುವಿರಿ?"

"ಓ, ಈಗಲೇ ರಾಣೀಗೆ ಹಳ್ಳಿಯ ನೆನಪೇನು? ನಾಳೆಯೇ ಹೊರಟು

ಹೋಗೋಣ. ನಮ್ಮ ಹಳ್ಳಿ ನೀನು ನೋಡಬೇಕು. ನಂದನವನ ಇದ್ದ ಹಾಗಿದೆ. ಮೀರಾ, ನೀನಿಲ್ಲದ ನನ್ನ ಬಾಳು ಬರಡಾಗಿತ್ತು. ನೀನು ನನ್ನ ಜೀವನ ತುಂಬಿದೆ. ಹೊಲದಲ್ಲಿ ತಿರುಗಾಡುತ್ತಾ ಹೊರಟರೆ.... ಹೇಳಿ ಏನು ಪ್ರಯೋಜನ? ನಾವು ನಾಳೆ ಹೋದಮೇಲೆ ನಿನಗೇ ತಿಳಿಯುವುದು."

ಮೀರಳ ಮುಖ ಪೆಚ್ಚಾಯಿತು. "ಅದಕ್ಕಲ್ಲ ನಾನು ಕೇಳಿದ್ದು...."

"ಇನ್ನಾವುದಕ್ಕೆ? ಬೇಗ ಹೇಳಿಬಿಡು. ಸಮಯ ಅನ್ಯಾಯವಾಗಿ ವ್ಯರ್ಥ ವಾಗುತ್ತಿದೆ."

"ನನಗೆ ಡಾಕ್ಟರಾಗಲು ಆಸೆ. ನಾನು ಮುಂದೆ ಓದಲೇ?"

ಅದನ್ನು ಕೇಳಿ ಶಾಮುವಿನ ತೋಳಿನ ಹಿಡಿತ ಸ್ವಲ್ಪ ಸಡಿಲವಾಯಿತು.

ನಸುನಕ್ಕು, "ಹ್ಞೂ. ನಿನ್ನ ವಿರಹ ರೋಗ ಬಂದಿರುವ ನನ್ನ ಖಾಯಿಲೆ ಮಾತ್ರ ವಾಸಿ ಮಾಡುವ ಡಾಕ್ಟರಾಗು" ಎಂದ.

"ಹಾಸ್ಯ ಮಾಡಬೇಡಿ, ನಿಜವಾಗಿ ಹೇಳಿ."

"ನೀನು ಓದುತ್ತಾ ಇಲ್ಲಿದ್ದರೆ ನನ್ನ ಗತಿ?"

"ಇಷ್ಟು ದಿನ ನಾನಿದ್ದೆನೇ?"

"ಗಾಳಿ, ಅನ್ನ ನೀರಿಲ್ಲದೆ ಬದುಕಬಹುದು. ಆದರೆ ಮುತ್ತುಗಳಿಲ್ಲದೆ ನಾನು ಬದುಕಲಾರೆ."

ಮೀರ ಸಪ್ಪೆ ಧ್ವನಿಯಿಂದ "ಹಾಗಾದರೆ ಓದಿದ್ದು ಸಾಕೇನು?" ಎಂದಳು.

"ಹೌದು ಮೀರ. ನೀನು ಓದಿ ಏನು ಮಾಡಬೇಕಾಗಿದೆ? ನನ್ನ ಹೃದಯದ ರಾಣಿಯಾಗಿ ನನ್ನನ್ನು ಆಳು. ಕಾಲೇಜಿನ ಹುಡುಗರನ್ನು ನೀನು ಆಳಬೇಕಾಗಿಲ್ಲ."

"ನಾನು ಇತರ ಹುಡುಗರೊಡನೆ ಸ್ನೇಹ ಬೆಳೆಸಬಹುದು ಎಂದು ನೀವು ಹೇಳುವುದಾದರೆ...."

"ಊಹ್ಞೂ. ನಾನು ಹಾಗೆ ಹೇಳಲಿಲ್ಲ. ನೀನಿಲ್ಲದೆ ನಾನು ಒಂದು ಗಳಿಗೆ ಸಹ ಇರಲಾರೆ. ನನ್ನನ್ನು ಬಿಟ್ಟು ಎಲ್ಲಿಗೂ ಹೋಗಬೇಡ."

ಹೇಳುತ್ತ ಹೇಳುತ್ತ ಶಾಮುವಿನ ಧ್ವನಿ ಭಾರವಾಯಿತು. ಅದರೊಡನೆ ತೋಳಿನ ಹಿಡಿದ ಬಿಗಿಯಾಯಿತು.

ಶಾಮುವಿಗೆ ನಿದ್ದೆ ಬಂದು ಒಂದು ಗಂಟೆಯಾದರೂ ಮೀರಳಿಗೆ ನಿದ್ದೆ ಬರಲಿಲ್ಲ. ಮನಸ್ಸು ಅಸಮಾಧಾನದಿಂದ ಶಾಂತವಾಗಿ ಮಲಗುವುದಿಲ್ಲವೆಂದು ಹಟ ಮಾಡುತ್ತಿತ್ತು.

ಬೀಗರ ಔತಣ ಮುಗಿಸಿಕೊಂಡು ಶಾಮುವಿನ ಕಡೆಯವರು ಊರಿಗೆ ಹೊರಟರು.

"ನಾವು ಇವತ್ತೇ ಹೊರಟುಬಿಡೋಣ" ಶಾಮು ಹೆಂಡತಿಯನ್ನು ಕೇಳಿದ.

"ದೊಡ್ಡಪ್ಪನಿಗೆ ಹೇಳಿ" ಮೀರ ಏರುತಗ್ಗಿಲ್ಲದ ದನಿಯಲ್ಲಿ ಹೇಳಿದಳು.

"ನಿನಗೇನೆನಿಸುತ್ತದೆ ರಾಣಿ?"

"ನನಗೇನೂ ಏನಿಸುವುದಿಲ್ಲ."

"ಅದೆಲ್ಲಾ ಬರೀ ಸುಳ್ಳು. ನಮ್ಮ ಹಳ್ಳೀಗೆ ಬಂದು ಹೊಲ ಗದ್ದೆ ನೋಡ ಬೇಕೆನಿಸುವುದಿಲ್ಲವೇ? ನಿಜ ಹೇಳು? ನನಗೇನೋ ಎಂದಿಗೆ ನಾವಿಬ್ಬರೂ ಹಳ್ಳಿಗೆ ಹೋಗಿ ಎರಡು ಹಕ್ಕಿಗಳ ಹಾಗೆ ಸಂಸಾರ ಮಾಡಿಕೊಂಡಿದ್ದೇವು ಎನಿಸಿಬಿಟ್ಟಿದೆ."

"ಹ್ಞೂ, ಸರಿ. ನಾನಿನ್ನು ಹೋಗುತ್ತೇನೆ. ಇನ್ನು ನಿಮ್ಮ ಅತ್ತೆ ಮಾವ ಹೊರಡಬಹುದು."

ಶಾಮು ಬೇಡಿಕೆಯ ದನಿಯಿಂದ "ಒಂದು ನಿಮಿಷ ಇಲ್ಲಿ ಬಾ" ಎಂದ.

ಮೀರ ಏನೂ ತಿಳಿಯದವಳಂತೆ ಹಿಂದೆ ಸರಿಯುತ್ತ "ಯಾಕೆ?" ಎಂದಳು.

"ಹತ್ತಿರ ಬಂದರೇ ಹೇಳುವುದು."

"ನಾನು ಬರುವುದಿಲ್ಲ. ಹೇಳುವ ಹಾಗಿದ್ದರೆ ಅಲ್ಲಿಂದಲೇ ಹೇಳಿ."

"ಬಿಡು ನಾನೇ ಬರುತ್ತೇನೆ" ಎಂದು ಶಾಮು ಹೇಳುವಷ್ಟರಲ್ಲಿ ಮೀರ ಹೊಸಲಿನಿಂದಾಚೆ ಚಿಮ್ಮಿದಳು.

ಶಾಮುವಿನ ಸೋದರಮಾವ, ಸಾವಿತ್ರಮ್ಮ ಮತ್ತು ಅವರ ಪರಿವಾರ ಊರಿಗೆ ಹೊರಟಿತ್ತು. ಶಾಮು ಮೀರಳಿಗೆ,

"ಮಾವನ್ನ ಸ್ಟೇಷನ್ನಿಗೆ ಬಿಟ್ಟುಬರೋಣ. ಬೇಗ ಸಿದ್ಧವಾಗು" ಎಂದ.

ಮೀರ "ತುಂಬಾ ಬಿಸಿಲು" ಎಂದಳು.

"ಗಾಡಿಯಲ್ಲಿ ಹೋಗಿ ಬಂದುಬಿಡೋಣ."

ಮೀರ ನಿರ್ವಾಹವಿಲ್ಲದೆ ಒಪ್ಪಬೇಕಾಯಿತು. ಬಿಳಿಯ ವಾಯಿಲ್ ಸೀರೆಯುಟ್ಟು, ಆಸ್ಪತ್ರೆಯ ನರ್ಸಿನಂತಿದ್ದ ಮೀರಳನ್ನು ನೋಡಿ ಶಾಮು,

"ಈ ಸೀರೆ ಬೇಡ. ಚೆನ್ನಾಗಿಲ್ಲ" ಎಂದ.

"ಏನಾಗಿದೆ? ಸರಳವಾದ ಉಡಿಗೆಯೇ ನನಗಾಸೆ."

"ಊಹ್ಞೂ. ಖಂಡಿತ ಅದು ಬೇಡ. ಎಲ್ಲಿ ನಿನ್ನ ಸೀರೆಗಳನ್ನೆಲ್ಲ ತೋರಿಸು."

ಮೀರಳಿಗೆ ಉಡಿಗೆ ತೊಡಿಗೆಯ ವಿಷಯದಲ್ಲಿ ಶಾಮುವಿನ ಸಲಹೆ ಅನವಶ್ಯಕವೆನಿಸಿತು. ಒಲ್ಲದ ಮನಸ್ಸಿನಿಂದ ತನ್ನ ಪೆಟ್ಟಿಗೆಯಲ್ಲಿದ್ದ ಸೀರೆಗಳನ್ನೆಲ್ಲಾ ತೆಗೆದು ಅವನ ಮುಂದೆ ಹರಡಿದಳು. ಶಾಮು ಲಗ್ನಪತ್ರಿಕೆಯ ದಿನ ತಾನೇ ಆರಿಸಿ ತಂದಿದ್ದ ಎಲೆ ಹಸಿರು ಬಣ್ಣದ ರೇಷ್ಮೆ ಸೀರೆ ತೆಗೆದು ಅವಳ ಕೈಗೆ ಕೊಟ್ಟ.

ಅವರನ್ನು ಊರಿಗೆ ಬೀಳ್ಕೊಟ್ಟು, ಶಾಮು ಮೀರ ಹಿಂದಿರುಗಿದರು. ಮೀರ

ಮನೆಗೆ ಬಂದವಳೇ "ಬಿಸಿಲಿಗೂ, ರೇಷ್ಮೆ ಸೀರೆಗೂ ವೈರ" ಎನ್ನುತ್ತಾ ರೂಮಿಗೆ ಹೊರಟಳು.

"ಸ್ವಲ್ಪ ಇಲ್ಲೇ ಕುಳಿತುಕೋ."

"ಯಾಕೆ?"

"ನಾನು ನಿನ್ನ ಸರಿಯಾಗಿ ನೋಡಬೇಕು."

"ಇನ್ನೂ ಸರಿಯಾಗಿ ನೋಡಿಲ್ಲವೇ?"

"ಇಲ್ಲ. ಎಷ್ಟು ನೋಡಿದರೂ ತೃಪ್ತಿ ಇಲ್ಲ."

"ನಿಮ್ಮ ಹುಚ್ಚಿಗೆ ಮಿತಿಯೇ ಇಲ್ಲ."

"ಹೌದು, ಮಿತಿಯಿಲ್ಲ" ಎಂದ ಶಾಮು.

ಮಾವನವರ ಬಲವಂತಕ್ಕೆ ಶಾಮು ಒಂದೆರಡು ದಿನ ಅವರ ಆತಿಥ್ಯ ಸ್ವೀಕರಿಸಲೇಬೇಕಾಯಿತು. ಆದರೆ ತನ್ನ ಹಳ್ಳಿಯ ಮನೆಯ ಸ್ವಾತಂತ್ರ್ಯ ಇಲ್ಲಿ ಎಲ್ಲಿಂದ ಬರಬೇಕು? ಹಳ್ಳಿಯಲ್ಲಿ ಹುಟ್ಟಿ ಬೆಳೆದ ಜೀವ ಅವನದು. ತನ್ನ ಹಳ್ಳಿಯಿಂದ ದೂರವಿರುವುದೆಂದರೆ ತಾಯಿ ತೊಡೆಯಿಂದ ದೂರವಿದ್ದ ಕಂದನ ಹಾಗೆ ಆಡುತ್ತಿದ್ದ. ಹಳ್ಳಿಯಲ್ಲಿ ಹೆತ್ತ ತಾಯಿಗಿಂತಲೂ ಪ್ರೀತಿ. ಅಲ್ಲಿಯ ಪ್ರಕೃತಿ ಸೌಂದರ್ಯ, ಗಲಾಟೆಗಳಿಂದ ದೂರವಾದ ಮೌನ ವಾತಾವರಣ, ಕಣ್ಣಿಗೆ ಕಾಣಿಸುವಷ್ಟು ದೂರ ಹರಡಿರುವ ಪಚ್ಚೆ ಪಯಿರು, ಕೆರೆ ಇವುಗಳಿಗೆ ಅವನ ಹೃದಯ ಹತ್ತಿಹೋಗಿತ್ತು. ಮನಸ್ಸು ಅವುಗಳೊಡನೆ ಒಂದಾಗಿತ್ತು. ಪಟ್ಟಣದಲ್ಲಿ ಒಂದೆರಡು ದಿನ ಉಳಿಯುವುದೆಂದರೆ ನೀರಿನಿಂದ ಹೊರಗೆ ತೆಗೆದ ಮೀನಿನಂತೆ ಅವನು ಚಡಪಡಿಸುತ್ತಿದ್ದ. ಹಳ್ಳಿಯಿಂದ ಪಟ್ಟಣಕ್ಕೆ ಬಂದರೆ ಅವನ ಮುಖದ ಕಳೆಯೇ ಬದಲಾಯಿಸಿ ಹೋಗುತ್ತಿತ್ತು. ಮದುವೆಯಾದ ನಂತರ ಮೈಸೂರಿನ ವಾಸ ಅವನಿಗೆ ಬೇಸರ ಬರಿಸಿತ್ತು. ಆದರೆ ಹೊಸ ಹೆಂಡತಿಯ ಸುಂದರ ರೂಪ, ಸಹವಾಸ ಅವನನ್ನು ಹಳ್ಳಿಯನ್ನು ಒಂದರೆಡು ದಿನದ ಮಟ್ಟಿಗಾದರೂ ಮರೆಯುವಂತೆ ಮಾಡಿತ್ತು.

ಶಾಮು ಎರಡು ದಿನ ಮೀರಾಳೊಡನೆ ಸಿನಿಮಾ, ವಾಕಿಂಗು ಎಂದು ಓಡಾಡಿದ. ಮೈಸೂರಿನ ಧೂಳು ತುಂಬಿದ ಬೀದಿಗಳಲ್ಲಿ ಹೆಂಡತಿಯೊಡನೆ ವಾಯುವಿಹಾರಕ್ಕೆ ಹೊರಟಾಗ ಅದರ ಕೃತಕ ವಾತಾವರಣಕ್ಕೆ ವ್ಯಂಗ್ಯವಾಗಿ ನಕ್ಕು ಶಾಮು ಹೇಳಿದ್ದ:

"ಮೀರ, ನಮ್ಮ ಹಳ್ಳಿಯೆಂದರೆ ಸ್ವರ್ಗ ನೋಡು. ನಮ್ಮ ಹಳ್ಳಿಯಲ್ಲಿ ಹೊರಗೆ ಕಾಲಿಟ್ಟರೆ ಮೈಮರೆತು ಹೋಗುತ್ತಿರುವ ಪ್ರೇಮಿಗಳನ್ನು ಯಾವ ಕಾರಿನ ಹಾರನ್ನೂ ಎಚ್ಚರಿಸುವುದಿಲ್ಲ. ಕೃತಕ ದೀಪಗಳು ಅಲ್ಲಿಲ್ಲ. ದೇವರು ನಿರ್ಮಿಸಿರುವ

ಚಂದ್ರಿಕೆಯೇ ನಮಗೆ ದಾರಿ ತೋರುವ ದೀವಟಿಗೆ. ಹಾಡುವ ಹಕ್ಕಿಗಳೇ ಗೆಳೆಯರು. ಹಸಿರು ಹೊಲಗಳ ನಡುವೆ ಹೊರಟರೆ ಬೇರೆ ಮಾನವರ ಸಹವಾಸವೇ ಬೇಕಾಗುವುದಿಲ್ಲ."

"ನಿಮಗೆ ಬಿಡಿ. ನಿಮ್ಮ ಹಳ್ಳಿಯನ್ನು ಹೊಗಳಿಕೊಳ್ಳುವುದೆಂದರೆ ಪಾಯಸ ಕುಡಿದ ಹಾಗೆ!"

"ಹ್ಞೂ, ಹಾಗೇ ಅಂತ ತಿಳಿ. ಅದು ಪಾಯಸದಷ್ಟೇ ಸಿಹಿಯಾಗಿರುವುದರಿಂದ ನನಗೆ ಅಷ್ಟು ಆಸೆ."

"ನಿಮ್ಮ ಹಳ್ಳಿ ಹೇಗಿದೆಯೋ ನೋಡಬೇಕು."

"ನೋಡುವಂತೆ. ನಾಳೇನೇ ಹೊರಟುಹೋಗೋಣ. ಇವತ್ತೇ ನಿಮ್ಮ ದೊಡ್ಡಪ್ಪನಿಗೆ ಹೇಳಿಬಿಡುತ್ತೇನೆ."

ಹಳ್ಳಿ ಬಿಟ್ಟು ಬಂದಾಗಿನಿಂದ ತಾಯಿಯನ್ನಗಲಿದ ಎಳೆ ಕರುವಿನಂತೆ ಶಾಮು ಒದ್ದಾಡುತ್ತಿದ್ದ. ಸಾಲದುದಕ್ಕೆ ಅವನು ಬಯಸಿದಷ್ಟು ಮೀರಳ ಸಾನ್ನಿಧ್ಯ ಅವನಿಗೆ ದೊರೆತಿರಲಿಲ್ಲ. ತಮ್ಮ ಪ್ರಣಯದ ನಡುವೆ ನುಗ್ಗಿ ತೊಂದರೆ ಮಾಡುವ ಪುಟ್ಟ ಹುಡುಗರು ಮದುವೆ ಮನೆಯಿಂದ ತಮ್ಮೂರಿಗೆ ಹಿಂತಿರುಗಿರಲಿಲ್ಲ. ನೆಂಟರೆಲ್ಲ ಒಳಗೆ ಮಾತನಾಡುತ್ತ, ಕೆಲಸ ಮಾಡುತ್ತಿರುವ ಸಮಯದಲ್ಲೇ ರೂಮಿನ ಬಾಗಿಲು ಹಾಕಿಕೊಂಡು ಗಂಡನ ತೋಳಿನಲ್ಲಿ ಮಲಗಿರಲು ಮೀರ ಒಪ್ಪುತ್ತಿರಲಿಲ್ಲ.

ಅದೇ ದಿನ ಸಂಜೆ ಮೀರ ವಾಕಿಂಗಿನಿಂದ ಹಿಂತಿರುಗಿ ಬಂದ ಮೇಲೆ ಶಾಮುವಿಗೆ ರೂಮಿನಲ್ಲಿ ಒಬ್ಬನೇ ಕುಳಿತು ಬೇಸರವಾಯಿತು. ತಾನಾಗಿ ಎದ್ದು ಹೋಗಿ ಎಲ್ಲರ ಎದುರಿನಲ್ಲೂ ಮೀರಳನ್ನು ಕರೆಯಲು ಸಂಕೋಚವಾಯಿತು. ತನ್ನ ರೂಮಿನ ಮುಂದೆ ಸುಳಿದ ಪದ್ದಕ್ಕನ ಎಂಟು ವರ್ಷದ ಮಗ ಬಾಲುವನ್ನು ಕೂಗಿ ಕರೆದು,

"ಅಕ್ಕನಿಗೆ ಹೇಳಿ ಒಂದು ಲೋಟ ನೀರು ತೆಗೆದುಕೊಂಡು ಬಾ" ಎಂದ.

ಬಾಲು "ಅಕ್ಕಾ, ಭಾವನಿಗೆ ನೀರು ಬೇಕಂತೆ...." ಎಂದು ಕೂಗುತ್ತ ಒಳಗೆ ಹೋದ.

ಮೀರ ನೀರಿನ ಲೋಟ ಕೈಲಿ ಹಿಡಿದು ಒಳಗೆ ಬಂದು ಕೈ ನೀಡಿ,

"ತೆಗೆದುಕೊಳ್ಳಿ" ಎಂದಳು.

"ನನಗೆ ಬೇಕಾಗಿದ್ದುದು ನೀರಲ್ಲ. ಬೇರೆ...."

"ನಿಮಗೆ ಹೊತ್ತು ಗೊತ್ತು ಒಂದೂ ಇಲ್ಲ."

ಮೀರ ಕೊರಳು ಕೊಂಕಿಸಿದಳು.

ಶಾಮು ಬದಲು ಮಾತನಾಡದೆ ಮೀರಳನ್ನು ತನ್ನೆಡೆಗೆ ಎಳೆದುಕೊಂಡ.

"ಅಕ್ಕಾ.... ಅಕ್ಕಾ.... ಅಕ್ಕಾ...." ಎನ್ನುತ್ತ ಬಾಲು ರೂಮಿನೊಳಗೆ ನುಗ್ಗಿ ಬಂದ.

ಮೀರ ಬೆದರಿ ಶಾಮುವಿನಿಂದ ದೂರ ಸರಿದು "ಏನು ಬಾಲು?" ಎಂದಳು.

"ಇವತ್ತು ಎಲ್ಲರೂ 'ದೇವಕಿ' ಸಿನಿಮಾಗೆ ಹೋಗುತ್ತಾರಂತೆ. ಬೇಗ ಊಟ ಮಾಡಿಕೊಂಡು ಎರಡನೆಯ ಆಟಕ್ಕೆ ಹೋಗೋಣ ಎಂದು ಅಮ್ಮ ಹೇಳುತ್ತಿದ್ದಳು."

ಮೀರ ಶಾಮುವಿನ ಮುಖ ನೋಡಿದಳು. ಮಾವಿನ ಹಣ್ಣನ್ನು ಪೂರ್ತಿ ರುಚಿ ನೋಡುವುದರೊಳಗೇ ಕೈಜಾರಿ ಮಣ್ಣಿನೊಳಗೆ ಹಣ್ಣು ಬೀಳಿಸಿಕೊಂಡ ಹುಡುಗನ ಮುಖಭಾವ ಶಾಮುವಿನ ಮುಖದಲ್ಲಿ ಪ್ರತಿಬಿಂಬಿಸುತ್ತಿತ್ತು. ಮೀರ ಅದನ್ನು ಗಮನಿಸಿ ತುಂಟನಗೆ ನಕ್ಕು,

"ನಾವೂ ಹೋಗೋಣ ಬನ್ನಿ. ಪದ್ಮಕ್ಕ ನಾಳೆ ಬೆಳಗಿನ ರೈಲಿಗೇ ಹೊರಟು ಹೋಗುತ್ತಾರೆ. ನಾವು ಹೋಗದಿದ್ದರೆ ಏನಾದರೂ ತಿಳಿದುಕೊಳ್ಳುತ್ತಾರೆ" ಎಂದಳು.

"ನಾನು ಬರೋದಿಲ್ಲ. ಬೇಕಾದರೆ ನೀನು ಹೋಗು."

"ನಾನೇನೋ ಹೋಗುತ್ತೇನೆ" ಎನ್ನುತ್ತ ಮೀರ ಬಾಲುವಿನೊಡನೆ ಪದ್ಮಕ್ಕನ ಬಳಿಗೆ ತೆರಳಿದಳು.

ಶಾಮುವಿಗೆ ಇನ್ನು ಮೈಸೂರಿನಲ್ಲಿರುವುದು ಸಾಧ್ಯವಾಗಲಿಲ್ಲ. ಹಳ್ಳಿಯ ಕರೆ ಬಲವಾಯಿತು ಅವನಿಗೆ. ಎಲ್ಲರೂ ಸಿನಿಮಾಕ್ಕೆ ಹೋದ ಮೇಲೆ ವರಾಂಡದಲ್ಲಿ ಕುಳಿತಿದ್ದ ಕೃಷ್ಣಪ್ಪನವರ ಬಳಿ ಬಂದು ಎದುರಿಗಿದ್ದ ಕುರ್ಚಿಯ ಮೇಲೆ ಕುಳಿತ.

'ಮಾವ ನಾನು ನಾಳೆ ಹಳ್ಳಿಗೆ ಹೋಗುತ್ತೇನೆ."

"ಇನ್ನೆರಡು ದಿನ ಇಲ್ಲೇ ಇರು ಶಾಮಣ್ಣ. ಆಮೇಲೆ ಹೋಗುವಿಯಂತೆ."

"ಸಾಧ್ಯವಿಲ್ಲ. ನಾಳೆ ನಾನು ಹೋಗಲೇಬೇಕಾಗಿದೆ. ಇಂಥ ರೈಲಿಗೆ ಬರುತ್ತೇನೆ ಎಂದು ಕಾಗದ ನಿನ್ನೆಯೇ ಹಾಕಿದ್ದೇನೆ."

"ಸರಿ. ನೀನು ಬೇಕಾದರೆ ಹೋಗು. ಮೀರಾ ಒಂದೆರಡು ದಿನವಿದ್ದು ಬರುತ್ತಾಳೆ."

ಶಾಮು ಸ್ವಲ್ಪ ಸಂಕೋಚದಿಂದಲೇ ಹೇಳಿದ: "ಇಲ್ಲ. ಮೀರಳೂ ಬರುತ್ತಾಳೆ."

ಹೊಸದಾಗಿ ಮದುವೆಯಾದವರ ಮನೋಭಾವವನ್ನರಿತ ಕೃಷ್ಣಪ್ಪನವರು ಮನಸ್ಸಿನಲ್ಲಿಯೇ ನಕ್ಕು ಸುಮ್ಮನಾದರು.

ಬೆಳಗಿನ ರೈಲಿಗೆ ಹೊರಡುವುದು ನಿಶ್ಚಯವಾಯಿತು. ಮೀರಳಿಗೆ ಪತಿಗೃಹಕ್ಕೆ ಕೂಡಲೇ ಹೊರಡುವುದು ಇಷ್ಟವಿರಲಿಲ್ಲ. ಆದರೆ ಅದನ್ನು ಪ್ರತಿಭಟಿಸುವ ಧೈರ್ಯವಿಲ್ಲದೆ ತನ್ನ ಸಾಮಾನುಗಳನ್ನೂ ಕಟ್ಟಿ ಸಿದ್ಧಗೊಳಿಸಿದಳು. ಕಮಲಮ್ಮನವರು

ಒಂದುದೊಡ್ಡ ಬುಟ್ಟಿಯ ತುಂಬ ತಿಂಡಿ ತುಂಬಿಟ್ಟರು. ಮೀರ ಹೊರಡುವುದಕ್ಕೆ ಮುಂಚೆ ದೊಡ್ಡಪ್ಪನಿಗೆ, ದೊಡ್ಡಮ್ಮನಿಗೆ ನಮಸ್ಕಾರ ಮಾಡಿದಳು. ತಬ್ಬಲಿ ಮೀರಳನ್ನು ಗಂಡನ ಮನೆಗೆ ಕಳುಹಿಸಿಕೊಡುವಾಗ ಕೃಷ್ಣಪ್ಪನವರ ಕಣ್ಣುಗಳು ತೆಳುವಾಗಿ ತೇವಗೊಂಡವು.

"ಮೀರಾನ ಚೆನ್ನಾಗಿ ನೋಡಿಕೊಳ್ಳಪ್ಪ" ಎಂದು ಗದ್ಗದ ದನಿಯಿಂದ ಅಳಿಯನಿಗೆ ಹೇಳಿದರು.

ಮೀರ ಮನೆಬಿಟ್ಟು ಹೋಗುವುದನ್ನು ಯೋಚಿಸುವುದು ಸಹ ಶ್ರೀಪಾದೂಗೆ ಸಾಧ್ಯವಿರಲಿಲ್ಲ. ಅವನು ತನ್ನ ದುಃಖ ತಡೆಯಲಾರದೆ ಒಳಗೆ ಅವಿತುಕೊಂಡಿದ್ದ.

ಶಾಮು ಸೆಕೆಂಡ್ ಕ್ಲಾಸ್ ಕಂಪಾರ್ಟ್‌ಮೆಂಟಿನಲ್ಲಿ ತಮ್ಮ ಸಾಮಾನುಗಳನ್ನು ಸರಿಯಾಗಿರಿಸಿದ. ಮೀರ,

"ಯಾವುದಾದರೂ ಒಂದೆರಡು ಕತೆ ಪುಸ್ತಕ ತರಬೇಕಾಗಿತ್ತು. ರೈಲು ಪ್ರಯಾಣ ನನಗೆ ತುಂಬಾ ಬೇಜಾರು" ಎಂದಳು.

"ಯಾಕೆ ನಾನಿಲ್ಲವೇ" ಎಂದು ನಗುತ್ತ ಶಾಮು ಪುಸ್ತಕಗಳನ್ನು ತರಲು ಕೆಳಗಿಳಿದು ಹೋದ. ಮೀರ ಅವನ ಹಿಂದೆ ಹೊರಟಳು.

ಶಾಮು ಆ ತಿಂಗಳ 'ಕತೆಗಾರ', ಕಥಾವಳಿ' ಕೊಂಡು ಪರ್ಸು ತೆಗೆಯಲು ಜೇಬಿಗೆ ಕೈಹಾಕಿದ. ಮೀರ ಕೇಳಿದಳು:

"ಪರ್ಲ್ ಬುಕ್ ಪುಸ್ತಕಗಳು ಯಾವುದಿದೆ?"

" 'ಪೆವಿಲಿಯನ್ ಆಫ್ ವುಮನ್', 'ದಿ ಪ್ರಾಮಿಸ್', 'ಡ್ರೇಗನ್ ಸೀಡ್', 'ದಿ ಮದರ್' ಎನ್ನುತ್ತ ನಾಲ್ಕು ಪುಸ್ತಗಳನ್ನೂ ತೆಗೆದು ಮೀರಳ ಕೈಗೆ ಕೊಟ್ಟ. ಮೀರ ಪುಸ್ತಕದ ಹಾಳೆಗಳನ್ನು ಮಗುಚುತ್ತ ಶಾಮುವಿನ ಕಡೆ ನೋಡಿದಳು. ಶಾಮು ಅವನೇ ಕೈಲಿದ್ದ ಪುಸ್ತಕಗಳನ್ನೇ ನೋಡುತ್ತಿದ್ದ.

ಮೀರ ತಗ್ಗಿದ ದನಿಯಲ್ಲಿ "ನಾನಿವುಗಳನ್ನು ತೆಗೆದುಕೊಳ್ಳಲೇ?" ಎಂದಳು. ತನಗೆ ಬೇಕಾದ ಒಂದು ಪುಸ್ತಕ ತೆಗೆದುಕೊಳ್ಳಬೇಕಾದರೂ ಗಂಡನನ್ನು ಹಣಕ್ಕಾಗಿ ಯಾಚಿಸುವ ಸನ್ನಿವೇಶ ಮೀರಳಿಗೆ ತುಂಬಾ ಅಪಮಾನಕರವಾಗಿ ತೋರಿತು. ಶಾಮುವೆಲ್ಲಿ 'ಬೇಡ' ಎಂದು ಹೇಳುವನೋ, ಅಂಗಡಿಯವನೆದುರಿನಲ್ಲಿ ಅವಮಾನವಾಗುವುದೋ ಎಂದವಳ ಮನಸ್ಸು ಅಳುಕಿತು. ಆದರೆ ಪುಸ್ತಕಗಳನ್ನು ಓದುವ ಆಸೆ ಬಲವಾಗಿದ್ದುದರಿಂದ ಮೀರ ಧೈರ್ಯ ಮಾಡಿ ಕೇಳಿದ್ದಳು. ಶಾಮು ಒಂದೇ ಸಲಕ್ಕೆ "ಹ್ಞೂ. ತೆಗೆದುಕೋ" ಎಂದ.

ಮೀರ ನಿಟ್ಟುಸಿರುಬಿಟ್ಟಳು. ನಾಲ್ಕು ಪುಸ್ತಕಗಳನ್ನೂ ಕಟ್ಟಿಸಿಕೊಂಡು ಮೀರ ಒಳಗೆ ಬಂದು ಕುಳಿತಳು. ಶಾಮು ಒಂದು ಗಳಿಗೆ ಹೊರಗೇ ಓಡಾಡುತ್ತಿದ್ದು,

ಒಳಗೆ ಬಂದು ಬಾಗಿಲು ಹಾಕಿಕೊಂಡು ಮೀರಳ ಕಡೆ ನೋಡಿ ನಕ್ಕು,

"ಸದ್ಯ, ನಾವಿಬ್ಬರೇ ಇದೀವಿ. ಬೇರೆ ಯಾರೂ ಬರದಿದ್ದರೆ ಸಾಕು" ಎಂದ. ಅವನ ಮಾತು ಮುಗಿಯುವಷ್ಟರಲ್ಲೇ ಯೂನಿವರ್ಸಿಟಿ ಪ್ರೊಫೆಸರರೊಬ್ಬರು ಆ ದಿನದ ಹಿಂದೂ ಪತ್ರಿಕೆ ಕೈಲಿ ಹಿಡಿದು ಬಾಗಿಲು ತಳ್ಳಿ, ಒಳಗೆ ಬಂದರು. ಶಾಮು ಪೆಚ್ಚಾದ. ಮೀರ ಗಂಡನ ಕಡೆ ನೋಡಿ ನಕ್ಕಳು.

ಹಿರೋಡೆ ಸ್ಟೇಷನ್ನು ಬರುತ್ತಿದ್ದಂತೆಯೇ ಶಾಮು ಬಾಗಿಲಿನಲ್ಲಿ ನಿಂತು ಗಾಡಿಯಾಳು ನಿಂಗನನ್ನು ಹುಡುಕಿದ. ನಿಂಗ ಕೈಯಲ್ಲಿ ಎತ್ತು ಹೊಡೆಯುವ ಚಾಟಿಯನ್ನು ಹಿಡಿದುಕೊಂಡು ನಿಂತಿದ್ದವನು ದಣಿಯನ್ನು ಕಂಡ ಕೂಡಲೇ ಹಲ್ಲು ಕಿರಿದು ಅಮ್ಮಾವರನ್ನು ನೋಡಿ,

"ಕಾಲಿಗೆ ಬಿದ್ದೆ, ತಾಯಿ" ಎಂದ.

ಮೀರ ಏನು ಹೇಳಲೂ ತೋರದೆ ಸುಮ್ಮನಿದ್ದಳು. ಬಿಸಿಲಿನಲ್ಲಿ ಸುಟ್ಟು, ಕಪ್ಪಗಿದ್ದ ಅವನ ಅರೆಬೆತ್ತಲೆ ದೇಹವನ್ನೂ, ಕೊಳಕಾಗಿದ್ದ ಬಟ್ಟೆಗಳನ್ನೂ ನೋಡಿ ಮೀರಳಿಗೆ ಮರುಕ ಉಕ್ಕಿತ್ತು. ಹಂಚಿಕಡ್ಡಿಯಂತಹ ಕೈಕಾಲುಗಳು, ಎಣ್ಣೆ, ನೀರು ಕಾಣದೆ ಪೊದೆಯಾಗಿ ಹರಡಿದ್ದ ತಲೆಗೂದಲು, ಹಳದಿಯ ವರ್ಣದ ಕಣ್ಣುಗಳು, ಉಬ್ಬಿದ ಹೊಟ್ಟೆ ಎಂತಹವರಲ್ಲಿಯೂ ಕರುಣೆಯನ್ನು ಹುಟ್ಟಿಸುತ್ತಿದ್ದವು.

ನಿಂಗ ಗಾಡಿ ಹತ್ತಿ ಎರಡು ಹಾಸಿಗೆ, ಎರಡು ಬುಟ್ಟಿ, ಮೂರು ಪೆಟ್ಟಿಗೆಗಳನ್ನು ಕೆಳಗಿಳಿಸಿ ಕೂಲಿಯವನನ್ನು ಕರೆದು ತಂದ. ಇಬ್ಬರೂ ಸೇರಿ ಸಾಮಾನುಗಳನ್ನು ಗಾಡಿಯಲ್ಲಿರಿಸಿದರು.

ಶಾಮು ತನ್ನ ಪ್ರೀತಿಯ ಜೋಡೆತ್ತುಗಳನ್ನು ಕಂಡು ಸಂಭ್ರಮದಿಂದ ಅವುಗಳ ಬಳಿಗೆ ಬಂದ. ಬಹಳ ಕಾಲಕ್ಕೆ ಸಂಧಿಸಿದ ಗೆಳೆಯರನ್ನು ಮಾತನಾಡಿಸುವ ಸ್ನೇಹಿತನಂತೆ ಅವುಗಳನ್ನು

"ಏನೋ ರಾಮು ಹೇಗಿದೀಯಾ? ನಿಂಗಾ, ಲಕ್ಷ್ಮಣ ಈಗಲೂ ಗಲಾಟೆ ಮಾಡ್ತಾನೇನು?" ಎಂದು ವಿಚಾರಿಸಿದ. ನಿಂಗ ಪ್ರೀತಿಯಿಂದ ಅದರ ಮುಖ ಸವರುತ್ತಾ,

"ಹುಲಿ ಹಂಗಿದ್ದ ಎತ್ತನ್ನ ಕುರಿ ಹಂಗ ಪಳಗಿಸಿದೀನಿ ನನ್ನೊಡೆಯ" ಎಂದ. ರಾಮು ತನ್ನ ಯಜಮಾನನನ್ನು ಗುರುತಿಸಿ ಮುಖ ತುರಿಸಲೆಂದು ಮುಖವನ್ನು ಶಾಮುವಿನ ಹತ್ತಿರ ತಂದಿತು. ದೂರದಲ್ಲಿ ಕೈ ಕಟ್ಟಿ ಎತ್ತುಗಳನ್ನು ನಿರಾಸಕ್ತಿಯಿಂದ ನೋಡುತ್ತಿದ್ದ ಮೀರ ಬೆಚ್ಚಿ ಹಿಂದೆ ಸರಿದು,

"ಅಯ್ಯೋ, ಈ ಕಡೆ ಬನ್ನಿ. ತಿವಿದು ಬಿಡುತ್ತದೆ" ಎಂದಳು.

ಶಾಮು ಅದರ ಮುಖ, ಗಂಗೆದೊಗಲನ್ನು ಕೈಗಳಿಂದ ನೀವುತ್ತ,

"ಮನೆ ಮಗು ಹಾಗೆ ಸಾಕಿದೀವಿ ಮೀರಾ. ಅದು ನನ್ನ ಎಂದಿಗೂ ತಿವಿಯುವುದಿಲ್ಲ. ಅದರ ಮುಖ ನಾನು ಸವರಲಿ ಅಂತ ಅದು ಮುಂದೆ ಬರುತ್ತದೆ" ಎಂದ.

"ದನದ ಮನಸ್ಸು, ದಾಯಾದಿ ಮನಸ್ಸು ಒಂದೇ ರೀತಿ ಇರುವುದಿಲ್ಲ. ಅದೇನು ನಿಮ್ಮ ಕೈಲಿ ಹಾಗೆ ಹೇಳಿಕೊಂಡಿತೇನೋ?"

"ಬಾಯಿ ಬಿಟ್ಟು ಹೇಳಿದರೇ ಅರ್ಥವಾಗಬೇಕೇ?"

"ನಿಮ್ಮ ಭಾಷೆ ನನಗೆ ಹೇಗೆ ಗೊತ್ತಾಗಬೇಕು? ಎಷ್ಟಾದರೂ ನೀವು ನೀವು ಒಂದು."

"ಅದೇನೋ ನಿಜ. ನಮ್ಮ ಭಾಷೆ ನಿನಗೆ ಅರ್ಥವಾಗುವುದಿಲ್ಲ."

ಶಾಮು ಎತ್ತಿನ ಬೆನ್ನು, ಮುಖ, ಪಕ್ಕೆ ಸವರುತ್ತಾ ನಿಂತ. ಎತ್ತುಗಳು ಮುದ್ದಾಗಿದ್ದವು. ಅವುಗಳ ಮೈಬಣ್ಣ ಹಂಸದಂತೆ ಶುಭ್ರವಾಗಿತ್ತು. ಅವು ಮೈ ತುಂಬಿಕೊಂಡು ದೇವಲೋಕದ ಎತ್ತುಗಳಂತಿದ್ದವು.

"ನಿಂಗಾ, ಎತ್ತನ್ನು ದಿನಾ ತೊಳೆಯುತ್ತಿದ್ದೆಯೇನೋ?"

"ಹ್ಞೂ ಬುದ್ಧಿ. ಅದರ ಮೈಯಾಗ ನಮ್ಮ ಮುಖ ಕಾಣೋ ಹಂಗೆ ತೊಳೆದಿವ್ನಿ."

ಎತ್ತಿನ ಕುಶಲ ಪ್ರಶ್ನೆಗಳಲ್ಲಿ ಮೈಮರೆತು ನಿಂತ ಶಾಮುವನ್ನು ಮೀರ ಎಚ್ಚರಿಸಿದಳು.

"ಹ್ಞೂ. ಇನ್ನೂ ನಮ್ಮೂರಿನ ಕಾರನ್ನು ಹತ್ತುವಂತವಳಾಗು."

ಮೀರ ಗಾಡಿಯ ಹತ್ತಿರ ಬಂದು ನಿಂತು ಶಾಮುವಿನ ಕಡೆ ತಿರುಗಿ,

"ಹೇಗೆ ಹತ್ತಲಿ?" ಎಂದಳು.

"ಒಂದು ಕಾಲು ಗಾಡಿಯ ಮೇಲಿಡು, ಆಮೇಲೆ ಮತ್ತೊಂದಿಡು."

ಮೀರ ಅವನ ಸಲಹೆಯಂತೆ ಗಾಡಿಯಲ್ಲಿ ಕಾಲಿಡಲು ಪ್ರಯತ್ನಿಸಿ ಮುಗ್ಗರಿಸಿದಳು. ಅವಳ ಹಿಂದೆಯೇ ನಿಂತಿದ್ದ ಶಾಮು ಅವಳ ತೋಳು ಹಿಡಿದು ನಿಲ್ಲಿಸಿದ.

"ಹೋಗಲಿ ಬಿಡು, ಒಂದೇ ಸಲಕ್ಕೆ ನಾನು ಹತ್ತಿಸಿಬಿಡ್ತೇನೆ."

ಮೀರಳಿಗೆ ತಾನು ಓದಿದ್ದ ಇಂಗ್ಲಿಷ್ ಕಾದಂಬರಿಗಳು, ನೋಡಿದ್ದ ಚಿತ್ರಗಳು ನೆನಪಿಗೆ ಬಂದವು.

"ಸದ್ಯ ಸುಮ್ಮನಿರಿ. ನಿಮ್ಮೊಡನೆ ನನಗೆ ಹೊರಗೆ ಬರುವುದಕ್ಕೂ ಹೆದರಿಕೆ. ಯಾರಿದ್ದಾರೆ, ಯಾರಿಲ್ಲಾಂತ ನೋಡದೆ ಏನಾದರೂ ಮಾಡುತ್ತೀರಿ. ನೀವು ದೂರ ನಿಂತರೇನೇ ನಾನು ಹತ್ತುವುದು" ಎಂದಳು. ಶಾಮು ಹಿಂದೆ ಸರಿದು ನಿಂತ. ಮೀರ ಮತ್ತೆರಡು ಬಾರಿ ಪ್ರಯತ್ನಿಸಿ ಗಾಡಿಯೇರುವ ಹೊತ್ತಿಗೆ ಮುಖವೆಲ್ಲ ಬೆವತು

ಹೋಗಿತ್ತು. ಅವಳು ಹತ್ತಿ ಕುಳಿತುಕೊಂಡ ಮೇಲೆ ಶಾಮು,

"ಇನ್ನು ನಾನು ಬರಬಹುದೇ" ಎಂದ.

"ಹ್ಞೂ."

ಶಾಮು ಒಂದೇ ನೆಗೆತಕ್ಕೆ ಗಾಡಿಯೊಳಗೆ ಕುಳಿತ.

"ಇನ್ನು ಗಾಡಿ ಹೊಡಿ ನಿಂಗ. ಸ್ವಲ್ಪ ನಿಧಾನವಾಗೇ ಬಿಡು. ಅಮ್ಮಾವರಿಗೆ ಇದೆಲ್ಲಾ ಹೊಸದು. ಆಮೇಲೆ ಹೆದರಿಬಿಡ್ತಾರೆ."

"ನಂಗೇನೂ ಹೆದರಿಕೆ ಇಲ್ಲ."

ನಿಂಗ ಕೈಲಿ ಹಿಡಿದಿದ್ದ ಚಾಟಿಯಿಂದ ಎರಡು ಎತ್ತುಗಳ ಮೇಲೂ ಒಂದೊಂದು ಏಟು ಹಾಕಲು ಎತ್ತುಗಳು ಹೊರಟವು. ಅವುಗಳ ಕೊರಳಿಗೆ ಕಟ್ಟಿದ್ದ ಗಂಟೆ ಮಧುರವಾಗಿ ದನಿ ಮಾಡಿತು. ಮೀರ ಹುಲ್ಲಿನ ಗಾಡಿಯಲ್ಲಿ ಆರಾಮವಾಗಿ ಕುಳಿತುಕೊಳ್ಳಲು ಕಷ್ಟಪಡುತ್ತಿರುವುದನ್ನು ನೋಡಿ ಶಾಮು,

"ನಿಂಗಾ ಗಾಡಿಯೊಳಗೆ ಎರಡು ದಿಂಬು ತರಬೇಕಾಗಿತ್ತು" ಎಂದ.

"ಯಾಕ್ರಾ ಬುದ್ಧಿ, ಹುಲ್ಲು ಗಿಲ್ಲು ಹಾಕಿ ಗಾಡೀನ ಒಳ್ಳೇ ಹಾಸಿಗೆ ಹಂಗೆ ಮಾಡಿದೀನಿ.

"ಹಾಸಿಗೆ ಬಿಟ್ಟು ಗಾಡಿ ಮುಳ್ಳಿದ್ದ ಹಾಗಿದೆ" ಮೀರ ಗೊಣಗಿದಳು.

"ಹಾಗಾದರೆ ನಾನು ಹೇಳುವ ಕಡೆ ಕುಳಿತುಕೊಳ್ಳುತ್ತೀಯಾ? ಹುಲ್ಲು ಒತ್ತುವುದಿಲ್ಲ" ಶಾಮು ತುಂಟ ನಗೆಯೊಡನೆ ಕೇಳಿದ.

ಮೀರ ಕೋಪದಿಂದ ಒಂದು ಬಾರಿ ಅವನ ಕಡೆ ನೋಡಿದಳೇ ಹೊರತು ಮಾತನಾಡಲಿಲ್ಲ. ಶಾಮು ನಿಂಗನ ಕಡೆ ತಿರುಗಿ,

"ನಿಂಗಾ, ಮಳೆ ಬಂದ ಹಾಗಿದೆಯಲ್ಲೋ" ಎಂದ.

"ನಿನ್ನೆ ಅಪಾರ ಮಳೆ ಸುರೀತು ಬುದ್ಧಿ. ನಾವು ನೆಟ್ಟಿರೋ ತೆಂಗಿನ ಸಸಿಗಳೆಲ್ಲಾ ಸೊಂಪಾಗಿ ಬಂದ್ಬಿಡ್ತದೆ ಇನ್ನು. ಆದರೂ ಇನ್ನೊಂದೆರಡು ದಪ ಭಾರಿ ಮಳೆ ಬರಬೇಕು."

"ನಿಮ್ಮ ಹಳ್ಳಿ ಇನ್ನೂ ಎಷ್ಟು ಮೈಲಿಯಿದೆ?"

ಮೀರ ಬೇಗ ಹಳ್ಳಿ ಸಿಕ್ಕಿದರೆ ಸಾಕೆಂಬಂತೆ ಕೇಳಿದಳು.

"ಇನ್ನೂ ಎರಡು ಮೈಲಿ ಹೋಗಬೇಕು."

ಹಿಂದಿನ ದಿನ ಮಳೆಯಾದುದರಿಂದ ನಿಸರ್ಗ ನಿರ್ಮಲವಾಗಿತ್ತು. ಎರಡು ಪಕ್ಕದಲ್ಲೂ ಹಸಿರು ಗದ್ದೆಗಳು, ನಡುವೆ ಗಾಡಿ ನಿಧಾನವಾಗಿ ಹೋಗುತ್ತಿತ್ತು. ನಿಂಗ ಆಗಾಗ್ಗೆ ತನ್ನ ಬೇಸರವನ್ನು ನೀಗಲು ಹಳ್ಳಿಯ ಪದಗಳನ್ನು ಹಾಡುತ್ತಿದ್ದ.

ಹಳ್ಳಿ ಸಮೀಪವಾಗುತ್ತಿದ್ದಂತೆಯೇ ಶಾಮು ಹಳ್ಳಿಯನ್ನು ಬಳಸಿದ್ದ ತನ್ನ

ಗದ್ದೆಯನ್ನು ಮೀರಳಿಗೆ ತೋರಿಸತೊಡಗಿದ. ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ರೈತರು ಕೆಲಸಗಳನ್ನು ಅಲ್ಲಿಗೇ ನಿಲ್ಲಿಸಿ ತಮ್ಮ ನೂತನ ಒಡತಿಯನ್ನು ನೋಡಲು ಗಾಡಿಯ ಹಿಂದೆಯೇ ಬರತೊಡಗಿದರು. ಮೀರ ನಾಚಿ ಗಾಡಿಯಲ್ಲಿ ಅಡಗಿ ಕೊಂಡಳು.

ಹಳ್ಳಿ ತಲುಪಿದಾಗ ಮಧ್ಯಾಹ್ನ ಹನ್ನೊಂದು ಗಂಟೆಯಾಗಿತ್ತು.

ಆ ಹಳ್ಳಿಯಲ್ಲೆಲ್ಲಾ ಶಾಮುವಿನ ಮನೆಯೇ ಅತ್ಯಂತ ದೊಡ್ಡ ಮನೆ. ದೇಗುಲದಂತಹ ದಿವ್ಯವಾದ ಮನೆಗೆ ಕಾಂಪೌಂಡಿಗೆ ಬದಲಾಗಿ ಮುಳ್ಳುತಂತಿಗಳನ್ನು ಮನೆಯ ಸುತ್ತಲೂ ಹೆಣೆದಿದ್ದರು. ಪಾರಿಜಾತ, ಗುಲಾಬಿ, ಜಾಜಿ, ಮಲ್ಲಿಗೆ, ಸೇವಂತಿಗೆ ಗಿಡಗಳಲ್ಲಿ ಅರಳಿ ನಿಂತಿದ್ದ ಹೂಗಳು ತಮ್ಮೊಡತಿಗೆ ಸೌರಭದ ಕಾಣಿಕೆ ಯನ್ನರ್ಪಿಸಿ ಸ್ವಾಗತಿಸಿದವು.

ಮನೆಯ ಮುಂದೆ ಒಂದು ಗುಂಪು ಹೆಂಗಸರು, ಮಕ್ಕಳು ಸೇರಿದ್ದರು. ಗಾಡಿ ಬರುತ್ತಿರುವುದನ್ನು ದೂರದಿಂದಲೇ ನೋಡಿ ಎಲ್ಲರೂ ತಮ್ಮ ಕತ್ತುಗಳನ್ನು ಒಂಟೆಗಳಂತೆ ನೀಡಿದರು. ಅಳುತ್ತಿರುವ ಮಕ್ಕಳನ್ನು ತಾಯಂದಿರು ಸಂತೈಸುತ್ತ ಆಗಾಗ್ಗೆ ಗಾಡಿಯ ಕಡೆ ನೋಡುತ್ತಿದ್ದರು. ಎಲ್ಲರೂ ಶಾಮಣ್ಣನ ಹೆಂಡತಿಯನ್ನು ನೋಡುವ ಕುತೂಹಲದಿಂದ ಅಲ್ಲಿಗೆ ಬಂದಿದ್ದರು.

ಗಾಡಿಯೊಳಗಿನಿಂದಲೇ ಅವರ ಗುಂಪನ್ನು ನೋಡಿ ಮೀರ ಶಾಮುವಿಗೆ "ಅವರೆದುರಿಗೆ ಬರಲು ನನಗೆ ನಾಚಿಕೆ" ಎಂದು ಪಿಸುಗುಟ್ಟಿದಳು.

"ನಾಚಿಕೆ ಎಂತಹುದು! ಅವರು ಬಂದಿರುವುದೇ ನಿನ್ನನ್ನು ನೋಡುವುದಕ್ಕೆ."

"ನಾನು ಪ್ರದರ್ಶನದಲ್ಲಿಟ್ಟಿರುವ ವಸ್ತುವೇ?"

"ಈಗ ಹೆಚ್ಚು ಕಡಿಮೆ ಹಾಗೆಂದೇ ತಿಳಿದುಕೋ."

ಶಾಮು ಗಾಡಿಯಿಂದ ಕೆಳಗೆ ಧುಮುಕಿದ.

ಹಿರಿಯ ಹೆಂಗಸರೊಬ್ಬರು "ಆರೋಗ್ಯವೇ ಶಾಮಣ್ಣ?" ಎಂದರು.

"ಆರೋಗ್ಯವಾಗಿದ್ದೇನೆ ಅಜ್ಜಿ."

"ಹೆಂಡತೀನ ತೋರಿಸಪ್ಪಾ. ಅಷ್ಟು ಹೊತ್ತಿನಿಂದಾನೂ ಕಾದಿದೇವೆ."

ಮೀರ ತಾನು ಹಾಕಿಕೊಂಡಿದ್ದ ಮಕಮಲ್ಲಿನ ಸ್ಲಿಪ್ಪರುಗಳನ್ನು ಕಳಚಿ ಗಾಡಿಯಿಂದ ಕೆಳಗೆ ಬಿಸಾಡಿದಳು. ಸೀರೆಯ ಸೆರಗನ್ನು ನಡುವಿಗೆ ಸಿಕ್ಕಿಸಿ, ದೇವರನ್ನು ಧ್ಯಾನಿಸಿ ಕೆಳಗೆ ಧುಮುಕಿದಳು. ಮೀರ ಕೆಳಗಿಳಿದ ಕೂಡಲೇ ಹೆಂಗಸರು, ಮಕ್ಕಳು ಅವಳನ್ನು ಮುತ್ತಿಕೊಂಡರು.

"ಅತ್ತೇಮನೆ ಒಡವೆ ಯಾವುದು?"

"ತೌರುಮನೆಯವರು ಏನೇನಿಟ್ಟಿದ್ದಾರೆ?"

"ಈಗುಟ್ಟಿರುವ ಸೀರೆಗೆ ಎಷ್ಟು ದುಡ್ಡಾಯಿತು?" ಎಂಬ ಅನೇಕ ಪ್ರಶ್ನೆಗಳು ಮೀರಳಿಗೆ ಒಟ್ಟಿಗೆ ಹಾಕಲ್ಪಟ್ಟವು.

ಜೋಯಿಸರ ಮಗಳು ವೆಂಕೂ, ಅರ್ಚಕರ ಮಗಳು ಶಾರದೆ ಮೀರಳಿಗೆ ಹಾಡು ಹೇಳಿಕೊಂಡು ಆರತಿ ಎತ್ತಿದರು. ಮತ್ತೊಬ್ಬಾಕೆ ತೆಂಗಿನ ಕಾಯನ್ನು ಮುಖದ ಮೇಲೆ ನೀವಳಿಸಿ ಈಡುಗಾಯಿ ಹೊಡೆದರು.

ಜೋಯಿಸರ ಹೆಂಡತಿ ಸಾಕಮ್ಮ ಮೀರಳಿಗೆ ಕೇಳಿಸುವಂತೆಯೇ,

"ಪಟ್ಟಣದ ಹುಡುಗಿ ಅಂದಮೇಲೆ ಸ್ವಲ್ಪ ಪೀಚೇ ಕಣ್ರೀ ಅಮ್ಮಯ್ಯ" ಎಂದರು.

"ಆದರೇನು ಸಾತಕ್ಕ, ಹುಡುಗಿ ಮೈ ಬಣ್ಣ ಚೆನ್ನಾಗಿದೆ. ಚಿನ್ನದ ಪುತ್ಥಲಿ."

"ಸರಿ, ಕೆಲಸವಿಲ್ಲದೆ ಮನೇಲೇ ಇರುತ್ತಾಳೆ. ಇನ್ನೇನಾಗುತ್ತದೆ. ನಮ್ಮ ಹಳ್ಳೀಲಿ ಒಂದೆರಡು ದಿನ ಕೆರೆಯಿಂದ ನೀರು ತರುವುದು, ಗದ್ದೆಗಳಲ್ಲಿ ಓಡಾಡುವುದು ಮಾಡಲಿ. ಆಗ ನಿಜವಾದ ಬಣ್ಣ ಬಯಲಿಗೆ ಬರುತ್ತದೆ."

"ಬಿಡ್ರಿ, ಅವಳೇಕೆ ನೀರು ತರಬೇಕು? ಶಾಮಣ್ಣ ಅರಸು ಮಗನ ಹಾಗಿದಾನೆ. ಅವಳು ನಡೆಯುವ ನೆಲಕ್ಕೆ ರತ್ನಗಂಬಳಿ ಹಾಸಿ, ಹೂವು ಹರಡುತ್ತಾನೆ. ಅಂತಹ ಹುಡುಗ ನೀರು ಹೊರೆಸುತ್ತಾನೆಯೇ? ರಾಣಿಯಂತೆ ಮೆರೆಸುತ್ತಾನೆ."

ಮೀರ ತನ್ನನ್ನು ಮುತ್ತುತ್ತಿದ್ದ ಪ್ರಶ್ನೆಗಳಿಂದ ಪಾರಾಗಿ ಒಳಗೆ ಕಾಲಿಟ್ಟಳು. ದಿವ್ಯವಾದ ಆ ಮನೆಯನ್ನು ಅಚ್ಚರಿಯ ಕಣ್ಣುಗಳಿಂದ ನಿರುಕಿಸಿದಳು. ಮನೆಯನ್ನು ಪ್ರವೇಶಿಸುತ್ತಲೇ, ಜಂತಿ ಹಾಕಿದ ದೊಡ್ಡ ವರಾಂಡ, ಅದರ ಅಕ್ಕಪಕ್ಕಗಳಲ್ಲಿ ಎರಡು ದೊಡ್ಡ ಕೊಠಡಿಗಳು, ಸುಮಾರು ಇನ್ನೂರು ಜನರಿಗೆ ಎಲೆ ಹಾಕುವಷ್ಟು ವಿಸ್ತಾರವಾಗಿದ್ದ ಹಾಲು, ಹಾಲಿನ ಎರಡು ಪಕ್ಕಗಳಲ್ಲಿ ಉದ್ದಕ್ಕೂ ಕೊಠಡಿಗಳು, ತೊಟ್ಟಿಯ ಹಿಂದೆ ದೊಡ್ಡದಾದ ಅಂಗಳ, ಅಂಗಳದಲ್ಲಿ ಎಂಟು ದಪ್ಪ ಗಾರೆಯ ಕಂಬಗಳು, ಅಂಗಳದ ಮಧ್ಯೆ ದೊಡ್ಡ ಬಾವಿ, ಒಗೆಯುವ ಬಂಡೆ. ಅಂಗಳ ದಾಟಿ ಹಿಂದೆ ಹೋದರೆ ವಿಶಾಲವಾದ ಊಟದ ಮನೆ, ದೇವರ ಮನೆ, ಅಡಿಗೆ ಮನೆಗಳಿದ್ದವು. ಮನೆಯ ಹಿಂಭಾಗದಲ್ಲಿ ದೊಡ್ಡ ಕೊಟ್ಟಿಗೆ. ಕೊಟ್ಟಿಗೆಯ ತುಂಬಾ ಕಾಮಧೇನುವಿನಂತಹ ಹಸುಗಳು, ಕರುಗಳು, ಎಮ್ಮೆಗಳು. ಅಂಗಳದ ಒಂದು ಮೂಲೆಯಲ್ಲಿ ನೂರು ಪಲ್ಲ ಭತ್ತ ಹಿಡಿಯುವ ನಾಲ್ಕು ಕಣಜಗಳು.

ಮೀರ ಮೈಸೂರಿನಲ್ಲಿ ನಾಜೂಕಾದ ಮನೆಗಳನ್ನು ನೋಡಿದ್ದಳೇ ವಿನಾ ತನ್ನ ಮನೆಯಷ್ಟು ದೊಡ್ಡ ಮನೆಯನ್ನು ನೋಡಿರಲಿಲ್ಲ.

ಜನರ ಗದ್ದಲ ಕಡಿಮೆಯಾಗುವವರೆಗೆ ಮೀರ ಅಡಿಗೆಮನೆಯಲ್ಲಿ ಆಶ್ರಯ ಪಡೆದಳು. ಶಾಮು ಹಾಲಿನಲ್ಲಿ ಎಲ್ಲರ ಪ್ರಶ್ನೆಗಳಿಗೂ ಉತ್ತರ ಕೊಡುತ್ತ

ಜೋಯಿಸರ ಮಗು ಎರಡು ವರ್ಷದ ವೆಂಕಟೇಶೂನ ಮುದ್ದಿಸುತ್ತಿದ್ದ. ಎಲ್ಲರೂ ಅವರವರ ಮನೆಗಳಿಗೆ ತೆರಳಿದ ನಂತರ ವೆಂಕಮ್ಮ,

"ತಾಯೀ, ಕೈಕಾಲು ತೊಳೆದುಕೊಂಡು ಬಂದು ದೇವರಿಗೆ ತುಪ್ಪದ ದೀಪ ಹಚ್ಚಿ, ನಮಸ್ಕಾರ ಮಾಡಮ್ಮ" ಎಂದರು.

ಮೀರ ಕೈಕಾಲು ತೊಳೆದುಕೊಂಡು ಬರುವಷ್ಟರಲ್ಲಿ ವೆಂಕಮ್ಮನವರು ಬೆಳ್ಳಿಯ ನೀಲಾಂಜನದಲ್ಲಿ ತುಪ್ಪ ಹಾಕಿ ಬತ್ತಿ ಇಟ್ಟಿದ್ದರು. ದೇವರಮನೆಯ ಅಂದಚೆಂದ ನೋಡಿ ಮೀರ ಬೆರಗಾದಳು. ಎಂತಹ ಕಲಕಿದ ಮನವನ್ನೂ ಶಾಂತ ಗೊಳಿಸುವ ವಾತಾವರಣ ಅಲ್ಲಿತ್ತು. ವಿಧವಿಧವಾದ ಹೂವುಗಳ ಸುವಾಸನೆ, ಊದು ಕಡ್ಡಿ, ಕರ್ಪೂರದ ಸುಗಂಧ ಅವಳಿಗೆ ಹಿತವನ್ನುಂಟು ಮಾಡಿದುವು. ಮೀರ ದೀಪ ಹಚ್ಚಿ ಸೆರಗನ್ನು ಕೊರಳಿನ ಸುತ್ತ ಹಾಕಿಕೊಂಡು ನಮಸ್ಕರಿಸಿದಳು.

"ಇನ್ನು ಊಟಕ್ಕೇಳು. ಶಾಮಣ್ಣನನ್ನೂ ಎಬ್ಬಿಸು ತಾಯಿ."

ಮೀರ ದೇವರ ಮನೆಯಿಂದೀಚೆಗೆ ಬಂದಳು. ಶಾಮು ಮನೆಯಲ್ಲಿ ಎಲ್ಲೂ ಕಾಣಲಿಲ್ಲ. ವೆಂಕಮ್ಮನವರ ಬಳಿಗೆ ಬಂದು,

"ಅವರೆಲ್ಲೋ ಇಲ್ಲವಲ್ಲಾ...." ಎಂದಳು.

"ಇನ್ನೆಲ್ಲಿ ಹೋಗ್ತಾನೆ. ಕೊಟ್ಟಿಗೇಲಿ ಕರುಗಳನ್ನು ಮಾತನಾಡಿಸುತ್ತಿರಬೇಕು."

ಮೀರ ಹಿಂಬಾಗಿಲಿನಿಂದ ಕೊಟ್ಟಿಗೆಯ ಕಡೆ ಹೋದಳು. ಶಾಮು ಮನುಷ್ಯರನ್ನು ಮಾತನಾಡಿಸುವಂತೆಯೇ ಮುದ್ದಾದ ಬಿಳಿಯ ಕರುವೊಂದರೊಡನೆ ಆತ್ಮೀಯವಾಗಿ ಮಾತನಾಡುತ್ತಿದ್ದ. ಮೀರ ದೂರದಲ್ಲಿಯೇ ನಿಂತು ಆ ಸುಂದರ ದೃಶ್ಯವನ್ನು ನೋಡತೊಡಗಿದಳು.

ಕರು ತನ್ನ ಕಪ್ಪು ಕಣ್ಣುಗಳಲ್ಲಿ ಮಿಂಚನ್ನು ಚೆಲ್ಲುತ್ತ ಶಾಮುವಿನ ತೋಳಿನ ಮೇಲೆ ಕೊರಳು ನೀಡಿತ್ತು. ಕೊಂಬಿಲ್ಲದ ಅದರ ತಲೆಯನ್ನು ಶಾಮು ಸವರುತ್ತಾ ಕೇಳಿದ:

"ಏನು ಬೇಕು? ಮೈ ಸವರಬೇಕೆ?"

ಕರುವಿನ ಹೃದಯವನ್ನು ಅವನು ಪೂರ್ಣ ಅರ್ಥ ಮಾಡಿಕೊಂಡಂತಿತ್ತು. ಕರುವಿನ ಮುದ್ದು ಮುಖ ನೋಡುತ್ತ ಮೀರ ಮೈಮರೆತು ನಿಧಾನವಾಗಿ ಹತ್ತಿರ ಬಂದಳು. ಕಾಲಿನ ಕೆಳಗೆ ತಣ್ಣಗೆ, ಮೆತ್ತಗೆ ಏನೋ ಸಿಕ್ಕಿದಂತಾಯಿತು. ಮೀರ ಹೌಹಾರಿ ಕೆಳಗೆ ಬಗ್ಗಿ ನೋಡಿದಳು. ಸಗಣಿಯ ಮೇಲೆ ಅವಳ ಕಾಲಿನ ಗುರುತು ಚೆನ್ನಾಗಿ ಮೂಡಿತ್ತು. ಮೀರಾ ಸುತ್ತಲೂ ನೋಡಿದಳು.

ಅಲ್ಲಲ್ಲೇ ಬಿದ್ದಿದ್ದ ಸಗಣಿಯ ರಾಶಿಗೆ ನೊಣಗಳು, ಸೊಳ್ಳೆಗಳು ಮುತ್ತಿದ್ದವು. ಸಗಣಿ, ಗಂಜಲ, ಹುಲ್ಲಿನ ವಾಸನೆಯಿಂದ ಕೊಟ್ಟಿಗೆಯಲ್ಲಿ ಕೊಳೆತ ವಾಸನೆ

ಇತ್ತು. ಆ ಕೆಟ್ಟ ವಾಸನೆಗೂ, ಆ ಕೊಳಕಿಗೂ, ಆ ಸೊಳ್ಳೆ ನೊಣಗಳ ಸಂಗೀತಕ್ಕೂ ಮೀರ ಹೇಸಿ ದೂರದಲ್ಲೇ ನಿಂತಳು. ಆದರೆ ಶಾಮು ಮಾತ್ರ ಯಾವುದರ ಪರಿವೆಯೂ ಇಲ್ಲದೆ ಆ ಕೊಳಕಿನ ನಡುವೆಯೇ ಕುಳಿತು, ಕರುವನ್ನು ತನ್ನ ಮಗುವಿಗಿಂತಲೂ ಹೆಚ್ಚಾಗಿ ಮುದ್ದಿಸುತ್ತಿದ್ದ. ಅವನ ಎರಡು ಪಕ್ಕಗಳಲ್ಲೂ ಸಗಣಿಯ ರಾಶಿ ಬಿದ್ದಿತ್ತು. ಅವುಗಳಿಗೆ ಮುತ್ತುತ್ತಿದ್ದ ಸೊಳ್ಳೆ, ನೊಣಗಳು ಆಗಾಗ್ಗೆ ಅವನ ಮೈಮೇಲೂ ಕುಳಿತು ಹಿಂಸಿಸುತ್ತಿದ್ದವು. ಆ ಕೊಳಕಿನಿಂದಾಗಿ ಕರುವಿನ ಸುಂದರ ಮೂರ್ತಿಯೂ, ಮೀರಳಿಗೆ ಅಸಹ್ಯವಾಗಿ ತೋರಿತು.

ಮೀರ ದೂರದಲ್ಲೇ ನಿಂತು "ಊಟಕ್ಕೆ ಬನ್ನಿ" ಎಂದಳು.

ಶಾಮು ಎಚ್ಚೆತ್ತು "ಒಳಗೆ ಬಾ, ಮೀರಾ. ಈ ಚಿನ್ನಾರಿ ಕರು ನೋಡು" ಎಂದ.

"ನನಗೆ ಒಳಗೆ ಬರೋದಕ್ಕೆ ಅಸಹ್ಯ. ನೀವೇ ಬನ್ನಿ."

ಶಾಮುವಿಗೆ ಆಶ್ಚರ್ಯವಾಯಿತು. ಹಾಲಿನಂತಹ ಮೈಯುಳ್ಳ ಕರುವನ್ನು ಅಲಕ್ಷಿಸಬೇಕಾದರೆ ಎಂತಹ ಕಲ್ಲೆದೆ ಇರಬೇಕು!

"ಒಳಗೆ ಬರಲು ಅಡ್ಡಿಯೇನು?"

ಮೀರ ಕೊಟ್ಟಿಗೆ ಸುತ್ತ ಕೈತೋರಿಸಿ "ಅಡ್ಡಿಯೇ? ಕೊಟ್ಟಿಗೆ ಮನೆಯಿಂದ ದೂರವಿದ್ದರೆ ಚೆನ್ನಾಗಿರುತ್ತಿತ್ತು" ಎಂದಳು.

"ಅದೇಕೆ? ಈಗೇನಾಗಿದೆ?"

"ಇಲ್ಲಿರುವ ಸೊಳ್ಳೆ, ನೊಣಗಳಿಂದ ಯಾವ ಖಾಯಿಲೆ ಬೇಕಾದರೂ ಬರಬಹುದು. ಕೊಟ್ಟಿಗೆ ದೂರವಿದ್ದಷ್ಟೂ ಮನೆಗೆ ಕ್ಷೇಮ."

ಶಾಮು ತನ್ನ ಉಕ್ಕಿನಂತಹ ತೋಳಿನ ಮಾಂಸಖಂಡವನ್ನು ಉಬ್ಬಿಸಿ ಅವಳಿಗೆ ತೋರಿಸಿ ಹೇಳಿದ:

"ಈಗಲಾದರೂ ಕೊಟ್ಟಿಗೆಯಿಂದ ಅಪಾಯವಿಲ್ಲ ಎಂದು ತಿಳಿಯಿತೇ?"

"ಅದು ಬೇರೆಯ ಪ್ರಶ್ನೆ. ಒಟ್ಟಿನಲ್ಲಿ ಇದರಿಂದ ಆರೋಗ್ಯ ಕೆಡುತ್ತದೆ."

ಶಾಮು ಕರುವಿನ ಬೆನ್ನಿನ ಮೇಲೆ ಕೈಯಾಡಿಸುತ್ತ ಮೆಲ್ಲನೆ ಆ ಕರುವನ್ನು ಎತ್ತಿಕೊಂಡು ಬಂದು ಮೀರಳ ಕೈಗೆ ಕೊಡಲು ಹೋದ. ಕರುವಿನ ಚೆಲುವಿಗೆ ಮನಸೋತ ಮೀರಾ ಕೈ ನೀಡಿದಳು. ಕೂಡಲೆ ಕಾಲಿನ ಮೇಲಿದ್ದ ಸಗಣಿಯುಂಡೆಯನ್ನೂ, ಬಾಲ, ಪಕ್ಕೆಗೆ ಅಂಟಿಕೊಂಡಿದ್ದ ಗಂಜಲವನ್ನೂ ಕರುವಿನ ಮೈಯಿಂದ ಹೊರಡುತ್ತಿದ್ದ ಸಿನುಗು ವಾಸನೆಯನ್ನೂ ಗಮನಿಸಿ ಅಸಹ್ಯಪಟ್ಟು ತಟ್ಟನೆ ಕೈ ಹಿಂದಕ್ಕೆ ತೆಗೆದುಕೊಂಡಳು. ಮೀರ ಕೈ ಹಿಂದಕ್ಕೆಳೆದುಕೊಂಡಿದ್ದರಿಂದ ಕರು ದೊಪ್ಪನೆ ನೆಲದ ಮೇಲೆ ಬಿದ್ದಿತು. ತನ್ನ ಮೆಚ್ಚಿನ ಕರು ನೆಲದ ಮೇಲೆ ಬಿದ್ದುದನ್ನು ನೋಡಿ

ಶಾಮು ಅಪಶಕುನವಾಯಿತೆಂದು ಭಾವಿಸಿದ.

"ಮೀರಾ!"

ಧ್ವನಿ ಅವನು ಊಹಿಸುವುದಕ್ಕಿಂತಲೂ ಕಟುವಾಗಿತ್ತು.

ಶಾಮು ಬಾಗಿ ಕರುವನ್ನು ಎತ್ತಿ ತನ್ನೆದೆಗೆ ಒರಗಿಸಿಕೊಂಡು "ಕರು ನಿನಗೆ ಬೇಡವಾಗಿದ್ದರೆ ಸುಮ್ಮನಿರಬೇಕಾಗಿತ್ತು" ಎಂದು ಗದರಿದ.

"ಈ ಕರು ಇಷ್ಟು ಕೊಳಕಾಗಿರುತ್ತದೆ ಎಂದು ನಾನು ಭಾವಿಸಿರಲಿಲ್ಲ."

"ಕೊಳಕೆಲ್ಲಿಂದ ಬಂತು?"

"ಅದರ ಕಾಲು, ಪಕ್ಕ ನೋಡಿ."

"ನಿನ್ನ ಮಗು ಕೊಳಕಾಗಿದ್ದರೆ ನಿನಗೆ ಅಸಹ್ಯವಾಗುತ್ತಿತ್ತೆ? ಅಬ್ಬ! ಇಷ್ಟನ್ನೂ ನೀನು ಸಹಿಸದಿದ್ದ ಮೇಲೆ ನಿನಗೆ ಎಂತಹ ಮನಸ್ಸಿರಬೇಕು" ಎನ್ನುತ್ತ ಕರುವನ್ನು ಕೆಳಗಿಳಿಸಿದ. ಕರು ಎಗರಾಡುತ್ತ ಓಡಿಹೋಯಿತು.

ಗಂಡನ ಮನೆಗೆ ಕಾಲಿಟ್ಟ ಗಳಿಗೆಯಲ್ಲೇ ಅವನಿಂದ ದೊರೆತ ಪುರಸ್ಕಾರ ನೋಡಿ ಕಣ್ಣುಗಳು ಹನಿಗೂಡಿದವು. ಅವಳಿಗೆ ಯಾರಿಂದಲೂ ಗದರಿಸಿಕೊಂಡು ರೂಢಿಯಿರಲಿಲ್ಲ. ಗಂಡನ ಒರಟು ಮಾತುಗಳು ಅವಳ ಮನಸ್ಸನ್ನು ಹಿಂಡಿದವು. ಮೀರಳ ಕಣ್ಣುಗಳು ನೀರಿನಲ್ಲಿ ತೇಲುತ್ತಿರುವುದನ್ನು ನೋಡಿ ಶಾಮು ಮೆತ್ತಗಾದ. ತಾನು ಅಷ್ಟು ಒರಟಾಗಿ ಮಾತನಾಡಬಾರದಾಗಿತ್ತು ಎಂದುಕೊಂಡ.

"ಮೀರಾ, ಸಿಟ್ಟಾಗಬೇಡ. ತಪ್ಪಾಯಿತು" ಎನ್ನುತ್ತ ಅವಳ ಕೈ ಹಿಡಿಯಲೆತ್ನಿಸಿದ. ಆದರೆ ಮೀರ ದೂರ ಸರಿದು,

"ನಿಮ್ಮ ಕೈಯೆಲ್ಲಾ ಕೊಳೆಯಾಗಿದೆ. ನನ್ನನ್ನು ಮುಟ್ಟಬೇಡಿ" ಎಂದಳು.

ಜೇನಿನ ಗೂಡಿಗೆ ದಾರಿ ತಪ್ಪಿ ಬಂದು ಸೇರಿದ ಚಿಟ್ಟೆ ತಾನು ಎನಿಸಿತು ಮೀರಳಿಗೆ. ಗಂಡನ ಪ್ರಪಂಚ ಹಸು, ಕರು, ಭೂಮಿಯಾದರೆ ತನ್ನ ಪ್ರಪಂಚವೇ ಬೇರೆ ಯಾಗಿತ್ತು. ಈ ಎರಡು ಪ್ರಪಂಚವೂ ಸೇರಲು ಸಾಧ್ಯವೇ?

ಮೀರ ಕಣ್ಮರೆಯಾದ ಕೂಡಲೇ ಶಾಮು ಕೊಳೆಯಾಗಿದ್ದ ತನ್ನ ಕೈಗಳನ್ನು ಒಂದು ಬಾರಿ ನೋಡಿ, ಅವಳು ಹೋದ ದಾರಿಯ ಕಡೆ ನೋಡಿ ನಿಟ್ಟುಸಿರು ಬಿಟ್ಟ.

ವೆಂಕಮ್ಮ ಗಂಡಹೆಂಡತಿಗೆ ಅಗ್ರದೆಲೆ ಹಾಕಿ ಎಲೆಯ ಮುಂದೆ ರಂಗವಲ್ಲಿ ಇಟ್ಟಿದ್ದರು. ಊಟಕ್ಕೆ ಬಂದಾಗ ಮೀರಾಳ ಕಣ್ಣಿನ ಕೆಂಪು ಆರಿರಲಿಲ್ಲ. ಊಟ ಮಾಡುತ್ತ ಶಾಮು ಕೇಳಿದ:

"ಅತ್ತೆ, ನನ್ನ ಹೆಂಡತಿ ಹೇಗಿದಾಳೆ?"

ಕೋಸಂಬರಿ ಬಡಿಸುತ್ತಿದ್ದ ವೆಂಕಮ್ಮ ತಲೆ ತಗ್ಗಿಸಿದ್ದ ಮೀರಳ ಕಡೆ ನೋಡಿ,

"ಅವಳಿಗೇನಪ್ಪ, ಲಕ್ಷ್ಮಿ ಹಾಗಿದಾಳೆ. ನಿಮ್ಮಿಬ್ಬರ ಜೋಡಿ ಹೇಳಿ ಮಾಡಿಸಿದ ಹಾಗಿದೆ" ಎಂದರು.

'ನೀವು ನೋಡುವವರೆಗೆ ನನ್ನ ಮನಸ್ಸು ತೃಪ್ತಿಯಿಂದಿರಲಿಲ್ಲ. ನೀವು ನಮ್ಮಿಬ್ಬರನ್ನೂ ಹರಸಬೇಕು."

"ಮುಖ್ಯ ನೀನು ಅಷ್ಟೊಂದು ವಿಶ್ವಾಸ ಇಟ್ಟುಕೊಂಡಿದೀಯಪ್ಪ. ಅದು ನಿನ್ನ ದೊಡ್ಡ ಗುಣ."

"ನಿಮ್ಮಲ್ಲಿ ವಿಶ್ವಾಸ ಇಟ್ಟುಕೊಳ್ಳದಿರಲು ಹೇಗೆ ಸಾಧ್ಯ. ಹೆತ್ತ ತಾಯಿ ಇಲ್ಲದಿದ್ದರೂ ಸಾಕಿದ ತಾಯಿ ನೀವು. ನಿಮ್ಮ ತೊಡೆಯ ಮೇಲೆ ಬೆಳೆದ ಮಗು ನಾನು. ಅಷ್ಟೊಂದು ಪ್ರೀತಿ, ವಿಶ್ವಾಸ ನನ್ನಲ್ಲಿ ನೀವಿಟ್ಟುಕೊಂಡಿರುವುದು ನಿಮ್ಮ ದೊಡ್ಡ ಗುಣ ತೋರಿಸುತ್ತೆ. ಎಷ್ಟು ಜನ್ಮ ಎತ್ತಿದರೂ ನಿಮ್ಮ ಋಣ ನಾನು ತೀರಿಸಲಾರೆ."

ಶಾಮುವಿನ ಅಳಿದ ತಾಯಿಯನ್ನು ನೆನೆದೋ ಏನೋ ವೆಂಕಮ್ಮನವರ ಕಣ್ಣಿನಲ್ಲಿ ನೀರೂರಿತು. ಅವರು ಸೆರಗಿನ ತುದಿಯಿಂದ ಒರೆಸಿಕೊಂಡು ಮಾತು ಬದಲಾಯಿಸಿದರು.

ಊಟ ಮುಗಿದ ಕೂಡಲೇ ಶಾಮು ಹಾಲಿನಲ್ಲಿ ಕಟ್ಟಿದ್ದ ಉಯ್ಯಾಲೆಯ ಮೇಲೆ ಕುಳಿತು ಮೆಲ್ಲನೆ ತೂಗಿಕೊಳ್ಳುತ್ತ,

"ಮೀರಾ, ವೀಳೆದೆಲೆ, ಅಡಿಕೆ ತಗೊಂಡು ಬಾ" ಎಂದ.

ಮೀರ ತಂದಿಟ್ಟ ನಾಲ್ಕು ವೀಳೆಯದೆಲೆಯನ್ನು ನೋಡಿ "ನನಗೆ ಸಾಲದು" ಎಂದ.

"ಮೈಸೂರಿನಲ್ಲಿ ಸ್ವಲ್ಪಾನೇ ಹಾಕಿಕೊಳ್ಳುತ್ತಿದ್ದಿರಲ್ಲಾ...."

"ಮಾವನ ಮನೇಲಿ ಕಟ್ಟು ವೀಳೆಯದೆಲೆ ಕೊಡಿ ಅಂತ ಕೇಳಲು ಸಾಧ್ಯವೇ?" ಎನ್ನುತ್ತಾ ಹೋಗಿ ಒಂದು ಕಟ್ಟು ಎಲೆ, ಕಾಲು ಪಾವು ಅಡಿಕೆ ತಂದು ಹತ್ತು ನಿಮಿಷಗಳಲ್ಲಿ ಅದನ್ನೂ ಪೂರೈಸಿದ.

"ನೀನೂ ಹಾಕಿಕೋ ಮೀರಾ."

"ಊಹ್ಞೂ. ನನಗೆ ಸೇರೋದಿಲ್ಲ!"

"ಎಲೆ ಹಾಕಿಕೊಳ್ಳುವವರು ಸೇರುತ್ತಾರಲ್ಲವೇ?"

ಮೀರ ಮಾತನಾಡದೇ ಒಳಗೆ ಹೋದಳು.

ಸಂಜೆ ಮೀರಳಿಗೆ ಸಮಯ ಹೋಗುವುದೇ ಕಷ್ಟವಾಯಿತು. ಒಳಗಿನ, ಹೊರಗಿನ ಕೆಲಸಗಳೆಲ್ಲವನ್ನೂ ವೆಂಕಮ್ಮನವರು ಮಾಡುತ್ತಿದ್ದರು. ಮುಸುರೆ ತೊಳೆಯುವುದು, ಉಪಕರಣೆ ಬೆಳಗುವುದು, ಕಸ ಗುಡಿಸುವುದು ಈ ಕೆಲಸಗಳನ್ನು

ತಿಮ್ಮಿ ಮಾಡುತ್ತಿದ್ದಳು. ಮೀರ ಬೇಸರ ಹೋಗಲಾಡಿಸಿಕೊಳ್ಳಲು ಕೈಲಿ 'ಪೆವಿಲಿಯನ್ ಆಫ್ ವುಮನ್' ಹಿಡಿದು ಕುಳಿತಳು. ಕತೆಯಲ್ಲಿದ್ದ ಸ್ವಾರಸ್ಯ ಹೆಚ್ಚಿದಂತೆ ಪುಸ್ತಕದಲ್ಲೇ ತಲ್ಲೀನಳಾದಳು. ಕೈಯಿಂದ ಯಾರೋ ಪುಸ್ತಕವನ್ನು ಕಿತ್ತುಕೊಂಡಾಗಲೇ ಅವಳಿಗೆ ಎಚ್ಚರ.

ಶಾಮು ಪುಸ್ತಕವನ್ನು ಮೇಜಿನ ಮೇಲೆ ಬಿಸಾಡಿ "ಏಳು" ಎಂದ.

"ಎಲ್ಲಿಗೆ?" ಮೀರಳಿಗೆ ರಸಭಂಗವಾದುದಕ್ಕೆ ಕೋಪ ಬಂದಿತ್ತು.

"ನಮ್ಮ ಹಳ್ಳಿಯನ್ನೆಲ್ಲಾ ತೋರಿಸಿಕೊಂಡು ಬರುತ್ತೇನೆ. ಸಂಜೆ ಹೊತ್ತು ಆರಾಮವಾಗಿ ಹೊಲಗದ್ದೆಗಳ ನಡುವೆ ಓಡಾಡುವುದನ್ನು ಬಿಟ್ಟು ಕೈಲಿ ಪುಸ್ತಕ ಹಿಡಿದು ಮೂಲೆಯಲ್ಲಿ ಕುಳಿತುಕೊಳ್ಳುವುದೇನು ಚೆನ್ನ?"

"ನಾನು ಬರುವುದಿಲ್ಲ" ಬೇಸರದಿಂದ ಹೇಳಿದಳು.

"ಹಾಗೆಂದರೆ ನಾನು ಕೇಳುವವನಲ್ಲ. ಇನ್ನೈದು ನಿಮಿಷದಲ್ಲಿ ಸಿದ್ಧವಾಗು" ಎನ್ನುತ್ತಾ ಶಾಮು ಹೊರಗೆ ಹೋದ.

'ಈ ಕೊಂಪೆಯಲ್ಲಿ ನೋಡುವುದೇನಿದೆ" ಎಂದು ಮೀರ ಸಿಡುಗುಟ್ಟಿದಳು. ತನ್ನ ಮಾತಿಗೆ ಸ್ವಲ್ಪವೂ ಬೆಲೆ ಕೊಡದೆ ಓದುತ್ತ ಕುಳಿತಿದ್ದವಳನ್ನು ಎಬ್ಬಿಸಿಬಿಟ್ಟರಲ್ಲಾ ಎಂದು ಸಿಟ್ಟುಬಂತು. ಆದರೆ ಪ್ರತ್ಯುತ್ತರ ಕೊಡುವ ಮನಸ್ಸಿಲ್ಲದೇ ತಲೆ ಬಾಚಿಕೊಂಡಳು. ವೆಂಕಮ್ಮನವರು ಕಟ್ಟಿಟ್ಟಿದ್ದ ಹೂಮಾಲೆಯನ್ನು ಮುಡಿದು ಕೈಗೆ ಗಡಿಯಾರ ಕಟ್ಟಿ ಶಾಮುವಿನೆದುರು ನಿಂತು "ಸಿದ್ಧ" ಎಂದಳು.

ಶಾಮು, ಮೀರ ಹೊರಟರು. ಮನೆಯಿಂದ ಎರಡು ಮೈಲಿ ನಡೆದ ನಂತರ ಶಾಮುವಿನ ಗದ್ದೆಗಳು ಒಂದೊಂದಾಗಿ ಬರತೊಡಗಿದವು. ಕಬ್ಬಿನ ಗದ್ದೆಗಳನ್ನೂ ಶಾಮು ಮೀರಳಿಗೆ ತೋರಿಸಿದ. ರೈತರುಗಳು ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದರು. ಕೆಲವರು ನೀರನ್ನು ಹಾಯಿಸುತ್ತಿದ್ದರು. ಮತ್ತೆ ಕೆಲವರು ಕಳೆಗಳನ್ನು ಕೀಳುತ್ತಿದ್ದರು. ತಮ್ಮೊಡೆಯ ಅಮ್ಮಾವರೊಡನೆ ಜಮೀನು ನೋಡಲು ಬಂದಿರುವುದನ್ನು ತಿಳಿದು ಎಲ್ಲ ರೈತರುಗಳೂ ಕೆಲಸಗಳನ್ನು ನಿಲ್ಲಿಸಿ ಮೀರಳನ್ನು ನೋಡತೊಡಗಿದರು. ರೈತರ ಸರಳ ನೋಟದೆದುರು ಮೀರ ಲಜ್ಜಿತಳಾದಳು.

"ಬನ್ನಿ, ಹೋಗೋಣ. ಅವರೆಲ್ಲಾ ಹೇಗೆ ನೋಡುತ್ತಿದ್ದಾರೆ."

"ತಮ್ಮೊಡತಿಯನ್ನು ನೋಡುವ ಕುತೂಹಲ ಅವರಿಗೆ."

"ಆದರೆ ನನಗೆ ಸಂಕೋಚವಾಗುತ್ತಿದೆ, ಬನ್ನಿ" ಎಂದು ಮೀರ ಶಾಮುವಿಗೆ ಬಲವಂತ ಮಾಡತೊಡಗಿದಳು. ಶಾಮು ಅವಳೊಡನೆ ಹಿಂದಿರುಗಿದ.

ಹಳ್ಳಿಯಲ್ಲಿ ಮಣ್ಣಿನ ಮನೆಗಳ ನಡುವೆ ಹೋಗುವಾಗ ಜನರು ಕಿಟಕಿ ಬಾಗಿಲುಗಳಲ್ಲಿ ನಿಂತು ನೂತನ ದಂಪತಿಗಳನ್ನು ತದೇಕದೃಷ್ಟಿಯಿಂದ ನೋಡ

ತೊಡಗಿದರು.

"ಅವರೆಲ್ಲಾ ಹಾಗೇಕೆ ನೋಡಬೇಕು?" ಮೀರ ಆಕ್ಷೇಪಿಸಿದಳು.

"ನಿನ್ನಂತಹ ಚೆಲುವೆಯನ್ನು ನೋಡಿ ಅವರ ಕಣ್ಣು ಸಾರ್ಥಕವಾಗಬೇಕು."

"ಕೇಳಿದವರು ನಕ್ಕಾರು. ನೀವು ಸುಮ್ಮನೆ ನನ್ನನ್ನು ಹೊಗಳಬೇಡಿ."

ಜೋಯಿಸರ ಮಗಳು ವೆಂಕೂ ಬಾಗಿಲಿನಲ್ಲಿ ನಿಂತಿದ್ದವಳು ಅವರನ್ನು ಕಂಡ ತಕ್ಷಣ ಚಪ್ಪಾಳೆ ಹೊಡೆದು,

"ಶಾಮಣ್ಣಾ, ಅಮ್ಮ ಕರೆದಳು. ಬರಬೇಕಂತೆ" ಎಂದು ಕೂಗಿದಳು.

ಶಾಮು ಮೀರಳ ಕಡೆ ತಿರುಗಿ "ಬಾ, ಹೋಗೋಣ" ಎಂದ.

ಜೋಯಿಸರ ಮನೆ ಮಣ್ಣಿನಿಂದ ಮಾಡಿ ಸುಣ್ಣ ಬಳಿದಿತ್ತು. ತಲೆಗೆ ಬಡಿಯುವ ಬಾಗಿಲುಗಳನ್ನೂ, ಹೆಂಚುಗಳನ್ನೂ ನೋಡಿ ಮೀರ ಈ ಮನೆಯಲ್ಲಿ ಜನರು ಹೇಗೆ ವಾಸ ಮಾಡುವರೋ ಎಂದು ಆಶ್ಚರ್ಯಪಟ್ಟಳು. ಮನೆಗೆ ಬಹಳ ಪುಟ್ಟ ಕಿಟಕಿಗಳಿದ್ದವು. ಗೋಡೆ ತುಂಬ ರವಿವರ್ಮನ ಲಕ್ಷ್ಮಿ, ಸರಸ್ವತಿ, ಶಾಕುಂತಲಾ, ಮೋಹಿನಿ ಮುಂತಾದವರ ಚಿತ್ರಗಳಿದ್ದವು. ವೆಂಕು ಚಾಪೆ ಹಾಸಿ "ಕುಳಿತುಕೊಳ್ಳಿ" ಎಂದು ಹೇಳಿ ಒಳಗೆ ಹೋದಳು. ಜೋಯಿಸರ ಹೆಂಡತಿ ಸಾತಮ್ಮ ಒಂದು ಲೋಟದಲ್ಲಿ ಕಾಯಿಸಿದ ಹಸುವಿನ ಹಾಲನ್ನೂ, ರಾಗಿ ರೊಟ್ಟಿಯನ್ನು ತಂದು ಅವರ ಮುಂದಿಟ್ಟು

"ಬಡವರ ಮನೆ ತಿಂಡಿ ಸ್ವಲ್ಪ ತೂಗೋಬೇಕು" ಎಂದರು.

"ಬೇಡಿ ಸಾತಕ್ಕ, ಮಧ್ಯಾಹ್ನ ಪಟ್ಟಾಗಿ ತಿಂಡಿಯಾಗಿದೆ!"

"ಸ್ವಲ್ಪ ತಗೊಂಡರೆ ಮನಸ್ಸಿಗೆ ಸಮಾಧಾನ."

"ತಗೋ ಮೀರಾ" ಎಂದು ಹೇಳಿ ಶಾಮು ಸಂಕೋಚ ಬಿಟ್ಟು ರೊಟ್ಟಿ ತಿನ್ನಲು ಪ್ರಾರಂಭಿಸಿದ. ಮೀರಳಿಗೆ ರಾಗಿರೊಟ್ಟಿ ತಿಂದು ಅಭ್ಯಾಸವಿರಲಿಲ್ಲ. ಕಷ್ಟದಿಂದ ತಿಂದು ಹಾಲು ಕುಡಿದು ಮುಗಿಸಿದಳು.

ವೆಂಕು ತನ್ನ ಚಿಕ್ಕ ತಮ್ಮ ವೆಂಕಟೇಶೂನ ಎತ್ತಿಕೊಂಡು ಹೊರಗೆ ಬಂದಳು. ಶಾಮು ವೆಂಕೂನ ಕೀಟಲೆ ಮಾಡಲೆಂದು,

"ವೆಂಕೂಗೆ ಯಾವಾಗ ಮದುವೆ ಸಾತಕ್ಕ?" ಎಂದ.

"ಶಾಮಣ್ಣ, ಎಲ್ಲಾದರೂ ಅವಳಿಗೊಂದು ಗಂಡು ಹುಡುಕಿಕೊಡಪ್ಪ. ಆಗಲೇ ಹತ್ತು ವರ್ಷವಾಯಿತು" ಎಂದರು ಸಾತಕ್ಕ.

ಶಾಮುವಿಗೆ ವೆಂಕುವೆಂದರೆ ಒಂದು ಬಗೆಯ ಆದರ. ಚೋಟುದ್ದ ಹುಡುಗಿಯಿಂದಲೂ ಅವಳನ್ನು ಬಲ್ಲ.

"ನಿಮಗೆ ತಿಳಿಯುವಷ್ಟು ನನಗೆಲ್ಲಿ ತಿಳಿಯುತ್ತದೆ ಸಾತಕ್ಕ?"

"ತಿಳೀದೇ ಏನು? ನೀನು ಆರಿಸಿ ಮದುವೆ ಮಾಡಿಕೊಂಡಿರುವ ಹುಡುಗೀನ ನೋಡಿದರೆ ತಿಳಿಯುತ್ತದೆ, ನೀನು ಚೆನ್ನಾಗಿ ಆರಿಸಬಲ್ಲೆ ಎಂದು."

ಅವರು ಮಾತನಾಡುತ್ತಿದ್ದ ವಿಷಯದಲ್ಲಿ ಮೀರಳಿಗೆ ಆಸಕ್ತಿಯಿರಲಿಲ್ಲ. ಒಂದು ಗಂಟೆಯ ನಂತರ ಶಾಮು ಎದ್ದಾಗ ಮೀರಳಿಗೆ ಜೀವ ಬಂದಂತಾಯಿತು. ಮನೆಗೆ ಬರುವಷ್ಟರಲ್ಲಿ ಚೆನ್ನಾಗಿ ಕತ್ತಲಾಗಿತ್ತು. ಬೋರ ಲಾಂದ್ರಗಳನ್ನು ಒರೆಸಿ, ಸೀಮೆಎಣ್ಣೆ ಹಾಕಿ ದೀಪಗಳನ್ನು ತೂಗುಹಾಕಿದ್ದ. ಇದುವರೆಗೂ ವಿದ್ಯುಚ್ಛಕ್ತಿ ದೀಪಗಳಲ್ಲಿ ಬೆಳೆದ ಮೀರಳಿಗೆ ಮಂಕಾದ ಸೀಮೆಎಣ್ಣೆ ದೀಪವನ್ನು ನೋಡಿ ಕಣ್ಣು ಕತ್ತಲಿಟ್ಟಂತಾಯಿತು. ಮನೆಗೆ ಹೋದೊಡನೆ ಓದಬೇಕೆಂದು ಯೋಚಿಸಿದ್ದಳು. ಈ ದೀಪದ ಬೆಳಕಿನಲ್ಲಿ ಓದುವುದು ಹೇಗೆ ಎನಿಸಿತು. ಆದರೆ ಅವಳು ಹಳ್ಳಿಯ ಪ್ರತಿಯೊಂದು ವಾತಾವರಣಕ್ಕೂ ಹೊಂದಿಕೊಳ್ಳಲೇಬೇಕಾಗಿತ್ತು.

ಹಳ್ಳಿಯಲ್ಲಿ ಒಂದು ವಾರ ಕಳೆಯುವ ಹೊತ್ತಿಗೆ ಮೀರಳಿಗೆ ಜೀವನವೇ ಜಿಗುಪ್ಸೆಯಾಗಿಹೋಯಿತು. ಅವಳ ಚಟುವಟಿಕೆ, ಧೈರ್ಯ, ಮುನ್ನುಗ್ಗುವಿಕೆಯಿಂದ ತುಂಬಿದ ಮನಸ್ಸು, ಅಸಾಧಾರಣ ಬುದ್ಧಿ ಹಳ್ಳಿಯ ನೀರಸ ವಾತಾವರಣಕ್ಕೆ ಹೊಂದಿಕೊಳ್ಳಲಿಲ್ಲ. ಹಸಿದ ಆನೆ ಕಬ್ಬಿನ ಜಲ್ಲೆ ಸಿಗಿಯಲು ಆತುರ ಪಡುವಂತೆ ಮೀರಳ ಹಸಿದ ನಿರುದ್ಯೋಗಿ ಬುದ್ಧಿ ಕೆಲಸವಿಲ್ಲದೆ ಹಳಹಳಿಸಿತು. 'ನನಗೆ ಏನಾದರೂ ಕೆಲಸ ಕೊಡು' ಎಂದು ಮನಸ್ಸು ಹಗಲಿರುಳೂ ಅವಳನ್ನು ಕಾಡಿತು. ತಾನಿದ್ದ ಸನ್ನಿವೇಶಕ್ಕೆ ವಿರುದ್ಧವಾಗಿ ದಂಗೆ ಎದ್ದಿದ್ದ ಮನಸ್ಸು, ಬುದ್ಧಿಯನ್ನು ಮೀರ ತನ್ನ ಅಧೀನದಲ್ಲಿರಿಸಿಕೊಳ್ಳಲು ಸಾಹಸ ಮಾಡಿದಳು.

ಕೆಲಸವಿಲ್ಲದೆ ಆರಾಮವಾಗಿ ಮಂಚದ ಮೇಲೆ ಮೈ ಚಾಚಿ ಮಲಗಿದಾಗ ವಿಚಾರ ಪ್ರವಾಹದಲ್ಲಿ ತೇಲಿ ಹೋಗುತ್ತಿದ್ದಳು.

'ನನಗೇನು ಕಡಿಮೆಯಾಗಿದೆ? ಪ್ರೀತಿಸುವ ಗಂಡನಿದ್ದಾನೆ. ನಾನು ಬಯಸಿದ ವಸ್ತುವನ್ನು ದೊರಸಿಕೊಳ್ಳುವ ಚೈತನ್ಯವಿದೆ. ಆದರೂ ಮನಸ್ಸಿಗೇಕೆ ಸಮಾಧಾನವಿಲ್ಲ?' ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುತ್ತಿದ್ದಳು. ಆದರೆ ಆ ಪ್ರಶ್ನೆಗೆ ಸರಿಯಾದ ಉತ್ತರ ಸಿಗುತ್ತಿರಲಿಲ್ಲ.

ಬೆಳಿಗ್ಗೆ ಎದ್ದು ಕಾಫಿ ತಿಂಡಿ ಮುಗಿಸಿ, ಸ್ನಾನ ಮಾಡಿ ಬಣ್ಣದ ಗೌರಿಯಂತೆ ಅಲಂಕಾರ ಮಾಡಿ ಕುಳಿತುಕೊಂಡರೆ ಮಧ್ಯಾಹ್ನ ಒಂದು ಗಂಟೆಗೆ ಊಟವಾಗುತ್ತಿತ್ತು. ಶಾಮು ಗದ್ದೆಯ ಮೇಲ್ವಿಚಾರಣೆ ನಡೆಸಿ ಮನೆಗೆ ಬರುತ್ತಿದ್ದುದು ಒಂದು ಗಂಟೆಯಾಗುತ್ತಿತ್ತು. ಮೀರ ಕೆಲವು ಬಾರಿ ಅವನು ಬರುವವರೆಗೆ ವೆಂಕಮ್ಮನವರೊಡನೆ ಮಾತನಾಡುತ್ತ ಕುಳಿತುಕೊಳ್ಳುತ್ತಿದ್ದಳು. ಕೆಲವು ದಿನ ಅವರೊಡನೆ ಆಡಿದ ಮಾತುಗಳನ್ನೇ ಆಡಲು ಬೇಸರವಾಗುತ್ತಿತ್ತು. ಶಾಮು ಎಂದಿಗೆ ಬಂದಾನೋ ಎಂದು

ಅವನು ಬರುವುದಕ್ಕೆ ಅರ್ಧ ಗಂಟೆ ಮುಂಚಿತವಾಗಿ ಬಂದು ಬಾಗಿಲಿನಲ್ಲಿ ನಿಲ್ಲು ತ್ತಿದ್ದಳು. ಮೊದಲೇ ಕೆಂಪಾಗಿದ್ದ ಮುಖವನ್ನು ಬಿಸಿಲಿನಿಂದ ಮತ್ತಷ್ಟು ಕೆಂಪೇರಿಸಿ ಕೊಂಡು ಬರುತ್ತಿದ್ದ ಶಾಮು ದೂರದಿಂದಲೇ ಮೀರಳನ್ನು ನೋಡಿ ನಡಿಗೆಯ ವೇಗವನ್ನು ಹೆಚ್ಚಿಸಿ ಹತ್ತಿರ ಬಂದು "ನನ್ನ ಹಕ್ಕಿಗೆ ಬೇಸರವಾಯಿತೇ?" ಎಂದು ಕೇಳುತ್ತಿದ್ದ.

ಮೀರಳ ತೋಳು ಹಿಡಿದು ಒಳಗೆ ಸೆಳೆದೊಯ್ದು ರೂಮಿನಲ್ಲಿ ಮಾತ ನಾಡುತ್ತ ಕುಳಿತುಬಿಟ್ಟನೆಂದರೆ ವೆಂಕಮ್ಮ ಬಾಗಿಲ ಹತ್ತಿರ ಬಂದು ನಾಲ್ಕೈದು ಸಲ ಎಚ್ಚರಿಸಬೇಕಾಗುತ್ತತ್ತು.

"ಶಾಮಣ್ಣಾ, ಊಟ ಮಾಡೇಳಪ್ಪಾ, ಅಡಿಗೆ ಆರಿ ತಂಗಳಾಗುತ್ತಿದೆ."

ಶಾಮು ಎದ್ದು ಮೀರಳ ಜೊತೆ ಊಟ ಮಾಡಿಕೊಂಡು ಒಂದು ಕಟ್ಟು ವೀಳೆಯದೆಲೆ ಮೆದ್ದು ಬಲವಂತದಿಂದ ಮೀರಳಿಗೂ ನಾಲ್ಕೆಲೆ ತಿನ್ನಿಸಿ ಮಲಗು ತ್ತಿದ್ದ. ಮಧ್ಯಾಹ್ನದ ಹೊತ್ತು ಮೀರಳಿಗೆ ನಿದ್ದೆ ಮಾಡುವ ಅಭ್ಯಾಸವಿರಲಿಲ್ಲ. ಶಾಮುವಿನ ತೋಳಿನ ಮೇಲೆ ತಲೆಯಿಟ್ಟು ಅವನಿಗೆ ಎಚ್ಚರವಾಗುವವರೆಗೂ ಶೂನ್ಯ ದೃಷ್ಟಿಯಿಂದ ಹೆಂಚುಗಳನ್ನು ನೋಡುತ್ತ ಮಲಗುತ್ತಿದ್ದಳು. ವಿಧವಿಧವಾದ ಯೋಚನೆಗಳು ಅವಳ ಮನಸ್ಸನ್ನು ಮುತ್ತಿ ಕಾಡುತ್ತಿದ್ದವು. ಬಂಧಿತ ಪಕ್ಷಿಯಂತೆ ಅವಳ ಮನಸ್ಸು ಲಬಲಬ ಒದ್ದಾಡುತ್ತಿತ್ತು. 'ನನಗೆ ಇದು ಬೇಕಾಗಿಲ್ಲ. ನನಗೆ ಬೇಕಾದುದು ಬೇರೆ. ನಾನು ಬಯಸಿದ್ದು ಸಿಕ್ಕಿಲ್ಲ. ಸಿಕ್ಕಿರುವುದು ನನಗೆ ಬೇಡ' ಎಂದು ಮನಸ್ಸು ಹಠ ಮಾಡಿ ಮೊಂಡುತನದಿಂದ ಎದ್ದೆದ್ದು ನಿಲ್ಲುತ್ತಿತ್ತು. ಈ ಹೋರಾಟದಲ್ಲಿ ಮೀರ ಬಳಲುತ್ತಿದ್ದಳು.

ಐದು ಗಂಟೆಯ ಹೊತ್ತಿಗೆ ಶಾಮುವಿಗೆ ಎಚ್ಚರವಾಗುತ್ತಿತ್ತು. ಎದ್ದು ಕಾಫಿ ತಿಂಡಿ ಮುಗಿಸಿ ಪುನಃ ತಿರುಗಾಡಲು ಹೊರಟುಹೋಗುತ್ತಿದ್ದ. ಕೆಲವು ದಿನ ಬಲವಂತದಿಂದ ಮೀರಳನ್ನು ತನ್ನೊಡನೆ ಕರೆದುಕೊಂಡು ಹೋಗುತ್ತಿದ್ದ. ಹಳ್ಳಿಗೆ ಬಂದ ತರುಣದಲ್ಲಿ ಹಳ್ಳಿಯನ್ನು ನೋಡುವ ಕುತೂಹಲದಿಂದ ಮೀರ ಶಾಮುವಿ ನೊಡನೆ ತಿರುಗಾಡಿದರೂ, ಕ್ರಮೇಣ ಹಳ್ಳಿಯಲ್ಲಿ ಆಸಕ್ತಿ ಕಡಿಮೆಯಾದಂತೆ, ತನ್ನನ್ನೇ ಹಿಂಬಾಲಿಸುತ್ತಿದ್ದ ನೋಟಗಳನ್ನು ಎದುರಿಸಲಾರದೇ ಮನೆಯಲ್ಲಿಯೇ ಕುಳಿತು ಬಿಡುತ್ತಿದ್ದಳು. ಸಂಜೆ ಆರು ಗಂಟೆಯ ಹೊತ್ತಿಗೆ ಆಳು ಬಂದು ದೀಪ ಹೊತ್ತಿಸಿ ತೂಗುಹಾಕಿ ಹೋಗುತ್ತಿದ್ದ. ರಾತ್ರಿ ಎಂಟುಗಂಟೆಯ ಹೊತ್ತಿಗೆ ಶಾಮು ಮನೆಗೆ ಬರುತ್ತಿದ್ದ. ಇದೇ ಅವಳ ದಿನಚರಿಯಾಗಿತ್ತು.

ದಿನದಲ್ಲಿ ಅವಳು ಮಾಡುತ್ತಿದ್ದ ದೊಡ್ಡ ಕೆಲಸವೆಂದರೆ ಕಾಂಪೌಂಡಿ ನಲ್ಲೆಲ್ಲಾ ಸುತ್ತಾಡಿ ಒಂದು ಹೊರೆ ಹೂ ಕಿತ್ತು ಕಟ್ಟುವುದು, ಕಟ್ಟಿದ ಹೂವನ್ನು

ದಿನಕ್ಕೆರಡು ಬಾರಿ ಬದಲಾಯಿಸಿ ಮುಡಿಯುವುದು.

ಯಾವಾಗಲೂ ಕೆಲಸ ಮಾಡುತ್ತಿದ್ದ ಪಿಶಾಚಿ ಕೆಲಸ ಮುಗಿದೊಡನೆ ತನ್ನ ಯಜಮಾನನ ಬಳಿಗೆ ಬಂದು 'ಇನ್ನೇನು', 'ಮುಂದೇನು?' ಎಂದು ಪ್ರಶ್ನಿಸುತ್ತಿದ್ದಂತೆ ಮೀರಳ ಮನಸ್ಸು ಯಾವಾಗಲೂ 'ಇನ್ನೇನು, ಮುಂದೇನು' ಎಂದು ಪ್ರಶ್ನಿಸುತ್ತಿತ್ತು. ಪಿಶಾಚಿಗೆ ನಾಯಿಬಾಲದ ಡೊಂಕು ಸರಿಮಾಡುವ ಕೆಲಸ ಒದಗಿಸಿದಂತೆ ಮೀರ ತನ್ನ ಮನಸ್ಸಿಗೆ ತನ್ನ ಮಹದಾಸೆಯ ಬಗ್ಗೆ ಹಗಲುಗನಸುಗಳನ್ನು ಕಟ್ಟುವ ಕೆಲಸ ಒಪ್ಪಿಸಿದಳು. ಆದರೆ ಕನಸಿನಿಂದ ಎಚ್ಚೆತ್ತ ಮನ ನಿರಾಶೆಯಿಂದ ಕುಂದುತ್ತಿತ್ತು. ಹೃದಯ ಭಾರವಾಗುತ್ತಿತ್ತು. ಈ ಮನೋವಿಪ್ಲವದಲ್ಲಿ ಮೀರ ಬಡವಾದಳು.

ದಡ ಬಿಟ್ಟ ದೋಣಿ ನಿಯಮಿತವಾದ ಸ್ಥಳ ಸೇರಿದರೆ ಅಲ್ಲಿಗೆ ಅದರ ಕೆಲಸ ಮುಗಿದ ಹಾಗೇ. ಆದರೆ ತಾನು ಹೋಗಬೇಕೆಂದಿದ್ದ ಸ್ಥಳ ಸೇರದೆ ಬಿರುಗಾಳಿಯಿಂದ ಅಪರಿಚಿತ ಸ್ಥಳಕ್ಕೆ ಬಂದು ಬಿದ್ದ ಏಕಾಂಗಿಯ ಬೆದರಿದ ಮನಸ್ಸಿನಂತೆ ಮೀರಳ ಮನಸ್ಸು ಕಂಗಾಲಾಗಿತ್ತು.

'ನನಗಿನ್ನೇನಾಗಬೇಕಾಗಿದೆ, ಈ ಸಂಸಾರದಲ್ಲಿ ಭಾಗಿಯಾಗುವುದರ ಹೊರತು ಬೇರೆ ಕರ್ತವ್ಯ ನನಗಿಲ್ಲ' ಎಂದು ಮೀರ ಆಗಾಗ್ಗೆ ಅಸಮಾಧಾನದಿಂದ ತನ್ನ ವಿರುದ್ಧ ನಿಂತಿದ್ದ ಮನಸ್ಸನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಳು.

'ಊಹ್ಞೂ, ನನ್ನ ಸ್ಥಳ ಇದಲ್ಲ, ನಾನು ಸರಿಯಾದ ಜಾಗಕ್ಕೆ ಬಂದಿಲ್ಲ. ನನ್ನ ಕರ್ತವ್ಯ ಬೇರೆ, ನಾನಿರಬೇಕಾದ ಜಾಗ ಬೇರೆ' ಎಂದು ಮನಸ್ಸು ಮೊಂಡು ಮಗುವಿನಂತೆ ಹಠ ಮಾಡುತ್ತಿತ್ತು. ಮೀರಳಿಗೂ, ಮನಸ್ಸಿಗೂ ಪ್ರತಿದಿನವೂ ಯುದ್ಧ ನಡೆಯುತ್ತಿತ್ತು.

ತನ್ನ ಅಂತರಂಗದ ಹೋರಾಟವನ್ನು ಶಾಮುವಿನೊಡನೆ ಹೇಳಿಕೊಳ್ಳುವುದರಲ್ಲಿ ಯಾವ ಉಪಯೋಗವೂ ಇಲ್ಲವೆಂಬುದು ಮೀರಳಿಗೆ ತಿಳಿದಿತ್ತು. ಅವನೊಡನೆ ತನ್ನ ಸಂಕಟ ಹೇಳಿಕೊಂಡಿದ್ದರೆ ಅವನು ನಕ್ಕು, 'ಹುಚ್ಚಿ, ನಿನಗೆ ಇನ್ನೇನು ಬೇಕಾಗಿದೆ? ನಿನಗೆ ಬೇಕಾಗಿರುವುದು ಇದು' ಎಂದು ಪ್ರೇಮದ ಮುತ್ತನ್ನೊತ್ತಿ ಮಾತು ಹಾರಿಸಿಬಿಡುವನೆಂದು ಅವಳಿಗೆ ಚೆನ್ನಾಗಿ ತಿಳಿದಿತ್ತು.

ತನ್ನ ಮನಸ್ಸಿನ ರೀತಿಯನ್ನು ಶಾಮು ಅರ್ಥ ಮಾಡಕೊಳ್ಳದಿದ್ದರೆ ಮೀರಳಿಗೆ ಆಶ್ಚರ್ಯವಾಗುತ್ತಿರಲಿಲ್ಲ. ಹೆಂಗಸಾದವಳಿಗೆ ಇನ್ನೇನು ಬೇಕು? ದೇವತೆ ಎಂದು ತಿಳಿದು ಪೂಜಿಸುವ ಗಂಡ, ಹಣ, ರೂಪ ಯಾವುದರಲ್ಲಿಯೂ ಕೊರತೆ ಇಲ್ಲದ ಮೇಲೂ ಅಶಾಂತಿಯಿಂದ ನರಳುವ ತನ್ನ ಮನಸ್ಸಿನ ರೀತಿ ಅವಳಿಗೇ ಕೆಲವು ಬಾರಿ ಅರ್ಥವಾಗುತ್ತಿರಲಿಲ್ಲ.

ಅತಿ ಚಟುವಟಿಕೆಯ ಮನಸ್ಸನ್ನು ಸೋಮಾರಿಯನ್ನಾಗಿ ಮಾಡಿರುವುದ

ರಿಂದಲೂ, ಬೇರೊಂದು ಹವ್ಯಾಸವಿಲ್ಲದೆ ಇರುವುದರಿಂದಲೂ ಈ ಹೋರಾಟ ಇರಬಹುದೆಂದೂಹಿಸಿ ಮೀರ ಒಂದಲ್ಲ ಒಂದು ಕೆಲಸವನ್ನು ತಾನಾಗಿ ಹಚ್ಚಿಕೊಂಡು ಮಾಡತೊಡಗಿದಳು.

ಪ್ರತಿನಿತ್ಯ ಬೆಳಿಗ್ಗೆ ಹೂ ಕೊಯ್ದು ಕಟ್ಟಿ, ನಿಧಾನವಾಗಿ ಒಂದು ಗಂಟೆ ದೇವರಪೂಜೆ ಮಾಡಿ, ಅಡಿಗೆಮನೆಯಲ್ಲಿ ವೆಂಕಮ್ಮನವರಿಗೆ ತಿಂಡಿ, ಕಾಫಿ ಮಾಡುವುದರಲ್ಲಿ ಸಹಾಯ ಮಾಡುತ್ತಿದ್ದಳು. ಕೆಲವು ಬಾರಿ ತಿಂಡಿಯ ಕೆಲಸವನ್ನು ತಾನೇ ವಹಿಸಿಕೊಂಡು, ಅಡಿಗೆ ಕೆಲಸವನ್ನು ಮಾತ್ರ ಅವರಿಗೆ ಬಿಡುತ್ತಿದ್ದಳು.

ಅವ್ಯಾಹತವಾಗಿ ಪುಸ್ತಕದ ವ್ಯಾಸಂಗ ಸಾಗಿತ್ತು.

ಸಂಜೆ ಶಾಮು ಮನೆ ಬಿಟ್ಟುಹೋದ ಮೇಲೆ ಹೂವಿನ ಗಿಡಗಳಿಗೆ ಅಗತೆ ಮಾಡಿ, ಪಾತಿ ಕಟ್ಟುವುದೋ ಅಥವಾ ಗೋಪಾಲಕೃಷ್ಣನ ದೇವಸ್ಥಾನಕ್ಕೆ ಹಣ್ಣು, ಕಾಯಿ ತೆಗೆದುಕೊಂಡು ಹೋಗುವುದೋ ಮಾಡುತ್ತಿದ್ದಳು. ಯಾವುದೂ ಬೇಕಿಲ್ಲದ ದಿನ ಜೋಯಿಸರ ಮಗಳು ವೆಂಕೂ ಜೊತೆ ಕಾಲ ಕಳೆಯುತ್ತಿದ್ದಳು. ಆದರೆ ಆ ಹತ್ತು ವರ್ಷದ ಹುಡುಗಿಯಿಂದ ಎಷ್ಟು ಮನರಂಜನೆಯಾಗಲು ಸಾಧ್ಯ?

ಒಂದು ದಿನ ಶಾಮು ಆಗ ತಾನೆ ಬಂದಿದ್ದ. ಮೀರ ಏಳೆಂಟು ಇಂಗ್ಲಿಷ್ ಪುಸ್ತಕಗಳ ಪಟ್ಟಿಯೊಂದನ್ನು ತಯಾರಿಸಿ ಶಾಮುವಿನ ಕೈಗೆ ಕೊಟ್ಟು "ಈ ಪುಸ್ತಕಗಳನ್ನು ಮೈಸೂರಿನಿಂದ ತರಿಸಿಕೊಡಿ" ಎಂದಳು.

ಶಾಮು ಅಲಕ್ಷ್ಯದಿಂದ ಆ ಚೀಟಿಯನ್ನು ಅತ್ತ ಕಡೆ ಒತ್ತರಿಸಿ,

"ಎಷ್ಟೊಂದು ಪುಸ್ತಕ! ಮೊನ್ನೆ ತರಿಸಿಕೊಂಡಿದ್ದೆಯಲ್ಲಾ, ಎಲ್ಲಾ ಆಗಲೇ ಓದಾಯಿತೇನು?" ಎಂದ.

ಮೀರಳ ಅಭಿಮಾನಕ್ಕೆ ಬರೆ ಹಾಕಿದಂತಾಯಿತು.

"ಮೊನ್ನೆ ನಾನೆಲ್ಲಿ ಪುಸ್ತಕ ತರಿಸಿಕೊಂಡೆ?"

"ಮಹಾರಾಯ್ತಿ. ಅದೆಷ್ಟು ಪುಸ್ತಕಗಳನ್ನು ಓದುತ್ತೀಯಾ? ಜೀವವಿಲ್ಲದ ಪುಸ್ತಕಗಳಲ್ಲಿ ನಿನಗೇನು ಆಕರ್ಷಣೆಯೋ?"

ಮೀರಳ ಸಹನೆ ಮೀರಿತು.

"ಹಗಲಿರುಳೂ ಗದ್ದೆ, ತೋಟ, ಭೂಮಿ ಅಂತ ಓಡಾಡುತ್ತೀರಲ್ಲಾ, ನಿಮಗೆ ಅದು ಬೇಜಾರಾಗೋದಿಲ್ವೇ?" ಎಂದಳು. ಶಾಮು ಹುಬ್ಬುಗಂಟಿಕ್ಕಿ,

"ನಾವು ಪ್ರತಿ ದಿನ ನೋಡುವ ಸೂರ್ಯನಲ್ಲಿ ಬೇಜಾರು ಬರುವುದೇ? ಭೂಮಿತಾಯಿಯ ಪವಿತ್ರ ಸ್ನೇಹದಲ್ಲಿ ನನ್ನ ಮನಸ್ಸು ಐಕ್ಯವಾಗಿದೆ. ತಾಯಿಯ ಮೇಲೆ ಬೇಜಾರು ಮಾಡಿದ ಕಂದನಿರುವನೇ? ಅವಳ ಸೌಂದರ್ಯ ನಿತ್ಯನೂತನ. ಅವಳ ಸ್ನೇಹ ಅಮರ. ಅವಳ ಸೇವೆಯಲ್ಲಿ ಅಡಗಿರುವ ತೃಪ್ತಿ ನಿಮ್ಮ ಪುಸ್ತಕದಿಂದ

ಬರುವುದೇನು?" ಎಂದ.

"ನಿಮಗೆ ಭೂಮಿಯ ಸಹವಾಸ ಹೇಗೆ ನಿತ್ಯನೂತನವೋ ನನಗೆ ಪುಸ್ತಕ ಗಳಿಂದ ದೊರಕುವ ಶಾಂತಿ ಅಪರಿಮಿತ. ನೀವು ಸಾಹಿತ್ಯದಲ್ಲಿ ಹೇಗೆ ಯಾವ ಸೌಂದರ್ಯವನ್ನೂ ಕಾಣಲಾರಿರೋ ಹಾಗೆ ನಾನು ಭೂದೇವಿಯಲ್ಲಿ ಯಾವ ಚೆಲುವನ್ನೂ ಕಾಣಲಾರೆ. ನನಗೆ ಊಟ, ನಿದ್ದೆಗಿಂತಲೂ ಪುಸ್ತಕದ ಅವಶ್ಯಕತೆ ಹೆಚ್ಚಾಗಿದೆ. ಹೊಟ್ಟೆ ಹಸಿವು ನೀಗಿಸಲು ಅನ್ನ ಬೇಕಾಗುವಂತೆ ಹೃದಯದ ಹಸಿವು ನೀಗಿಸಲು ನನಗೆ ಪುಸ್ತಕ ಬೇಕು."

"ಭೂಮಿತಾಯಿಯ ಸೇವೆ ನಾವು ಮಾಡುತ್ತಿರುವುದರಿಂದಲೇ ನಾನು, ನೀನು ಈ ಪ್ರಪಂಚದ ಜನ ಸುಖವಾಗಿ ಉಂಡು ತಿನ್ನುತ್ತಿರುವುದು. ಪ್ರತಿಯೊಬ್ಬ ರೈತನೂ ನೇಗಿಲನ್ನು ಬಿಸಾಕಿ ಪುಸ್ತಕ ಹಿಡಿದು ಕುಳಿತರೆ ಜಗತ್ತಿನ ಗತಿಯೇನು? ನಿನ್ನ ಸಾಹಿತ್ಯ ದಿಂದೇನು ಪ್ರಯೋಜನ?"

"ಬುದ್ಧಿ ವಿಕಾಸವಾಗುವುದು. ಜ್ಞಾನಾರ್ಜನೆಯಾಗುವುದು."

ಶಾಮು ಕುಚೋದ್ಯದಿಂದ "ನೀನು ಜ್ಞಾನಾರ್ಜನೆ ಮಾಡಿ ಯಾವ ರಾಜ್ಯ ಆಳಬೇಕಾಗಿದೆ? ನನ್ನ ಹೃದಯರಾಜ್ಯ ಆಳಲು ಆ ಜೀವರಹಿತ ಪುಸ್ತಕಗಳು ಬೇಕಾ ಗಿಲ್ಲ. ಮೋಹ ಬೀಸುವ ಕಣ್ಣುಗಳು, ಸೆರೆಹಿಡಿಯುವ ತೋಳು, ನನ್ನೆಲ್ಲಾ ಕಾನೂನು ಗಳನ್ನೂ ಒಂದು ಮುತ್ತಿನಿಂದ ಗಾಳಿಪಾಲು ಮಾಡುವ ನಿನ್ನ ತುಟಿಗಳು ನನ್ನ ರಾಜ್ಯಕ್ಕೆ ಸಾಕು."

ಮೀರಳಿಗೆ ಅವನ ಮಾತಿಗೆ ಏನು ಉತ್ತರ ಕೊಡಬೇಕೋ ತಿಳಿಯಲಿಲ್ಲ. ಒಂದು ರೀತಿಯಿಂದ ಶಾಮು ಹೇಳಿದುದು ಸರಿ ಎನಿಸಿತು. ತಾನು ಪುಸ್ತಕ ಓದಿ ಯಾವ ಪರೀಕ್ಷೆಗೆ ಕಟ್ಟಬೇಕಾಗಿದೆ? ಯಾವ ರಾಜ್ಯದ ಸೂತ್ರ ಹಿಡಿಯಬೇಕಾಗಿದೆ? ಎಲ್ಲಾ ವ್ಯರ್ಥವೆನಿಸಿತು. ಒಂದು ಕ್ಷಣ ಅವಳ ಮುಖದ ಮೇಲೆ ಸೋಲಿನ ವ್ಯಥೆ ಮೂಡಿತು.

ಶಾಮು ಅಕ್ಕರೆಯಿಂದ ಅವಳ ಮುಖದ ಬದಲಾವಣೆಯನ್ನೇ ನೋಡು ತ್ತಿದ್ದ.

"ನಿಮಗೆ ದುಡ್ಡು ದಂಡವಾಗುತ್ತದೆ ಎಂತ ಇದ್ದರೆ ಪುಸ್ತಕ ಬೇಡ" ಎಂದು ಮೀರ ಒರಟಾಗಿ ನುಡಿದು ಸರಕ್ಕನೆ ಹಿಂದಿರುಗಿದಳು. ಆದರೆ ಶಾಮು ಅವಳಿಗಿಂತ ಮುಂಜಾಗ್ರತೆ ವಹಿಸಿದ. ತನ್ನ ಒರಟು ಹಿಡಿಯಲ್ಲಿ ಅವಳ ಕೈ ಹಿಡಿದೆಳೆದು,

"ನನ್ನ ಹತ್ತಿರದಿಂದ ಯಾರೂ ಕೋಪಿಸಿಕೊಂಡು ಹೋಗಬಾರದು" ಎಂದ.

"ನಾನೇನು ಈಗ ಕೋಪ ಮಾಡಿಕೊಂಡಿಲ್ಲ."

"ಕನ್ನಡಿ ತಂದು ಮುಖಕ್ಕೆ ಹಿಡಿಯಲೇ?"

"ಏನೂ ಬೇಕಾಗಿಲ್ಲ. ನನ್ನ ಬಿಡಿ. ಇಲ್ಲದಿದ್ದರೆ ಕೂಗಿಬಿಡುತ್ತೇನೆ. ಬಿಡಿ." ಎನ್ನುತ್ತ ಮೀರ ಕೊಸರಾಡಿದಳು. ಆದರೆ ಶಾಮು ಬಿಡಲಿಲ್ಲ.

"ನನ್ನೊಡನೆ ಒಪ್ಪಂದ ಮಾಡಿಕೊಂಡ ಹೊರತು ಬಿಡುವುದಿಲ್ಲ."

ಮೀರ ಒಂದು ಗಳಿಗೆ ಸುಮ್ಮನಿದ್ದು "ನನಗೇನೂ ಕೋಪ ಇಲ್ಲ. ಒಪ್ಪಂದವಾಗಿದೆ" ಎಂದಳು.

"ಒಪ್ಪಂದಕ್ಕೆ ಸಹಿ ಹಾಕಬೇಡವೇ? ಪತ್ರಕ್ಕೆ ನಿನ್ನ ಮುದ್ರೆ ಬೀಳಬೇಕು."

"ಥೂ ಬಿಡ್ರಿ, ನನಗೆ ನಿಮ್ಮ ಮಾತೇ ಅರ್ಥವಾಗುವುದಿಲ್ಲ."

"ಹೋಗಲಿ ನಾನೇ ಅರ್ಥ ಮಾಡಿಸುತ್ತೇನೆ" ಎಂದ ಶಾಮು.

ಅವನು ಬಿಟ್ಟೊಡನೆ ಕೋಪವಿನ್ನೂ ಅಳಿಯದ ಮೀರ ತನ್ನ ಅಂಗೈಯಿಂದ ತುಟಿಯನ್ನೊಮ್ಮೆ ಬಲವಾಗಿ ಒರೆಸಿಕೊಂಡು ಒಳಗೆ ಹೋದಳು. ಶಾಮು ಅದನ್ನು ನೋಡಿ ನಸುನಕ್ಕ.

* * *

ಪೂರ್ಣಿಮೆಯ ದಿನ ರಾತ್ರಿ ಚಂದ್ರ ಆಕಾಶಲ್ಲಿ ಈಜುತ್ತಿದ್ದ. ಮೀರಾ ಹಾಸಿಗೆಯ ಮೇಲೆ ಮುಸುಕು ಬೀರಿ ಮಲಗಿದ್ದಳು. ಶಾಮು ಕಾಂಪೌಂಡಿನಲ್ಲಿ ಸಂಪಿಗೆಮರದ ನೆರಳಿನಲ್ಲಿ ಕುಳಿತಿದ್ದ. ಈ ಸೌಂದರ್ಯವನ್ನು ಆರಾಧಿಸದೇ ಮೀರ ತನ್ನ ಕಣ್ಣುಗಳನ್ನು ವ್ಯರ್ಥಗೊಳಿಸುತ್ತಿದ್ದಾಳೆಂದು ತಿಳಿದು ಶಾಮು ರೂಮಿಗೆ ಬಂದ.

ಮೀರ ನಿದ್ದೆ ನಟಿಸಿದಳು. ಶಾಮು ಬಲವಂತದಿಂದ ಮುಸುಕು ಕಿತ್ತೆಸೆದು "ಏಳೇ ಬಿನ್ನಾಣೀ" ಎಂದ. ಸೆಕೆಯಿಂದ ಮೀರಳ ಮುಖವೆಲ್ಲಾ ಬೆವತುಹೋಗಿತ್ತು.

"ಬೆಳದಿಂಗಳು ನೋಡಲು ಬಾ ಮಗು."

"ನಾನು ಬರುವುದಿಲ್ಲ."

"ಹೇಗಿದೆ ಅಂತ ವರ್ಣಿಸುವುದಕ್ಕೆ ಸಾಧ್ಯವಿಲ್ಲ."

"ಬೇಡಿ, ವರ್ಣಿಸಬೇಡಿ."

"ನಿನಗೆ ಕಣ್ಣಿದ್ದೂ ವ್ಯರ್ಥ."

"ಪರವಾಗಿಲ್ಲ. ನೀವು ಸಾರ್ಥಕಪಡಿಸಿಕೊಳ್ಳಿ."

"ನಾನೊಬ್ಬನೇ ನೋಡಿದರೆ ನನ್ನ ಒಂದು ಕಣ್ಣು ಸಾರ್ಥಕವಾದಂತಾಯಿತು. ನೀನು ನನ್ನ ಅರ್ಧಾಂಗಿಯಲ್ಲವೇ?"

"ನಾನು ಬರಲ್ಲ ಅಂತ ಎಷ್ಟು ಸಲ ಹೇಳಲಿ?"

"ಬರದಿದ್ದರೆ ಅನಾಮತ್ತು ಎತ್ತಿಕೊಂಡು ಹೋಗಿ ಹೊರಗೆ ಕೂರಿಸಿಬಿಡುತ್ತೇನೆ" ಎಂದು ಶಾಮು ಹೆದರಿಸಿದ. ಅವನ ಮಾತಿನಲ್ಲಿ ನಿಶ್ಚಯವನ್ನು ತಿಳಿದು ಮೀರ ಎದ್ದು ಕುಳಿತಳು.

"ಈ ಮನೇಲಿ ಒಂದು ಗಳಿಗೆ ಹಾಯಾಗಿ ಮಲಗಲು ಸಹ ಸಾಧ್ಯವಿಲ್ಲ" ಎಂದು ಗೊಣಗಿದಳು.

ಶಾಮು ದಿಗ್ವಿಜಯ ಮಾಡಿದವನಂತೆ ಮೀರಳೊಡನೆ ಹೊರಗೆ ಬಂದ. ಸಂಪಿಗೆ ಗಿಡದ ನೆರಳಿನಲ್ಲಿ ಹಾಸಿದ್ದ ಕಲ್ಲುಚಪ್ಪಡಿಯ ಒಂದು ತುದಿಯಲ್ಲಿ ಮೀರ ಕುಳಿತಳು.

"ಬಹಳ ದೂರವಾಯಿತು" ಶಾಮು ಹೇಳಿದ.

"ಚಂದ್ರನನ್ನು ನೋಡಬೇಕಾದರೆ ಹತ್ತಿರವೇ ಕುಳಿತುಕೊಳ್ಳಬೇಕೆಂಬ ನಿಯಮವೇನೂ ಇಲ್ಲ."

"ಹತ್ತಿರ ಕುಳಿತುಕೊಳ್ಳದಿದ್ದರೆ ಚಂದ್ರನ ಸೌಂದರ್ಯ ಕಡಿಮೆಯಾಗುತ್ತದೆ" ಎನ್ನುತ್ತ ಶಾಮು ಅವಳ ಹತ್ತಿರ ಸರಿದು ನಡುವಿನ ಸುತ್ತ ತನ್ನ ತೋಳು ಬಳಸಿದ.

ಮೀರ ಅವನನ್ನು ವಿರೋಧಿಸುವ ಸ್ಥಿತಿಯಲ್ಲಿರಲಿಲ್ಲ. ಪ್ರತಿದಿನವೂ, ಪ್ರತಿ ಗಳಿಗೆಯೂ ಶಾಮು ಹೇಳಿದಂತೆ ನಡೆಯಬೇಕಾಗಿತ್ತು. ಅವನು ಮಿತಿಮೀರಿ ತನ್ನನ್ನು ಪ್ರೀತಿಸುತ್ತಿದ್ದುದೆ ಮೀರಳಿಗೆ ನುಂಗಲಾರದ ತುತ್ತಾಗಿತ್ತು.

"ಈಗ ಚಂದ್ರನ ಸೌಂದರ್ಯ ಹೆಚ್ಚಾಯಿತು."

ಮೀರ ನೆಟ್ಟನೋಟದಿಂದ ಚಂದ್ರನನ್ನೇ ನೋಡುತ್ತಿದ್ದಳು. ಮುಗಿಲಿನಲ್ಲಿ ಓಡುತ್ತಿದ್ದ ಚಂದ್ರ ಪ್ರಪಂಚವನ್ನೇ ಮೈಮರೆಸಿದ್ದ. ಎಂತಹ ಅರಸಿಕನನ್ನೂ ಕವಿಯನ್ನಾಗಿ ಮಾಡುವ ಶಕ್ತಿ ಬೆಳದಿಂಗಳಿಗಿತ್ತು. ಸಂಪಿಗೆ ಹೂವುಗಳು ಅರಳಿ ಸುವಾಸನೆ ಹರಡಿದ್ದವು.

"ಮೀರಾ ನಿನ್ನ ಕೋಪ ಇನ್ನೂ ಆರಲಿಲ್ಲವೇ?"

ಮೀರ ಮೌನವಾಗಿದ್ದಳು. ಶಾಮು ಮೆಲ್ಲನೆ ಪಕ್ಕದಲ್ಲಿಟ್ಟುಕೊಂಡಿದ್ದ ಮೀರ ಬಯಸಿದ್ದ ಐದು ಪುಸ್ತಕಗಳನ್ನು ತೆಗೆದು ಅವಳ ತೊಡೆಯ ಮೇಲಿಟ್ಟ. ಪುಸ್ತಕಗಳನ್ನು ನೋಡಿದ ಕೂಡಲೇ ಮೀರ ಅದನ್ನು ದೂರ ತಳ್ಳಿ "ನನಗೆ ಬೇಕಾಗಿಲ್ಲ" ಎಂದಳು.

"ಮೀರಾ, ದುಡ್ಡು ಖರ್ಚಾಗುವ ಕಾರಣದಿಂದ ನಾನು ನಿನಗೆ ಹಾಗೆ ಹೇಳಲಿಲ್ಲ. ನಿನಗೆ ಸಂತೋಷ ಕೊಡಲಾಗದ ಮೇಲೆ ನನ್ನ ಬಳಿ ಹಣವಿದ್ದೂ ಪ್ರಯೋಜನವೇನು? ನನ್ನ ಸರ್ವಸ್ವವೂ ನಿನ್ನದು. ನಿನಗಾಗಿ ನಾನು ದುಡಿಯಬೇಕು. ನನ್ನ ಮೇಲೆ ಕೋಪಿಸಿಕೊಳ್ಳಬೇಡ."

ಶಾಮುವಿನ ದನಿಯಲ್ಲಡಗಿದ್ದ ದೈನ್ಯತೆಗೆ ಮೀರಳ ಕೋಪ ಕರಗಿ ಹೋಯಿತು. ದೂರ ಸರಿದಿದ್ದ ಪುಸ್ತಕಗಳನ್ನು ತೆಗೆದು ತೊಡೆಯ ಮೇಲಿಟ್ಟುಕೊಂಡಳು. ಶಾಮು ಪುಸ್ತಕಗಳ ಕಡೆಯೇ ನೋಡುತ್ತ,

"ಅವುಗಳಿಗಿಂತಲೂ ನಾನು ಕಡೆಯಾದೆ" ಎಂದ.

ಮೀರ ನಸುನಕ್ಕಳು. ಶಾಮುವಿಗೆ ಬೆಳದಿಂಗಳು ನಕ್ಕಂತಾಯಿತು.

ದಿನದಿನಕ್ಕೆ ಮೀರಳ ಪುಸ್ತಕ ಭಂಡಾರ ವೃದ್ಧಿಯಾಯಿತು. ದೊಡ್ಡ ಹಾಲಿನ ತುಂಬ ಪುಸ್ತಕದ ಬೀರುಗಳು ತುಂಬಿಕೊಂಡವು. ಒಂದು ಬೀರುವಿದ್ದುದು ಈಗ ನಾಲ್ಕಾಯಿತು. ಪ್ರಸಿದ್ಧ ಬರಹಗಾರರ ಜನಪ್ರಿಯ ಪುಸ್ತಕಗಳು ಅವಳ ಬೀರುವಿನಲ್ಲಿ ಆಶ್ರಯ ಪಡೆದಿದ್ದವು. ಪುಸ್ತಕ ಭಂಡಾರದೊಂದಿಗೆ ಮೀರಳ ಕಸೂತಿ ಕೆಲಸಗಳೂ ಹೆಚ್ಚಾದವು. ಮನೆಯ ಕಿಟಕಿ ಬಾಗಿಲುಗಳನ್ನು ಅಂದವಾದ ಬಣ್ಣಬಣ್ಣದ ದಾರ ಗಳಿಂದ ಹಾಕಿದ ತೆರೆಗಳು ಅಲಂಕರಿಸಿದವು. ಇಂಗ್ಲಿಷ್ ಭಾಷೆಯ ವಾರಪತ್ರಿಕೆಗಳನ್ನು ತರಿಸಿಕೊಂಡು ಅದರಲ್ಲಿ ಬರುವ ಮಹಿಳಾ ಭಾಗವನ್ನೋದಿ ಮನೆಯ ಅಂದಚೆಂದ ವನ್ನು ಹೆಚ್ಚಿಸಿದಳು. ಮನೆಯನ್ನು ಪ್ರವೇಶಿಸುತ್ತಲೇ ಇದ್ದ ಬಲಭಾಗದ ಕೊಠಡಿ ಯನ್ನು ಮೀರ ಡ್ರಾಯಿಂಗ್ ರೂಮಾಗಿ ಮಾರ್ಪಡಿಸಿದ್ದಳು. ಸೊಗಸಾದ ಒಂದು ಸೋಫಾ ಸೆಟ್ಟನ್ನು ತರಿಸಿ ರೂಮಿನಲ್ಲಿ ಓರಣವಾಗಿ ಜೋಡಿಸಿದ್ದಳು. ರೂಮಿನ ಮಧ್ಯೆ ಕರೀಮರದ ಮೂರು ಕಾಲಿನ ದುಂಡು ಮೇಜು ಹೂವಿನ ಗೊಂಚಲುಗಳಿಂದ ತುಂಬಿದ್ದ ಪಾತ್ರೆಯನ್ನು ಹೊತ್ತು ನಿಂತಿತ್ತು. ದುಂಡುಮೇಜಿನ ಸುತ್ತ ಮೆತ್ತೆ ಹಾಕಿದ ಕುರ್ಚಿಗಳು ಇರಿಸಲ್ಪಟ್ಟಿದ್ದವು. ಸೋಫಾ, ಕುರ್ಚಿಗಳ ಮೇಲೆ ಕುಳಿತು ಒರಗಿದರೆ ಜಿಡ್ಡಾಗಬಹುದೆಂದು ಬಣ್ಣಬಣ್ಣದ ಚಿತ್ರಗಳಿಂದ ಅಲಂಕರಿಸಿದ ನಾಲ್ಕು ವಸ್ತ್ರ ಗಳನ್ನು ಅವುಗಳ ಮೇಲೆ ಹಾಕಿದ್ದಳು.

ಮನೆ ಮೀರಳ ಕೈವಾಡದಿಂದ ಅಂದವಾಗಿತ್ತು.

ಮೀರಾ ಕಾಂಪೌಂಡಿನಲ್ಲೆಲ್ಲಾ ಸುತ್ತಾಡಿ ಹೊಸ ಹೂವುಗಳನ್ನು ಕಿತ್ತು ತಂದು ಹೂದಾನಿಯಲ್ಲಿ ಜೋಡಿಸುತ್ತಿದ್ದಳು.

ಪೋಸ್ಟಿನವನ ಧ್ವನಿ ಕೇಳಿ ಮೀರ ಆತುರದಿಂದ ಹೊರಗೆ ಬಂದಳು. ದೊಡ್ಡಪ್ಪ ಮೀರಳ ಹೆಸರಿಗೆ ಕಾಗದ ಬರೆದಿದ್ದರು. ಆತುರದಿಂದ ಕಾಗದವನ್ನು ಒಡೆದು ಓದತೊಡಗಿದಳು. ಕಾಗದ ಓದಿದ ಕೂಡಲೇ ಸಂತೋಷ ದುಃಖ ಎರಡೂ ಏಕಕಾಲದಲ್ಲಿ ಉದಿಸಿದವು. ಇಂಟರ್‌ಮೀಡಿಯಟ್ ಪರೀಕ್ಷೆಯಲ್ಲಿ ಮೊದಲನೇ ತರಗತಿಯಲ್ಲಿ ಪಾಸಾಗಿರುವುದಾಗಿ ತಮ್ಮ ಅಭಿನಂದನೆಗಳೊಡನೆ ದೊಡ್ಡಪ್ಪ ಕಾಗದ ಬರೆದಿದ್ದರು. ತನಗಾದ ಜಯವನ್ನು ನೆನೆದು ಸಂತೋಷವಾದರೂ ಅದರ ಹಿಂದೆಯೇ ದುಃಖ ಉಕ್ಕಿಬಂದು ಸಣ್ಣ ಅಲೆಯನ್ನು ಹಿಂದೆ ಬಂದ ದೊಡ್ಡ ಅಲೆ ನುಂಗುವಂತೆ ಸಂತೋಷವನ್ನು ನುಂಗಿತು. ಮೀರಳ ಮನಸ್ಸು ಖಿನ್ನವಾಯಿತು. ಜೋಡಿಸುತ್ತಿದ್ದ ಹೂಗಳನ್ನಲ್ಲಿಯೇ ಬಿಟ್ಟು ಸೋಫಾದ ಮೇಲೆ ಕುಸಿದುಬಿದ್ದಳು.

ಕಾಲೇಜಿನಲ್ಲಿ ತಾನು ಕಳೆದ ದಿನಗಳು ಅವಳ ಮನೋಮಂಟಪದ ಮುಂದೆ

ಮೂಡಿದವು. ನಿಮಿಷವೂ ವಿರಾಮವಿಲ್ಲದೆ ದುಡಿಯುವ ಜೇನಿನಂತೆ ತಾನು ಕಳೆದ ಆ ದಿನಗಳನ್ನು ಈ ನೀರಸ ಜೀವನಕ್ಕೆ ಹೋಲಿಸಿ ನೋಡಿದಳು. ಕಾಲೇಜು, ತನ್ನ ಗೆಳೆಯರು, ಚರ್ಚಾಸ್ಪರ್ಧೆ, ಆಟಗಳು, ನಾಟಕ ಪ್ರತಿಯೊಂದೂ ಅವಳ ಮುಂದೆ ಒಂದೊಂದಾಗಿ ಬಂದು ನಿಂತು ಮೀರಳನ್ನು ಅಣಕಿಸತೊಡಗಿದವು.

ಐದು ವರ್ಷದ ಹುಡುಗಿಯಾಗಿದ್ದಾಗ ತಾನು ಕಾನ್ವೆಂಟಿಗೆ ಸೇರಿದಾಗಿನಿಂದಲೂ ಹಿಡಿದು ಹದಿನೇಳು ವರ್ಷಗಳಾಗುವವರೆಗೆ (ಮದುವೆಯಾಗುವವರೆಗೆ) ಮೀರ ಒಂದು ನಿಮಿಷವೂ ವಿರಾಮವಿಲ್ಲದಂತೆ ಕಳೆದಿದ್ದಳು. ಪ್ರತಿಯೊಂದು ಆಟದಲ್ಲೂ ಭಾಗವಹಿಸುವುದು, ಬಹುಮಾನ ಗಳಿಸುವುದು ಮೀರಳಿಗೆ ಸಾಮಾನ್ಯವಾಗಿ ಹೋಗಿತ್ತು. ಚಿಕ್ಕ ಹುಡುಗಿಯಾಗಿದ್ದಾಗಿನಿಂದಲೂ ನಾಟಕಗಳಲ್ಲಿ ಪಾತ್ರ ವಹಿಸುವುದೆಂದರೆ ಮೀರಳಿಗೆ ಸಿಹಿಜೇನಿಗಿಂತಲೂ ಹೆಚ್ಚು ಪ್ರೀತಿ. ನಾಟಕದಲ್ಲಿ ಪ್ರಮುಖ ಪಾತ್ರ ವಹಿಸಿ, ಮುಖಕ್ಕೆ ಬಣ್ಣ ಬಳಿದು, ತುಟಿಗೆ ರಂಗು ಹಚ್ಚಿ ದೈವದತ್ತವಾಗಿ ಬಂದಿದ್ದ ಸೌಂದರ್ಯವನ್ನು ಕೃತಕ ಸಲಕರಣೆಗಳಿಂದ ಹೆಚ್ಚಿಸಿಕೊಂಡು ಗೆಳತಿಯರ ಎದುರಿನಲ್ಲಿ ವೈಯ್ಯಾರ ಮಾಡುತ್ತ ನಿಂತು,

"ಹೇಗಿದೇನೆಯೇ?" ಎಂದು ಹುಬ್ಬು ಹಾರಿಸಿ ಕೇಳಿ, ಅವರಿಂದ "ಚಾರ್ಮಿಂಗ್, ಕಿಲ್ಲಿಂಗ್" ಎಂದು ಹೊಗಳಿಸಿಕೊಳ್ಳುತ್ತ ತಾನು ಗ್ರೀನ್‌ರೂಮಿನಲ್ಲಿ ಓಡಾಡುತ್ತಿದ್ದ ದೃಶ್ಯವನ್ನು ನೆನೆದಳು.

ಜೂನಿಯರ್ ಇಂಟರಿನಲ್ಲಿ ಓದುತ್ತಿದ್ದಾಗ ವರ್ಷದ ಕೊನೆಯಲ್ಲಿ 'ನೂರ್ ಜಹಾನ್' ನಾಟಕವನ್ನು ಅಭಿನಯಿಸುವಾಗ ಅಂದಿನ ಅಧ್ಯಕ್ಷತೆ ವಹಿಸಿದ್ದ ಪ್ರಮುಖ ವ್ಯಕ್ತಿಯೊಬ್ಬರು ಮೀರಳ ಅಭಿನಯವನ್ನೂ, ಕಲಾಕೌಶಲ್ಯವನ್ನೂ, ಜಾಣ್ಮೆಯನ್ನೂ ಮನಸಾರೆ ಹೊಗಳಿದ್ದರು. ಮೊಗಲರ ಉಡಿಗೆ ತೊಡಿಗೆಯಲ್ಲಿ ಅತ್ಯಂತ ಚೆಲುವೆಯಾಗಿ ಕಾಣುತ್ತಿದ್ದ ಮೀರ ಅಂದು ನೂರ್‌ಜಹಾನಳ ಪಾತ್ರದಲ್ಲಿ ಪ್ರತಿಯೊಬ್ಬರ ಮನವನ್ನೂ ಸೆಳೆದಿದ್ದಳು. ತನ್ನ ಸ್ವರ್ಗೀಯ ಸೌಂದರ್ಯದಿಂದ ಮೊಗಲ್ ಚಕ್ರವರ್ತಿ ಜಹಾಂಗೀರನನ್ನು ತುದಿಬೆರಳಿನಿಂದ ಕುಣಿಸುತ್ತಿದ್ದ ಚಕ್ರವರ್ತಿನಿಯ ಪಾತ್ರಕ್ಕೆ ಮೀರ ಅಂದು ಜೀವ ತುಂಬಿದ್ದಳು. ಪ್ರೇಕ್ಷಕರೆಲ್ಲರ ಸಹಾನುಭೂತಿ, ಮೆಚ್ಚುಗೆಯನ್ನು ಪಡೆದ ಮೀರ ಅಧ್ಯಕ್ಷರ ಬಳಿ ಬಹುಮಾನ ಪಡೆಯಲು ಹೋದಾಗ ಅಧ್ಯಕ್ಷರು ಮೀರಳಿಗೆ,

"ಮಗೂ ಅಭಿನಯದ ಕಲೆ ನಿನಗೆ ಸಾಧಿಸಿದೆ. ನೀನು ಹುಟ್ಟು ಕಲಾವಿದೆ. ದೇವರು ಕೊಟ್ಟಿರುವ ಈ ವರವನ್ನು ವ್ಯರ್ಥ ಮಾಡಬೇಡ. ಅದನ್ನು ಕೊನೆಯವರೆವಿಗೂ ಉಳಿಸಿಕೊ" ಎಂದು ಹರಸಿ ಬಹುಮಾನ ಕೊಟ್ಟಿದ್ದರು.

ಅಖಿಲ ಇಂಟರ್ ಕಾಲೇಜ್ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿ ಸಾವಿರಾರು

ವಿದ್ಯಾರ್ಥಿ ವಿದ್ಯಾರ್ಥಿನಿಯರು ಸೇರಿದ ಸಭೆಯಲ್ಲಿ ಧೈರ್ಯದಿಂದ ತಲೆಯೆತ್ತಿ, ಗಂಭೀರವಾಗಿ ಚರ್ಚಿಸಿ ಬಹುಮಾನ ಗಳಿಸಿದಾಗ ಅಧ್ಯಕ್ಷರು ಮೀರಳ ವಾದವೈಖರಿಯನ್ನು ಹೊಗಳಿ,

"ನೀನು 'ಲಾ' ತೆಗೆದುಕೊಂಡರೆ ಹೆಚ್ಚಿನ ಯಶಸ್ಸು ಸಂಪಾದಿಸಬಲ್ಲೆ" ಎಂದು ಸೂಚಿಸಿದ್ದರು.

ಆದರೆ ಮೀರಳಿಗೆ ನಟಿಯಾಗುವುದಾಗಲೀ, ಲಾಯರಾಗುವುದಾಗಲೀ ಬೇಕಿರಲಿಲ್ಲ. ಎಳೆಯ ಮನಸ್ಸಿನಲ್ಲಿ ಬಲವಾಗಿ ನಾಟಿದ ಬೇರೊಂದು ಆಸೆ, ಮತ್ತಾವ ಆಸೆಗಳಿಗೂ ಎಡೆಗೊಡದೆ ಮನಸ್ಸನ್ನೆಲ್ಲಾ ತಾನೇ ತಾನಾಗಿ ಆಕ್ರಮಿಸಿತ್ತು. ಮದುವೆ ಗೊತ್ತಾದಾಗಲೇ ಮೀರಳ ಆಸೆಯ ದೀಪ ನಂದಿಹೋಗಿತ್ತು. ಹಳ್ಳಿಯನ್ನು ಸೇರಿದಾಗಿನಿಂದ ತುಂಬಾ ಚುರುಕಾಗಿದ್ದ ಬುದ್ಧಿಗೆ ಮಂಕು ಕವಿದಂತಾಗಿ ಜೀವನವೇ ಜುಗುಪ್ಸೆಯಾಗಿತ್ತು. ಯುದ್ಧವಿಲ್ಲದೆ ರಣಯೋಧನ ಕತ್ತಿಯು ರಕ್ತಕ್ಕಾಗಿ ಹಾತೊರೆಯುವಂತಿತ್ತು ಅವಳ ಸ್ಥಿತಿ.

ಪರೀಕ್ಷೆಯ ಫಲಿತಾಂಶ ತಿಳಿದೊಡನೆ, ಅವಳಾಸೆ ಮರುಕಳಿಸಲು ಮೀರಳಿಗೆ ದುಃಖ ಉಕ್ಕಿಬಂದಿತು. ದೊಡ್ಡಪ್ಪನ ಕಾಗದ ಕೈಲಿ ಹಿಡಿದಿದ್ದಂತೆಯೇ ಬಿಕ್ಕಿ ಬಿಕ್ಕಿ ಅತ್ತುಬಿಟ್ಟಳು. ದೊಡ್ಡಪ್ಪ, ಶಾಮು ಎಲ್ಲರೂ ಅವಳಿಗೆ ಪರಕೀಯರಂತೆ ತೋರಿದರು. ತನ್ನ ಇರುವಿಕೆಯೇ ವ್ಯರ್ಥವೆನಿಸಿತು.

ಬೋರ, ಅಮ್ಮಾವರು ಕಾಗದ ಬಂದೊಡನೆ ಅದನ್ನೋದಿ ಸೋಫಾ ಮೇಲೆ ಅಳುತ್ತ ಮಲಗಿದುದನ್ನು ಕಂಡು ಗಾಬರಿಯಾಗಿ ಅಡಿಗೆ ಮಾಡುತ್ತಿದ್ದ ವೆಂಕಮ್ಮನವರ ಬಳಿ ಓಡಿಬಂದು,

"ಅವ್ವಾ.... ವೆಂಕವ್ವಾ.... ಅಮ್ಮಾವರು" ಎಂದು ಹೇಳಿ ನಿಲ್ಲಿಸಿದ. ಅಡಿಗೆ ಮಾಡುತ್ತಿದ್ದ ವೆಂಕಮ್ಮನವರು ಮಾಡುತ್ತಿದ್ದ ಕೆಲಸವನ್ನು ಬಿಟ್ಟು ಈಚೆಗೆ ಓಡಿ ಬಂದು 'ಏನಾಯಿತೋ?' ಎಂದರು.

"ಅಮ್ಮಾವರು ಕಾಗದ ಓದ್ಕೊಂಡು ಅಳ್ತಾ ಮನಗವ್ರೆ. ಊರಿನಿಂದ ಏನು ಸುದ್ದಿ ಬಂದಾದೋ. ಗಾಚಾರ."

"ಓಡಿಹೋಗಿ ಶಾಮಣ್ಣನನ್ನು ಕರೆದುಕೊಂಡುಬಾ. ಇವತ್ತು ಕಬ್ಬಿನ ಗದ್ದೆ ತಾವು ಹೋಗಿದಾರೆ. ಓಡಿಹೋಗು."

ಬೋರ ಕಬ್ಬಿನ ಗದ್ದೆಯ ಕಡೆ ಧಾವಿಸಿದ. ವೆಂಕಮ್ಮನವರು ಡ್ರಾಯಿಂಗ್ ರೂಮಿನ ಬಾಗಿಲಿನಲ್ಲಿ ನಿಂತು "ತಾಯೀ ಯಾರಿಂದ ಕಾಗದ ಬಂದಿದೆಯಮ್ಮ" ಎಂದರು.

ಮೀರ ಸೋಫಾ ಮೇಲಿನಿಂದ ಮುಖವೆತ್ತಿ "ದೊಡ್ಡಪ್ಪನ ಕಾಗದ ಬಂದಿದೆ"

ಎಂದಳು.

ಅವಳ ಮುಖವೆಲ್ಲ ಕಣ್ಣೀರಿನಿಂದ ತೋಯ್ದುಹೋಗಿತ್ತು. ಹಣೆಯ ಕುಂಕುಮ ನೀರಾಗಿ ಹರಿಯತೊಡಗಿತ್ತು. ತಲೆಯ ಕೂದಲು ಒದ್ದೆಗೆನ್ನೆಗೆ ಅಂಟಿಕೊಂಡಿತ್ತು.

"ಯಾಕಮ್ಮಾ, ಅಳ್ತಾ ಇದೀಯ? ಏನು ಬರೆದಿದಾರೆ? ಎಲ್ಲರೂ ಆರೋಗ್ಯ ತಾನೆ!"

"ಹ್ಞೂ."

"ಶುಕ್ರವಾರ ಮುತ್ತೈದೆ ಕಣ್ಣಿನಲ್ಲಿ ನೀರು ಹಾಕಬಾರದು. ಏಳು. ಮುಖ ತೊಳೆದುಕೊಂಡು ಸರಿಯಾಗಿ ಹಣೆಗಿಟ್ಟುಕೋ. ನಾನು ಏನು ಸುದ್ದಿಯೋ ಅಂತ ಶಾಮಣ್ಣನಿಗೆ ಹೇಳಿಕಳುಹಿಸಿದೆ."

ಮೀರಾ ಜಗ್ಗನೆ ಎದ್ದುಕುಳಿತು "ಆಂ, ಹೇಳಿಕಳಿಸಿಬಿಟ್ಟಿರಾ" ಎಂದಳು.

"ಹ್ಞೂ, ಬೋರ ಆಗಲೇ ಹೋದ."

"ಛೇ, ಇನ್ನು ಅವರು ಸುಮ್ಮನೆ ಗಾಬರಿಯಾಗಿ ಬರುತ್ತಾರೆ."

"ನನಗೇನು ಗೊತ್ತಮ್ಮಾ. ಅಮ್ಮಾವರು ಕಾಗದ ಓದಿ ಅಳ್ತಿದಾರೆ ಎಂದು ಬೋರ ಹೇಳಿದ. ಏನು ಸುದ್ದಿಯೋ ಅಂತ ಶಾಮಣ್ಣನ್ನ ಕರೆದುಕೊಂಡು ಬಾ ಎಂದು ಹೇಳಿಕಳುಹಿಸಿದೆ."

ಮೀರಾ ಎದ್ದು ಮುಖ ತೊಳೆದುಕೊಂಡು ಹಣೆಗೆ ಕುಂಕುಮ ಇಟ್ಟುಕೊಳ್ಳುತ್ತಿದ್ದಾಗ ಶಾಮು ಆತುರದಿಂದ ಒಳಗೆ ನುಗ್ಗಿ ಬಂದು,

"ಏನು ಕಾಗದ ಮೀರಾ.... ಮೀರಾ" ಎಂದು ಕೂಗಿದ. ಮೀರ ವಿಷಾದದಿಂದ ನಕ್ಕು "ಏನಿಲ್ಲ" ಎಂದಳು.

"ಅಮ್ಮಾವರು ಕಾಗದ ಓದಿ ಅಳ್ತಿದಾರೆ ಅಂತ ಬೋರ ಬಂದು ಹೇಳಿದ. ಮಾಡುತ್ತಿದ್ದ ಕೆಲಸಾನೂ ಬಿಟ್ಟೋಡಿ ಬಂದೆ."

ಶಾಮು ಸ್ವಲ್ಪ ಅಸಮಾಧಾನ, ಕೋಪ ಬೆರೆತ ದನಿಯಲ್ಲಿ ಹೇಳಿದ.

ಮೀರಾ ಮಾತನಾಡದೆ ತಲೆತಗ್ಗಿಸಿ ನಿಂತಳು.

"ಎಲ್ಲಿ ಕಾಗದ?" ಎನ್ನುತ್ತ ಶಾಮು ಸುತ್ತಲೂ ನೋಡಿದ. ನೆಲದ ಮೇಲೆ ಕಣ್ಣೀರಿನಿಂದ ಒದ್ದೆಯಾಗಿ ಮುದುರಿಬಿದ್ದಿದ್ದ ಕಾಗದವನ್ನು ಶಾಮು ನೋಡಿದ. ಅವನ ದೃಷ್ಟಿ ಕಾಗದದ ಮೇಲೆ ಬಿದ್ದ ಕೂಡಲೇ ಮೀರ ಅದರ ಹತ್ತಿರ ಬಂದು "ಅದರಲ್ಲೇನಿಲ್ಲ" ಎನ್ನುತ್ತ ಕೈಚಾಚಿ ತೆಗೆದುಕೊಳ್ಳಲು ಯತ್ನಿಸಿದಳು. ಶಾಮು ತನ್ನ ಉಕ್ಕಿನಂತಹ ಕೈಗಳಿಂದ ಅವಳನ್ನೆದು ದೂರ ನಿಲ್ಲಿಸಿ ಕಾಗದವನ್ನು ಕೈಗೆ ತೆಗೆದುಕೊಂಡು ಅದರ ಮೇಲೆ ಆತುರದಿಂದ ಕಣ್ಣುಗಳನ್ನು ಓಡಿಸಿದ. ಕಾಗದ

ಓವಿದಂತೆಲ್ಲಾ ಅವನ ಹುಬ್ಬುಗಳು ಆಶ್ಚರ್ಯದಿಂದ ಸಂಕುಚಿತವಾಗಿ, ಕಣ್ಣುಗಳು ಪ್ರಶ್ನಾರ್ಥಕವಾಗಿ ಅವಳ ಕಡೆ ನೋಡಿದವು. "ಅಳುವಿನ ಅರ್ಥವೇನು?" ಎಂದವನ ಮುಖಭಾವ ಕೇಳಿತು. ಮೀರ ಸುಮ್ಮನೆ ನಿಂತಿದ್ದಳು.

"ಪರೀಕ್ಷೆಯಲ್ಲಿ ಪಾಸಾಗಿದ್ದಕ್ಕೆ ಅಭಿನಂದನೆಗಳು. ಆದರೆ ಅಳುವಂತಹ ಸುದ್ದಿ ಇದರಲ್ಲೇನಿದೆ?"

ಮೀರಾಳ ಮೌನ ಶಾಮುವಿನ ತಾಳ್ಮೆಯನ್ನು ಕೆಣಕಿತು.

"ಅಳುವುದಕ್ಕೆ ಏನಾಯಿತೀಗ?" ಎಂದು ಗಡುಸಾಗಿ ಕೇಳಿದ.

"ಏನೋ ನನ್ನ ಮನಸ್ಸಿಗೆ ಬೇಜಾರಾಯಿತು. ಆದುದರಿಂದ ದುಃಖ ವಾಯಿತು."

ಶಾಮು ಅವಳನ್ನು ಹೆಚ್ಚು ಪ್ರಶ್ನಿಸದೆ ಕಾಗದವನ್ನು ಬಿಸಾಡಿ ಹೊರಟು ಹೋದ.

ಶಾಮು ಹೊರಟು ಹೋದಮೇಲೆ ಮೀರಳಿಗೆ ತನ್ನ ವರ್ತನೆಯ ಬಗ್ಗೆ ನಾಚಿಕೆಯಾಯಿತು. ಮಧ್ಯಾಹ್ನ ಶಾಮು ಮನೆಗೆ ಬರುವ ಹೊತ್ತಿಗೆ 'ಅವರನ್ನು ಹೇಗೆ ಸಮಾಧಾನ ಪಡಿಸಲಿ' ಎಂದು ಯೋಚಿಸಲಾರಂಭಿಸಿದಳು.

ಮಧ್ಯಾಹ್ನ ವೆಂಕಮ್ಮನವರಿಗೆ ಹೇಳಿ ಶಾಮುವಿಗೆ ಪ್ರಿಯವಾದ ಕೊಬ್ಬರಿ ಮಿಠಾಯಿ, ಆಲೂಗೆಡ್ಡೆ ಉಪ್ಪೇರಿಯನ್ನು ಮಾಡಿಸಿದಳು. ಎರಡು ಗಂಟೆಯಾದರೂ ಶಾಮು ಬರಲಿಲ್ಲ. ಮೀರಳಿಗೆ ಹಸಿವೊಂದು ಕಡೆ, ಗಂಡ ಮನೆಗೆ ಬರಲಿಲ್ಲವಲ್ಲಾ ಎಂಬ ಆತಂಕವೊಂದು ಕಡೆ. ತಾನೂ ಊಟ ಮಾಡದೆ ಮಲಗಿಬಿಟ್ಟಳು.

ಎಚ್ಚರವಾದಾಗ ನಾಲ್ಕು ಗಂಟೆಯಾಗಿತ್ತು. ಶಾಮು ಇನ್ನೂ ಮನೆಗೆ ಬಂದಿರ ಲಿಲ್ಲ. ಮೀರಳಿಗೆ ಗಾಬರಿಯಾಯಿತು. ಮುಂಬಾಗಿಲಿನಲ್ಲಿ ನಿಂತು ಅವನ ದಾರಿ ನೋಡತೊಡಗಿದಳು. ಶಾಮು ನಿಧಾನವಾಗಿ ಕಾಲೆಳೆದುಕೊಂಡು ಬರುತ್ತಿರುವುದು ಕಾಣಿಸಿತು. ಶಾಮು ಮೀರಳ ಕಡೆ ನೋಡದೆ ಒಳಗೆ ಹೋದ. ಮೀರ ತಾನಾಗಿ ಮಾತನಾಡಿಸಿದಳು:

"ಮಧ್ಯಾಹ್ನ ಊಟಕ್ಕೇಕೆ ಬರಲಿಲ್ಲ?"

"ಏನೋ ಮನಸ್ಸಿಗೆ ಬೇಜಾರಾಯಿತು. ಅದರಿಂದ ಬರಲಿಲ್ಲ."

"ತುಂಬಾ ಹಸಿವಾಗಿರಬಹುದು. ಈಗಲಾದರೂ ಏಳಿ."

"ನಿನ್ನ ಊಟವಾಯಿತೇ?"

"ಇಲ್ಲ."

ಬೆಳಗಿನ ಅವಳ ಅರ್ಥವಿಲ್ಲದ ಅಳುವಿಗಾಗಿ ಕೋಪಿಸಿಕೊಂಡಿದ್ದ ಶಾಮು ಮೀರ ಬೆಳಗಿನಿಂದ ಉಪವಾಸವಿರುವುದನ್ನು ತಿಳಿದು ಕರಗಿಹೋದ.

"ನೀನು ಊಟ ಮಾಡಿಬಿಡಬೇಕಾಗಿತ್ತು."

"ಈಗೇನೂ ಪ್ರಮಾದವಾಗಲಿಲ್ಲ. ನನಗೆ ಬಹಳ ಹಸಿವಾಗುತ್ತಿದೆ. ಬೇಗ ಬನ್ನಿ" ಎನ್ನುತ್ತ ಮೀರ ಒಳಗೆ ಹೋದಳು. ಶಾಮು ಆಶ್ಚರ್ಯದಿಂದ ಅವಳು ಹೋದ ಕಡೆಯೇ ನೋಡುತ್ತ ನಿಂತ. 'ಈ ಹೆಂಗಸರ ಮನಸ್ಸೇ ಅರ್ಥವಾಗುವುದಿಲ್ಲ' ಎಂಬ ಭಾವನೆ ಅವನ ಮುಖದಲ್ಲಿ ಸ್ಪಷ್ಟವಾಗಿ ಮೂಡಿತ್ತು.

ಊಟ, ತಿಂಡಿ ಎಲ್ಲವನ್ನೂ ಒಂದೇ ಬಾರಿಗೆ ಮುಗಿಸಿ ಎದ್ದು ಬಂದಾಗ ಸಂಜೆ ಐದು ಗಂಟೆಯಾಗಿತ್ತು. ಶಾಮು ವೀಳೆಯದೆಲೆ ಮುಂದಿಟ್ಟುಕೊಂಡು ಕುಳಿತಾಗ ಮೀರ

"ಎಲ್ಲಾದರೂ ಹೊರಗೆ ಹೋಗೋಣ" ಎಂದಳು.

"ಏನಿದು ಹಕ್ಕಿ ಇದ್ದಕ್ಕಿದ್ದಂತೆಯೇ ಉಲ್ಲಾಸದಿಂದಿದೆ!"

"ಏಕೋ, ನಿಮಗೇಕೆ ಅದೆಲ್ಲಾ. ಯಾವ ಸೀರೆ ಉಡಲಿ?"

"ಲಗ್ನಪತ್ರಿಕೆ ದಿನ ನಿನಗೆ ತಂದಿದ್ದೆನಲ್ಲಾ ಆ ಸೀರೆ...."

"ಹ್ಞೂ. ಗೊತ್ತಾಯಿತು. ಐದೇ ನಿಮಿಷದಲ್ಲಿ ಬಂದುಬಿಡುತ್ತೇನೆ."

"ಹೆಂಗಸರ ಅಲಂಕಾರ ಐದು ನಿಮಿಷ ಅಂದರೆ ಎರಡು ಗಂಟೆ."

"ಬೇಕಾದರೆ ಗಡಿಯಾರ ಮುಂದಿಟ್ಟುಕೊಂಡಿರಿ."

ಮೀರ ಅಲಂಕರಿಸಿಕೊಂಡು ಬಂದೊಡನೆ ಶಾಮು "ಹತ್ತು ನಿಮಿಷವಾಗಿ ಹೋಯಿತು." ಎಂದ.

"ಈ ಷೂಸು ಹಾಕಿಕೊಳ್ಳೋಕೆ ಎರಡು ನಿಮಿಷ ಬೇಕಾಯಿತು."

"ನಿನ್ನ ಮಾತಿನಲ್ಲಿ ಸೋಲಿಸುವವರು ಯಾರು? ಬಾ" ಎಂದ ಶಾಮು.

• • •

ದಿನಗಳೆದಂತೆ ಮೀರಳ ಬೇಸರ ಹೆಚ್ಚಾಯಿತು. ನವಚೈತನ್ಯದಿಂದ ತುಂಬಿದ್ದ ಅವಳ ಜೀವ ಈಗ ಅಖಂಡ ವಿರಾಮಕ್ಕೆ ಹೊಂದಿಕೊಳ್ಳಲಾರದೇ ಹೋಯಿತು. ಪ್ರತಿದಿನ ಆರಾಮ ಕುರ್ಚಿಯಲ್ಲಿ ಕುಳಿತು, ತಾನು ಕಾಲೇಜಿನಲ್ಲಿ ಕಳೆದ ದಿನ ಗಳನ್ನೂ, ತಾನೀಗ ಕಳೆಯುತ್ತಿರುವ ದಿನಗಳನ್ನೂ ಹೋಲಿಸಿ ನೋಡುತ್ತಿದ್ದಳು. ಆಗಿನ ದಿನಗಳು ಹಕ್ಕಿಯಂತೆ ಹಾರಿಹೋದರೆ, ಈಗಿನ ದಿನಗಳು ಆಮೆಯಂತೆ ತೆವಳುತ್ತಿರುವಂತೆ ತೋರಿತು.

ಶಾಮು ಬೆಳಿಗ್ಗೆ ಎಂಟುಗಂಟೆಯ ಹೊತ್ತಿಗೆ ಹೊರಗೆ ಹೊರಡಲು ಸಿದ್ಧನಾಗಿ ತನ್ನ ಒರಟಾದ ದಪ್ಪ ಎಕ್ಕಡವನ್ನು ಮೆಟ್ಟಿಕೊಳ್ಳುತ್ತಿದ್ದ. ಮೀರ ಬಾಗಿಲಿನಲ್ಲಿ ನಿಂತು ಅವನ ಮೆಟ್ಟನ್ನೇ ಒಂದು ಕ್ಷಣ ನೋಡಿದಳು. ಕೂಡಲೇ ಅವಳ ಮನಸ್ಸಿನಲ್ಲಿ ಗೋಪಣ್ಣನ ಮಿರುಗುವ ಬೂಟ್ಸು ಸುಳಿಯಿತು.

"ನಿಮಗೊಂದು ಮಾತು ಹೇಳಬೇಕಾಗಿದೆ...." ಮೀರ ಅನುಮಾನಿಸುತ್ತ ಕೇಳಿದಳು.

"ಏನು?"

"ನೀವು ನಗಬಾರದು."

"ಇಲ್ಲ ಹೇಳು."

"ನನಗೆ ಹಳ್ಳಿಯಲ್ಲಿ ಸಮಯವೇ ಹೋಗುವುದಿಲ್ಲ."

"ಒಂದು ಬೀರು ಪುಸ್ತಕವಿದ್ದುದು ನಾಲ್ಕಾಗಿದೆ. ಬೇಕಾದರೆ ನಲವತ್ತು ಆಗಲಿ. ಕಸೂತಿ ಕೆಲಸಕ್ಕೂ ವಿರಾಮವಿಲ್ಲ. ಇನ್ನೇನಾಗಬೇಕಾಗಿದೆ?"

"ಹಾಗಲ್ಲ ನಾನು ಹೇಳಿದ್ದು. ಈ ಹಳ್ಳೀಲಿ ಪಾರ್ಕೇ, ರೇಡಿಯೋನೇ, ಸಿನಿಮಾನೇ, ಸ್ನೇಹಿತೆಯರೇ, ಯಾರೂ ಇಲ್ಲ. ಯಾವಾಗಲೂ ಮನೆಯಾಯಿತು, ಪುಸ್ತಕವಾಯಿತು. ಈ ರೀತಿಯ ಜೀವನವೂ ಬೇಸರ ಬಂದಿತು."

"ವೆಂಕೂ ಆಗಾಗ್ಗೆ ಬರುತ್ತಿರುತ್ತಾಳಲ್ಲ...."

"ಅವಳೇನೋ ಬರುತ್ತಾಳೆ. ಅವಳು ಹೇಳುವ ಮಾತುಗಳು ನನಗೆ ಬೇಕಿಲ್ಲ. ನನ್ನ ಮಾತು ಅವಳಿಗೆ ಅರ್ಥವಾಗುವುದಿಲ್ಲ. ಆ ಹತ್ತು ವರ್ಷದ ಹುಡುಗಿ ಜೊತೆ ಎಷ್ಟೂಂತ ಮಾತನಾಡಲಿ?"

"ಹಾಗಾರದೆ ರೈತರ ಹೆಂಗಸರೊಡನೆ ನೀನೂ ಗದ್ದೆಗೆ ಬಂದು ಕಳೆ ಕೀಳು."

"ಸಾಕು ಸುಮ್ಮನಿರಿ. ಕೇಳಿದವರು ನಕ್ಕಾರು. ನಾನು ಕಳೆ ಕಿತ್ತು ಬಿತ್ತುವ ಹಾಗಿದ್ದರೆ ಎಷ್ಟೋ ಆಗುತ್ತಿತ್ತು."

"ಹಾಗಾದರೆ ಏನು ಮಾಡಬೇಕೂಂತ ನಿನ್ನ ಅಭಿಪ್ರಾಯ?"

"ನೀವು ನಗದಿದ್ದರೆ ಹೇಳುತ್ತೇನೆ."

"ಹೇಳು."

"ನನ್ನಾಣೆಗೂ ನಗಬಾರದು."

"ಸರಿ. ಹೇಳಬಾರದೇ?"

"ಇಲ್ಲಿಯ ರೈತರ ಹೆಂಗಸರು, ಮಕ್ಕಳಿಗೆ ವಿದ್ಯೆ ಕಲಿಸೋಣಾಂತ."

ಶಾಮು ಜೋರಾಗಿ ನಕ್ಕುಬಿಟ್ಟ. ಮೀರ ಹುಬ್ಬುಗಂಟಿಕ್ಕಿ,

"ನಗಬಾರದು ಅಂತ ಮೊದಲೇ ಹೇಳಿದ್ದೆ" ಎಂದು ಎಚ್ಚರಿಸಿದಳು.

"ನಿನ್ನ ಮಾತನ್ನು ಕೇಳಿದರೆ ನಗದೇ ಇನ್ನೇನು ಮಾಡಲಿ?"

"ನಗುವಂತಾದ್ದು ಏನಿದೆ ನಾನು ಹೇಳಿದುದರಲ್ಲಿ?"

"ಅವರು ತಮ್ಮ ಕೆಲಸ ಬಿಟ್ಟು, ನಿನ್ನ ಶಿಷ್ಯವೃತ್ತಿ ಅವಲಂಬಿಸಿದರೆ ಅವರ ಸಂಸಾರದ ಗತಿ ಏನು?"

"ದಿನಾ ಸಂಜೆ ಅರ್ಧ ಗಂಟೆ ಹೇಳಿಕೊಡುತ್ತೇನೆ. ಹೇಗಾದರೂ ಮಾಡಿ ಅವರುಗಳನ್ನು ಒಪ್ಪಿಸಿ" ಮೀರ ಬೇಡುವ ದನಿಯಿಂದ ಹೇಳಿದಳು.

"ಅವರು ಒಪ್ಪದಿದ್ದರೆ...."

"ಒಪ್ಪದಿದ್ದರೆ ಬೇಡ."

ಶಾಮು ಹೊರಟುಹೋದ. ಮಧ್ಯಾಹ್ನ ಮೀರ ಅವನು ಮನೆಗೆ ಬರುವುದನ್ನೇ ಕಾಯುತ್ತಿದ್ದಳು. ಶಾಮು ಮನೆಗೆ ಬಂದೊಡನೆ

"ಕೇಳಿದಿರಾ" ಎಂದಳು.

"ಸಂಜೆ ಅವರಿಗೆಲ್ಲಾ ಮನೆ ಕಡೆ ಬರಲು ಹೇಳಿದ್ದೇನೆ. ನೀನೇ ಹೇಳಿ ಒಪ್ಪಿಸು."

ಮೀರ ಮಧ್ಯಾಹ್ನ ಹಳ್ಳಿಯವರನ್ನು ಯಾವ ರೀತಿಯಿಂದ ಒಪ್ಪಿಸಲಿ ಎಂದು ಯೋಚಿಸುತ್ತಿದ್ದಳು. ಸಂಜೆ ಆರು ಗಂಟೆಗೆ ಶಾಮು ಮನೆಗೆ ಬಂದ. ಅವನಿಗೆ ಕೆಲವು ಮಾರು ದೂರದಲ್ಲಿ ರೈತರ ಹೆಂಗಸರು ಮಾತನಾಡುತ್ತಾ ಬರುತ್ತಿದ್ದರು. ಮೀರ ಅವರನ್ನು ಸ್ವಾಗತಿಸಿ ಅಂಗಳದಲ್ಲಿ ಕೂರಲು ಹೇಳಿದಳು.

ತಲೆ ಹಣ್ಣಾದ ಬೀರಮ್ಮ, ಕೆನ್ನೆ ಸರಪಳಿಯ ರಾಮಕ್ಕ, ಕಿವಿಗೆ ಸುತ್ತಿದ್ದ ಓಲೆಗರಿ ಹಾಕಿದ್ದ ತಿಮ್ಮಮ್ಮ, ಕಾಚಿಯಿಂದ ಹಲ್ಲು ಕಪ್ಪಾದ ವೆಂಕಟಮ್ಮ, ಹೊಸದಾಗಿ ಮದುವೆಯಾದ ಕೆಂಪಕ್ಕ ಮೊದಲಾದವರು ಬಾಯಿತುಂಬಾ ಎಲೆ ಅಡಿಕೆಯನ್ನು ತುಂಬಿಕೊಂಡು ಮೀರಳ ಕಡೆ ಪ್ರಶ್ನಾರ್ಥಕವಾಗಿ ನೋಡಿದರು. ಬೀರಮ್ಮ,

"ಏನವ್ವ ನಮಗೆ ಹೇಳಿಕಳಿಸಿದೆಯಂತಲ್ಲಾ" ಎಂದಳು.

ಹೊಲ ಗದ್ದೆಗಳಲ್ಲಿ ಕಷ್ಟಪಟ್ಟು ಕೆಲಸ ಮಾಡುತ್ತಿದ್ದುದರಿಂದ ಅವರ ದೇಹ ದೃಢವಾಗಿ, ಆರೋಗ್ಯವಾಗಿ ಬೆಳೆದಿತ್ತು. ಎಂತಹ ಕಷ್ಟ ಬಂದರೂ ತಡೆಯುತ್ತೇವೆಂಬ ಕೆಚ್ಚು ಅವರ ಮುಖದಲ್ಲಿತ್ತು. ಬಿಸಿಲಿನಲ್ಲಿ ಕೆಲಸ ಮಾಡುತ್ತಿದ್ದುದರಿಂದ ಅವರ ದೇಹವೆಲ್ಲಾ ಸುಟ್ಟು ಕಪ್ಪಾಗಿತ್ತು.

"ಬೀರಮ್ಮ, ನಿಮಗೆಲ್ಲಾ ಓದು, ಬರಾವು ಕಲಿಯೋಕೆ ಆಸೇನಾ?"

"ಅಯ್ಯೋ ಬಿಡು ನಮ್ಮವ್ವ. ಓದು, ಬರಾವು ಕಲಿತು ನಾವು ಯಾವ ಸೀಮೆ ಆಳಬೇಕು?"

"ಹಾಗಲ್ಲ ಬೀರಮ್ಮ. ವಿದ್ಯೆ ಕಲಿತು ಬುದ್ಧಿವಂತರಾದರೆ ಎಷ್ಟು ಚೆನ್ನಾಗಿರುತ್ತದೆ. ನಿಮಗೆ ಬಿಡುವು ಸಿಕ್ಕಿದಾಗ ಒಳ್ಳೊಳ್ಳೆಯ ಪುಸ್ತಕಗಳನ್ನು ಓದಬಹುದು. ಅಜ್ಞಾನ, ಮೂಢತನ ಹೋಗುತ್ತದೆ."

"ನಮಗೆ ಸಮಯ ಎಲ್ಲಿದ್ದಾತವ್ವ. ಒಂದು ಗಳಿಗೆ ಕಾಲುಚಾಚಿ ಮನೀಕೊಳೋಕೆ ಸಹ ಬಿಡುವಿರಾಕಿಲ್ಲ. ಇನ್ನು ಓದಾಕೆ ಎಲ್ಲಿಂದ ಸಮಯ ತರೋಣಾ?"

"ಬೀರಮ್ಮ, ನನಗೆ ನೀವೆಲ್ಲಾ ಓದು ಬರಹ ಕಲಿತು ವಿದ್ಯಾವಂತರಾಗಲಿ

ಎಂದಾಸೆಯಿದೆ. ನೀವು ಇದಕ್ಕೆ ಒಪ್ಪುವುದಾದರೆ ನಾನು ನಮ್ಮ ಮನೆಯಲ್ಲಿ ನಿಮ್ಮೆಲ್ಲರಿಗೂ ಕಲಿಸುತ್ತೇನೆ."

ಕೂಡಲೇ ಅವರ ಗುಂಪಿನಲ್ಲಿ ಗುಜುಗುಜು ಮಾತು ಆರಂಭವಾಯಿತು. ಕೆಲವರು ವಯಸ್ಸಾದ ಮೇಲೆ ವಿದ್ಯೆ ಕಲಿಯಲು ವಿರೋಧ ಸೂಚಿಸಿದರು. ಮತ್ತೆ ಕೆಲವರು ತಮಗೆ ಸಮಯವಿಲ್ಲವೆಂದು ಗೊಣಗುಟ್ಟುತ್ತಿದ್ದರು.

"ಓದು ಕಲಿಯೋಕೆ ತುಂಬಾ ದುಡ್ಡು ಖರ್ಚಾಯ್ತದಂತೆ?" ರಾಮಕ್ಕ ಕೇಳಿದಳು.

"ದುಡ್ಡಿನ ವಿಚಾರ ನೀವು ಯೋಚಿಸಬೇಡಿ. ನಾನು ಅದನ್ನು ವಹಿಸಿ ಕೊಳ್ಳುತ್ತೇನೆ."

ಗುಂಪಿನಲ್ಲಿ ಒಂದು ಕ್ಷಣ ಮೌನ.

"ಯಾವುದನ್ನೂ ಆಲೋಚಿಸಿ ನಾಳೆ ಹೇಳಿ" ಮೀರ ಮಾತು ಮುಗಿಸಿದಳು. ಅವರು ಒಪ್ಪಿ ಹೊರಟುಹೋದರು. ಮೀರಳಿಗೆ ನಿರುತ್ಸಾಹವುಂಟಾಯಿತು. ತಾನಾಗಿ ಮುಂದುವರೆದು ವಿದ್ಯೆ ಕಲಿಸುವ ಭರವಸೆ ಕೊಟ್ಟರೂ, ಅವರು ಹಿಂಜರಿಯುವು ದನ್ನು ನೋಡಿ ಅವಳಿಗೆ ಆಶ್ಚರ್ಯವಾಯಿತು. ಅವರು ಪುನಃ ತನ್ನಲ್ಲಿಗೆ ಬರಲಾರ ರೆಂದೇ ಭಾವಿಸಿದಳು.

ಆದರೆ ಮಾರನೆಯ ದಿನ ಸಂಜೆ ಅವಳ ಊಹೆಗೆ ವ್ಯತಿರಿಕ್ತವಾಗಿ ಬೀರಮ್ಮ, ರಾಮಕ್ಕ, ತಿಮ್ಮಮ್ಮ ಮೊದಲಾದವರೆಲ್ಲ ಅಂಗಳಕ್ಕೆ ಬಂದು ನಿಂತು "ತಾಯೀ" ಎಂದು ಕೂಗಿದರು. ಮೀರಾ ಉತ್ಸಾಹದಿಂದ ಹೊರಗೆ ಬಂದು "ಏನು" ಎಂದಳು.

"ನಾವೆಲ್ಲಾ ಒಪ್ಪಿದೀವಿ ತಾಯಿ" ಎಂದಳು ಬೀರಮ್ಮ. ಅವಳ ಧ್ವನಿಯಲ್ಲಿ ವಿದ್ಯೆ ಕಲಿಯುವ ಆಸಕ್ತಿಗಿಂತಲೂ ಮೀರಳ ಮಾತಿಗೆ ಮನ್ನಣೆ ಕೊಡಲೋಸುಗ ಒಪ್ಪಿದ ಸೂಚನೆಯಿತ್ತು.

"ತುಂಬಾ ಸಂತೋಷ ಬೀರಮ್ಮ, ಶುಕ್ರವಾರದ ದಿನ ಸರಸ್ವತಿ ಪೂಜೆ ಮಾಡಿ ಆರಂಭಿಸುತ್ತೇನೆ. ನಿನಗೆ ಪರಿಚಯವಿರುವ ಎಲ್ಲಾ ಹೆಣ್ಣುಮಕ್ಕಳನ್ನೂ ಕರೆದುಕೊಂಡು ಬಾ."

"ಆಗಲಿ ತಾಯಿ."

"ನಾನು ಸ್ಲೇಟು, ಪುಸ್ತಕ ಎಲ್ಲಾ ತರಿಸಿಟ್ಟಿರುತ್ತೇನೆ."

"ಸರಿ" ಎಂದು ಬೀರಮ್ಮನ ಪರಿವಾರ ಹೊರಟುಹೋಯಿತು.

ಈ ಸುದ್ದಿಯನ್ನು ಎಂದಿಗೆ ಶಾಮುವಿಗೆ ತಿಳಿಸೇನೋ ಎಂದು ಮೀರಳಿಗೆ ಆತುರ. ಶಾಮು ಮನೆಗೆ ಬರುತ್ತಿದ್ದ ಹಾಗೆಯೇ ಹೇಳಿದಳು.

"ಎಲ್ಲರೂ ಅಕ್ಷರ ಹೇಳಿಸಿಕೊಳ್ಳೋಕೆ ಒಪ್ಪಿದ್ದಾರೆ. ಶುಕ್ರವಾರ ಸರಸ್ವತಿ

ಪೂಜೆ ಮಾಡಿ ಪ್ರಾರಂಭ ಮಾಡಿಸಿಬಿಡುತ್ತೀನಿ. ಅಷ್ಟರಲ್ಲಿ ಸ್ಲೇಟು, ಬಾಲಬೋಧೆ ತರಿಸಿಕೊಡಿ."

ಏನೋ ಹೇಳಲು ಹೊರಟ ಶಾಮು ಅವಳ ಉತ್ಸಾಹಭಂಗ ಮಾಡುವ ಮನಸ್ಸಿಲ್ಲದೇ ತಾನು ಆಡಬೇಕೆಂದಿದ್ದ ಮಾತನ್ನು ತಡೆದು ನಿಲ್ಲಿಸಿದನು. ಮೀರ ತಾನು ಕಲ್ಪಿಸಿದ್ದ ಸುಂದರ ಕನಸುಗಳನ್ನು, ತನ್ನ ಶಿಷ್ಯೆಯರಿಗೆ ಒಂದು ವರ್ಷದಲ್ಲಿ ಪ್ರತಿಯೊಂದನ್ನೂ ಚೆನ್ನಾಗಿ ಕಲಿಸುವುದಾಗಿಯೂ ಶಾಮುವಿನೆದುರು ಬಣ್ಣಿಸಿದಳು.

ಅವಳು ನಿರೀಕ್ಷಿಸುತ್ತಿದ್ದ ಶುಕ್ರವಾರ ಬಂದಿತು. ಮೀರ ಎಂದಿಲ್ಲದ ಉತ್ಸಾಹ ದಿಂದ ಎಲ್ಲಾ ಹೂವುಗಳನ್ನೂ ಕೊಯ್ದು ಎರಡು ದೊಡ್ಡ ಹಾರಗಳನ್ನು ಕಟ್ಟಿದಳು. ಬೋರನಿಗೆ ಹೇಳಿ ತೋಟದಿಂದ ಒಂದು ಗೊನೆ ರಸಬಾಳೆ ಹಣ್ಣನ್ನು ತರಿಸಿದಳು. ಗೋಡೆಯ ಮೇಲಿದ್ದ ರವಿವರ್ಮನ ಸರಸ್ವತಿ ಕೆಳಗಿಳಿದು ಮೇಜನ್ನು ಅಲಂ ಕರಿಸಿದಳು.

ಸಂಜೆ ಮೀರ ಹೊಸ ಸೀರೆಯುಟ್ಟು ತನ್ನ ಶಿಷ್ಯೆಯರ ಆಗಮನವನ್ನು ಇದಿರು ನೋಡುತ್ತಿದ್ದಳು. ಐದು ಗಂಟೆಗೆ ಅವಳ ಶಿಷ್ಯೆಯರು ಒಬ್ಬೊಬ್ಬರಾಗಿ ಬರತೊಡಗಿ ದರು. ಎಂಟು ಹತ್ತು ಜನ ಸೇರಿದ ನಂತರ ಸರಸ್ವತಿ ಪಟದ ಮುಂದೆ ಊದುಕಡ್ಡಿ ಹಚ್ಚಿ, ಪೂಜೆ ಮಾಡಿ ಎರಡು ಹಾರವನ್ನೂ ಹಾಕಿದಳು. ವೆಂಕಮ್ಮನವರು ರಸಾ ಯನ, ಕೋಸಂಬರಿ ತಂದು ನೈವೇದ್ಯ ಮಾಡಲು ದೇವರ ಎದುರಿಗಿಟ್ಟರು. ಮೀರ ನೀರು ಚಿಮುಕಿಸಿ ನೈವೇದ್ಯ ಮಾಡಿ ಎಲ್ಲರಿಗೂ ದೊನ್ನೆಗಳಲ್ಲಿ ಪ್ರಸಾದ ಹಂಚಿದಳು. ಸರಸ್ವತಿಯ ಮೇಲಿದ್ದ ಹೂವಿನ ಹಾರವೊಂದನ್ನು ತೆಗೆದು ಚೂರು ಮಾಡಿ ಎಲ್ಲರಿಗೂ ಕೊಟ್ಟಳು.

ರಾಮಕ್ಕ ಕುತೂಹಲದಿಂದ ಸರಸ್ವತಿಯ ಕಡೆ ನೋಡಿ "ಇದೆಂತಾ ದೇವ್ರವ್ವಾ, ಕಾಳಮ್ಮನಾ?" ಎಂದಳು. ಮೀರ ಉತ್ಸಾಹದಿಂದ,

"ಅಲ್ಲ ರಾಮಕ್ಕ. ಇವಳು ಸೃಷ್ಟಿಕರ್ತನಾದ ಬ್ರಹ್ಮನ ಹೆಂಡತಿ ಸರಸ್ವತಿ. ಇವಳು ವಿದ್ಯಾಧಿದೇವತೆ, ಇವಳಷ್ಟು...."

"ತಾಯೀ...." ಮಧ್ಯದಲ್ಲೇ ವೆಂಕಟಮ್ಮ ತಡೆದಳು.

ಮೀರ ವೆಂಕಟಮ್ಮನಿಂದ ಮತ್ತೊಂದು ಸ್ವಾರಸ್ಯವಾದ ಪ್ರಶ್ನೆಯನ್ನು ನಿರೀಕ್ಷಿಸುತ್ತ ಅವಳ ಕಡೆ ತಿರುಗಿದಳು.

"ನೀವು ಉಟ್ಟಿರೋ ಸಾಲೇನ ನೀರಿಗೆ ಹಾಕಿದರೆ ಬಣ್ಣ ಬುಡಾಕಿಲ್ವಾ?"

ಮೀರಳ ಉತ್ಸಾಹ ತಟ್ಟನೆ ಇಳಿಯಿತು.

"ನಾನಿನ್ನೂ ನೀರಿಗೆ ಹಾಕಿ ನೋಡಿಲ್ಲ."

ಕೆಂಪಮ್ಮ ರಸಾಯನದ ದೊನ್ನೆಯನ್ನು ತೋರಿಸಿ,

"ಇದನ್ನು ಯೆಂಗವ್ವ ಮಾಡೋದು" ಎಂದಳು.

ಮೀರಳಿಗೆ ಕೋಪ ಬಂದರೂ ಅದನ್ನು ಪ್ರದರ್ಶಿಸಲಿಲ್ಲ. ಸಹನೆಯಿಂದ ರಸಾಯನವನ್ನು ತಯಾರಿಸುವ ವಿಧಾನವನ್ನು ತಿಳಿಸಿದಳು. ಅನಂತರ ಎಲ್ಲರಿಗೂ ಒಂದು ಸ್ಲೇಟು, ಬಳಪ ಬಹುಮಾನವಾಗಿ ಕೊಟ್ಟು, ಅಕ್ಷರಾಭ್ಯಾಸ ಮೊದಲು ಮಾಡಿದಳು. ಪ್ರತಿಯೊಬ್ಬರ ಸ್ಲೇಟಿನಲ್ಲಿ 'ಅ, ಆ' ತಿದ್ದಿ ಹಾಕಿಕೊಟ್ಟಳು. ಅದನ್ನು ತಿದ್ದುವ ರೀತಿಯನ್ನು ಪ್ರತಿಯೊಬ್ಬರಿಗೂ ಮೂರು ಬಾರಿ ತೋರಿಸಿಕೊಟ್ಟಳು. ಅವರು ಕಾಲುಗಂಟೆ ತಿದ್ದಿದ ನಂತರ ಮೇಲಿನ ಅಕ್ಷರವನ್ನೇ ನೋಡಿಕೊಂಡು ಅದರಂತೆಯೇ ಕೆಳಗೆ ಬರೆಯಲು ಹೇಳಿದಳು.

"ಇಷ್ಟು ಬೇಗ ಬರೀರಿ ಅಂದ್ರೆ ಯೆಂಗವ್ವಾ ಬರೆಯೋದು? ಇದೇನು ಕಳೆ ಕೀಳೋ ಕೆಲಸ ಕೆಟ್ಟೋಯಿತಾ?" ಕೆಂಪಮ್ಮ ಹೇಳಿದಳು.

ರಾಮಕ್ಕ 'ಅ, ಆ' ಎರಡನ್ನೂ ತಲೆ ಕೆಳಕಾಗಿ ತಿದ್ದುತ್ತಿದ್ದಳು. ಮೀರ ಅದನ್ನು ನೋಡಿ,

"ಹಾಗಲ್ಲ, ರಾಮಕ್ಕ. ನೀನು ತಿದ್ದುತ್ತಿರುವ ರೀತಿ ತಪ್ಪು" ಎಂದಳು. ಅವಳ ಬಳಪ ಹಿಡಿದು ಸರಿಯಾಗಿ ತಿದ್ದುವ ಬಗೆಯನ್ನು ತೋರಿಸಿದಳು. ಅವಳ ಸ್ಲೇಟನ್ನೇ ನೋಡುತ್ತಿದ್ದ ಕೆಂಪಮ್ಮ ಕೇಳಿದಳು,

"ಯೆಂಗೆ ಬರೆದರೇನವ್ವಾ? ನಾವು ಬರೆದದ್ದು ಆ ಅಕ್ಷರದಂಗೆ ಕಂಡರೆ ಸರಿ."

"ಮೊದಲು ಮೊಸರನ್ನ ಊಟಮಾಡಿ, ಆಮೇಲೆ ಸಾರನ್ನ ನಾವು ಯಾಕೆ ತಿನ್ನುವುದಿಲ್ಲ. ಹಸಿವು ತೀರುವುದು ಮುಖ್ಯವಲ್ಲವೇ?"

ಮೀರ ನಗುತ್ತ ಕೆಂಪಮ್ಮನನ್ನು ಕೇಳಿದಳು. ಕೆಂಪಮ್ಮನಿಗೆ ಉತ್ತರ ಹೇಳಲು ತಿಳಿಯಲಿಲ್ಲ.

"ಪ್ರತಿಯೊಂದು ಕೆಲಸಕ್ಕೂ ಮೊದಲು, ಕೊನೆಯಿದೆ. ಕೆಂಪಮ್ಮ ಯಾವುದನ್ನು ಮಾಡಬೇಕಾದರೂ ಶಿಸ್ತಿರಬೇಕು."

ಸಂಜೆಗತ್ತಲು ಕವಿಯುತ್ತ ಬಂದಿತು. ಬೋರ ದೀಪ ಹೊತ್ತಿಸಿ ಹೋದ.

"ಮೀರವ್ವ, ಒತ್ತಾಯ್ತು. ನಾವಿನ್ನು ಓಗ್ತೀವಿ" ಬೀರಮ್ಮ ಹೇಳಿದಳು.

'ಇಷ್ಟು ಬೇಗ?"

"ಅವರು ಗದ್ದೆ ತಾವಿಂದ ಹಟ್ಟೀಗೆ ಬತ್ತಾರೆ. ಬರೋ ಒತ್ಗೆ ಉಣ್ಣಾಕೆ ಗಂಗಳ ಮಡಗದಿದ್ದರೆ ಕ್ಯಾಪ ಮಾಡ್ಕೋತಾರೆ."

ಎಲ್ಲರೂ ಬೀರಮ್ಮನ ಮಾತನ್ನು ಅನುಮೋದಿಸಿದರು. ಮೀರಳ ಒಪ್ಪಿಗೆ ಪಡೆದು ಬೀರಮ್ಮನ ಪರಿವಾರ ಹೊರಟುಹೋಯಿತು. ರಾತ್ರಿ ಮೀರ

ಶಾಮುವಿನೊಡನೆ ತನ್ನ ಅಂದಿನ ದಿನದ ಪಾಠ ವಿವರಣೆಯನ್ನು ತಿಳಿಸಿದಳು. ಶಾಮು ಬಾಯಿ ಸೊಟ್ಟು ಮಾಡಿ ನಕ್ಕ. ಮೀರ ನಸುಕೋಪದಿಂದ,

"ನೀವು ಹಾಗೆ ನಗಬೇಡಿ. ನನಗೆ ತುಂಬಾ ಕೋಪ ಬರುತ್ತದೆ" ಎಂದಳು.

"ಇಲ್ಲ ರಾಣಿ ಸಾಹೇಬ. ನಾನಿನ್ನು ನಗುವುದಿಲ್ಲ" ಎಂದು ಶಾಮು ಗಂಭೀರ ಮುದ್ರೆ ತಾಳಿದ.

"ಇನ್ನೆರಡು ವರ್ಷಗಳಲ್ಲಿ ಅವರೆಲ್ಲಾ ಎಲ್.ಎಸ್.ಗೆ ಕಟ್ಟೋ ಹಾಗಾಗ ಬೇಕು. ನಾನು ಅಷ್ಟೊಂದು ತರಬೇತು ಕೊಡಬೇಕೆಂದಿದ್ದೇನೆ."

ಮೀರ ಶಾಮುವಿಗೆ ನಿದ್ರೆ ಬರುವವರೆಗೆ ಒಂದೇ ಸಮ ಮಾತನಾಡಿ ದಣಿದಳು.

ಆ ದಿನ ಸಂಜೆ ನೀಲಮ್ಮನ ಗಂಡ ಎಂದಿಗಿಂತಲೂ ಮುಂಚಿತವಾಗಿ ಮನೆಗೆ ಬಂದ. ಅವನ ತಾಯಿ ಹಟ್ಟಿಯ ಬಾಗಿಲಿನಲ್ಲಿ ಕುಳಿತು ರಾಗಿ ಮಾಡುತ್ತಿದ್ದಳು. ಹಟ್ಟಿಗೆ ಸ್ವಲ್ಪ ದೂರದಲ್ಲಿ ಕಂತ್ರಿನಾಯಿಯೊಂದು ನೆಲದ ಮೇಲೆ ಕೊರಳು ನೀಡಿ ಮಲಗಿತ್ತು. ಎಂಟು ಹತ್ತು ಕೋಳಿಗಳು ತಮ್ಮ ಮರಿಗಳೊಡನೆ ಹಟ್ಟಿಯ ಸುತ್ತಲೂ ಇದ್ದ ಕೊಳಕಿನಲ್ಲಿ ಹುಳ, ಕಾಳುಗಳನ್ನು ಹುಡುಕಿ ಆಯ್ದು ತಿನ್ನುತ್ತಿದ್ದವು. ಕೆಂಚಮ್ಮ ಆಗಾಗ್ಗೆ ದಾರಿಯ ಕಡೆ ನೋಡುತ್ತಾ, ತನ್ನಲ್ಲಿ ತಾನೇ ಕೋಪದಿಂದ ಮಾತನಾಡುತ್ತಾ ಮೊರದಲ್ಲಿದ್ದ ರಾಗಿಯನ್ನು ಕೇರುತ್ತಿದ್ದಳು. ಹೆಜ್ಜೆ ಸದ್ದಾಯಿತು. ಕೆಂಚಮ್ಮ ಸ್ವಲ್ಪ ಗಡುಸಾಗಿಯೇ "ನೀಲಿ...." ಎಂದು ಕೂಗಿದಳು.

ಶಿವಯ್ಯ ಹತ್ತಿರ ನಿಂತು "ನಾನು ಕಣವ್ವ. ನೀಲಿ ಇನ್ನೂ ಹಟ್ಟೀಗೆ ಬಂದಿಲ್ವಾ" ಎಂದ.

ಇದುವರೆಗೂ ಅದುಮಿ ಹಿಡಿದಿದ್ದ ಕೋಪ ಬಿರಡೆ ತಿರುಗಿಸಿದ ನಲ್ಲಿಯ ನೀರಿನಂತೆ ಸುರಿಯತೊಡಗಿತು.

"ಶಿವಾ, ಒಳ್ಳೇ ಉಡುಗೀನ ಕಟ್ಕೊಂಡಿದೀಯಾ?" ಕೆಂಚಮ್ಮ ಮೊರವನ್ನು ನೆಲದ ಮೇಲೆ ಕುಕ್ಕಿ ಎದ್ದು ನಿಂತಳು. ಅವಳ ಬೆಳ್ಳಿಗೂದಲು ಕೆದರಿತ್ತು. ಶಿವಯ್ಯ ಅಚ್ಚರಿಯಿಂದ ತಾಯಿಯ ಕಡೆ ನೋಡಿ 'ಯಾಕವ್ವಾ' ಎಂದ. ಆಯಾಸ, ಬಳಲಿಕೆ ಯಿಂದ ಅವನ ದೇಹ ಸೋತುಹೋಗಿತ್ತು. ಬೆಳಗಿನಿಂದ ಸಂಜೆಯವರೆಗೆ ಒಂದೇ ಸಮ ಗದ್ದೆಯಲ್ಲಿ ಕೆಲಸ ಮಾಡಿದ ಆ ದೇಹ ಶಾಂತಿ, ವಿಶ್ರಾಂತಿಗಾಗಿ ಹಾತೊರೆಯು ತ್ತಿತ್ತು. ತನ್ನ ಮುಗುಳ್ನಗೆಯಿಂದ ಮನಸ್ಸಿಗೆ ಶಾಂತಿ ತುಂಬುವ ನೀಲಿಯ ಬದಲು, ಕೋಪದಿಂದ ಬುಸುಗುಟ್ಟುತ್ತಿದ್ದ ತಾಯಿ, ಅವನ ಆಯಾಸವನ್ನು ಹೆಚ್ಚಿಸಿದಳು.

ಶಿವಯ್ಯ ತಾಯಿಯ ಪಕ್ಕದಲ್ಲಿ ಕುಸಿದು ಬಿದ್ದು "ಏನಾಯಿತವ್ವ?" ಎಂದ.

"ಆಗೋದೇನು? ನೀಲಿ ಶಾಮಣ್ಣೋರ ಮನೆಗೆ ಆರು ಗಂಟೇಗೆ ಓದೋಳು

ಇನ್ನೂ ಅಟ್ಟೀ ಕಡೆ ಮುಖಾ ಆಕ್ನಿಲ್ಲ. ಅಲ್ಲೇನು ಮಾಡ್ತಾ ಕುಂತವಳೋ ಪರ ಮಾತ್ಮನಿಗೇ ಗೊತ್ತು. ನಾನೊಬ್ಬಳು ಮುದಿ ಮೂಳಿ ಕೆಲಸ ಮಾಡೋಕೆ ಇದೀ ನಲ್ಲಾ. ಮಗ ಬೇರೆ ಸಂಜೆಯಿಂದ ಅರಚೀ ಅರಚೀ, ಕೊನೆಗೆ ಸಪ್ಪಗಾಗಿ ಮನಗಿದೆ. ಇವಳೇನು ಸಂಸಾರ ಮಾಡೋಕೆ ಬಂದಿರೋಳಾ? ಇಲ್ಲಾ ಬೀದಿ ತಿರುಗಾಕೆ ಬಂದಿ ರೋಳಾ? ಚಂಜೆ ಮೇಯಾಕೆ ಹೋದ ಎಮ್ಮೆ ತಪ್ಪಿಸಿಕೊಂಡು ಒಂಟೋಗಿದೆ. ನಾನು ಮಗಾ ಸಮಾಧಾನ ಮಾಡ್ಲೋ ಇಲ್ಲಾ ಎಮ್ಮೆ ಹುಡುಕಿಕೊಂಡು ಓಗ್ಲೋ?"

ಕೆಂಚಮ್ಮ ಅರಳು ಹುರಿದಂಗೆ ಒಂದೇ ಸಮ ಮಾತನಾಡಿದಳು. ಶಿವಯ್ಯನಿಗೆ ಮೊದಲೇ ಆಯಾಸವಾಗಿತ್ತು. ಎರಡು ಸೇರು ಹಾಲು ಕರೆಯುವ ಎಮ್ಮೆ ತಪ್ಪಿಸಿ ಕೊಂಡು ಹೋಗಿರುವ ವಿಷಯ ತಿಳಿದು ರುದ್ರನಾದ.

ಹುಲ್ಲು ಛಾವಣಿಯಿಂದ ಜೋತು ಬಿದ್ದಿದ್ದ ಜೋಲಿಯಲ್ಲಿ ಇಣುಕಿ ನೋಡಿದ. ಒಳಗೆ ಎಂಟು ತಿಂಗಳ ಮಗು ಮಲಗಿ ನಿದ್ರಿಸುತ್ತಿತ್ತು. ಸೀಮೆಎಣ್ಣೆ ಬುಡ್ಡಿಯ ಬೆಳಕಿನಲ್ಲಿ ಮಗುವಿನ ಕಣ್ಣಂಚಿನ ಕೊನೆಯಲ್ಲಿ ನಿಂತಿದ್ದ ನೀರು ಮಿನು ಗಿತು. ಮಗು ನಿದ್ದೆಯಲ್ಲಿ ಸಹ ಆಗಾಗ್ಗೆ ಬಿಕ್ಕಳಿಸುತ್ತಿತ್ತು. ಮಗುವಿನ ಮುಖ ನೋಡಿ ಶಿವಯ್ಯನ ಕರುಳು ಚುರುಕ್ಕೆಂದಿತು.

"ಅವಳ ಜುಟ್ಟು ಹಿಡಿದು ತರ್ತೀನಿ" ಎನ್ನುತ್ತ ಶಿವಯ್ಯ ಮೇಲೆದ್ದ.

ಕೆಂಚಮ್ಮ ಅವನನ್ನು ತಡೆದು "ಬತ್ತಾಳೆ ಬಿಡು. ಅದೆಟ್ಹೊತ್ತಿಗೆ ಬತ್ತಾಳೋ ಇವತ್ತು ನೋಡೇ ಬಿಡೋವ" ಎಂದಳು.

ತಾಯಿ, ಮಗ ಕೋಪದಿಂದ ಉರಿಯುತ್ತ ಬಾಗಿಲಿನಲ್ಲಿಯೇ ಕುಳಿತರು. ಸಂಜೆ ಏಳು ಗಂಟೆಯ ಹೊತ್ತಿಗೆ ನೀಲಮ್ಮ ಕೈಲಿ ಸ್ಲೇಟು, ರಸಾಯನದ ದೊನ್ನೆ ಹಿಡಿದು ಬಂದಳು. ಅವಳು ಹಟ್ಟಿಯ ಬಾಗಿಲಿಗೆ ಬರುವುದೇ ತಡ ಶಿವಯ್ಯ ಕಾಲ ರುದ್ರನಂತೆ ಎದ್ದು ಅವಳನ್ನು ಬಡಿಯತೊಡಗಿದ.

ನೀಲಮ್ಮನಿಗೆ ಅವನ ವರ್ತನೆ ಅರ್ಥವಾಗಲಿಲ್ಲ.

ಕೈಲಿದ್ದ ಸ್ಲೇಟು ದೂರ ಹಾರಿ ಬಿದ್ದು, ಒಡೆದು ಚೂರಾಯಿತು. ರಸಾಯನದ ದೊನ್ನೆ ಕೆಳಗೆ ಬಿದ್ದು ರಸಾಯನವೆಲ್ಲ ಮಣ್ಣಾಯಿತು.

"ಅಯ್ಯೋ" ಎಂದು ನೀಲಮ್ಮ ಚೀರತೊಡಗಿದಳು. ಗಂಡನ ಮುಷ್ಟಿಯಿಂದ ಪಾರಾಗಲು ಯತ್ನಿಸಿದಳು. ಆದರೆ ಅವನ ಯಮಹಿಡಿತದಿಂದ ಬಿಡುಗಡೆಯಾಗು ವುದು ಸಾಧ್ಯವಾಗಲಿಲ್ಲ.

"ಎಲ್ಲಿ ಹೋಗಿದ್ಯೇ, ಏಳು ಗಂಟೆ ಆದ್ರೂ ಬರಾಕಾಗಾಕಿಲ್ವಾ? ಅದ್ಯಾವ ಮಿಂಡನ್ನ ಹುಡುಕಿಕೊಂಡು ಓಗಿದ್ದೆ?"

ಶಿವಯ್ಯ ಅವಳಿಗೆ ಮಾತನಾಡಲು ಅವಕಾಶ ಕೊಡದೆ ಹೊಡೆಯುತ್ತಿದ್ದ.

ಕೆಂಚಮ್ಮ ದೂರದಲ್ಲಿ ನಿಂತು ಒಂದೇ ಸಮ ವಟಗುಟ್ಟುತ್ತಿದ್ದಳು.

"ಎಮ್ಮೆ ತಪ್ಪಿಸಿಕೊಂಡಿದೆ. ಎಮ್ಮೆ ಇವಳಪ್ಪನ ಮನೆಯಿಂದ ತಂದಿದ್ದಳೇ? ಇವಳು ಮನೆ ತೊಳಿಯಾಕೆ ಬಂದವ್ಳೆ. ಚೆಂಬೆ ಎರಡು ಸೇರು ಹಾಲು ನಮಗೆ ಎಲ್ಲಿಂದ ಬರಬೇಕು? ಮಗ ಬೇರೆ ಅತ್ತು ಸೊರಗಿ ಸೊಪ್ಪಾಗಿ ಮನಗಿದೆ...."

ಅಕ್ಕಪಕ್ಕದ ಹಟ್ಟಿಯವರು ಈ ದೃಶ್ಯಕ್ಕೆ ಸಾಕ್ಷಿಗಳಾಗಿ ನಿಂತಿದ್ದರು.

ಶಿವಯ್ಯ ಹೊಡೆದು ಸುಸ್ತಾಗಿ ನೀಲಿಯನ್ನು ದೂರ ತಳ್ಳಿದ. ನೀಲಮ್ಮ ಮುಲುಗುಟ್ಟುತ್ತ ಮೂಲೆ ಸೇರಿದಳು. ಈ ಗಲಾಟೆಗೆ ಮಗು ಎದ್ದು ಅಳತೊಡಗಿತು. ಮಗು ಹಸಿವಿನಿಂದ ಚೀರುತ್ತಿದ್ದರೂ ನೀಲಮ್ಮ ಕಲ್ಲು ಮನಸ್ಸು ಮಾಡಿ ಕೇಳ ದವಳಂತೆ ಕುಳಿತಿದ್ದಳು. ಗಂಡನ ಮೇಲಿನ ಕೋಪವನ್ನು ಮಗುವಿನ ಮೇಲೆ ತೀರಿಸಿ ಕೊಳ್ಳಲು ಯತ್ನಿಸಿದಳು.

ಜೋಲಿಯಲ್ಲಿ ಹಸಿವಿನಿಂದ ಚೀರುತ್ತ ಮಲಗಿದ್ದ ಮಗುವನ್ನು ಕೆಂಚಮ್ಮ ತಂದು ತಾಯಿಯ ಕೈಗಿತ್ತಳು. ನೀಲಿ ಕೋಪದಿಂದ ಮಗುವನ್ನು ದೂರ ತಳ್ಳಿದಳು.

ಶಿವಯ್ಯ ಅಧಿಕಾರವಾಣಿಯಿಂದ ನುಡಿದ:

"ಏ, ಮಗೀಗೆ ಹಾಲು ಕುಡಿಸು" ನೀಲಿ ಗಂಡನಿಗೆ ಹೆದರಿ ಮಗುವನ್ನು ಹತ್ತಿರ ಕರೆದುಕೊಂಡಳು.

ಮಾರನೆಯ ದಿನ ಬೀರಮ್ಮನ ಪರಿವಾರದವರು ನೀಲಿಯನ್ನು ಕರೆಯಲು ಬಂದರು. ನೀಲಿ ಮುಖ, ಮೈ ಊದಿಸಿಕೊಂಡು ನಿಂತಿದ್ದಳು.

"ನೀಲಕ್ಕಾ, ಬಾವ್ವ."

ನೀಲಿ ಸಿಡುಕಿ ನುಡಿದಳು: "ಇವರ ವಿದ್ದೆ ಯಾರಿಗೆ ಬೇಕಾಗಿದೆ? ನಿನ್ನೆ ತಪ್ಪಿಸಿಕೊಂಡು ಓದ ಎಮ್ಮೆ ಇನ್ನೂ ಸಿಕ್ಕಿಲ್ಲ. ಓದಿ ನೀನೇನು ರಾಜ್ಯ ಆಳಬೇಕೆ ಅಂತ ನನ್ನ ಇವರು ಹಿಡಿದು ಚಚ್ಚಿವರು...."

ಹೇಳುತ್ತ ನೀಲಿಗೆ ದುಃಖ ಉಮ್ಮಳಿಸಿ ಬಂತು. ಬೀರಮ್ಮ ಅವಳ ಕೈ, ಮುಖ ಊದಿರುವುದನ್ನು ನೋಡಿ,

"ಏನಾಯಿತವ್ವಾ?" ಎಂದಳು.

ನೀಲಿ ನೆಟಿಕೆ ಮುರಿದು "ಇವರ ಮನೆ ಆಳಾಗ. ನಿನ್ನೆ ಹಿಡಿದು ಚಚ್ಚಿದ್ದರಿಂದ ಇಂಗಾಗದೆ" ಎಂದಳು.

"ಹಾಗಾದರೆ ಬರಾಕಿಲ್ವಾ?"

"ಇಲ್ಲ ಕಣವ್ವ. ಇವರ ವಿದ್ದೇಗೆ ಇಲ್ಲಿಂದಲೇ ನಮಸ್ಕಾರ."

ಬೀರಮ್ಮನ ಪರಿವಾರ ಮುಂದುವರೆದು ರಾಮಕ್ಕನ ಮನೆಯ ಮುಂದೆ ನಿಂತಿತು.

"ರಾಮಕ್ಕಾ...."

ರಾಮಕ್ಕನ ಬದಲು ಅವಳ ಮಾವ, ಮುದುಕ ಕೋಲೂರಿಕೊಂಡು ಹೊರಗೆ ಬಂದ.

ಬೀರಮ್ಮ ಕೇಳಿದಳು: "ರಾಮಕ್ಕ ಎಲ್ಲಣ್ಣಾ?"

"ನಿನ್ನೆ ನಂಜ ಅವಳು ಒತ್ತಾಗಿ ಬಂದಿದ್ನ ನೋಡಿ 'ನೀನು ಒತ್ತಾಗಿ ಬಂದೆ. ನನಗೆ ಉಣ್ಣಾಕೆ ತಡ ಆಯ್ತು. ಓದು ಬರಾವು ಕಲ್ತು ಮಡ್ನಮ್ಮ ಆಗಬೇಕೆ' ಅಂತ ಹೊಡೆದ. ಅದ್ಕೆ ರಾಮಕ್ಕ ರಾತ್ರಿಯೇ ಮುನಿಸ್ಕೊಂಡು ತವರಿಗೆ ಓಡಿ ಹೋದಳು."

"ನಂಜಣ್ಣಾ ಎಲ್ಲಿ?"

"ಅವನು ಅವಳ್ನ ಮುನಿಸು ಇಳಿಸಿ ಕರಕೊಂಡು ಬರಾಕೆ ಓಗವ್ನೆ."

"ಸರಿ ಕಣಣ್ಣಾ. ನಾವು ಓಯ್ತೀವಿ" ಎನ್ನುತ್ತ ಬೀರಮ್ಮ ಮುಂದುವರೆದಳು.

ಮಾರನೆಯ ದಿನ ಸಂಜೆ ಎಂಟು ಜನ ಶಿಷ್ಯರ ಪೈಕಿ ಇಬ್ಬರು ಗೈರು ಹಾಜರಾಗಿದ್ದರು. ರಾಮಕ್ಕ, ನೀಲಮ್ಮ ಬಂದಿರಲಿಲ್ಲ. ಮೀರ ಕೆಲಸದಿಂದ ಬಳಲಿದ್ದ ಬೀರಮ್ಮನ ಮುಖ ನೋಡಿ ಕೇಳಿದಳು:

"ಬೀರಮ್ಮ, ರಾಮಕ್ಕ ನೀಲಮ್ಮ ಯಾಕೆ ಬರಲಿಲ್ಲ?"

ಬೀರಮ್ಮ ಸೋತ ದನಿಯಲ್ಲಿ ಹೇಳಿದಳು: "ರಾಮಕ್ಕನ ಗಂಡ ನಿನ್ನೆ ಮನೆಗೆ ಓದ ಕೂಡಲೆ 'ನೀನೇನು ಓದುಬರಾವು ಕಲ್ತು ದೊರೆಸಾನಿ ಆಗ್ಬೇಕೆ' ಅಂತ ಯಂಡ್ತೀನ ಚಚ್ಚಿದನಂತೆ. ಅದ್ಕೆ ರಾಮಕ್ಕ ಮುನಿಸ್ಕೊಂಡು ಅವರಪ್ಪನ ಮನೇಗೆ ಓಡಿಹೋಗವ್ಳೆ."

ಮೀರಳ ಉತ್ಸಾಹಕ್ಕೆ ತಣ್ಣೀರೆರಚಿದಂತಾಯಿತು.

"ನೀಲಮ್ಮ ಯಾಕೆ ಬರಲಿಲ್ಲ?"

"ನೀಲಮ್ಮನ ಎಮ್ಮೆ ನಿನ್ನೆ ಚಂಜೆ ತಪ್ಪಿಸಿಕೊಂಡು ಓದ್ದು ಇನ್ನೂ ಅಟ್ಟೀ ತಾವ ಬಂದಿಲ್ಲ. ನಿನ್ನೆ ದೊಡ್ಡ ಜಗಳ ಆಗಿ, ಗಂಡ ಅವಳನ್ನ ಹೊಡೆದನಂತೆ."

"ಸರಿ" ಎಂದು ಮೀರ ಬಂದಿದ್ದವರಿಗೇ ಶಿಕ್ಷಣ ಕೊಡಲಾರಂಭಿಸಿದಳು. ತನ್ನ ವಿದ್ಯಾರ್ಥಿನಿಯರನ್ನು ಉತ್ತೇಜನಗೊಳಿಸುವುದಕ್ಕಾಗಿ ಆ ದಿನ ಕೊನೆಯಲ್ಲಿ ಹೇಳಿದಳು:

"ಒಂದು ತಿಂಗಳು ಪೂರ್ತಿ ಯಾರು ತಪ್ಪಿಸಿಕೊಳ್ಳದೇ ಬರುತ್ತಾರೋ ಅವರಿಗೆ ಒಂದು ಸೀರೆ ಬಹುಮಾನವಾಗಿ ಕೊಡುತ್ತೇನೆ."

ಮೀರಳ ಲಂಚದಾಸೆ ಸಹ ಅವಳ ಶಿಷ್ಯಂದಿರಲ್ಲಿ ಯಾವ ಪರಿಣಾಮವನ್ನೂ ಉಂಟುಮಾಡಲಿಲ್ಲ. ಸೂರ್ಯನ ಶಾಖ ತಗುಲಿದ ಹಿಮದ ಗಡ್ಡೆಯಂತೆ ಶಿಷ್ಯಂದಿರ ಗುಂಪು ಕರಗಿಹೋಯಿತು. ಒಬ್ಬೊಬ್ಬರು ಒಂದೊಂದು ಬಗೆಯ ಕಾರಣವನ್ನು

ಹೇಳಿ ಮೀರಳ ಶಿಷ್ಯವೃತ್ತಿಯನ್ನು ತ್ಯಜಿಸಿ ಹೋದರು.

ಎಂಟು ಮಕ್ಕಳ ತಾಯಿ ಚೆನ್ನಮ್ಮನಿಗೆ ಅವಳ ಸಂಸಾರದ ತಾಪತ್ರಯವೇ ಸಾಕಾಗಿತ್ತು. ಕಾಳಮ್ಮನ ಮನೆಯಲ್ಲಿ ಎಂಟು ಹತ್ತು ಎಮ್ಮೆಗಳಿದ್ದವು. ಅವುಗಳ ಮೇವನ್ನು ನೋಡಿಕೊಂಡು ಹಾಲು, ಮೊಸರು ಬೆಣ್ಣೆ ತಯಾರಿಸಿ ಊರಿಗೆ ತೆಗೆದು ಕೊಂಡು ಹೋಗಿ ಮಾರುವುದರಲ್ಲಿ ಅವಳ ಸಮಯ ಹೋಗುತ್ತಿತ್ತು. ಸೀರೆಯ ಆಸೆಯಿಂದಾಗಿ ಬೀರಮ್ಮ, ಕೆಂಪಮ್ಮ, ತಿಮ್ಮಮ್ಮ ಮಾತ್ರ ಬರುತ್ತಿದ್ದರು. ಅವರಿಗೆ ಅಕ್ಷರಾಭ್ಯಾಸ ಮಾಡಿಸಿ ಹೆಚ್ಚು ಕಡಿಮೆ ಒಂದು ತಿಂಗಳಾಗುತ್ತ ಬಂದರೂ, ಸರಿ ಯಾಗಿ ನಾಲ್ಕು ಅಕ್ಷರಗಳನ್ನು ಬರೆಯಲು ಬರುತ್ತಿರಲಿಲ್ಲ. ತಿದ್ದಿಹಾಕಿದ ಅಕ್ಷರ ಗಳನ್ನೇ ಪುನಃ ಬರೆದುಕೊಡಲು ಮೀರಳಿಗೆ ಬೇಸರವಾಗುತ್ತಿತ್ತು. ಹೊಸ ಅಕ್ಷರ ಕಲಿತರೆ ಹಿಂದಿನ ಅಕ್ಷರಗಳನ್ನು ಮರೆಯುತ್ತಿದ್ದರು.

ಒಂದು ದಿನ ಮೀರ ತನ್ನ ಸಹನೆಯನ್ನು ಕಳೆದುಕೊಂಡು ಕೇಳಿದಳು:

"ಬೀರಮ್ಮ, ಇಷ್ಟು ದಿನವಾದರೂ ಅಕ್ಷರ ಕಲಿಯಲಿಲ್ಲ. ಬೇಗ ಬರೆಯು ವುದನ್ನು ಕಲಿತುಕೊಳ್ಳಿ."

ಬೀರಮ್ಮ ಸ್ಲೇಟ್, ಬಳಪ ಕೆಳಗಿಟ್ಟು "ಹೇಗೆ ಕಲಿತೇವು ತಾಯಿ? ಮಕ್ಕಳಾಗಿ ದ್ದಾಗ ಹೇಳಿಕೊಟ್ಟರೆ ಬಿರ್ರನೆ ಕಲೀತಿದ್ದೆವು. ಈಗ ನೂರೆಂಟು ಸಂಸಾರದ ತಾಪತ್ರ. ನಾವು ಅದರ ಕಡೆ ಮನಸ್ಸು ಕೊಡಾಣ್ವೇ, ಇಲ್ಲಾ ಬರಾವು ಕಲಿಯೋಣ್ವೇ? ಗಿಡವಾಗಿ ಬಗ್ಗಲಿಲ್ಲ. ಈಗ ಬಗ್ಗೋಕಾಯ್ತದೇನು?" ಎಂದಳು.

ಅಕ್ಷರಗಳನ್ನು ವಿಚಿತ್ರವಾಗಿ ಬರೆಯುತ್ತಿದ್ದ ತಿಮ್ಮಮ್ಮನಿಗೆ

"ಎಷ್ಟು ಸಲ ಹೇಳಬೇಕು ತಿಮ್ಮಮ್ಮ? ನೀನು ತಿದ್ದುತ್ತಿರುವ ರೀತಿಯೇ ತಪ್ಪು. ಇನ್ನೂ ನಿನಗೆ ಒಂದು ಅಕ್ಷರ ಸಹ ಬರೆಯೋಕೆ ಬರಲ್ಲ" ಎಂದಳು.

"ಅಯ್ಯೋ ಬಿಡಿ ತಾಯಿ. ನಮಗೆ ಬಂದದ್ದು ನಮಗೆ. ನಾನು ಈಗ ಬೇಕಾ ದರೆ ನೂರು ಚೌರಿಗೆ ನೀರು ಸೇದಾಕ್ತೀನಿ. ಎಲ್ಲಿ ನೀವು ಹತ್ತು ಚೌರಿಗೆ ಸೇದಿ ನೋಡಾವ."

ತಿಂಗಳು ಮುಗಿದೊಡನೆ ಮೀರ ನೂಲಿನ ಸೀರೆಗಳನ್ನು ತರಿಸಿ ಮೂವರಿಗೂ ಕೊಟ್ಟಳು. ಮಾರನೆಯ ದಿನದಿಂದ ಅವರೂ ಬರಲಿಲ್ಲ.

ಮೀರ ಒಂದು ತಿಂಗಳಿನೊಳಗೆ ತನ್ನ ಶಾಲೆಯನ್ನು ಮುಚ್ಚಬೇಕಾಯಿತು.

ತಾನಾಗಿ ವಿದ್ಯೆ ಕಲಿಸಲು ಮುಂದುವರಿದರೂ ರೈತರ ಹೆಂಗಸರು ಹಿಂಜರಿದು ತನ್ನಾಸೆಗೆ ಬೆಂಬಲ ನೀಡದಿದ್ದುದನ್ನು ನೋಡಿ ಮೀರ ಮೊದಲು ಕುಪಿತಳಾದಳು.

ಸಂಜೆ ಐದು ಅಥವಾ ಆರು ಗಂಟೆಗೆ ಬಂದು ವಿದ್ಯೆ ಕಲಿಯಲು ಯಾವ ಅಡ್ಡಿ? ಅವರಿಗೆ ಬುದ್ಧಿಯಿಲ್ಲವೆಂದು ಅವಳಿಗೆ ಮೊದಲು ತೋರಿದರೂ, ಅನಂತರ ಕೋಪವಿಳಿದ ಮೇಲೆ ಅವರ ಮನೆಯ ಸನ್ನಿವೇಶ, ವಾತಾವರಣ ವಿಮರ್ಶಿಸ

ತೊಡಗಿದಳು.

ಬೆಳಗಿನ ಜಾವದಲ್ಲಿ ತಾನು ಮೈಮರೆತು ನಿದ್ರಿಸುತ್ತಿರುವಾಗಲೇ ಈ ಶ್ರಮಜೀವಿಗಳು ಹಾಸಿಗೆ ಬಿಟ್ಟೆದ್ದು ಮನೆಗೆಲಸದಲ್ಲಿ ತೊಡಗುವರೆಂಬುದು ಅವಳಿಗೆ ತಿಳಿದಿತ್ತು. ಮನೆಯ ಕೆಲಸ ಮುಗಿಸಿ, ಹಸು, ಎಮ್ಮೆಗಳನ್ನು ಮೇಯಿಸಲು ಹುಡುಗರನ್ನು ಹೊರಗೆ ಕಳುಹಿಸಿ, ಅಡಿಗೆ ಮಾಡಿ, ಬುತ್ತಿಯನ್ನು ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ಗಂಡಂದಿರಿಗೆ ಕೊಡಲು ಹೋಗುತ್ತಿದ್ದ ದೃಶ್ಯವನ್ನು ಮೀರ ನೆನೆದಳು.

ಹಿಂದೆ ಒಂದು ಸಲ ಮೀರ ಯಾವುದೋ ಹಬ್ಬದಲ್ಲಿ ದೇವಸ್ಥಾನಕ್ಕೆ ಹೊರಟಿದ್ದಳು. ಹೊಸದಾಗಿ ತರಿಸಿಕೊಂಡಿದ್ದ ಬಿನ್ನಿ ಜಾರ್ಜೆಟ್ ಸೀರೆ ಅವಳ ತೆಳು ದೇಹವನ್ನು ಬಳಸಿತ್ತು. ಕಿವಿಗಳಿಗೆ ಲೋಲಕ್ಕು ಹಾಕಿ, ಪೆಟ್ಟಿಗೆಯಲ್ಲಿರಿಸಿದ್ದ ಚಿನ್ನದ ಸರವನ್ನು ಹಾಕಿಕೊಂಡು ಅಡಿಯಿಂದ ಮುಡಿಯವರೆಗೂ ಅಲಂಕರಿಸಿಕೊಂಡು ಬೆಳ್ಳಿಯ ತಟ್ಟೆಯಲ್ಲಿ ಪೂಜಾ ಸಾಮಗ್ರಿಗಳನ್ನಿರಿಸಿಕೊಂಡು ಮೀರ ದೇವರ ಗುಡಿಗೆ ಹೊರಟಳು.

ಅದೇ ಸಮಯದಲ್ಲಿ ತಲೆ ಹಣ್ಣಾದ ಬೀರಮ್ಮ, ಚಿಂದಿಯ ವಸ್ತ್ರವನ್ನುಟ್ಟು ಆ ತುಂಡಿನಲ್ಲಿ ದೇಹವನ್ನು ಮರೆ ಮಾಡಿಕೊಂಡು, ತಲೆಯ ಮೇಲೊಂದು ಹರಕಲು ಬುಟ್ಟಿ ಇಟ್ಟುಕೊಂಡು ಅದರಲ್ಲಿ ತನ್ನ ಮಗನಿಗೆ ಊಟವಿರಿಸಿಕೊಂಡಿದ್ದಳು. ಮೀರಳನ್ನು ನೋಡಿ ಬೀರಮ್ಮ ಒಂದು ಗಳಿಗೆ ನಿಂತು,

"ತಾಯೀ, ಗುಡೀಗೆ ಹೊರಟಿರಾ?" ಎಂದಳು.

"ಹ್ದೂ. ನೀನೆಲ್ಲಿಗೆ ಹೋಗ್ತಿದೀಯಾ?"

"ನನ್ನ ಮಗನಿಗೆ ಊಟ ಕೊಡೋಕೆ ಗದ್ದೆ ತಾವು ಓಯ್ತಿದೀನಿ."

"ಕೈಲು ಕುಡುಗೋಲು ಬೇರೆ ಇದೆ...."

ಮೀರ ಅವಳ ಕೈಯಲ್ಲಿದ್ದ ಕುಡುಗೋಲಿನ ಕಡೆ ನೋಡಿದಳು.

"ಊಟ ಕೊಟ್ಟ ಮ್ಯಾಗೆ ದನಕ್ಕೆ ಹುಲ್ಲು ತರಬೇಕು."

"ಮನೆಗೆ ಎಷ್ಟು ಗಂಟೆ ಹೊತ್ತಿಗೆ ಬರ್ತೀಯಾ?"

"ಐದು ಗಂಟೆ ಹೊತ್ತಿಗೆ ಬತ್ತೀನಿ."

"ಹ್ದೂ. ಹೋಗು. ಪಾಪ! ಅನ್ನ, ಸಾರು ಆರಿಹೋಗಬಹುದು."

ಮೀರ ಮುಂದೆ ಹೆಜ್ಜೆ ಇಟ್ಟಳು. ಬೀರಮ್ಮ ಬಾಯಲ್ಲಿದ್ದ ಎಲೆ, ಅಡಿಕೆ ರಸವನ್ನು ಉಗಿದು ಹೇಳಿದಳು:

"ಅನ್ನ ಎಲ್ಲಿಂದ ಬಂತವ್ವಾ? ಒಂದು ಇಟ್ಟಿನ ಮುದ್ದೆ, ಉಪ್ಪೆಸರು ಅದೆ."

ಮೀರಾ ಬೀರಮ್ಮನ ದವಡೆಯನ್ನು ನೋಡಿ "ನೀವು ಸದಾ ಎಲೆ ಅಡಿಕೆ ಅಗಿಯಲು ಕಾರಣವೇನು?" ಎಂದಳು.

"ಎಲೆ ಅಡಿಕೆ ಆಕ್ಕೊಂಡರೆ ಅಸಿವ್ರ ಮುಚ್ಕೋಯ್ತದೆ ಕಣವ್ವಾ. ಅಸಿವಾದಾಗಲೆಲ್ಲಾ ನಾವು ಏನು ತಿನ್ನೋಕಾಯ್ತದೆ? ಅದ್ಕೆ ಸದಾ ಆಕ್ಕೋತೀವಿ."

ಮೀರ ತನ್ನ ಸೀರೆಯ ಜರತಾರಿಯಂಚು ನೆಲಕ್ಕೆ ತಗುಲಿ ಕೊಳೆಯಾಗಬಹುದೆಂದು ಅಂಜಿ ಎಡಗೈಯಿಂದ ನೆರಿಯನ್ನು ಸ್ವಲ್ಪ ಎತ್ತಿಹಿಡಿದು ಬೀರಮ್ಮನ ಕಡೆ ನೋಡಿದಳು. ಅವಳ ಗೆಳತಿ ರಾಜೇಶ್ವರಿ ಶೋಕಿಗಾಗಿ ಮೈ ಕಾಣುವ ಚೋಲಿ ತೊಟ್ಟರೆ ಬೀರಮ್ಮನು ಬಡತನದಿಂದಾಗಿ ತುಂಡು ರವಿಕೆ ತೊಟ್ಟಿದ್ದಳು. ಮೀರ ನೆರಿಯನ್ನು ಸ್ವಲ್ಪ ಎತ್ತಿಹಿಡಿದು ಮುಂದೆ ಸಾಗಿದಳು. ಬೀರಮ್ಮ ಆ ತುಂಡು ಚಿಂದಿಯನ್ನೇ ಮತ್ತಷ್ಟು ಜಗ್ಗಿ ಎಳೆದು ಸೆರಗು ಉದ್ದ ಮಾಡಿಕೊಳ್ಳುತ್ತ ವಿರುದ್ಧ ದಿಕ್ಕಿನಲ್ಲಿ ಹೋದಳು.

ಮೀರ ಆ ದಿನ ಬೀರಮ್ಮನ ಬಡತನವನ್ನು ಗಮನಿಸಿದ್ದಳು. ಆ ತುಂಡು ಬಟ್ಟೆ, ತುಂಡು ರವಿಕೆ, ಆ ಊಟ, ಆ ದುಡಿಮೆ-ಆ ಜೀವಿಗಳಿಗೆ ಬದುಕಿನಲ್ಲಿ ಸ್ವಲ್ಪವಾದರೂ ಸುಖವಿದೆಯೇ?

ಬೀರಮ್ಮನ ಮುಖ ಮಿತಿಮೀರಿದ ದುಡಿಮೆಯಿಂದ ಕಪ್ಪಾಗಿ, ರಸಹೀನವಾಗಿ ಬೆವರು ಬರುತ್ತಿದ್ದರೆ, ಮೀರಳ ಮುಖ ಮನೆಯಲ್ಲೇ ಕುಳಿತು, ಸೂರ್ಯನ ಕಿರಣಗಳಿಂದ ದೂರವಾಗಿ ಬಿಳಿಚಿಕೊಂಡು, ಸ್ನೋ ಪೌಡರ್ ಬಳಿಯುವಿಕೆಯಿಂದ ಬೆವರುತ್ತಿತ್ತು.

ಒಂದು ಗಳಿಗೆ ವಿಶ್ರಾಂತಿ ಸಿಕ್ಕಿದರೆ ಹಾಯಾಗಿ ಕಾಲು ನೀಡಿಕೊಂಡು ಕುಳಿತುಕೊಳ್ಳಲು ಅವರು ಹಂಬಲಿಸುವಾಗ ತಾನು ಅವರಿಗೆ ವಿದ್ಯೆ ಕಲಿಸುವುದು ಸರಿಯೇ?

ಅವಳ ಶಾಲೆಯ ವಿಚಾರ ಕುಳಿತು ಹಾಸ್ಯ ಮಾಡುವುದೇ ಶಾಮುವಿನ ಕೆಲಸವಾಯಿತು.

"ನಾನು ಹೇಳಲಿಲ್ಲವೇ ಮೇಡಂ. ಇನ್ನು ನನಗೆ, ರಾಮಲಕ್ಷ್ಮಣನಿಗೆ ಪಾಠ ಶುರು ಮಾಡು" ಎಂದ ಎತ್ತಿನ ಮೈ ಸವರುತ್ತ ಎತ್ತಿನ ಕೊಂಬನ್ನು ಹಿಡಿದೆಳೆದು,

"ಬಾರೋ ಲಕ್ಷ್ಮಣ, ಮೇಡಂ ಹತ್ತಿರ ಪಾಠ ಹೇಳಿಸಿಕೊಳ್ಳೋಣ. ಅಕ್ಷರ ತಿದ್ದಿ ಹಾಕ್ತಾರೆ" ಎಂದ.

ಮೀರ ಕೋಪವನ್ನು ನುಂಗಿ ಅಲ್ಲಿಯೇ ಕುಳಿತಿದ್ದಳು. ಕೈಯಲ್ಲಿ ಹಿಡಿದಿದ್ದ ಜೋಳದಕಡ್ಡಿಯನ್ನು ಅಗಿಯುತ್ತ ಶಾಮುವಿನ ಮಾತು ತನಗೆ ಕೇಳಲಿಲ್ಲ ಎಂಬಂತೆ ನಟಿಸಿದಳು.

"ನಾಳೆಯಿಂದಾನೇ ಪಾಠ ಶುರು ಮಾಡ್ತಾರಂತೆ. ನಾವೆಲ್ಲಾ ಸಿದ್ಧವಾಗಿರೋಣ. ಇಲ್ಲದಿದ್ದರೆ ಮೇಡಂ ಬಯ್ಯುತ್ತಾರೆ."

ಮೇವಿಗೆ ಹೋಗಿ ಹಿಂದಿರುಗಿದ ಕಾಳಿ, ಕಪಿಲೆ, ತುಂಗೆ, ಗೋಪಿ ಹಸುಗಳು ತಮ್ಮ ಕರುಗಳನ್ನು ನೆನೆದು ರಭಸದಿಂದ ಒಳಗೆ ನುಗ್ಗಿ ಬಂದವು. ಮೀರಾ ಬೆದರಿ

ಬಿಲಿ ಹಿಡಿದಿದ್ದ ಕಡ್ಡಿಯನ್ನು ಬಿಸಾಡಿ ಎದ್ದು ನಿಂತಳು. ಶಾಮು ಅವುಗಳನ್ನು ಹಿಡಿದು ಕಟ್ಟಿಹಾಕಿ,

"ಮೇಷ್ಟರಿಗೆ ಹೆದರುವ ಶಿಷ್ಯರನ್ನು ನೋಡಿದ್ದೇನೆ. ಆದರೆ ಶಿಷ್ಯರಿಗೆ ಹೆದರುವ ಮೇಷ್ಟರನ್ನು ನೋಡಿದ್ದು ಇವತ್ತೆ" ಎಂದ.

ಮೀರ ಪಕ್ಕದಲ್ಲಿದ್ದ ಹುಲ್ಲಿನ ಹೊರೆಯನ್ನು ಕೈಲೆತ್ತಿ ಶಾಮುವಿನ ಮೇಲೆ ಎಸೆದು ಒಳಗೆ ಹೊರಟುಹೋದಳು. ಹುಲ್ಲಿನ ಕಂತೆ ಬಿಚ್ಚಿಹೋಗಿ ಶಾಮುವಿನ ದೇಹವೆಲ್ಲಾ ಹುಲ್ಲಿನಲ್ಲಿ ಮುಚ್ಚಿತು. ಶಾಮು ನಗುತ್ತ ಹುಲ್ಲನ್ನು ಕೊಡವಿಕೊಂಡ.

ಮೀರ ಪುಸ್ತಕವೊಂದನ್ನು ಕೈಯಲ್ಲಿ ಹಿಡಿದು ಕುಳಿತಿದ್ದಳು. ಶಾಮು ಒಳಗೆ ಬಂದರೂ ತಲೆಯೆತ್ತಿ ನೋಡಲಿಲ್ಲ. ಶಾಮು ಅವಳ ಪುಸ್ತಕ ಕಿತ್ತುಕೊಂಡು

"ಕೋಪ ಬಂತೇ ಮೀರಾ?" ಎಂದ.

"........"

"ಕೋಪಿಸಿಕೊಳ್ಳಬೇಡ. ನೀನೇನು ಪಾಠ ಕಲಿಸುವುದಿದ್ದರೂ ನನಗೆ ಕಲಿಸು. ಆದರೆ ನನಗೆ ಅಕ್ಷರಾಭ್ಯಾಸ ಬೇಡ. ಪ್ರೇಮದಭ್ಯಾಸ ಸಾಕು."

"ನಾನು ಯಾವುದನ್ನೂ ನಿಮಗೆ ಕಲಿಸುವುದಿಲ್ಲ. ನೀವು ನನ್ನನ್ನು ಮಾತ ನಾಡಿಸಬೇಡಿ."

"ಅಲ್ಲಿಗೆ ನನ್ನ ಗತಿ ಮುಗಿದಂತೆಯೇ ಸರಿ. ಇನ್ನು ಮೇಲೆ ಖಂಡಿತ ನಿನ್ನ ಹಾಸ್ಯ ಮಾಡುವುದಿಲ್ಲ. ಒಂದು ಸಲ ನಗುವ ಕೃಪೆ ಮಾಡು."

ಶಾಮು ಅವಳ ಶಿಕ್ಷಣದ ಬಗ್ಗೆ ಪುನಃ ಉಸಿರೆತ್ತುವುದಿಲ್ಲವೆಂದು ಆಣೆ ಮಾಡಿದ ನಂತರವೇ ಮೀರ ಅವನೊಡನೆ ಮಾತನಾಡಿದುದು.

ಅವಳ ಜೀವನ ಮೋಡ ಕವಿದ ಆಗಸದಂತಿತ್ತು. ದಿನ ಕಳೆಯುವುದೇ ಪ್ರಯಾಸವಾಯಿತು ಅವಳಿಗೆ. ಒಂದೆರಡು ದಿನ ನೂಲುವ ಮನಸ್ಸು ಮಾಡಿ ಚರಕ ತರಿಸಿಕೊಂಡಳು. ಎರಡೇ ದಿನಗಳಲ್ಲಿ ಚರಕ ಅಟ್ಟವನ್ನೇರಿತು. ಯಾವಾಗಲೂ ಗಲ್ಲಕ್ಕೆ ಕೈಕೊಟ್ಟು ಯೋಚಿಸುತ್ತ ಕುಳಿತುಕೊಳ್ಳುವುದೇ ಅವಳ ಕೆಲಸವಾಯಿತು. ಹಳ್ಳಿಯ ಜೀವನ ತನಗೆ ಒಗ್ಗದೇ ಹೋದುದು ಮಾತ್ರವಲ್ಲದೆ ತನ್ನ ಮನಸ್ಸಿಗೂ, ಶಾಮುವಿನ ಮನಸ್ಸಿಗೂ ಅಜಗಜಾಂತರ ಅಂತರವಿರುವುದನ್ನು ಮೀರಾ ಗಮನಿಸಿದ್ದಳು. ಇಬ್ಬರ ಮನಸ್ಸೂ ವಿರುದ್ಧ ದಿಕ್ಕಿನಲ್ಲಿ ಓಡುತ್ತಿದ್ದವು. ಶಾಮುವಿನ ಆಸೆ, ಆಕಾಂಕ್ಷೆ, ಅಭಿರುಚಿ, ಮೀರಳ ಆಸೆ ಆಕಾಂಕ್ಷೆಗಳಿಂದ ಸಂಪೂರ್ಣವಾಗಿ ಬೇರೆಯಾಗಿತ್ತು. ಹೊಲ, ಗದ್ದೆ, ಹಸು, ಕರುಗಳು ಅವನ ಬದುಕಿನ ಜೀವಾಳವಾಗಿ ದ್ದವು. ಅವನ ಜೀವನದ ಆಧಾರಸ್ತಂಭಗಳು ಮೀರಳಿಗೆ ಅರ್ಥವಿಲ್ಲದ ವಸ್ತುಗಳಾ ಗಿದ್ದವು. ಒಂದು ಹಸುವಿನ ಮೈ ಸವರುತ್ತಲೋ ಕರುಗಳೊಡನೆ ಚೆಲ್ಲಾಟವಾಡು ತ್ತಲೋ ಶಾಮು ಗಂಟೆಗಟ್ಟಲೆ ಕಾಲ ಕಳೆಯುತ್ತಿದ್ದ. ಹಸಿರು ತುಂಬಿದ ಗದ್ದೆಯ

ಬದಿಯಲ್ಲಿ ನಿಂತು, ಎದೆಯ ಮೇಲೆ ಕೈಕಟ್ಟಿ, ಪ್ರಕೃತಿಯ ಸೊಬಗನ್ನು ನೋಡುತ್ತ, ಪಕ್ಕದಲ್ಲಿ ನಿಂತಿದ್ದ ಮೀರಳನ್ನೂ ಮರೆತುಬಿಡುತ್ತಿದ್ದ. ಮಣ್ಣಿನ ಮಗ ಶಾಮು ಮೀರಳಿಗೆ ಒಂದು ಸಮಸ್ಯೆಯಾಗಿದ್ದಂತೆಯೇ ಪಟ್ಟಣದ ಬೆಡಗಿನ ಹುಡುಗಿ ಮೀರ, ಶಾಮುವಿಗೆ ಒಂದು ದೊಡ್ಡ ಒಗಟೆಯಾಗಿದ್ದಳು.

ಮೀರ ಸಂಘಜೀವಿ ತನ್ನ ಸುತ್ತು ಯಾವಾಗಲೂ ಗೆಳತಿಯನ್ನು ಬಯಸು ತ್ತಿದ್ದಳು. ಶಾಮುವಾದರೋ ಏಕಾಂತಪ್ರಿಯ. ಜೀವವಿಲ್ಲದ ಜಡ ಪುಸ್ತಕಗಳನ್ನು ಹಿಡಿದು ಅವಳು ಕಾಲ ಕಳೆಯುವುದನ್ನು ನೋಡಿ ಆಶ್ಚರ್ಯವಾಗುತ್ತಿತ್ತು. ಒಂದು ಗಳಿಗೆ ಪುಸ್ತಕ ಹಿಡಿದು ಕುಳಿತರೆ, ಕುಳಿತ ಕಡೆಯೇ ಶಾಮು ತೂಕಡಿಸುತ್ತಿದ್ದ. 'ಕೈಲಿ ಪುಸ್ತಕ ಇರುವಾಗ ನಿದ್ದೆಯಾದರೂ ಹೇಗೆ ಬರುತ್ತದೆ' ಎಂದು ಮೀರ ಅಚ್ಚರಿ ಪಡುತ್ತಿದ್ದಳು.

ಹೆಂಗಸಾದವಳು ಗಂಡನಿಂದ ಏನನ್ನು ನಿರೀಕ್ಷಿಸಬಹುದೋ, ಅಷ್ಟನ್ನೂ ತಾನು ಮೀರಳಿಗೆ ಕೊಟ್ಟಿರುವೆನೆಂಬ ಭಾವನೆ ಶಾಮುವಿಗೆ. ಅವಳು ಕೇಳಿದ ಬಟ್ಟೆ, ಒಡವೆ, ಪುಸ್ತಕಗಳನ್ನು ಅವನು ಕೂಡಲೇ ತೆಗೆದುಕೊಡುತ್ತಿದ್ದ. ಗಂಡನ ಅಭಿರುಚಿಗೆ ಹೊಂದಿಕೊಳ್ಳುವುದೆ ಹೆಂಗಸರ ಕರ್ತವ್ಯವೆಂದು ಅವನ ದೃಢನಂಬಿಕೆ. ತಾನು ಎಲ್ಲಾ ಬಗೆಯ ಸೌಕರ್ಯಗಳನ್ನೂ ಹೆಂಡತಿಗೆ ಒದಗಿಸಿಕೊಟ್ಟಿದ್ದರೂ, ಅವಳ ಮನಸ್ಸಿಗೆ ಶಾಂತಿ, ಸಮಾಧಾನ ಇಲ್ಲವೆಂಬ ಸಂಗತಿ ಶಾಮುವಿಗೆ ತಿಳಿದಿತ್ತು. ಆದರೆ ಅದರ ಕಾರಣವನ್ನು ತಿಳಿಯಲು ಅವನು ಆತುರ ಪಡಲಿಲ್ಲ. ಪಟ್ಟಣದ ಜೀವ ಹಳ್ಳಿಗೆ ಇನ್ನೂ ಒಗ್ಗಿಲ್ಲ. ಒಗ್ಗಿದರೆ ಸರಿ ಹೋಗಬಹುದು ಎಂದುಕೊಂಡು ಉದಾಸೀನ ನಾಗಿದ್ದ. ಯಾವಾಗಲೂ ಕನಸು ಕಾಣುವ ಭಾವಜೀವಿ ಮೀರಳಿಂದ ಶಾಮು ದೂರವಾಗಿದ್ದ.

ಮೀರಳಿಗೆ ತನ್ನಾಸೆ ತೀರುವುದು ಅಸಾಧ್ಯ ಎಂದು ಮನವಟ್ಟಾದರೂ, ಅದರ ಹಂಬಲಿಕೆ ತಪ್ಪಲಿಲ್ಲ. ಮರಳುಕಾಡಿನ ಪ್ರಯಾಣಿಕ, ನೀರು ಸಿಕ್ಕುವ ಭರವಸೆ ಇಲ್ಲದಿದ್ದರೂ, ನೀರಿಗಾಗಿ ಹಂಬಲಿಸುವಂತೆ ಅವಳ ಮನಸ್ಸು ಸಂಸಾರಬಂಧನ ದಿಂದ ಆಗಸಕ್ಕೆ ಹಾರಲು ಪ್ರಯತ್ನಿಸುತ್ತಿತ್ತು. ಯಾಂತ್ರಿಕ ಜೀವನದಿಂದ ಮೀರಳಿಗೆ ಹುಚ್ಚು ಹಿಡಿಯುವಂತಾಯಿತು. ಪ್ರತಿನಿತ್ಯವೂ ಒಂದೇ ರೀತಿಯ ಕೆಲಸ, ನೀರಸ ವಾದ ಬದುಕು, ಅವಳ ಜೀವನದಲ್ಲಿ ನಿರುತ್ಸಾಹವನ್ನುಂಟು ಮಾಡಿದ್ದವು. ನಾಲ್ಕು ಜನ ಗಂಡು ಹುಡುಗರ ನಡುವೆ ಸ್ವೇಚ್ಛೆಯಾಗಿ ಗಂಡುಬೀರಿಯಂತೆ ಬೆಳೆದು, ತನ್ನಚುರುಕಾದ ಬುದ್ಧಿಯಿಂದ ಆಟ, ಪಾಠ, ಅಭಿನಯವನ್ನೆಲ್ಲಾ ವಶಪಡಿಸಿಕೊಂಡ ಮೀರ, ಈಗ ಮುಖಕ್ಕೆ 'ಪಟ್ಟಿ' ಹಾಕಿಸಿಕೊಂಡು, ಅಕ್ಕಪಕ್ಕದ ದೃಶ್ಯ ಕಣ್ಣಿಗೆ ಬೀಳ ದಂತೆ ನೇರವಾದ ದಾರಿಯನ್ನು ಮಾತ್ರ ನೋಡುತ್ತಾ ಓಡುವ ಕುದುರೆಯಂತೆ ಸಾಗಿದ್ದಳು. ಹಳ್ಳಿಯ ನೀರಸ ಜೀವನ ಮೀರಳ ಉಲ್ಲಾಸವನ್ನೇ ನುಂಗಿಬಿಟ್ಟಿತ್ತು.

ಮೀರ ತಾನು ಹೊಸದಾಗಿ ತರಿಸಿಕೊಂಡಿದ್ದ ಕಾದಂಬರಿಯೊಂದನ್ನು ಓದುವುದರಲ್ಲಿ ಮಗ್ನಳಾಗಿದ್ದಳು. ಆಗಲೇ ಸಂಜೆ ಐದು ಗಂಟೆಯಾಗಿತ್ತು. ಕಿಟಿಕಿಗಳಿಂದ ತೂರಿಬರುವ ಸೂರ್ಯನ ಕಿರಣಗಳ ಬೆಳಕಿನಲ್ಲಿ ಮೀರ ಕುಳಿತು ಓದುತ್ತಿದ್ದಳು. ಶಾಮು ಇನ್ನೂ ಮನೆಗೆ ಬಂದಿರಲಿಲ್ಲ. ಆದರೆ ಮೀರಳಿಗೆ ಈಗ ಶಾಮುವಿನ ನೆನಪು ಸಹ ಇರಲಿಲ್ಲ. ಪುಸ್ತಕ ಕೈಲಿ ಹಿಡಿದಾಗ ಪ್ರಪಂಚವೇ ಅವಳಿಂದ ದೂರವಾಗಿಬಿಡುತ್ತಿತ್ತು.

ಕ್ರಮೇಣ ಕತ್ತಲು ಆವರಿಸುತ್ತ ಬಂದಿತು. ಮುಂದೆ ಓದಲು ಅಕ್ಷರಗಳು ಕಾಣದಾಗುತ್ತಲೂ ಮೀರ ಎಚ್ಚೆತ್ತಳು. ಪುಸ್ತಕವನ್ನು ಮಡಿಸಿ, ಮೈಮುರಿದು

"ಇನ್ನೂ ಇವರೇಕೆ ಬರಲಿಲ್ಲ....." ಎಂದುಕೊಳ್ಳುತ್ತ ಗಡಿಯಾರವನ್ನು ನೋಡಿದಳು.

'ಅಬ್ಬ! ಆರೂವರೆಯಾಗಿದೆ. ಇನ್ನೂ ಬೋರ ಬಂದಿಲ್ಲವಲ್ಲಾ? ಅವನು ಬಂದು ದೀಪ ಹತ್ತಿಸಿದ್ದರೆ ತಾನು ಪುಸ್ತಕ ಓದಬಹುದಿತ್ತು" ಎನ್ನಿಸಿತು. ಬೋರನ ಸೋಮಾರಿತನವನ್ನು ನೆನೆದು ಮೀರ ಕುಪಿತಳಾದಳು. ಕಾದಂಬರಿಯಲ್ಲಿ ಒಂದು ಸ್ವಾರಸ್ಯದ ಪ್ರಸಂಗದವರೆಗೆ ಓದಿದ್ದಳು. ಮೀರ ಸ್ವಲ್ಪ ಹೊತ್ತು ಬೋರನಿಗಾಗಿ ಕಾದು ಅನಂತರ ಏಳು ಗಂಟೆಯಾಗುತ್ತಲೇ, ನೇತುಹಾಕಿದ್ದ ಲಾಂದ್ರವನ್ನು ಕೆಳಗಿಳಿಸಿ, ದೀಪ ಹತ್ತಿಸಿದಳು. ದೀಪ ಒಂದು ನಿಮಿಷ ಉರಿದು ತಟ್ಟನೆ ಆರಿಹೋಯಿತು.

"ಎಣ್ಣೆ ಇಲ್ಲವೇನೋ. ಥೂ, ಇನ್ನು ಕತ್ತಲೇಲಿ ನಾನು ಎಣ್ಣೆ ಎಲ್ಲಿ ಹುಡುಕಲಿ...."

ಮೀರ ಗೊಣಗುತ್ತ ಎಣ್ಣೆಯನ್ನು ಹುಡುಕತೊಡಗಿದ್ದಳು.

"ವೆಂಕಮ್ಮನವರೇ, ಸೀಮೆ ಎಣ್ಣೆ ಎಲ್ಲಿದೆ?"

"ದನದ ಕೊಟ್ಟಿಗೇಲಿರುವ ಗೂಡಿನಲ್ಲಿದೆ."

ಮೀರ ಕತ್ತಲೆಯಲ್ಲಿ ಕೊಟ್ಟಿಗೆಯೊಳಗೆ ಹೋಗಲು ಹಿಂಜರಿದಳು. ಕೂಡಲೇ ಟಾರ್ಚಿನ ನೆನಪು ಬಂದಿತು. ಟಾರ್ಚನ್ನು ಹೊರಗೆ ತೆಗೆಯುತ್ತಿದ್ದಾಗಲೇ ಶಾಮು ಮನೆಗೆ ಬಂದ. ಮನೆ ಕತ್ತಲೆಯಲ್ಲಿ ಮುಳುಗಿರುವುದನ್ನು ನೋಡಿ,

"ಮೀರಾ, ದೀಪ ಹತ್ತಿಸು" ಎಂದ.

"ಎಣ್ಣೆ ಮುಗಿದುಹೋಗಿದೆ. ಹಾಳಾದ ಬೋರ ಇನ್ನೂ ಬಂದೇ ಇಲ್ಲ. ಕೊಟ್ಟಿಗೇಲಿ ಎಣ್ಣೆ ಇದೆಯಂತೆ, ತರಬೇಕು.... ಟಾರ್ಚು ತಗೊಳ್ಳಿ."

ಆದರೆ ಅವಳ ಮಾತುಗಳನ್ನು ಕೇಳಲು ಶಾಮು ಅಲ್ಲಿರಲಿಲ್ಲ. ಅವನು ಆಗಲೇ ಆ ಕತ್ತಲೆಯಲ್ಲಿ ಎಣ್ಣೆ ತರಲು ಕೊಟ್ಟಿಗೆಗೆ ಹೋಗಿದ್ದ. ಎಣ್ಣೆ ತಂದು ದೀಪ ಹತ್ತಿಸಿ,

"ಮೀರಾ, ನೀನು ಊಟ ಮಾಡಿ ಮಲಗಿಬಿಡು. ನನಗೆ ಕಾಯಬೇಡ" ಎಂದ.

ಮೀರ ದೀಪದ ಬೆಳಕಿನಲ್ಲಿ ಶಾಮುವಿನ ಮುಖದಲ್ಲಿದ್ದ ಗಂಭೀರತೆಯನ್ನು ಗಮನಿಸಿದಳು. ಯಾವಾಗಲೂ ನಗುತ್ತಿದ್ದ ಅವನ ಕಣ್ಣುಗಳು, ಈಗ ನೋವು ಬೆರೆತ ಗಾಂಭೀರ್ಯದ ತೆರೆ ಹಾಕಿಕೊಂಡಿದ್ದವು. ಮೀರ ಅವನ ಹಣೆಯ ಮೇಲೆ ಕೈಯಿಟ್ಟು,

"ಹುಷಾರಾಗಿದೀರಿ ತಾನೇ? ಮುಖ ಏನೋ ಒಂದು ತರಹವಾಗಿದೆಯಲ್ಲಾ" ಎಂದಳು.

"ನಾನು ಹುಷಾರಾಗಿದೀನಿ. ಬೋರನ ಚಿಕ್ಕ ಮಗುವಿಗೆ ಬೆಳಗಿನಿಂದಲೂ ಎಳೆತ ಬಂದುಬಿಟ್ಟಿದೆ. ಅದು ಬದುಕುವ ಹಾಗಿಲ್ಲ. ಈ ಹಳ್ಳಿಯಲ್ಲಿ ಡಾಕ್ಟರೂ ಸಿಗುವ ಹಾಗಿಲ್ಲ..."

"ಪಂಡಿತರಿದ್ದಾರಲ್ಲಾ...."

"ಪಂಡಿತರು ಊರಿನಲ್ಲಿಲ್ಲ."

ಮೀರಳ ಕೈ ಶಾಮುವಿನ ಹಣೆಯ ಮೇಲಿಂದ ಜಾರಿತು.

ಡಾಕ್ಟರಿಲ್ಲ! ಪಂಡಿತರಿಲ್ಲ!! ಆದರೆ ತಾನು ಮಾತ್ರ ಅಲ್ಲಿದ್ದಾಳೆ—ಹೃದಯದ ತುಂಬ ವೈದ್ಯಳಾಗುವ ಆಸೆ ತುಂಬಿಕೊಂಡು. ಏನು ಪ್ರಯೋಜನ? ಅಷ್ಟೊಂದು ಬುದ್ಧಿ, ಜಾಣ್ಮೆ ಎಲ್ಲವೂ ವ್ಯರ್ಥ. ಒಂದು ಮಗು ಸೆಳೆವಿನಿಂದ ಬದುಕಿಗಾಗಿ ಹೋರಾಡುವಾಗ ತಾನು ಏನು ಮಾಡಲೂ ಅಸಮರ್ಥಳು. ತಾನು ವೈದ್ಯಳಾಗಿದ್ದರೆ? ಮಾನವನ ಕಷ್ಟವನ್ನು ನಿವಾರಿಸಬಹುದಿತ್ತು. ದೇಹ ಯಾತನೆಯಿಂದ ಗೋಳಿಡುವ ಹೃದಯಗಳನ್ನು ಸಂತಯಿಸಬಹುದಾಗಿತ್ತು.

ಮೀರಳ ಕಣ್ಣು ನಿಸ್ಸಹಾಯಕತೆಯಿಂದ ತುಂಬಿಬಂದವು. ಅವಳಿಗೆ ತನ್ನ ಮೇಲೇ ದ್ವೇಷ ಉಕ್ಕಿಬಂದಿತ್ತು. ಶಾಮು ಅವಳ ಮುಖ ನೋಡಿ,

"ಮೀರಾ, ಅಳ್ತಿದೀಯಾ? ಈ ಪ್ರಪಂಚದಲ್ಲಿ ಸಾಯುವವರಿಗೆಲ್ಲಾ ಹೀಗೆ ಅಳುತ್ತಾ ಕುಳಿತರೆ ಆಯಿತು. ನಡಿ, ಊಟ ಮಾಡು. ನಾನು ಈ ದಿನ ಮನೆಗೆ ಬರುವುದು ತಡವಾಗುತ್ತದೆ."

ಮೀರಾ ದೈನ್ಯದಿಂದ ಕೇಳಿದಳು: "ನಾನೂ ನಿಮ್ಮೊಡನೆ ಬರ್‍ತೀನಿ."

ಶಾಮು ಆಶ್ಚರ್ಯದಿಂದ "ಎಲ್ಲಿಗೆ? ನಾನೀಗ ಬೋರನ ಮನೆಗೆ ಹೋಗುತ್ತೇನೆ. ನೀನು ಅಲ್ಲಿಗೆ ಬರಲು ಸಾಧ್ಯವೇ?"

"ಹ್ದೂ."

"ಬೇಡ, ಮೀರಾ. ನೀನು ಹೆದರಿಕೊಳ್ತೀಯಾ. ಈ ಮಗುವಿನ ಸಂಕಟವನ್ನು ನೀನು ನೋಡಲಾರೆ. ಆ ಗೋಳಿನ ದೃಶ್ಯ ನೀನೇಕೆ ನೋಡಬೇಕು...."

ಮೀರ ಕಾಲಿಗೆ ಚಪ್ಪಲಿ ಮೆಟ್ಟಿ, ಕೈಲಿ ಟಾರ್ಚು ಹಿಡಿದು,

"ನಡೆಯಿರಿ" ಎಂದು ಹೊರಬಾಗಿಲು ತೆಗೆದಳು.

"ಮೀರಾ...."

"ವೆಂಕಮ್ಮನವರೇ, ಮುಂಬಾಗಿಲು ಹಾಕಿಕೊಳ್ಳಿ" ಎಂದು ಮೀರ ಕೂಗಿ, ಗಂಡನ ಕೈಹಿಡಿದೆಳೆದು "ಬನ್ನಿ" ಎಂದಳು. ಶಾಮು ಏನು ಮಾಡಲೂ ತೋಚದೆ ಅವಳೊಡನೆ ಹೊರಟ.

ಅಮಾವಾಸ್ಯೆಯ ದಿನವಾದ್ದರಿಂದ ಹೊರಗೆ ಅಂಧಕಾರ ಕವಿದಿತ್ತು. ಮೋಡ ಮುಸುಕಿದ್ದುದರಿಂದ ನಕ್ಷತ್ರಗಳು ಸಹ ಮರೆಯಾಗಿದ್ದವು. ಹೊರಗೆ ಕಾಲಿಟ್ಟೊಡನೆ ಕೊರೆಯುವ ಗಾಳಿ ಅವರ ಮೇಲೆ ಬೀಸಿತು. ಮೀರ ಚಳಿಯಿಂದ ನಡುಗಿ "ಅಬ್ಬ!" ಎಂದಳು. ಅವಳ ಕೈಲಿದ್ದ ಟಾರ್ಚು ಸ್ವಲ್ಪ ದೂರ ಮಾತ್ರ ಬೆಳಕನ್ನು ಚೆಲ್ಲಿತ್ತು.

"ಚಳಿಯೇ ಮೀರಾ?"

"ಹ್ಞೂ."

"ನೀನು ಮನೆಗೆ ಹೋಗು. ನಾನು ಹೋಗಿ ಬರುತ್ತೇನೆ."

"ಊಹ್ಞೂ...."

ಮೀರ ಕಲ್ಲೊಂದನ್ನು ಎಡವಿ ತತ್ತರಿಸಿ ನಿಂತಳು.

ಶಾಮು ಅವಳ ಕೈ ಹಿಡಿದು "ಈಗ ನಡಿ" ಎಂದ.

ಇಬ್ಬರೂ ಮಾತಿಲ್ಲದೆ ನಡೆಯತೊಡಗಿದರು.

ದೂರದಲ್ಲಿ ಆಗಾಗ್ಗೆ ನಾಯಿಯೊಂದು ಬೊಗಳುತ್ತಿತ್ತು. ಮರಗಳ ಮೇಲಿನಿಂದ ಕೂಗುತ್ತಿದ್ದ ಗೂಬೆಯ ಸದ್ದು ಮೌನತೆಗೆ ವಿಕಾರದ ಸ್ವರೂಪವನ್ನಿತ್ತಿತ್ತು. ಮಳೆ ಹನಿ ಸಣ್ಣದಾಗಿ ಬೀಳಲು ಪ್ರಾರಂಭವಾಯಿತು.

"ಇನ್ನೂ ಎಷ್ಟು ದೂರವಿದೆ?" "ಇನ್ನೇನು ಸಿಕ್ಕಿಬಿಡ್ತು."

ಬೋರನ ಹಟ್ಟಿಯಲ್ಲಿ ಮಂಕಾದ ಬುಡ್ಡಿಯೊಂದು ಉರಿಯುತ್ತಿತ್ತು. ಅವನ ಗುಡಿಸಲು ತುಂಬಾ ಪುಟ್ಟದಾಗಿತ್ತು. ನಾಲ್ಕು ಜನ ಕುಳಿತುಕೊಳ್ಳಲು ಜಾಗವಿರುವಂತಹ ಮನೆಯಲ್ಲಿ ಬೋರ, ಅವನ ಹೆಂಡತಿ ರಾಚಮ್ಮ, ಎಂಟು ಜನ ಮಕ್ಕಳು ವಾಸವಾಗಿದ್ದರು.

ಶಾಮು ಹೊರಬಾಗಿಲಿನಲ್ಲಿ ನಿಂತು "ಬೋರಾ" ಎಂದು ಕೂಗಿದ.

"ಬನ್ನಿ, ನನ್ನೊಡೆಯಾ" ಬೋರ ಒಳಗಿನಿಂದಲೇ ಉತ್ತರವಿತ್ತ.

ಮೀರ, ಶಾಮು ಒಳಗೆ ಹೋದರು. ಅತಿ ಮೋಟಾಗಿದ್ದ ಬಾಗಿಲು ಮೀರಳ ಹಣೆಗೆ ಬಡಿಯಿತು. ಮೀರ ಅಂಗೈಯಿಂದ ಹಣೆ ಉಜ್ಜಿಕೊಂಡಳು.

"ತಲೆ ತಗ್ಗಿಸಿಕೊಂಡು ಬರಬೇಕಾಗಿತ್ತು" ಶಾಮು ಹೇಳಿದ.

ಮೀರ ಒಳಗೆ ಬಂದೊಡನೆ, ಗೋಳಿಡುತ್ತಿದ್ದ ರಾಚಮ್ಮ ಎದ್ದು, ಸಗಣಿ ನೆಲದ ಮೇಲೆ ಚಿಂದಿಯಾಗಿದ್ದ ಚಾಪೆಯ ತುಂಡೊಂದನ್ನು ಹಾಸಿದಳು. ಮೀರ ಚಾಪೆಯ ಮೇಲೆ ಕುಳಿತಳು.

ಬೋರನ ಗುಡಿಸಿಲಿನ ಛಾವಣಿ ಎತ್ತರವಾಗಿದ್ದವರ ತಲೆಗೆ ಬಡಿಯುವಂತಿತ್ತು. ಅಷ್ಟು ಜನರಿರುವ ಗುಡಿಸಿಲಿಗೆ ಒಂದು ಕಿಟಕಿ ಸಹ ಇರಲಿಲ್ಲ. ಇವರು ಬಾಗಿಲು ಮುಚ್ಚಿ ಹೇಗೆ ನಿದ್ದೆ ಮಾಡುವರು ಎಂದು ಮೀರ ಆಶ್ಚರ್ಯಪಟ್ಟಳು.

ಬೋರನ ದೊಡ್ಡ ಮಗನಿಗೆ ಹದಿನಾಲ್ಕು ವರ್ಷವಾಗಿತ್ತು. ಆ ಹುಡುಗನ ಹಿಂದೆ ಎರಡು ವರ್ಷಕ್ಕೊಂದರಂತೆ ಬೋರನಿಗೆ ಮಕ್ಕಳಾಗಿದ್ದವು. ಒಂದು ಪುಟ್ಟ ಗೂಡಿನಲ್ಲಿ ವಾಸಿಸುವ ಇರುವೆಗಳಂತೆ ಅವರ ಬದುಕು ಸಾಗಿತ್ತು.

ಅವನ ಮಕ್ಕಳಲ್ಲಿ ನಾಲ್ಕು ಜನ ಮಲೇರಿಯಾ ರೋಗದಿಂದ ನರಳುತ್ತಿದ್ದರು. ದೊಡ್ಡ ಮಗ ಹದಿನಾಲ್ಕು ವರ್ಷದವನಾದರೂ, ಎಂಟು ವರ್ಷದ ಹುಡುಗನಂತೆ ಕಾಣುತ್ತಿದ್ದ. ಚರ್ಮದ ಹೊದಿಕೆಯೊಳಗಿನಿಂದ ಎದ್ದು ಕಾಣುತ್ತಿದ್ದ ಎದೆಯೆಲುಬುಗಳು, ಸಣಕಲು ಕೈಕಾಲು, ಸೀರಸ್ಸು ಕಾಣದೆ ಪೊದೆಯಾಗಿದ್ದ ತಲೆ, ಪ್ರಧಾನವಾಗಿ ಕಾಣುತ್ತಿದ್ದ ಹೊಟ್ಟೆ ಅವನನ್ನು ರೋಗದ ಮೂರ್ತಿಯನ್ನಾಗಿ ಮಾಡಿದ್ದವು. ಸಡುವಿಗೊಂದು ತುಣುಕು ಬಟ್ಟೆ ಹೊರತು ಹುಡುಗರ ಮೈಮೇಲೆ ಬೇರಾವ ಬಟ್ಟೆಯೂ ಇರಲಿಲ್ಲ.

ಮನೆಯಲ್ಲಿ ನಾಲ್ಕು ಮಣ್ಣಿನ ಮಡಕೆಗಳ ಹೊರತಾಗಿ ಬೇರೆ ಪಾತ್ರೆಗಳು ಇರಲಿಲ್ಲ.

ಕೈಗೂಸು ನರಳುತ್ತ ಚಿಂದಿಬಟ್ಟೆಗಳ ಮೇಲೆ ಮಲಗಿತ್ತು. ಅದು ಮಗುವಿಗಿಂತಲೂ ಹೆಚ್ಚಾಗಿ ಕೋತಿಮರಿಯನ್ನು ಹೋಲುತ್ತಿತ್ತು. ಕಡ್ಡಿಯಂತಿದ್ದ ಕೈಕಾಲು, ಉಬ್ಬಿದ ಉದರ 'ಲಿವರ್' ಕಾಯಿಲೆಯನ್ನು ಸಾರುತ್ತಿದ್ದವು.

ಸೆಳವಿನಿಂದಾಗಿ ಮಗುವಿಗೆ ಕ್ಷಣಕ್ಷಣಕ್ಕೆ ಉಸಿರಾಡುವುದು ಕಷ್ಟವಾಗತೊಡಗಿತು. ಉಸಿರಾಡಲು ಮಗು ಪ್ರಯತ್ನಿಸುತ್ತ, ಕೈಕಾಲುಗಳನ್ನು ಬಡಿಯಲು ಪ್ರಾರಂಭಮಾಡಿತು. ಉಸಿರು ಗಂಟಲಿನಲ್ಲಿಯೇ ನಿಂತು 'ಗೊರಗೊರ' ಸದ್ದು ಮಾತ್ರ ಕೇಳಿಸುತ್ತಿತ್ತು. ಕಣ್ಣುಗುಡ್ಡೆಗಳು ಮೇಲಕ್ಕೆ ಸಿಕ್ಕಿಕೊಂಡುದನ್ನು ನೋಡಿ ರಾಚಮ್ಮ "ಅಯ್ಯೋ ಮಗನೇ" ಎಂದು ಎದೆ ಹೊಡೆದುಕೊಂಡು ಚೀರಲು ಮೊದಲು ಮಾಡಿದಳು. ಬೋರ ಮಾತ್ರ ಸಂಸಾರದಲ್ಲಿ ಮೋಹವಿಲ್ಲದ ವಿರಕ್ತನಂತೆ ಅಚಲನಾಗಿ ಕುಳಿತಿದ್ದ.

ಮೀರ ಮಗುವಿಗಾಗಿ ರೋದಿಸುತ್ತಿದ್ದ ರಾಚಮ್ಮನ ಕಡೆ ನೋಡಿದಳು. ಎಂಟು ಮಕ್ಕಳ ತಾಯಿಯಾದ ರಾಚಮ್ಮ ರಸ ಹೀರಿದ ಕಬ್ಬಿನಂತಿದ್ದಳು. ದಸುಕ್ಕಾದ ಮುಖ, ಧೂಳು ತುಂಬಿದ ತಲೆ, ಕಾಂತಿಹೀನವಾದ ಗುಳಿಗಣ್ಣುಗಳು, ಜೋತುಬಿದ್ದ ಎದೆ, ಕಾಚಿನಿಂದ ಕಪ್ಪಾದ ಹಲ್ಲು, ಕೃಶವಾದ ಶರೀರ....

ಮೀರ ಬೋರನ ಕಡೆ ತಿರುಗಿದಳು. ಬೋರನನ್ನು ದೃಢಕಾಯನೆಂದು ಹೇಳಲಾಗದಿದ್ದರೂ ರಾಚಮ್ಮನಂತೆ ನಶಿಸಿರಲಿಲ್ಲ. ಉಸಿರಾಡುವ ಹೆಣದಂತಿದ್ದ

ರಾಚಮ್ಮನ ಮೇಲೆ ಇನ್ನೂ ಘೋರ ಪ್ರತೀಕಾರ ಕೈಗೊಳ್ಳುತ್ತಿರುವುದನ್ನು ನೋಡಿ ಮೀರ ಹಲ್ಲು ಕಡಿದಳು.

ಆದರೆ? ಅವನಿಗೆ ತಾನೇ ಜೀವನದಲ್ಲಿ ಏನು ಸುಖವಿದೆ? ಬೆಳಗಿನಿಂದ ಸಂಜೆಯವರೆಗೆ ದೇಹದ ರಕ್ತ ಬಸಿದು ಮನೆಗೆ ಬಂದರೆ, ಅಲ್ಲಿ ಯಾವ ಸಂತೋಷ ಕಾಣಬೇಕು? ಬಡಜೀವಿಗೆ ಮನರಂಜನೆ ಇದೆಯೇ? ಹಣದ ಸುಖವಿದೆಯೇ? ಬಳಲಿ ಬಂದರೆ ಕಾಣಲು ಉಲ್ಲಾಸ ತುಂಬಿದ ಮೋರೆಗಳಿವೆಯೇ? ವಿರಾಮಕ್ಕಾಗಿ ಮನೆಗೆ ಬಂದರೆ ಈ ಮಕ್ಕಳು, ಈ ಹೆಂಡತಿಯನ್ನು ನೋಡಿದರೆ ಅವನೆದೆ ಒಡೆಯುವುದಿಲ್ಲವೇ? ಅವನಿಗೆ ಹೆಂಡತಿಯಿಂದ ದೊರೆಯುವ ಸುಖದ ಹೊರತು ಬೇರಾವ ಸುಖವೂ ಇಲ್ಲ. ಅದೊಂದು ಸುಖದಲ್ಲಿ ತನ್ನ ಜೀವನದ ಕಹಿಯನ್ನು ಮರೆಯಲು ಪ್ರಯತ್ನಿಸುತ್ತಾನೆ. ಆದುದರಿಂದಲೇ ಬಡವರಿಗೆ ಮಕ್ಕಳು ಹೆಚ್ಚು.

ಮೀರ ಮಗುವಿನ ಹತ್ತಿರ ಸರಿದು ಅದರ ಪುಟ್ಟ ಕೈಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡಳು. ಚಿನ್ನದ ಬಳೆಗಳು ತುಂಬಿದ ಅವಳ ಹಿಡಿಲಿದ್ದ ಮಗುವಿನ ಕಪ್ಪು ಸಣಕಲು ಕೈ ವಿಚಿತ್ರವಾಗಿ ಕಾಣುತ್ತಿತ್ತು.

ತಾನು ಡಾಕ್ಟರಾಗಿದ್ದಿದ್ದರೆ? ಎದುರಿಗೆ ತಾನಿದ್ದರೂ, ಆ ಮಗುವಿನ ಆತ್ಮ ಇಷ್ಟು ಜನರನ್ನು ಸಾಕ್ಷಿಯಾಗಿರಿಸಿ ಹಾರಿಹೋಗುತ್ತಿದ್ದರೂ, ಎಲ್ಲರೂ ಕಲ್ಲಿನ ಪ್ರತಿಮೆಗಳಂತೆ ಕುಳಿತಿದ್ದಾರೆ. ವೈದ್ಯಳಾಗಲು ಹಾತೊರೆದ ಮೀರ, ಮಗುವಿನ ಸಂಕಟವನ್ನು ಶೂನ್ಯದೃಷ್ಟಿಯಿಂದ ನೋಡುತ್ತಾ ಕುಳಿತಳು. ಅವಳ ಕಣ್ಣುಗಳಿಂದ ಹನಿ ಜಾರುತ್ತಿತ್ತು. ಮಗುವಿನ ಸಂಕಟಕ್ಕಿಂತಲೂ, ತನ್ನ ಅಸಹಾಯಕತೆ ನೆನೆದು ಅವಳಿಗೆ ದುಃಖವಾಗಿತ್ತು. ತಾನು ಮಾನವಳಾಗಿ, ಚತುರೆಯಾಗಿ, ಆಶಾವಾದಿಯಾಗಿ ಹುಟ್ಟಿದುದರ ಪ್ರಯೋಜನವಾದರೂ ಏನು? ಕತ್ತೆಯ ಕೆಚ್ಚಲಿನಲ್ಲಿನ ಹಾಲಿನಂತೆ ಅವಳ ಬುದ್ಧಿ ನಿಷ್ಪ್ರಯೋಜಕವಾಗಿತ್ತು, ವ್ಯರ್ಥವಾಗಿತ್ತು. ತನ್ನ ಕಣ್ಣೆದುರಿಗೇ ಮಗುವೊಂದು ಸಾಯುತ್ತಾ ಬಿದ್ದಿದ್ದರೂ ಸುಮ್ಮನಿರಬೇಕಾಗಿದೆ. ಅಬ್ಬ! ಇದಕ್ಕಿಂತಲೂ ಘೋರ ಶಿಕ್ಷೆ ಬೇಕೇ?

ಮಗು ತನ್ನ ಕೈ ಮೀರಳ ಹಿಡಿಯಲ್ಲಿದ್ದಂತೆಯೇ ಕೊನೆಯುಸಿರು ಬಿಟ್ಟಿತು. ರಾಚಮ್ಮ ಎದೆ ಬಡಿದುಕೊಂಡು ಮತ್ತಷ್ಟು ಜೋರಾಗಿ ಅಳಲು ಮೊದಲು ಮಾಡಿದಳು. ಅವಳ ಹಿಡಿಯಲ್ಲಿದ್ದ ಮಗುವಿನ ಕೈ ಕ್ರಮೇಣ ತಣ್ಣಗಾಗುತ್ತ ಬಂದಿತು. ಮೀರ ಅದೆಷ್ಟು ಹೊತ್ತು ಹಾಗೇ ಕುಳಿತಿದ್ದಳೋ ಅವಳಿಗೆ ಗೊತ್ತಿಲ್ಲ. ಶಾಮು ಅವಳ ಭುಜ ತಟ್ಟಿ "ಮೀರಾ" ಎಂದ.

"ಏನು?"

"ನಡಿ. ಮನೆಗೆ ಹೋಗೋಣ."

ಮೀರ ಮಗುವಿನ ಕೈಯನ್ನು ಅದರ ಎದೆಯ ಮೇಲಿರಿಸಿ ಮೇಲಕ್ಕೆದ್ದಳು.

ಈ ಘಟನೆಯಿಂದಾಗಿ ಅವಳಾಸೆ ಗರಿಗೆದರಿ ನಿಂತಿತ್ತು. ಮನೆ, ಮಠ, ಗಂಡ ಎಲ್ಲರನ್ನೂ ತೊರೆದುಹೋಗಿ ವೈದ್ಯಳಾಗಬೇಕೆಂಬ ಹಂಬಲ ಅವಳ ಮನಸ್ಸನ್ನು ವ್ಯಾಪಿಸಿತು. ಆದರೆ ಮೀರ ಸೆರೆಮನೆಯಲ್ಲಿನ ಕೈದಿಯಾಗಿದ್ದಳು. ರಬ್ಬರ್ ಚೆಂಡಿನಂತೆ ಪುಟವೇಳುತ್ತಿದ್ದ ತನ್ನ ಹಂಬಲವನ್ನು ಮೀರ ಮೆಟ್ಟಲು ಪ್ರಯತ್ನಿಸಿದಳು.

ಗೌರಿಯ ಹಬ್ಬ ಹತ್ತಿರ ಬಂತು. ಮೊದಲ ವರ್ಷದ ಗೌರಿಯ ಹಬ್ಬವೆಂದು ಕೃಷ್ಣಪ್ಪನವರು ಶಾಮುವಿಗೆ ಮೀರಳನ್ನು ಕಳುಹಿಸಿಕೊಡಬೇಕಾಗಿ ತಿಳಿಸಿ ಕಾಗದ ಬರೆದಿದ್ದರು. ಊರಿಗೆ ಹೊರಡಲು ಮೀರ ತುದಿಗಾಲಿನಲ್ಲಿ ನಿಂತಿದ್ದಳು. ಆದರೆ ಶಾಮು ಒಪ್ಪಲಿಲ್ಲ. ಅದರ ಬಗ್ಗೆ ಗಂಡ ಹೆಂಡತಿಗೆ ಬಿಸಿಯಾಗಿ ಮಾತುಕತೆಗಳು ನಡೆದವು.

"ಹೋಗಿ ಹಬ್ಬ ಮುಗಿಸಿಕೊಂಡು ಬಂದುಬಿಡುತ್ತೇನೆ."

"ಅದಾಗೋದಿಲ್ಲ. ತವರುಮನೆಗೆ ಹೋದ ಹೆಣ್ಣುಮಗಳ ಮನಸ್ಸನ್ನು ಹೇಳುವುದಕ್ಕಾಗುವುದಿಲ್ಲ. ಹಬ್ಬ ಎಲ್ಲಿ ಮಾಡಿದರೂ ಒಂದೇ."

"ಇಲ್ಲಾಂದ್ರೆ. ನನ್ನ ಮಾತಿನಲ್ಲಿ ನಂಬಿಕೆ ಇಡಿ."

"ಆಗೋದೇ ಇಲ್ಲ. ನಿನ್ನ ಬಿಟ್ಟು ನಾನಿರಲಾರೆ" ಎಂದು ಶಾಮು ಖಡಾಖಂಡಿತವಾಗಿ ಹೇಳಿಬಿಟ್ಟ.

ಇದೇನು ಸ್ವಾರ್ಥವೋ, ಪ್ರೀತಿಯೋ ಮೀರಳಿಗೆ ತಿಳಿಯಲಿಲ್ಲ. ಕಹಿಗುಳಿಗೆಯ ಮೇಲೆ ಜೇನು ಸವರಿ ಮಕ್ಕಳಿಗೆ ತಿನ್ನಿಸುವಂತೆ ಸ್ವಾರ್ಥ ಸಾಧನೆಗಾಗಿ, ಪ್ರೀತಿಯ ಮುಸುಕಿನಲ್ಲಿ ಶಾಮು ತನ್ನಿಷ್ಟ ಸಾಧಿಸುವುದನ್ನು ನೋಡಿ ಮೀರ ಜುಗುಪ್ಸೆ ತಾಳಿದಳು. ತನ್ನ ಒಂದು ಸಣ್ಣ ಅಪೇಕ್ಷೆಯನ್ನು ಗಂಡನಾದವನು ತಿರಸ್ಕರಿಸಿದುದು, ಅವಳ ಮನಸ್ಸು ಅವನಿಂದ ದೂರ ಸರಿಯುವಂತೆ ಮಾಡಿತು.

ಶಾಮುವಿನ ಅಪೇಕ್ಷೆಯಂತೆ ಗೌರಿಯಹಬ್ಬ, ಹಳ್ಳಿಯಲ್ಲೇ ಕಳೆಯಿತು. ಮಗಳು ತೌರಿಗೆ ಬರದಿರುವುದನ್ನು ತಿಳಿದು ಕೃಷ್ಣಪ್ಪನವರು ಹಳ್ಳಿಗೇ ಮಂಗಳದ್ರವ್ಯಗಳನ್ನು ಕಳಿಸಿಕೊಟ್ಟರು. ಕೋಪದಿಂದಲೂ, ಉದಾಸೀನದಿಂದಲೂ ಗೌರಿಹಬ್ಬದ ದಿನ ಮೀರ ಒಂದು ಒಡವೆಯನ್ನೂ ಹಾಕಿಕೊಳ್ಳದೆ ಸಾಧಾರಣವಾದ ಒಂದು ಸೀರೆಯುಟ್ಟು ಪೂಜೆಗೆ ಸಿದ್ಧಳಾಗುತ್ತಿರುವುದನ್ನು ನೋಡಿ ಶಾಮು ತನ್ನ ಕಣ್ಣುಗಳನ್ನೇ ನಂಬಲಾರದವನಾದ. ಅವನಿಗೆ ತನ್ನತಾಯಿ ಗೌರಿ ಪೂಜೆಗೆ ಸಿದ್ಧಳಾಗುತ್ತಿದ್ದ ಚಿತ್ರ ನೆನಪಿಗೆ ಬಂದಿತು. ಅಡಿಯಿಂದ ಮುಡಿಯವರೆವಿಗೂ ಒಡವೆಗಳನ್ನಿಟ್ಟುಕೊಂಡು ಕೆನ್ನೆಯ ತುಂಬಾ ಅರಿಶಿನ ಹಚ್ಚಿ, ಹಣೆಗೆ ಅಗಲವಾಗಿ ಅಡ್ಡ ಕುಂಕುಮವಿಟ್ಟು, ಕಣ್ಣಿಗೆ ಕಪ್ಪು ಹಚ್ಚಿ, ತಲೆ ತುಂಬಾ ಹೂ ಮುಡಿದು, ಬೂಟಾ ಹೂವಿನ ಸೀರೆಯುಟ್ಟು, ಪೂಜೆಗೆ ಹೊರಟರೆ ಶಾಮುವಿಗೆ ಗೌರಿಯ ಸ್ಥಳದಲ್ಲಿ ತನ್ನ ತಾಯಿಯನ್ನೇ ಕೂರಿಸಿ ಪೂಜೆ ಮಾಡಬೇಕೆನಿಸುತ್ತಿತ್ತು. ಈ ದಿನ ತಾಯಿಯ ವೈಭವಕ್ಕೆ ವಿರುದ್ಧವಾಗಿ

ಮೀರ ಸಿದ್ಧಳಾಗಿರುವುದು ಅವನನ್ನು ಚಕಿತಗೊಳಿಸಿತು. ಅರಿಸಿನ, ಕುಂಕುಮದ ಬಟ್ಟಲಿಗೆ ಮೀರ ಕುಂಕುಮ ತುಂಬುತ್ತಿದ್ದಾಗ ಶಾಮು ಕೇಳಿದ:

"ಮೀರಾ, ಇದೇನು ಈ ಸೀರೇಲೆ ಪೂಜೆ ಮಾಡುತ್ತೀಯಾ?"

"ಹ್ದೂ." ಮೀರ ತಾತ್ಸಾರದಿಂದ ನುಡಿದಳು.

"ಪೆಟ್ಟಿಗೆ ತುಂಬಾ ಅಷ್ಟೊಂದು ಸೀರೆ ಇಟ್ಟುಕೊಂಡು...."

"ಗೌರಿಯ ಪೂಜೆಗೆ ಬೇಕಾದುದು ಭಕ್ತಿ, ಸೀರೆಯಲ್ಲ."

"ಅದು ನಿಜ. ಆದರೆ ಭಕ್ತಿಯೊಡನೆ ಶ್ರದ್ಧೆಯೂ ಇರಬೇಕು. ನೀನು ಕಾಟಾಚಾರಕ್ಕಾಗಿ ಪೂಜೆ ಮಾಡುವಂತಿದೆ. ಅಮ್ಮನ ಧರ್ಮಾವರದ ಸೀರೆಯ ಲಕ್ಷಣ ಈ ನಿನ್ನ ಸೀರೆಗೆಲ್ಲಿಂದ ಬರಬೇಕು?"

"ನಿಮ್ಮ ತಾಯಿಯ ಇಪ್ಪತ್ತು ಮೊಳದ ಸೀರೆಯನ್ನು ನಾನು ಹೊರಲಾರೆ. ಸಾಲದುದಕ್ಕೆ ಅರ್ಧ ಸೀರೆ ಸೆರಗಿನಿಂದ ತುಂಬಿದೆ. ಅಂತಹ ಸೀರೆಗಳನ್ನು ಕಂಡರೆ ನನಗಾಗುವುದಿಲ್ಲ."

"ಹಾಗಾದರೆ ಆ ಸೀರೆಗಳನ್ನು ಏನು ಮಾಡಬೇಕು?"

"ಎಲ್ಲವನ್ನೂ ಕತ್ತರಿಸಿ ಆರು ಗಜ ಮಾಡಿದರೆ ಉಟ್ಟುಕೊಳ್ಳಬಹುದು."

"ಅದು ಸಾಧ್ಯವಿಲ್ಲದ ಮಾತು. ಆ ಸೀರೆಗಳೆಲ್ಲಾ ಹಾಗೆಯೇ ನುಸಿ ಹಿಡಿದು ಹಾಳಾದರೂ ಚಿಂತೆಯಿಲ್ಲ. ಅಮ್ಮನ ಸೀರೆ ಕತ್ತರಿಸಲು ಮಾತ್ರ ನಾನು ಎಂದಿಗೂ ಆಸ್ಪದ ಕೊಡುವುದಿಲ್ಲ."

"ಸರಿ. ಬೇಡ."

"ಸೀರೆಯಂತೂ ಹೋಗಲಿ. ಅಮ್ಮನ ಒಡವೆಗಳನ್ನಾದರೂ ಹಾಕಿಕೊಳ್ಳಬಾರದೇ? ಪೆಟ್ಟಿಗೆಯ ತುಂಬಾ ಒಡವೆಗಳಿವೆ."

"ಆ ಪೂರ್ವಕಾಲದ ಕಾಸಿನ ಸರ, ಗೆಜ್ಜೆ ಡಾಬು ಯಾರು ಹಾಕಿಕೊಳ್ಳುತ್ತಾರೆ? ಆ ಒಡವೆ ಹೊರಲಾರೆ. ಅವುಗಳನ್ನು ಕರಗಿಸಿ ಈಗಿನ ಕಾಲದ ಮಾವಿನಕಾಯಿ ಸರ, ನೆಕ್‌ಲೇಸು, ಮೆಣಸಿನ ಬಳೆ ಮಾಡಿಸಿದರೆ ಹಾಕಿಕೊಳ್ಳಬಹುದು."

ಈ ಬಾರಿ ಶಾಮುವಿಗೆ ಕೋಪ ಬಂತು. ಮೀರ ತನ್ನನ್ನು ಕೆರಳಿಸಲೆಂದೇ ಈ ಮಾತುಗಳನ್ನಾಡಿದಳೆಂಬುದು ಅವನಿಗೆ ತಿಳಿಯಿತು.

"ಬಂಗಾರ ಒಳಗಿದ್ದರೆ ಕೊಳೆಯುವುದಿಲ್ಲ. ಆದರೆ ನಾನು ಬದುಕಿರುವವರೆಗೂ ಅದಕ್ಕೆ ಆಸ್ಪದ ಕೊಡಲಾರೆ" ಎಂದು ಕೋಪದಿಂದ ನುಡಿದು ಶಾಮು ಹೊರಟುಹೋದ.

ಮೀರ ವ್ಯಂಗ್ಯ ನಗೆ ಬೀರಿ ಪುನಃ ತನ್ನ ಕೆಲಸಗಳಲ್ಲಿ ತೊಡಗಿದಳು. ತನ್ನ ಮಾತಿಗೆ ಬೆಲೆ ಕೊಡದೆ "ಅಮ್ಮ, ಅಮ್ಮ" ಎಂದು ಅಳಿದ ತಾಯಿಯನ್ನು ನೆನೆಯುವುದನ್ನು ನೋಡಿ ಮೀರಳ ಮನಸ್ಸು ಕಟುವಾಯಿತು.

ಶಾಮು ಗದ್ದೆಯ ಬಳಿ ತಲೆಗೊಂದು ಟವಲು ಸುತ್ತಿ, ಉಟ್ಟಿದ್ದ ಪಂಚೆಯನ್ನು ಎತ್ತಿ ಕಟ್ಟಿಕೊಂಡು ಕೆಸರಿನಲ್ಲಿ ಓಡಾಡುತ್ತ ಕಾಳ, ತಿಮ್ಮ ಮೊದಲಾದ ರೈತರುಗಳಿಗೆ ಸಲಹೆ ಕೊಡುತ್ತಿದ್ದ.

"ಕಾಲುವೆ ಇನ್ನೂ ಕೊಂಚ ಅಗಲವಾಗಿರಲಿ. ಅಲ್ವೇನೋ ಕಾಳ? ನೀರು ಗದ್ದೆಯ ಆ ತುದಿಯವರೆಗೂ ಹೋಗಬೇಕು...."

ಶಾಮು ಮಾತು ನಿಲ್ಲಿಸಿದ. ದೂರದಲ್ಲಿ ಬಿಸಿಲಿನಲ್ಲಿ ಯಾರೋ ಬರುತ್ತಿರುವಂತೆ ತೋರಿತು. ಕಣ್ಣಿಗೆ ಕೈಮರೆ ಮಾಡಿಕೊಂಡು ನೋಡಿದ. ಆ ನಡಿಗೆ ಅವನಿಗೆ ತೀರ ಪರಿಚಿತವಾಗಿತ್ತು. ಶಾಮು ದಿಟ್ಟಿಸಿ ನೋಡಿದ. ಬಿಳಿ ವಾಯಿಲ್ ಸೀರೆಯ ಸೆರಗು ಗಾಳಿಯಲ್ಲಿ ಹಾರಾಡುತ್ತಿತ್ತು. ಮೀರ ಅಷ್ಟು ಹೊತ್ತಿನಲ್ಲಿ ಗದ್ದೆಯ ಬಳಿ ಬರುವ ಕಲ್ಪನೆ ಕೂಡ ಶಾಮುವಿಗಿರಲಿಲ್ಲ. ಅವಳು ಮೀರಳೇ ಎಂಬುದರಲ್ಲಿ ಸಂಶಯವಿಲ್ಲವೆಂಬುದರನ್ನು ಅವಳ ಬಿಳೀ ಸೀರೆ ಹೇಳುತ್ತಿತ್ತು. ಅವಳು ಹತ್ತಿರ ಬಂದಂತೆ ಬಿಸಿಲಿನಿಂದ ಕೆಂಪಾಗಿದ್ದ ಮುಖವನ್ನು ನೋಡಿ ಶಾಮುವಿಗೆ ಕನಿಕರ ವಾಯಿತು. ಉಸಿರಿನ ಆವೇಗಕ್ಕೆ ಎದೆ ಏರಿಳಿಯುತ್ತಿತ್ತು. ಸಂತೋಷ, ಉಲ್ಲಾಸ ಮುಖದಲ್ಲಿ ಲಾಸ್ಯವಾಡುತ್ತಿತ್ತು. ಮೀರ ಅಂದು ಅತ್ಯಂತ ಸುಂದರವಾಗಿ ಕಂಡಳು. ಅವಳನ್ನೆಳೆದುಕೊಳ್ಳಬೇಕೆಂಬ ಭಾವನೆ ಮೂಡಿದರು, ಸುತ್ತಮುತ್ತ ಕಾಳ, ತಿಮ್ಮರು ತೆರೆದ ಕಣ್ಣುಗಳಿಂದ ತಮ್ಮನ್ನು ನೋಡುತ್ತಿರುವುದರ ಅರಿವಾಗಿ,

"ಏನು, ಇಷ್ಟು ದೂರ ಬರೋಣವಾಯಿತು?" ಎಂದ.

"ನನ್ನ ಸ್ನೇಹಿತೆ ನರ್ಮದಾ ಇರಲಿಲ್ಲವೇ? ಅವಳಿಗೆ ನಾನು ಕಾಗದ ಬರೆದಿದ್ದೆ. 'ನವರಾತ್ರಿಗೆ ನೀನು, ಚಂಪಾ, ರಾಜು ಎಲ್ಲರೂ ಹಳ್ಳಿಗೆ ಬನ್ನಿ' ಅಂತ. ಅವಳು ನಾಡಿದ್ದು ಬರುತ್ತೀನಿ ಅಂತ ಕಾಗದ ಬರೆದಿದ್ದಾಳೆ. ನಿಮಗೊಂದು ಮಾತು ತಿಳಿಸಿ ಈಗಲೇ ಕಾಗದ ಬರೆದು ಹಾಕೋಣಾಂತ ಬಂದೆ."

"ಬಿಸಿಲಿನಲ್ಲಿ ಯಾಕೆ ಬಂದೆ? ಐದುಗಂಟೆಯ ಹೊತ್ತಿಗೆ ನಾನೇ ಬರುತ್ತಿದ್ದೆ."

"ಆಮೇಲೆ ಪೋಸ್ಟಿಗೆ ಹೊತ್ತಾಗುತ್ತದೆ. ಇವತ್ತೇ ಬರೆದರೆ ಕಾಗದ ನಾಳೆ ತಲುಪುತ್ತದೆ."

"ಇವಕ್ಕೆಲ್ಲಾ ನನ್ನ ಕೇಳುವ ಅಗತ್ಯವೇನಿತ್ತು?"

"ಮನೆ ನಿಮ್ಮದಲ್ಲವೇ" ಎನ್ನುತ್ತ ಮೀರ ಉತ್ಸಾಹದ ನಡಿಗೆಯಲ್ಲಿ ಹಿಂತಿರುಗಿದಳು. ಮನೆಗೆ ಬಂದ ಕೂಡಲೇ ನರ್ಮದಾಗೆ ಕಾಗದ ಬರೆದು ಹಾಕಿದಳು.

ಎರಡು ದಿನಗಳನ್ನು ಹೇಗೆ ಕಳೆದಳೋ ಅವಳಿಗೇ ಗೊತ್ತಿಲ್ಲ. ಮೂರನೆಯ ದಿನ ಬೋರನ ಕೈಯಲ್ಲಿ ಮನೆಯನ್ನೆಲ್ಲಾ ಶಲಬೆ ಹೊಡೆಸಿ, ತೊಳೆಸಿದಳು. ಬೀರುವಿನ ಧೂಳನ್ನು ಹೊಡೆದು ಮನೆಯನ್ನು ಶಿಸ್ತು ಮಾಡಿದಳು.

ಅವಳ ಗೆಳತಿಯರು ಬೆಳಗಿನ ಗಾಡಿಗೆ ಬರುವುದಾಗಿ ಬರೆದಿದ್ದರು. ಅವರು

ಬರುವ ದಿನ ಮೀರ ಆರು ಗಂಟೆಗೇ ಎದ್ದು ಹೂ ಕೊಯ್ದು, ಕಟ್ಟಿ, ಜಡೆ ಹೆಣೆದುಕೊಂಡು ಹೂ ಮುಡಿದಳು. ಕಾಲೇಜಿನ ಗೆಳತಿಯರನ್ನು ಸ್ವಾಗತಿಸಲು ಧರ್ಮಾವರದ ಸೀರೆ ತೀರ ಗೊಡ್ಡು ಎನಿಸಿತು. ಅವಳ ಅಚ್ಚುಮೆಚ್ಚಿನ ಜಾರ್ಜೆಟ್ ಉಟ್ಟು ಅಲ್ಲಿಂದಿಲ್ಲಿಗೆ ಓಡಾಡುವಷ್ಟರಲ್ಲಿ ಗಾಡಿಯಾಳು ನಿಂಗ ರಾಮ, ಲಕ್ಷ್ಮಣ ರನ್ನು ಗಾಡಿಗೆ ಕಟ್ಟಿ ಸಿದ್ಧವಾಗಿ ನಿಂತಿದ್ದ. ಶಾಮು ಹೊರಟುನಿಂತಿದ್ದ. ಮೀರ,

"ಬನ್ನಿ. ಅಲ್ಲಿಯವರೆಗೂ ನೀವೂ ಗಾಡಿಯಲ್ಲಿಬರುವಿರಂತೆ" ಎಂದಳು.

"ಇಲ್ಲ, ಬೆಳಗಿನ ಗಾಳಿ ಒಳ್ಳೆಯದು. ನಾನು ನಡೆದುಕೊಂಡೇ ಬರುತ್ತೇನೆ.

"ಮಧ್ಯಾಹ್ನ ಬೇಗ ಬಂದುಬಿಡಿ. ನನ್ನ ಗೆಳತಿಯರ ಪರಿಚಯ ಮಾಡಿ ಕೊಡುತ್ತೇನೆ."

"ಸಧ್ಯ, ನಿನ್ನ ಕಾಲೇಜು ಗೆಳತಿಯರ ಸಹವಾಸ ನನಗೆ ಬೇಡ."

"ಕಾಲೇಜಿನವರಾದರೆ ಕರಡಿಗಳು ಅಂತ ತಿಳಿದಿರುವಿರೇನು?"

"ಏನಾದರೂ ಆಗಲಿ, ಊಟಕ್ಕೆ ನನಗೆ ಕಾಯಬೇಡಿ."

ಮೀರಳ ಉತ್ಸಾಹಕ್ಕೆ ಶಾಮುವಿನ ಮಾತುಗಳು ಕಡಿವಾಣ ಹಾಕಿದರೂ, ಗೆಳತಿಯರ ಆಗಮನದ ನೆನಪು ಅವಳನ್ನು ಚೇತನಗೊಳಿಸಿತು.

ಟ್ರೈನಿನ ಕಿಟಕಿಯಲ್ಲಿ ಗೆಳತಿಯರ ಮುಖ ಕಂಡ ಕೂಡಲೇ ಮೀರ ಕೈ ಬೀಸಿ ದಳು. ರಾಜು, ನರ್ಮದಾ, ಚಂಪಾ "ಹಲೋ" ಎಂದು ಕೂಗಿದರು.

ಟ್ರೈನು ನಿಂತೊಡನೆ ನರ್ಮದಾ ಬಾಗಿಲು ತೆಗೆದುಕೊಂಡು ಕೆಳಗೆ ಧುಮು ಕಿದಳು.

"ನಿಂಗಾ, ಅವರ ಸಾಮಾನುಗಳನ್ನು ತಗೊಂಡು ಬಾರೋ."

"ಹಾಸಿಗೆ ತಂದಿಲ್ಲಪ್ಪ. ಮೂರು ಸಣ್ಣ ಪೆಟ್ಟಿಗೆ ಮಾತ್ರ ಇದೆ."

ನಿಂಗ ಅವರ ಸಾಮಾನುಗಳನ್ನು ಹೊತ್ತು ನಡೆದ. ಅವನ ಕಣ್ಣುಗಳು ಆಗಾಗ್ಗೆ ಅವರುಟ್ಟಿದ್ದ ಹುಲಿ, ಚಿರತೆ ಚರ್ಮದಂತಹ ಸೀರೆಗಳ ಕಡೆಗೂ, ಬೆನ್ನಿನ ಮೇಲೆ ನವಿಲುಗರಿಯಂತೆ ಕೆದರಿಕೊಂಡಿದ್ದ ವಿಚಿತ್ರ ಹೆರಳಿನ ಕಡೆಗೂ ಹರಿದಾಡುತ್ತಿತ್ತು.

"ಮೀರಾ, ಮದುವೆ ಆದರೆ ಮೈ ಬರುತ್ತದೆ ಅಂತಾರೆ. ಆದರೆ ನಿನಗೆ ಮೈ ಕರಗಿಹೋಗಿದೆ" ರಾಜು ಹೇಳಿದಳು.

"ಇನ್ನೇನು, ನಿನ್ನ ಹಾಗೆ ಬೆಳೆಯಬೇಕೇನೋ? ನಿನ್ನ ಗುರುತಿಸಲು ಸಹ ಸಾಧ್ಯವಿಲ್ಲ.ದಿನದಿನಕ್ಕೆ ಬೆಲೂನು ಊದಿದ ಹಾಗೆ ಊದುತ್ತಿದ್ದೀಯಾ" ಮೀರ ರಾಜೂನ ಗೇಲಿ ಮಾಡಿದಳು. ಚಂಪಾ ಕಿಲಕಿಲನೆ ನಕ್ಕು,

"ಮೀರಾ, ಮೊನ್ನೆ ಒಂದು ತಮಾಷೆ ನಡೆಯಿತು. ರಾಜೂ ಫೋಟೋ ತೆಗೆಸಿಕೊಳ್ಳೋಕೆ ಹೋಗಿದ್ದಳು. ಫೋಟೋಗ್ರಾಫರ್ ರಾಜೂನ ನೋಡಿ 'ತಾಯಿ ನಿಮಗೆ ಒಂದೇ ಸಲಕ್ಕೆ ಫೋಟೋ ತೆಗೆಯೋಕ್ಕಾಗೋಲ್ಲ. ಇನ್‌ಸ್ಟಾಲ್‌ಮೆಂಟ್

ಸಿಸ್ಟಮ್‌ನಲ್ಲಿ ತೆಗೆಯುತ್ತೇನೆ' ಎಂದ. ಅಲ್ಲವೇನೇ ನರ್ಮದಾ?" ಎಂದಳು.

ನಾಲ್ವರೂ ಗಾಡಿಯ ಬಳಿಗೆ ಬಂದರು. ಇವರ ಬಣ್ಣಬಣ್ಣದ ಸೀರೆಗಳನ್ನು ನೋಡಿ ಎತ್ತುಗಳು ಬೆದರಿ ಹಿಮ್ಮೆಟ್ಟಿದವು. ಹುಲಿಯ ಪಟ್ಟೆಯ ಸೀರೆಯುಟ್ಟಿದ್ದ ಚಂಪಾ ಹಿಂದೆ ಹಾರಿಬಿದ್ದು,

"ಯಾಕೆ ಮೀರಾ, ಎತ್ತು ಹೀಗಾಡುತ್ತವೆ?" ಎಂದಳು.

'ಈ ಕಡೆ ಬಾ ಮಗೂ. ಎತ್ತುಗಳು ನಿನ್ನ ಸೀರೆ ನೋಡಿ ಹುಲಿ ಅಂತ ತಿಳಿದುಕೊಂಡುಬಿಟ್ಟಿವೆ."

"ಹ್ಞೂ, ಹತ್ತಿ. ರಾಜೂ ನೀನು ಮೊದಲು ಹತ್ತಿಬಿಡಮ್ಮ. ನೀನು ಹತ್ತಿದ ಮೇಲೂ ಗಾಡಿ ಜಖಂ ಆಗದೆ, ಇನ್ನೂ ಸ್ಥಳವಿದ್ದರೆ ನಾವೆಲ್ಲಾ ಹತ್ತುತ್ತೇವೆ" ಎಂದಳು ಚಂಪಾ.

ರಾಜು ಮುಖ ಕೆಂಪಗೆ ಮಾಡಿಕೊಂಡು "ಮೀರಾ, ಹೇಗೆ ಹತ್ತೋದು?"

"ಮೇಲಕ್ಕೆ ನೆಗೆದು ಕುಳಿತುಕೊಂಡುಬಿಡು" ಮೀರ ಸಲಹೆ ಕೊಟ್ಟಳು.

"ಮೀರಾ, ರಾಜು ಕೈಲಿ ಅದು ಸಾಧ್ಯವೇ. ನೀನೇ ಹೇಳು? ಎಲ್ಲಿಂದಾದರೂ ಒಂದು ಸ್ಟೂಲು ತರಿಸಿದರೆ ಸರಿಹೋಗುತ್ತದೆ."

"ನಿಂಗ ಸ್ಟೇಷನ್ ಮಾಸ್ಟರ್ ಹತ್ತಿರ ಹೋಗಿ ಒಂದು ಕುರ್ಚಿ ತಗೊಂಡು ಬಾ."

ನಿಂಗ ತಂದ ಕುರ್ಚಿಯ ಸಹಾಯದಿಂದ ನಾಲ್ಕು ಜನರೂ ಹತ್ತಿ ಕುಳಿತ್ತು ಕೊಂಡರು. ನಿಂಗ ಗಾಡಿಯ ಮೂಕಿಯ ಮೇಲೆ ಕುಳಿತು ಎತ್ತುಗಳನ್ನು ಚಾಟಿಯಿಂದ ಮೆಲ್ಲಗೆ ಹೊಡೆದ. ಎತ್ತುಗಳು ನಿಧಾನವಾಗಿ ಹೊರಟವು.

"ಇದು ನಮ್ಮೂರಿನ ರೋಲ್ಸ್ ರಾಯ್ಸ್."

"ಕುಸುಮಾಗೆ ಪಾಸಾಯಿತೇನು?"

"ಮೂರರಲ್ಲೂ ಎಗರಿಹೋಯಿತು. ಸೆಪ್ಟೆಂಬರ್ ಇರುವವರೆಗೆ ಭಯವಿಲ್ಲ."

"ಈಗಲೂ ನೀವು ಮೂರು ಜನ ಒಟ್ಟಿಗೆ ಹೋಗುತ್ತೀರಾ?"

"ಹ್ಞೂ. ನರ್ಮದಾ ನಮ್ಮಿಂದ ಬೇರೆಯಾಗಿ ಮೆಡಿಕಲ್‌ಗೆ ತಾನೊಬ್ಬಳೇ ಹೋಗೋಣಾಂತ ತುಂಬಾ ಪ್ರಯತ್ನ ಪಟ್ಟಳು. ಆದರೆ ಅವಳಿಗೆ ಸಿಗಲಿಲ್ಲ. ಮೀರಾ, ಮೆಡಿಕಲ್‌ಗೆ ನೀನು ಪ್ರಯತ್ನಿಸಿದ್ದರೆ ಖಂಡಿತ ಸಿಗುತ್ತಿತ್ತು."

ಗೆಳತಿಯರನ್ನು ಸಂಧಿಸಿದ ಆನಂದದಲ್ಲೂ ಮೀರಳ ಮನಸ್ಸು ಖಿನ್ನ ವಾಯಿತು. "ನಾನು ಆ ಪುಣ್ಯ ಪಡೆದು ಬಂದಿಲ್ಲ" ಎಂದಳು. ಧ್ವನಿ ಭಾರವಾಯಿತು. ಕಣ್ಣು ತೇವಗೊಂಡಿತು.

"ಮೀರಾ, ಆ ಕನ್ನಡ ಮೇಡಂಗೆ ಬೆಂಗಳೂರಿಗೆ ವರ್ಗವಾಯಿತು."

"ರಾಧಾ ಕಾಗದ ಬರೆದಿದ್ದಳೇ ನರ್ಮದಾ?"

"ಹ್ಞೂ. ಎರಡನೇ ಕುಮಾರನಿಗೆ ಆಗಲೇ ತಯಾರಿ ನಡೆದಿದೆ" ಎಂದಳು ನರ್ಮದಾ.

ಮನೆ ಬರಲು ಮೀರಾ, ಚಂಪಾ, ನರ್ಮದಾ ಮೊದಲು ಕೆಳಗಿಳಿದರು. ಚಂಪಾ

"ರಾಜೂ, ಹುಷಾರಾಗಿ ಇಳಿಯಮ್ಮ. ಭೂಮಿತಾಯಿ ನೊಂದಾಳು" ಎಂದು ಎಚ್ಚರಿಸಿದಳು.

"ಮನೆ ಎಷ್ಟು ಸುಂದರವಾದ ಸ್ಥಳದಲ್ಲಿದೆ! ಮೀರಾ, ನೀನು ಲಕೀ ಕಣೆ. ನಿನ್ನ ಮನೆ, ನಿನ್ನ ಜೀವನ ಕವಿಯ ಕನಸು" ಚಂಪಾ ಹೇಳಿದಳು.

ಮೀರ ಏನು ಹೇಳಲು ತೋರದೆ ಪೆಚ್ಚಾಗಿ ನಕ್ಕಳು.

"ಬನ್ನಿ. ಇಡ್ಲಿ, ಕಾಫಿ ತಗೋಳೋರಂತೆ."

"ತಾಳಮ್ಮ, ಸೀರೆ ಬದಲಾಯಿಸಿಕೊಂಡು ಬರುತ್ತೇವೆ" ಎಂದು ಹೇಳಿ ಎಲ್ಲರೂ ಬಿಳಿ ಚೀಟಿ ಸೀರೆಗಳನ್ನು ಉಟ್ಟುಕೊಂಡರು.

ಇಡ್ಲಿ, ಬೆಣ್ಣೆ, ಕಾಫಿಯ ಸಮಾರಾಧನೆಯಾದ ನಂತರ ಮೂವರೂ ಡ್ರಾಯಿಂಗ್ ರೂಮಿನಲ್ಲಿ ಧಾಳಿ ನಡೆಸಲಾರಂಭಿಸಿದರು.

"ಮೀರಾ, ಈ ಸೋಫಾ ಸೆಟ್ಟು ತುಂಬಾ ಚೆನ್ನಾಗಿದೆ ಕಣೆ. ಆದರೆ ಈ ಊರಿನಲ್ಲಿ ಇದನ್ನು ಮೆಚ್ಚುವವರು ಬರಬೇಕಲ್ಲ."

ಮೀರ ಸಪ್ಪೆ ಧ್ವನಿಯಲ್ಲಿ "ನನಗೊಬ್ಬಳಿಗೆ ಮೆಚ್ಚುಗೆಯಾದರೆ ಸಾಕು" ಎಂದಳು.

"ಈ ಊರಿನಲ್ಲಿ ಸಿನಿಮಾ, ರೇಡಿಯೋ...."

"ಇಲ್ಲಿ ಕರೆಂಟೇ ಇಲ್ಲ."

"ಮೀರಾ, ಚಂಪಳ ಹೊಸ ರೀತಿಯ ಹೆರಳು ನಿನಗೆ ಒಪ್ಪಿತಾ?"

"ತುಂಬಾ ಮುದ್ದಾಗಿದೆ. ನನಗೂ ಹೇಳಿಕೊಡೆ."

ಗೆಳತಿಯರು ಎರಡು ಗಂಟೆಯವರೆಗೂ ಮಾತನಾಡುತ್ತ ಕಳೆದರು.

ಶಾಮು ಇನ್ನೂ ಮನೆಗೆ ಬಂದಿರಲಿಲ್ಲ.

"ಊಟಕ್ಕೆ ಏಳೋಣ."

"ತಾಳು. ನಿನ್ನ ಗಂಡ ಮಹಾರಾಯನೂ ಬರಲಿ. ಈಗಲೇ ಹಸಿವಿಲ್ಲ."

ಮೀರ ಉಪಾಯಗಾಣದೆ ಸುಮ್ಮನಾದಳು. ಮೂರು ಗಂಟೆಯ ಹೊತ್ತಿಗೆ ಶಾಮು ಮನೆಗೆ ಬಂದ. ಮೀರ ತನ್ನ ಗೆಳತಿಯರನ್ನು ಕರೆದುಕೊಂಡು ಹೋಗಿ ಪರಿಚಯ ಮಾಡಿಸಿದಳು. ಶಾಮು ಮಾತನಾಡದೆ ಕೈಮುಗಿದು ಆಚೆಗೆ ಹೊರಟು ಹೋದ. ಮೀರ ಅಪ್ರತಿಭಳಾದಳು. ಪರಿಚಯ ಮಾಡಿಸಿದ ಕ್ಷಣ ಮುಖಕ್ಕೆ ಹೊಡೆದ ಹಾಗೆ ಶಾಮು ಹೊರಟು ಹೋಗಬಹುದೆಂದು ಅವಳು ನಿರೀಕ್ಷಿಸಿರಲಿಲ್ಲ.

"ಅವರು ಇನ್ನೂ ಸ್ನಾನ ಮಾಡಿಲ್ಲ" ಎಂದಳು, ಗೆಳತಿಯರ ಕೊಂಕು ನೋಟಕ್ಕೆ ಉತ್ತರವಾಗಿ. ಸ್ನಾನ ಮಾಡಿದವನೇ ಶಾಮು ಏನೋ ನೆಪ ಹಾಕಿಕೊಂಡು ಜೋಯಿಸರ ಮನೆಗೆ ಹೋದ. ಒಳಗೇ ಕುದಿಯುತ್ತಿದ್ದ ಮೀರ ಗೆಳತಿಯರನ್ನು ಊಟಕ್ಕೆಬ್ಬಿಸಿದಳು.

ಊಟವಾದ ನಂತರ ಸಂಜೆಯವರೆಗೆ ಮಾತುಕತೆಗಳಿಗೆ ಬಿಡುವಿರಲಿಲ್ಲ. ಐದು ಗಂಟೆಯ ನಂತರ ಮೀರ,

"ಏಳಿ, ಎಲ್ಲರೂ ತಲೆ ಬಾಚಿಕೊಂಡು ವಾಕಿಂಗ್ ಹೋಗಿಬರೋಣ" ಎಂದಳು.

"ಮೀರಾ, ನಾನು ಹಾಕಿಕೊಂಡಿರುವ ಹೆರಳಿನ ಮಾದರಿಯನ್ನು ನಿನಗೆ ಈಗ ಹಾಕುತ್ತೇನೆ" ಎಂದಳು ಚಂಪಾ.

"ಹಾಗೇ ಆಗಲಿ. ಲೇ ರಾಜೂ ಏಳೇ" ಎಂದು ಮೀರಾ ಮಲಗಿ ನಿದ್ರಿಸುತ್ತಿದ್ದ ರಾಜುವನ್ನು ತಿವಿದಳು.

"ಬರೀ ಬೇಳೆ ತಿಂದು, ಮಧ್ಯಾಹ್ನ ಹೀಗೆ ನಿದ್ದೆ ಮಾಡಿದರೆ ಮೈ ಬರದೆ ಏನಾಗುತ್ತದೆ" ಎಂದು ಚಂಪಾ ಟೀಕಿಸಿದಳು.

ರಾಜು ಮಿಸುಕಾಡದಿರುವುದನ್ನು ನೋಡಿ ಚಂಪಾ ಎದ್ದು ಹೋಗಿ ನೀರು ತಂದು ರಾಜುವಿನ ಕಿವಿಯೊಳಗೆ ಹಾಕಿದಳು. ರಾಜು ಬೆಚ್ಚಿ ಎದ್ದು ಕುಳಿತು ಕಣ್ಣುಜ್ಜಿಕೊಂಡು ಸುತ್ತಲೂ ಇದ್ದ ಗೆಳತಿಯರನ್ನು ನೋಡಿದಳು. ಮೀರ ತಲೆಗೂದಲಿಗೆ ಕೊಬ್ಬರಿ ಎಣ್ಣೆ ಹಚ್ಚಿಕೊಳ್ಳುತ್ತಿರುವುದನ್ನು ನೋಡಿ,

"ಓ, ಆಗಲೇ ನೀವೆಲ್ಲಾ ರೆಡಿಯಾಗ್ತಿದೀರ" ಎಂದಳು.

ಚಂಪಾ ಮೀರಳ ಕೂದಲನ್ನು ನಯವಾಗಿ ಬಾಚಿ ಕೂದಲಿನ ರಾಶಿಯೊಳಗೆ ಕಪ್ಪು ರೇಷ್ಮೆಯ ಸುರುಳಿಯನ್ನಿಟ್ಟು, ಕೂದಲಿನ ಎಳೆಗಳನ್ನು ಅದಕ್ಕೆ ಸುತ್ತಿ ಓರಣವಾಗಿ ಹೆರಳು ಹಾಕಿದಳು. ಮೀರಳ ಜಡೆ ಮೋಟಾಗಿದ್ದರೂ, ಅಗಲವಾದ ಹೆರಳು ನೋಡಿದವರಿಗೆ ಎಷ್ಟೊಂದು ಕೂದಲಿದೆ! ಎನಿಸುವಂತಿತ್ತು. ಹೆರಳಿಗೆ ನೀಲಿ ಪಟಿಕದ ದಂಡೆಯನ್ನು ಮಾಟವಾಗಿ ಸುತ್ತಿ, ತಲೆಯ ಹಿಂದೆ ಒಂದು ಕನ್ನಡಿ ಹಿಡಿದು, ಚಂಪಾ ಹೆರಳಿನ ಅಂದವನ್ನು ಮೀರಳಿಗೆ ತೋರಿಸಿದಳು.

"ನಿನ್ನ ಕೈಗೆ ಕೆಂಪಿನ ತೋಡಾ ಹಾಕಿಸಬೇಕು" ಎಂದು ಮೀರ ಹೊಗಳಿದಳು. ಮೀರ ತಾನು ಮುಡಿದಿದ್ದ ಹೂವಿನ ದಂಡೆಯನ್ನು ಅನುಸರಿಸಿ ಅದೇ ಬಣ್ಣದ ಸೀರೆಯುಟ್ಟು ಸಿದ್ಧವಾದಳು.

ಆರು ಗಂಟೆ ಹೊತ್ತಿಗೆ ಗೆಳತಿಯರ ಶೃಂಗಾರವೆಲ್ಲ ಮುಗಿಯಿತು. ಎಲ್ಲರೂ ಗಲಾಟೆ ಮಾಡುತ್ತಾ ಮನೆಯಿಂದ ಹೊರಬಿದ್ದರು. ಎರಡು ಕಡೆಯ ಮನೆಯವರೂ ಬಣ್ಣದ ಚಿಟ್ಟೆಗಳನ್ನು ನೋಡಿ ಬೆರಗಿನಿಂದ ಬಾಗಿಲಿನ ಬಳಿ ಬಂದು ನಿಂತರು.

ಮೀರ ಗೆಳತಿಯರನ್ನು ಮೊದಲು ದೇವಸ್ಥಾನಕ್ಕೆ ಕರೆದುಕೊಂಡು ಹೋದಳು. ದೇವರಿಗೆ ಹಣ್ಣು, ಕಾಯಿ ಮಾಡಿಸಿ ತೀರ್ಥ, ಮಂಗಳಾರತಿ ತೆಗೆದುಕೊಂಡು ಹೊರಟರು.

ಸೂರ್ಯನ ಚಿನ್ನದ ಕಿರಣಗಳು ಕೆರೆಯ ನೀರಿನ ಮೇಲೆ ಹೊಳೆಯುತ್ತಿದ್ದವು. ನೀರು ಚಿನ್ನದ ತಗಡಿನಂತೆ ಥಳಥಳಿಸುತ್ತಿತ್ತು. ಕೆರೆಯ ಸಮೀಪದಲ್ಲಿ ವಿಶಾಲವಾದ ಹೊಂಗೆಯ ಮರಕ್ಕೆ ಕಟ್ಟಿದ್ದ ಉಯ್ಯಾಲೆಯಲ್ಲಿ ಐದಾರು ವರ್ಷದ ಮಕ್ಕಳು ತೂಗಿಕೊಳ್ಳುತ್ತಿದ್ದರು. ಆ ರಸಮಯ ಸನ್ನಿವೇಶದಲ್ಲಿ ಚಂಪಳಿಗೆ ಉಯ್ಯಾಲೆಯಲ್ಲಿ ತೂಗಿಕೊಳ್ಳಬೇಕೆಂದು ಆಸೆಯಾಯಿತು.

"ಮೀರಾ, ಉಯ್ಯಾಲೆಯಲ್ಲಿ ತೂಗಿಕೊಳ್ಳಬೇಕಲ್ಲೇ?'

ಮೀರಾ ಉಯ್ಯಾಲೆಯ ಸಮೀಪಕ್ಕೆ ಹೋದಳು. ಹುಡುಗರು ಬೆದರಿ ತಮ್ಮಾಟ ನಿಲ್ಲಿಸಿದರು. ಚಿಂದಿಯ ವಸ್ತ್ರವನ್ನುಟ್ಟಿದ್ದರೂ, ಕರಿಯ ತೊಲೆಯ ತುಂಡಿನಂತಿದ್ದ ಹುಡುಗನೊಬ್ಬನನ್ನು ನೋಡಿ ಮೀರ,

"ವೇಣೂ, ನಾವು ಉಯ್ಯಾಲೆಯಲ್ಲಿ ತೂಗಿಕೊಳ್ಳೋಣವೇನೋ?" ಎಂದಳು.

"ತೂಗಿಕೊಳ್ಳಿ" ಎಂದ ವೇಣು.

ಮೀರ ಕೈಲಿ ಹಿಡಿದಿದ್ದ ಬಾಳೆಹಣ್ಣು, ತೆಂಗಿನಕಾಯಿ ಚೂರನ್ನು ವೇಣುವಿನ ಕೈಗಿತ್ತಳು. ಉಳಿದ ಹುಡುಗರು ಅವನನ್ನು ಮುತ್ತಿಕೊಂಡರು.

ಚಂಪಾ, ನರ್ಮದಾ ಉಯ್ಯಾಲೆಯ ಮೇಲೆ ಕುಳಿತರು. ಮೀರ ಸೀರೆಯ ಸೆರಗನ್ನು ನಡುವಿಗೆ ಸುತ್ತಿಕೊಳ್ಳುತ್ತಾ "ಚಂಪಾ, ಹಗ್ಗ ಬಿಗಿಯಾಗಿ ಹಿಡಿದುಕೋ. ನಾನು ಜೋರಾಗೇ ತೂಗುತ್ತೇನೆ" ಎಂದಳು. ಚಂಪಾ, ನರ್ಮದಾ ಹಗ್ಗ ಬಿಗಿಯಾಗಿ ಹಿಡಿದುಕೊಂಡರು. ಮೀರ ನಿಧಾನವಾಗಿ ತೂಗಲು ಮೊದಲು ಮಾಡಿ ಕೊನೆಗೆ ಜೋರಾಗಿ ತೂಗತೊಡಗಿದಳು. ಉಯ್ಯಾಲೆ ಒಂದು ಬಾರಿ ಆ ಕಡೆಯ ಕೊಂಬೆಗೂ, ಮತ್ತೊಂದು ಬಾರಿ ಎದುರು ಕೊಂಬೆಗೂ ತಗುಲಿ ಬರುತ್ತಿತ್ತು. ಚಂಪಾ ವಿನೋದ ಕ್ಕಾಗಿ ಮರದ ಎಲೆಗಳನ್ನು ಕಿತ್ತು ಮೀರಳ ತಲೆಯ ಮೇಲೆ ಎಸೆಯುತ್ತಿದ್ದಳು. ನರ್ಮದಾ ಹೆದರಿ ಎರಡು ಕೈಗಳಿಂದಲೂ ಹಗ್ಗವನ್ನು ಬಿಗಿಯಾಗಿ ಹಿಡಿದಿದ್ದಳು.

"ಸಾಕೇನು?" ಮೀರ ಉಯ್ಯಾಲೆಯ ಕೆಳಗಿನಿಂದ ತೂರಿ ಬಂದು ಎದುರಿಗೆ ನಿಂತು ಕೇಳಿದಳು.

"ಸಾಲದು" ಎಂದಳು ಚಂಪಾ.

"ನನಗೆ ಸಾಕಮ್ಮ. ಹೆದರಿಕೆ ಆಗುತ್ತದೆ" ಎನ್ನುತ್ತ ಕೆಳಗಿಳಿದಳು ನರ್ಮದಾ.

ಮೀರ ಉಯ್ಯಾಲೆಯೇರಿ ಚಂಪಳ ಪಕ್ಕದಲ್ಲಿ ಕುಳಿತಳು.

"ನೀನು ರಾಜೂ" ಎಂದಳು ಚಂಪಾ.

"ನಾನು ಕುಳಿತುಕೊಳ್ಳುವುದಿಲ್ಲಮ್ಮ. ನನಗೆ ಹೆದರಿಕೆ."

"ಹೆದರಿಕೆ ನಿನಗೋ ಅಥವಾ ಹೊಂಗೆ ಮರಕ್ಕೋ?"

ನರ್ಮದಾ ನಕ್ಕು "ರಾಜೂ ಬೇಡ. ಆಮೇಲೆ ಮರ ಬುಡಸಮೇತ ಕೆಳಗುರುಳುತ್ತದೆ" ಎನ್ನುತ್ತಾ ತೂಗತೊಡಗಿದಳು.

ಸೂರ್ಯ ನಿಧಾನವಾಗಿ ಮುಳುಗತೊಡಗಿದ. ಉಯ್ಯಾಲೆಯಲ್ಲಿ ಮಗ್ನರಾಗಿದ್ದವರ ಮನಸ್ಸು ಅದರಂತೆ ನಲಿದಾಡುತ್ತಿದ್ದಿತು. ಕೆರೆಯಲ್ಲಿ ನೀರು ತುಂಬಿಕೊಳ್ಳುತ್ತ ನಿಂತಿದ್ದ ಹಳ್ಳಿಯ ಹೆಂಗಸರು ತಾವು ಬಂದಿದ್ದ ಕೆಲಸವನ್ನೂ ಮರೆತು ಇವರಾಟವನ್ನೇ ನೋಡುತ್ತ ನಿಂತಿದ್ದರು. ಕತ್ತಲಾಗುತ್ತಿರುವುದನ್ನು ಮೀರ ಗಮನಿಸಿ,

"ನರ್ಮದಾ ನಿಲ್ಲಿಸು, ಕತ್ತಲಾಯಿತು" ಎಂದಳು.

ಚಂಪಾ ಬೆವರಿದ್ದ ಮುಖವನ್ನು ಒರೆಸಿಕೊಂಡು "ನನ್ನ ಪ್ರಿಂಟೆಡ್ ಜಾರ್ಜೆಟ್ ಸೀರೆ ಹಾಳಾಗಿಹೋಯಿತು. ಇಲ್ಲಿಗೆ ಬರುವಾಗ 'ಐರನ್' ಮಾಡಿದ್ದೆ" ಎಂದಳು.

ತಲೆಯ ಮೇಲೆ ಎರಡು ಕೊಡ, ನಡುವಿನಲ್ಲೊಂದು ಕೊಡ ಹಿಡಿದಿದ್ದ ನಾಲ್ಕು ಜನ ಹೆಂಗಸರು ಬಳುಕುತ್ತಾ ಆ ದಾರಿಯಲ್ಲಿ ಬಂದರು. ತಿಮ್ಮಮ್ಮ ಮೀರಳನ್ನು ಗುರುತಿಸಿ, "ಏ ಮಾದಿ, ನೀಲಿ ಸೀರೆ ಉಟ್ಟಿರೋದು ಮೀರವ್ವ ಅಲ್ವಾ" ಎಂದಳು. ಮೀರ ಹತ್ತಿರ ಬರುತ್ತಲೂ,

"ಏನ್ತಾಯಿ, ನಿಮಗೂ ಉಯ್ಯಾಲೆ ಮ್ಯಾಗೆ ಮನಸ್ಸು ಬಂದೈತೆ" ಎಂದಳು.

"ಹ್ಞೂ, ಯಾರಿಗೆ ತಾನೇ ಮನಸ್ಸು ಬರೋಲ್ಲ? ಇವರೆಲ್ಲಾ ಮೈಸೂರಿನಲ್ಲಿ ನನ್ನ ಜೊತೆ ಓದುತ್ತಿದ್ದವರು" ಎಂದು ತನ್ನ ಗೆಳತಿಯರ ಪರಿಚಯ ಮಾಡಿಕೊಟ್ಟಳು. ತಿಮ್ಮಮ್ಮ ಎಲ್ಲರನ್ನೂ ದುರುಗುಟ್ಟಿಕೊಂಡು ನೋಡಿ

"ಎಲ್ಲರಿಗೂ ಲಗ್ನ ಆಗೇದಾ?" ಎಂದಳು.

ಮೀರಳಿಗೆ ಚಾಟಿಯಿಂದ ಹೊಡೆದಂತಾಯಿತು. ಚಂಪಳ ಮುಖ ಕೆಂಪೇರಿತು.

"ಇಲ್ಲ."

"ಇದೆಂತಾ ಚೆಂದ? ಬೆಳೆದ ಉಡುಗೀರನ್ನ ಅಂಗೇ ಬಿಟ್ಟವರೆ? ಇದು ಚೆನ್ನಾಗಿಲ್ಲ ನಮ್ಮವ್ವ."

ನರ್ಮದಾ ನಸುನಕ್ಕು, "ಲಗ್ನ ಆಗೋದರಿಂದ ಸುಖವಿದೆಯೇ ಹೇಳು? ಸಂಸಾರದಲ್ಲಿ ಸುಖವಿದೆ ಅಂತ ನಿನ್ನಂತಹ ಮುಪ್ಪಿನ ಹೆಂಗಸು ಹೇಳಿದರೆ ನಾವೆಲ್ಲಾ ಖಂಡಿತ ಮದುವೆಯಾಗ್ತೀವಿ" ಎಂದಳು.

ತಿಮ್ಮವ್ವ ಒಂದು ಕ್ಷಣ ಸುಮ್ಮನಿದ್ದು,

"ತಾಯೀ ನಾನು ಹಳ್ಳಿ ಹೆಂಗಸು. ಮಾಡಿರುವ ಅಡಿಗೆ ಚೆಂದಾಗಿರಲಿ, ಚೆಂದಾಗಿಲ್ಲದೇ ಇರಲಿ, ಅಸಿವು ಮುಚ್ಕೋಕೆ ಊಟ ಮಾಡಾಕಿಲ್ವಾ, ಅಂಗೇನೆ ಸಂಸಾರದಲ್ಲಿ ಸುಖವಿರಲಿ, ಇಲ್ಲದಿರಲಿ ಪ್ರಾಯಕ್ಕೆ ಬಂದ್ಮೇಲೆ ಲಗ್ನ ಆಗ್ಬೇಕೂಂತ ನಾನು ಯೇಳ್ತೀನಿ."

"ತಿಮ್ಮಮ್ಮ, ನಿನಗೆ ಹೆಣ್ಣು ಮಕ್ಕಳಿದ್ದಾರಾ?"

"ಬೇಕಾದಾಗವ್ರೆ ಕಣವ್ವ."

"ನನ್ನ ವಯಸ್ಸಿನ ಮಗಳಿದ್ದಾಳಾ?"

"ಅವ್ಳೆ ತಾಯಿ."

"ಅವಳಿಗೆ ಮದುವೆ ಮಾಡಿದೀಯಾ? ಎಷ್ಟು ಮಕ್ಕಳಿವೆ?"

"ಎರಡು ಮಕ್ಕಳಿವೆ."

"ಈಗ ನೀನೇ ನಿನ್ನ ಮಗಳನ್ನೂ, ನನ್ನನ್ನೂ ಹೋಲಿಸಿ ನೋಡು. ನಮ್ಮಿಬ್ಬರ ಪೈಕಿ ಯಾರು ಸಂತೋಷವಾಗಿ ಹಕ್ಕಿಯ ಹಾಗೆ ಕಾಲ ಕಳೆಯುತ್ತಿದ್ದಾರೆ, ಯಾರಿಗೆ ಜೀವನದಲ್ಲಿ ಜಿಗುಪ್ಸೆಯಾಗಿದೆ ಎಂದು ನೀನೇ ಹೇಳು."

ತಿಮ್ಮಮ್ಮ ತನ್ನ ಮಗಳು ಮಾದವ್ವನನ್ನೂ, ನರ್ಮದಾನ್ನೂ ಹೋಲಿಸಿ ನೋಡಿದಳು. ಮಾದವ್ವನಿಗೆ ಆಗಲೇ ಸಂಸಾರದಲ್ಲಿ ಬೇಸರ ಬಂದಿತ್ತು. ದೊಡ್ಡ ಮಗುವಿಗೆ ಒಂದು ವರ್ಷ ತುಂಬುವುದಕ್ಕೆ ಮುನ್ನವೇ ಗರ್ಭಿಣಿಯಾಗಿದ್ದಳು. ಎರಡನೇ ಮಗುವಿಗೆ ಹತ್ತು ತಿಂಗಳಾಗಿತ್ತು. ಈಗ ಮಾದವ್ವ ಪುನಃ ಬಸುರಿ. ತಾಯಿಯೆದುರಿಗೆ ಎಷ್ಟೋ ಬಾರಿ "ಈ ಸಂಸಾರ ಸಾಕಾಯಿತವ್ವ" ಎಂದು ನೋವಿನ ಮಾತಾಡಿದ್ದಳು. ನರ್ಮದೆಯ ಮುಖದ ಎಳಸು, ಕಾಂತಿ, ಉಲ್ಲಾಸ ಮಾದವ್ವನ ಮುಖದಲ್ಲಿರಲಿಲ್ಲ. ಆಗಲೇ ಮುಪ್ಪು ಕವಿಯತೊಡಗಿತ್ತು. ಬೇಗ ಬೇಗ ತಾಯಿಯಾಗುತ್ತಿದ್ದುದರಿಂದ ಅವಳ ಆರೋಗ್ಯ ಶೂನ್ಯವಾಗಿತ್ತು. ಸದಾ ಅಳುತ್ತಿದ್ದ ದೊಡ್ಡ ಮಗು, ಪ್ರತಿಯೊಂದು ಕೆಲಸಕ್ಕೂ ತನ್ನನ್ನೇ ಅವಲಂಬಿಸಿದ್ದ ಚಿಕ್ಕ ಮಗು, ಗರ್ಭದಲ್ಲಿ ಮಿಸುಕಾಡುತ್ತಿದ್ದ ಮೂರನೆಯ ಮಗು–ಇವುಗಳ ನಡುವೆ ಸಿಕ್ಕಿ ಮಾದವ್ವ ಜಜ್ಜಿ ಹೋಗಿದ್ದಳು.

ತಿಮ್ಮಮ್ಮ ನರ್ಮದಾಳನ್ನು ಮತ್ತೊಂದು ಬಾರಿ ನೋಡಿದಳು. ತನ್ನ ಮಗಳು ಉರಿಯೊಳಗೆ ಬಿದ್ದ ಹೂವಾದರೆ, ಇಹ ಸಂಸಾರದ, ಉರಿಯ ಸೋಂಕಿಲ್ಲದ ಆಗ ತಾನೆ ಅರಳಿದ ಪುಷ್ಪದಂತಿದ್ದಳು ನರ್ಮದಾ.

"ಯಾಕೆ ತಿಮ್ಮವ್ವ ಸುಮ್ಮನಾದೆ?"

"ನೀವು ಹೇಳೋ ಹಂಗೆ ಮಾದಿ ತುಂಬಾ ಬಳಲೋಗವ್ಳೆ ತಾಯಿ. ನಾವು ಬಡವರು. ಬಡವರಿಗೆ ಈ ಪ್ರಪಂಚದಲ್ಲಿ ಎಲ್ಲಿ ಹೋದರೂ ಸುಖವಿಲ್ಲ. ಲಗ್ನ ಆದ್ರೂ ಇಲ್ಲ. ಆಗ್ದೇ ಇದ್ರೂ ಇಲ್ಲ. ನಮ್ಮ ಮೀರವ್ವನ್ನ ನೋಡಿ ಯೆಂಗವ್ರೆ? ಶಾಮಪ್ನೋರು ರಾಣಿ ಮಡೀಕೊಂಡಂಗೆ ಮಡಗಿದಾರೆ. ಅವರು ಆಕಿದ ಗೆರೆ ದಾಟಾಕಿಲ್ಲ."

"ಹೌದೇನೇ ಮೀರ?"

ನರ್ಮದಾ ಮುಗುಳು ನಗೆಯಿಂದ ಮೀರಳ ಕಡೆ ನೋಡಿದಳು. ವಿಷಾದದ

ನಗೆಯೊಂದು ಮೀರಳ ಮುಖದ ಮೇಲೆ ತೇಲಿಹೋಯಿತು. ಉತ್ತರ ಕೊಡುವ ಸಾಹಸ ಅವಳಿಗಿರಲಿಲ್ಲ.

"ಆಗಲಿ ತಿಮ್ಮಮ್ಮ, ನೀನು ಹೇಳಿದ ಹಾಗೇ ಎಲ್ಲರೂ ಸಂಸಾರದಲ್ಲಿ ಕಷ್ಟಪಡುವುದಿಲ್ಲ. ಆದರೆ ಶಿವ ನಮ್ಮ ಪಾಲಿಗೆ ಸುಖವೇ ಕೊಟ್ಟಿದ್ದಾನೆ ಅಂತ ಏನು ಗೊತ್ತು?"

"ಹಂಗಾದರೆ ಎಷ್ಟು ದಿನಾಂತ ಹೀಗೇ ಇರ್ತೀರಿ?"

"ಸಾಯೋವರೆಗೂ ಹಿಂಗೇ ಇರೋಣಾಂತ ಮನಸ್ಸು ಮಾಡಿದೀನಿ. ಓದಿ ಕೆಲಸಕ್ಕೆ ಸೇರಿ ನನ್ನ ಅನ್ನ ಬಟ್ಟೆ ನಾನು ಸಂಪಾದಿಸುತ್ತೇನೆ. ಗಂಡಸರ ಗುಲಾಮಗಿರಿ ನನಗೆ ಬೇಡ."

"ಅಯ್ಯೋ ನಮ್ಮವ್ವಾ" ಎಂದು ತಿಮ್ಮಮ್ಮ ಮೂಗಿನ ಮೇಲೆ ಬೆರಳಿಟ್ಟು ಕೊಂಡಳು.

"ಬರ್ತೀವಿ ನಾವು" ಎನ್ನುತ್ತ ಮೀರಳ ಪರಿವಾರ ಹೊರಟಿತು.

ಮೀರ ಮನೆ ಸೇರಿದಾಗ ಏಳೂವರೆ ಗಂಟೆಯಾಗಿತ್ತು. ಒಂಭತ್ತು ಗಂಟೆಯ ಹೊತ್ತಿಗೆ ಎಲ್ಲರಿಗೂ ಊಟವಾಯಿತು. ಮೀರ ಗೆಳತಿಯರಿಗೆ ಹಾಸಿಗೆ, ಹೊದಿಗೆ, ದಿಂಬುಗಳನ್ನು ಒದಗಿಸಿದಳು.

ಚಂಪಾ, "ಮೀರ, ನೀನೂ ಇಲ್ಲೇ ಮಲಗಿಕೊಳ್ಳೆ" ಎಂದಳು. ಮೀರಳ ಮನಸ್ಸಿನಲ್ಲೂ ತಾನು ರಾತ್ರಿಯೆಲ್ಲಾ ಗೆಳತಿಯರೊಡನೆ ಮಾತನಾಡುತ್ತ ಸಮಯ ಕಳೆಯಬೇಕೆಂಬ ಅಪೇಕ್ಷೆಯಿತ್ತು. ನರ್ಮದಾ ಕುಹಕದಿಂದ

"ಪಾಪ! ಸುಮ್ಮನಿರು. ಆಮೇಲೆ ಅವಳ ಗಂಡನಿಗೆ ನಿದ್ದೆ ಬರುವುದಿಲ್ಲ." ಎಂದು ಗೇಲಿ ಮಾಡಿದಳು. ಮೀರ

"ಹಾಗೇನಿಲ್ಲ. ನಾನು ಇಲ್ಲೇ ಮಲಗುತ್ತೇನೆ" ಎಂದಳು.

"ಮೀರಾ, ಸ್ವಲ್ಪ ಅಡಿಕೆ ಬೇಕಾಗಿತ್ತು" ರಾಜು ಕೇಳಿದಳು.

"ತಂದುಕೊಡುತ್ತೇನೆ" ಎನ್ನುತ್ತ ಹೊರಗೆ ಹೋದಳು.

ಶಾಮುವಿನ ರೂಮಿನಲ್ಲಿ ದೀಪ ಇನ್ನೂ ಉರಿಯುತ್ತಿತ್ತು. ಶಾಮು ಹಾಸಿಗೆಯ ಮೇಲೆ ಕುಳಿತು ಹೆಂಡತಿಯನ್ನು ಎದುರು ನೋಡುತ್ತಿದ್ದ. ಮೀರ ಬಾಗಿಲು ತಳ್ಳಿ ಒಳಗೆ ಬಂದು ನಿಂತಳು. ಶಾಮು ತಲೆಯೆತ್ತಿ ಅವಳ ಕಡೆ ನೋಡಿದ. ಕೂದಲನ್ನು ಬಿಚ್ಚಿ ಬಣ್ಣದ ರಿಬ್ಬನ್ ಕಟ್ಟಿ ಗೆಳತಿಯರ ಉತ್ತೇಜನದಿಂದ ತಾಂಬೂಲ ಸವಿದು ರಂಗೇರಿದ್ದ ತುಟಿಗಳು, ನಿಂತಿದ್ದ ಭಂಗಿ, ಪ್ರತಿಯೊಂದೂ ಶಾಮುವಿಗೆ ಆಕರ್ಷಣೀಯವಾಗಿ ತೋರಿದವು. ಹಳ್ಳಿಗೆ ಬಂದಾಗಿನಿಂದ ಮೀರ ಎಂದೂ ಅಷ್ಟು ಸುಂದರವಾಗಿ ಕಾಣಿಸಿರಲಿಲ್ಲ.

ಮೀರಳ ಸೌಂದರ್ಯ ಶಾಮುವಿಗೆ ಸುರೆಯ ಮತ್ತನ್ನೇರಿಸಿತು. ಮೆಚ್ಚುಗೆ

ಯಿಂದ ಮಾರ್ದವತೆ ತುಂಬಿದ್ದ ಕಣ್ಣುಗಳಲ್ಲಿ, ಆ ಸೌಂದರ್ಯ ಹೊಂದಬೇಕೆಂಬ ಕಾಮನೆ ಹುಟ್ಟಿತು. ಕಣ್ಣುಗಳು ಕೆಂಪೇರಿ ಕ್ರೂರವಾದವು.

ಮೀರ ಶಾಮುವಿನಲ್ಲಾದ ಬದಲಾವಣೆಯನ್ನು ಗಮನಿಸಿ ಹೊಸಿಲ ಬಳಿಯೇ ನಿಂತಳು.

"ಒಳಗೆ ಬರಬಹುದಲ್ಲಾ" ಶಾಮುವಿನ ದನಿ ಗಡುಸಾಗಿತ್ತು.

ಮೀರ ಒಂದು ಹೆಜ್ಜೆಯೂ ಒಳಗಿಡದೆ "ನಾನು ಇವತ್ತು ನನ್ನ ಸ್ನೇಹಿತೆಯರ ಜೊತೆಯಲ್ಲಿ ಮಲಗುತ್ತೇನೆ. ನಿಮಗೆ ಹೇಳಿಹೋಗಲು ಬಂದೆ" ಎಂದಳು.

"ಒಂದು ಲೋಟ ನೀರು ಕೊಟ್ಟು ಹೋಗು."

ಮೀರ ನೋಟದಿಂದಲೇ ಕೃತಜ್ಞತೆಯರ್ಪಿಸಿ ಅಡಿಗೆ ಮನೆಗೆ ಹೋಗಿ ನೀರು ತಂದು ಮೇಜಿನ ಮೇಲಿಟ್ಟಳು. ಹಿಂದೆ ಅಗುಳಿ ಹಾಕಿದ ಸದ್ದಾಯಿತು. ಮೀರ ನಡುಗಿದಳು. ರೋಷ, ಅಳು ಎರಡೂ ಒಟ್ಟಿಗೆ ಉಕ್ಕಿಬಂದವು. ಬಾಗಿಲಿಗೆ ಅಡ್ಡ ವಾಗಿ ನಿಂತಿದ್ದ ಶಾಮುವಿನ ಬಳಿ ನಿಂತು ದೈನ್ಯದಿಂದ,

"ನಿಮ್ಮ ದಮ್ಮಯ್ಯ, ಬಾಗಿಲು ತೆರೆಯಿರಿ. ನಾನು ಅವರಿಗೆ ಏಳು ನಿಮಿಷ ದಲ್ಲಿ ಬರ್ತೀನೀಂತ ಹೇಳಿ ಬಂದಿದೀನಿ. ಮನೆಗೆ ಬಂದ ಸ್ನೇಹಿತೆಯರ ಎದುರಿನಲ್ಲಿ ಅವಮಾನ ಮಾಡಬೇಡಿ" ಎಂದಳು.

ಆದರೆ ಶಾಮು ಮಾತನಾಡದೆ ಒರಟಾಗಿ ಅವಳನ್ನು ಎಳೆದ.

"ನೀವು ನನ್ನ ಬಿಡದಿದ್ದರೆ ಕೂಗಿಕೊಳ್ಳುತ್ತೇನೆ."

ಶಾಮು ತನ್ನ ಹಿಡಿತ ಬಿಡದಿದ್ದರೂ ಮೀರ ಕೂಗಲಿಲ್ಲ. ಕೂಗುವುದು ಸಾಧ್ಯವಾಗಲಿಲ್ಲ. ಗೆಳತಿಯರೆದುರಿಗೆ ಅಪಮಾನವಾಯಿತೆಂಬ ಸಿಟ್ಟಿನಲ್ಲಿ ಶಾಮು ವಿನ ಮುಖ, ಕೆನ್ನೆ, ಕೈಗಳನ್ನು ಪರಚಿ ಕಚ್ಚಿದಳು. ಶಾಮುವಿನ ಕೆನ್ನೆ ಗೀರಿ ಗಾಯವಾಗಿ ರಕ್ತಬಂದಿತು. ಆದರೆ ಅವನ ವಜ್ರಮುಷ್ಟಿಯಿಂದ ಪಾರಾಗುವುದು ಮಾತ್ರ ಅಸಾಧ್ಯ ವಾಗಿತ್ತು.

ತನ್ನ ಬಯಕೆ ಈಡೇರಿದ ನಂತರ ಶಾಮುವಿನ ಮತ್ತೆಲ್ಲ ಒಂದೇ ಸಲಕ್ಕೆ ಇಳಿದುಹೋಯಿತು. ತಾನು ಪಶುವಿನಂತೆ ವರ್ತಿಸಿದುದಕ್ಕಾಗಿ ಅವನಿಗೆ ನಾಚಿಕೆ ಯಾಯಿತು. ಮೀರ ಸಿಟ್ಟಿನಿಂದ ಬಾಗಿಲೊರಗೆ ನಿಂತು ಅಳುತ್ತಿದ್ದಳು. ಅವಳನ್ನು ಮಾತನಾಡಿಸಿ ಸಮಾಧಾನಪಡಿಸಲು ಅವನಿಗೆ ಮುಖವಿರಲಿಲ್ಲ.

ಮೀರಳಿಗೆ ಮಾರನೆಯ ದಿನ ಗೆಳತಿಯರಿಗೆ ಮುಖ ತೋರಿಸುವುದು ಹೇಗೆ, ಅವರ ವ್ಯಂಗ್ಯ ನೋಟವನ್ನೆದುರಿಸುವುದು ಹೇಗೆ ಎನಿಸತೊಡಗಿತ್ತು. ತಾನು ಗೆಳತಿಯರನ್ನು ಹಳ್ಳಿಗೆ ಕರೆದುದೇ ಅನುಚಿತವಾಯಿತೆಂದು ಕೊಂಡಳು. ಶಾಮು ಅಳುತ್ತಿದ್ದ ಮೀರಳನ್ನು ನೋಡಿ,

"ಮೀರಾ" ಎಂದು ಮೃದುವಾಗಿ ಕರೆದ. ಮೀರ ಮಾತನಾಡಲಿಲ್ಲ.

"ಮೀರಾ, ನನ್ನದು ತಪ್ಪಾಯಿತು. ಬೇಕಾದರೆ ಹೋಗು."

"ನನ್ನ ಮಾತನಾಡಿಸಬೇಡಿ" ಎಂದವಳೇ ಮೀರ ಎದ್ದು ಮೇಜಿನ ಬಳಿ ಹೋಗಿ ಲೋಟದಲ್ಲಿದ್ದ ನೀರನ್ನು ಕೈಗೆ ಸುರಿದುಕೊಂಡು ಮುಖ ಒರೆಸಿ ತಲೆ ಗೂದಲನ್ನು ಬೆರಳುಗಳಿಂದ ಸರಿಪಡಿಸಿಕೊಂಡು ಆಚೆಗೆ ಹೋದಳು.

ಗೆಳತಿಯರು ಮಲಗಿದ್ದ ರೂಮು ಕತ್ತಲೆಯಲ್ಲಿ ಮುಳುಗಿತ್ತು. ಮೀರ "ಚಂಪಾ" ಎಂದು ಮೆಲ್ಲನೆ ಕೂಗಿದಳು.

"ಬಾ ತಾಯಿ, ನಿನಗಾಗಿ ಕಾದು ಕಾದು ಸಾಕಾಯಿತು. ನೀನು ಅಡಿಕೆ ಮರ ನೆಡಲು ಹೋಗಿರಬಹುದು ಎಂದು ದೀಪ ಆರಿಸಿದೆವು."

ಮೀರ ಕುಗ್ಗಿದ ದನಿಯಲ್ಲಿ "ಹಾಳು ಅಡಿಕೆ ಸೀಸೆ ಎಷ್ಟು ಹುಡುಕಿದರೂ ಸಿಕ್ಕಲಿಲ್ಲ. ರಾಜೂ, ತಗೋ ಅಡಿಕೆ ತಂದಿದೀನಿ" ಎಂದಳು.

"ಸರಿ, ರಾಜು ಕನಸಿನ ಯುಗ ಸೇರಿ ಯುಗವಾಯಿತು. ಸುಖ ಪಡೋದಿಕ್ಕೆ ಹುಟ್ಟಿರೋಳು ಅಂದರೆ ರಾಜು. ತಲೆ ಊರಿದಾಗ ನಿದ್ದೆ, ಬೇಕಾದಾಗ ಹಸಿವು, ಪುಣ್ಯಾತಗಿತ್ತಿ" ಎಂದಳು ಚಂಪಾ.

"ಕರೆದಾಗ ನಿದ್ದೆ ಬರುವುದು ಒಂದು ದೇವರಿತ್ತ ವರ. ಅವಳು Dickensನ 'Fat Boy'ನಂತೆ ಯಾವಾಗ ಬೇಕಾದರೂ ಎಷ್ಟು ಹೊತ್ತು ಬೇಕಾದರೂ ನಿದ್ರೆ ಮಾಡುವ ಶಕ್ತಿ ಪಡೆದಿದ್ದಾಳೆ" ಎಂದಳು ನರ್ಮದಾ.

"ಸ್ವಲ್ಪ ಜಾಗ ಬಿಡೆ."

ನರ್ಮದಾ ಮತ್ತಷ್ಟು ರಾಜುವಿನ ಕಡೆ ಸರಿದು ತನ್ನ ಮತ್ತು ಚಂಪಳ ನಡುವೆ ಜಾಗ ಮಾಡಿಕೊಟ್ಟಳು. ಮೂವರೂ ಹರಟೆಗೆ ಪ್ರಾರಂಭ ಮಾಡಿದರು. ಅವರಿಗೆ ನಿದ್ದೆ ಬಂದಾಗ ಎರಡು ಗಂಟೆಯಾಗಿತ್ತು.

ನರ್ಮದಾ ಬೆಳಗಾಗುವಾಗಲೇ "ಜೀವನ ಸಪನಾ ಟೂಟಗಯಾ" ಎನ್ನುತ್ತಾ ಎದ್ದಳು. ರಾಜುವಿನ ಗೊರಕೆ ಸಾಂಗವಾಗಿ ಸಾಗುತ್ತಿತ್ತು. ಚಂಪಾ, ಮೀರ ಹಾಸಿಗೆಯ ಮೇಲಿರಲಿಲ್ಲ.

ಕಾಫಿ ತಿಂಡಿಯಾದ ಮೇಲೆ ಮೀರ ಗೆಳತಿಯರನ್ನು ತಮ್ಮ 'ಆಲೆಮನೆ'ಗೆ ಕರೆದುಕೊಂಡು ಹೋದಳು. ಗೆಳತಿಯರಿಗೆ ಅವರು ಬಯಸಿದಷ್ಟು ಕಬ್ಬಿನ ಹಾಲನ್ನು ಕೊಡಿಸಿ, ಬಿಸಿ ಬೆಲ್ಲ ಕೊಬ್ಬರಿಯ ರುಚಿ ತೋರಿಸಿ ಮನೆಗೆ ಹಿಂದಿರುಗಿದಾಗ ಸೂರ್ಯ ನೆತ್ತಿಯ ಮೇಲಿದ್ದ.

ಗೆಳತಿಯರು ಬಂದು ಎರಡು ದಿನವಾಗಿದ್ದರೂ ಶಾಮು ಅವರುಗಳನ್ನು ಮಾತನಾಡಿಸಿರಲಿಲ್ಲ. ಮೀರಳ ಮನಸ್ಸಿನಲ್ಲಿ ಶಾಮುವಿನ ಔದಾಸೀನ್ಯ ಚುಚ್ಚುತ್ತಿದ್ದರೂ, ಮನಸ್ಸಿನ ಅಶಾಂತತೆಯನ್ನು ಅದುಮಿ ಗೆಳತಿಯರೊಡನೆ ನಗುನಗುತ್ತಾ ಕಾಲ ಕಳೆಯುತ್ತಿದ್ದಳು.

ಚಂಪಾ, ರಾಜು, ನರ್ಮದಾ ಐದು ದಿನ ಹಳ್ಳಿಯಲ್ಲಿ ಕಳೆದರು.

ಆಮೇಲೆ ನರ್ಮದಾ ಊರಿಗೆ ಹೊರಡಲೇಬೇಕೆಂದು ಹಠ ಹಿಡಿದಳು. ಮೀರ ಮನಸ್ಸಿಲ್ಲದ ಮನಸ್ಸಿನಿಂದ ತನ್ನೊಪ್ಪಿಗೆ ಕೊಟ್ಟಳು. ಹೊರಡುವುದಕ್ಕೆ ಮುಂಚೆ ನರ್ಮದಾ

"ನಿನ್ನ ಗಂಡ ಮಹಾರಾಜನಿಗೆ ಹೇಳಿ ಹೋಗಬೇಕಲ್ಲ" ಎಂದಳು.

ಮೀರ ಶಾಮುವಿದ್ದ ರೂಮನ್ನು ತೋರಿಸಿದಳು. ಚಂಪಾ, ನರ್ಮದಾ, ರಾಜು ಒಳಗೆ ಹೋಗಿ

"ನಾವು ಹೋಗಿ ಬರುತ್ತೇವೆ" ಎಂದರು.

"ಒಳ್ಳೆಯದು" ಎಂದು ಕೈಮುಗಿದ ಶಾಮು.

ಮೀರ ಗೆಳತಿಯರನ್ನು ಸ್ಟೇಷನ್ನಿನವರೆಗೂ ಬೀಳ್ಕೊಟ್ಟು ಮನೆಗೆ ಬಂದಳು. ಅವಳು ಮನೆಗೆ ಹಿಂತಿರುಗಿ ಬಂದಾಗಲೂ ಶಾಮು ಮನೆಯಲ್ಲಿದ್ದ. ಗಾಡಿ ಎತ್ತುಗಳ ಗಂಟೆ ಸದ್ದು ಕೇಳಿ ಶಾಮು "ಮೀರಾ" ಎಂದು ಕೂಗಿದ. ಮೀರ ಒಳಗೆ ಬಂದು ನಿಂತಳು.

"ನಿನ್ನ ಸ್ನೇಹಿತರೆಲ್ಲಾ ಹೊರಟು ಹೋದರೇನು?"

"ಹ್ಞೂ."

"ನಾನು ಅವರನ್ನು ಹೆಚ್ಚು ಮಾತನಾಡಿಸಲಿಲ್ಲ ಅಂತ ಅವರೇನೂ ತಿಳಿದು ಕೊಳ್ಳಲಿಲ್ಲ ತಾನೇ!"

ಮೀರ ವ್ಯಂಗ್ಯವಾಗಿ ನಕ್ಕು "ಮನೆಗೆ ಬಂದ ಅತಿಥಿಗಳನ್ನು ಮನೆಯ ಯಜ ಮಾನ ಮಾತನಾಡಿಸದಿದ್ದರೆ ಅವಮಾನವಲ್ಲವೆ?" ಎಂದಳು.

ಶಾಮು ಕ್ಷಮೆ ಕೇಳುವ ದನಿಯಿಂದ ನುಡಿದ:

"ಮೀರಾ, ನನಗೆ ಹೆಣ್ಣುಮಕ್ಕಳೊಡನೆ ಮಾತನಾಡಿ ರೂಢಿಯಿಲ್ಲ."

ಮೀರ ಹಂಗಿಸುವಂತೆ "ಜೋಯಿಸರ ಮಗಳು ವೆಂಕೂ ಬಂದರೆ ಮಾತ್ರ ಗಂಟೆಗಟ್ಟಲೆ ಹರಟೆ ಹೊಡೆಯುತ್ತೀರಿ" ಎಂದಳು.

"ವೆಂಕೂ ನಾನು ಎತ್ತಿ ಆಡಿಸಿದ ಮಗು. ನಾವಿಬ್ಬರೂ ಒಂದೇ ನೆಲದ ಮಕ್ಕಳು. ನಿನ್ನ ಸ್ನೇಹಿತೆಯರು ಆಗತಾನೆ ಇಂಗ್ಲೆಂಡಿನಿಂದ ಬಂದಿಳಿದವರಂತೆ ಸಕ್ಕರೆ ಯಲ್ಲಿ ಕಲ್ಲು ಬೆರೆಸಿದಂತೆ ಕನ್ನಡ, ಇಂಗ್ಲಿಷ್ ಆಡುತ್ತಾರೆ. ಅದನ್ನು ನಾನು ಸರಿ ಯಾಗಿ ಅರ್ಥ ಮಾಡಿಕೊಳ್ಳದೆ ತಪ್ಪಾಗಿ ತಿಳಿಯುವುದಕ್ಕಿಂತ ದೂರವಿರುವುದು ಕ್ಷೇಮವಲ್ಲವೆ?"

ಮೀರಳಿಗೆ ಗಂಡ ತನಗಿಂತ ಕಡಿಮೆ ಓದಿದವನು ಎಂಬ ಸಂಗತಿ ನೆನಪಿಗೆ ಬಂದು ಮನಸ್ಸನ್ನು ಚೇಳಿನಂತೆ ಕುಟುಕಿತು. ಮದುವೆಯಾದ ಗಳಿಗೆಯಿಂದಲೂ ಶಾಮು ಸಾಕಷ್ಟು ಓದಿಲ್ಲವೆಂಬ ವಿಷಯ ಪದೇ ಪದೇ ಅವಳ ಮನಸ್ಸನ್ನು ಹಿಂಸಿಸು

ತ್ತಿತ್ತು. ಎಲ್ಲ ಹುಡುಗಿಯರಂತೆ ಗಂಡನಾದವನು ತನಗಿಂತಲೂ ಹೆಚ್ಚು ಓದಿದವನಾಗಿರಬೇಕೆಂದು ಮೀರ ಅಪೇಕ್ಷಿಸಿದ್ದಳು. ಶಾಮುವ ಬಗ್ಗೆ ಮೀರಳಿಗೆ ತಿರಸ್ಕಾರ ಉಂಟಾಯಿತು.

ಗೆಳತಿಯರು ಬಂದ ರಾತ್ರಿ ಶಾಮು ತನ್ನ ಮೇಲೆ ನಡೆಸಿದ ಅತ್ಯಾಚಾರದಿಂದಾಗಿ ಮೀರ ದೈಹಿಕ ಸಂಬಂಧದ ಬಗ್ಗೆ ಜುಗುಪ್ಸೆ ಹೊಂದಿದಳು. ಗೆಳತಿಯರಿರುವವರೆಗೂ ಅವಳು ಶಾಮುವಿನ ರೂಮಿನಲ್ಲಿ ಕಾಲಿಡಲಿಲ್ಲ. ಆ ರಾತ್ರಿಯ ಅವನ ವರ್ತನೆ ನೆನಪಿಗೆ ಬಂದಾಗಲೆಲ್ಲಾ ಮೀರಳಿಗೆ ಗಂಡ ಹೆಂಡತಿಯ ಸಂಬಂಧವನ್ನೇ ಹರಿದೊಗೆದು ಎಲ್ಲಾದರೂ ಓಡಿ ಹೊರಟು ಹೋಗಬೇಕೆನಿಸುತ್ತಿತ್ತು.

ರಾತ್ರಿ ಹೆಚ್ಚು ಮಾತಿಲ್ಲದೆ ಮೌನವಾಗಿ ಊಟ ಮುಗಿಯಿತು. ಕಸ, ಮುಸುರೆ ಮಾಡಿಕೊಂಡು ವೆಂಕಮ್ಮನವರು ಅಡಿಗೆ ಮನೆಯಲ್ಲಿ ಮಲಗಿದರು. ಮೀರ ಕತೆ ಪುಸ್ತಕವೊಂದನ್ನು ಹಿಡಿದು ಹಾಲಿನ ಮಂಕು ಬೆಳಕಿನಲ್ಲಿ ಓದುತ್ತ ಕುಳಿತಳು. ಹೊರಗೆ ಹೆಂಚಿನ ಮೇಲೆ ಮಳೆ ಹನಿಹನಿಯಾಗಿ ಬೀಳುತ್ತಿತ್ತು.

ಶಾಮು ಮೀರಳಿಗಾಗಿ ಕಾದು ನೋಡಿದ. ಗಂಟೆ ಹನ್ನೆರಡಾದರೂ ಮೀರಳ ಸುಳಿವಿಲ್ಲ. ಆಶ್ಚರ್ಯದಿಂದ ಹೊರಗೆ ಬಂದ. ಚಳಿಗೆ ದೇಹವನ್ನೆಲ್ಲಾ ಮುದುರಿಕೊಂಡು ಕೈಲಿ ಪುಸ್ತಕ ಹಿಡಿದು ಮೀರ ತೂಕಡಿಸುತ್ತಿದ್ದಳು. ಶಾಮು ಅವಳ ಹತ್ತಿರ ಹೋಗಿ ಭುಜ ತಟ್ಟಿ,

"ಮೀರಾ, ಮಲಗಲು ಬರುವುದಿಲ್ಲವೇ?" ಎಂದ.

"ಇಲ್ಲ. ನಾನು ಪುಸ್ತಕ ಓದಬೇಕು."

ಶಾಮು ಅವಳ ಕೈಯಿಂದ ಪುಸ್ತಕ ಕಿತ್ತುಕೊಂಡು ಮಂಕಾಗಿ ಉರಿಯುತ್ತಿದ್ದ ದೀಪವನ್ನು ಊದಿ ಆರಿಸಿದ.

"ಏಳು."

"ನಾನು ಈಗಲೇ ಬರುವುದಿಲ್ಲ. ಕತೆ ಓದಬೇಕು."

"ಇಲ್ಲಿ ತುಂಬಾ ಚಳಿಯಾಗುತ್ತಿದೆ."

"ನನಗೆ ಚಳಿಯಿಲ್ಲ."

"ಏಳುತ್ತೀಯೋ ಇಲ್ಲವೋ?" ಶಾಮು ಕಟುವಾಗಿ ಕೇಳಿದ.

ಮೀರಾ ಪ್ರತಿಭಟಿಸುತ್ತಿದ್ದರೂ ಶಾಮು ಅವಳನ್ನು ಬಲವಂತದಿಂದ ರೂಮಿಗೆ ಕರೆದುಕೊಂಡು ಹೋಗಿ "ಮಲಗಿಕೋ" ಎಂದ. ಮೀರ ಹೆದರಿದ ಮಗುವಿನಂತೆ ಮಲಗಿದಳು. ಶಾಮು ರಗ್ಗನ್ನು ಅವಳಿಗೆ ಹೊದಿಸಿ, ಕಿಟಕಿಯ ಕೆಳಬಾಗಿಲನ್ನು ಮುಚ್ಚಿ, ತನ್ನ ಹಾಸಿಗೆಯ ಮೇಲಿದ್ದ ಶಾಲನ್ನು ತೆಗೆದು ಭುಜದ ಮೇಲೆ ಹಾಕಿಕೊಂಡು ಬಾಗಿಲ ಬಳಿ ನಿಂತು ಮತ್ತೊಮ್ಮೆ ಮೀರಳ ಕಡೆ ನೋಡಿ ಹೊರಟುಹೋದ.

ಮೀರಳಿಗೆ ಅವನ ವರ್ತನೆ ಆಶ್ಚರ್ಯವನ್ನುಂಟು ಮಾಡಿತು. ಆಗ ಪಶುವಿ

ನಂತೆ ವರ್ತಿಸಿದ ಗಂಡನಿಗೂ ಈ ದಿನ ತಾನಾಗಿ ರೂಮನ್ನು ಬಿಟ್ಟುಹೋಗುತ್ತಿರುವ ಗಂಡನಿಗೂ ಬಹಳ ಅಂತರವಿದೆಯೆನ್ನಿಸಿತು. ಅವನ ಮನಸ್ಸಿನ ಮರ್ಜಿಯೇ ಅವನಿಗೆ ತಿಳಿಯಲಿಲ್ಲ. ಶಾಮು ತನ್ನ ಬುದ್ಧಿ, ವಿವೇಕದ ಸಲಹೆಯಂತೆ ವರ್ತಿಸು ವುದಕ್ಕಿಂತಲೂ, ಭಾವನೆ, ಉದ್ವೇಗ, ಅರಿಷಡ್ವರ್ಗಗಳ ದಾಸನಾಗಿದ್ದ. ತನಗೆ ಹಸಿವಾದಾಗ ಇನ್ನೊಬ್ಬರನ್ನು ಕೊಲೆಮಾಡಿ ಅವರ ಸೊತ್ತನ್ನು ಅಪಹರಿಸುವ ಕ್ರೂರತನವಿದ್ದಷ್ಟೇ ತನಗೆ ಹಸಿವಿಲ್ಲದಾಗ ತನ್ನ ಅನ್ನವನ್ನು ಹಸಿದವರಿಗೆ ದಾನ ಮಾಡುವ ಕರುಣಾಳುವೂ ಆಗಿದ್ದ. ಅವನೆಷ್ಟು ಒರಟಾಗಿದ್ದನೋ ಅಷ್ಟೇ ಮೃದು ವಾಗಿಯೂ ಇರಬಲ್ಲನೆಂಬುದು ಮೀರಳಿಗೆ ಆ ದಿನ ತಿಳಿಯಿತು. ತನಗೆ ಅಗತ್ಯ ಕಂಡುಬಂದಾಗ ಮನನೋಯಿಸಿ ಕ್ರೌರ್ಯದಿಂದ ನಡೆಸಿಕೊಂಡ ಮನುಷ್ಯ, ತನಗೆ ಬೇಕಾಗಿಲ್ಲದಾಗ ಅವಳ ಅನುಮಾನ, ಸಂಶಯ ತಿಳಿದು, ಅವಳು ಚಳಿಯಲ್ಲಿ ನಡುಗುತ್ತಿರಬಹುದೆಂದು ಊಹಿಸಿ ಒರಟಾಗಿ ಮಾತನಾಡಿ, ಒಳಗೆ ಮಲಗಿಸಿ, ತಾನು ರೂಮು ಬಿಟ್ಟು ಹೋದ ಪ್ರಸಂಗದಿಂದ ಮೀರ ಚಕಿತಳಾದಳು.

ಬೆಳಿಗ್ಗೆ ಮೀರ ಏಳುವಷ್ಟರಲ್ಲಿ ಎದ್ದು ಕಾಫಿ ಕುಡಿಯುತ್ತಿದ್ದ ಶಾಮು ಅವಳನ್ನು ಕಂಡೊಡನೆ ನಗುತ್ತ,

"ರಾತ್ರಿ ಚೆನ್ನಾಗಿ ನಿದ್ದೆ ಬಂತೇ?" ಎಂದು ಕೇಳಿದ.

ಮೀರ ಅವನ ದನಿಯ ಜಾಡನ್ನು ಸಂಪೂರ್ಣವಾಗಿ ಅಳೆದು ನೋಡಿದಳು. ದನಿಯಲ್ಲಿ ವ್ಯಂಗ್ಯವಿರಲಿಲ್ಲ.

ಸಂಸಾರ ಚಕ್ರ ಮೊದಲಿನಂತೆಯೇ ಉರುಳತೊಡಗಿತು. ಜೀವನದಲ್ಲಿ ಯಾವ ವಿಧವಾದ ವೈವಿಧ್ಯತೆಯೂ ಇಲ್ಲದೆ, ಏರುಪೇರಿಲ್ಲದ ಬದುಕು ಸಾಕಾಗಿತ್ತು. ಈ ರೀತಿಯ ಜೀವನದಿಂದ ಮೀರಳ ಬುದ್ಧಿ, ಮನಸ್ಸು ರೋಸಿಹೋಗಿತ್ತು. ಆಮೆ ತನ್ನ ಚಿಪ್ಪಿನಲ್ಲಿ ತಾನು ಅಡಗುವಂತೆ ಮೀರ ತನ್ನ ಮನಸ್ಸಿನಲ್ಲಿ ಕಲ್ಪನಾ ಸಾಮ್ರಾಜ್ಯ ವನ್ನು ನಿರ್ಮಿಸಿಕೊಂಡು ತಾನದರ ರಾಣಿಯಾಗಿ ದಿನಕ್ಕೊಂದು ಬಗೆಯ ಹಗಲು ಗನಸುಗಳನ್ನು ಕಟ್ಟಿ ಕನಸಿನಲ್ಲಿ ಬದುಕತೊಡಗಿದಳು. ದಿನದಿನಕ್ಕೆ ಹೆಚ್ಚಾಗುತ್ತಿದ್ದ ಮೀರಳ ಅನ್ಯಮನಸ್ಕತೆ, ಮರೆವನ್ನು ಶಾಮು ಗಮನಿಸಿದ.

ಶಾಮು ಹೊಲದಿಂದ ಮನೆಗೆ ಬಂದಾಗ ಮೀರ ಮಾಸಪತ್ರಿಕೆಯೊಂದನ್ನು ಹಿಡಿದು ಕುಳಿತಿದ್ದಳು. ಅವಳ ಕಣ್ಣುಗಳು ಪುಸ್ತಕವನ್ನು ನೋಡುತ್ತಿದ್ದರೂ ಮನಸ್ಸು ರಮ್ಯವಾದ ಕನಸು ಕಟ್ಟುತ್ತಿತ್ತು.

ದೊಡ್ಡದೊಂದು ಆಸ್ಪತ್ರೆ ಸುಸಜ್ಜಿತವಾದ ಬಿಳಿಯ ಉಡುಪುಗಳನ್ನು ಧರಿಸಿದ ದಾದಿಯರು ಗಂಭೀರವಾಗಿ ಅತ್ತಿಂದಿತ್ತ ಓಡಾಡುತ್ತಿದ್ದಾರೆ. ಆಪರೇಷನ್ ಥಿಯೇಟರಿನಲ್ಲಿ ರೋಗಿಯೊಬ್ಬಳು ಮಲಗಿದ್ದಾಳೆ. ಪ್ರಸಿದ್ಧ ವೈದ್ಯರುಗಳು ಆ ರೋಗಿಗೆ ಆಪರೇಷನ್ ಮಾಡುವ ಧೈರ್ಯವಿಲ್ಲದೆ ಹಿಂಜರಿಯುತ್ತಿದ್ದಾರೆ. ಡಾಕ್ಟರ್

ಮೀರಾ ಬಿಳಿಯ ಜಾರ್ಜೆಟ್ ಸೀರೆ ಉಟ್ಟು, ಬಿಳಿಯ ಕೋಟು ತೊಟ್ಟು ಬರುತ್ತಾಳೆ. ಇತರ ವೈದ್ಯರುಗಳು ಗೌರವದಿಂದ ಮೀರಳಿಗೆ ದಾರಿ ಕೊಡುತ್ತಾರೆ. ಮೀರ ಮುಂದೆ ಬಂದು ರೋಗಿಯನ್ನು ಪರೀಕ್ಷಿಸಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿ ಚಾಕು, ಕತ್ತರಿ ಇಟ್ಟು ಸೋಪು ಹಾಕಿ ಕೈ ತೊಳೆದು ತನ್ನ ಬಳಿ ಶುಭ್ರವಾದ ಟವಲೊಂದನ್ನು ಹಿಡಿದು ನಿಂತಿದ್ದ ದಾದಿಯೊಬ್ಬಳಿಂದ ಅದನ್ನು ತೆಗೆದುಕೊಳ್ಳಲು ಕೈಚಾಚುತ್ತಾಳೆ.

ಮೀರಳ ಚಾಚಿದ ಕೈ ಹಿಡಿದು ಯಾರೋ ಎಳೆಯುತ್ತಿದ್ದರು. ಮೀರ ಬಹಿರ್ಮುಖಿಯಾದಳು. ಶಾಮು ಅವಳ ಕೈ ಹಿಡಿದು ಕುಲುಕುತ್ತ "ಮೀರಾ, ಮೀರಾ" ಎಂದು ಕೂಗುತ್ತಿದ್ದ.

"ಏನು?"

"ಏನು ಯೋಚನೆ ಮಾಡುತ್ತಿದ್ದೆ?"

"ಪುಸ್ತಕ ಓದುತ್ತಿದ್ದೆ."

"ಬರೀ ಸುಳ್ಳು. ಪುಸ್ತಕ ಕೈಲಿದ್ದರೂ ನೀನು ಓದುತ್ತಿರಲಿಲ್ಲ."

"ನಿಜವಾಗಿಯೂ ಓದುತ್ತಿದ್ದೆ."

"ತುಂಬಾ ಬೇಜಾರಾಗುತ್ತಿದೆಯೇ?"

"ಹಾಗೇನಿಲ್ಲ."

ಶಾಮುವಿಗೆ ಅವಳ ಮಾತಿನಲ್ಲಿ ನಂಬಿಕೆ ಬರಲಿಲ್ಲ. ಆದರೂ ನಂಬಿದವನಂತೆ ನಟಿಸಿ,

"ಇವತ್ತು ನನ್ನ ಸ್ನೇಹಿತರು ಶ್ರೀರಾಮು, ವೆಂಕಟೇಶು ಬರುತ್ತಾರೆ. ನಾಳೆ ಹೊರಟುಹೋಗಬಹುದು. ಅಡಿಗೆ ಏನಾದರೂ ಹೆಚ್ಚಿಗೆ ಇರಲಿ."

"ಹಾಗೇ ಆಗಲಿ."

ಶ್ರೀರಾಮು, ವೆಂಕಟೇಶು ಪಕ್ಕದ ಹಳ್ಳಿಯವರು. ಶಾಮುವಿಗೆ ಅವರ ಪರಿಚಯ ಬಹಳ ಹಿಂದಿನಿಂದಲೂ ಇತ್ತು. ಯಾವುದೋ ಕಾರಣಕ್ಕಾಗಿ ತನ್ನೂರಿಗೆ ಬರಲಿದ್ದ ಗೆಳೆಯರನ್ನು ಶಾಮು ಸತ್ಕರಿಸಲು ಮನಸ್ಸು ಮಾಡಿದ್ದ.

ಹತ್ತು ಗಂಟೆಗೆ ಶ್ರೀರಾಮು, ವೆಂಕಟೇಶು ಶಾಮುವಿನೊಡನೆ ಮನೆಗೆ ಬಂದರು. ಊಟವಾದೊಡನೆ ಮೂವರೂ ಡ್ರಾಯಿಂಗ್ ರೂಮಿನಲ್ಲಿ ಕುಳಿತರು. ಅವರ ನಡುವೆ ಒಂದು ಕಟ್ಟು ಎಲೆ, ಒಂದು ಪಾವು ಅಡಿಕೆ ಕುಳಿತಿದ್ದವು. ಹರಟುತ್ತ ವೀಳೆಯದೆಲೆಯ ನಾರನ್ನು ತೆಗೆದು ಹಾಕಿಕೊಳ್ಳಲಾರಂಭಿಸಿದರು. ಒಂದು ಕಟ್ಟು ಎಷ್ಟು ಹೊತ್ತು ಬಂದೀತು?

"ಶಾಮಣ್ಣ, ಇನ್ನೂ ಕೊಂಚ ಎಲೆ ತರಿಸಯ್ಯ."

ವೆಂಕಟೇಶು ಕೇಳಿದ.

"ಮೀರ, ಸ್ವಲ್ಪ ಎಲೆ ಅಡಿಕೆ."

ಶಾಮು ಕುಳಿತಲ್ಲಿಂದಲೇ ಕೂಗಿದ.

ಮೀರ ಎಲೆ ಅಡಿಕೆ ತಟ್ಟೆಯನ್ನು ತೆಗೆದುಕೊಂಡು ಡ್ರಾಯಿಂಗ್ ರೂಮಿನೊಳಗೆ ಬಂದಳು. ಅಲ್ಲಿಯ ದೃಶ್ಯ ಅವಳನ್ನು ತಪ್ತಗೊಳಿಸಿತು. ಶ್ರೀರಾಮು, ವೆಂಕಟೇಶು ಅವಳ ಮೆಚ್ಚಿನ ಸೋಫಾದ ಮೆತ್ತೆಯ ಮೇಲೆ ಅವರ ಕೊಳಕು ಕಾಲನ್ನು ಮುದುರಿಕೊಂಡು, ಅಂಗೈಯಿಂದ ಮುಂಗಾಲನ್ನು ನೀವಿಕೊಳ್ಳುತ್ತಾ ಕುಳಿತಿದ್ದರು. ಅವರ ಹೆಬ್ಬೆರಳಿನ ಸುಣ್ಣವೆಲ್ಲಾ ಸೋಫಾದ ಗೌಸಿಗೆ ಒರೆಸಲ್ಪಟ್ಟು ತಾಂಬೂಲದ ಕೆಂಪು ಚುಕ್ಕೆಗಳಿಂದ ಶೋಭಿಸುತ್ತಿತ್ತು. ರತ್ನಗಂಬಳಿಯ ಮೇಲೆಲ್ಲ ವೀಳೆಯದೆಲೆಯ ನಾರುಗಳು, ಬೀಡಿಯ ತುಂಡುಗಳು ಬಿದ್ದಿದ್ದವು. ಒಂದು ಕಡೆ ಎಸೆದ ಬೀಡಿಯ ತುಂಡಿನಿಂದ ಇನ್ನೂ ಹೊಗೆ ಹೊರಡುತ್ತಿತ್ತು. ಮೀರ ಅದರ ಹತ್ತಿರ ಹೋಗಿ ನೋಡಿದಳು. ಪೂರ್ಣವಾಗಿ ಆರಿಸದ ಬೀಡಿಯ ತುಂಡಿನಲ್ಲಿದ್ದ ಕೆಂಡ ರತ್ನಗಂಬಳಿಯ ಮೇಲೆ ನೇಯ್ದಿದ್ದ ಹೂವಿನ ಒಂದು ಭಾಗವನ್ನು ಸ್ವಲ್ಪ ಸುಟ್ಟುಬಿಟ್ಟಿತ್ತು. ಮೀರ ಬೀಡಿಯನ್ನು ಕಾಲಿನಿಂದ ತುಳಿದು ಆರಿಸಿ, ಗಂಡನ ಕಡೆಗೊಮ್ಮೆ ತೀಕ್ಷ್ಣವಾಗಿ ನೋಡಿ ಹೊರಟುಹೋದಳು.

ಶಾಮುವಿನ ಸ್ನೇಹಿತರು ಹೊರಟುಹೋದನಂತರ ಮೀರ ಶಾಮುವನ್ನು ತರಾಟೆಗೆ ತೆಗೆದುಕೊಂಡಳು.

"ಚಂಪಾ, ರಾಜು ಬಂದಿದ್ದಾಗ ಮನೆಯ ಬಾಗಿಲು, ತೊಲೆಗೆಲ್ಲಾ 'ಜೀವನ ಸಪನಾ ಟೂಟಗಯಾ' ಬಂದಿದೆ ಅಂತ ಹೇಳುತ್ತಿದ್ದಿರಲ್ಲಾ ಈಗ ಸೋಫಾ, ರತ್ನಗಂಬಳಿಯ ಪ್ರಾಣಕ್ಕೇ ಸಂಚಕಾರ ಬಂದಿದೆ."

"ನಾನೇನು ಮಾಡಲಿ ಮೀರಾ? ಅವರಿಗೆ ನಾನು ಹೇಗೆ ಹೇಳಲಿ?"

"ನೆಲದ ಮೇಲೆ ಬೀಡಿ ಬಿಸಾಡಬೇಡಿ. ಸೋಫಾ ಇರುವುದು ಸುಣ್ಣದ ಕೈ ಒರೆಸುವುದಕ್ಕಲ್ಲ ಅಂತ ಹೇಳಿ ನಿಮ್ಮ ಟವಲು ಕೊಡಬೇಕಾಗಿತ್ತು."

"ಅವರಿಗೆ ಹಾಗೆಲ್ಲ ಹೇಳಲು ಸಂಕೋಚವಾಯಿತು. ಅಪರೂಪಕ್ಕೆ ಬಂದಿರುವವರಿಗೆ 'ಹೀಗೆ ಮಾಡಬೇಡಿ. ಹಾಗೆ ಮಾಡಿ' ಎಂದು ಹೇಳಲು ಹೇಗೆ ಸಾಧ್ಯ?"

"ನನ್ನ ಕೇಳಿದ್ದರೆ ಒಂದು ತಗಡಿನ ತಟ್ಟೆ ಕೊಟ್ಟು ಇದನ್ನೇ ash tray...."

"ನಾನು ಅವರು ಬೀಡಿಯಲ್ಲಿದ್ದ ಕೆಂಡ ಆರಿಸದೇ ರತ್ನಗಂಬಳಿಯ ಮೇಲೆ ಎಸೆಯುತ್ತಾರೆಂದು ಭಾವಿಸಿರಲಿಲ್ಲ."

ಮೀರ ಸುಟ್ಟುಹೋದ ಭಾಗವನ್ನು ಬೆರಳಿನಿಂದ ಪರೀಕ್ಷಿಸುತ್ತ,

"ಸೊಗಸಾದ ರತ್ನಗಂಬಳಿಯನ್ನು ಹಾಳುಮಾಡಿದರು" ಎಂದು ಗೊಣಗಿದಳು.

ಒಂದು ವಾರದಿಂದಲೂ ಮೀರಳ ಆರೋಗ್ಯ ಸರಿಯಾಗಿರಲಿಲ್ಲ. ಬಚ್ಚಲು

ಮನೆಗೆ ಸ್ನಾನಕ್ಕೆ ಹೋದಾಗ ಒಂದು ಚೆಂಬು ಬಿಸಿನೀರು ಮೈಮೇಲೆ ಬಿದ್ದೊಡನೆಯೇ ತಲೆ ತಿರುಗಿದಂತಾಗಿ ಕಣ್ಣು ಕತ್ತಲಿಟ್ಟಿತು. ಮೀರ ಬಚ್ಚಲು ಕಟ್ಟೆಯನ್ನೊರಗಿ ಎರಡು ಗಳಿಗೆ ಸುಧಾರಿಸಿಕೊಂಡು ಬೇಗ ಸ್ನಾನ ಮುಗಿಸಿ ಈಚೆಗೆ ಬಂದಳು. ಜಡೆ ಹೆಣೆದುಕೊಂಡು ಕುಂಕುಮವಿಡಲು ಕನ್ನಡಿ ಕೈಗೆ ತೆಗೆದುಕೊಂಡು ತನ್ನ ಮುಖವನ್ನು ನೋಡಿಕೊಂಡಾಗ ಮೀರ ತನ್ನ ಕಣ್ಣಿನ ಸುತ್ತ ಕಪ್ಪು ಉಂಗುರ ಮೂಡಿರುವುದನ್ನು ಮೊದಲ ಬಾರಿಗೆ ಕಮನಿಸಿದಳು. ತನ್ನ ಬೆರಳಿನಿಂದ ಕಣ್ಣಿನ ಸುತ್ತಲೂ ಕೈ ಆಡಿಸಿದಳು. ಕೆಂಪಗೆ ತುಂಬಿಕೊಂಡಿದ್ದ ಬೆರಳು, ಬಿಳಿಚಿಕೊಂಡಿದ್ದಂತೆ ತೋರಿತು. 'ಏಕೆ ಹೀಗಾಗಿದೇನೆ' ಎಂದುಕೊಳ್ಳುತ್ತ ಮಣಿಕಟ್ಟಿನಿಂದ ತೋಳಿನವರೆಗೆ ದೃಷ್ಟಿ ಹರಿಸಿದಾಗ ಮೀರಳಿಗೆ ತಾನು ಬಡವಾಗಿದ್ದುದರ ಅರಿವಾಯಿತು. ಮೊದಲು ಅಲುಗಿಸಲು ಕಷ್ಟವಾಗಿದ್ದ ಚೋಲಿ ರವಿಕೆಯ ತೋಳು ಈಗ ಸಡಿಲವಾಗಿತ್ತು. ದುಂಡಗೆ ತುಂಬಿಕೊಂಡಿದ್ದ ತೋಳು ಸ್ವಲ್ಪ ಕರಗಿತ್ತು.

ಮೀರ ಹಣೆಗಿಟ್ಟುಕೊಂಡು ಅಡಿಗೆ ಮನೆಯೊಳಗೆ ಬಂದಳು. ಅಡಿಗೆ ಮಾಡುತ್ತಿದ್ದ ವೆಂಕಮ್ಮನವರಿಗೆ,

"ಬಾಳೇಕಾಯಿ ಉಪ್ಪೇರಿ ಮಾಡಿ. ನಾನು ಹೆಚ್ಚಿಕೊಡುತ್ತೇನೆ" ಎಂದು ಹೇಳುತ್ತ ಬಾಳೆಗೊನೆಯಿಂದ ಎಂಟು ಕಾಯಿಗಳನ್ನು ತೆಗೆದುಕೊಂಡು, ಈಳಿಗೆ ಮಣೆ, ಮೊರವನ್ನು ಹತ್ತಿರಕ್ಕೆಳೆದುಕೊಂಡಳು. ಕೈಗೆ ಕಡಲೆಕಾಯಿ ಎಣ್ಣೆ ಸವರಿಕೊಂಡು, ಬಾಳೆಕಾಯಿ ಸಿಪ್ಪೆ ತೆಗೆಯುತ್ತಿದ್ದಾಗ ಎರಡನೆಯ ಬಾರಿ ತಲೆ ತಿರುಗಿದಂತಾಯಿತು. ಮೀರ ಕಾಯನ್ನು ಕೆಳಗಿಟ್ಟು, ಮೊಳಕಾಲ ಮೇಲೆ ತಲೆಯಿಟ್ಟು ಕುಳಿತಳು. ಒಲೆ ಊದುತ್ತಿದ್ದ ವೆಂಕಮ್ಮನವರು,

"ಮೀರ, ಇದ್ದಿಲು ಡಬ್ಬಿ, ಈ ಕಡೆಗಿಡು" ಎಂದರು.

ಮೀರ ಮಾತನಾಡಲಿಲ್ಲ. ಮೀರಳಿಂದ ಉತ್ತರ ಬರದಿರಲು ವೆಂಕಮ್ಮನವರು ಹಿಂತಿರುಗಿ, ಮೀರ ತಲೆ ತಗ್ಗಿಸಿ ಕುಳಿತಿರುವುದನ್ನು ನೋಡಿ,

"ಯಾಕೆ ತಾಯಿ, ಬೆರಳು ಕತ್ತರಿಸಿಕೊಂಡೆಯಾ? ನೀನು ಹೋಗಿ ಬೆರಳಿಗೆ ಒದ್ದೆಬಟ್ಟೆ ಕಟ್ಟಿಕೋ. ನಾನೇ ಹೆಚ್ಚಿಕೊಳ್ಳುತ್ತೇನೆ" ಎಂದರು.

"ಬೆರಳಿಗೇನೂ ಆಗಲಿಲ್ಲ."

"ಹುಷಾರಾಗಿದೀಯೋ ಇಲ್ಲವೋ?"

"ಯಾಕೋ ಕಣ್ಣು ಕತ್ತಲಿಟ್ಟು, ತಲೆ ತಿರುಗಿದ ಹಾಗಾಯಿತು."

"ಹೋಗಿ ಒಂದು ಗಳಿಗೆ ಮಲಗಿಕೋ. ಶಾಮಣ್ಣ ಗದ್ದೆ ಕಡೆಯಿಂದ ಬಂದ ಮೇಲೆ ಒಳಗೆ ಬಂದು ಊಟ ಮಾಡುವಿಯಂತೆ."

ಮೀರ ಎದ್ದು ನಿಂತು "ಬಾಳೇಕಾಯಿ ಬಿಲ್ಲೆಗಳನ್ನು ತೆಳುವಾಗಿ ಕೊಯಿದು, ಕೆಂಪಗೆ ಕರಿಯಿರಿ. ಉಪ್ಪೇರಿ ನನಗೆ ತುಂಬಾ ಆಸೆ" ಎಂದು ಹೇಳಿ ರೂಮಿಗೆ

ಒಂದು ಹಾಸಿಗೆ ಉರುಳಿಸಿ ಮೈತುಂಬ ಹೊದ್ದು ಮಲಗಿದಳು.

ಶಾಮು ಪಕ್ಕದಲ್ಲಿ ಕುಳಿತು "ಮೀರಾ, ಮೀರಾ" ಎಂದು ಕರೆದಾಗ ಮೀರಳಿಗೆ ಎಚ್ಚರವಾಯಿತು.

"ಗಂಟೆ ಎಷ್ಟು?"

"ಒಂದೂವರೆ, ಊಟ ಮಾಡೋಣ ಏಳು. ಇಷ್ಟು ಹೊತ್ತಿನಲ್ಲಿ ಯಾಕೆ ಮಲಗಿಕೊಂಡೆ? ಹುಷಾರಾಗಿದೀ ತಾನೆ?"

"ಹ್ಞೂ."

ವೆಂಕಮ್ಮನವರು ಗಂಡ ಹೆಂಡತಿಗೆ ತಟ್ಟೆ ಹಾಕಿ, ನೀರಿಟ್ಟಿದ್ದರು. ಶಾಮು ವೆಂಕಮ್ಮನವರು ಬಡಿಸಿದ ಉಪ್ಪೇರಿಯ ರುಚಿ ನೋಡಿ "ಸೊಗಸಾಗಿದೆ" ಎಂದ. ಮೀರಳಿಗೆ ಒಂದು ಬಿಲ್ಲೆಯನ್ನು ಬಾಯಿಗಿಟ್ಟುಕೊಂಡೊಡನೆ ಓಕರಿಕೆ ಬಂದಂತಾಯಿತು. ಅವಳು ಅಸಹ್ಯ ಪಟ್ಟುಕೊಂಡು ಉಪ್ಪೇರಿಯನ್ನು ತಟ್ಟೆಯ ಒಂದು ಮೂಲೆಗೆ ತಳ್ಳಿದಳು.

"ಯಾಕೆ ಮೀರಾ, ಉಪ್ಪೇರಿ ಸೇರುವುದಿಲ್ಲವೇ?"

"ಸೇರದೆ ಏನು, ಯಾಕೋ ಇವತ್ತು ಬೇಕಿಲ್ಲ" ಎಂದು ಮೀರ ಸಾರನ್ನವನ್ನು ಕಲಸಿ, ಸೇರದಿದ್ದರೂ ಬಲವಂತವಾಗಿ ಅಗುಳುಗಳನ್ನು ತಿನ್ನುತ್ತಿದ್ದಳು. ವೆಂಕಮ್ಮನವರು ಸಂದೇಹದಿಂದ ಮೀರಳ ಊಟ ಪರೀಕ್ಷಿಸುತ್ತಿದ್ದರು. ಅವರ ಅನುಭವದ ಬುದ್ಧಿಗೆ ಮೀರಳ ರೋಗದ ಛಾಯೆ ಆಗಲೇ ಹೊಳೆದಿತ್ತು. ಊಟ ಮುಗಿದೊಡನೆ ಶಾಮು ಎದ್ದು ಹೊರಗೆ ಹೋದ. ವೆಂಕಮ್ಮ ಮೀರಳ ಬಳಿ ನಿಂತು,

"ಯಾಕೆ, ಊಟ ಸೇರಲಿಲ್ಲವೇ?" ಎಂದರು.

"ಇಲ್ಲ."

"ಉಪ್ಪೇರಿ ಆಸೆಪಟ್ಟು ಮಾಡಿಸಿದೆ?"

"ಹೌದು. ಆದರೆ ಈಗ ತಿನ್ನುವುದಕ್ಕೆ ಹೋದರೆ ವಾಂತಿ ಬರುತ್ತದೆ."

"ಎಲ್ಲಾ ಒಳ್ಳೇ ಲಕ್ಷಣಗಳು."

ಮೀರಾ ಆಶ್ಚರ್ಯದಿಂದ ತಲೆಯೆತ್ತಿ "ಒಳ್ಳೇ ಲಕ್ಷಣ! ಹಾಗೆಂದರೆ?" ಎಂದಳು. ವೆಂಕಮ್ಮನವರು ಅರ್ಥಗರ್ಭಿತವಾಗಿ ನಕ್ಕು,

'ನೀವು ಎಷ್ಟು ಓದಿದರೇನು ಬಂತು? ಹಾಗೆಂದರೆ ಮಗನೋ, ಮಗಳೋ ಬರುತ್ತಾಳೆ ಅಂತ" ಎಂದರು.

ಮೀರಳ ಕಣ್ಣುಗಳು ಆಶ್ಚರ್ಯ, ಹೆದರಿಕೆಯಿಂದ ಅಗಲವಾದವು. ನಿಜ ಸಂಗತಿಯನ್ನರಿತ ಮನಸ್ಸು ಕುಗ್ಗಿತು. ಸಪ್ಪೆ ದನಿಯಿಂದ,

"ಇಷ್ಟು ಬೇಗ ನನಗೆ ಮಗು ಬೇಕಿರಲಿಲ್ಲ" ಎಂದಳು.

"ನಾವು ಬೇಕು, ಬೇಡ ಅಂತ ಹೇಳೋದಕ್ಕೆ ಸಾಧ್ಯವೇ ತಾಯಿ? ದೇವರು

ಕೊಟ್ಟರೆ ಬೇಡಾಂತ ಹೇಳುವುದು ಸರಿಯೇ?"

ಮೀರಳಿಗೆ ಬೇಗ ತಾಯಿಯಾಗುವ ಅಪೇಕ್ಷೆಯಿರಲಿಲ್ಲ. ಮದುವೆಯಾದ ಗೆಳತಿಯರನೇಕರು ವರ್ಷದೊಳಗೆ ತಾಯಿಯಾದುದನ್ನು ನೋಡಿ ಮೀರ ಅವರನ್ನು ಹಾಸ್ಯ ಮಾಡಿದ್ದಳು. ಆದರೆ ತಾನು ಮದುವೆಯಾಗಿ ಎಂಟು ತಿಂಗಳುಗಳೊಳಗೇ ತಾಯಿಯಾಗುವ ಸೂಚನೆ ಕಂಡುಬಂದಿರುವುದನ್ನು ನೋಡಿ ಮೀರ ಅಧೀರಳಾದಳು. ಹೆಣ್ಣಾದವಳಿಗೆ ಮಗು ಅತ್ಯಗತ್ಯವಾಗಿ ಬೇಕಾದ ವಸ್ತು ಎಂಬ ಭಾವನೆ ಅವಳಲ್ಲಿ ಎಂದೂ ಮೂಡಿರಲಿಲ್ಲ. ಮಕ್ಕಳೆಂದರೆ ಹೆಣ್ಣಿನ ಸ್ವಾತಂತ್ರ್ಯವನ್ನಪಹರಿಸುವ ಜೀವಿ ಎಂದು ತಿಳಿದಿದ್ದಳು. ಮಕ್ಕಳಿಲ್ಲದವರು ತೀರ್ಥಯಾತ್ರೆಗಳನ್ನೂ, ನಾಗರಪ್ರತಿಷ್ಠೆಗಳನ್ನೂ ಮಾಡುವುದನ್ನು ನೋಡಿ ಮೀರ ಬಾಯಿ ಸೊಟ್ಟ ಮಾಡಿ "ಅವರಿಗೆ ಬುದ್ಧಿಯಿಲ್ಲ" ಎನ್ನುತ್ತಿದ್ದಳು. ಅವಳೂ ಮಗುವೂ ಎಂದೂ ಸಮೀಪ ಬಂದಿರಲಿಲ್ಲ. ದೊಡ್ಡಪ್ಪನ ಮನೆಯಲ್ಲಿ ಅವಳೇ ಶ್ರೀಪಾದುವಿಗಿಂತ ಚಿಕ್ಕವಳಾಗಿದ್ದಳು. ಗೆಳತಿಯರ ಚಿಕ್ಕತಂಗಿಯರು, ಪುಟ್ಟತಮ್ಮಂದಿರನ್ನು ನೋಡಿದಾಗ ಒಂದು ಬಾರಿ ಕೆನ್ನೆ ಹಿಂಡುವುದರಲ್ಲೇ ಅವಳ ಮತ್ತು ಮಕ್ಕಳ ಬಾಂಧವ್ಯ ಕೊನೆಗೊಂಡಿತ್ತು. ಗೋಪಣ್ಣನ ಮಗು ಮೂರು ತಿಂಗಳಿನ ಕಿಶೋರನ ಪರಿಚಯ ಮೀರಳಿಗೆ ಸ್ವಲ್ಪವಿತ್ತು. ಕೆಂಪಗೆ ಮೃದುವಾಗಿದ್ದ ಅದರ ಕೈಕಾಲುಗಳು, ಯಾವುದೊಂದು ಆಕೃತಿಯೂ ಇಲ್ಲದ ಆ ಮಾಂಸದ ಮುದ್ದೆ ಅವಳಿಗೆ ಆಕರ್ಷಣೀಯವಾಗಿರಲಿಲ್ಲ. ಈಗ ತಾನು ತಾಯಿಯಾಗಲಿರುವೆನೆಂಬ ಸಂಗತಿ ಅವಳನ್ನು ಬೆಚ್ಚುವಂತೆ ಮಾಡಿತು.

ಮೀರ ಶಾಮುವಿಗೆ ಈ ವಿಚಾರ ತಿಳಿಸಲಿಲ್ಲ. ಆಗಾಗ್ಗೆ 'ವೆಂಕಮ್ಮನವರು ತಪ್ಪು ತಿಳಿದುಕೊಂಡಿರಬಹುದು, ಇನ್ನೊಂದೆರಡು ದಿನ ನೋಡೋಣ' ಎಂದುಕೊಂಡು ಸುಮ್ಮನಾದಳು. ಮತ್ತೊಂದು ವಾರ ಕಳೆಯುವುದರಲ್ಲಿ ಮೀರ ಬಯಕೆ ಸಂಕಟದಿಂದ ತೀರ ಮೆತ್ತಗಾದಳು. ತಿಂದ ಒಂದಗುಳೂ ದಕ್ಕುತ್ತಿರಲಿಲ್ಲ. ತನ್ನ ಸಮಯದ ಒಂದು ಭಾಗವನ್ನು ಮನೆಯ ಹೊರಗೆ ಕಳೆಯುತ್ತಿದ್ದ ಶಾಮು, ಮೀರ ಬಡವಾಗಿರುವುದನ್ನು ಗಮನಿಸಿ ಕಾರಣ ಕೇಳಿದಾಗ ಮೀರ ಇಲ್ಲದ ನಗು ಬೀರಿಸಿಕೊಂಡು "ಏನಿಲ್ಲ" ಎಂದುಬಿಟ್ಟಳು.

ಒಂದು ದಿನ ಸಂಜೆ ಶಾಮು ತಿಂಡಿ ತಿನ್ನಲು ಒಳಗೆ ಬಂದ. ವೆಂಕಮ್ಮನವರು ರಾಗಿರೊಟ್ಟಿ, ಬೆಣ್ಣೆ, ಚಟ್ನಿ ಅವನ ಮುಂದಿಟ್ಟು ಗೋಡೆಯೊರಗಿ ನಿಂತು,

"ಶಾಮಣ್ಣ, ಮೀರ ಹುಷಾರಾಗಿಲ್ಲ. ನೀನು ಅವಳನ್ನು ಸರಿಯಾಗಿ ನೋಡಿಕೋಪ್ಪ. ಅವಳಿಗೆ ಯಾವುದೂ ಕಡಿಮೆ ಮಾಡಬೇಡ" ಎಂದರು.

ಶಾಮು ರೊಟ್ಟಿಯನ್ನು ಚೂರು ಮಾಡುತ್ತ,

"ನಾನು ವಿಚಾರಿಸಿದಾಗ ಹುಷಾರಾಗಿದೀನಿ ಅಂತ ಹೇಳಿದಳು. ಅವಳಿಗೆ ನಾನೇನು ಕಡಿಮೆ ಮಾಡಿದೀನಿ ಹೇಳಿ ಅತ್ತೆ?" ಎಂದ.

"ಹಾಗಲ್ಲಪ್ಪ, ಮೀರಾ ತೀರ ಕುಗ್ಗಿದಾಳೆ. ಪಂಡಿತರಿಗೆ ಹೇಳಿ ಏನಾದರೂ ಲೇಹ, ಕಷಾಯ ಮಾಡಿಸಿಕೊಡು. ದೇಹದಲ್ಲಿ ರಕ್ತವೇ ಇಲ್ಲ. ಬಿಳಿಚಿಕೊಂಡು ಹತ್ತಿಯ ಹಾಗಾಗಿದಾಳೆ."

ಶಾಮು ಗಾಬರಿಯಿಂದ "ಪಂಡಿತರನ್ನು ಕರೆಸುವಷ್ಟು ಆರೋಗ್ಯ ಕೆಟ್ಟಿದೆಯೇ?" ಎಂದ.

ವೆಂಕಮ್ಮನವರು ನಕ್ಕು "ನಿನಗೇನು ತಿಳಿಯುತ್ತದೆ ಹೇಳು. ನಿನ್ನ ವಂಶೋದ್ಧಾರಕನ್ನ ಅವಳು ಹೊತ್ತಿದ್ದಾಳೆ. ಆದುದರಿಂದ ಜೋಪಾನವಾಗಿ ನೋಡಿಕೋ ಅಂತ ಹೇಳಿದೆ" ಎಂದರು.

ಶಾಮುವಿನ ಮುಖ ಹಿಗ್ಗಿನಿಂದ ಊರಗಲವಾಯಿತು. ಅವನಿಗೆ ಮಕ್ಕಳೆಂದರೆ ಅಮಿತ ಪ್ರೇಮ. ಊರಿನ ಎಲ್ಲ ಮಕ್ಕಳನ್ನೂ ಮನೆಗೆ ಕರೆದುಕೊಂಡು ಬಂದು ಕೊಬ್ಬರಿ, ಬೆಲ್ಲ ಕೊಟ್ಟು ಆದರಿಸುತ್ತಿದ್ದ. ಮಕ್ಕಳೊಡನೆ ತಾನೂ ಮಗುವಾಗಿ ಬಿಡುತ್ತಿದ್ದ. ಈಗ ತಾನು ಪುಟ್ಟ ಮಗುವೊಂದರ ತಂದೆಯಾಗಲಿರುವೆನೆಂಬ ಸುದ್ದಿಯನ್ನು ಕೇಳಿ ಶಾಮು ಪುಲಕಿತನಾದ. ಕಾಫಿಯನ್ನು ಒಂದೇ ಗುಟುಕಿಗೆ ಮುಗಿಸಿ ಕಣ್ಣು ದೊಡ್ಡದಾಗಿ ಬಿಟ್ಟು,

"ನಿಜವಾಗಿಯೂ!" ಎಂದ.

"ಹೌದು ಶಾಮಣ್ಣ."

ಶಾಮು ಎದ್ದು "ಮೀರಾ ಎಲ್ಲಿ?" ಎಂದ.

"ಎಲ್ಲೋ ಕಾಣೆ."

ಶಾಮು ಮೀರಳನ್ನು ಹುಡುಕತೊಡಗಿದ. ಅವಳ ಹೆಸರು ಹಿಡಿದು ಕೂಗುತ್ತ ಮನೆಯ ಹಿಂಭಾಗಕ್ಕೆ ಬಂದ.

ಮನೆಯ ಹಿತ್ತಿಲು ವಿಶಾಲವಾಗಿತ್ತು. ಹಿಂಭಾಗದಲ್ಲಿ ತೆಂಗು, ಮಾವಿನ ಮರಗಳಿದ್ದವು. ಹಲೆಯ ಮಾವಿನ ಮರವೊಂದರ ಬುಡದ ಹಿಂದೆ ಹಸಿರು ವಾಯಿಲ್ ಸೀರೆಯ ಸೆರಗು ಗಾಳಿಗೆ ಹಾರಾಡುತ್ತಾ ಮರದ ಹಿಂದೆ ಇಣುಕಿ ಇಣುಕಿ 'ಒಡತಿ ಇಲ್ಲಿದ್ದಾಳೆ' ಎಂದು ಕೂಗಿ ಹೇಳಿತು. ಅವಳಿರುವ ಸ್ಥಳವನ್ನರಿತ ಶಾಮು ಮೆಲ್ಲಗೆ ಹಿಂಭಾಗದಿಂದ ಹೊರಟು ನಿಧಾನವಾಗಿ ಸದ್ದು ಮಾಡದೇ ಅವಳ ಹಿಂದೆ ಬಂದುನಿಂತ. ಮಾವಿನ ಮರದ ಬುಡಕ್ಕೆ ಹಬ್ಬಿಕೊಂಡು ಸಣ್ಣ ಹುತ್ತವೊಂದಿತ್ತು. ಶಾಮು ನೋಡುತ್ತಿದ್ದಂತೆಯೇ ಮೀರ ಆ ಹುತ್ತದ ಮೇಲೆ ಹತ್ತಿ ಮಣ್ಣನ್ನು ಕಿತ್ತಳು. ಕೆಂಪಾಗಿದ್ದ ಎಡ ಅಂಗೈ ಮೇಲೆ ಹೆಂಟೆಯನ್ನಿಟ್ಟು ಬಲಗೈ ಬೆರಳಿನಿಂದ ಹೆಂಟೆಯನ್ನೊಡೆದು ಹೊಸಕಿ ಪುಡಿ ಮಾಡಿದಳು. ಸಣ್ಣ ಕಲ್ಲು ಬೆರೆತಿದ್ದ ಮಣ್ಣನ್ನು ಕೈಯಲ್ಲೇ ಕೇರಿ ಹಿಂದೆ ಉಳಿದ ಮಣ್ಣನ್ನು ಬಾಯಿಗೆ ಹಾಕಿಕೊಂಡಳು.

"ಮೀರಾ."

ಮೀರ ಬೆಚ್ಚಿಬಿದ್ದು ಬಲಗೈಯಲ್ಲಿದ್ದ ಮಣ್ಣನ್ನು ಬೆರಳುಗಳಿಂದ ಬಿಗಿಯಾಗಿ ಮುಚ್ಚಿ "ಏನು?" ಎಂದಳು.

"ಏನು ಮಾಡುತ್ತಾ ಇದೀಯಾ?"

ಮೀರಳ ಬಿಳುಪೇರಿದ್ದ ಕೆನ್ನೆಗಳು ತಿಳಿಗೆಂಪಾದವು.

"ಏನೂ ಇಲ್ಲ" ಎಂದು ಸಂಕೋಚದಿಂದ ಹೇಳಿದಳು.

"ಏನು ತಿನ್ನುತ್ತಾ ಇದ್ದೆ?"

"ಏನಿಲ್ಲ!"

ಶಾಮು ಅವಳ ಬಲಗೈ ಹಿಡಿದು, ಹಿಡಿಯನ್ನು ಮೃದುವಾಗಿ ಬಿಡಿಸಿದ. ಅಂಗೈ ಮೇಲೆ ತಿಳಿಯಾದ ಮಣ್ಣು ಹುಡಿ ಹುಡಿಯಾಗಿ ನಿಂತಿತ್ತು. ಮೀರಳಿಗೆ ತಲೆ ಎತ್ತಲು ನಾಚಿಕೆಯಾಯಿತು. ಶಾಮು ನಕ್ಕು,

"ಓಹೋ, ಈ ಮಣ್ಣು ತಿನ್ನುತ್ತಿದ್ದೀಯಾ? ಇಂತಹ ಬಯಕೆಗಳಾದರೆ ಸುಖವಾಗಿ ಪೂರೈಸಬಹುದು" ಎಂದು ಹೇಳುತ್ತ ಹುತ್ತದಿಂದ ದೊಡ್ಡ ಹೆಂಟೆಯೊಂದನ್ನು ಕಿತ್ತು ಪುಡಿಮಾಡಿ, ಸುಮಾರು ಒಂದು ಬೊಗಸೆಯಷ್ಟಾದ ಮಣ್ಣನ್ನು ಅವಳ ಮುಂದೆ ಹಿಡಿದು "ತೆಗೆದುಕೋ" ಎಂದ.

"ನನಗೆ ಬೇಡ."

"ಇದು ನಿನ್ನ ಬಯಕೆ ಅಲ್ಲವೇ?"

"ಹಾಗಾದರೆ ಮಣ್ಣು ತಿನ್ನಿಸುವುದರಲ್ಲೇ ನನ್ನ ಬಯಕೆಗಳನ್ನೆಲ್ಲಾ ಮುಗಿಸಿಬಿಡುತ್ತೀರೇನು?"

ಶಾಮು ಕೈಯಲ್ಲಿ ಹಿಡಿದಿದ್ದ ಮಣ್ಣನ್ನು ಚೆಲ್ಲಿ ಅವಳ ಸೊಂಟದ ಸುತ್ತ ಕೈಹಾಕಿ,

"ನನ್ನ ಮಗು ಏನು ಬಯಸಿದರೂ ತಂದುಕೊಡುತ್ತೇನೆ. ಆದರೆ ಅಸಾಧ್ಯವಾದುದನ್ನು ಬಯಸಬಾರದು" ಎಂದ.

ಮೀರ ಅವನ ಕೈ ತಳ್ಳುತ್ತ "ಯಾರಾದರೂ ನೋಡಬಹುದು. ಮರ್ಯಾದೆ ಮಾರಿನ ಅಂತರದಲ್ಲಿ ಬನ್ನಿ" ಎಂದಳು.

"ರಾಣಿಯವರ ಅಪ್ಪಣೆ."

"ಈ ಹುತ್ತ ಒಡೆಸಿ, ಮರಳು ತರಿಸಿ ಹಾಕಿಸಿದರೆ ಇಲ್ಲಿ ಪುನಃ ಹುತ್ತ ಏಳುವುದಿಲ್ಲ!"

"ನಾನು ಹುತ್ತ ಒಡೆಸಿಬಿಟ್ಟರೆ ನಿನ್ನ ಗತಿ ಏನು?"

"ಅಯ್ಯೋ ಒಡೆಸಿಬಿಡಿ. ಆಮೇಲೆ ಹಾವು ಬಂದು ಸೇರಿಬಿಡುತ್ತದೆ."

"ಅತ್ತೆ ರೊಟ್ಟಿ ಚೆನ್ನಾಗಿ ಮಾಡಿದಾರೆ. ಅದರ ರುಚಿ ನೋಡು ಬಾ."

"ನನಗೆ ಅದು ಸೇರೋದಿಲ್ಲ!"

"ಹಾಗಾದರೆ ನಿನಗೆ ಏನು ಸೇರುತ್ತದೆ? ಹೋಗಲಿ, ನಾನು ಕೊಡುವುದನ್ನು ತಕರಾರಿಲ್ಲದೆ ತೆಗೆದುಕೊಳ್ಳುತ್ತೀಯಾ?"

ಮೀರ ಕೊರಳು ಕೊಂಕಿಸಿ "ಊಹ್ಞೂ, ನೀವು ಕೊಡುವುದರಿಂದ ನನ್ನ ಹಸಿವು ಹೋಗುವುದಿಲ್ಲ. ನನಗೆ ಹಣ್ಣು ತರಿಸಿಕೊಡಿ" ಎಂದಳು.

ಮೀರ ಒಳಗೆ ಬರುತ್ತಲೇ ಹೇಳಿದಳು.

"ನೀವು ತಿಂಡಿ ತಿಂದು ಬನ್ನಿ. ನಾನು ಪುಸ್ತಕ ಓದುತ್ತಿರುತ್ತೇನೆ."

ಶಾಮು ಎಳೆಯ ಮಗುವಿನಂತೆ "ನೀನೂ ಅಲ್ಲೇ ಬಾ. ಇಲ್ಲದಿದ್ದರೆ ನಾನು ತಿನ್ನೋದಿಲ್ಲ" ಎಂದ.

ಪೂರ್ಣಿಮೆಯ ದಿನ ಮೀರ ಬೆಳದಿಂಗಳೂಟ ಬಯಸಿದಳು.

ಕೆರೆಯ ದಡಕ್ಕೆ ರಾತ್ರಿ ಹತ್ತು ಗಂಟೆಗೆ ಗಾಡಿಯಲ್ಲಿ ಹೋಗಿ ಬರಬೇಕೆಂದು ಗೊತ್ತು ಮಾಡಿದರು. ವೆಂಕಮ್ಮನವರು ಬಿಸಿಬೇಳೆ ಹುಳಿಯನ್ನ, ಹಪ್ಪಳ ಸಂಡಿಗೆ ಬುತ್ತಿ ಕಟ್ಟಿಕೊಟ್ಟಿದ್ದರು.

ಕೆರೆಯ ದಡ ಸೇರಿದಾಗ ಚಂದಿರ ಆಗ ತಾನೇ ಪೂರ್ವದಿಕ್ಕಿನಿಂದ ಮೇಲೇರುತ್ತಿದ್ದ. ಕಿತ್ತಳೆ ಹಣ್ಣಿನ ಬಣ್ಣದಲ್ಲಿದ್ದ ಚಂದ್ರ ಮೇಲೇರುತ್ತ ಕಿರಿದಾಗಿ ಹಳದಿಯ ವರ್ಣ ತಾಳಿದ್ದ. ಶುಭ್ರಾಕಾಶದಲ್ಲಿದ್ದ ಚಂದ್ರನ ಪ್ರತಿಬಿಂಬ ನೀರಿನಲ್ಲಿ ಬಿಂಬಿಸಿತ್ತು. ಆಗೊಮ್ಮೆ, ಈಗೊಮ್ಮೆ ಕಸ ನೀರಿನೊಳಗೆ ಬಿದ್ದಾಗ ಸಣ್ಣ ಸಣ್ಣ ತರಂಗಗಳೆದ್ದು, ಪ್ರತಿಬಿಂಬ ತರತರನೆ ನಡುಗಿ ಕ್ರಮೇಣ ಒಂದಾಗಿ ಕಾಣಿಸುತ್ತಿತ್ತು.

ನಿಂಗ ಎತ್ತುಗಳನ್ನು ಬಿಚ್ಚಿ ಅವುಗಳ ಮುಂದೆ ಹುಲ್ಲು ಹಾಕಿದ. ಮೀರ ಬುತ್ತಿಯನ್ನು ಬಿಚ್ಚಿದಳು. ಶಾಮುವಿನ ಮುಂದೆ ಎಲೆ ಹಾಕಿ,

"ನಿಂಗಾ, ನೀನೂ ಬಾ" ಎಂದು ಮೀರ ಕರೆದಳು.

ನಿಂಗ ನಸುನಾಚಿ, "ನೀವು ಉಣ್ಣಿ. ನಾನು ಆಮೇಲೆ ಬತ್ತೀನಿ" ಎಂದು ಮರೆಯಾಗಿ ಹೋದ. ಶಾಮು ಮೀರಳ ಕಡೆ ತಿರುಗಿ,

"ನಿಂಗ ಬುದ್ಧಿವಂತ" ಎಂದ.

ಅವರ ಊಟ ನಿಧಾನವಾಗಿ ಸಾಗುತ್ತಿತ್ತು. ಒಬ್ಬರಿಗೊಬ್ಬರು ಉಪಚಾರ ಮಾಡುತ್ತ ಬಡಿಸಿಕೊಳ್ಳುತ್ತಿದ್ದರು.

ಶಾಮು ಕೀಟಲೆಗೆ ಕೇಳಿದ: "ಮೀರಾ, ನೀನು ಮಗನ ತಾಯಿಯೋ, ಮಗಳ ತಾಯಿಯೋ?"

ಮೀರ ಬೇಸರದಿಂದ "ನನಗೆ ಯಾವುದೂ ಬೇಕಿರಲಿಲ್ಲ. ಈಗ ಯಾವುವಾದರೂ ಸರಿ" ಎಂದಳು.

'ನನಗೇನೋ ಮಗಳು ಬೇಕು. ಮಕ್ಕಳಿಲ್ಲದೆ ಮನೆ ಬಿಕೋ ಎನ್ನುತ್ತಿತ್ತು. ಇನ್ನು ಮೇಲೆ ತುಂಬಿದ ಹಾಗಿರುತ್ತದೆ. ಮನೆ ತುಂಬ ಮಕ್ಕಳಿದ್ದರೇ ಚೆನ್ನ. ನಂದ

ಗೋಕುಲದ ಹಾಗಿರುತ್ತದೆ."

"ಏನು ಚೆನ್ನವೋ? ನನಗೇನೋ ಈ ಬಾರಿ ಸುಖವಾಗಿ ಮೈ ಕಳೆದರೆ ಸಾಕು ಎನ್ನಿಸಿಬಿಟ್ಟಿದೆ."

"ನಿನಗೆ ಒಂದೇ ಮಗು ಸಾಕೇ ಮೀರಾ?"

"ನನಗೆ ಒಂದು ಮಗೂವೂ ಬೇಕಿರಲಿಲ್ಲ. ಈಗ ಒಂದೇ ಮಗು ಸಾಕು ಎಂದು ಹೇಳಲೇಬೇಕಾಗಿದೆ."

"ನನಗೇನೋ ಆರು ಜನ ಹೆಣ್ಣುಮಕ್ಕಳು, ಮೂರು ಜನ ಗಂಡುಮಕ್ಕಳಿರಲು ಆಸೆ."

ಮೀರ ಬೆಚ್ಚಿ" ಅಲ್ಲಿಗೆ ನನ್ನ ಗತಿ ಮುಗಿದಂತೆಯೇ ಸರಿ" ಎಂದಳು.

ಶಾಮು ಅರ್ಥವಾಗದ ದನಿಯಲ್ಲಿ "ಯಾಕೆ, ಅದರಿಂದ ನಿನಗೇನು ನಷ್ಟ?" ಎಂದ.

"ಮಕ್ಕಳೇನು ಆಕಾಶದಿಂದ ಉದುರುತ್ತವೆ ಅಂತ ಭಾವಿಸಿದಿರೇನು? ಗಂಡಸರಿಗೆ ಮಗುವಿನ ಬೆಲೆ ತಿಳಿದಿದೆಯೇನು? ಒಂಭತ್ತು ತಿಂಗಳು ಹೊತ್ತು ಹೆರುವುದು ಸಾಮಾನ್ಯವೇ? ಒಂದು ಮಗುವಿಗಾಗಿ ಹೆಣ್ಣು ತನ್ನ ರಕ್ತಮಾಂಸವನ್ನು ಹಂಚಬೇಕು. ಕೆಲವು ಬಾರಿ ತನ್ನ ಪ್ರಾಣವನ್ನೇ ಪಣವಾಗಿಡಬೇಕಾದ ಸಂದರ್ಭವೂ ಬರುತ್ತದೆ. ತಮ್ಮ ಅಲ್ಪ ಪಾತ್ರವನ್ನು ಮುಗಿಸಿ, ಪ್ರತಿಯೊಂದು ಜವಾಬ್ದಾರಿಯೂ ಹೆಣ್ಣಿನ ಮೇಲಿದ್ದರೂ ಕರುಣೆಯಿಲ್ಲದ ರಕ್ಕಸನಂತೆ ವರ್ತಿಸುತ್ತಾನೆ ಗಂಡು. ಒಂಭತ್ತು ಮಕ್ಕಳ್ಳನು ಹೆರುವುದರಲ್ಲಿ ನನ್ನ ಸಮಾಧಿ ಸಿದ್ಧವಾದಂತೆಯೇ ಸರಿ."

ಶಾಮು ಮೃದುವಾಗಿ ಕೇಳಿದ: "ನಿನಗೆ ಮಕ್ಕಳೆಂದರೆ ಆಸೆಯಿಲ್ಲವೇ?"

ಮೀರ ನಿಧಾನವಾಗಿ ತಲೆ ಅಲುಗಿಸುತ್ತ "ಊಹ್ಞೂ, ನನಗೆ ಮಕ್ಕಳು ಸ್ವಲ್ಪವೂ ಇಷ್ಟವಿಲ್ಲ" ಎಂದಳು.

ಶಾಮು ಮೂಕನಾದ. ಗಂಡಾದ ತಾನು ಮಕ್ಕಳಿಗಾಗಿ ಹಂಬಲಿಸುವಾಗ ಪ್ರೇಮಸ್ವರೂಪಿಣೀ ಹೆಣ್ಣು, ತನ್ನ ಹೃದಯಾಂತರಾಳದಲ್ಲಡಗಿದ್ದ ತಾಯ್ತನ ಮೆಟ್ಟಿ 'ಮಕ್ಕಳು ಬೇಡ' ಎಂದು ಹೇಳುವುದನ್ನು ಕೇಳಿ ತನ್ನ ಕಿವಿಗಳನ್ನೇ ನಂಬಲಾರದಾದ.

ಮೀರಳ ಮನಸ್ಸಿನಲ್ಲಿ ಬೇರೊಂದು ರೀತಿಯ ಯುದ್ಧ ನಡೆಯುತ್ತಿತ್ತು. ವಿಜಯದಾಸೆಗಾಗಿ ಒಂದು ಗಳಿಗೆಯಲ್ಲಿ ತಮ್ಮ ಜವಾಬ್ದಾರಿ ಮುಗಿಸಿಕೊಂಡು ಹೆಣ್ಣನ್ನು ಹೆರುವ ಯಂತ್ರವನ್ನಾಗಿ ಮಾಡುವ ಗಂಡಸರ ಪಶುತ್ವ ಅವಳಲ್ಲಿ ದ್ವೇಷವನ್ನು ಹೊತ್ತಿಸಿತ್ತು. ಇಡೀ ಗಂಡಸರ ಜಾತಿಯ ಬಗ್ಗೆ ದ್ವೇಷ, ತಿರಸ್ಕಾರ ಅವಳಲ್ಲಿ ಹೊಗೆಯಾಡುತ್ತಿತ್ತು. ದೇವರು ಪ್ರತಿಯೊಬ್ಬ ಗಂಡಸಿಗೂ ಪ್ರಸವ ವೇದನೆಯ ಅರಿವು ಮನದಟ್ಟು ಮಾಡಿದರೆ ಆಗ ಹೆಂಗಸು ಉಳಿದಾಳು ಎಂಬ ಯೋಚನೆಯ ದಿಕ್ಕಿನಲ್ಲಿ ಮನಸ್ಸು ಓಡುತ್ತಿತ್ತು.

ಮೀರ ತನ್ನೂಟವನ್ನು ಮರೆತು ಕುಳಿತಿರುವುದನ್ನು ನೋಡಿ ಶಾಮು, "ಊಟ ಮಾಡು, ಮೀರಾ" ಎಂದು ಎಚ್ಚರಿಸಿದ.

ಅಂದಿನ ಬೆಳದಿಂಗಳೂಟ ಅಸಮಾಧಾನದಿಂದಲೇ ಕೊನೆಗೊಂಡಿತು. ಪರಸ್ಪರ ಭಿನ್ನಾಭಿಪ್ರಾಯಗಳು ತಂಪಾದ ಚಂದ್ರಿಕೆಯ ವಾತಾವರಣವನ್ನು ಬಿಸಿ ಮಾಡಿದ್ದವು.

ಅಂದಿನಿಂದ ಶಾಮುವಿಗೆ ಮನಸ್ಸಿನಲ್ಲಿ ತಾನು ಅಪರಾಧಿ ಎಂಬ ಭಾವನೆ ಬರತೊಡಗಿತು. ಮುದ್ದಿನ ಹೆಂಡತಿಯ ಮೇಲೆ ಅವಳಿಗೆ ಬೇಡದ ಬಸಿರನ್ನು ತಾನು ಹೊರೆಸಿದುದಕ್ಕಾಗಿ ಅವನ ಮನಸ್ಸು ಆಗಾಗ್ಗೆ ಪೇಚಾಡುತ್ತಿತ್ತು. ಆದರೆ ಭಾವೋದ್ವೇಗಗಳ ಕೈಗೊಂಬೆಯಾದ ತಾನು ಏನು ಮಾಡಲೂ ಸಾಧ್ಯವಿರಲಿಲ್ಲ.

ಮೀರಳ ಊಟ ಉಪಚಾರದಲ್ಲಿ ಮಾತ್ರ ಯಾವ ರೀತಿಯಲ್ಲೂ ಕೊರತೆ ಬಾರದಂತೆ ಅವನು ನೋಡಿಕೊಳ್ಳುತ್ತಿದ್ದ. ಪ್ರತಿದಿನ ಸಂಜೆ ಆರು ಗಂಟೆಯಾದ ಕೂಡಲೇ ಇಬ್ಬರೂ ಸುತ್ತಾಡಿಕೊಂಡು ಬರುತ್ತಿದ್ದರು. ಅವಳು ತೀರ ದುರ್ಬಲಳಾದಾಗ ಪಂಡಿತರ ಕಷಾಯ ಅವಳನ್ನು ಚೇತನಗೊಳಿಸುತ್ತಿತ್ತು.

ಮೀರಳಿಗೆ ತಾಯಿಯಾಗುವುದು ಇಷ್ಟವಿರಲಿಲ್ಲವಾದರೂ ಮೂರು ತಿಂಗಳು ತುಂಬಿ, ತನ್ನ ಮಗು ಗರ್ಭದಲ್ಲಿ ಚಲಿಸಿದಾಗ, ಏನೋ ಒಂದು ಬಗೆಯ ಮಾರ್ದವತೆ, ಕೋಮಲ ಭಾವನೆಯಿಂದ ಅವಳೆದೆ ತುಂಬಿ ಬರುತ್ತಿತ್ತು. ಒಂದೊಂದು ಸಲ ತನ್ನ ಮಗು ಹೇಗಿರುವುದೆಂಬ ಹುಚ್ಚು ಭಾವನೆ ಅವಳಿಗೆ ಬಂದು ಆ ಗಳಿಗೆಯೇ ತನ್ನ ಮಗುವನ್ನು ನೋಡುವ ತೀವ್ರ ಹಂಬಲವಾಗುತ್ತಿತ್ತು.

ವೆಂಕಮ್ಮನವರ ಆರೈಕೆಯಲ್ಲಿ, ಶಾಮುವಿನ ಮೋಹದ ಕಡಲಿನಲ್ಲಿ ಅವಳು ನಿರಾತಂಕವಾಗಿ ದಿನಗಳನ್ನು ಕಳೆಯುತ್ತಿದ್ದಳು.

ಮೀರಳಿಗೆ ಐದುತಿಂಗಳು ತುಂಬಿದೊಡನೆ ಕೃಷ್ಣಪ್ಪನವರಿಂದ ಕಾಗದ ಬಂತು. ಪತ್ರದಲ್ಲಿ ಮಗಳನ್ನು ತವರಿಗೆ ಕಳಿಸಿಕೊಡಬೇಕಾಗಿಯೂ ಅವಳನ್ನು ತಾವೇ ಬಂದು ಕರೆದುಕೊಂಡು ಹೋಗುವುದಾಗಿಯೂ ಬರೆದಿದ್ದರು. ಮೀರ ದೊಡ್ಡಪ್ಪನ ಕಾಗದ ಓದಿ ಸಂತೋಷಪಟ್ಟಳು. ಹಳ್ಳಿಯ ಜೀವನದಿಂದ ಅವಳ ಬಾಳು ಮರಗಟ್ಟಿ ಹೋಗಿತ್ತು. ಆದರೆ ಶಾಮುವಿಗೆ ಮೀರಳನ್ನು ಕಳುಹಿಸುವುದು ಸ್ವಲ್ಪವೂ ಇಷ್ಟವಿರಲಿಲ್ಲ. ಆದರೆ ಮೊದಲನೆಯ ಹೆರಿಗೆಯಾದುದರಿಂದ ಹಳ್ಳಿಯಲ್ಲೇ ಹೆಂಡತಿಯನ್ನು ಉಳಿಸಿಕೊಳ್ಳಲು ಹಿಂಜರಿದು ಕೊನೆಗೆ ಮೀರಳ ಹಿತದೃಷ್ಟಿಯಿಂದ ಅವಳನ್ನು ತವರಿಗೆ ಕಳಿಸಲು ನಿಶ್ಚಯಿಸಿದ.

ಮೀರಳಿಗೆ ದೊಡ್ಡಪ್ಪನನ್ನಗಲಿ ಯುಗಗಳು ಕಳೆದಿದ್ದಂತೆ ತೋರಿತು. ದೊಡ್ಡಪ್ಪ ಬರುವ ದಿನ ಬಾಗಿಲಿನಲ್ಲಿ ಅವರನ್ನೆದುರು ನೋಡುತ್ತ ನಿಂತಳು. ದೂರದಲ್ಲಿ ಗಾಡಿ ಕಂಡೊಡನೆ ವೇಗವಾಗಿ ಹೆಜ್ಜೆ ಹಾಕುತ್ತ ಗಾಡಿಯ ಹಿಂದೆ

ಬಂದು "ದೊಡ್ಡಪ್ಪ" ಎಂದು ಕೂಗಿದಳು. ಒಳಗೆ ಅಳಿಯನೊಡನೆ ಮಾತಿನಲ್ಲಿ ಮಗ್ನರಾಗಿದ್ದ ಕೃಷ್ಣಪ್ಪನವರು ಮೀರಳ ದನಿ ಕೇಳಿ "ಗಾಡಿ ನಿಲ್ಲಿಸಪ್ಪ" ಎಂದು ಹೇಳಿ ಗಾಡಿಯಿಂದ ಕೆಳಗಿಳಿದರು. ಶಾಮು ಅವರೊಡನೆ ತಾನೂ ಇಳಿದು ನಿಂಗನಿಗೆ "ನೀನು ಮನೆಗೆ ಹೋಗು. ನಾವು ಬರುತ್ತೇವೆ" ಎಂದ.

ಕೃಷ್ಣಪ್ಪನವರು ಮೀರಳ ತಲೆಯ ಮೇಲೆ ಪ್ರೀತಿಯಿಂದ ಕೈಯಾಡಿಸಿ, "ಯಾಕೆ ಮಗು ಬಳಲಿ ಹೋಗಿದೀಯಾ?" ಎಂದರು.

"ಇಲ್ಲ ದೊಡ್ಡಪ್ಪ, ಬಳಲುವುದಕ್ಕೆ ನನಗೇನಾಗಿದೆ?"

"ಮೊದಲು ಚಿಕ್ಕ ಹುಡುಗಿಯಂತೆ ಹಾರಾಡುತ್ತ, ಬಳುಕುತ್ತಾ, ನಡೆಯುವುದನ್ನೇ ಕಾಣದಿದ್ದ ಮೀರ ಈಗ ತುಂಬಿದ ಹೆಂಗಸಾಗಿ ಗಂಭೀರವಾಗಿ ಹೆಜ್ಜೆ ಹಾಕುತ್ತಿದ್ದಳು. ಬಣ್ಣ ತಿರುಗಿದ ಬಸುರಿ, ಮೀರ ಗುಲಾಬಿ ಬಣ್ಣದ ಸೀರೆಯೊಡನೆ ತಮಗೆದುರಾದಾಗ ಕೃಷ್ಣಪ್ಪನವರು ಮಗಳ ಪರಿಪೂರ್ಣ ಚೆಲುವು ನೋಡಿ ಹೆಮ್ಮೆ ತಾಳಿದರು. ಮೀರ ಕೇಳುತ್ತಿದ್ದ ನೂರಾರು ಪ್ರಶ್ನೆಗಳಿಗೆ ಉತ್ತರ ಹೇಳುತ್ತ ಹೊರಟರು.

ಕೃಷ್ಣಪ್ಪನವರು ಹಳ್ಳಿಗೆ ಬಂದ ಮಾರನೆಯ ದಿನವೇ ಹೊರಡುವುದಾಗಿ ಶಾಮುವಿಗೆ ಹೇಳಿದರು. ಆದರೆ ಶಾಮುವಿನ ಬಲವಂತಕ್ಕೆ ಅವರು ಎರಡು ದಿನ ಉಳಿಯಲೇಬೇಕಾಯಿತು. ಶಾಮುವಿನ ಮನೆಯಲ್ಲಿ ತಾಂಡವವಾಡುತ್ತಿದ್ದ ಲಕ್ಷ್ಮಿಯನ್ನು ನೋಡಿ ಕೃಷ್ಣಪ್ಪನವರು ಮೀರಳ ಅದೃಷ್ಟದ ಬಗ್ಗೆ ಸಂತಸಪಟ್ಟರು.

ಮೈಸೂರಿಗೆ ಹೊರಡುವ ದಿನ ಕೃಷ್ಣಪ್ಪನವರಿಗೆ ಭಾರಿ ಔತಣವಾಯಿತು. ಮೀರ ತನಗೆ ಬೇಕಾದ ಸಾಮಾನುಗಳನ್ನು ತೆಗೆದಿರಿಸಿಕೊಂಡಿದ್ದಳು. ಹೊರಡುವ ಹಿಂದಿನ ರಾತ್ರಿ ಶಾಮು, ಮೀರ, ದೊಡ್ಡಪ್ಪ ವರಾಂಡದಲ್ಲಿ ಕುಳಿತು ಮಾತನಾಡುತ್ತಿದ್ದರು.

ಕೃಷ್ಣಪ್ಪನವರು "ಈಗಲೂ ಮನಸ್ಸು ಮಾಡಿ ಬಂದುಬಿಡು ಶಾಮಣ್ಣ. ಎರಡು ದಿನವಿದ್ದು ಹಿಂತಿರುಗುವಿಯಂತೆ" ಎಂದರು. ಮೀರ ಶಾಮುವಿನ ಮುಖ ನೋಡಿದಳು. ಅವಳ ಕಣ್ಣುಗಳು "ನೀವೂ ಬನ್ನಿ" ಎಂದು ಬೇಡಿದವು.

"ಇಲ್ಲ ಮಾವ. ನಾನೀಗ ಬರುವುದಿಲ್ಲ. ಇನ್ನಾವಾಗಲಾದರೂ ಬರುತ್ತೇನೆ."

"ನಮ್ಮ ಗೋವಿಂದನ ಮದುವೆಗೆ ಬರಲೇಬೇಕಲ್ಲ. ಮುಂದಿನ ತಿಂಗಳು ಮೊದಲನೇ ವಾರದಲ್ಲಿ ಅಂತ ನಿಶ್ಚಯ ಮಾಡಿದೆ."

"ಯಾವೂರ ಹುಡುಗಿ?"

"ಮೈಸೂರಿನದೇ ಹುಡುಗಿ. ಇಂಟರ್ ಪಾಸು ಮಾಡಿದಾಳೆ. ಗೋವಿಂದನಿಗೆ ಬೆಂಗಳೂರಿನಲ್ಲಿ ಹೋಟಲು ಅನ್ನ ತಿಂದು ಸಾಕಾಗಿದೆ. ನಮ್ಮ ಗೋಪೀನೂ ಬೊಂಬಾಯಿನಿಂದ ಬರುತ್ತಾನೆ."

"ದೊಡ್ಡಪ್ಪ, ರಾಧಾ ಊರಿಗೆ ಬಂದಳಾ?"

"ಸುಬ್ಬರಾಯರೇ ಹೋಗಿ ಮಗಳನ್ನು ಕರೆದುಕೊಂಡು ಬಂದರು. ಈಗ ಅವಳಿಗೆ ಹೆರಿಗೆಯ ದಿನ."

"ಕಿಶೋರ ಹೇಗಿದ್ದಾನೆ?"

"ಅವನಿಗೇನು ಪೈಲ್ವಾನ ಇದ್ದ ಹಾಗಿದಾನೆ. ಅಸಾಧ್ಯ ತುಂಟ. 'ತಾತ' ಎಂದು ಬಂದು ಹೆಗಲೇರಿ ಕುಳಿತುಬಿಟ್ಟರೆ ಅವನನ್ನು ಕೆಳಗಿಳಿಸಲು ಸಾಧ್ಯವೇ ಇಲ್ಲ. ಶಾಮಣ್ಣ, ನಾಳೆ ನೀನೂ ಬಂದಿದ್ದರೆ ಚೆನ್ನಾಗಿತ್ತು."

ಶಾಮು ಸಂಕೋಚದಿಂದ ಹೇಳಿದ "ನೀವು ಅನ್ಯಥಾ ಭಾವಿಸಬೇಡಿ ಮಾವ. ಗೋವಿಂದನ ಮದುವೆಗೆ ಖಂಡಿತ ಬರುತ್ತೇನೆ" ಎಂದ.

ಮೀರಾ ಆಕಳಿಸಿದಳು. ಕೃಷ್ಣಪ್ಪನವರು ಅದನ್ನು ಗಮನಿಸಿ "ಹೋಗು ತಾಯಿ, ಮಲಗಿಕೋ. ನಾನೂ ಮಲಗುತ್ತೇನೆ" ಎನ್ನುತ್ತಾ ಎದ್ದರು.

ಆ ದಿನ ಶಾಮು, ಮೀರ ಬಹಳ ಹೊತ್ತು ಮಾತನಾಡುತ್ತಿದ್ದರು. ಗಂಡನೊಡನೆ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ, ಹಳ್ಳಿಯ ಜೀವನ ಎಷ್ಟೇ ಬೇಸರ ತಂದಿದ್ದರೂ ಮೀರಳಿಗೆ ಗಂಡನನ್ನು ಬಿಟ್ಟು ಹೆಚ್ಚುಕಡಿಮೆ ಒಂದು ವರ್ಷ ತಾನು ಮೈಸೂರಿನಲ್ಲಿರುವುದೆಂದಾಗ ಮನಸ್ಸು ನೊಂದಿತು. ಶಾಮುವಿನ ಕ್ರಾಪಿನ ಮೇಲೆ ಬೆರಳಾಡಿಸಿ,

"ಭಾನುವಾರ ಮರೆಯದೆ ಎಣ್ಣೆ ನೀರು ಹಾಕಿಕೊಳ್ಳಿ. ವಾರಕ್ಕೊಂದು ಸಲ ಹಾಕಿಕೊಳ್ಳದೇ ತಲೆನೋವು, ಕಣ್ಣು ನೋವು ಎಂದು ಒದ್ದಾಡಬೇಡಿ. ಬಿಸಿಲಿನಲ್ಲಿ ತುಂಬಾ ಅಲೆಯಬೇಡಿ. ರಾತ್ರಿ ಹಾಲು ತೆಗೆದುಕೊಂಡು ಮಲಗುವುದನ್ನು ಮರೆಯಬೇಡಿ...."

ಶಾಮು ಮಧ್ಯದಲ್ಲಿಯೇ ನಕ್ಕು, "ಮೀರಾ, ನನಗೆ ಎಲ್ಲ ಮರೆತುಹೋಗುತ್ತದೆ. ನೀನು ಹೇಳಬೇಕಾಗಿರುವುದೆಲ್ಲವನ್ನೂ ಒಂದು ಕಾಗದದಲ್ಲಿ ಗುರುತು ಹಾಕಿಕೊಡು" ಎಂದ.

ಮೀರ ತನ್ನ ಹಿಡಿಯಲ್ಲಿದ್ದ ಕೂದಲನ್ನು ನೋವಾಗುವಂತೆ ಎಳೆದು,

"ಹುಡುಗಾಟ ಮಾಡಬೇಡಿ. ನಾನು ನಿಜವಾಗಿ ಹೇಳುತ್ತಿದ್ದೇನೆ" ಎಂದಳು.

"ಹಾಗೇ ಆಗಲಿ. ನೀನು ಹೇಳುವುದನ್ನು ನಾನು ಮರೆಯುವುದಿಲ್ಲ. ನಾನು ಹೇಳುವುದನ್ನು ನೀನು ಮರೆಯಬಾರದು.

"ಏನದು?"

"ನಿನಗೆ ನಿಜವಾಗಿಯೂ ಮಗು ಬೇಕಿರಲಿಲ್ಲವೇ?"

ಮೀರಳಿಗೆ ತಟ್ಟನೆ ಉತ್ತರ ಕೊಡಲಾಗಲಿಲ್ಲ. ಗರ್ಭಿಣಿಯಾದ ತರುಣದಲ್ಲಿ ಮಗು ಬೇಡವೆನಿಸಿದರೂ ಕರುಳಿನ ಚೂರು ಬಲಿಯುತ್ತ ಬಂದಂತೆ ಬಸಿರೊಳಗಿದ್ದ ಮಗುವನ್ನು ತಾನರಿಯದಂತೆ ಪ್ರೀತಿಸತೊಡಗಿದ್ದಳು.

"ನನಗೆ ಮಕ್ಕಳೆಂದರೆ ದ್ವೇಷವೇನಿಲ್ಲ."

ಶಾಮು ಮೀರಳ ಎರಡು ಕೈಗಳನ್ನೂ ಹಿಡಿದು "ನೀನು ಆ ವಿಚಾರವಾಗಿ ಮನಸ್ಸಿಗೆ ವ್ಯಥೆ ಹಚ್ಚಿಕೊಳ್ಳಬೇಡ. ಚಿಂತೆಗಿಂತಲೂ ದೊಡ್ಡ ರೋಗ ಬೇರೊಂದಿಲ್ಲ. ನನ್ನ ನಿನ್ನ ಮಗುವಿನ ಹಿತಕ್ಕಾಗಿ ನಿನ್ನ ಆರೋಗ್ಯದ ಕಡೆ ಲಕ್ಷ್ಯವಿಡು. ನಿನಗೆ ದುಡ್ಡು ಬೇಕಾದರೆ ನನಗೆ ಕಾಗದ ಬರಿ. ನಿನಗೇನು ಬೇಕಾದರೂ ತರಿಸಿಕೋ. ನನಗೆ ಮಾತ್ರ ವಾರಕ್ಕೊಂದು ಬಾರಿ ಕಾಗದ ಬರೆಯಲು ಮರೆಯಬೇಡ...."

ದೂರ ಸಿಡಿದು ನಿಂತಿದ್ದ ಹೃದಯಗಳೆರಡು ಅಗೋಚರವಾಗಿದ್ದ ಮಗುವಿನ ದೆಸೆಯಿಂದ ಅತಿ ಸಮೀಪಕ್ಕೆ ಬಂದು ನಿಂತಿದ್ದವು.

ಮೀರ ಊರಿಗೆ ಬಂದ ಸುದ್ದಿ ಕೇಳಿ ರಾಜು, ಚಂಪಾ, ನರ್ಮದಾ ಅವಳನ್ನು ನೋಡಲು ಧಾವಿಸಿ ಬಂದರು.

"ಅಭಿನಂದನೆಗಳು ಮೀರಾ."

"ಸಾಕು, ಬಿಡೆ. ಹಾಸ್ಯ ಮಾಡಬೇಡ."

"ಎಲ್ಲ ಪದವಿಗಳಿಗಿಂತಲೂ ದೊಡ್ಡ ಪದವಿ ತಾಯ್ತನ ಸಿಕ್ಕಿದ ಮೇಲೆ ಬೇರೆ ಪದವಿಗಳು ಯಾಕೆ?"

"ಥೂ, ಸುಮ್ಮನಿರಮ್ಮ. ನರ್ಮದಾ, ರಾಧಾ ಹೇಗಿದಾಳೆ?"

"ಇದಾಳೆ, ನಿನ್ನ ಹಾಗೇನೆ. ಅವಳೀಗ ಹೊರಗೆ ಬರುವ ಸ್ಥಿತಿಯಲ್ಲಿಲ್ಲ. ನಾಳೆ ದಿನ ನೀನೇ ಬಾ. ನೋಡಿಕೊಂಡು ಬರುವಿಯಂತೆ."

"ಹಾಗೇ ಆಗಲಿ. ಕಿಶೋರ ಹೇಗಿದಾನೆ?"

"ಷೋಕಾಗಿದಾನೆ. ನನಗೋ ಪರೀಕ್ಷೆ ಸಮಯ. ಓದುವುದಕ್ಕೆ ಸಹ ಬಿಡುವುದಿಲ್ಲ."

"ಓಹೋ, ಆಗಲೇ ನಿಮಗೆಲ್ಲಾ ಪರೀಕ್ಷೆ ಬಂತು!"

ಹಾಗೆ ಹೇಳುವಾಗ ಮೀರಳ ದನಿ ಸ್ವಲ್ಪ ನಡುಗಿತು. ತಾನೂ ಮೆಡಿಕಲ್ ಕಾಲೇಜು ಸೇರಿದ್ದರೆ ಈ ಅವತಾರದ ತಾಪತ್ರಯವಿಲ್ಲದೆ ಹಾಯಾಗಿ ಸ್ಕೂಲಿಗೆ ಹೋಗುವ ವಿದ್ಯಾರ್ಥಿನಿಯಾಗಬಹುದಿತ್ತು. ಮೀರಳಿಗೆ ಶಾಮುವಿನ ಮೇಲೆ, ತನ್ನ ಮೇಲೆ, ಸೃಷ್ಟಿಸಿದ ಬ್ರಹ್ಮನ ಮೇಲೆ ಕೋಪ ಬಂತು.

ನರ್ಮದಾಳ ಆಹ್ವಾನವನ್ನು ಮನ್ನಿಸುವ ಸಲುವಾಗಿಯೂ, ತನ್ನತ್ತಿಗೆಯನ್ನು ನೋಡುವ ಸಲುವಾಗಿಯೂ ಮೀರ ರಾಧಾಳ ಮನೆಗೆ ಹೋಗಲು ನಿಶ್ಚಯಿಸಿದಳು.

ಸುಬ್ಬರಾಯರ ಹೆಂಡತಿ ಕಾವೇರಮ್ಮನಿಗೆ ತಾವು ಹಣವಂತರೆಂಬ ಬಿಗುಮಾನ, ಧೋರಣೆ ಹೆಚ್ಚು. ಮೀರ ಅವರ ಧೋರಣೆ, ದೊಡ್ಡಸ್ತಿಕೆಗೆ ತಕ್ಕಂತೆ ಒಂದು ಗೇಣಗಲ ಜರತಾರಿಯಂಚಿದ್ದ ಬಾದಾಮಿ ಬಣ್ಣದ ರೇಷ್ಮೆ ಸೀರೆಯುಟ್ಟು ಹೊರಟಳು. ಕಮಲಮ್ಮ ಸೀರೆಯನ್ನು ನೋಡಿ ಬೆರಗಿನಿಂದ

"ಯಾವುದು ಈ ಸೀರೆ?" ಎಂದರು.

"ಅವರು ಯಾವುದೋ ಕೆಲಸದ ಮೇಲೆ ಬೆಂಗಳೂರಿಗೆ ಹೋಗಿದ್ದಾಗ ತಂದರು."

"ಪರವಾಗಿಲ್ಲ. ಶಾಮಣ್ಣ ಚೆನ್ನಾಗಿರುವುದನ್ನೇ ತರುತ್ತಾರೆ. ಎಷ್ಟಾಯಿತು?"

"ಇನ್ನೂರು ರೂಪಾಯಿ."

ಅವಳೊಡನೆ ಸಾಧಾರಣವಾದ ಮಡಿ ಸೀರೆಯುಟ್ಟು ಹೊರಡಲು ಕಮಲಮ್ಮನವರಿಗೆ ಸಂಕೋಚವಾಯಿತು. ಒಂದು ಗಳಿಗೆ ಮನಸ್ಸು ಅಸೂಯೆಯ ಹೊಗೆ ಕಾರಿತು. ಮರುಕ್ಷಣವೇ 'ಛೇ, ಮೀರಾ ನಾನು ಬೆಳೆಸಿದ ಮಗು. ಅವಳು ಉಟ್ಟು, ತೊಟ್ಟರೆ ಮನಸ್ಸು ಹೀಗಾಡಬಾರದು' ಎಂದು ಸಮಾಧಾನ ಮಾಡಿಕೊಂಡರು.

ವರಾಂಡದಲ್ಲಿ ಕುಳಿತು ಆಗಾಗ್ಗೆ ತನ್ನನ್ನು ಕಾಡುತ್ತಿದ್ದ ಕಿಶೋರನನ್ನು ಮುದ್ದು ಮಾಡುತ್ತ, ಪುಸ್ತಕದ ಹಾಲೆಯನ್ನು ತಿರುವುತ್ತಿದ್ದ ನರ್ಮದಾ ಮೀರಳನ್ನು ನೋಡಿ 'ಬನ್ನಿ' ಎಂದು ಸ್ವಾಗತಿಸಿದಳು.

ಹೊಸಬರು ಬಂದುದನ್ನು ನೋಡಿ ಕಿಶೋರ ಒಂದು ಗಳಿಗೆ ಸ್ತಬ್ಧನಾಗಿ ನಿಂತು ಮರುಗಳಿಗೆಯೇ ಕಮಲಮ್ಮನವರನ್ನು ಗುರುತಿಸಿ "ಅಜ್ಜೀ" ಎನ್ನುತ್ತ ಓಡಿ ಬಂದು ಕಾಲುಗಳನ್ನಪ್ಪಿಕೊಂಡ. ಕಮಲಮ್ಮನವರು ಕಿಶೋರನನ್ನೆತ್ತಿಕೊಂಡು ಅವನ ಕೆನ್ನೆಗೆ ಮುತ್ತು ಕೊಟ್ಟು "ಅತ್ತೆ ಕಣೋ" ಎಂದು ಮೀರಳನ್ನು ತೋರಿಸಿದರು. ಕೆಂಪಗೆ, ಮಾಂಸದ ಮುದ್ದೆಯಂತಿದ್ದ ಮಗು ಈಗ ಮೋಹದ ಮಗುವಾಗಿ ತುಂಟತನ, ಮುಗ್ಧತೆ, ಲಾಲಿತ್ಯವೇ ಮೈವೆತ್ತಿದಂತಿರುವುದನ್ನು ನೋಡಿ ಮೀರ ಕೈಚಾಚಿ "ಬಾಮ್ಮ, ಬಂಗಾರಾ" ಎಂದಳು.

"ಊಹ್ಞೂ" ಎನ್ನುತ್ತ ಕಿಶೋರ ಕಮಲಮ್ಮನವರ ಭುಜದಲ್ಲಿ ಮುಖ ಮುಚ್ಚಿಕೊಂಡ.

"ಹೊಸ ಮುಖ" ಎಂದರು ಕಮಲಮ್ಮ.

ರಾಧಾ ಒಳಗಿನಿಂದ ಬಂದು "ಬನ್ನಿ ಅತ್ತೆ, ಬಾ ಮೀರ. ಈ ಪೋರ ದಾರೀಲೇ ನಿಮ್ಮಿಬ್ಬರನ್ನೂ ಹಿಡಿದು ನಿಲ್ಲಿಸಿಬಿಟ್ಟಿದ್ದಾನೆ" ಎಂದಳು.

"ಹುಷಾರಾಗಿದ್ದೀಯಾಮ್ಮಾ?"

"ಹ್ಞೂ."

ಏನೋ ಕೆಲಸ ಮಾಡುತ್ತಿದ್ದ ಕಾವೇರಮ್ಮ ಆತುರವಾಗಿ ಕೈತೊಳೆದುಕೊಂಡು ಒರೆಸಿಕೊಳ್ಳುತ್ತ ಈಚೆಗೆ ಬಂದು "ಬನ್ನಿ" ಎಂದರು. ಕಾವೇರಮ್ಮ ಮೀರಳನ್ನು ನೋಡಿ "ಮದುವೇಲಿ ಚೋಟುದ್ದ ಇದ್ದವಳು ಈಗ ಬೆಳೆದ ಹೆಂಗಸಾಗಿ ಬಿಟ್ಟಿದ್ದಾಳೆ. ನಮ್ಮ ನರ್ಮದಾ ಹೇಳಿದಳು, ನಿಮ್ಮ ಮನೆಯಲ್ಲಿ ಬಹಳ ಉಪಚಾರ

ವಾಯಿತಂತೆ.... ಅಲ್ಲಿಂದ ಬಂದ ಒಂದು ತಿಂಗಳಿನವರೆಗೆ ಅವಳಿಗೆ ನಿಮ್ಮ ಮಾತೇ. ನರ್ಮದಾ.... ಎಲ್ಲಿ ಹೋದೆಯೇ?"

"ಬಂದೆ ತಾಳಮ್ಮಾ" ನರ್ಮದಾ ಒಳಗಿನಿಂದಲೇ ಉತ್ತರ ಕೊಟ್ಟಳು.

ಕಾವೇರಮ್ಮ ಮೀರಳಿಗೆ ಮಾಡಿದ ಉಪಚಾರವನ್ನು ಕಮಲಮ್ಮ ಕೂಡ ಗಮನಿಸಿದರು. ಲಂಗ ಹಾಕಿಕೊಂಡು ನರ್ಮದಾಳೊಡನೆ ಆಟವಾಡಲು ಬರುತ್ತಿದ್ದ ತುಂಟಿ ಈಗ ಭಾರಿ ಜಮೀನುದಾರನೊಬ್ಬನ ಮಡದಿಯಾಗಿ ತಮ್ಮ ಮನೆಗೆ ಬಂದಿರುವುದು ಕಾವೇರಮ್ಮನಿಗೆ ಹೆಮ್ಮೆಯ ವಿಷಯವಾಗಿತ್ತು.

ಚಿಕ್ಕವಳಿದ್ದಾಗ, ನರ್ಮದಾಳೊಡನೆ ಅವರ ಮನೆಗೆ ಹೋದಾಗ ಕಡೆಗಣ್ಣಿನಿಂದಲೂ ನೋಡದ ಕಾವೇರಮ್ಮ ಈಗ ತನ್ನನ್ನು ಉಪಚರಿಸುತ್ತಿರುವುದನ್ನು ಕಂಡು ಮೀರ ಮನಸ್ಸಿನಲ್ಲಿಯೇ 'ಪ್ರಪಂಚದಲ್ಲಿ ಹಣಕ್ಕೆ ಮಾತ್ರ ಸ್ಥಾನ' ಎಂದುಕೊಂಡಳು.

ನರ್ಮದಾ ಎರಡು ಲೋಟಾ ಕಾಫಿ, ಒಂದು ತಟ್ಟೆಯಲ್ಲಿ ಚಕ್ಕುಲಿ ತಂದು ಎದುರಿಗಿಟ್ಟು "ತೆಗೆದುಕೊಳ್ಳಿ" ಎಂದಳು.

"ನನಗೇನು ಉಪಚಾರ ಮಾಡೋದಕ್ಕೆ ಹೊರಟುಬಿಟ್ಟಿದ್ದೀಯ?"

"ನಿಮ್ಮ ಮನೆಯಲ್ಲಿ ನಮಗೆ ಮಾಡಿದ ಉಪಚಾರದ ಮುಂದೆ ನಾವೇನು ಮಾಡೇವು?"

ಮೀರ ರಾತ್ರಿ ಎಂಟು ಗಂಟೆಯವರೆಗೆ ಅವರ ಮನೆಯಲ್ಲಿ ಹರಟೆ ಹೊಡೆದು ಮನೆಗೆ ಹಿಂತಿರುಗಿದಳು.

ದೊಡ್ಡಮ್ಮನ ಮನೆಯಲ್ಲಿ ಮೀರಳಿಗೆ ಎಲ್ಲಾ ವಿಧದಲ್ಲೂ ಅನುಕೂಲವಾಗಿತ್ತು. ಕಮಲಮ್ಮ ಮಗಳ ಕೈಲಿ ಒಂದು ಚೂರು ಕೆಲಸವನ್ನೂ ಮಾಡಿಸುತ್ತಿರಲಿಲ್ಲ. ಅವಳು ಬಯಸಿದ ತಿಂಡಿಗಳನ್ನು ಮಾಡಿಕೊಡುವುದರಲ್ಲಿ ಅವರಿಗೆ ಆನಂದವಾಗುತ್ತಿತ್ತು. ಶ್ರೀಪಾದು ಕಾಲೇಜು ಲೈಬ್ರರಿಯಿಂದ ಹೊಸ ಕನ್ನಡ ಇಂಗ್ಲಿಷ್ ಕತೆಪುಸ್ತಕಗಳನ್ನು ತಂದುಕೊಡುತ್ತಿದ್ದ. ವಾರಕ್ಕೊಂದು ಸಲ ಶಾಮುವಿನಿಂದ ಮೀರಳಿಗೆ ಕಾಗದ ಬರುತ್ತಿತ್ತು. ಹೆಚ್ಚು ಓದಿಲ್ಲದಿದ್ದರೂ, ರಸಪೂರ್ಣವಾಗಿ ಕಾಗದ ಬರೆಯುತ್ತಿದ್ದ ಶಾಮುವಿನ ರಸಿಕತೆ ಮೀರಳ ಮನಸ್ಸಿಗೆ ತುಂಬಾ ಹಿಡಿಸಿತ್ತು.

ಗೋವಿಂದನ ಮದುವೆಯ ಸಮಯಕ್ಕೆ ಸರಿಯಾಗಿ ತಮಗೆಲ್ಲಿ ಪುರುಡು ಬರುವುದೋ ಎಂದು ಯೋಚಿಸುತ್ತಿದ್ದ ಕಮಲಮ್ಮನವರು ತಮ್ಮ ಮೊಮ್ಮಗಳ ಜನನ ವಾರ್ತೆಯನ್ನು ಕೇಳಿ ನಿಶ್ಚಿಂತರಾದರು. ಮಗಳ ನಾಮಕರಣಕ್ಕೆ ಗೋಪಾಲ ಬರಲಿಲ್ಲ. ತಮ್ಮನ ಮದುವೆಗೆ ರಜೆಯನ್ನು ಉಳಿಸಿಕೊಂಡಿದ್ದ. ಗೋವಿಂದನ ಮದುವೆಯ ಹಿಂದಿನ ದಿನ ಶಾಮು ಊರಿಗೆ ಬಂದ. ಸಂಜೆ ಟ್ರೈನಿನಲ್ಲಿ ಗೋಪಾಲನೂ ಹಾಜರಾದ. ಮನೆ ಈಗ ನೆಂಟರಿಷ್ಟರಿಂದ ತುಂಬಿ ತುಳುಕತೊಡಗಿತು.

ಮೀರ ತನ್ನಣ್ಣನನ್ನು ಶಾಮುವಿಗೆ ಪರಿಚಯ ಮಾಡಿಸಿದಳು. ಶಾಮು ಸಂಕೋಚದಿಂದ "ತಮ್ಮ ಪರಿಚಯವಾದುದು ತುಂಬಾ ಸಂತೋಷ ಸಾರ್" ಎಂದ.

ಗೋಪಾಲ ತನ್ನ ಒಂದು ಸ್ನೇಹದ ನಗೆಯಿಂದಲೇ ಶಾಮುವಿನ ಹೃದಯವನ್ನು ಗೆದ್ದಿದ್ದ. ಗೋಪಾಲ ಶಾಮುವಿನ ಆಕಾರವನ್ನೂ, ಮಾತಿನ ಒರಟುತನವನ್ನೂ, ಒರಟುತನದ ಹಿಂದಡಗಿದ್ದ ಸರಳ ಸ್ವಭಾವ, ಮೃದುತ್ವವನ್ನೂ ಮೆಚ್ಚಿದ.

ಮೀರಳೆದುರಿಗೆ ಶಾಮುವನ್ನು ಪ್ರಶಂಸಿಸಿ "ನಿನ್ನ ಗಂಡನೆಂದರೆ ಹರ್ಕ್ಯುಲಿಸ್" ಎಂದಿದ್ದ.

ಗೋವಿಂದನ ಮದುವೆ ಹೆಚ್ಚು ಆಡಂಬರವಿಲ್ಲದೆ ನಡೆಯಿತು. ಅವನ ಹೆಂಡತಿ ಕರುಣಾ, ಮೀರ ಬಹಳ ಬೇಗ ಗೆಳತಿಯರಾದರು. ಎರಡು ದಿನದಲ್ಲಿ ಮದುವೆ ಮುಗಿಸಿಕೊಂಡು ಕೃಷ್ಣಪ್ಪನವರು ಪರಿವಾರ ಸಮೇತರಾಗಿ ತಮ್ಮ ಮನೆಗೆ ಬಿಡದಿಯ ಮನೆಯಿಂದ ಹಿಂತಿರುಗಿದರು.

ಮದುವೆ ಮುಗಿದ ಮಾರನೆಯ ದಿನವೇ ಶಾಮು ಹಳ್ಳಿಗೆ ಹೊರಡುವುದಾಗಿ ತಿಳಿಸಿದ.

"ಈಗಲೇ ಏನು ಆತುರ ಶಾಮಣ್ಣಾ? ಗೋಪೀನೂ ಬಂದಿದ್ದಾನೆ. ಇನ್ನು ಎಲ್ಲರೂ ಒಟ್ಟಿಗೆ ಸೇರುವುದು ಯಾವಾಗಲೋ. ಇದ್ದುಬಿಡು" ಎಂದರು ಮಾವ. ಶಾಮು ಒಪ್ಪಿಕೊಂಡ. ಗೋಪಾಲನಿಗೆ ಒಂದು ವಾರ ರಜ ಸಿಕ್ಕಿತ್ತು.

ಮೀರ, ಗೋಪಾಲರಿಗೆ ಇಂಗ್ಲಿಷ್ ಚಿತ್ರದ ಮೋಹ ಬಹಳವಾಗಿತ್ತು. ಅರೆಬೆತ್ತಲೆಯ ಹುಡುಗಿಯರು ಕುಣಿಯುವುದನ್ನು ನೋಡಿದಾಗ ಶ್ಯಾಮುವಿಗೆ ಹೇಸಿಗೆಯಾಯಿತು. ಇಂತಹ ಚಿತ್ರಗಳಲ್ಲಿ ಮೀರಳಿಗೆ ಯಾವ ಆಕರ್ಷಣೆಯಿದೆ ಎಂಬುದು ಶಾಮುವಿಗೆ ಅರ್ಥವಾಗಲಿಲ್ಲ. ಮೀರಳ ಮಾತನ್ನು ಮನ್ನಿಸುವ ಸಲುವಾಗಲ್ಲದಿದ್ದರೂ, ಗೋಪಾಲನಿಗೆ ಎದುರಾಡುವ ಮನಸ್ಸಿಲ್ಲದೆ ಅವರೊಡನೆ ಇಂಗ್ಲಿಷ್ ಚಿತ್ರಗಳಿಗೆ ಹೋಗಿಬಂದ ಶಾಮು. ರಜ ಮುಗಿದೊಡನೆ ಗೋಪಾಲ ಬೊಂಬಾಯಿಗೆ ಹೊರಟುಹೋದ. ಹೋಗುವ ಮುನ್ನ ಮೀರಳ ಬಳಿ ನಿಂತು,

"ಮೀರಾ, ನೀನು ದೊಡ್ಡವಳಾದೆ. ಇನ್ನು ಮೇಲೆ ನಿನ್ನ ಜಡೆ ಹಿಡಿದೆಳೆಯುವ ಹಾಗಿಲ್ಲ. ನಾನು ಇನ್ನೊಂದು ಸಲ ಬರುವ ಹೊತ್ತಿಗೆ ನಿನ್ನ ಬದಲು ನಿನ್ನ ಮಗಳ ಜಡೆ ಕೈಗೆ ಸಿಗುತ್ತದೆ. ನಮ್ಮ ಕಿಶೋರನೇ ನಿನ್ನಳಿಯ. ಈಗಿನಿಂದ ಅವನನ್ನು ಅನುಸರಿಸಿಕೊಂಡಿರು" ಎಂದು ಚೇಷ್ಟೆ ಮಾಡಿ, ತನ್ನೊಡನೆ ಬರುತ್ತೇನೆಂದು ಹಠ ಹಿಡಿದು ಅಳುತ್ತಿದ್ದ ಕಿಶೋರನನ್ನು ಮುಂದಿಟ್ಟು, "ಆಸ್ಪತ್ರೆಗೆ ಹೋಗಿಬರುತ್ತೇನೆ ರಾಜ" ಎಂದು ಅವನನ್ನು ಮರೆಸಿ ಹೋದ.

ಶಾಮುವಿಗೆ ಒಂದು ವಾರ ಹಳ್ಳಿಯನ್ನು ಬಿಟ್ಟಿದ್ದುದು ಹೇಗೆ ಹೇಗೋ ಆಗಿತ್ತು. ಬಹಳ ವರ್ಷಗಳಿಂದಲೂ ಹಳ್ಳಿಯನ್ನು ಬಿಟ್ಟ ಭಾವನೆ ಬಂದಿತ್ತು. ಶಾಮು

ವಿಗೆ ಹಳ್ಳಿಯ ಕರೆ ಬಲವಾಗಿತ್ತು. ಆ ಕರೆಗೆ ಕಿವುಡನಾಗಲಾರದೇ ಹಿಂದಿರುಗಿದ.

ಶಾಮು ಹಳ್ಳಿಗೆ ಹಿಂದಿರುಗಿದ ಮಾರನೆಯ ದಿನವೇ ಮೀರ ತಲೆನೋವು, ಜ್ವರದಿಂದ ಮಲಗಿದಳು. ಕೃಷ್ಣಪ್ಪನವರು ಗೋಪಾಲನ ಮೇಲೆ ರೇಗಿದರು.

"ಅವನಿಗೆ ಏನೂ ತಿಳಿಯುವುದಿಲ್ಲ. ಮೀರಾನ ತುಂಬ ಅಲೆದಾಡಿಸಿಬಿಟ್ಟ. ಅವಳು ಈಗ ಹಾಸಿಗೆ ಹಿಡಿದಳು" ಎಂದು ಗೊಣಗಾಡಿದರು. ಹತ್ತಿರದಲ್ಲಿಯೇ ಷಾಪಿರಿಸಿಕೊಂಡಿದ್ದ ಡಾಕ್ಟರನ್ನು ಕರೆಸಿ ತೋರಿಸಿದರು.

ಅವರು "ಲೇಡಿ ಡಾಕ್ಟರಿಗೆ ತೋರಿಸಿದರೆ ಒಳ್ಳೆಯದು" ಎಂದು ಸೂಚಿಸಿದರು.

ಕಮಲಮ್ಮನವರು ಮೀರಳನ್ನು ಕರೆದುಕೊಂಡು ಚೆಲುವಾಂಬಾ ಆಸ್ಪತ್ರೆಗೆ ಹೊರಟರು. ಬೆಳಿಗ್ಗೆ ಎಂಟು ಗಂಟೆಗೆ ಕಾಫಿ ಕುಡಿದು ಆಸ್ಪತ್ರೆಗೆ ಹೋದುದಕ್ಕೆ ಮೆಡಿಕಲ್ ಆಫೀಸರು ಸಿಕ್ಕಿದಾಗ ಹನ್ನೆರಡು ಗಂಟೆಯಾಗಿತ್ತು.

ಆಸ್ಪತ್ರೆಯ ವರಾಂಡದಲ್ಲಿ ಹಾಕಿದ್ದ ಬೆಂಚಿನ ಮೇಲೆ ಗರ್ಭಿಣಿ ಹೆಂಗಸರು ಕೈಲಿ ಸೀಸೆಗಳನ್ನು ಹಿಡಿದು, ಬಾಡಿದ ಮೋರೆಗಳನ್ನು ಮಾಡಿಕೊಂಡು ಕುಳಿತಿದ್ದರು. ಗರ್ಭಪಾತವಾಗಿ ಮುಖ ಬಿಳಿಚಿಕೊಂಡಿದ್ದ ಹೆಂಗಸರಿಂದ ಹಿಡಿದು, ದಿನ ತುಂಬಿದ ಹೆಂಗಸರವರೆಗೆ ಅಲ್ಲಿದ್ದರು.

ಮೀರಳಿಗೆ ಹೆಂಗಸರ ಬಾಳನ್ನು ನೆನೆದು ಕೋಪ, ವ್ಯಂಗ್ಯ ಬೆರೆತ ನಗೆಯೊಂದು ಹೊರಹೊಮ್ಮಿತು.

ರೇಷ್ಮೆ ಸೀರೆಯುಟ್ಟು, ಬಿಳಿಯ ಕೋಟನ್ನು ಮೊಣಕಾಲಿನವರೆಗೆ ಧರಿಸಿ ಕೋಟಿನ ತೋಳನ್ನು ಅರೆ ಮಡಿಸಿ, ಸ್ಟೆತೋಸ್ಕೋಪನ್ನು ಕೊರಳಿಗೆ ಹಾರದಂತೆ ಹಾಕಿಕೊಂಡು, ಬಿಳಿಯ ಷೂಸು ಹಾಕಿ ಹೋಗುತ್ತಿದ್ದ ಲೇಡಿ ಡಾಕ್ಟರುಗಳನ್ನು ನೋಡಿ, ಮೀರಳ ಹೃದಯದಲ್ಲಿ ಹಿಂದಿನ ಆಕಾಂಕ್ಷೆ ಹೆಡೆಯೆತ್ತಿ ನಿಂತಿತು. ಪುಣ್ಯವತಿಯಾಗಿದ್ದರೆ ತಾನೂ ಇದೇ ಆಸ್ಪತ್ರೆಯಲ್ಲಿ ಇವರುಗಳ ಸಹೋದ್ಯೋಗಿಯಾಗಿರಬಹುದಿತ್ತು ಎಂದುಕೊಂಡಳು. ತನ್ನಾಸೆ ಎಂದೋ ಮಣ್ಣಾಯಿತು ಎಂಬ ವಿಷಯ ಅವಳ ಕಣ್ಣಿನಲ್ಲಿ ನೀರು ತಂದಿತು.

ಬಿಳಿಯ ಸೀರೆಯುಟ್ಟಿದ್ದ ಕಪ್ಪುಬಣ್ಣದ ನರ್ಸೊಬ್ಬಳು ಈಚೆಗೆ ಬಂದು "ನಂ. 151" ಎಂದು ಕೂಗಿದಾಗ ಮೀರ ಎದ್ದು ರೂಮಿನೊಳಗೆ ಹೋದಳು. ಕಮಲಮ್ಮ ಮೀರಳೊಡನೆ ಹೋದರು.

ಮೆಡಿಕಲ್ ಆಫೀಸರು ಮೀರಳನ್ನು ಪರೀಕ್ಷಿಸಿದರು. ಗಡಿಗೆಯಂತಿದ್ದ ಆಕೆಯ ಮುಖ ಸೌತೇಕಾಯಿಯಂತಾಯಿತು. ಹಾಕಿದ್ದ ಕನ್ನಡಕವನ್ನು ಮೂಗಿನಿಂದ ಮೇಲೆ ಜರುಗಿಸಿ ಮತ್ತೊಮ್ಮೆ ಅದರ ಸ್ಥಳದಲ್ಲಿ ಸ್ಥಾಪಿಸಿ ಕೊಂಚ ರೇಗಿದ ದನಿಯಿಂದ ಕೇಳಿದರು.

"ನೀನು ಬಂದಿರೋದು ಇದೇ ಮೊದಲನೇ ಸಲವಲ್ಲವೇ?"

ಮೀರ ಅಕ್ಕಿ ಎಳ್ಳು ಬೆರೆಸಿದಂತಿದ್ದ ಅವರ ತಲೆಯನ್ನೇ ನೋಡುತ್ತಾ "ಹೌದು" ಎಂದಳು.

"ಆಗಲೇ ಆರು ತಿಂಗಳಾಗಿದೆ. ಒಂದು ದಿನವಾದರೂ ಇಲ್ಲಿಗೆ ಬರದಿದ್ದುದು ಶುದ್ಧ ತಪ್ಪು...." ಎನ್ನುತ್ತ ಕಮಲಮ್ಮನವರ ಕಡೆ ತಿರುಗಿ,

"ನಿಮ್ಮ ಮಗಳೇ?" ಎಂದರು.

"ಹೌದು."

ಆಕೆ ಜಿಗುಪ್ಸೆಯ ದನಿಯಲ್ಲಿ "ಹುಡುಗೀನ ಈಗ ಮನೆಗೆ ಕರೆದುಕೊಂಡು ಹೋಗಬೇಡಿ. ಆಸ್ಪತ್ರೆಯಲ್ಲಿ ಹದಿನೈದು ದಿನವಿರಲಿ. ಹುಡುಗೀಗೆ ಡೆಲಿವರಿ ಸರಿಯಾಗಿ ಆಗುವುದಿಲ್ಲ. ಡಯಲ್ಟೇಷನ್‌ಗೆ ಜಾಗವೇ ಇಲ್ಲ. ಆಪರೇಷನ್ ಮಾಡಿ ಮಗು ತೆಗೆಯಬೇಕಾಗುತ್ತದೆ...."

ಡಾಕ್ಟರ ತೀರ್ಪನ್ನು ಕೇಳಿ ಮೀರಳ ಮುಖದ ರಕ್ತವೆಲ್ಲಾ ಒಣಗಿಹೋಯಿತು. ತುಟಿ ಕಂಪಿಸಿತು. ಡಾಕ್ಟರು ಅವಳ ಹೆದರಿಕೆಯನ್ನು ಗಮನಿಸಿ ಸಂತೈಸುವ ದನಿಯಲ್ಲಿ

"ಹೆದರಬೇಡ ಮಗು. ಆಪರೇಷನ್ ಬಹಳ ಸುಲಭ. ನೀನು ಪ್ರಸವದ ನೋವು ಕೂಡ ಅನುಭವಿಸಬೇಕಾಗಿಲ್ಲ. ನೋವು ಕಂಡಕೂಡಲೇ ಜ್ಞಾನ ತಪ್ಪಿಸಿ ಆಪರೇಷನ್ ಮಾಡಿಬಿಡುತ್ತೇವೆ" ಎನ್ನುತ್ತ ಚೀಟಿಯಲ್ಲಿ ಇಂಜಕ್ಷನ್ನುಗಳು ಮತ್ತು ಟಾನಿಕ್ಕಿನ ಹೆಸರನ್ನು ಬರೆದುಕೊಟ್ಟರು.

ನರ್ಸೊಬ್ಬಳು ಬಂದು ಮೀರಳನ್ನು ಕರೆದುಕೊಂಡು ಹೋಗಿ ಸ್ಪೆಷಲ್ ವಾರ್ಡಿಗೆ ಸೇರಿಸಿದಳು.

ಕಮಲಮ್ಮ ಮನೆಗೆ ಬರುವುದನ್ನೇ ಕೃಷ್ಣಪ್ಪನವರು ಕಾಯುತ್ತಿದ್ದರು. ಕಮಲಮ್ಮನವರು ಗಾಬರಿಯಿಂದ ಡಾಕ್ಟರು ಹೇಳಿದುದನ್ನೆಲ್ಲಾ ಗಂಡನಿಗೆ ತಿಳಿಸಿದರು.

"ಈಗಿನ ಕಾಲದ ಹುಡುಗಿಯರಿಗೆ ಶಕ್ತಿಯೇ ಇಲ್ಲ. ಹಿಂದಿನ ಕಾಲದಲ್ಲಿ ಡಾಕ್ಟರಿದ್ದರೇ? ಅವರೆಲ್ಲಾ ಎಂಟು, ಹತ್ತು ಮಕ್ಕಳನ್ನು ಹೆರುತ್ತಿರಲಿಲ್ಲವೇ? ಈಗಿನ ಕಾಲದ ಹುಡುಗಿಯರ ಶರೀರವೆಲ್ಲಾ ಓದಿನಿಂದ ಜೊಳ್ಳಾಗಿ ಹೋಗಿದೆ."

ಕಮಲಮ್ಮನವರು ವ್ಯಾಖ್ಯಾನ ಮಾಡಿದರು.

'ಆಪರೇಷನ್' ಎಂದೊಡನೆ ಕೃಷ್ಣಪ್ಪನವರು ಎದೆಗುಂದಿದರು.

"ಏನು ಗ್ರಹಚಾರ ಬಂತಪ್ಪಾ? ಒಳಗೆ ಹೋಗಿ ದೇವರಿಗೆ ತುಪ್ಪದ ದೀಪ ಹಚ್ಚಿಡು" ಎಂದು ಹೆಂಡತಿಗೆ ಅಪ್ಪಣೆ ಮಾಡಿದರು. ಕಮಲಮ್ಮನವರು ಪತಿಯ ಹೇಳಿಕೆಯಂತೆ ದೀಪ ಹಚ್ಚಿ ನಮಸ್ಕಾರ ಮಾಡಿದರು.

ಕೃಷ್ಣಪ್ಪನವರು ಹೆಂಡತಿ ಬರುವುದು ತಡವಾಗಬಹುದೆಂದೂಹಿಸಿ ಅನ್ನ, ಸಾರು ಮಾಡಿದ್ದರು.

"ಕಮಲೂ, ಟಿಫಿನ್ ಕ್ಯಾರಿಯರ್‌ನಲ್ಲಿ ಅನ್ನ ಹಾಕಿಕೊಂಡು ಆಸ್ಪತ್ರೆಗೆ ಹೋಗಿಬರುತ್ತೇನೆ" ಎಂದರು.

"ಸ್ವಲ್ಪ ತಾಳಿ, ಬಂದೆ. ಮೀರ ಅವಳ ಪೆಟ್ಟಿಗೆ ಬೀಗದ ಕೈ ಕೊಟ್ಟಿದ್ದಾಳೆ. ಅವಳ ಪರ್ಸಿನಿಂದ ಐವತ್ತು ರೂಪಾಯಿ ತೆಗೆದುಕೊಂಡು ಹೋಗಿ ಡಾಕ್ಟರು ಹೇಳಿರುವ ಇಂಜಕ್ಷನ್ನುಗಳನ್ನು ತಂದುಕೊಡಿ" ಎನ್ನುತ್ತ ಕಮಲಮ್ಮನವರು ಮೀರಳ ಪೆಟ್ಟಿಗೆ ತೆಗೆದು, ಪರ್ಸಿನಿಂದ ಐವತ್ತು ರೂಪಾಯಿ ತೆಗೆದುಕೊಂಡು ಪುನಃ ಪೆಟ್ಟಿಗೆಗೆ ಬೀಗವನ್ನು ಹಾಕಿದರು.

ಕೃಷ್ಣಪ್ಪನವರು ಅಲ್ಲಿಂದ ನರ್ಸುಗಳನ್ನು ವಿಚಾರಿಸಿ ಮೀರಳಿದ್ದ ವಾರ್ಡಿಗೆ ಹೋದಾಗ ಮೀರ ಹಾಸಿಗೆಯ ಮೇಲೆ ಕುಳಿತಿದ್ದಳು. ಕೃಷ್ಣಪ್ಪನವರು ಅನ್ನ ತಂದಿರುವುದನ್ನು ನೋಡಿ ಹೇಳಿದಳು,

"ದೊಡ್ಡಪ್ಪ, ಡಾಕ್ಟರು ಎರಡು ದಿನ ಊಟ ಬೇಡವೆಂದು ಹೇಳಿದಾರೆ."

"ಹಾಗಾದರೆ ಆಹಾರವೇನು?"

"ಬ್ರೆಡ್ಡು, ಹಾಲು ಅವರೇ ಕೊಡುತ್ತಾರೆ. ಹಣ್ಣು ಬೇಕಾದರೆ ತೆಗೆದುಕೊಳ್ಳ ಬಹುದು ಅಂತ ಹೇಳಿದಾರೆ. ದುಡ್ಡು ತಂದಿರಾ?"

"ಹ್ಞೂ ತಂದಿದೀನಿ."

ಮೀರ ಮೆಡಿಕಲ್ ಆಫೀಸರು ಬರೆದುಕೊಟ್ಟಿದ್ದ ಚೀಟಿಯನ್ನು ಅವರ ಕೈಗೆ ಕೊಟ್ಟು "ಈ ಇಂಜಕ್ಷನ್ನುಗಳನ್ನೂ, ಒಂದು ಡಜನ್ ಮೋಸಂಬೀ ಹಣ್ಣುಗಳನ್ನೂ ತನ್ನಿ. ಅವರಿಗೆ.... ಕಾಗದ ಹಾಕಬೇಕು. ಬರುವಾಗ ಕಾಗದ, ಪೆನ್ನು, ಕವರು ತಂದುಕೊಡಿ."

ಮೀರಳ ಕಾಗದ ತಲುಪಿದ ಮಾರನೆಯ ದಿನವೇ ಶಾಮು ಹಳ್ಳಿಯಿಂದ ಧಾವಿಸಿ ಬಂದ. ಸ್ಟೇಷನ್ನಿನಿಂದ ನೆಟ್ಟಗೆ ಆಸ್ಪತ್ರೆಗೆ ಹೋಗಿ, ಮೀರಳ ವಾರ್ಡು ಹುಡುಕಿಕೊಂಡು ಬಂದಾಗ ಮೀರ ಹಣ್ಣು ತಿನ್ನುತ್ತ ಕುಳಿತಿದ್ದಳು. ನರ್ಸ್ ಒಬ್ಬಳು ಅವಳ ಬಳಿ ನಿಂತು ಒಂದೇ ಸಮನೆ ಹರಟೆ ಹೊಡೆಯುತ್ತಿದ್ದಳು. ಶಾಮು ಒಳಗೆ ಬಂದೊಡನೆ ಮಾತು ನಿಲ್ಲಿಸಿ ಅವನ ಕಡೆ ತಿರುಗಿ ನೋಡುತ್ತ ಆಚೆಗೆ ಹೋದಳು.

ಮೀರ ಶಾಮುವಿನ ಹೆದರಿದ ಮುಖ ನೋಡಿ ನಕ್ಕಳು. ಶಾಮು ಕುರ್ಚಿಯನ್ನು ಮಂಚದ ಹತ್ತಿರ ಎಳೆದುಕೊಳ್ಳುತ್ತ,

"ಹೇಗಿದೀಯ ಮೀರಾ?" ಎಂದ.

"ನೀವೇ ನೋಡಿ ಹೇಳಿ."

"ತುಂಬಾ ಇಳಿದು ಹೋಗಿದ್ದೀಯಾ. ಡಾಕ್ಟರೇನು ಹೇಳಿದರು?"

"ಆಪರೇಷನ್ ಮಾಡಿ ಮಗು ತೆಗೆಯಬೇಕೆಂದರು. ಕೆಲವು ಇಂಜೆಕ್ಷನ್ ಟ್ಯೂಬ್ ತರಿಸಿಕೊಟ್ಟೆ. ಈಗ ಅದನ್ನು ಕೊಡುತ್ತಿದ್ದಾರೆ.

"ಹಣಕ್ಕೆ ತೊಂದರೆ ಪಟ್ಟುಕೊಳ್ಳಬೇಡ. ಮುಗಿದ ಕೂಡಲೇ ಕಾಗದ ಬರಿ. ಕಳುಹಿಸುತ್ತೇನೆ."

"ನೀವು ಮನೆಗೆ ಹೋಗಿ ಬಂದಿರಾ?"

"ಇಲ್ಲ."

"ಹಾಗಾದರೆ ಹಸಿದುಕೊಂಡೇ ಇದ್ದೀನಿ. ಊಟ ಮಾಡಿ ಬನ್ನಿ."

"ನಿಧಾನವಾಗಿ ಹೋಗುತ್ತೇನೆ. ಬರುವಾಗ ಚೆನ್ನಾಗಿ ತಿಂದು ಬಂದಿದೀನಿ."

ಮೀರ ಬಲವಂತ ಮಾಡಿ ಶಾಮುವಿಗೆರಡು ಮೋಸಂಬಿಹಣ್ಣು ಕೊಟ್ಟಳು. ಅವಳನ್ನು ಪ್ರಸನ್ನಗೊಳಿಸುವುದಕ್ಕಾಗಿ ಶಾಮು ತಿನ್ನಲೇಬೇಕಾಯಿತು. ತೊಳೆಯನ್ನು ಬಿಡಿಸುತ್ತ ಶಾಮು ಕೇಳಿದ:

"ಇಲ್ಲಿ ಎಷ್ಟು ದಿನವಿರಬೇಕು?"

"ಹದಿನೈದು ದಿನವಿರಬೇಕು ಎಂದು ಹೇಳಿದರು. ನಾನು ಬಂದು ಮೂರು ದಿನವಾಯಿತು. ಆಮೇಲೂ ದಿನವೂ ಬಂದು ತೋರಿಸುತ್ತಿರಬೇಕೆಂದು ಹೇಳಿದಾರೆ."

ಮೂರು ಗಂಟೆಯಾದರೂ ಶಾಮು ಮನೆಗೆ ಹೊರಡುವ ಸೂಚನೆ ಕಂಡುಬರದಿರಲು ಮೀರ,

"ಮನೆಗೆ ಹೋಗಿ ಬನ್ನಿ. ಸಂಜೆಯೆಲ್ಲಾ ಮಾತನಾಡುವಿರಂತೆ. ಸ್ಪೆಷಲ್ ವಾರ್ಡಾದುದರಿಂದ ಯಾರೂ ಅಡ್ಡಿ ಮಾಡುವ ಹಾಗಿಲ್ಲ" ಎಂದಳು.

ಶಾಮು ಮನಸ್ಸಿಲ್ಲದ ಮನಸ್ಸಿನಿಂದ ಎದ್ದುಹೋದ. ಮನೆಯಲ್ಲಿ ಊಟ ಮಾಡಿದವನೇ ಪುನಃ ಆಸ್ಪತ್ರೆಗೆ ಹೊರಟ. ಕಮಲಮ್ಮನವರು ಬಂದು ಶಾಮುವಿಗೆ "ಒಂದು ಗಳಿಗೆ ಸುಧಾರಿಸಿಕೊಳ್ಳಿ, ಶಾಮಣ್ಣ. ಸಂಜೆ ಹೋಗುವಿರಂತೆ" ಎಂದರು. ಆದರೆ ಶಾಮುವಿನ ಮನಸ್ಸು ನಿಲ್ಲಲಿಲ್ಲ. ಆಸ್ಪತ್ರೆಯಲ್ಲಿ ಮೀರಳೊಡನೆ ಮಾತನಾಡುತ್ತ ಕುಳಿತ. ಮೀರಳಿಗೆ ಭವಿಷ್ಯದ ಬಗ್ಗೆ ಭಯವಾದಾಗ ಶಾಮು ಅವಳಿಗೆ ಸಮಾಧಾನ ಹೇಳಿದ. ತಾನು ಅಧೈರ್ಯ ತೋರಿಸಿದಾಗ ಮೀರಳಿಂದ ಧೈರ್ಯ ಹೇಳಿಸಿಕೊಂಡ.

ಆರು ಗಂಟೆಗೆ ಕೃಷ್ಣಪ್ಪನವರು ಬಂದರು. ಎಂಟು ಗಂಟೆಗೆ ಇಬ್ಬರೂ ಮನೆಗೆ ಹೊರಟರು.

"ನಾನಿನ್ನು ಬರ್‍ತೀನಿ ಮೀರಾ. ನಾಳೆ ಬೆಳಿಗ್ಗೆ ಹಳ್ಳಿಗೆ ಹೊರಡುತ್ತೇನೆ."

ಕೃಷ್ಣಪ್ಪನವರು "ನಾಳೆ ಬೆಳ್ಳಿಗ್ಗೇನೆ ಹೋಗಬೇಕೆ?" ಎಂದರು.

"ಹೌದು. ಮೀರಾ ಆಸ್ಪತ್ರೆಯಿಂದ ಮನೆಗೆ ಬರುವ ದಿನ ಪುನಃ ಬರುತ್ತೇನೆ."

ಶಾಮುವನ್ನು ಬಲವಂತ ಪಡಿಸುವುದರಲ್ಲಿ ಯಾವ ಪ್ರಯೋಜನವೂ ಇಲ್ಲವೆಂದು ತಿಳಿದು ಮೀರ ಸುಮ್ಮನಾದಳು.

ಹದಿನೈದು ದಿನ ಆಸ್ಪತ್ರೆಯಲ್ಲಿ ಕಳೆಯುವ ಹೊತ್ತಿಗೆ ಮೀರಳಿಗೆ

ಸಾಕಾಯಿತು. ಪ್ರತಿನಿತ್ಯ ಬರುತ್ತಿದ್ದ ಜ್ವರ ಈಗ ನಿಂತಿತ್ತು. ಮೆಡಿಕಲ್ ಆಫೀಸರು ಮೀರಳಿಗೆ ಪ್ರತಿದಿನವೂ ಬಂದು ಪರೀಕ್ಷೆ ಮಾಡಿಸಿಕೊಂಡು ಹೋಗಬೇಕೆಂದು ಮತ್ತೊಮ್ಮೆ ಎಚ್ಚರಿಸಿ ಬಿಡುಗಡೆ ಮಾಡಿದರು.

ಮೀರ ಮನೆಗೆ ಬರುವ ಹೊತ್ತಿಗೆ ಶಾಮು ಹಾಜರಾಗಿದ್ದ. ಮೀರಳಿಗೆ ಅವನನ್ನು ನೋಡಿ ಆಶ್ಚರ್ಯವಾಯಿತು.

"ಯಾವಾಗ ಬಂದಿರಿ?"

"ಮನೆಗೆ ಬಂದು ಅರ್ಧ ಗಂಟೆಯಾಯಿತು. ನೀನು ಮನೆಗೆ ಬರುವ ದಿನ ಬರುತ್ತೇನೆಂದು ಅವತ್ತೇ ಹೇಳಿರಲಿಲ್ಲವೇ?"

"ಹೌದು ಮರೆತುಹೋಗಿತ್ತು!"

ಶಾಮು ಎರಡು ದಿನ ಮೈಸೂರಿನಲ್ಲಿ ಉಳಿದುಕೊಂಡು ಮೀರಳನ್ನು ಬೆಳಿಗ್ಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬಂದ.

ಮೂರನೆಯ ದಿನ ಹಳ್ಳಿಗೆ ಹೊರಡುವುದಕ್ಕೆ ಮುಂಚೆ ಮೀರಳಿಗೆ ತನ್ನ ಆರೋಗ್ಯದ ಕಡೆ ಲಕ್ಷ್ಯವಿಡಲು ಹೇಳಿ ಹೊರಟ.

"ನೀವು ಪುನಃ ಬರುವುದು ಯಾವಾಗ?" ಎಂದಾಗ ಶಾಮು ನಗುತ್ತ "ನೀನು ತಾಯಿಯಾದಾಗ" ಎಂದುತ್ತರವಿತ್ತ.

ಆದರೆ ಶಾಮು ಮೀರ ತಾಯಿಯಾಗುವುದಕ್ಕೆ ಮುಂಚೆಯೇ ಬರಬೇಕಾಯಿತು.

ಮೀರ ಎಂದಿನಂತೆ ಒಂದು ದಿನ ಬೆಳಿಗ್ಗೆ ಆಸ್ಪತ್ರೆಗೆ ಹೋದಾಗ ಅವಳನ್ನು ಪರೀಕ್ಷಿಸಿದ ಡಾಕ್ಟರು ಚಕಿತರಾದರು.

"ನಿನಗೆ ನೋವು ಶುರುವಾಗಿದೆಯೇ?" ಎಂದು ಪ್ರಶ್ನಿಸಿದರು.

"ಇಲ್ಲ ಡಾಕ್ಟರ್."

"ಸಂಕೋಚಪಟ್ಟುಕೊಳ್ಳದೇ ಹೇಳಮ್ಮ."

"ಖಂಡಿತ ಇಲ್ಲ."

"ಲೇಬರ್ ಪೆಯಿನು ಶುರುವಾಗಿದೆ. ನರಗಳ ದುರ್ಬಲತೆಯಿಂದ ನಿನಗೆ ಅದರ ಅರಿವಾಗಿಲ್ಲ. ಇವತ್ತು ಮನೆಗೆ ಹೋಗಬೇಡ" ಎನ್ನುತ್ತ ಹೊರಗೆ ಬಂದು ಕಮಲಮ್ಮನವರೊಡನೆ

"ನಿಮ್ಮ ಅಳಿಯನನ್ನು ಕರೆಸಿಬಿಡಿ. ಆದಷ್ಟು ಜಾಗ್ರತೆ ಆಪರೇಷನ್ ಮಾಡಬೇಕು. ಅರ್ಜೆಂಟಾಗಿ ಬರಬೇಕೆಂದು ಟೆಲಿಗ್ರಾಂ ಕೊಡಿ" ಎಂದು ಹೇಳಿ ಒಳಗೆ ಹೋದರು.

ಕಮಲಮ್ಮನವರಿಗೆ ದಿಕ್ಕು ತೋಚದಂತಾಯಿತು. ಗಾಡಿ ಮಾಡಿಕೊಂಡು ಮನೆಗೆ ಬಂದು ಡಾಕ್ಟರು ಹೇಳಿದ ಸಂಗತಿಯನ್ನು ತಿಳಿಸಿದರು. ಕೃಷ್ಣಪ್ಪನವರಿಂದ ಶಾಮುವಿಗೆ ಎಕ್ಸ್‌ಪ್ರೆಸ್ ಟೆಲಿಗ್ರಾಂ ಹೋಯಿತು.

ಡಾಕ್ಟರು ಆಪರೇಷನ್ನಿಗೆ ಪೂರ್ವಸಿದ್ಧತೆಗಳನ್ನು ಮಾಡಿ, ಶಾಮುವಿನ ಆಗ ಮನಕ್ಕಾಗಿ ಕಾಯುತ್ತಿದ್ದರು. ಶಾಮು ಆಸ್ಪತ್ರೆಗೆ ಹುಚ್ಚನಂತೆ ಬಂದ. ಅವನು ಬಂದೊಡನೆಯೇ ನರ್ಸೊಬ್ಬಳು ಶಾಮುವನ್ನು ಆಫೀಸು ರೂಮಿನೊಳಗೆ ಕರೆದುಕೊಂಡು ಹೋದಳು.

ಲೇಡಿ ಡಾಕ್ಟರು ಅವನ ಮುಂದೆ ಕಾಗದವೊಂದನ್ನಿರಿಸಿ, ಕೈಗೆ ಪೆನ್ನು ಕೊಟ್ಟು "ಇದಕ್ಕೆ ನಿಮ್ಮ ಸೈನ್ ಹಾಕಿ. ನಿಮ್ಮ ಹೆಂಡತಿ ಮತ್ತೊಂದು ಬಾರಿ ಬಸುರಿಯಾದರೆ ಆಕೆ ಉಳಿಯುವುದಿಲ್ಲ. ಆದುದರಿಂದ ಆಕೆ ಪುನಃ ಗರ್ಭಿಣಿಯಾಗದ ಹಾಗೆ ಗರ್ಭ ಕೋಶ ತಿರುಗಿಸಬೇಕು. ಅದಕ್ಕೆ ನಿಮ್ಮ ಒಪ್ಪಿಗೆ ಬೇಕು" ಎಂದರು.

ಶಾಮು ಏನನ್ನೂ ಯೋಚಿಸುವ ಸ್ಥಿತಿಯಲ್ಲಿರಲಿಲ್ಲ. ಕಂಪಿಸುತ್ತಿದ್ದ ಕೈ ಗಳಿಂದ ತನ್ನ ಸಹಿ ಹಾಕಿ ಆಫೀಸು ರೂಮಿನಿಂದ ಎದ್ದು ಬಂದು ಹೊರಗಡೆಯಿದ್ದ ಬೆಂಚಿನ ಮೇಲೆ ಕುಳಿತ.

ಶಾಮುವಿನ ಸಹಿ ದೊರೆತೊಡನೆ ಡಾಕ್ಟರು ಮೀರಳನ್ನು ಕರೆದೊಯ್ದು ಮಲಗಿಸಿದರು. ಸ್ವಿಚ್ಚು ಒತ್ತಿದೊಡನೆ ಕಣ್ಣು ಕೋರೈಸುವ ದೀಪಗಳು ಹತ್ತಿ ಕೊಂಡವು. ಮೀರ ಬೆಳಕಿನ ಕಿರಣಗಳನ್ನು ನೋಡಲಾರದೆ ಕಣ್ಣು ಮುಚ್ಚಿಕೊಂಡಳು. ಕ್ಲೋರೋಫಾರಂ ಹಿಡಿದೊಡನೆ ಜ್ಞಾನ ತಪ್ಪಿತು.

ಮೀರಳಿಗೆ ಎಚ್ಚರವಾದಾಗ ಸಂಜೆ ನಾಲ್ಕು ಗಂಟೆಯಾಗಿತ್ತು.

ಕಣ್ಣು ಬಿಟ್ಟೊಡನೆ ಸುತ್ತಲಿನ ಪ್ರಪಂಚ ಮಸಕು, ಮಸಕಾಗಿ ತೋರಿತು. ಕುರ್ಚಿಯ ಮೇಲೆ ಕುಳಿತು ತನ್ನ ಮುಖವನ್ನೇ ನೋಡುತ್ತಿದ್ದ ಶಾಮು ಅವಳಿಗೆ ಪರಿಚಿತನಂತೆ ಕಾಣಲಿಲ್ಲ.

ಕ್ಷೀಣವಾದ ದನಿಯಲ್ಲಿ "ಯಾರು?" ಎಂದಳು.

ಶಾಮು ಅವಳ ಕೈಹಿಡಿದು ಮೃದುವಾಗಿ ಸವರುತ್ತ "ನಾನು ಮೀರಾ" ಎಂದ. ಮೀರ ಕಣ್ಣುಗಳನ್ನು ಅಗಲವಾಗಿ ತೆರೆದು ಅವನನ್ನು ಎರಡು ನಿಮಿಷ ದಿಟ್ಟಿಸಿ ನೋಡಿದಳು. ನಗೆಯ ಅಲೆಯೊಂದು ಕಣ್ಣುಗಳಲ್ಲಿ ಮಿಂಚಿಹೋಯಿತು.

"ಯಾವಾಗ ಬಂದಿರಿ?"

"ನಾನು ಬಂದು ಐದು ದಿನವಾಯಿತು."

"ಬಂದು ಐದು ದಿನವಾದರೂ ಇಲ್ಲಿಗೇಕೆ ಬರಲಿಲ್ಲ?"

"ಐದು ದಿನದಿಂದ ನಾನು ನಿನ್ನ ಬಳಿಯೇ ಕುಳಿತಿದ್ದೇನೆ ಮೀರಾ. ನಿನಗೆ ಆಪರೇಷನ್ ಮಾಡಿದ ದಿನವೇ ನಾನು ಬಂದೆ."

"ಹಾಗಾದರೆ ಇವತ್ತು ಯಾವ ವಾರ?"

"ಶುಕ್ರವಾರ."

"ನನಗೆ ಆಪರೇಷನ್ ಆಗಿ ಐದು ದಿನವಾಯ್ತು. ಅಬ್ಬ! ಮಗು....

ಮಗು...." ಎನ್ನುತ್ತ ಮೀರ ಕಣ್ಣು ಹೊರಳಿಸಿ ನೋಡಿದಳು. ಪಕ್ಕದಲ್ಲಾಗಲಿ, ಮಂಚದ ಬಳಿಯಿದ್ದ ತೊಟ್ಟಿಲಿನಲ್ಲಾಗಲಿ ಮಗುವಿರಲಿಲ್ಲ.

ಶಾಮು "ಹೆದರಬೇಡ ಮೀರಾ. ಮಗುವಿನಿಂದ ನಿನಗೆ ತೊಂದರೆಯಾಗಬಹುದೆಂದು ನರ್ಸ್ ಬೇರೆ ಕಡೆಗೆ ಕರೆದುಕೊಂಡು ಹೋಗಿದಾಳೆ" ಎಂದ.

"ಎಂಥ ಮಗು?"

"ಮಗಳು."

ಮೀರಾ ಆಸೆ, ಮಮತೆಯಿಂದ ಹೇಳಿದಳು: "ಇಲ್ಲಿಗೆ ಕರೆಸಿ. ನಾನು ನೋಡಬೇಕು"

ಶಾಮು ...ದ್ದು ಹೊರಗೆ ಹೋದ. ಮೀರ ಕಾತರದಿಂದ ಬಾಗಿಲ ಕಡೆಯೇ ನೋಡುತ್ತಿದ್ದಳು. ಐದು ನಿಮಿಷದ ನಂತರ ಶಾಮು ಒಳಗೆ ಬಂದು "ಮಗು ನಿದ್ದೆ ಮಾಡುತ್ತಿದೆ. ಆಮೇಲೆ ಕರೆದುಕೊಂಡು ಬರುತ್ತಾರೆ" ಎಂದ.

ಮೀರ ಅವನನ್ನು ಒತ್ತಾಯಪಡಿಸುತ್ತ "ಅಯ್ಯೋ, ನಿದ್ದೆ ಮಾಡಿದರೇನಂತೆ. ನಾನು ಅದನ್ನು ಎಬ್ಬಿಸುವುದಿಲ್ಲ. ಕರೆದುಕೊಂಡು ಬನ್ನಿ. ಮಗು ಹುಟ್ಟಿ ಐದು ದಿನವಾದರೂ ನಾನದರ ಮುಖ ನೋಡಿಲ್ಲ" ಎಂದು ಗೋಗರೆದಳು. ಅವಳ ದನಿಯಲ್ಲಿನ ದೀನತೆ, ಹಂಬಲಿಕೆ ಗಮನಿಸಿ ಶಾಮು "ಮಗು ಬೇಡವೆಂದು ಹೇಳಿದ ಮೀರ ಇವಳೇನೇ" ಎಂದು ಆಶ್ಚರ್ಯಪಟ್ಟ.

ಶ್ವೇತವಸ್ತ್ರಧಾರಿಣಿಯಾದ ನರ್ಸೊಬ್ಬಳು ಹಸಿರು ರಗ್ಗಿನಿಂದ ಮುಚ್ಚಿದ ಮಗುವನ್ನು ತಂದಳು. ಮೀರ ಕಣ್ಣು ಅಗಲಿಸಿ ನೋಡತೊಡಗಿದಳು. ದೂರದಿಂದ ಮಗುವಿನ ತಲೆಗೂದಲು ಮಾತ್ರ ಕಪ್ಪಗೆ ಕಾಣುತ್ತಿತ್ತು. ನರ್ಸ್ ಹತ್ತಿರ ಬಂದಂತೆ ಏಳಲು ಪ್ರಯತ್ನಿಸಿದಳು.

"ಶ್ ಏಳಬೇಡಿ. ಇನ್ನೊಂದು ವಾರ ನಿಮ್ಮನ್ನು ಏಳಗೊಡಬಾರದೆಂದು ಡಾಕ್ಟರು ಹೇಳಿದಾರೆ. ಹೆಚ್ಚು ಮಾತನಾಡಕೂಡದು. ಬಾಯೊಣಗಿ ನೀರು ಕೇಳಿದರೆ ನಾವು ಕೊಡುವುದಿಲ್ಲ. ಮಗುವನ್ನು ಇಲ್ಲಿಗೆ ತರಬಾರದೆಂದು ಹೇಳಿದ್ದರೂ ನೀವು ಒತ್ತಾಯಪಡಿಸಿದ್ದರಿಂದ...." ಎನ್ನುತ್ತ ಮಗುವನ್ನು ತೊಟ್ಟಿಲಿನೊಳಗೆ ಮಲಗಿಸಿ ಹೊದಿಕೆಯನ್ನು ಸರಿಮಾಡಿದಳು.

ತನ್ನ ಚಿಗುರಿನಂತಹ ಕೈಗಳನ್ನು ಮುಷ್ಟಿ ಮಾಡಿ, ಶಾಂತವಾಗಿ ನಿದ್ರಿಸುತ್ತಿತ್ತು ಮಗು. ಅದರ ತುಂಬಿದ ಕೆನ್ನೆಗಳನ್ನೂ, ಮೃದುವಾದ ಹೂವಿನಂತಿದ್ದ ಕೈಕಾಲುಗಳನ್ನೂ ನೋಡಿ ಮೀರಳಿಗೆ ವರ್ಣನೆಗೆ ಸಿಲುಕದ ಆನಂದವಾಯಿತು.

"ಇಂತಹ ಮುದ್ದಿನ ಮಗುವನ್ನು ನಾನು ಹೇಗೆ ಬೇಡವೆಂದೆ?" ಎಂದು ಅವಳು ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುತ್ತಿದ್ದಳು.

"ಮಗು ತುಂಬಾ ಆರೋಗ್ಯವಾಗಿದೆ. ಹುಟ್ಟಿದಾಗ ಒಂಬತ್ತು ಪೌಂಡಿತ್ತು"

ನರ್ಸು ಮೀರಳಿಗೆ ಹೇಳಿದಳು.

'ನನ್ನ ಪಕ್ಕದಲ್ಲಿ ಸ್ವಲ್ಪ ಮಲಗಿಸಿ" ಎಂದು ಬೇಡಿದಳು ಮೀರಾ.

"ಊಹ್ಞೂ. ನಾನಿಲ್ಲಿಗೆ ಕರೆದುಕೊಂಡು ಬಂದಿರುವುದು ತಿಳಿದರೇ ಡಾಕ್ಟರಮ್ಮ ಬೈಯುತ್ತಾರೆ. ಹುಷಾರಾದ ಮೇಲೆ ನೀವೇ ನೋಡಿಕೊಳ್ಳುವಿರಂತೆ" ಎಂದು ಹೇಳುತ್ತ ಮಗುವನ್ನು ಎತ್ತಿಕೊಂಡು ಹೊರಟುಹೋದಳು.

"ಹೊರಟೇಹೋದಳು" ಮೀರಾ ನಿರಾಶೆಯಿಂದ ನುಡಿದಳು.

ಅವಳ ದನಿ ಶಾಮುವಿನೆದೆಗೆ ಬರೆ ಎಳೆದಂತಾಗಲು, ಅವಳ ಹಣೆ ಸವರಿ "ಮೊದಲು ನೀನು ಹುಷಾರಾಗು ಮೀರಾ, ನಮ್ಮ ಮಗು ನಮ್ಮ ಮನೆಯಲ್ಲಿರದೆ ಎಲ್ಲಿಗೆ ಹೋಗುತ್ತದೆ? ತಾಯಿಯಾದವಳು ನೀನಲ್ಲದೇ ಅದನ್ನು ಬೇರಾರು ನೋಡಿಕೊಳ್ಳಬೇಕು" ಎಂದು ಸಮಾಧಾನಪಡಿಸಿದ.

ಹೆರಿಗೆಯಾದ ಇಪ್ಪತ್ತೈದು ದಿನಗಳ ನಂತರ ಮೀರಳಿಗೆ ಆಸ್ಪತ್ರೆಯಿಂದ ಮನೆಗೆ ಹೋಗಲು ಅನುಮತಿ ದೊರೆಯಿತು.

ಮೀರ ಮಗುವಿನೊಡನೆ ಮನೆಗೆ ಬಂದಳು. ಕಮಲಮ್ಮನವರು ಮೀರ ಬಂದ ಮಾರನೆಯ ದಿನ ನಾಮಕರಣಕ್ಕೆ ಏರ್ಪಾಡು ಮಾಡಿದ್ದರು. ಸಂಜೆ ಮಗುವನ್ನು ತೊಟ್ಟಿಲಿಗೆ ಹಾಕುವ ಶಾಸ್ತ್ರವಿತ್ತು. ಹಿಂದಿನ ದಿನದಿಂದಲೂ ಶಾಮು, ಮೀರ ಮಗುವಿಗೆ ಎಂತಹ ತೊಟ್ಟಿಲು ತರಬೇಕೆಂದು ಚರ್ಚಿಸುತ್ತಿದ್ದರು.

"ನಾನು ಮಾರ್ಕೆಟ್ಟಿಗೆ ಬರುತ್ತೇನೆ. ಟೆಕ್ನಲಾಜಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಸೊಗಸಾದ ಕರೀಮರದ ತೊಟ್ಟಿಲು ಸಿಗುತ್ತದೆ" ಎಂದಳು ಮೀರಾ.

"ಮೀರಾ, ನೀನೆಷ್ಟು ದೊಡ್ಡವಳಾದರೂ ಶುದ್ಧ ಮಗು. ಡಾಕ್ಟರು ಇನ್ನೂ ಮೂರು ತಿಂಗಳು ಹೊರಗೆ ಕಾಲಿಡಬಾರದು ಅಂತ ಹೇಳಿದ್ದಾರೆ. ಈ ಬಾರಿ ನೀನು ನನ್ನವಳಾಗಿಯೇ ಉಳಿದುದು ನನ್ನ ಪುಣ್ಯ. ನೀನು ಹೀಗೆಲ್ಲಾ ಹುಡುಗಾಟವಾಡಿದರೆ ನಾನು ಇವತ್ತೇ ಹಳ್ಳಿಗೆ ಹೊರಟುಹೋಗುತ್ತೇನೆ" ಎಂದು ಶಾಮು ಹೆದರಿಸಿದ.

ಮೀರಾ "ಹ್ಞೂ" ಎಂದು ರಾಗ ತೆಗೆದು ತನ್ನ ಅಸಮಾಧಾನವನ್ನು ಸೂಚಿಸಿದಳು. ಶಾಮು ಸಮಾಧಾನ ಹೇಳಿದ:

"ಕೋಪ ಮಾಡಿಕೊಳ್ಳಬೇಡ. ನನ್ನ ಮಗುವಿಗೆ ಎಂತಹ ತೊಟ್ಟಿಲು ತರಬೇಕೆನ್ನುವುದು ನನಗೆ ಗೊತ್ತಿದೆ. ಒಂದು ಪಕ್ಷ ನಾನು ತಂದ ತೊಟ್ಟಿಲನ್ನು ನೀನು ಒಪ್ಪದಿದ್ದರೆ ಬೇರೆ ತರುತ್ತೇನೆ. ಸರಿಯಾ? ಇನ್ನೇನು ಬೇಕು ಹೇಳು. ನಿನಗೆ, ಮಗೂಗೆ ತರುತ್ತೇನೆ."

"ಬೀರೂಲಿ ಕಾಗದ ಪೆನ್ಸಿಲ್ಲಿದೆ. ತಗೊಂಡು ಬನ್ನಿ. ನಾನು ಹೇಳುತ್ತೇನೆ. ನೀವು ಬರೆದುಕೊಳ್ಳಿ."

ಶಾಮು ಕಾಗದ ಹಿಡಿದು ಕುಳಿತ.

"ಒಂದು ಫೀಡಿಂಗ್ ಬಾಟಲು, ಎರಡು ನಿಪ್ಪಲ್ಲು, ಎರಡು ಗಜ ಮೇಣಗ ಪಟ, ಸೊಳ್ಳೆಪರದೆ, ನಾಲ್ಕು ಡಬ್ಬ ಕುಟಿಕುರ ಪೌಡರು...."

"ಇಷ್ಟೇನಾ?"

"ಸ್ವಲ್ಪ ತಾಳಿ. ಗ್ರೈಪ್ ವಾಟರು, ಗ್ಲಾಕ್ಸೋ, ಗ್ಲೂಕೋಸು, ಗಿಲಕಿ...."

ಶಾಮುವಿನ ಕಾಗದ ಎರಡು ಕಡೆಯೂ ತುಂಬಿತು.

"ಕಾಗದ ಪೂರ್ತಿಯಾಯಿತು."

ತದೇಕಚಿತ್ತಳಾಗಿ ಏನೇನು ತರಬೇಕೆಂದು ಯೋಚಿಸುತ್ತಿದ್ದ ಮೀರ ಅಸಹನೆಯಿಂದ "ಬೇರೆ ಕಾಗದ ತಗೊಂಡು ಬರೆದುಕೊಳ್ಳಿ" ಎಂದಳು. ಶಾಮು ವಿಧೇಯ ವಿದ್ಯಾರ್ಥಿಯಂತೆ ಎದ್ದುಹೋಗಿ ಮತ್ತೊಂದು ಹಾಳೆ ತಂದು "ಹ್ಞೂ, ಆಮೇಲೆ" ಎಂದ.

ಮೀರ ತನಗೆ ಬೇಕಾದುದೆಲ್ಲವನ್ನೂ ಹೇಳಿ ಒಂದು ಬಾರಿ ಪಟ್ಟಿಯನ್ನು ಗಂಡನಿಂದ ಓದಿಸಿ ಕೇಳಿ ತೃಪ್ತಿಯಿಂದ ತಲೆ ಅಲುಗಿಸಿದಳು.

ಮೀರಳಿಗೆ ಮಗಳ ಚಂದದ ಮುಖ ನೋಡುತ್ತ ಕುಳಿತುಕೊಳ್ಳುವುದೇ ಒಂದು ದೊಡ್ಡ ಹಬ್ಬವಾಯಿತು. ತಮ್ಮಿಬ್ಬರ ರೂಪ, ಲಾವಣ್ಯವನ್ನು ಮಾತ್ರ ತೆಗೆದುಕೊಂಡು ಹುಟ್ಟಿದ ಮಗುವನ್ನು ಎಷ್ಟು ಬಾರಿ ನೋಡಿದರೂ ಮೀರಳಿಗೆ ತೃಪ್ತಿಯಿರಲಿಲ್ಲ. ಮಗುವಿನ ಮುಗ್ಧ ಸೌಂದರ್ಯಕ್ಕೆ ಕಳಸವಿಟ್ಟಂತೆ ಅದರ ಹಾಲು ಗೆನ್ನೆಯ ಮೇಲೆ ಗುಳಿ ಬೀಳುವುದನ್ನು ನೋಡಿ ಮೀರಳ ಹಿಗ್ಗಿಗೆ ಪಾರವಿರಲಿಲ್ಲ.

"ನನ್ನ ಮಗಳು ಪುಣ್ಯವಂತೆ" ಎಂದು ತಾಯಿಯ ಹೃದಯ ತುಂಬಿ ಬಂದಿತ್ತು.

ಶಾಮು, ಕೃಷ್ಣಪ್ಪನವರು ಮಧ್ಯಾಹ್ನ ಮನೆಗೆ ಬಂದಾಗ ಎರಡು ಗಂಟೆಯಾಗಿತ್ತು. ಶಾಮು ತಂದಿದ್ದ ಕರಿಯ ಮರದ ತೊಟ್ಟಿಲನ್ನು ಮೀರ ಮೆಚ್ಚಿ,

"ಪರವಾಗಿಲ್ಲ. ನಿಮ್ಮ ಅಭಿರುಚಿ ತುಂಬಾ ಚೆನ್ನಾಗಿದೆ" ಎಂದಳು.

"ನಿನ್ನ ಆರಿಸಿದಾಗಲೇ ನಿನಗದು ತಿಳಿಯಲಿಲ್ಲವೇ?" ಎಂದು ನಕ್ಕು ಹೇಳಿದ ಶಾಮು. ಮೀರಳು ಹೇಳಿದ ಸಾಮಾನುಗಳಲ್ಲದೆ ಶಾಮು ಜೊತೆಗೆ ಮಗುವಿಗೆ ಎರಡು ಜೊತೆ ಚಿನ್ನದ ಬಳೆ, ಒಂದೆಳೆ ಸರ, ಕಾಲಿಗೆ ಚೈನು ತಂದಿದ್ದ. ಮೀರ ಶಾಮುವಿನ ದುಂದುಗಾರಿಕೆಯನ್ನು ಆಕ್ಷೇಪಿಸಿದಳು:

"ಮನೇಲಿ ನಿಮ್ಮ ತಾಯಿಯ ಒಡವೆಗಳು ಅಷ್ಟೊಂದಿರುವಾಗ, ಚಿನ್ನ ತಗ್ಗಾಗಿರುವ ಈ ಕಾಲದಲ್ಲಿ ಇವುಗಳನ್ನು ಕೊಂಡಿದ್ದು ತಪ್ಪು."

"ಮುಂದಾದರೂ ಅಮ್ಮನ ಒಡವೆಗಳನ್ನು ನಿನ್ನ ಮಗಳೇ ಹಾಕಿಕೊಳ್ಳುತ್ತಾಳೆ."

"ಪೂರ್ವಕಾಲದ ಒಡವೆಗಳು 'ಬೇಡ' ಎಂದುಬಿಟ್ಟರೆ....?"

"ಆಗ ನೋಡಿಕೊಳ್ಳೋಣ. ನಾಳೆ ಹೆಣ್ಣುಮಗು ಕೈಗೆ ಲಕ್ಷಣವಾಗಿ ಬಳೆ,

ಸರ ಬೇಡವೇ?"

ಆ ದಿನ ರಾತ್ರಿ ಮಗುವಿಗೆ ಹೆಸರೇನಿಡಬೇಕೆಂಬ ವಿಚಾರದಲ್ಲಿ ದೊಡ್ಡ ಚರ್ಚೆಯೇ ನಡೆದುಹೋಯಿತು.

ಕಮಲಮ್ಮನವರು "ನಾಳೆ ಮಗೂಗೆ ಏನು ಹೆಸರು ಇಡೋಣ?" ಎಂದರು.

ಕೃಷ್ಣಪ್ಪನವರು ಶಾಮುವಿನ ಕಡೆ ತಿರುಗಿ "ಶಾಮಣ್ಣಾ, ಲಕ್ಷಣವಾದ ಹೆಸರೊಂದನ್ನು ಸೂಚಿಸಪ್ಪಾ" ಎಂದರು.

ಶಾಮು ಮೀರಳ ಮುಖ ನೋಡುತ್ತಾ "ನನಗೇನೋ ನಮ್ಮ ತಾಯಿಯ ಹೆಸರಿಡಲು ಆಸೆ. ಹಿರಿಯರ ಹೆಸರೂ ಆಯಿತು, ದೇವರ ಹೆಸರೂ ಆಯಿತು" ಎಂದ. ಮೀರ ತನ್ನ ಸಲಹೆಯನ್ನು ವಿರೋಧಿಸುವುದರ ಬಗ್ಗೆ ಅವನಿಗೆ ಅನುಮಾನ ವಿರಲಿಲ್ಲ. ಕದನಕ್ಕೆ ಸಿದ್ಧವಾಗಿಯೇ ಅವನು ಕಾಳಗದ ಕಹಳೆ ಊದಿದ. ಮೀರ ಶಾಮುವಿನ ಮಾತು ತನ್ನ ಕಿವಿಯ ಮೇಲೆ ಬೀಳದವಳಂತೆ ನಟಿಸಿ,

"ನಾನೇನೋ ಬೇರೆ ಹೆಸರಿಡೋಣಾಂತ ಮಾಡಿಕೊಂಡಿದೀನಿ" ಎಂದಳು.

ಗೋವಿಂದನ ಹೆಂಡತಿ ಕರುಣಾ ನಾಮಕರಣೋತ್ಸವದಲ್ಲಿ ಭಾಗವಹಿಸುವ ಸಲುವಾಗಿ ಬಂದಿದ್ದವಳು "ಏನು ಹೆಸರು ಹೇಳಿ. ನೀವು ಸಲಹೆ ಮಾಡಿದ ಹೆಸರು ಚೆನ್ನಾಗಿದ್ದೇ ಇರುತ್ತದೆ" ಎಂದಳು.

ಕರುಣಳಿಗೆ ಮೀರಳೆಂದರೆ ತುಂಬಾ ಆತ್ಮೀಯ ಭಾವನೆ. ಮೀರಳ ಮಾತುಗಳೆಲ್ಲ ಹಾಸ್ಯಮಯ, ತೊಡುವ ಉಡಿಗೆಗಳೆಲ್ಲ ಕಲಾಮಯ ಎಂದು ಭಾವಿಸಿ ಮೀರಳನ್ನು ತನ್ನ ಆದರ್ಶ ವ್ಯಕ್ತಿಯನ್ನಾಗಿ ಮಾಡಿಕೊಂಡಿದ್ದಳು.

ಶ್ರೀಪಾದು ದನಿಗೂಡಿಸಿದ: "ಹೇಳು ಮೀರ. ನಾನು ಯಾವ ಹೆಸರು ಹೇಳಿದರೂ ನಾನು ಅದನ್ನೇ ಅನುಮೋದಿಸುತ್ತೇನೆ."

"ನಾನು 'ವೀಣಾ' ಅಂತ ಹೆಸರಿಡಬೇಕೆಂದು ನಿಶ್ಚಯಿಸಿದ್ದೇನೆ."

ಶಾಮು ಹೆಸರು ಕೇಳಿ ಮುಖ ಹುಳ್ಳಗೆ ಮಾಡಿದ.

"ಅಷ್ಟು ಸಿಹಿಯಾದ ಹೆಸರು ನಿಮಗೆ ಹುಳಿಯಾಗಿ ತೋರಿತೇ?"

ಮೀರ ಶಾಮುವನ್ನು ರೇಗಿಸಿದಳು.

ಕೃಷ್ಣಪ್ಪನವರು, ಕಮಲಮ್ಮ ಪೂರ್ವಕಾಲದವರಾದುದರಿಂದ ಮೀರ ಸೂಚಿಸಿದ ಹೆಸರು ಅವರಿಗೆ ರುಚಿಸಲಿಲ್ಲ. ಕೃಷ್ಣಪ್ಪನವರು,

"ಶಾಮಣ್ಣ ಹೇಳಿರುವ ಹೆಸರೇ ಚೆನ್ನಾಗಿದೆ ತಾಯಿ, ಹೆಸರು ಮುದ್ದಾಗಿಯೂ ಇದೆ. ತಾಯಿಯ ನೆನಪಿನಲ್ಲಿಟ್ಟಂತೆಯೂ ಆಗುವುದು" ಎಂದರು.

ಮೀರ ಮಾತನಾಡದೆ ಕೆಳತುಟಿ ಕಚ್ಚಿ ಸುಮ್ಮನಾದಳು. ಉಕ್ಕಿ ಬಂದ ಕೋಪವನ್ನು ಮೀರ ನುಂಗುತ್ತಿರುವುದನ್ನು ನೋಡಿ ಶಾಮುವಿಗೆ ನಗು ಬಂತು.

ಮೀರ ಕೋಪ ನುಂಗಿಕೊಂಡು "ಅದು ಪೂರ್ವಕಾಲದ ಹೆಸರು ಚೆನ್ನಾಗಿಲ್ಲ"

ಎಂದಳು.

ಕಮಲಮ್ಮನವರು "ಪೂರ್ವಕಾಲದ ಹೆಸರಿನಲ್ಲಿರುವ ಲಕ್ಷಣ ಈಗಿನ ಕಾಲದ ಹೆಸರುಗಳಲ್ಲೆಲ್ಲಿಂದ ಬಂತು? ನಿನ್ನ ಹೆಸರು ಹಳೆಯದಾದರೂ ಎಷ್ಟು ಮಧುರವಾಗಿದೆ" ಎಂದರು.

ಕರುಣಾ, ಶ್ರೀಪಾದು ಮೀರಳ ಪರ ವಹಿಸಿ ವಾದಿಸತೊಡಗಿದರು. ಆದರೆ ಹಿರಿಯರ ಹಠದ ಮುಂದೆ ಕಿರಿಯರ ವಾದ ನಿಷ್ಪ್ರಯೋಜಕವಾಯಿತು. ಬೆಳಿಗ್ಗೆ ಆರು ಗಂಟೆಯ ಹೊತ್ತಿಗೆ ಕೃಷ್ಣಪ್ಪನವರ ಮನೆಗೆ ಜೀವಕಳೆ ಬಂದಿತ್ತು. ಬೆಳಗಿನ ಜಾವಕ್ಕೇ ತಾಯಿ, ಮಗುವಿಗೆ ಎರೆದು ಕಮಲಮ್ಮನವರು ಅಡಿಗೆ ಕೆಲಸದಲ್ಲಿ ತೊಡಗಿದರು. ಮೀರ ಪಾದರಿ ಹೂವಿನ ಬಣ್ಣದ ಸೀರೆಯುಟ್ಟು, ಸಡಿಲವಾಗಿ ಗಂಟು ಹಾಕಿಕೊಂಡು, ಹೂ ಮುಡಿದುಕೊಂಡಳು. ಅರಿಶಿನ ಬಳಿದ ಕೆನ್ನೆ ಬಣ್ಣವಾಗಿ ಕಾಣುತ್ತಿತ್ತು. ತನ್ನ ಕಣ್ಣುಗಳಿಗೆ ಕಾಡಿಗೆ ಹಚ್ಚಿಕೊಂಡು, ಕೈಯನ್ನು ಚೆನ್ನಾಗಿ ಒರೆಸಿ ಕೊಂಡು, ಕಪ್ಪು ತೆಗೆದುಕೊಂಡು ಹಾಸಿಗೆ ಮೇಲೆ ನಿರ್ಯೋಚನೆಯಿಂದ ಕೈಕಾಲು ಬಡಿಯುತ್ತ ಮಲಗಿದ್ದ ಮಗುವಿನ ಕಡೆ ನೋಡಿದಳು. ಅದರ ಹತ್ತಿರ ಬಂದು ಬಲವಂತದಿಂದ ಕಣ್ಣು ಬಿಡಿಸಿ ಎರಡು ಕಣ್ಣುಗಳಿಗೂ ಕಪ್ಪು ಬಳಿದಳು. ಮಗು ಕಿಟಾರನೆ ಕಿರುಚಿ ಕೈಕಾಲು ಜೋರಾಗಿ ಒದರುತ್ತ ಅಳಲು ಮೊದಲು ಮಾಡಿತು. ಮೀರಳಿಗೆ ಗಾಬರಿಯಿಂದ ದಿಕ್ಕು ತೋಚದಂತಾಗಿ, ಶಾಮುವಿನ ಬಳಿಗೆ ಓಡಿಬಂದು,

"ಮಗು ತುಂಬಾ ಅಳುತ್ತಿದೆ. ಏನು ಗತಿ?" ಎಂದು ಕೈಕೈ ಹಿಸುಕಿದಳು.

"ಹಸಿವಾಗಿರಬಹುದು."

"ಇಲ್ಲಾಂದ್ರೆ, ಈಗ ತಾನೇ ಹಾಲು ಕುಡಿಸಿ ಮಲಗಿಸಿದ್ದೀನಿ."

"ಕಮಲಮ್ಮನವರಿಗೆ ಹೇಳು. ಎಷ್ಟಾಗಲಿ ಅವರು ಅನುಭವಸ್ಥರು. ಅವರಿಗೂ ಕಾರಣ ಗೊತ್ತಾಗದಿದ್ದರೆ ಡಾಕ್ಟರನ್ನು ಕರೆದುಕೊಂಡು ಬರುತ್ತೇನೆ."

ಮೀರ ಅಡಿಗೆ ಮನೆಗೆ ಬಂದು ಕೆಲಸ ಮಾಡುತ್ತಿದ್ದ ದೊಡ್ಡಮ್ಮನಿಗೆ

"ದೊಡ್ಡಮ್ಮ ಯಾಕೋ ಮಗು ತುಂಬಾ ಅಳುತ್ತಿದೆ. ಬೇಗ ಬನ್ನಿ" ಎಂದಳು.

ಬಾಳೆ ಎಲೆ ಹೆಚ್ಚುತ್ತಿದ್ದ ಕಮಲಮ್ಮ ಎದ್ದು ಬಂದರು.

ಮಗು ಮಂಚದ ಮೇಲೆ ಕಣ್ಣು ಬಿಟ್ಟುಕೊಂಡು ಮಲಗಿತ್ತು. ಅದರ ಕಣ್ಣು ಕೆಂಪಗಾಗಿ, ಕಣ್ಣಿನಿಂದ ನೀರು ಹರಿಯುತ್ತಿತ್ತು. ಅವರು ನಸುನಕ್ಕು,

"ಮೀರಾ, ಎಷ್ಟೊಂದು ಗಾಬರಿ ಮಾಡಿಬಿಟ್ಟೆಯೇ? ಒರಟಾಗಿ ಮಗುವಿಗೆ ಕಪ್ಪು ಹಚ್ಚಬಾರದು. ಅದಕ್ಕೆ ನೋವಾಗಿದೆ" ಎಂದು ಹೇಳಿ ತಮ್ಮ ಕೆಲಸಕ್ಕೆ ಹಿಂದಿರುಗಿದರು.

ಮಕ್ಕಳನ್ನು ನೋಡಿಕೊಳ್ಳುವ ಬಗೆಯನ್ನು ಕುರಿತು ಶಾಮು ಸುಮಾರು ಒಂದು ಗಂಟೆ ಉಪನ್ಯಾಸ ಮಾಡಿ ಅದರ ಮೂಲಕ ಮೀರಳಿಗೆ ಬುದ್ಧಿವಾದ

ಹೇಳಿದ. ಉಳಿದ ಸಮಯದಲ್ಲಿ ತನ್ನನ್ನು ಶಾಮು ಟೀಕಿಸಿದಾಗ ಎದುರುತ್ತರ ಕೊಡುತ್ತಿದ್ದ ಮೀರ ಶಾಮುವಿನ ಬುದ್ಧಿವಾದವನ್ನು ಮೌನವಾಗಿ ಆಲಿಸಿದಳು. ಮೀರಳಿಗೆ ತನ್ನ ತಪ್ಪಿನ ಅರಿವಾಗಿತ್ತು. ದೊಡ್ಡ ಅಪರಾಧ ಮಾಡಿದವಳಂತೆ ಪಶ್ಚಾತ್ತಾಪದಿಂದ 'ಇನ್ನು ಮೇಲೆ ಹಾಗೆ ಮಾಡೋದಿಲ್ಲ" ಎಂದು ಶಾಮುವಿಗೆ ಭರವಸೆಯಿತ್ತಳು.

ಹಸೆಯ ಮಣೆಯ ಮೇಲೆ ಗಂಡ, ಮಗಳೊಡನೆ ಮೀರ ಕುಳಿತುಕೊಳ್ಳುವ ಹೊತ್ತಿಗೆ ನರ್ಮದಾ, ಕಾವೇರಮ್ಮ, ಕಿಶೋರ ಒಳಗೆ ಬಂದರು. ನರ್ಮದಾ ಮೀರಳ ಪಕ್ಕಕ್ಕೆ ಬಂದು ಮಗುವಿನ ಕೆನ್ನೆ ಸವರಿ "ನಿನ್ನ ಮಗು ಚೆನ್ನಾಗಿದೆ" ಎಂದು ಕೇಳಿ ಮಗುವಿಗೆ ತಾನೇ ಹೆಣೆದಿದ ಸ್ವೆಟರನ್ನು ಉಡುಗೊರೆಯಾಗಿ ಕೊಟ್ಟಳು. ಪುರೋಹಿತರು ತಮ್ಮೆಲ್ಲ ಮಂತ್ರಗಳನ್ನೂ ಹೇಳಿ ಮುಗಿಸಿ ಶಾಮುವಿನ ಕಡೆ ತಿರುಗಿ,

"ಮಗುವಿಗೆ ಹೆಸರೇನಿಡುತ್ತೀರಿ ಸ್ವಾಮಿ?" ಎಂದರು.

"ಜಾನಕಿ."

"ಅದನ್ನು ಮಗುವಿನ ಕಿವಿಯಲ್ಲಿ ಹೇಳಿಬಿಡಿ."

ಶಾಮು ಮೀರಳ ತೊಡೆಯ ಮೇಲೆ ಕಣ್ಮುಚ್ಚಿ ಶಾಂತವಾಗಿ ಮಲಗಿದ್ದ ಮಗುವಿನ ಕಿವಿಯಲ್ಲಿ 'ಜಾನಕಿ' ಎಂದು ಪಿಸುಗುಟ್ಟಿದ. ಬಗ್ಗಿದ ತನ್ನ ತಲೆಯನ್ನು ತರಿದುಬಿಡುವಷ್ಟು ಕೋಪದಿಂದ ಮೀರ ತನ್ನನ್ನೇ ನೋಡುತ್ತಿರುವ ಅರಿವು ಶಾಮುವಿಗಾದುದರಿಂದಲೇ ತನ್ನ ಎಡ ಹುಬ್ಬನ್ನು ಕೊಂಚ ಮೇಲಕ್ಕೆತ್ತಿ ತುಟಿ ಸೊಟ್ಟಮಾಡಿ ಮೀರಳನ್ನು ಕೆಣಕಲು ಶಾಮು ವ್ಯಂಗ್ಯವಾಗಿ ನಕ್ಕ.

ಕಮಲಮ್ಮನವರು, ಕರುಣಾ ಆರತಿ ಎತ್ತಿದೊಡನೆ ಮೀರ ಕೋಪದ ಭರದಲ್ಲಿ ತನ್ನ ತೊಡೆಯ ಮೇಲೆ ಮಗು ಮಲಗಿರುವುದನ್ನು ಮರೆತು ಏಳುವ ಪ್ರಯತ್ನದಲ್ಲಿರುವುದನ್ನು ಗಮನಿಸಿದ ಶಾಮು "ಮಗು ಮಗು" ಎಂದು ಎಚ್ಚರಿಸಿದ. ಮೀರಾ ಮಗುವನ್ನು ಎತ್ತಿಕೊಂಡು ರೂಮಿಗೆ ಹೋದಳು.

ರಾಜು, ಚಂಪಾ, ನರ್ಮದಾ ಮೂವರೂ ಅವಳ ಹಿಂದೆಯೇ ರೂಮಿಗೆ ನುಗ್ಗಿದರು.

"ಕಂಗ್ರಾಟ್ಸ್ ಮೀರಾ. ತಾಯಿಯಾಗಿಬಿಟ್ಟೆ. ಆದರೆ ನಮ್ಮನ್ನು ಮರೆಯಬೇಡ" ಚಂಪಾ ಹೇಳಿದಳು.

ಮೀರಾ ಬಾಯಿಯ ಮೇಲೆ ಬೆರಳಿಟ್ಟು "ಶ್.... ಮಗು ಮಲಗಿದೆ. ಗಟ್ಟಿಯಾಗಿ ಮಾತನಾಡಬೇಡಿ. ಹೊರಗೆ ಹೋಗೋಣ ಬನ್ನಿ" ಎಂದಳು.

ಹಾಲಿನಲ್ಲಿ ಚಾಪೆ ಹಾಕಿಕೊಂಡು ಎಲ್ಲರೂ ಹರಟೆಗೆ ಮೊದಲು ಮಾಡಿದರು.

"ಮೀರಾ ಒಂದು ಶುಭ ಸಮಾಚಾರ ಹೇಳ್ತೀನಿ. ಚಂಪಾ ಇನ್ನು ಮೇಲೆ ನಮ್ಮ ಕ್ಲಬ್ಬು ಬಿಟ್ಟು ನಿನ್ನ ಕ್ಲಬ್ಬಿಗೇ ಸೇರುತ್ತಾಳೆ" ಎಂದಳು ನರ್ಮದಾ.

"ಅಭಿನಂದನೆಗಳು ಚಂಪಾ. ಯಾವಾಗ ನಮ್ಮ ಕ್ಲಬ್ಬಿಗೆ ಸದಸ್ಯಳಾಗು ತ್ತೀಯೇ?"

ಚಂಪಾ ನಸುನಾಚಿ "ಸರಿಯಾಗಿ ಗೊತ್ತಿಲ್ಲವೇ" ಎಂದಳು.

ರಾಜು ಸೇಡು ತೀರಿಸಿಕೊಳ್ಳುವಂತೆ "ಮೀರಾ, ಚಂಪಾಳ ಅರ್ಧಾಂಗನ್ನ ನೀನು ನೋಡಬೇಕು.... ಇದುವರೆಗೂ ನನ್ನ ಹಾಸ್ಯ ಮಾಡುತ್ತಿದ್ದ ಹಾಗಲ್ಲ. ನಡೆಯು ತ್ತಿದ್ದರೆ ಒಂದು ಪುಟ್ಟ ಗುಡ್ಡ ಬರುತ್ತಿದ್ದಂತೆ ಭಾಸವಾಗುತ್ತದೆ. ನಾನು ಗಾಳಿ ತುಂಬಿದ ಬೆಲೂನಾದರೆ ಆತ ಗಾಳಿ ತುಂಬಿದ ಗೋಣಿಚೀಲ" ಎಂದಳು.

ಚಂಪಾಳ ಮುಖ ಆರಕ್ತವಾಯಿತು.

"ರಾಜೂ ದಮ್ಮಯ್ಯಾಂತೀನಿ...."

"ಏನು ಹೇಳಿದರೂ ಇಲ್ಲ. ಇಷ್ಟು ದಿನದ ಸಾಲ ಬಡ್ಡಿ ಸಮೇತ ತೀರಿಸಿ ಬಿಡಬೇಕು. ಈಗ ನನ್ನ ಕಾಲ ಚಂಪಾ."

ಮೀರ ನಸುನಗೆಯಿಂದ "ಯಾಕೆ ಚಂಪಾ, ಕೊಬ್ಬಿದ ಮನುಷ್ಯರೆಂದರೆ ಹಾಸ್ಯಾಸ್ಪದ ವಸ್ತುಗಳು ಅಂತ ಹೇಳುತ್ತಿದ್ದೆಯಲ್ಲಾ ಈಗ....

"ಪಾಪ! ಈಗೇನು ಮಾಡ್ತಾಳೆ. ಭಾನುವಾರ ಆತ ಬೆಂಗಳೂರಿಂದ ಇಲ್ಲಿಗೆ ಬರದಿದ್ದರೆ ಚಂಪಾ ತಪಸ್ಸಿಗಾರಂಭಿಸುತ್ತಾಳೆ."

"ಓಹೋ ಅದು ಬೇರೆ ಏನು? ಚಂಪಾ ನನಗೊಂದೂ ಗೊತ್ತೇ ಇಲ್ಲ."

"ಅವಳಿಗೆ ಆತ ದೂರದ ಸಂಬಂಧಿ ಬೇರೆ" ನರ್ಮದಾ ಸೇರಿಸಿದಳು.

"ಯಾವಾಗಲೂ ನನ್ನ 'ರಾಜು, ನಾನು ನಿನ್ನ ನೋಡಲಾರೆನಲ್ಲೇ. ತರಗತಿಯ ಹೊರಗೆ, ಒಳಗೆ ನಮ್ಮ ಕಣ್ಣಿಗಾಗುವ ಯಾತನೆ ಬಣ್ಣಿಸಲಾರೆ. ಭಾಗ ಭಾಗವಾಗಿ ನೋಡಬೇಕು, ಅನ್ನುತ್ತಿದ್ದೆಯಲ್ಲಾ ಈಗ?" ಎಂದಳು ರಾಜು.

ಹೊರಗೆಲ್ಲೋ ಆಡುತ್ತಿದ್ದ ಕಿಶೋರ ಓಡಿ ಹಿಂದಿನಿಂದ ಬಂದು ನರ್ಮದಾಳ ಕೊರಳನ್ನಪ್ಪಿಕೊಂಡು 'ಚಿಕ್ಕಮ್ಮಾ' ಎಂದು ಮುದ್ದುಗರೆದ.

"ಬಿಡೋ! ಬಿಡಮ್ಮಾ ಬಂಗಾರೀ" ಎನ್ನುತ್ತಾ ನರ್ಮದಾ ಅವನ ಕೈಬಿಡಿಸಿ "ನಿನಗೊಂದು ಪುಟ್ಟ ಹೆಂಡತಿ ಬೇಕಾ?" ಎಂದಳು.

"ಊಹ್ಞೂ. ನನಗೆ ಬೇಡಾ" ಎನ್ನುತ್ತ ಕಿಶೋರ ಹೊರಗೋಡಿದ. ಗೆಳತಿ ಯರು ಪುನಃ ಹರಟೆಯಲ್ಲಿ ಮಗ್ನರಾದರು. ಮೀರ ಕಿವಿಗೊಟ್ಟು ಆಲಿಸಿ, "ತಾಳಿ, ಮಗು ಅಳುತ್ತಿರುವ ಹಾಗಿದೆ" ಎಂದಳು. ಎಲ್ಲರೂ ಮಾತು ನಿಲ್ಲಿಸಿದರು.

ಗೆಳತಿಯರೊಡನೆ ಮೈಮರೆತು ಹರಟೆ ಹೊಡೆಯುತ್ತಿದ್ದರೂ ಮೀರಳ ಮನಸ್ಸು ಕಂದನ ಕರೆಗೆ 'ಓ'ಗೊಟ್ಟಿತು.

ಸಂಜೆ ಮಗುವಿಗೆ ಅಚ್ಚನೀಲಿ ಬಣ್ಣದ ಲಂಗ ಹಾಕಿ, ಸರ, ಬಳೆ, ಚೈನು ಹಾಕಿದಳು. ಹಣೆಯ ಮೇಲೆ ಕಪ್ಪಿನ ತಿಲಕ ತೆಗೆದು ಮಂಚದ ಮೇಲೆ ಮಲಗಿಸಿ

ತಾನೂ ಅಲಂಕರಿಸಿಕೊಳ್ಳತೊಡಗಿದಳು. ಹಸಿರು ಮೈಸೂರು ಕ್ರೇಪ್ ಸೀರೆಯುಟ್ಟು ತಿಳಿಹಳದಿ ರವಿಕೆ ತೊಟ್ಟು, ಶಾಮು ಹೊಸದಾಗಿ ಮಾಡಿಸಿದ್ದ ಮುತ್ತು ಕೆಂಪಿನ ಬಳೆ ಹಾಕಿಕೊಂಡಳು.

ಮಗುವಿನ ಅಲಂಕಾರವನ್ನು ನೋಡಲು ಬಂದ ಶಾಮು ಹೆಂಡತಿ, ಮಗಳನ್ನು ನೋಡಿ ಸ್ತಬ್ಧವಾಗಿ ನಿಂತ.

ಮೀರ "ಯಾಕೆ ಸುಮ್ಮನೆ ನಿಂತುಬಿಟ್ಟಿರಿ?" ಎಂದಳು.

"ಇಬ್ಬರಲ್ಲಿ ಯಾರನ್ನು ಹೆಚ್ಚು ಹೊತ್ತು ನೋಡಲಿ ಎಂಬ ಸಮಸ್ಯೆ ಬಂದಿದೆ."

"ವೀಣಾ ನನಗಿಂತ ಹೆಚ್ಚು ಮುದ್ದಾಗಿದ್ದಾಳೆ. ಅವಳನ್ನೇ ತುಂಬಾ ಹೊತ್ತು ನೋಡಿ."

"ವೀಣಾ ಅಲ್ಲ ಜಾನಿ.... ಜಾನಿ" ಶಾಮು ಒತ್ತಿ ಹೇಳಿದ.

"ಜಾನಿ ಅಲ್ಲ, ವೀಣಾ."

"ನಿನಗೆ ಹೇಗೆ ಚೆನ್ನವೋ ಹಾಗೆ ನೀನು ಕರಿ. ನನಗಿಷ್ಟ ಬಂದ ಹಾಗೆ ನಾನು ಕೂಗುತ್ತೇನೆ."

"ವೀಣಾ ದೊಡ್ಡವಳಾದ ಮೇಲೆ ಜಾನಿ ಅನ್ನುವ ಹೆಸರು ಚೆನ್ನಾಗಿಲ್ಲ. ವೀಣಾನೇ ಇರಲಿ ಎಂದರೆ ಆಗೇನು ಮಾಡುತ್ತೀರಿ?"

"ಆಗ ಅವಳಿಷ್ಟದಂತೆಯೇ ಕರೆಯುತ್ತೇನೆ. ಜಾನಿ, ಜಾನೀ...."

"ವೀಣಾ...."

ಮಗು ಅಗಲವಾಗಿ ಕಣ್ಣುತೆಗೆದು ಮರುಳು ನಗೆ ಬೀರಿತು. ಮೀರ ಹಂಗಿಸುವಂತೆ "ನೋಡಿದಿರಾ, ಅವಳಿಗೆ ವೀಣಾ ಅನ್ನುವ ಹೆಸರೇ ಹೆಚ್ಚು ಪ್ರಿಯವಾಗಿದೆ" ಎಂದಳು.

"ಈಗಿಂದ ಯಾಕೆ ಚರ್ಚೆ?" ಎನ್ನುತ್ತ ಶಾಮು ಮಗುವಿನ ಕೆನ್ನೆಗೆ ಮುತ್ತಿಟ್ಟ.

ಮೀರ ಬೇರೆ ಕಡೆ ತಿರುಗಿ "ಥೂ, ಹೋಗ್ರಿ. ನೀವು ಚೌರ ಮಾಡಿಕೊಳ್ಳದೇ ಮಗುವಿಗೆ ಮುದ್ದಿಡಬೇಡಿ. ಮಗುವಿನ ಕೆನ್ನೆ ಉರಿಯುತ್ತದೆ" ಎಂದಳು.

'ನೋವಾಯಿತೇ ಚಿನ್ನ" ಎಂದು ಶಾಮು ಮಗುವಿಗೆ ಕೆನ್ನೆ ಸವರಿದ.

ಶಾಮು ಹಳ್ಳಿಗೆ ಹೋಗಬೇಕಾಗಿತ್ತು. ಅವನ ಜೀವನದಲ್ಲಿ ಹಳ್ಳಿಗೆ ಹೋಗುವುದು ಮೊದಲನೆಯ ಸಲಕ್ಕೆ ಬೇಸರವಾಯಿತು. ಮೀರಳನ್ನಗಲಿ ಹಳ್ಳಿಯಲ್ಲಿದ್ದಾಗ ಸಹ ಮೈಸೂರಿನಲ್ಲಿ ಎರಡು ದಿನ ಹೆಚ್ಚಿಗೆ ಇರುವುದೆಂದರೆ ಶಾಮುವಿಗೆ ತಲೆನೋವು ಬರುತ್ತಿತ್ತು. ಜಗತ್ತನ್ನು ಪ್ರವೇಶಿಸಿ ಇನ್ನೂ ಒಂದು ತಿಂಗಳಾಗದ ಆ ಪುಟ್ಟಜೀವಿ ಶಾಮುವಿನ ಮನಸ್ಸನ್ನು ಸೆರೆ ಹಿಡಿದಿತ್ತು. ಹಳ್ಳಿಗೆ ಹೊರಡುವುದಕ್ಕೆ ಮುಂಚೆ ಮುಖ ಕ್ಷೌರ ಮಾಡಿಕೊಂಡು ಮಗುವನ್ನು ಮುದ್ದಿಸಿ ಮೀರಳಿಗೆ ಮಗುವನ್ನು ಜೋಪಾನ

ವಾಗಿ ನೋಡಿಕೊಳ್ಳಲು ಹೇಳಿ, ಮನಸ್ಸಿಲ್ಲದ ಮನಸ್ಸಿನಿಂದ ಹಳ್ಳಿಗೆ ಹೋದ. ಪ್ರತಿ ವಾರವೂ ಬಂದು ಮಗಳನ್ನು ನೋಡಿಕೊಂಡು ಹೋಗುತ್ತಿದ್ದ.

ಮಗುವಿಗೆ ನಾಲ್ಕು ತಿಂಗಳಾಗುವುದೇ ತಡ ಕೃಷ್ಣಪ್ಪನವರೊಡನೆ ಹೆಂಡತಿ ಮಗುವನ್ನು ಹಳ್ಳಿಗೆ ಕರೆದುಕೊಂಡು ಹೋಗುವುದಾಗಿ ತಿಳಿಸಿದ. ಕೃಷ್ಣಪ್ಪನವರು ಒಂದು ಶುಭದಿನವನ್ನು ಗೊತ್ತುಮಾಡಿದರು. ಎರಡು ದಿನ ಮುಂಚಿತವಾಗಿ ಶಾಮು ಮೈಸೂರಿಗೆ ಬಂದ.

ಊರಿಗೆ ಹೊರಡುವ ಹಿಂದಿನ ದಿನ ಮೀರ ಮಗುವನ್ನು ಕಮಲಮ್ಮನವರ ವಶಕ್ಕೊಪ್ಪಿಸಿ 'ಷಾಪಿಂಗ್'ಗೆ ಹೊರಟಳು. ಮೀರ ಕಮಲಮ್ಮನವರಿಗೆ ನವಿಲು ಬಣ್ಣದ ಧರ್ಮಾವರದ ಸೀರೆಯನ್ನು ಉಡುಗೊರೆಯಾಗಿ ಕೊಡಲು ತೆಗೆದು ಕೊಂಡಳು. ಮೀರ ತನ್ನ ವ್ಯಾಪಾರವೆಲ್ಲವನ್ನೂ ಮುಗಿಸಿದ ನಂತರ ಶಾಮು ಹೇಳಿದ,

"ಎಲ್ಲಾ ಮುಗಿಯಿತಲ್ಲವೇ?"

"ಇನ್ನೂ ಇಲ್ಲ. ಮಗುವಿಗೆ ಒಂದು ಗಾಡಿ ತೆಗೆದುಕೊಳ್ಳಬೇಕಾಗಿದೆ."

"ಗಾಡಿ! ಎತ್ತಿನ ಗಾಡಿಯಲ್ಲವಷ್ಟೇ?"

"ನೀವು ಕುಚೇಷ್ಟೆ ತೆಗೆಯಬೇಡಿ. ಒಂದು 'ಪ್ರಾಮ್' ತೆಗೆದುಕೊಳ್ಳಲು ಬೇಕು. ಹಳ್ಳಿಯಲ್ಲಿ ಮಗುವನ್ನು ವಾಕಿಂಗಿಗೆ ಕರೆದುಕೊಂಡು ಹೋಗಲು ಚೆನ್ನಾಗಿರುತ್ತದೆ."

ಇಬ್ಬರೂ ಅರ್ಧ ಗಂಟೆ ಪರೀಕ್ಷಿಸಿ ಸುಂದರವಾದ ಕೈಗಾಡಿಯೊಂದನ್ನು ಖರೀದಿ ಮಾಡಿದರು. ಶಾಮು ೨೫೦ ರೂಪಾಯಿಗಳನ್ನು ಕೊಟ್ಟು ರಸೀತಿ ಪಡೆದು,

'ನಾಳೆ ದಿನ ಬಂದು ತೆಗೆದುಕೊಂಡು ಹೋಗುತ್ತೇನೆ. ಈಗ ಇಲ್ಲೇ ಇರಲಿ" ಎಂದ. ಮಗುವಿಗೆ ಒಂದು ಹೊಸ ಆಟದ ಸಾಮಾನು, ರೆಡಿಮೇಡ್ ಅಂಗಿಗಳು ಕೊಂಡನಂತರ ಮೀರಳ ವ್ಯಾಪಾರ ಮುಗಿಯಿತು.

"ನಿನಗೇನೂ ಬೇಡವೇ ಮೀರಾ?"

"ನನಗೇನೂ ಬೇಡ. ನಿಮಗೆ ನನಗೇನಾದರೂ ಕೊಡಬೇಕೆನಿಸಿದರೆ, ನನ್ನ ಬದಲು ವೀಣಾಗೆ ತೆಗೆದುಕೊಡಿ."

"ಜಾನಿಗೆ ಈಗ ತಂದಿರುವುದು ಸಾಲದೇ?"

"ಈ ಅಂಗಡಿಗಳನ್ನೇ ಅವಳಿಗೆ ತೆಗೆದುಕೊಟ್ಟರೂ ನನಗೆ ತೃಪ್ತಿಯಿಲ್ಲ.

"ಹುಚ್ಚಿ ನೀನು."

ಸಾಮಾನುಗಳನ್ನೆಲ್ಲಾ ಕೃಷ್ಣಪ್ಪನವರು ಪ್ಯಾಕ್ ಮಾಡಿಸಿ ಟ್ರೈನಿಗೆ ಹಾಕಿಸಿ, ತಾವೂ ಟ್ರೈನಿನಲ್ಲಿ ಬರುವುದಾಗಿ ತಿಳಿಸಿದರು.

ಔತಣದೂಟವಾದ ನಂತರ ಶಾಮು ಟ್ಯಾಕ್ಸಿ ಗೊತ್ತು ಮಾಡಿಕೊಂಡು ಬಂದ. ಮೀರ ದೇವರಿಗೂ, ಹಿರಿಯರಿಗೂ ನಮಸ್ಕಾರ ಮಾಡಿದಳು. ವೀಣಾಳ ಪುಟ್ಟ ತಲೆಯನ್ನು ದೊಡ್ಡಪ್ಪನ ಕಾಲಿಗೆ ತಗುಲಿಸಿ,

"ಚೆನ್ನಾಗಿ ಆಶೀರ್ವಾದ ಮಾಡಿ ದೊಡ್ಡಪ್ಪಾ ನನ್ನ ಮಗೂಗೆ" ಎಂದಳು.

"ನಿನಗಿರುವ ಇದೊಂದು ಕುಡಿಯಲ್ಲಿ ಸಾವಿರ ಹೂವುಗಳು ಅರಳಲಿ" ಎಂದು ಕೃಷ್ಣಪ್ಪನವರು ಆಶೀರ್ವದಿಸಿದರು.

ಕೃಷ್ಣಪ್ಪನವರನ್ನು ಸ್ಟೇಷನ್ ಬಳಿ ಇಳಿಸಿ ಟ್ಯಾಕ್ಸಿ ಹಳ್ಳಿಗಭಿಮುಖವಾಗಿ ಹೊರಟಿತು.

ನಾಲ್ಕು ತಿಂಗಳಲ್ಲಿ ವೀಣಾ ತುಂಬಾ ಮುದ್ದಾಗಿ ಬೆಳೆದಿದ್ದಳು. ಮೀರಳ ಗುಂಗುರು ಕೂದಲು ಮಗುವಿಗೆ ಸುಂದರ ಆಭರಣ ಬಳುವಳಿ ಬಂದಂತೆ ಬಂದಿತ್ತು. ತಲೆ ತುಂಬಾ ಕಪ್ಪುಟೋಪಿ ಹಾಕಿದಂತೆ, ನಸುಗೆಂಪಾದ ಮುಖದ ಸುತ್ತ ಹರಡಿ ಕೊಂಡಿತ್ತು. ದೊಡ್ಡದಾದ ಬೆದರುಗಣ್ಣುಗಳಲ್ಲಿ ವೀಣಾ ಆಗಾಗ್ಗೆ ತುಂಟತನವನ್ನು ಚಿಮ್ಮಿಸುತ್ತಿದ್ದಳು. ದುಂಡಾದ ಕೈಕಾಲುಗಳು ನೋಡಿದವರ ಮನಸ್ಸು ಸೆಳೆಯು ತ್ತಿದ್ದವು. ಶಾಮು ತಂದಿದ್ದ ಚಿನ್ನದ ಬಳೆ ಎರಡೇ ತಿಂಗಳಿಗೆ ಮಗುವಿನ ಕೈಗೆ ಬಿಗಿ ಯಾದುದರಿಂದ ಅದನ್ನು ಕತ್ತರಿಸಿ ಹಾಕಿದರು. ತಿಳಿಯಾದ ಮೈಬಣ್ಣ, ಸುಳಿಗಲ್ಲ, ದುಂಡುಗೆನ್ನೆಯ ಮೇಲಿನ ಗುಳಿ ಅಪರಿಚಿತರಲ್ಲಿ ಸಹ ಮಿದುಭಾವವನ್ನು ಮೂಡಿಸು ತ್ತಿದ್ದವು. ನಾಲ್ಕು ತಿಂಗಳಿನ ಮಗು ಬೆಳವಣಿಗೆಯಲ್ಲಿ ವರ್ಷದ ಮಗುವಿನ ಹಾಗಿತ್ತು.

ಮೀರ ಟ್ಯಾಕ್ಸಿಯಲ್ಲಿ ಕುಳಿತು ಶಾಲನ್ನು ಮುಸುಕು ಹಾಕಿದಳು. ವೀಣಾ ಮಿಸುಕಾಡಿ ಶಾಲಿನಿಂದೀಚೆ ತಲೆಹಾಕಿ ತಾಯಿಯ ಮುಖ ನೋಡಿ ನಕ್ಕಳು. ಮೀರಾ ಅಕ್ಕರೆಯಿಂದ,

"ನನ್ನ ಕೈಲಾಗೋದಿಲ್ಲ ನಿಮ್ಮ ಮಗಳನ್ನು ನೋಡಿಕೊಳ್ಳೋಕೆ. ಅಸಾಧ್ಯ ತುಂಟತನ ಮಾಡ್ತಾಳೆ" ಎಂದಳು. ಶಾಮು ಕೈ ನೀಡಿ,

"ಬಾ, ಜಾನಿ. ನಾನು ಎತ್ತಿಕೊಳ್ಳುತ್ತೇನೆ" ಎಂದು ತನ್ನ ಹತ್ತಿರ ಕರೆದುಕೊಂಡು ಶಾಲನ್ನು ಮೈಗೆಲ್ಲಾ ಹೊದಿಸಿ ಮುಖ ಮಾತ್ರ ಹೊರಗಿರುವಂತೆ ಮಾಡಿದ. ವೀಣಾ ಓಡುತ್ತಿದ್ದ ಗಿಡ, ಮರಗಳನ್ನು ಆತ್ಯಾಶ್ಚರ್ಯದಿಂದ ನೋಡುತ್ತ ಕ್ರಮೇಣ ತಂದೆ ಯನ್ನೊರಗಿ ನಿದ್ದೆ ಮಾಡಿದಳು.

ವೀಣಾಗೆ ಎಚ್ಚರವಾಗುವ ಹೊತ್ತಿಗೆ ಟ್ಯಾಕ್ಸಿ ಆಗ ತಾನೆ ಹಳ್ಳಿಯನ್ನು ಪ್ರವೇ ಶಿಸಿತ್ತು. ಟ್ಯಾಕ್ಸಿ ಮನೆಯ ಮುಂದೆ ನಿಂತಾಗ ವೀಣಾ ಅಲ್ಲಿ ನಿಂತಿದ್ದ ಜನರನ್ನು ಗಾಬರಿಯಿಂದ ನೋಡುತ್ತಿದ್ದಳು.

ವೆಂಕಮ್ಮನವರು ಮನೆಯನ್ನೆಲ್ಲಾ ಬೋರನ ಕೈಲಿ ತೊಳೆಸಿ, ರಂಗೋಲಿ ಹಾಕಿ ಮುಂಬಾಗಿಲಿಗೆ ತೋರಣ ಕಟ್ಟಿಸಿದ್ದರು. ಶಾಮುವಿನ ರೈತರುಗಳು, ಹೆಂಡಿರು ಮಕ್ಕಳು 'ಶಾಮಪ್ನೋರ' ರಾಜಕುಮಾರಿಯನ್ನು ನೋಡಲು ಮನೆಯ ಮುಂದೆ ಗುಂಪಾಗಿ ನಿಂತಿದ್ದರು.

ಡ್ರೈವರು ಟ್ಯಾಕ್ಸಿ ನಿಲ್ಲಿಸಿದೊಡನೆ ಹಳ್ಳಿಯ ಮಕ್ಕಳು ಹೊಳೆಯುವ ಕಾರು ನೋಡುವ ಕುತೂಹಲದಿಂದ ಕಾರಿನ ಸುತ್ತ ಬಂದು ನಿಂತರು. ಶಾಮು ಕಾರಿನಿಂದಿಳಿದು ವೀಣಾಳನ್ನು ಎತ್ತಿಕೊಂಡ. ಅರ್ಥವಿಲ್ಲದ ಶಬ್ದಗಳನ್ನು ಮಾಡುತ್ತಾ ವೀಣಾ ತನ್ನ ಸಂತೋಷ ವ್ಯಕ್ತಪಡಿಸಿ, ಶಾಮುವಿನ ಭುಜವನ್ನು ಬಿಗಿಯಾಗಿ ಹಿಡಿದು ಕೊಂಡಳು.

ವೀಣಾಳ ಗುಲಾಬಿ ಮೈಬಣ್ಣಕ್ಕೂ, ಬೆದರುಗಣ್ಣಿಗೂ ಮೋಹಗೊಂಡ ಮುದುಕಿ ನಂಜವ್ವ ವೀಣಾಳ ಕೆನ್ನೆಯನ್ನು ತನ್ನ ಬೆರಳುಗಳಿಂದ ಸವರಿ ಕೈಯನ್ನು ತಲೆಯ ಮೇಲಿಟ್ಟು ಲಟಕ್ಕನೆ ನೆಟಿಕೆ ಮುರಿದಳು. ಶಾಮು ವೀಣಾಳನ್ನೆತ್ತಿಕೊಂಡು ಒಳಗೆ ಹೋಗುತ್ತಾ "ಮೀರಾ ಅವರಿಗೆಲ್ಲಾ ತಿಂಡಿ ಕೊಟ್ಟು ಕಳಿಸು" ಎಂದ.

ಮೀರ ಮೈಸೂರಿನಿಂದ ತಂದಿದ್ದ ಬುಟ್ಟಿಯನ್ನು ಬಿಚ್ಚಿ ರವೆ ಉಂಡೆ, ಚಕ್ಕುಲಿಯನ್ನು ಅಲ್ಲಿದ್ದ ಹುಡುಗರಿಗೆ ಹಂಚಿ, ದೊಡ್ಡವರಿಗೆ ಕೊಬ್ಬರಿ ಸಕ್ಕರೆ ಕೊಟ್ಟಳು. ಹೆಂಗಸರು ಮಾತನಾಡುತ್ತಾ ಹೊರಟರು.

"ಮಾದವ್ವಾ, ಮಗಾ ಚಿನ್ನದ ಗೊಂಬೆ ಹಂಗೈತೆ."

"ಚಿನ್ನದ ಗೊಂಬೆ ಹಂಗಿಲ್ಲದೆ ಇನ್ನೆಂಗಿದ್ದಾತು ನಂಜವ್ವ? ಗಂಡ, ಯೆಡ್ತಿ ಲಕ್ಷ್ಮೀನಾರಾಯಣರಂಗವ್ರೆ. ಮಗ ಚೆಂದಾಗಿಲ್ಲದೇ ಇದ್ದಾತಾ? ಶಾಮಪ್ನೋರ ತಂದೆಯೋರಿಗೆ ಇವರೊಬ್ಬರೇ ಮಗಾ. ಇವರಿಗೆ ಈಗೊಂದು ಮಗ ಆಗೈತೆ. ಅಂಗೈಲಿ ಮುಚ್ಚಿಕೊಂಡು ಸಾಕ್ತಾರೆ."

"ಅದಕ್ಕೇನು ಅಕ್ಕರೆ ಮಾಡೋರು ಕಡಿಮೆಯಾ ಹಾಲು, ತುಪ್ಪ ಕಡಿಮೆಯಾ? ಆಕಿದ್ದ ಬಟ್ಟೆ ನೋಡಿದ್ಯಾ ಫಳಫಳ ಅಂತ ರತ್ನ ಒಳೆದ್ಹಂಗೆ ಒಳೀತಿತ್ತು. ಅದ್ಕೆ ಏನಿಲ್ಲಾಂದ್ರೂ ನೂರು ರೂಪಾಯಿ ಆಗಿರಬೇಕು."

"ಮಗೀಗೆ ಕಿವೀಗೆ ಹಾಕಿದ್ರಲ್ಲಾ ಕಮಲದ ಹೂವಿನ ಮಾದರಿ ಲೋಲಾಕು ಎಷ್ಟು ವೈನಾಗಿತ್ತು. ಮಗ ಮುಖ ತಿರುಗಿಸಿದರೆ ತಳಕ್, ಫಳಕ್ ಅಂತ ಒಳೆದು ಕಣ್ಣು ಕೋರಯಿಸೋಗೋದು."

ಇವರ ಮಾತುಗಳನ್ನು ಮೌನವಾಗಿ ಆಲಿಸುತ್ತಿದ್ದ ತಿಮ್ಮಮ್ಮ ನಿಟ್ಟುಸಿರು ಬಿಟ್ಟು "ಪುಣ್ಯವಂತರ ಮನೇಲಿ ಮಕ್ಕಳುಟ್ಟಿದರೇನೇ ಚೆನ್ನ. ಬಡವರಿಗೆ ಮಕ್ಕಳಾಗ ಬಾರದು" ಎಂದಳು.

ಶಾಮು ಮಗುವನ್ನೆತ್ತಿಕೊಂಡು ಮನೆಯೊಳಗೆ ಹೋಗುತ್ತಲೇ ವೆಂಕಮ್ಮನವರು ಮಗುವಿಗೆ ದೃಷ್ಟಿ ತೆಗೆದು ತೆಂಗಿನಕಾಯಿ ಒಡೆದು ಆರತಿ ಮಾಡಿದರು. ಜೋಯಿಸರ ಮಗಳು ವೆಂಕೂ ಶಾಮುವಿನ ಬಳಿಗೆ ಓಡಿಬಂದು ಕೈ ನೀಡಿ "ಶಾಮಣ್ಣ, ಮಗು ಕೊಡಿ" ಎಂದಳು.

ಮಗು ಹೊಸ ಮುಖ ನೋಡಿ ಹಿಂಜರಿದರೂ ವೆಂಕೂ ಬಲವಂತದಿಂದ

ಎತ್ತಿಕೊಂಡು ಮಗುವಿನ ಬಾಯಿಯ ಮೇಲೆ ಮುತ್ತಿಟ್ಟಳು. ಮೀರ ಕೊಂಚ ತೀಕ್ಷ್ಣವಾದ ದನಿಯಲ್ಲಿ "ಇನ್ನು ಮೇಲೆ ಮಗುವಿನ ಬಾಯಿಗೆ ಮುತ್ತಿಡಬೇಡ" ಎನ್ನುತ್ತ ಎದ್ದುಬಂದು ಬಾಯನ್ನು ಕರ್ಚೀಫಿನಿಂದ ಒರೆಸಿದಳು. ವೆಂಕೂ ಅಪ್ರತಿಭಳಾಗಿ ಶಾಮುವಿನ ಕಡೆ ನೋಡಿದಳು. ಸಾಮು ವೆಂಕುವಿನ ಸರಳಪ್ರೇಮವನ್ನರಿತಿದ್ದರೂ ಮಗುವಿನ ಹಿತದೃಷ್ಟಿಯಿಂದ "ಹೌದು ವೆಂಕೂ, ಮೀರ ಹೇಳುವುದು ಸರಿ. ಹಾಗೆ ಮಾಡುವುದು ಮಗುವಿನ ಆರೋಗ್ಯಕ್ಕೆ ಒಳ್ಳೆಯದಲ್ಲ" ಎಂದ.

ವೆಂಕು ಕ್ಷಮಾಯಾಚನೆಯ ದನಿಯಲ್ಲಿ "ಅದು ನನಗೆ ಗೊತ್ತಿರಲಿಲ್ಲ ಶಾಮಣ್ಣ. ಇನ್ನು ಮೇಲೆ ಹಾಗೆ ಮಾಡುವುದಿಲ್ಲ. ಮಗೂಗೆ ಏನು ಹೆಸರು ಇಟ್ಟಿದೀರಿ" ಎಂದಳು.

"ನಾನು ಜಾನಕಿ ಅಂತ ಹೆಸರಿಟ್ಟಿದ್ದೀನಿ. ಮುದ್ದಿಗೆ 'ಜಾನಿ' ಎನ್ನುತ್ತೇನೆ."

"ಅವರಿಟ್ಟಿರುವ ಹೆಸರನ್ನು ನಾನು ಒಪ್ಪಿಲ್ಲ ವೆಂಕೂ. ನಾನು ವೀಣಾ ಅಂತ ಕೂಗುತ್ತೇನೆ."

ವೆಂಕು ಆಶ್ಚರ್ಯದಿಂದ ಬೆರಗಾಗಿ "ಆಂ!" ಎಂದಳು.

"ವೀಣಾ."

"ವೀಣೆಯೇ? ಪಟದಲ್ಲಿರುವ ಸರಸ್ವತೀ ಕೈಲಿರುತ್ತದಲ್ಲಾ ಅದಲ್ಲವೇ? ನನಗೇನೋ 'ಜಾನಿ'ನೇ ಚೆನ್ನಾಗಿದೆ."

ಶಾಮು ದೂರು ಹೇಳುವವನಂತೆ "ವೆಂಕೂ, ನೀನಾದರೂ ಅವಳಿಗೆ ಬುದ್ಧಿ ಹೇಳಮ್ಮ. ಆ ಕೆಟ್ಟ ಹೆಸರನ್ನು ನನ್ನ ಮಗೂಗೆ ಇಟ್ಟಿದಾಳೆ" ಎಂದ.

ಹಾಲಿನಲ್ಲಿದ್ದ ಗಡಿಯಾರ ನಾಲ್ಕು ಗಂಟೆ ಹೊಡೆದು ಮಾತಿನಲ್ಲಿ ಮುಳುಗಿದ್ದ ಮೀರಳನ್ನು ಎಚ್ಚರಿಸಿತು. ಮೀರ ಮಹಾಪರಾಧ ಮಾಡಿದವಳಂತೆ

"ನನಗೇನು ಬಂತು? ಮಗೂಗೆ ಹಾಲು ಕುಡಿಸಬೇಕು" ಎನ್ನುತ್ತ ಅಡಿಗೆ ಮನೆಗೆ ಬಂದು ವೆಂಕಮ್ಮನವರಿಗೆ,

"ಹಸುವಿನ ಹಾಲು ಬಿಸಿ ಮಾಡಿಕೊಡಿ. ನಾಲ್ಕು ಗಂಟೆಗೆ ಸರಿಯಾಗಿ ವೀಣಾಗೆ ಹಾಲು ಕುಡಿಸಬೇಕು...."

ವೆಂಕಮ್ಮನವರಿಗೆ ಆಶ್ಚರ್ಯವಾಯಿತು.

"ಇದೇನೇ ತಾಯೀ, ಮಗೂಗಿನ್ನೂ ನಾಲ್ಕು ತಿಂಗಳು. ನೀನು ಹಾಲು ಕುಡಿಸುವುದಿಲ್ಲವೇ?" ಎಂದು ಕೇಳಿದರು.

"ನಾನು ಕುಡಿಸುವ ಹಾಲು ಅವಳಿಗೆ ಸಾಕಾಗುವುದಿಲ್ಲ" ಎನ್ನುತ್ತ ಮೀರ ಸೀಸೆ ತೊಳೆಯಲು ಹೋದಳು. ವೆಂಕಮ್ಮನವರು ಹಾಲನ್ನು ಒಲೆಯ ಮೇಲಿಟ್ಟು ಬೀಸುತ್ತಿರುವಾಗ ಮೀರ ಪ್ರಮಾದವಾಯಿತೆಂಬಂತೆ,

"ತಾಳಿ, ಪಾತ್ರೆ ಮೇಲೆ ಏನಾದರೂ ಮುಚ್ಚಿ ಬೀಸಿ. ಇಲ್ಲದಿದ್ದರೆ ಬೂದಿ,

ಕಸ ಎಲ್ಲಾ ಹಾರುತ್ತದೆ" ಎಂದಳು.

ಫೀಡಿಂಗ್ ಬಾಟಲು, ಕರ್ಚೀಫು, ಅಡಾಕ್ಸಲೀನ್ ಸೀಸೆ ಬಳಿಯಲ್ಲಿಟ್ಟು ಕೊಂಡು ಕುಳಿತಳು. ವೆಂಕಮ್ಮನವರು ಹಾಲು ತಂದು ಹತ್ತಿರ ಇಡುತ್ತಲೇ ಮೀರ ಹಾಲನ್ನೊಂದು ಬಾರಿ ಸೋಸಿ ಬಾಟಲ್‌ಗೆ ಹಾಕಿದಳು. ವೆಂಕೂ ಈ ವಿತರಣೆಯನ್ನು ಬಿಟ್ಟ ಕಣ್ಣಿನಿಂದ ನೋಡುತ್ತಿದ್ದಳು. ಅವಳ ತಮ್ಮನಿಗೆ ಅವನು ಮಗುವಾಗಿದ್ದಾಗ ತನ್ನ ತಾಯಿ ಒಳಲೆಯಲ್ಲಿ ಹಾಲು ತುಂಬಿ ಅವನನ್ನು ಕಾಲಿನ ಮೇಲೆ ಮಲಗಿಸಿ ಕೊಂಡು ಹಾಲು ಹುಯ್ಯುತ್ತಿದ್ದುದು ಮಾತ್ರ ವೆಂಕೂಗೆ ಪರಿಚಯವಿತ್ತು.

ಮೀರ "ಬಾ, ಚಿನ್ನ" ಎಂದು ವೀಣಾಳನ್ನು ತೊಡೆಯ ಮೇಲೆ ಮಲಗಿಸಿ ಕೊಂಡು ಮೊದಲು ಅಡಕ್ಸಲೀನ್ ಹಾಕಿ, ಅನಂತರ ನಿಪ್ಪಲ್ಲನ್ನು ಬಾಯಿಗಿಟ್ಟಳು. ವೀಣಾ ತೃಪ್ತಿಯಿಂದ ಹಾಲನ್ನು ಹೀರತೊಡಗಿದಳು.

ಶಾಮು ಒಳಗೆ ಬಂದು "ಮೀರಾ, ಟ್ರೈನು ಬರುವ ಹೊತ್ತಾಯಿತು. ನಾನು ಹೋಗಿ ಅವರನ್ನು ಕರೆದುತರುತ್ತೇನೆ" ಎಂದು ವೀಣಾಳ ಕೆನ್ನೆ ಹಿಂಡಲು ಮುಂದೆ ಬಂದ. ಮೀರ ಶಾಮುವನ್ನು ಗದರಿಸಿದಳು:

"ನೀವು ಸುಮ್ಮನೆ ಹೋಗಿ. ಇನ್ನವಳು ಹಾಲು ಕುಡಿಯುವುದನ್ನು ಬಿಡು ತ್ತಾಳೆ." ಶಾಮು ಹೊರಗೆ ಹೋದ.

ಮೀರ ಮಗುವಿಗೆ ಹಾಲು ಕುಡಿಸಿ, ಸೀಸೆ ತೊಳೆದು ಮಗುವನ್ನು ವೆಂಕೂ ಕೈಗೆ ಕೊಟ್ಟು "ವೆಂಕೂ, ವೀಣಾನ ಹುಷಾರಾಗಿ ಎತ್ತಿಕೊಳ್ಳಮ್ಮ, ಬೀಳಿಸಿ ಬಿಟ್ಟೀಯೆ. ಎರಡು ಕೈಗಳಿಂದಲೂ ಅವಳನ್ನು ಹಿಡಿದುಕೊಳ್ಳದಿದ್ದರೆ ಚಿಮ್ಮಿಬಿಡುತ್ತಾಳೆ. ಈಗ ತಾನೆ ಹಾಲು ಕುಡಿಸಿದೀನಿ. ಮೃದುವಾಗಿ ಎತ್ತಿಕೋ. ಇಲ್ಲದಿದ್ದರೆ ಕಕ್ಕಿಬಿಡುತ್ತಾಳೆ" ಎಂದು ಹೇಳಿ ಊರಿನಿಂದ ತಂದಿದ್ದ ಸಾಮಾನುಗಳನ್ನು ಓರಣವಾಗಿ ಜೋಡಿಸ ತೊಡಗಿದಳು. ವೆಂಕೂಗೆ ಮೀರಳ ಮಾತು ಕೇಳಿ ನಗು ಬಂತು. ತನ್ನ ತಂಗಿಯರು, ತಮ್ಮಂದಿರನ್ನು ಚೋಟುದ್ದ ಹುಡುಗಿಯಾಗಿದ್ದಾಗಿನಿಂದಲೂ ಅವಳಿಗೆ ಎತ್ತಿ, ಆಡಿಸಿ ರೂಢಿಯಿತ್ತು. ಐದು ವರ್ಷದ ಹುಡುಗಿಯಾಗಿದ್ದಾಗಲೇ ಅವಳ ತಾಯಿ ವೆಂಕುವಿಗೆ ಮಗುವನ್ನು ಎತ್ತಿಕೊಳ್ಳಲು ಕೊಡುತ್ತಿದ್ದರು. ಆದರೆ ಒಂದು ದಿನ ವಾದರೂ ಅವರು ಅವಳಿಗೆ ಹೀಗೆ ಎಚ್ಚರಿಕೆ ಕೊಟ್ಟಿರಲಿಲ್ಲ. 'ದೊಡ್ಡವರ ಸಹವಾಸ' ಎಂದುಕೊಳ್ಳುತ್ತ ಹೊರಗೆ ಹೊರಟಳು.

ಹಿಂದೆಯೇ ಮೀರಳ ಧ್ವನಿ ಬಂತು,

"ವೆಂಕೂ, ಮಗೂಗೆ ಸ್ವೆಟರು ಹಾಕಿಲ್ಲ. ಹೊರಗೆ ಕರೆದುಕೊಂಡು ಹೋಗಬೇಡ."

ವೆಂಕೂ ಚಾಪೆಯ ಮೇಲೆ ಕುಳಿತು ವೀಣಾಳನ್ನು ಬೀಗದಕ್ಕೆ ಗೊಂಚಲು, ಬಣ್ಣದ ಚೆಂಡುಗಳಿಂದ ಆಟವಾಡಿಸತೊಡಗಿದಳು.

ಕೃಷ್ಣಪ್ಪನವರು, ಶಾಮು ಮನೆಯೊಳಗೆ ಬಂದರು. ವೆಂಕೂ ಕುತೂಹ ಲ

ವನ್ನು ತಡೆಯಲಾರದೆ ವೀಣಳನ್ನು ಬಗಲಿಗೇರಿಸಿಕೊಂಡು ಗಾಡಿಯ ಬಳಿ ಬಂದು ನಿಂತು,

"ಶಾಮಣ್ಣಾ, ಇದೆಂತಹ ಕಾರು?" ಎಂದಳು.

ಶಾಮು, ಕೃಷ್ಣಪ್ಪನವರು ನಕ್ಕರು. ಶಾಮು ನಗುತ್ತಲೇ ಹೇಳಿದ:

"ಇದು ಕಾರಲ್ಲ ವೆಂಕು. ಮಕ್ಕಳನ್ನು ಹೊರಗೆಲ್ಲಿಯಾದರೂ ಕರೆದುಕೊಂಡು ಹೋಗಬೇಕಾದರೆ ಇದರಲ್ಲಿ ಕೂರಿಸಿಕೊಂಡು ಹೋಗಬಹುದು" ಎನ್ನುತ್ತ ವೀಣಳನ್ನೆತ್ತಿ ಗಾಡಿಯಲ್ಲಿ ಕೂರಿಸಿದ.

"ಬಿಸಿಲು, ಮಳೆ ಇದ್ದರೆ ಟಾಪು ಹಾಕಬಹುದು" ಎಂದು ಟಾಪನ್ನು ಮೇಲಕ್ಕೆ ಮಾಡಿದ. ವೆಂಕೂ ಗಾಡಿ ನೋಡಿ ಬೆರಗಾಗಿಬಿಟ್ಟಳು. ಗಾಡಿಯ ಹೊಳೆಯುವ ಕಂದುಬಣ್ಣ, ಅದರ ಪುಟ್ಟ ಚಕ್ರಗಳು, ಒಳಗಿದ್ದ ಮೆತ್ತೆ ಎಲ್ಲವೂ ಅವಳನ್ನು ಆಶ್ಚರ್ಯಗೊಳಿಸಿದವು.

'ಆಮೇಲೆ ನಾವು ಈ ಹಿಡಿಯನ್ನು ಹಿಡಿದು ಗಾಡಿಯನ್ನು ತಳ್ಳಿಕೊಂಡು ಎಲ್ಲಿಗೆ ಬೇಕಾದರೂ ಹೋಗಬಹುದು" ಎನ್ನುತ್ತ ಗಾಡಿಯನ್ನು ಒಂದು ಮಾರು ತಳ್ಳಿಕೊಂಡು ಬಂದ. ಅವನು ಕೈ ಬಿಡುತ್ತಲೇ ವೆಂಕೂ,

"ಶಾಮಣ್ಣಾ, ನಾನು ಸ್ವಲ್ಪ ದೂರ ತಳ್ಳುತ್ತೀನಿ" ಎಂದಳು.

ಶಾಮು ಕೈಬಿಟ್ಟೊಡನೆ ಗಾಡಿಯನ್ನು ಹಾಲಿನಲ್ಲಿ ಅಲ್ಲಿಂದಿಲ್ಲಿಗೆ ತಳ್ಳತೊಡಗಿದಳು. ಬೋರ ಹೊತ್ತುತಂದ ತೊಟ್ಟಿಲನ್ನು ಮೀರ ತನ್ನ ರೂಮಿನಲ್ಲಿ ಕಿಟಕಿ ಎದುರಿಗೆ ಸರಿಯಾಗಿರಿಸಿ ಸೊಳ್ಳೆಪರದೆ ಕಟ್ಟಿಸಿದಳು. ಊರಿನಿಂದ ತಂದಿದ ಸಾಮಾನುಗಳನ್ನು ಹೊಂದಿಸಿಡುವುದರಲ್ಲಿ ರಾತ್ರಿಯಾಯಿತು. ಏಳು ಗಂಟೆಗೆ ವೀಣಾಳಿಗೆ ಮತ್ತೊಂದು ಬಾರಿ ಹಾಲು ಕುಡಿಸಿ, ಅವಳನ್ನು ತೂಗಿ ಮಲಗಿಸಿ, ಅನಂತರ ಗಂಡನಿಗೂ, ದೊಡ್ಡಪ್ಪನಿಗೂ ಎಲೆ ಹಾಕಿದಳು.

ವೀಣಾ ಹುಟ್ಟುವುದಕ್ಕೆ ಮುನ್ನ ಮೀರಳಿಗೆ ಹಳ್ಳಿಯಲ್ಲಿ ಒಂದು ಗಳಿಗೆ ಯುಗದಂತೆ ಭಾಸವಾಗುತ್ತಿತ್ತು. ಈಗ ಅವಳ ಬಟ್ಟೆ ಬರೆ ಒಗೆಸಿ, ಇಸ್ತ್ರಿ ಮಾಡುವುದರಲ್ಲಿ, ಅವಳನ್ನು ಆಟವಾಡಿಸುವುದರಲ್ಲಿ, ಹಾಲು ಕುಡಿಸುವುದರಲ್ಲಿ, ಸಂಜೆ ಕೈಗಾಡಿಯಲ್ಲಿ ತಿರುಗಾಡಿಸಿಕೊಂಡು ಬರುವುದರಲ್ಲಿ ಅವಳ ಸಮಯವೆಲ್ಲಾ ಕಳೆದು ಹೋಗುತ್ತಿತ್ತು. ವೀಣಾ ನಿದ್ರಿಸುವಾಗ ಮಾತ್ರ ಬಿಡುವು ಸಿಕ್ಕುತ್ತಿತ್ತು. ಆ ಸಮಯದಲ್ಲಿ ಕಾಲುಚೀಲವನ್ನೋ, ಸ್ವೆಟರನ್ನೋ ಹೆಣೆಯುತ್ತಲೋ, ಕಾದಂಬರಿ ಹಿಡಿದೋ ಕುಳಿತುಕೊಳ್ಳುತ್ತಿದ್ದಳು. ಐದು ನಿಮಿಷ ಓದುವುದರಲ್ಲಿ ವೀಣಾ ಎದ್ದು ಬಿಡುತ್ತಿದ್ದಳು.

ತನ್ನ ಜೀವನದಲ್ಲಿ ಮತ್ತೊಂದು ಮಹತ್ತರ ಬದಲಾವಣೆಯನ್ನು ಮೀರ ಗಮನಿಸಿದ್ದಳು. ಮದುವೆಯಾದ ದಿನದಿಂದ ಮೊದಲ್ಗೊಂಡು, ಶಾಮು, ಮೀರ ದಂಪತಿಗಳಾಗಿ ಒಂದೇ ಮನೆಯಲ್ಲಿದ್ದರೂ ಅವರಿಬ್ಬರ ಮನಸ್ಸು ಒಂದಾಗಿರಲಿಲ್ಲ.

ಮೋಹದ ಭರದಲ್ಲಿ, ಉದ್ವೇಗದ ಆವೇಗದಲ್ಲಿ ಶಾಮು ಅನೇಕ ಬಾರಿ ಮೀರ ಳೊಡನೆ ಮಿದುವಾಗಿ, ಪ್ರೀತಿಯ ಮಾತುಗಳನ್ನಾಡಿದ್ದ. ಆದರೆ ಅವರಿಬ್ಬರ ಭಿನ್ನಾಭಿ ಪ್ರಾಯಗಳು, ಜೀವನದ ಆದರ್ಶ, ರೀತಿ, ಆಸೆ, ಆಕಾಂಕ್ಷೆ ಪ್ರತಿಯೊಂದೂ ಭಿನ್ನ ವಾಗಿದ್ದವು. ಸೀರೆಯ ಬಣ್ಣದ ವಿಷಯದಿಂದ ಹಿಡಿದು, ಯಾವುದನ್ನು ಅವರು ತಮ್ಮ ಜೀವನದ ಪರಮ ಗುರಿಯೆಂದು ಭಾವಿಸಿದ್ದರೋ, ಅಲ್ಲಿಯವರೆಗೂ ಅವರ ಮನಸ್ಸು ಒಡೆದು ಎರಡು ಪಾಲಾಗಿದ್ದವು. ಕೇವಲ ಪರಸ್ಪರ ದೈಹಿಕ ಆಕರ್ಷಣೆಗೆ ಒಳಗಾದ, ನಿಸರ್ಗ ನಿಯಮಕ್ಕೊಳಪಟ್ಟ, ಬಿಸಿರಕ್ತದ ಮನಸ್ಸು ಹಲವು ಬಾರಿ ಒಮ್ಮತದಿಂದ ಇದ್ದುವೇ ಹೊರತು, ಎರಡು ಹೃದಯಗಳು ಒಂದಾಗಿರಲಿಲ್ಲ. ತನ್ನ ಗೆಳತಿಯರು ಬಂದ ರಾತ್ರಿ, ಶಾಮು ತನ್ನನ್ನು ಬಲಾತ್ಕಾರಪಡಿಸಿದ ದಿನದಿಂದ ಮೀರಳಿಗೆ ದೈಹಿಕ ಸಂಬಂಧದ ಬಗ್ಗೆ ತೀವ್ರ ಅಸಮಾಧಾನ, ಜಿಗುಪ್ಸೆ, ಕೋಪ ತಲೆದೋರಿದ್ದವು. ಅಂದಿನಿಂದ ಅವಳು ಗಂಡನಿಂದ ಸಾಧ್ಯವಾದಷ್ಟು ದೂರವಿರಲು ಪ್ರಯತ್ನಿಸಿದಳು. ಆದರೆ ಅರಿಷಡ್ವರ್ಗಗಳ ಕೈಗೊಂಬೆ ಶಾಮು ತನ್ನಚ್ಛೆಯನ್ನು ಪ್ರತಿಸಾರಿಯೂ ನೆರವೇರಿಸಿಕೊಂಡು, ಮೀರಳ ಮನಸ್ಸನ್ನು ಮತ್ತಷ್ಟು ದೂರ ತಳ್ಳುತ್ತಿದ್ದ. ದೂರ ಸರಿಯುತ್ತಿದ್ದ ಎರಡು ಹೃದಯಗಳನ್ನು ಪುಟ್ಟ ವೀಣಾ ಸೆಳೆದು ಹತ್ತಿರ ಬರುವಂತೆ ಮಾಡಿದ್ದಳು. ಸೂಜಿಗಲ್ಲಿನ ಅಕ್ಕಪಕ್ಕಗಳಲ್ಲಿದ್ದ ಕಬ್ಬಿಣದ ಚೂರುಗಳು ಸೂಜಿಗಲ್ಲಿನಿಂದ ಆಕರ್ಷಿಸಲ್ಪಟ್ಟಂತೆ ಶಾಮು, ಮೀರ ವೀಣಾಳ ಬಳಿಗೆ ಬಂದಿದ್ದರು. ಗಂಡ, ಹೆಂಡತಿಗೆ ತಮ್ಮಲ್ಲಿ ಎಷ್ಟೇ ಭಿನ್ನಾಭಿಪ್ರಾಯವಿದ್ದರೂ ವೀಣಾಳ ಮೇಲಿದ್ದ ಹಿತ, ಪ್ರೀತಿ ಭಿನ್ನವಾಗಿರಲಿಲ್ಲ. ಉಳಿದ ವಿಷಯಗಳಲ್ಲೆಷ್ಟು ವೈಷಮ್ಯವಿದ್ದರೂ, ಅದನ್ನು ಮರೆಸಿ, ಹತ್ತಿರ ಬರುವಂತೆ, ದೂರವಾಗಿದ್ದ ಹೃದಯಗಳಿಗೆ ತನ್ನ ಮಮತೆಯ ಸರಪಳಿ ಹಾಕಿ ಬೆಸೆಯತೊಡಗಿದ್ದಳು ವೀಣಾ.

ಶಾಮು, ಮೀರ ಪ್ರತಿದಿನ ಸಂಜೆ ವೀಣಾಳನ್ನು ಕೈಗಾಡಿಯಲ್ಲಿ ಕೂರಿಸಿ ಕೊಂಡು ಹಳ್ಳಿಯನ್ನೆಲ್ಲಾ ಸುತ್ತಿಬರುತ್ತಿದ್ದರು. ಊರ ಹೊರಗಿನ ಬಯಲಿನಲ್ಲಿ ಗಾಡಿ ನಿಲ್ಲಿಸಿ ವೀಣಳಿಗೆ ಹಾಡುವ ಹಕ್ಕಿಗಳನ್ನೂ, ಓಡುವ ಮೋಡಗಳನ್ನು ಪರಿಚಯ ಮಾಡಿಕೊಡುತ್ತಿದ್ದರು. ಕೆಲವು ಬಾರಿ ಮಗಳ ಮೇಲಿನ ಅತಿ ಪ್ರೀತಿಯೇ ಅವರಲ್ಲಿ ವಾಗ್ವಾದಕ್ಕೆ ಕಾರಣವಾಗುತ್ತಿತ್ತು.

"ಮೀರಾ, ನಾನೇನೋ ಜಾನಿಗೆ ಹನ್ನೆರಡನೆ ವರ್ಷದಲ್ಲೇ ಮದುವೆ ಮಾಡಿ ಬಿಡುತ್ತೇನೆ" ಶಾಮು ಹೇಳುತ್ತಿದ್ದ.

"ಆದರೆ ಅದಕ್ಕೆ ನಾನೊಪ್ಪಬೇಕಲ್ಲಾ. ನಿಮ್ಮ ಮಗಳನ್ನು ಬೇಗ ಗಂಡನ ಮನೆಗೆ ಅಟ್ಟಿಬಿಡಲು ನಿಮಗೆ ಅಷ್ಟೊಂದು ಆಸೆಯೇ?"

"ಇಲ್ಲ. ಮನೇಲೇ ಇದ್ದು, ನಮಗೂ ಸಹಾಯಕವಾಗಿರುವಂತಹ ಅಳಿಯನನ್ನೇ ಹುಡಿಕಿಸಿ ಮದುವೆ ಮಾಡುತ್ತೇನೆ. ಆಗ ಜಾನಿ, ಅವಳ ಗಂಡ

ಮಕ್ಕಳು ಎಲ್ಲರೂ ನಮ್ಮೊಡನೆಯೇ ಇದ್ದಂತಾಗುತ್ತದೆ."

"ನಾನೇನೋ ವೀಣಾಗೆ ಮದುವೆ ಮಾಡೋದಿಲ್ಲ."

"ಮತ್ತೇನು ಹಾಗೆ ಬಿಟ್ಟಿರುತ್ತೀಯಾ?"

"ಊಹ್ಞೂ. ಮೆಡಿಕಲ್ ಕಾಲೇಜಿಗೆ ಸೇರಿಸುತ್ತೇನೆ. ನನ್ನಾಸೆಯಂತೂ ಪೂರ್ಣವಾಗಲಿಲ್ಲ. ನನ್ನ ಮಗಳ ಮೂಲಕವಾದರೂ ನನ್ನಾಸೆ ನೆರವೇರಲಿ."

"ನನಗೆ ಜಾನಿ ತುಂಬಾ ಓದುವುದು ಇಷ್ಟವಿಲ್ಲ."

"ನನಗೆ ಅವಳಿಗೆ ಬೇಗ ಮದುವೆ ಮಾಡಿ ಸಂಸಾರಕ್ಕೆ ತಳ್ಳುವುದು ಇಷ್ಟವಿಲ್ಲ."

ವೀಣಾ ಅವರಿಬ್ಬರ ನಡುವೆ ಗೆಜ್ಜೆಯನ್ನು ಹಿಡಿದು ಸದ್ದು ಮಾಡುತ್ತಿದ್ದಳು.

"ಜಾನಿಗೆ ಸಂಸಾರ ಮಾಡಿಕೊಂಡಿರುವುದೇ ಓದಿಗಿಂತಲೂ ಪ್ರಿಯವಾಗಿದ್ದರೆ....?"

ಶಾಮು ಮೀರಳನ್ನು ಪ್ರಶ್ನೆ ಮಾಡಿದ.

"ಆಗ ಅವಳಿಗೆ ಯಾವುದು ಹೆಚ್ಚು ಸಂತೋಷವೋ ಅದನ್ನೇ ಮಾಡು ಅಂತ ಹೇಳುತ್ತೇನೆ. ಆದರೆ ಅವಳಿಗೆ ಡಾಕ್ಟರಾಗುವುದು ಇಷ್ಟವಿದ್ದರೆ...."

"ನಿನ್ನಿಷ್ಟ ಎಂದುಬಿಡುತ್ತೇನೆ."

"ವೀಣಾ ನಿನಗಾವುದು ಬೇಕಮ್ಮಾ" ಎನ್ನುತ್ತ ಮೀರ ವೀಣಳನ್ನು ಮುದ್ದಿಟ್ಟಳು.

ರಾತ್ರಿಯ ಹೊತ್ತು ವೀಣಾ ಎದ್ದು ಅತ್ತರೆ, ಶಾಮು ಎದ್ದು ಮಗಳನ್ನು ತೂಗಿ ಮಲಗಿಸುತ್ತಿದ್ದ. ಒಂದು ಗಳಿಗೆ ನಿದ್ದೆಯನ್ನು ತಡೆಯುವ ಶಕ್ತಿಯಿಲ್ಲದ ಶಾಮುವಿಗೆ ಈಗ ತನ್ನ ಮುದ್ದಿನ ಜಾನಿಯನ್ನು ತೂಗಿ ಮಲಗಿಸುವುದರಲ್ಲಿ ಏನೋ ಒಂದು ವಿಧವಾದ ಆತ್ಮತೃಪ್ತಿ ದೊರಕುತ್ತಿತ್ತು.

ಮಧ್ಯಾಹ್ನ ಊಟವಾದ ಮೇಲೆ ಶಾಮು ಹಾಸಿಗೆಯ ಮೇಲೆ ಮಲಗಿಕೊಂಡಿದ್ದ. ವೀಣಾ ಅವನ ಹೊಟ್ಟೆಯ ಮೇಲೆ ಕುಳಿತು ಆಗಾಗ್ಗೆ ಅವನ ತಲೆ ಕೂದಲನ್ನು ಹಿಡಿದೆಳೆಯುತ್ತಾ 'ಅಣ್ಣ, ಅಣ್ಣ' ಎಂದು ಮಾತನಾಡಿಸುತ್ತಿದ್ದಳು. ಮೀರ ಕೈಯಲ್ಲಿ ಎಲೆ ಅಡಿಕೆಯ ತಟ್ಟೆ ಹಿಡಿದು ಕಾಲಿನ ಬಳಿ ಕುಳಿತುಕೊಂಡಿದ್ದಳು. ಎಲೆಯ ನಾರು ತೆಗೆದು ಸುಣ್ಣ ಹಚ್ಚಿ ಎಲೆಯನ್ನು ಸುರುಳಿ ಮಾಡಿ ಶಾಮುವಿನ ಕೈಗೆ ಕೊಡುತ್ತಿದ್ದಳು. ಶಾಮು ಸುರುಳಿಯನ್ನು ಹಾಕಿಕೊಳ್ಳುವ ಮುಂಚೆ ಹೇಳಿದ:

"ನಮ್ಮ ಜಾನಿ ಹುಟ್ಟಿದ ಗಳಿಗೆ ತುಂಬಾ ಒಳ್ಳೆಯದು" ಎಂದು ಮೀರಳ ಕಡೆ ಕೊಂಕುನೋಟ ಬೀರಿ ಎಲೆಯನ್ನು ಬಾಯಿಗೆ ಹಾಕಿಕೊಂಡ.

ಮೀರಳಿಗೆ ಅರ್ಥವಾಗಲಿಲ್ಲ.

"ಯಾಕೆ?"

"ಮದುವೆಯಾದಾಗಿನಿಂದ ಒಂದು ದಿನ ನೀನು ಹೀಗೆ ಎಲೆ, ಅಡಿಕೆ ಮಡಿಸಿ

ಕೊಟ್ಟಿದ್ದೆಯಾ ಹೇಳು? ಜಾನಿಯ ಕಾಲ್ಗುಣದಿಂದ ನನಗೆ ನಿನ್ನ ಕೈಯಿಂದ ಎಲೆ ಸಿಗುವಂತಾಯಿತು."

"ನೀವು ಕೇಳಿದ್ದರೆ ನಾನು ಮಡಿಸಿಕೊಡುತ್ತಿರಲಿಲ್ಲವೇ?"

"ಅದನ್ನೂ ಕೇಳಬೇಕೆ?"

ಮೀರಳಿಗೆ ಮದುವೆಯಾದಾಗಿನಿಂದ ಒಂದು ದಿನವಾದರೂ ಗಂಡನಿಗೆ ಎಲೆ ಅಡಿಕೆ ಮಡಿಸಿಕೊಡುವ ಅಪೇಕ್ಷೆ ಬಂದಿರಲಿಲ್ಲ. ಶಾಮು, ಹಸು ಹುಲ್ಲು ಮೇಯುವಂತೆ ಎಲೆತಿನ್ನುವ ರೀತಿ ಅವಳಿಗೆ ಜಿಗುಪ್ಸೆಯನ್ನುಂಟುಮಾಡಿತ್ತು.

ಆದರೆ ವೀಣಾ ತಮ್ಮ ಜೀವನವನ್ನು ಬೆಳಗಿಸಲು ಬಂದಾಗಿನಿಂದಲೂ ಎಲೆ ಮಡಿಸಿಕೊಡುವ ಸಮಯ ಅವಳಿಗೆ ಅತ್ಯಂತ ರಸಮಯ ಸನ್ನಿವೇಶವಾಗಿತ್ತು. ಶಾಮು ಊಟ ಮಾಡಿ ಬಂದವನೇ ಹಾಸಿಗೆಯ ಮೇಲೆ ಉರುಳಿಕೊಳ್ಳುತ್ತಿದ್ದ. ವೀಣಾ ತಪ್ಪು ಹೆಜ್ಜೆ ಇಡುತ್ತ ಓಡಿ ಬಂದು ಮಂಚದ ತುದಿ ಹಿಡಿದು ನಿಲ್ಲುತ್ತಿದ್ದಳು. ಶಾಮು ಅವಳನ್ನೆತ್ತಿ ಮೇಲೆ ಕೂರಿಸುತ್ತಿದ್ದ. ಮಂಚದ ಇನ್ನೊಂದು ಕಡೆ ಮೀರ ಎಲೆಗೆ ಸುಣ್ಣ ಬಳಿಯುತ್ತ "ಇವತ್ತು ನಿಮ್ಮ ಮಗಳು ಏನು ಮಾಡಿದಳು ಗೊತ್ತೆ?" ಎಂದು ಮಗಳ ಗುಣಗಾನಕ್ಕೆ ಪೀಠಿಕೆ ಹಾಕುತ್ತಿದ್ದಳು.

"ಲೇ ಜಾನಿ, ಏನು ಮಾಡಿದೆ ಮರೀ?"

ಶಾಮು ಕೆನ್ನೆ ಹಿಂಡಿ ಕೇಳುತ್ತಿದ್ದ. ಈ ಸನ್ನಿವೇಶ ಗಂಡ, ಹೆಂಡತಿ ಇಬ್ಬರಿಗೂ ಪ್ರಿಯವಾಗಿತ್ತು.

ವೀಣಳ ಕೃಪಾದೃಷ್ಟಿ ಆಗಾಗ್ಗೆ ಶಾಮುವಿನ ತಲೆಗೂದಲಿನ ಮೇಲೆ ಬಿದ್ದು ಅದನ್ನು ಹಿಡಿದೆಳೆದು ತನ್ನ ಸ್ವಾಧೀನದಲ್ಲಿಟ್ಟುಕೊಳ್ಳಲು ಪ್ರಯತ್ನಿಸುವುದನ್ನು ನೋಡಿ ಮೀರ "ಬಾರೇ ಇಲ್ಲಿ" ಎಂದಳು.

ವೀಣಾ ಮತ್ತಷ್ಟು ತಂದೆಯ ಬಳಿ ಸರಿದಳು. ಮೀರ ಎಲೆಯ ಸುರುಳಿಯನ್ನು ಶಾಮುವಿಗೆ ಕೊಡಲು ಕೈನೀಡಿದಾಗ ವೀಣಾ ತನ್ನ ಪುಟ್ಟ ಕೈ ಚಾಚಿ ಅದನ್ನು ಕಸಿದು ಕೊಂಡು ಶಾಮುವಿನ ಬಾಯೊಳಗಿಟ್ಟಳು. ಶಾಮು ವೀಣಳ ಕೈಯನ್ನು ನೋವಾಗದಂತೆ ಕಚ್ಚಿ,"ಎಲೆಗಿಂತ ಈ ಕೈ ಎಷ್ಟೋ ರುಚಿಯಾಗಿವೆ" ಎಂದ.

"ನಿಮ್ಮ ಕುಚೇಷ್ಟೆ ನಿಲ್ಲಿಸಿ. ಮಗೂಗೆ ನೋವಾಯಿತೋ ಏನೋ?"

ವೀಣಾ ತಾಯಿಯ ಕೈಯಿಂದ ಎಲೆ ಕಿತ್ತುಕೊಂಡು ಈ ಬಾರಿ ತನ್ನ ಬಾಯಿಯೊಳಗೆ ಹಾಕಿಕೊಂಡಳು. ಮೀರ, ಶಾಮು ಮಗಳು ವಿಷ ತಿಂದುದಕ್ಕಿಂತಲೂ ಹೆಚ್ಚು ಗಾಬರಿಯಾಗಿ, ಅವಳ ಬಾಯೊಳಗಿದ್ದ ಎಲೆ ತೆಗೆದು ಎಸೆದರು. ವೀಣಾ ಹಠಹಿಡಿದು ಅಳತೊಡಗಿದಳು. ಮೀರಾ ಮಂಚದ ಸಂದಿ, ಮೂಲೆ, ಬೆಂಚುಗಳ ಸಂದಿಯಲ್ಲಿ ಬಿದ್ದಿದ್ದ ವೀಣಳ ಆಟದ ಸಾಮಾನುಗಳನ್ನು ಒಂದೊಂದಾಗಿ ಹುಡುಕಿ ತಂದು ಅವಳ ಮುಂದೆ ಹಾಕಿದಳು. ವೀಣಾ ಅಳು ನಿಲ್ಲಿಸಿ ಜೂಲು ನಾಯಿಯೊಡನೆ

ಆಡತೊಡಗಿದಳು.

"ವೀಣಾ ಹುಟ್ಟಿದ ಹಬ್ಬ ಇನ್ನೇನು ಬಂತು."

ಮೀರ ಮಾತಿಗೆ ಮೊದಲು ಮಾಡಿದಳು.

"ಹೌದು. ಇನ್ನೊಂದು ತಿಂಗಳಿದೆ. ಅವತ್ತು ಹಳ್ಳಿಯವರಿಗೆಲ್ಲಾ ಊಟ ಹಾಕಿಸಬೇಕೆಂದಿದ್ದೇನೆ. ನನ್ನ ಮದುವೇಲೂ ನಾನು ಹಾಕಿಸಲಿಲ್ಲ."

"ಅವರಿಗೆಲ್ಲಾ ಅಡಿಗೆ ಮಾಡೋರು ಯಾರು?"

"ಮೈಸೂರಿನಿಂದ ಇಬ್ಬರು ಅಡಿಗೆಯವರನ್ನು ಕರೆಸಿದರೆ ಸರಿ."

"ದೊಡ್ಡಪ್ಪ ಬರುತ್ತಾರಲ್ಲವೇ?"

"ಹಿರಿಯರು ಬಂದು ಆಶೀರ್ವಾದ ಮಾಡಿದರೆ ಜಾನಿಗೆ ಶ್ರೇಯಸ್ಸು."

"ಮಗೂಗೆ ಏನು ಮಾಡಿಸುತ್ತೀರಿ?"

"ಏನು ಮಾಡಿಸಲಿ?"

ಶಾಮು ಅವಳಿಗೇ ಸವಾಲು ಹಾಕಿದ.

"ಅದೇ ನನಗೂ ಯೋಚನೆಯಾಗಿದೆ. ಲೋಲಕ್ಕು, ಬಳೆ, ಸರ ಇದೆ. ಲಂಗಗಳಂತೂ ಬೇಕಾದ ಹಾಗೆ ಇವೆ. ಇಲ್ಲದಿರುವುದು ಏನು?"

"ಒಬ್ಬ ಪುಟ್ಟ ಗಂಡ."

"ನೀವು ಈಗಿನಿಂದ ಹಾಗೆ ಹೇಳಬೇಡಿ. ನಾನು ವೀಣಾಗೆ ಮದುವೆ ಮಾಡದೇ ಓದಿಸಬೇಕೂಂತ ಇದೀನಿ."

ಮೀರ ಗದರಿಸಿದಳು. ಸ್ವಲ್ಪ ಹೊತ್ತು ಮೀರ ಯೋಚಿಸಿ ಹೇಳಿದಳು:

"ನಾನೊಂದು ವಿಷಯ ನಿಮಗೆ ಹೇಳಬೇಕೂಂತಿದೀನಿ. ಆದರೆ ನೀವು ಒಪ್ಪುತ್ತೀರೋ ಇಲ್ಲವೋ ಗೊತ್ತಿಲ್ಲ."

"ಏನದು ಹೇಳು."

"ವೀಣಳಿಗೆ ಒಂದು ಮುತ್ತುಕೆಂಪಿನ ನೆಕ್‌ಲೇಸು ಮಾಡಿಸಲು ನನಗೆ ಆಸೆ. ಆದರೆ..."

"ಆದರೆ ಏನು?"

"ನೆಕ್‌ಲೇಸಿಗೆ ಚಿನ್ನ ಬೇಕಾಗುತ್ತದೆ. ಈಗಂತೂ ಚಿನ್ನ ಬಹಳ ತಗ್ಗು. ಕೊಳ್ಳು ವುದಕ್ಕೆ ಕೈ ಬರುವುದಿಲ್ಲ."

"ಹ್ಞೂ...."

"ಹೇಗಿದ್ದರೂ ನಿಮ್ಮ ತಾಯಿಯ ಚಿನ್ನದ ಒಡವೆಗಳು ಪೆಟ್ಟಿಗೆಯ ತುಂಬಾ ಇವೆ. ಅವುಗಳಲ್ಲಿ ಯಾವುದನ್ನಾದರೂ ಒಂದನ್ನು ಕರಗಿಸಿದರೆ ನೆಕ್‌ಲೇಸಿಗೆ ಸಾಕಾಗುತ್ತದೆ."

ಶಾಮು ಸ್ವಲ್ಪ ಹೊತ್ತು ಸುಮ್ಮನಿದ್ದ. ಅಳಿದ ತಾಯಿ ಮೇಲಿನ ಭಕ್ತಿಗೂ,

ಮಗಳ ಮೇಲಿನ ವ್ಯಾಮೋಹಕ್ಕೂ ಒಂದು ಲಕ್ಷ ಹೋರಾಟವಾಯಿತು.

ಹೋರಾಟದ ನಡುವೆ ಶಾಮು ವೀಣಳ ಕಡೆ ನೋಡಿದ.

ವೀಣಾ ಕಾಲಕಡೆಯಲ್ಲಿ ಕುಳಿತು ಬಣ್ಣದ ದಪ್ಪ ಚೆಂಡೊಂದನ್ನು ತನ್ನ ಪುಟ್ಟ ಬಾಯಿಯೊಳಗೆ ತುರುಕಿಕೊಳ್ಳಲು ಪ್ರಯತ್ನಿಸುತ್ತಿದ್ದಳು. ಅವಳ ಬರಿದಾಗಿದ್ದ ಕೊರಳಿಗೆ ನೆಕ್‌ಲೇಸು ಹಾಕಿದರೆ ಹೇಗೆ ಕಾಣಬಹುದು ಎಂದು ಶಾಮು ಊಹಿಸಿದ. ಬಣ್ಣದ ಚೆಂಡನ್ನು ಬಾಯಿಯೊಳಗೆ ಹಾಕಿಕೊಳ್ಳಲಾರದೇ ವೀಣಾ ವಿಧ ವಿಧವಾಗಿ ಮುಖ ಮಾಡುತ್ತಿದ್ದಳು. ಶಾಮುವಿಗೆ ಮುದ್ದು ಉಕ್ಕಿಬಂದು ತಟ್ಟನೆ ಎದ್ದು ಕುಳಿತು ವೀಣಳ ಕೆನ್ನೆಯ ಮೇಲೆ ಮುತ್ತಿಟ್ಟ.

"ನನ್ನ ಚಿನ್ನಮರಿಗೆ ಏನು ಬೇಕಾದರೂ ಕೊಡಬಹುದು. ಅವಳಿಗಲ್ಲದೆ ನಾವು ಬೇರೆ ಯಾರಿಗೆ ಮಾಡಬೇಕು? ಬೇಕಾದರೆ ಎಲ್ಲ ಒಡವೆಗಳನ್ನೂ ಕರಗಿಸಿ ಹೊಸ ನಮೂನೆಗಳನ್ನು ಮಾಡಿಸೋಣ" ಎಂದ ಶಾಮು.

ಶಾಮು ಇಷ್ಟು ಬೇಗ ತನ್ನ ಸಲಹೆಗೆ ಒಪ್ಪಬಹುದೆಂದು ಮೀರ ಭಾವಿಸಿರಲಿಲ್ಲ.

"ಸದ್ಯಕ್ಕೆ ನೆಕ್‌ಲೇಸು ಸಾಕು. ಅವಳ ಮದುವೆಯ ಹೊತ್ತಿಗೆ ಉಳಿದ ಒಡವೆಗಳನ್ನೆಲ್ಲಾ ಮಾಡಿಸೋಣ. ನೆಕ್‌ಲೇಸು ಈಗಲೇ ಮಾಡಲು ಹಾಕಬೇಕು. ಇನ್ನು ಮೈಸೂರಿಗೆ ಹೋಗಬೇಕಾಗುವುದೋ ಏನೋ?"

"ಒಂದು ದಿನ ಬೆಳಿಗ್ಗೆ ಹೋಗಿ ಸಂಜೆ ಬಂದುಬಿಡೋಣ."

"ಮಗೂನ ಕರೆದುಕೊಂಡು ಹೋಗಬೇಕಾಗುತ್ತದೆ."

"ಜಾನಿ ಬೇಡ ಮೀರಾ. ಮಗುವಿಗೆ ಸುಮ್ಮನೆ ಅಲೆದಾಟವಾಗುತ್ತದೆ. ಒಂದು ದಿನ ನಾನೇ ಹೋಗಿ ಮಾಡಲು ಹಾಕಿ ಬಂದುಬಿಡುತ್ತೇನೆ."

"ನೀನು ಹಾಕಿದ ಮಾದರಿಯನ್ನು ನಾನು ಒಪ್ಪದಿರಬಹುದು."

"ನೀನು ಒಂದು ಡಿಸೈನು ಬರೆದುಕೊಡು. ನಾನು ಅದೇ ಮಾದರಿ ಮಾಡಲು ಹೇಳಿಬರುತ್ತೇನೆ."

ಮೀರ ಕಾಗದ, ಪೆನ್ಸಿಲ್ಲು ಹಿಡಿದು ಕುಳಿತಳು. ನೆಕ್‌ಲೇಸಿನ ಚಿತ್ರವನ್ನು ಕಾಗದದ ಮೇಲೆ ಬರೆಯತೊಡಗಿದಳು. ದ್ರಾಕ್ಷಿ ಬಳ್ಳಿಯೊಂದು ಎರಡು ಕಡೆಗಳಿಂದಲೂ ಹಬ್ಬಿಕೊಂಡು ಮೇಲಕ್ಕೆ ಹೋಗಿತ್ತು. ದ್ರಾಕ್ಷಿ ಗೊಂಚಲುಗಳು ಬಳ್ಳಿಯಿಂದ ತೂಗಾಡುತ್ತಿದ್ದವು. ಎರಡು ಹಸಿರು ಗಿಣಿಗಳು ಬಳ್ಳಿಯ ಮೇಲೆ ಕುಳಿತು ಗೊಂಚಲನ್ನು ಕುಕ್ಕುವ ಪ್ರಯತ್ನದಲ್ಲಿದ್ದವು.

ಮೀರ ಬರೆದ ಚಿತ್ರವನ್ನು ಶಾಮು ಮೆಚ್ಚಿದ. ಕೆಲವು ಕಡೆ ತನ್ನ ಸಲಹೆ ಕೊಟ್ಟು ತಿದ್ದಿಸಿದ.

"ಎಲ್ಲೆಲ್ಲಿ ಮುತ್ತು ಹಾಕಬೇಕು, ಎಲ್ಲೆಲ್ಲಿ ಕೆಂಪು, ಪಚ್ಚೆ ಹಾಕಬೇಕು...."

ಶಾಮು ತುಂಟನಗೆ ಬೀರಿ "ಎಲ್ಲಿ ಮುತ್ತು ಹಾಕಬೇಕೆಂದು ನನಗೆ ಗೊತ್ತು"

ಎಂದ.

"ಶ್.... ಸುಮ್ಮನಿರಿ. ವೀಣಾ ಇಲ್ಲೇ ಇದಾಳೆ."

ಮೀರ ಚಿತ್ರವನ್ನು ಪೂರ್ಣಗೊಳಿಸಿ ಶಾಮುವಿನ ಕೈಗೆ ಕೊಟ್ಟು

"ನಾಳೇನೇ ಹೋಗಿ ಬನ್ನಿ. ಅವನು ಮಾಡುವುದು ನಿಧಾನವಾಗಬಹುದು. ಹುಟ್ಟಿದ ಹಬ್ಬದ ಹೊತ್ತಿಗೆ ತಂದುಬಿಡಬೇಕು. ಮೈಸೂರು ಜ್ಯೂಯಲರಿ ಮಾರ್ಟಿನಲ್ಲಿ ಮಾಡುವುದಕ್ಕೆ ಹಾಕಿ" ಎಂದಳು.

"ನಿನಗೇನೂ ಬೇಡವೇ ಮೀರಾ?"

"ಇನ್ನು ನನಗೇನು ಬೇಕಾಗಿದೆ?"

"ನಿನಗೊಂದು ಮೈಸೂರು ಜಾರ್ಜೆಟ್ ಸೀರೆ ತರುತ್ತೇನೆ. ಯಾವ ಬಣ್ಣದ್ದು ತರಲಿ?"

ಸೂರ್ಯ ಪಶ್ಚಿಮದಲ್ಲಿ ಹುಟ್ಟಿದ್ದರೂ ಮೀರಳಿಗೆ ಇಷ್ಟು ಆಶ್ಚರ್ಯವಾಗುತ್ತಿರಲಿಲ್ಲ. ಶಾಮುವಿಗೆ ಮೊದಲಿನಿಂದಲೂ ಜಾರ್ಜೆಟ್ ಬಟ್ಟೆ ಎಂದರೆ ಬದ್ಧ ದ್ವೇಷ. ರೇಷ್ಮೆ ಸೀರೆಯಲ್ಲಿನ ಗಾಂಭೀರ್ಯ, ಸೊಬಗು ಜಾರ್ಜೆಟ್ ಬಟ್ಟೆಯಲ್ಲಿಲ್ಲ ಎಂದು ಅವನ ವಾದ. ಅಂತಹ ವ್ಯಕ್ತಿ ಈಗ ತಾನಾಗಿ ಜಾರ್ಜೆಟ್ ತರುವೆನೆಂದು ಹೇಳಿದಾಗ ಮೀರ ತನ್ನ ಕಿವಿಗಳನ್ನೇ ನಂಬಲಾರದಾದಳು.

"ನಾನು ಎಚ್ಚರವಾಗಿದ್ದೀನಿ ತಾನೇ? ಅಥವಾ ಕನಸೋ?".

"ಯಾಕೆ ಹೀಗೆ ಕೇಳ್ತೀಯಾ?"

"ನಿಮ್ಮ ಮಾತು ನಂಬೋಕೇ ಆಗೋದಿಲ್ಲ. ನಿಮಗೂ, ಜಾರ್ಜೆಟ್ಟಿಗೂ ಎಣ್ಣೆ, ಸೀಗೇಕಾಯಿ ಅಲ್ಲವೇ?"

ಶಾಮುವಿಗೆ ಎರಡು ತಿಂಗಳ ಹಿಂದಿನ ಘಟನೆಯೊಂದು ನೆನಪಿಗೆ ಬಂದಿತು. ಅದೊಂದು ಸುಂದರ ಸಂಜೆ ವೀಣಳಿಗೆ ಅಲಂಕಾರ ಮಾಡಿ, ವಾಕಿಂಗಿಗೆ ಹೊರಡಲು ಸಿದ್ಧರಾಗುತ್ತಿದ್ದರು. ಮೀರ ರೂಮಿನಲ್ಲಿದ್ದಳು. ಇದ್ದಕ್ಕಿದ್ದಂತೆಯೇ ರಚ್ಚೆ ಹಿಡಿದು ವೀಣಾ ಅಳತೊಡಗಿದಳು. ಹಣ್ಣು, ಪೆಪ್ಪರಮಿಂಟು, ಆಟದ ಸಾಮಾನು ಯಾವುದೂ ಅವಳ ಅಳುವನ್ನು ನಿಲ್ಲಿಸಲಿಲ್ಲ. ವೆಂಕಮ್ಮನವರು ದೃಷ್ಟಿಯಾಗಿದೆಯೆಂದು ಹೇಳಿ ಪೊರಕೆ ಕಡ್ಡಿ ನೀವಳಿಸಿ ಸುಟ್ಟರು. ಅವಳನ್ನು ಸಮಾಧಾನ ಪಡಿಸಲು ಶಾಮುವಿನ ಸಾಹಸಗಳು ವಿಫಲವಾದವು.

ಮಗಳ ಅಳುವಿನ ಸುದ್ದಿ ಕೇಳಿ ಮೀರ ಜಾಗ್ರತೆಯಾಗಿ ಹೊರಗೆ ಬಂದಳು. ಮೀರ ಹತ್ತಿರ ಬರುತ್ತಲೂ ವೀಣಾ ಅಚ್ಚರಿಯಿಂದ ತನ್ನ ಕಣ್ಣರಳಿಸಿ, ತಾಯಿ ಉಟ್ಟಿದ್ದ ರಕ್ತವರ್ಣದ ಜಾರ್ಜೆಟ್ ಸೀರೆಯ ಕಡೆ ನೋಡಿದಳು. ಸೀರೆಯ ಅರುಣ ವರ್ಣ ವೀಣಳಿಗೆ ಮುದ್ದಾಗಿ ತೋರಿರಬೇಕು. ವೀಣಾ ಕ್ರಮೇಣ ಅಳು ನಿಲ್ಲಿಸಿ ಸೀರೆಯ ಕಡೆ ದಿಟ್ಟಿಸಿ ನೋಡಿದಳು. ಕ್ರಮೇಣ ಮಗುವಿನ ಅಳು ಕಡಿಮೆಯಾಯಿತು.

ತಾಯಿಯ ಸೀರೆಯ ನಿರಿಗಳನ್ನು ಹಿಡಿದು ವೀಣಾ ಎದ್ದು ನಿಂತು, ನಿರಿಗಳನ್ನು ಜಗ್ಗುತ್ತ ನಗತೊಡಗಿದಳು. ಅಂದಿನಿಂದ ಶಾಮುವಿಗೆ ಜಾರ್ಜೆಟ್ ಎಂದರೆ ಒಂದು ಬಗೆಯ ಆದರ ಹುಟ್ಟಿತು. ಅದನ್ನು ನೆನೆದೇ ಶಾಮು ಹೇಳಿದ:

"ನಿನ್ನ ಮಗಳಿಗೆ ಜಾರ್ಜೆಟ್ ಎಂದರೆ ಪ್ರೀತಿಯಲ್ಲವೇ?"

"ಅಂತೂ ಹೆಂಡತಿಯ ಮೇಲಿನ ಪ್ರೀತಿಯಿಂದಲ್ಲ ನೀವು ಸೀರೆ ತರೋದು. ಮಗಳನ್ನು ಮೆಚ್ಚಿಸೋದಕ್ಕೆ ಸೀರೆ ತರುತ್ತೀರಿ."

"ಹೇಗಾದರೇನು? ನಿನಗೆ ಸೀರೆ ಬರುವುದು ಮುಖ್ಯ" ಎಂದು ಶಾಮು ಮಾತು ಮುಗಿಸಿದ.

ವೀಣಳ ವರ್ಷದ ಹುಟ್ಟಿದ ಹಬ್ಬ ಬಹಳ ವೈಭವದಿಂದ ನಡೆಯಿತು. ಶಾಮುವಿನ ರೈತರುಗಳು ಚಿರೋಟಿ, ಲಾಡುವಿನ ಊಟ ಮುಗಿಸಿ ಶಾಮುವಿಗೆ

"ದಣಿದೆವು ಬುದ್ಧಿ, ಜಾನವ್ವ ಇಂತಾ ಅಬ್ಬಾನ ನೂರು ಮಾಡಿಕೊಂಡು ತಂಪಾಗಿ ಗಂಡ, ಮಕ್ಕಳ ಜೊತೆ ಬಾಳಲಿ" ಎಂದು ಹರಸಿದರು.

ಎಲೆಯನ್ನು ದವಡೆಯಲ್ಲಿ ಒತ್ತರಿಸಿಕೊಂಡಿದ್ದ ನಂಜವ್ವ

"ಶಾಮಪ್ನೋರು ಉಟ್ಟಿದ ಅಬ್ಬಾನೇ ಇಂಗೆ ಮಾಡಿದ ಮೇಲೆ ಮಗಳ ಮದುವೆ ಇನ್ನೆಂಗೆ ಮಾಡಾರೋ!" ಎಂದಳು.

"ಅವರಿಗೇನವ್ವ ಕಡಿಮೆ. ಸಿವ ಕೊಟ್ಟವ್ನೆ. ಮಾಡ್ತಾರೆ!" ಎಂದಳು ಮಾದವ್ವ.

ಆ ದಿನ ವೀಣಾ ಎಲ್ಲರ ಕಣ್ಣುಗಳಿಗೂ ಹಬ್ಬವನ್ನುಂಟು ಮಾಡುವಂತೆ ಓಡಾಡುತ್ತಿದ್ದಳು. ಚಮಕಿಯ ಕೆಲಸ ಮಾಡಿದ್ದ ಕಪ್ಪು ಸಿಲ್ಕಿನ ಲಂಗ, ಬಿಳೀ ಸಿಲ್ಕಿನ ಪೈಜಾಮ ಹಾಕಿಕೊಂಡಿದ್ದ ವೀಣಾ ತುಂಬಾ ಮುದ್ದಾಗಿ ಕಾಣುತ್ತಿದ್ದಳು. ಕಪ್ಪು ಸಿಲ್ಕಿನ ಮೇಲೆ ಅವಳು ಧರಿಸಿದ್ದ ಮುತ್ತು, ಕೆಂಪಿನ ನೆಕ್‌ಲೇಸು ಎದ್ದು ಕಾಣುತ್ತಿತ್ತು. ಕಿವಿಯಲ್ಲಿ ಕಮಲದ ಹೂ ಅರಳಿ ನಿಂತು ತೂಗಾಡುತ್ತಿತ್ತು. ಮೀರ, ಶಾಮುವಿಗೆ ಆ ದಿನ ಎಷ್ಟು ಪೂರಕೆಗಳನ್ನು ಸುಟ್ಟರೂ ತೃಪ್ತಿಯಿಲ್ಲ. ಮಗಳ ಚೆಲುವು ನೋಡಿ ತಾಯಿಯೆದೆ ಹಿಗ್ಗಿತು.

* * *

ಮೀರ ಮನೆಯಲ್ಲಿ ಆಗಾಗ್ಗೆ ವೀಣಳಿಗೆ ಪಾಠ ಹೇಳುತ್ತಿದ್ದಳು. ಮಗಳನ್ನು ಎತ್ತಿ ಮೇಜಿನ ಮೇಲೆ ಕೂರಿಸಿ, "ಕೈ ಕಟ್ಟು ಚಿನ್ನ' ಎಂದಾಗ ವೀಣಾ ಎದೆಯ ಮೇಲೆ ಕೈಕಟ್ಟಿ ತಾಯಿಯ ಕಡೆ ನೋಡುತ್ತಿದ್ದಳು.

"ಹೇಳು. ಒಂದು, ಎರಡು...."

ವೀಣಾ ಮುದ್ದುಮುದ್ದಾಗಿ ಹೇಳುತ್ತಿದ್ದಳು. "ಒಂಡು.... ಎಲಡು.... ಐದು..."

"ಊಹ್ಞೂ, ತಪ್ಪು. ಎರಡಾದ ಮೇಲೆ ಮೂರು.

"ನಾಕು."

"ನಿಮ್ಮ ಮಗಳ ಜಾಣತನವನ್ನು ನೋಡಿ ಬನ್ನಿ."

ಮೀರ ಶಾಮುವನ್ನು ಉತ್ಸುಕತೆಯಿಂದ ಕೂಗಿದಳು. ಏನೋ ಕೆಲಸ ಮಾಡುತ್ತಿದ್ದ ಶಾಮು ಹೆಂಡತಿಯ ಕೂಗು ಕೇಳಿ ಬಂದು "ಏನು ಜಾನಿ?" ಎಂದ.

"ನಿಮ್ಮ ಮಗಳು ಒಂದು, ಎರಡು, ಮೂರು.... ಹೇಳುತ್ತಾಳೆ ಕೇಳಿ.

"ಅವಳು ಹೇಳುವುದನ್ನು ನಾನು ಕೇಳಬೇಕಾದರೆ ಜಾನಿ ನನಗೆ ಲಂಚ ಕೊಡಬೇಕು" ಮೀರ ಅಕ್ಕರೆಯಿಂದ ಮಗಳ ಕಡೆ ನೋಡಿ

"ವೀಣಾ, ಅಣ್ಣಂಗೆ ಮುತ್ತು ಕೊಟ್ಟರೆ ನೀನು ಒಂದು, ಎರಡು ಹೇಳುವುದು ಕೇಳುತ್ತಾರೆ" ಎಂದಳು.

ವೀಣಾ ತನ್ನೆರಡು ಕೈಗಳನ್ನೂ ಶಾಮುವಿನ ಕೊರಳಿನ ಸುತ್ತ ಹಾಕಿ ಕೆನ್ನೆಗೆ ಮುದ್ದಿಟ್ಟಳು.

"ಈ ಮುತ್ತು ಚೆನ್ನಾಗಿಲ್ಲ. ತುಂಬಾ ಖಾರ."

ವೀಣಾ ಮತ್ತೊಂದು ಸಲ ಮುತ್ತಿಟ್ಟಳು.

"ಇದು ಹುಳಿ. ಬೇರೆ ಕೊಡಮ್ಮ ಮರಿ."

"........"

"ಇದು ಸಪ್ಪೆ. ನನಗೆ ಸಿಹಿಯಾಗಿರುವುದು ಬೇಕು."

ತಂದೆ ಮಗಳ ಸರಸವನ್ನು ನೋಡುತ್ತಿದ್ದ ಮೀರ

"ಮಗೂನ ಸುಮ್ಮನೆ ಪೀಡಿಸಬೇಡಿ" ಎಂದಳು.

ವೀಣಾ ಶಾಮುವನ್ನು ತೃಪ್ತಿಗೊಳಿಸಿ ಮಗ್ಗಿ ಹೇಳಿದಳು.

ಎರಡು ವರ್ಷಗಳು ಗಾಳಿಯಲ್ಲಿ ಹಾರಿ ಹೋಗುವ ಗರಿಯಂತೆ ಹಗುರವಾಗಿ ತೇಲಿಹೋದವು. ತಾಯಿ ತಂದೆಯ ಅಕ್ಕರೆಯಲ್ಲಿ ವೀಣಳಿಗೆ ಒಂದೊಂದು ದಿನವೂ ಹಬ್ಬದಂತಿತ್ತು.

ಒಂದು ದಿನ ಮೀರ ಬಾಲಬೋಧೆ ವೀಣಳ ಮುಂದಿಟ್ಟು

"ಓದು ಚಿನ್ನ" ಎಂದಳು.

"ಊಹ್ಞೂ, ನಾನು ಓದೋಲ್ಲ; ಆಟ ಆಡ್ಬೇಕು."

"ಆಮೇಲೆ ಆಡುವಿಯಂತೆ. ಈಗ ಓದು."

"ಈಗ ಬೇಡ."

"ಅಣ್ಣ ಬರಲಿ. ಹೇಳಿ ಬೈಸುತ್ತೇನೆ."

ವೀಣಾ ತನ್ನ ಕೆನ್ನೆಗಳಲ್ಲಿ ಗುಳಿ ಮೂಡುವಂತೆ ನಕ್ಕು "ಅಣ್ಣ ಒಳ್ಳೆಯವನು. ನನ್ನ ಬೈಯೋದಿಲ್ಲ" ಎಂದಳು.

"ನಾನೇ ಹೊಡೆಯುತ್ತೀನಿ."

"ಹೊಡಿ ನೋಡೋಣ."

ವೀಣಾ ಉಕ್ಕಿಬರುವ ಪ್ರವಾಹದೆದುರಿನ ಬಂಡೆಯಂತೆ ಕುಳಿತಳು.

"ಈ ಮಗೂನ ಏನು ಮಾಡಲಮ್ಮ" ಎಂದು ವೀಣಳನ್ನು ಮುದ್ದಿಸಿ "ಆಡು ಹೋಗು" ಎಂದಳು.

"ನೀನೂ ಬಾ.

"ನಿನಗೆ ಹೊಸ ತರಹಾ ಲಂಗ ಹೊಲೆಯಬೇಕು. ಕತ್ತರಿಸಿಟ್ಟಿದ್ದೀನಿ. ನೀನೇ ಆಡಮ್ಮ."

"ನೀನು ಬಂದರೆ ನಾನು ಆಟವಾಡುವುದು."

ಮೀರ ಮಗಳೊಡನೆ ಆಟವಾಡಲು ಹೊರಟಳು. ವೀಣಾ ಮಂಚದ ಸಂದಿಯಲ್ಲಿ ಅಡಗಿ "ಚೂಟ್" ಎಂದಳು. ಮೀರ ಅತ್ತಿತ್ತ ಹುಡುಕುವವಳಂತೆ ನಟಿಸಿ,

"ನಾನು ಸೋತೆ ಮರಿ" ಎಂದು ಕೂಗಿದಳು.

ವೀಣಾ ಮಂಚದ ಸಂದಿಯಿಂದೀಚೆಗೆ ಬಂದು ನಕ್ಕಳು.

ತಲೆಗೆ ಕೊಬ್ಬರಿ ಎಣ್ಣೆ ಹಚ್ಚಿಕೊಳ್ಳುತ್ತ ಶಾಮು ರೂಮಿನೊಳಗೆ ಬಂದ. ಕನ್ನಡಿಯ ಮುಂದೆ ನಿಂತು ಕ್ರಾಪು ಬಾಚಿಕೊಂಡು ಶಿಳ್ಳೆ ಹಾಕಿ,

"ಜಾನಿ, ಏನ್ಮಾಡ್ತಾ ಇದೀಯಮ್ಮಾ?" ಎಂದ.

"ಆಟ ಆಡ್ತಿದೀನಿ ಅಣ್ಣ."

"ನಾನೂ ಬರಲೇ?"

"ಬಾ."

ವೀಣಾ ಅವಿತುಕೊಂಡಳು. ಶಾಮು ಮೀರ ಹುಡುಕಿದಂತೆ ಮಾಡಿ 'ಸೋತೆ' ಎಂದರು. ವೀಣಾ ಈಚೆಗೆ ಬಂದು ಚಪ್ಪಾಳೆ ತಟ್ಟುತ್ತ "ನಾನೇ ಗೆದ್ದೆ" ಎಂದಳು.

"ಗೆದ್ದವರು ಸೋತವರಿಗೆ ಏನಾದರೂ ಕೊಡಬೇಕು."

ಶಾಮು ವೀಣಳೆತ್ತರಕ್ಕೆ ತನ್ನ ತಲೆ ತಂದು ಹೇಳಿದ. ವೀಣಾ ಮುದ್ದಿಟ್ಟು ತಾಯಿಯ ಕಡೆ ತಿರುಗಿ "ಅಮ್ಮ ನಿಂಗೆ?" ಎಂದಳು.

"ನೀನು ನನಗೆ ಕೊಟ್ಟಿರುವುದನ್ನು ನಾನು ಅಮ್ಮನಿಗೆ ಕೊಡುತ್ತೇನೆ" ಎನ್ನುತ್ತ ಶಾಮು ಮೀರಳನ್ನು ಹತ್ತಿರಕ್ಕೆಳೆದುಕೊಂಡ.

ವೀಣಳ ಲಂಗಗಳು ಮೊಣಕಾಲ ಮೇಲೇರಿ 'ವೀಣಾ ಬೆಳೆದಿದಾಳೆ; ಅವಳ ಸುಂದರ ಕಾಲುಗಳನ್ನು ನಾವು ಮುಚ್ಚಲಾರೆವು' ಎಂದು ಕೂಗಿ ಹಾರಾಡಿದವು. ಅವಳ ಸಿಲ್ಕಿನ ಪೈಜಾಮಾ, ಬನೀನುಗಳು ದಿನದಿನಕ್ಕೆ ಕಿರಿದಾದವು.

ಐದು ವರ್ಷದ ವೀಣಾ ತಾಯಿಯ ಶಿಕ್ಷಣದಿಂದ ಇಂಗ್ಲಿಷ್, ಕನ್ನಡ ಅಕ್ಷರಗಳನ್ನೂ, ಅನೇಕ ಪದ್ಯಗಳನ್ನೂ, ಸುಲಭವಾದ ಲೆಕ್ಕಗಳನ್ನೂ ಮಾಡಲು

ಕಲಿತಿದ್ದಳು. ಐದು ವರ್ಷಗಳು ಮೀರ, ಶಾಮುವಿಗೆ ಐದು ಚಿರ ವಸಂತಮಾಸಗಳಾಗಿದ್ದವು.

'ವೀಣಾ....ವೀಣಾ.... ಹಾಲು ಕುಡಿ ಬಾಮ್ಮಾ."

ಮೀರ ಕೈಲಿ ಹಾಲಿನ ಬಟ್ಟಲು ಹಿಡಿದು ವೀಣಳನ್ನು ಕೂಗತೊಡಗಿದಳು. ವೀಣಾ ಮುಖ ದಪ್ಪಗೆ ಮಾಡಿಕೊಂಡು ಹಳೆಯ ಸಾಮಾನುಗಳನ್ನು ತುಂಬಿದ್ದ ರೂಮಿನಲ್ಲಿದ್ದ 'ಪ್ರಾಮ್'ನೊಳಗೆ ತಾಯಿಗೆ ಕಾಣಿಸದಂತೆ ಕಾಲು ಮುದುರಿಕೊಂಡು ಮಲಗಿದ್ದಳು. ಎರಡು ಮೂರು ಬಾರಿ ಕೂಗಿದರೂ ವೀಣಾಳಿಂದ ಉತ್ತರ ಬರಲಿಲ್ಲ.

"ವೆಂಕಮ್ಮನವರೇ, ವೀಣಾನ ನೋಡಿದಿರಾ?"

"ಇಲ್ಲ. ಅಡಿಗೆ ಮನೆಯೊಳಗೆ ಅವಳು ಬಂದೇ ಇಲ್ಲ."

"ಬೋರಾ....ಬೋರಾ.... ಮಗೂನ ನೋಡಿದ್ದೆಯೇನೋ?"

ಸೋಫಾ, ಕುರ್ಚಿಯ ಧೂಳು ಹೊಡೆಯುತ್ತಿದ್ದ ಬೋರ "ಇಲ್ಲ ತಾಯಿ" ಎಂದ.

ಮೀರ ಗಾಬರಿ ಕೋಪದಿಂದ ಹೇಳಿದಳು: "ಇಲ್ಲಾಂತ ರಾಗ ತೆಗೆಯೋಕೆ ಬದಲು ಹುಡುಕಬಾರದೇ? ಜೋಯಿಸರ ಮನೆಗೆ ಹೋಗಿದಾಳೇನೋ ನೋಡಿಕೊಂಡು ಬಾ."

ಬೋರ ಐದು ನಿಮಿಷದಲ್ಲೇ ಹಿಂತಿರುಗಿ ಬಂದು "ಅಲ್ಲಿಲ್ಲ ತಾಯಿ" ಎಂದ.

"ಏನು ಗತಿಯೋ? ರಾಯರನ್ನು ಬೇಗ ಕರೆದುಕೊಂಡು ಬಾ. ಎಲ್ಲಿ ಹೋದಳು? ಒಂದು ದಿನವೂ ನನಗೆ ಹೇಳದೇ ಹೋದವಳಲ್ಲ."

ಮೀರಳ ದನಿ ನಡುಗುತ್ತಿತ್ತು. ಕಣ್ಣಿನಲ್ಲಿ ನೀರು ಹನಿಯಾಗಿ ತುಂಬುತ್ತಿತ್ತು. ಬೋರನ ಸಂದೇಶದಿಂದ ಭೀತನಾದ ಶಾಮು ಮನೆಗೆ ಬಂದ.

"ಎಲ್ಲೂ ಹೋಗಿರಲಾರಳು. ಮನೆಯಲ್ಲೇ ಇರಬೇಕು" ಎಂದು ಶಾಮು ಮನೆಯನ್ನೆಲ್ಲಾ ಶೋಧಿಸತೊಡಗಿದ. ರೂಮಿನಲ್ಲಿದ್ದ ಕೈಗಾಡಿಯಲ್ಲಿ ಬೋರಲಾಗಿ ಮಲಗಿದ್ದ ಮಗಳನ್ನು ನೋಡಿ ಶಾಮುವಿಗೆ ಹೃದಯ ಹಿಂಡಿದ ಹಾಗಾಯಿತು.

"ಜಾನೀ" ಎಂದು ಮೃದುವಾಗಿ ಕೂಗಿದ. ವೀಣಾ ಮಾತನಾಡಲಿಲ್ಲ.

"ಯಾರೇನು ಮಾಡಿದರಮ್ಮಾ?" ಎಂದು ಮಗಳನ್ನು ಎತ್ತಿಕೊಂಡು ಲಂಗದ ಧೂಳು ಕೊಡವಿ ಹೊರಗೆತ್ತಿಕೊಂಡು ಬಂದ. ಮಗಳನ್ನು ನೋಡಿ ಮೀರಳ ಕಂಬನಿ ಆರಿತು.

"ಎಲ್ಲಿದ್ದೆ ಮರೀ. ಒಂದು ಗಳಿಗೇಲಿ ಹೃದಯ ಒಡೆದು ಹಾಕಿದ್ದೆಯಲ್ಲಾ. ಹಾಲು ಕುಡಿಯಮ್ಮ" ಎನ್ನುತ್ತ ಬಿಸಿಯಾಗಿದ್ದ ಹಾಲನ್ನು ತಂದು ಎದುರಿಗೆ ಹಿಡಿದಳು.

ವೀಣಾ ಶಾಮುವಿನ ಭುಜದಲ್ಲಿ ಮುಖ ಮರೆಸಿ "ನನಗೆ ಹಾಲು ಬೇಡ" ಎಂದಳು.

"ಇನ್ನೇನು ಬೇಕು?"

"ನನಗೆ ಕಾಫಿ ಬೇಕು. ಅಮ್ಮನ್ನ ಕಾಫಿ ಕೊಡು ಅಂದರೆ ಬೇಡ ಅನ್ತಾಳೆ."

ಶಾಮು ಅವಳ ತಲೆ ಸವರುತ್ತ ಹೇಳಿದ: "ಕಾಫಿ ಬೇಡ ಚಿನ್ನ. ಅದು ಆರೋಗ್ಯಕ್ಕೆ ಒಳ್ಳೆಯದಲ್ಲ."

"ಹ್ಞೂ. ಮತ್ತೆ ಅಮ್ಮ ನೀನು ಅದನ್ನೇ ಕುಡೀತೀರಲ್ಲ."

"ನನಗೆ ಅಮ್ಮನಿಗೆ ನಿನ್ನಷ್ಟು ಮಗುವಾಗಿದ್ದಾಗಿನಿಂದಲೂ ಕಾಫಿ ರೂಢಿಯಾಗಿದೆ. ಅದನ್ನು ಈಗ ಬಿಡೋದಕ್ಕೆ ಆಗೋದಿಲ್ಲ ಜಾನಿ."

"ಊಹ್ಞೂ. ನೀವೇನು ಕುಡೀತೀರೋ ನನಗೂ ಅದೇ ಬೇಕು. ಹಾಲು ನನಗೆ ಬೇಡ."

ಮೀರ ಹೇಳಿದಳು: "ನಾನು, ಅಣ್ಣ ಇವತ್ತಿನಿಂದ ಹಾಲನ್ನೇ ಕುಡಿಯುತ್ತೇವೆ."

ದಂಪತಿಗಳು ಮಗಳಿಗಾಗಿ ಹಾಲನ್ನು ರೂಢಿ ಮಾಡಿಕೊಳ್ಳಬೇಕಾಯಿತು.

ಸಂಜೆ ವಾಕಿಂಗಿಗೆ ಹೋಗಲು ಮೀರ ವೀಣಳನ್ನು ಅಲಂಕರಿಸುತ್ತಿದ್ದಳು. ಅವಳ ಗುಂಗುರು ಕೂದಲನ್ನು ಬ್ರಷ್ಷಿನಿಂದ ಸ್ವಲ್ಪ ಓರಣ ಮಾಡಿ 'ಬಾಬ್'ನಂತೆ ಮಾಡಿ ಬೆನ್ನು, ಭುಜದ ಮೇಲೆ ಹಾರಾಡಲು ಬಿಟ್ಟು ಹಿಮ್ಮಡಿಯನ್ನು ಮುಚ್ಚುವ ನೀಲಿ, ಹಳದಿ ಬೆರೆತ ರೇಷ್ಮೆ ಲಂಗ ಹಾಕಿ, ಸೊಂಟವನ್ನು ಬಿಗಿಯಾಗಿ ಹಿಡಿಯುವ ಅದೇ ಬಣ್ಣದ ಬನೀನು ಹಾಕಿದಳು. ಕಿವಿಯಲ್ಲಿದ್ದ ಕಮಲದ ಹೂವಿಗೂ, ಕೊರಳಿನಲ್ಲಿದ್ದ ದ್ರಾಕ್ಷಿಬಳ್ಳಿಯ ನೆಕ್‌ಲೇಸಿಗೂ ಸ್ಪರ್ಧೆಯೇ ನಡೆಯುತ್ತಿತ್ತು. ಅವಳ ಪುಟ್ಟ ಪಾದವನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಕಪ್ಪು ಬೂಡ್ಸು ಹಾಕಿ, ಕೆನ್ನೆ ಹಿಂಡಿ, ನೆಟಿಕೆ ಮುರಿದು,

"ಹೋಗು ಚಿನ್ನ, ಅಣ್ಣನಿಗೆ ತೋರಿಸಿ ಅವರನ್ನು ಕರೆದುಕೊಂಡು ಬಾ" ಎಂದಳು.

ಮೂವರೂ ಗಾಳಿ ಸಂಚಾರಕ್ಕೆ ಹೊರಟರು. ಹಳ್ಳಿಯ ಹೆಂಗಸರು ಪ್ರತಿ ದಿನವೂ ಒಂದೊಂದು ಬಗೆಯ ಅಲಂಕಾರ ಮಾಡಿಕೊಂಡು ಚಿಕ್ಕ ಉಮೆಯಂತೆ ಹೊರಡುತ್ತಿದ್ದ ವೀಣಳನ್ನು ಮೆಚ್ಚುಗೆಯಿಂದ ನೋಡುತ್ತಿದ್ದರು. ವೀಣಾ, ಮೀರ, ಶಾಮುವಿನ ನಡುವೆ ಇಬ್ಬರ ಕೈಯನ್ನು ತನ್ನ ಪುಟ್ಟ ಕೈಗಳಲ್ಲಿ ಹಿಡಿದು ಬರುತ್ತಿದ್ದಳು. ಹಳ್ಳಿಯನ್ನು ಒಂದು ಸುತ್ತು ಹಾಕಿ ಕೆರೆಯ ಬಳಿಯಲ್ಲಿದ್ದ ಚಪ್ಪಡಿ ಕಲ್ಲಿನ ಮೇಲೆ ಮೂವರೂ ಕುಳಿತರು. ಮೀರ, ಶಾಮು ಮಾತನಾಡತೊಡಗಿದರು. ಪ್ರತಿ ದಿನವೂ ಸಾವಿರ ಪ್ರಶ್ನೆಗಳನ್ನು ಹಾಕುತ್ತಿದ್ದ ವೀಣಾ ಇಂದು ಮೌನವಾಗಿದ್ದಳು. ನಸುಗತ್ತಲಾದೊಡನೆ ಮೀರ ಎದ್ದು,

"ಮನೆಗೆ ಹೋಗೋಣ ಬನ್ನಿ. ವೀಣಾ ಸ್ವೆಟರು ಸಹ ಹಾಕಿಕೊಂಡಿಲ್ಲ. ತಂಗಾಳಿ ಬೀಸುತ್ತಿದೆ" ಎಂದಳು.

"ಅಣ್ಣ."

ವೀಣಳ ದನಿ ಸೋತಿದ್ದಂತೆ ಭಾಸವಾಯಿತು.

"ಏನು ಜಾನಿ?"

"ನಂಗೆ ನಡೆಯೋಕೆ ಕಾಲು ನೋಯುತ್ತಿದೆ."

ಶಾಮು ಚಪ್ಪಡಿಯ ಕಲ್ಲಿನ ಮೇಲೆ ಕುಳಿತಿದ್ದ ವೀಣಳನ್ನು ಎತ್ತಿ ಭುಜದ ಮೇಲೆ ಮಲಗಿಸಿಕೊಂಡು ತನ್ನ ಟವಲನ್ನು ಅವಳಿಗೆ ಹೊದಿಸಿದ.

ಮನೆ ಸೇರುವ ಹೊತ್ತಿಗೆ ವೀಣಳಿಗೆ ನಿದ್ದೆ ಬಂದಿತ್ತು. ಮೀರ ಮಗಳ ಹಾಸಿಗೆ ಕೊಡವಿ ಹಾಸಿ, ಮಗಳನ್ನು ಮಲಗಿಸಿ ಬೆಚ್ಚಗೆ ಹೊದಿಸಿದರು. ವೆಂಕಮ್ಮ ನವರು ಮೂವರಿಗೂ ತಟ್ಟೆ ಹಾಕಿದ್ದರು.

ಮೀರ ಒಳಗೆ ಬಂದು ಸಾಲಾಗಿದ್ದ ಮೂರು ತಟ್ಟೆಗಳನ್ನು ನೋಡಿ,

"ವೀಣಳ ತಟ್ಟೆ ತೆಗೆದುಬಿಡಿ. ಅವಳಾಗಲೇ ನಿದ್ದೆ ಮಾಡಿದಳು. ಹಾಲನ್ನು ಒಲೆಯ ಮೇಲೆ ಇಟ್ಟಿರಿ. ಆಮೇಲೆ ಹಾಲು ಕೊಡುತ್ತೇನೆ" ಎಂದಳು.

ಗಂಡ ಹೆಂಡತಿಯ ನಡುವೆ ಹೆಚ್ಚು ಮಾತಿಲ್ಲದೇ ಊಟ ನಡೆಯಿತು. ವೀಣಳಿದ್ದಿದ್ದರೆ ತಾಯಿ, ತಂದೆಯನ್ನು ಪ್ರಶ್ನಿಸುತ್ತ, ಮುದ್ದು ಮಾತುಗಳಿಂದ ನಗಿಸುತ್ತ, ವಿನೋದವಾಗಿ ಕಾಲ ಕಳೆಯುತ್ತಿತ್ತು. ನಡುವೆ ವೀಣಳಿಲ್ಲದ ಖಾಲಿ ಜಾಗ ಸಪ್ಪೆಯಾಗಿದ್ದಂತೆ ಊಟವೂ ಸಪ್ಪೆಯಾಗಿತ್ತು.

ಮೀರ ತನ್ನ ಕೆಲಸಗಳನ್ನೆಲ್ಲಾ ತೀರಿಸಿಕೊಂಡು ಕೈಲಿ ಹಾಲಿನ ಬಟ್ಟಲು ಹಿಡಿದು "ವೀಣಾ" ಎಂದಳು. ವೀಣಳಿಗೆ ಎಚ್ಚರವಾಗಲಿಲ್ಲ.

"ಹಾಲು ಕುಡಿದು ಮಲಗಮ್ಮ" ಎನ್ನುತ್ತ ಮೀರ ಮಗಳ ಹಣೆ ಸವರಿದಳು.

ಮೀರಳ ಕೈ ಸ್ತಬ್ಧವಾಗಿ ಪುನಃ ಅವಳ ಹಣೆಯ ಮೇಲೆ ನಿಧಾನವಾಗಿ ಚಲಿಸಿತು. ಬಲಗೈಲಿದ್ದ ಹಾಲಿನ ಬಟ್ಟಲನ್ನು ನೆಲದ ಮೇಲಿಟ್ಟು ಶಾಮುವಿನ ಬಳಿಗೆ ಬಂದು "ಮಗೂಗೆ ಜ್ವರ ಬಂದಿರುವ ಹಾಗಿದೆ" ಎಂದಳು.

ಶಾಮು ಎದ್ದು ಬಂದು ವೀಣಳ ಹಣೆ, ಕೊರಳು ಮುಟ್ಟಿ ನೋಡಿದನು.

"ನಾಳೆ ಪಂಡಿತರಿಗೆ ಹೇಳಿ ಕಳುಹಿಸುತ್ತೇನೆ."

ಮೀರಳಿಗಾಗಲೇ ದುಃಖ ಉಕ್ಕಿ ಬಂದಿತ್ತು.

"ನನಗೆ ಹೆದರಿಕೆ ಆಗುತ್ತದೆ. ಪಂಡಿತರ ಔಷಧಿಗಳಲ್ಲಿ ನನಗೆ ನಂಬಿಕೆಯಿಲ್ಲ. ಮೈಸೂರಿನಿಂದ ಒಳ್ಳೆ ಡಾಕ್ಟರನ್ನು ಕರೆದುಕೊಂಡು ಬನ್ನಿ. ಎಷ್ಟು ದುಡ್ಡಾದರೂ ಚಿಂತೆಯಿಲ್ಲ."

"ನೋಡೋಣ, ಬೆಳಗಾಗಲಿ" ಎಂದ ಶಾಮು ಸಾಧಾರಣವಾದ ಜ್ವರವೆಂದು ಊಹಿಸಿ. ಮೀರ ವೀಣಳನ್ನು ಬಲವಂತದಿಂದ ಎಬ್ಬಿಸಿದಳು. ವೀಣಳ ಕಣ್ಣುಗಳು

ಕೆಂಪಾಗಿದ್ದವು.

"ಹಾಲು ಕುಡಿ ಮಗು."

"........"

"ಸ್ವಲ್ಪ ಕುಡಿಯಮ್ಮ."

"ಬೇಡ."

ಮೀರಳ ಕಣ್ಣು ವೀಣಳ ನೆಕ್‌ಲೇಸಿನ ಮೇಲೆ ನಾಟಿತು."

"ಎಲ್ಲಿ ಚಿನ್ನ, ಸರ ತೆಗೆದುಬಿಡುತ್ತೇನೆ."

"ಬೇಡ."

"ಹಾಕಿಕೊಂಡೇ ಮಲಗಿದರೆ ಮುತ್ತು-ಕೆಂಪು ಉದುರಿಹೋಗಬಹುದು."

ವೀಣಾ ತನ್ನ ಸರದ ಕಡೆಗೊಮ್ಮೆ ನೋಡಿ 'ಊಹ್ಞೂ. ಅದು ನನ್ನ ಕತ್ತಿನಲ್ಲೇ ಇರಲಿ. ತೆಗೆಯಬೇಡ" ಎಂದಳು.

"ಇರಲಿ ಬಿಡು" ಎಂದ ಶಾಮು.

ಬೆಳಗಾದರೂ ವೀಣಳ ಜ್ವರ ಇಳಿಯಲಿಲ್ಲ. ಒಂದೇ ದಿನದಲ್ಲಿ ಬೆಂಕಿಯಲ್ಲಿ ಬಿದ್ದ ಹೂವಿನಂತೆ ವೀಣಾ ಬಾಡಿ ಹೋಗಿದ್ದಳು. ಶಾಮು ಪಂಡಿತರನ್ನು ಕರೆಸಿ ಕಷಾಯ ಕೊಡಿಸಿದ. ಎರಡನೆಯ ದಿನವೂ ಜ್ವರ ಆರಲಿಲ್ಲ. ಮೀರ ಏನು ಮಾಡಲೂ ತೋಚದೆ ಮಗಳ ಹಾಸಿಗೆಯ ಬಳಿ ಕುಳಿತುಬಿಟ್ಟಿದ್ದಳು. ಶಾಮು ಅವಳ ಬಳಿ ನಿಂತು ಕೇಳಿದ:

"ಏನು ಮಾಡಲಿ ಮೀರಾ?"

"ಮೈಸೂರಿಗೆ ಹೋಗಿ ಡಾಕ್ಟರನ್ನು ಕರೆದುಕೊಂಡು ಬನ್ನಿ.

"ನನಗೆ ಗೊತ್ತಾಗಲಿಲ್ಲ ಮೀರಾ. ಸಾಧಾರಣವಾದ ಜ್ವರ ಇರಬಹುದು ಎಂದುಕೊಂಡಿದ್ದೆ. ಆದುದರಿಂದ ವಾಸಿಯಾಗಬಹುದೇನೋ ಎಂದು ಸುಮ್ಮನಾದೆ."

"ಅಮ್ಮ, ಅಣ್ಣ ಎಲ್ಲಿಗೆ ಹೋಗ್ತಾರೆ?" ವೀಣಾ ಕೇಳಿದಳು.

"ಮೈಸೂರಿಗೆ ಹೋಗಿ ಡಾಕ್ಟರನ್ನು ಕರೆದುಕೊಂಡು ಬರುತ್ತಾರೆ ಚಿನ್ನ."

"ನನಗೆ ಹಣ್ಣು, ಗೊಂಬೆ ಬೇಕಣ್ಣಾ."

"ನಿನಗೆ ಬೇಕಾದುದನ್ನೆಲ್ಲಾ ತರುತ್ತೇನೆ. ಆದರೆ ನೀನು ಜಾಣೆಯ ಹಾಗೆ ಔಷಧಿ ಕುಡಿಯಬೇಕು."

ಶಾಮು ಆತುರದಿಂದ ಊಟ ಮಾಡಿ ಸ್ಟೇಷನ್ನಿಗೆ ಹೊರಟ. ಮೀರ ಮಗಳ ಹಾಸಿಗೆ ಬಿಟ್ಟು ಕದಲಲಿಲ್ಲ. ವೆಂಕಮ್ಮನವರು ಮೀರಳನ್ನು ಎರಡು ಮೂರು ಬಾರಿ ಊಟಕ್ಕೆಬ್ಬಿಸಿ ವಿಫಲರಾದರು. ಮೀರ ಗಲ್ಲಕ್ಕೆ ಕೈಕೊಟ್ಟು ಮಗಳ ಕಂದಿದ ಮುಖವನ್ನೇ ನೋಡುತ್ತ ಕುಳಿತಿದ್ದಳು. ಆಗಾಗ್ಗೆ ಅವಳ ಕಣ್ಣು ವೀಣಾ

ಹಾಕಿಕೊಂಡಿದ್ದ ನೆಕ್‌ಲೇಸಿನ ಮೇಲೆ ಬೀಳುತ್ತಿತ್ತು.

"ಸರ ತೆಗೆದುಬಿಡುತ್ತೇನೆ ವೀಣಾ. ಅದು ಕೊರಳಿಗೆ ಒತ್ತಿ ನೋವಾಗಬಹುದು."

"ಬೇಡಮ್ಮ. ಈ ಸರ ನನಗೆ ತುಂಬಾ ಆಸೆ. ಅದು ಯಾವಾಗಲೂ ನನ್ನ ಹತ್ತಿರಾನೇ ಇರಲಿ."

ವೆಂಕಮ್ಮನವರು ತಟ್ಟೆಯಲ್ಲಿ ಅನ್ನ ಕಲೆಸಿ ರೂಮಿಗೆ ತಂದು ಮೀರಳ ಬಳಿ ಇಟ್ಟು,

"ಊಟ ಮಾಡು ತಾಯಿ. ಸುಮ್ಮನೆ ಕೊರಗಬೇಡ. ಎಲ್ಲರನ್ನೂ ಭಗವಂತ ಕಾಪಾಡುತ್ತಾನೆ" ಎಂದರು.

ವೀಣಾ ತಟ್ಟೆಯ ಕಡೆ ಆಸೆಯಿಂದ ನೋಡಿ,

"ಅಮ್ಮ, ಏನಡಿಗೆ?" ಎಂದಳು.

"ಆಲೂಗೆಡ್ಡೆ ಹುಳಿ ಮಾಡಿದ್ದಾರೆ."

"ಅಮ್ಮ, ನಂಗೂ ಹಸಿವಾಗುತ್ತದೆ. ಆಲೂಗೆಡ್ಡೆ ಹುಳಿ ತಿನ್ನಬೇಕು."

"ಈಗ ಬೇಡ ಮಗು. ಜ್ವರ ವಾಸಿಯಾದ ಮೇಲೆ ನೀನು ಕೇಳಿದ ಅಡಿಗೆ, ತಿಂಡಿ ಎಲ್ಲಾ ಮಾಡಿಸಿಕೊಡುತ್ತೇನೆ" ಎನ್ನುತ್ತಾ ಮಗುವಿನ ಆಸೆಗಳನ್ನು ಹೆಚ್ಚು ಕೆರಳಿಸಲು ಆಶೆ ಪಡದೆ ತಟ್ಟೆ ತೆಗೆದುಕೊಂಡು ಅಡಿಗೆ ಮನೆಗೆ ಹೋದಳು.

ಶಾಮು ಸಂಜೆ ಟ್ಯಾಕ್ಸಿಯೊಂದರಲ್ಲಿ ಡಾಕ್ಟರೊಬ್ಬರೊಡನೆ ಹಳ್ಳಿಗೆ ಹಿಂದಿರುಗಿದ. ಡಾಕ್ಟರನ್ನು ನೋಡಿ ಮೀರಳಿಗೆ ಜೀವ ಬಂದಂತಾಯಿತು. ಡಾಕ್ಟರು ವೀಣಳನ್ನು ಪರೀಕ್ಷಿಸಿ, ಜ್ವರದ ಲಕ್ಷಣಗಳನ್ನು ತಿಳಿದುಕೊಂಡು, ಮಾತನಾಡದೆ ಹೊರಗೆ ಬಂದರು. ಶಾಮು ಕೇಳಿದ:

"ಏನಾಗಿದೆ ಡಾಕ್ಟರ್?"

"ಟೈಫಾಯಿಡ್ ಕೇಸು ಅಂತ ತೋರುತ್ತದೆ. ರಕ್ತ ತಗೊಂಡು ಹೋಗಿ ಪರೀಕ್ಷೆ ಮಾಡಬೇಕು. ಹಾಲು ಕುಡಿಸಬೇಡಿ. ಬಾಲನ್ನು ಒಡೆಸಿ, ನೀರು ಮಾತ್ರ ಕುಡಿಸಿ. ಮೋಸಂಬಿ ಹಣ್ಣಿನ ರಸ ಕುಡಿಸಬಹುದು."

ಶಾಮು ಕುಗ್ಗಿದ ದನಿಯಿಂದ ಹೇಳಿದ: "ಡಾಕ್ಟರ್, ನೀವು ಮಗುವಿಗೆ ವಾಸಿಯಾಗುವವರೆಗೂ ದೊಡ್ಡ ಮನಸ್ಸು ಮಾಡಿ ಇಲ್ಲೇ ಇದ್ದುಬಿಡಿ. ನಿಮಗೆ ಯಾವುದಕ್ಕೂ ತೊಂದರೆಯಾಗದಂತೆ ನಾನು ಏರ್ಪಾಡು ಮಾಡುತ್ತೇನೆ."

ಡಾಕ್ಟರು ಶಾಮುವಿನ ಸಲಹೆ ಕೇಳಿ ಹಿಂದೆ ಮುಂದೆ ನೋಡಿದರು.

"ನನಗೆ ಇಲ್ಲೇ ಇರಲು ಸಾಧ್ಯವಿಲ್ಲ. ಎರಡು ದಿನ ನಾನು ಕೊಟ್ಟಿರುವ ಔಷಧಿ ಕೊಡಿ, ನಾನು ಹೇಳಿದ ಆಹಾರ ಕೊಡಿ. ಇವತ್ತು ರಕ್ತ ತಗೊಂಡು ಹೋಗಿ, ಪರೀಕ್ಷೆ ಮಾಡಿ ನಾಡಿದ್ದು ಪುನಃ ಬರುತ್ತೇನೆ. ಆಗಲೂ ಮಗು ಇದೇ ಸ್ಥಿತಿ

ಯಲ್ಲಿದ್ದರೆ ಆಮೇಲೆ ನೋಡಿಕೊಳ್ಳೋಣ."

ಶಾಮು ಡಾಕ್ಟರಿಗೆ ಹೆಚ್ಚು ಹೇಳುವ ಹಾಗಿರಲಿಲ್ಲ. ಅವರನ್ನು ಕರೆದು ತಂದ ಟ್ಯಾಕ್ಸಿಯಲ್ಲೇ ವಾಪಸ್ಸು ಕಳುಹಿಸಿ ಒಳಗೆ ಬಂದ.

"ಅಣ್ಣಾ, ನನಗೆ ಹಣ್ಣು, ಬೊಂಬೆ ತಂದೆಯಾ?"

ಶಾಮು ತಾನು ತಂದಿದ್ದ ಎರಡು ಡಜನ್ ಮೋಸಂಬಿಯನ್ನೂ, ಬಟ್ಟೆಯಿಂದ ಮಾಡಿದ ಜೂಲು ನಾಯಿ, ರೆಕ್ಕೆ ಅಲುಗಿಸುವ ಕೋಳಿಯನ್ನೂ ಅವಳ ಹಾಸಿಗೆಯ ಮೇಲಿಟ್ಟ.

"ಈ ಕೋಳಿ ತುಂಬಾ ಚೆನ್ನಾಗಿದೆ ಅಣ್ಣಾ. ಅಮ್ಮಾ ನಂಗೆ ತುಂಬಾ ಹಸಿವಾಗುತ್ತದೆ. ಹಣ್ಣಿನ ರಸ ಕೊಡಮ್ಮ."

"ಈಗ ಬೇಡಮ್ಮ. ಅರ್ಧ ಗಂಟೆಯಾಗಲಿ, ಆಮೇಲೆ ಕೊಡುತ್ತೇನೆ" ಎಂದು ಮೀರ ಶಾಮುವಿನ ಕಡೆ ತಿರುಗಿ,

"ಡಾಕ್ಟರನ್ನು ಇಲ್ಲೇ ಇರಿಸಿಕೊಂಡಿದ್ದರೆ ಚೆನ್ನಾಗಿತ್ತು" ಎಂದಳು.

"ನಾನು ಇಲ್ಲೇ ಇರುವಂತೆ ಹೇಳಿದೆ. ಆದರೆ ಆತ ನಾಡಿದ್ದು ಬರುವುದಾಗಿ ಹೇಳಿ ಹೊರಟುಹೋದರು. ಹೆಚ್ಚು ಬಲವಂತ ಮಾಡುವುದು ಸಾಧ್ಯವಾಗಲಿಲ್ಲ."

ಸಂಜೆಯಾಗುತ್ತ ಬಂದಂತೆ ವೀಣಳಿಗೆ ಜ್ವರ ಹೆಚ್ಚಾಯಿತು. ಜ್ವರದ ಕಾವಿನಿಂದ ವೀಣಾ ಹಾಸಿಗೆಯ ಮೇಲೆ ಹೊರಳಾಡತೊಡಗಿದಳು. ಕೆಲವು ಬಾರಿ ಅಸಂಬದ್ಧವಾಗಿ ಮಾತನಾಡುತ್ತಿದ್ದಳು. ಮಗಳ ಸಂಕಟವನ್ನು ನೋಡಿ ಮೀರಳ ಹೃದಯಕ್ಕೆ ಬೆಂಕಿ ಹೊತ್ತಿಸಿದಂತಾಯಿತು.

ಆ ಡಾಕ್ಟರು ಜ್ವರ ವಾಸಿಯಾಗುವವರೆಗೆ ನಿಲ್ಲಬಾರದಿತ್ತೆ? ತಾನೇ ಡಾಕ್ಟರಾಗಿದ್ದರೆ ಇತರರ ಕೈ ಕಾಯುವುದರ ಬದಲು ತಾನೇ ತನ್ನ ಮಗುವಿಗೆ ಚಿಕಿತ್ಸೆ ಮಾಡಬಹುದಾಗಿತ್ತು. ತಾನು ತನ್ನ ಮಗುವಿನ ಸೇವೆ ಮಾಡುವಾಗ ಕೆಲಸದಲ್ಲಿರುವ ಶ್ರದ್ಧೆಯೊಡನೆ ಅಮಿತ ಪ್ರೇಮವೂ ಸೇರಿ ಮಗುವಿನ ಸಂಕಟವನ್ನು ಕಡಿಮೆ ಮಾಡುತ್ತಿತ್ತು. ತನ್ನ ಕರುಳಿನ ಚೂರು ಜ್ವರದಲ್ಲಿ ಬೇಯುವುದನ್ನು ನೋಡಿಯೂ ತಾನು ಈಗ ಕಲ್ಲು ಪ್ರತಿಮೆಯಂತಿರಬೇಕಾಗಿದೆ.

ವೈದ್ಯಳಾಗಬೇಕೆಂಬ ಹಂಬಲ ಮತ್ತೊಂದು ಬಾರಿ ಕೆರಳಿತು. ಹೃದಯದಲ್ಲಿ ಅತಿ ಪ್ರಯಾಸದಿಂದ ತಡೆಗಟ್ಟಿದ್ದ ಆಸೆ ಕಟ್ಟೆ ಕಿತ್ತು ಪ್ರವಾಹದಿಂದ ಹರಿಯತೊಡಗಿತು. ತನ್ನೊಡನೇ ಬೆಳೆದು ಬರುತ್ತಿದ್ದ ಆಸೆಯನ್ನು ಮೀರ ತಡೆಯುವುದು ಸಾಧ್ಯವಾಗಿರಲಿಲ್ಲ.

ಸನ್ನಿವೇಶಗಳಿಗೆ ಸೆರೆಯಾಳಾದ ಮೀರ ಬಂಧಿತ ಪಕ್ಷಿಯಂತೆ ಒದ್ದಾಡಿದಳು. ವೀಣಳ ಬೆಳದಿಂಗಳಿನಂತಹ ನಗೆಯಿಂದಲೂ, ಮುದ್ದು ಮಾತುಗಳಿಂದಲೂ

ಯಾವಾಗಲೂ ತುಂಬಿದಂತಿದ್ದ ಮನೆ, ಈಗವಳ ಮಲಗುವಿಕೆಯಿಂದ ಬರಿದಾಗಿತ್ತು. ಎರಡು ದಿನವಾದರೂ ಡಾಕ್ಟರು ಬಾರದಿದ್ದನ್ನು ನೋಡಿ ಶಾಮು ಅವರನ್ನು ಮತ್ತೆ ಕರೆದುತಂದ. ಡಾಕ್ಟರಿಗಾಗಿ ಒಂದು ಕೊಠಡಿ ತೆರವು ಮಾಡಿಕೊಟ್ಟರು.

ಹದಿನೈದು ದಿನಗಳ ಜ್ವರದಿಂದ ವೀಣಾ ಬತ್ತಿಹೋದಳು. ಗುಲಾಬಿ ಹೂವಿನಂತಿದ್ದ ಕೆನ್ನೆ ಒಣಗಿ ಬಿಳಿಚಿಕೊಂಡಿತು. ಕಣ್ಣುಗಳು ಗಾಜಿನ ಕಣ್ಣುಗಳಂತಿದ್ದವು.

ಆ ಸ್ಥಿತಿಯಲ್ಲಿಯೂ ವೀಣಾ ಕೊರಳಿನಿಂದ ಸರ ತೆಗೆಯಲು ಒಪ್ಪಿರಲಿಲ್ಲ. ಪ್ರತಿ ಗಳಿಗೆಯಲ್ಲೂ ಮೀರ, ಶಾಮು ಯಾರಾದರೊಬ್ಬರು ಅವಳ ಹಾಸಿಗೆಯ ಬಳಿ ಇರುತ್ತಿದ್ದರು. ರಾತ್ರಿ, ಹಗಲು ಹೇಗಾಗುವುದೆಂಬುದರ ಅರಿವೇ ಯಾರಿಗೂ ಇರಲಿಲ್ಲ.

ಜ್ವರ ಬಂದ ಹದಿನೇಳನೆಯ ದಿನ ವೀಣಾ ಮಾತನಾಡುವುದನ್ನೂ ನಿಲ್ಲಿಸಿದಳು. ದೈನ್ಯದಿಂದ ಆಗಾಗ್ಗೆ ತಾಯಿ, ತಂದೆಯ ಕಡೆ ನೋಡುತ್ತಿದ್ದಳು. ಆ ನೋಟ ಅವರ ಹೃದಯಗಳಿಗೆ ಬರೆ ಹಾಕುತ್ತಿತ್ತು. ಬದುಕಿನ ಹಂಬಲು ಅವಳ ಕಣ್ಣುಗಳಲ್ಲೂ ಮಿಂಚುತ್ತಿತ್ತು.'ರೋಗಿಯ ಎದುರಿಗೆ ಯಾರೂ ಕಣ್ಣೀರು ಹಾಕಬಾರದು. ಅಧೈರ್ಯದ ಮಾತುಗಳನ್ನಾಡಬಾರದು, ಅದರಿಂದ ರೋಗಿ ಎದೆಗುಂದಬಹುದು' ಎಂದು ಡಾಕ್ಟರು ಅಪ್ಪಣೆ ವಿಧಿಸಿದ್ದರು. ಮೀರ, ಶಾಮು ಅವಳ ಕಣ್ಣಿನಿಂದ ಮರೆಯಾಗಿ ಹೋಗಿ, ಅತ್ತು, ಹೃದಯ ಹಗುರ ಮಾಡಿಕೊಂಡು ಬರುತ್ತಿದ್ದರು.

ಡಾಕ್ಟರು ವೀಣಳನ್ನು ಉಳಿಸಲು ಮೃತ್ಯುವಿನೊಡನೆ ಹೋರಾಡಿದರು. ಆದರೂ ಮೀರಳಿಗೆ ಡಾಕ್ಟರು ತಮ್ಮ ರೋಗಿಯಲ್ಲಿ ಮತ್ತಷ್ಟು ಶ್ರದ್ಧೆ ತೋರಿಸಬೇಕಾಗಿತ್ತು ಎನಿಸಿತು. ತಮ್ಮ ಮಗುವನ್ನು ಅನ್ಯರಿಗೆ ಒಪ್ಪಿಸುವ ಬದಲು ತಾನೇ ಚಿಕಿತ್ಸೆ ನಡೆಸಿದ್ದರೆ ವಾಸಿಯಾಗುತ್ತಿತ್ತೇನೋ ಎಂದು ಮೀರ ಯೋಚಿಸಿದಳು.

ಹತ್ತೊಂಭತ್ತನೆಯ ದಿನ ವೀಣಳಿಗೆ ಮೈಮೇಲೆ ಎಚ್ಚರವಿರಲಿಲ್ಲ. ಶ್ವಾಸ ಎಳೆಯುವುದಕ್ಕೆ ಆರಂಭವಾಯಿತು. ಇದ್ದ ಅಲ್ಪ ಸ್ವಲ್ಪ ಭರವಸೆಯೂ ದೂರವಾಯಿತು. ಮೀರ ಐದು ವರ್ಷದ ಹುಡುಗಿಯಾಗಿದ್ದಾಗ, ತಂದೆಗೆ ಸಾವು ಸಂಕಟ ಹತ್ತಿದಾಗ, ಉಸಿರೆಳೆಯುತ್ತಿದ್ದುದು ಅವಳ ಮನಸ್ಸಿನಲ್ಲಿನ್ನೂ ಮಸುಕಾಗಿ ಉಳಿದಿತ್ತು. ವೀಣಳ ಸ್ಥಿತಿ ನೋಡಿ ಡಾಕ್ಟರು ಸಪ್ಪೆಯಾಗಿ ಹೇಳಿದರು.

"ದೇವರಿದ್ದಾನೆ."

ವೀಣಳಿಗೆ ಉಸಿರು ಎಳೆಯುತ್ತಿದ್ದಾಗ ಶಾಮು ಅವಳ ಹಾಸಿಗೆಯ ಬಳಿಯಲ್ಲಿರಲಿಲ್ಲ. ಮೀರ ಹುಚ್ಚು ಹಿಡಿದವಳಂತೆ ಶಾಮುವಿನ ಬಳಿಗೆ ಬಂದು,

"ಬೇಗ ಬನ್ನಿ. ವೀಣಾ ನಮ್ಮ ಕೈಬಿಟ್ಟು ಹೋಗುತ್ತಿದ್ದಾಳೆ" ಎಂದಳು.

ಶಾಮು "ಕ್ಷಮಿಸು, ಮೀರಾ. ಜಾನಿ ಸಂಕಟಪಡುವುದನ್ನು ನಾನು ನೋಡಲಾರೆ" ಎಂದ.

ಅದೇ ಸಂಜೆ ತಂದೆತಾಯಿಯ ಬಾಳಿನಲ್ಲಿ ನಗು ತುಂಬಿದ್ದ ವೀಣಾ ಅವರ ಬದುಕನ್ನು ಬರಿದು ಮಾಡಿ ಹೊರಟುಹೋದಳು. ಮೀರಳ ಭವಿಷ್ಯ, ಗಾಳಿ ಹೋದ ಬೆಲೂನಿನಂತೆ ಸಪ್ಪೆಯಾಗಿತ್ತು.

ಸಂಜೆ ಬೋರ ದೀಪ ಹತ್ತಿಸಲು ಬಂದಾಗ ಮನೆ ರುದ್ರಮೌನದಲ್ಲಿ ಮುಳುಗಿತ್ತು. ದೂರದಿಂದಲೇ ಮನೆಯ ಪ್ರೇತಕಳೆ ನೋಡಿ ಬೋರನ ಎದೆ ಅಳುಕಿತು. ಒಂದು ಮೂಲೆಯಲ್ಲಿ ವೆಂಕಮ್ಮನವರು ಸೆರಗಿನಿಂದ ಕಣ್ಣೊರೆಸಿಕೊಳ್ಳುತ್ತ,

"ಬೋರಣ್ಣ, ಇನ್ನೇಕೆ ದೀಪ ಹಚ್ಚುತ್ತೀಯಪ್ಪಾ, ಶಾಮಣ್ಣನ ಮನೆ ದೀಪ ಆರಿಹೋಯಿತು" ಎಂದು ಬಿಕ್ಕಿದರು.

"ರಾಯರಿಗೆ, ಅಮ್ಮಾವರಿಗೆ ಏನು ಗತಿ ವೆಂಕವ್ವಾ? ಅವರಿಗೆ ಸಮಾಧಾನ ಯೇಳೋರು ಯಾರವ್ವಾ?"

"ಭಗವಂತನೇ ಸಮಾಧಾನ ಮಾಡಬೇಕು ಕಣಪ್ಪಾ."

"ಮಗಾ ಅಂದ್ರೆ ಯೆಂಗೆ ಸಾಕಿದ್ರವ್ವಾ, ಜಾನವ್ವಂಗೆ ಏನು ಕಡಿಮೆ ಆಗಿತ್ತು? ಉಣ್ಣಾಕೆ, ಉಡೋಕೆ ಕಡಿಮೆ ಆಗಿತ್ತಾ? ಶಾಮಪ್ನೋರಿಗೆ ಒಂದು ರಾಜ್ಯಕ್ಕಾಗುವಷ್ಟು ಜಮೀನೈತೆ. ಜಾನವ್ವಂಗೆ ಇರಾಕೆ ಅಂಗೈ ಅಗಲ ಭೂಮಿ ಇರಲಿಲ್ಲವೇನವ್ವ? ಅರಸು ಮಗಳಂಗೆ ಬೆಳೆಸಿದ್ದರು. ಸಿವಂಗೆ ಕಣ್ಣಿಲ್ಲ. ನನ್ನ ಮೂರು ವರ್ಷದ ಮಗಾ ಚೆನ್ನೀಗೆ ಒಂದು ವರ್ಷದಿಂದಲೂ ಗಡ್ಡೆ ಐತೆ. ಕಷ್ಟ ನೋಡೋಕಾಗೋಲ್ಲ. ಜಾನವ್ವಂಗೆ ಬದಲಿ ಅದು ಹೋಗಬಾರದಿತ್ತೇನವ್ವ? ಶಿವಂಗೂ ತಾವರೇ ಹೂವೇ ಬೇಕೂಂತ ಕಾಣತ್ತೆ–ಕಣಿಗಲೆ ಹೂ ಅವನಿಗೆ ಬೇಡ" ಎಂದು ಕಣ್ಣಿನ ಕೊನೆಯಲ್ಲಿ ಜಿನುಗಿದ ಒಂದೆರಡು ಹನಿಯನ್ನು ತನ್ನ ಕೊಳಕು ಶರಟಿನ ತುದಿಯಿಂದ ಒರೆಸಿಕೊಂಡ.

ಶಾಮು, ಮೀರ ತನ್ನ ಜಾತಿಯವರಂತೆ ಎದೆ ಬಡಿದುಕೊಂಡು ಬಿದ್ದು ರೋಧಿಸುತ್ತಿರಬಹುದೆಂದೂಹಿಸಿ ಬೋರ ಮೀರಳಿದ್ದ ರೂಮಿನ ಬಾಗಿಲಿನಲ್ಲಿ ನಿಂತು ಇಣುಕಿ ನೋಡಿದ.

ರೂಮಿನಲ್ಲಿ ಹರಡಿದ್ದ ಅಸ್ಪಷ್ಟ ಬೆಳಕಿನಲ್ಲಿ ಜೋಯಿಸರ ಮನೆಯವರು, ಪಂಡಿತರು ತುಂಬಿಬಿಟ್ಟಿದ್ದರು. ಅವರ ನಡುವೆ ವೀಣಳ ಜೀವರಹಿತ ಕೈಯನ್ನು ತನ್ನ ಹಿಡಿಯಲ್ಲಿ ಹಿಡಿದು ಶಾಮು ಕುಳಿತಿದ್ದ. ಅವನ ಕಣ್ಣಿನಲ್ಲಿ ಒಂದು ಹನಿ ನೀರಿರಲಿಲ್ಲ. 'ಅಳುವುದಿಲ್ಲ, ಅಳುವುದಿಲ್ಲ' ಎಂದು ಬಾರಿ ಬಾರಿಗೂ ಹೇಳಿಕೊಂಡು ಅವನ ಮುಖ ಮತ್ತೆ ಬಿಗಿಯಾಗುತ್ತಿತ್ತು. ಮೀರ ಆ ಗುಂಪಿನಲ್ಲಿ ಎಲ್ಲೂ ಕಾಣಲಿಲ್ಲ.

"ಅಮ್ಮಾವರು ಎಲ್ಲಿ ವೆಂಕವ್ವ? ಕೋಣೆಯೊಳಗೆ ಇಲ್ಲ."

ಹುಚ್ಚಿ ಹಾಗೆ ಎದ್ದು ಬಂದು ಆ ರೂಮಿನೊಳಗೆ ಹೋಗಿ ಬಾಗಿಲು ಹಾಕಿಕೊಂಡ ಳಪ್ಪ. ಬಾಗಿಲು ಇನ್ನೂ ತೆಗೆದಿಲ್ಲ. ದುಃಖದಲ್ಲಿ ಏನು ಮಾಡಿಕೊಂಡುಬಿಡು ತ್ತಾಳೋ ಎಂದು ಹೋಗಿ ಎರಡು ಮೂರು ಬಾರಿ ಬಾಗಿಲು ತಟ್ಟಿದೆ. ಆದರೂ ತೆಗೆಯಲಿಲ್ಲ."

ಬೋರನಿಗೂ ದಿಗಿಲಾಯಿತು. 'ಮಗಳು ಹೋದ ದುಃಖದಲ್ಲಿ ತಾಯಿಯೂ ಆತ್ಮಹತ್ಯೆ ಮಾಡಿಕೊಂಡರೆ?' ಭೀತಿಯಿಂದ ಬಾಗಿಲ ಬಳಿ ನಿಂತು

"ಅವ್ವಾ, ರಾಯರು ಕರೀತಾರೆ" ಎಂದ. ಒಳಗಿನಿಂದ ಉತ್ತರ ಬರಲಿಲ್ಲ. ರೂಮಿನಲ್ಲಿ ಓಡಾಡುವ ಸದ್ದು ಕೇಳಿಸಿತು. ಮೀರ ಬಾಗಿಲು ತೆಗೆದು,

"ಬೋರ, ದೀಪ ಹಚ್ಚಪ್ಪ" ಎಂದಳು.

ಅವಳ ದನಿ ಸಿಡಿಯುವ ಕಿಡಿಮದ್ದಿನಂತಿತ್ತು.

ಕತ್ತಲು ನಿಧಾನವಾಗಿ ಕವಿಯುತ್ತಿತ್ತು. ಬೋರ ಲಾಂದ್ರ ಹಚ್ಚುತ್ತಲೂ ಮೀರ ತಾನೊಂದು ಲಾಂದ್ರವನ್ನು ಹಿಡಿದು ಮಗಳು ಕಲ್ಲಾಗಿ ಮಲಗಿದ್ದ ರೂಮನ್ನು ಪ್ರವೇಶ ಮಾಡಿದಳು. ಮೀರ ರೂಮನ್ನು ಪ್ರವೇಶಿಸುತ್ತಲೇ ಅಲ್ಲಿದ್ದವರೆಲ್ಲಾ ಅವಳ ಕಡೆ ತಿರುಗಿದರು. ವೀಣಳ ಬಳಿ ಕುಳಿತು ಅಳುತ್ತಿದ್ದ ವೆಂಕೂ ಮೀರ ಬಂದೊಡನೆ ತಲೆ ಎತ್ತಿದಳು. ಮೀರಳ ಕಣ್ಣಿನಲ್ಲಿ ಒಂದು ಹನಿ ನೀರಿರಲಿಲ್ಲ. ಕಣ್ಣೀರಿನ ರೂಪದಲ್ಲಿ ಪ್ರವಹಿಸಿದ ಕೋಪ ಹೃದಯದಲ್ಲಿ ಹೆಪ್ಪುಗಟ್ಟಿ ಅವಳ ಬದುಕನ್ನು ಭಾರ ಮಾಡಿತ್ತು. ಹೊರಬೀಳದ ಕಂಬನಿಯ ಬಿಸಿಯ ಕಾವಿನಿಂದ ಮೀರಳ ಕಣ್ಣುಗಳು ಅಗ್ನಿಯಂತೆ ಉರಿಯುತ್ತಿತ್ತು. ಲಾಂದ್ರದ ಮಂದಪ್ರಕಾಶ ವಿಚಿತ್ರವಾಗಿದ್ದ ಮೀರಳ ಮುಖದ ಮೇಲೆ ಕಿರಣಗಳನ್ನು ಎಸೆದು ಅವಳ ಮುಖವನ್ನು ಹುಚ್ಚಿಯಂತೆ ಮಾಡಿದ್ದವು. ಮೀರ ಮಗುವಿನ ತಾಯಿಯಾಗಿ ಬಂದು ತನ್ನೆದುರಿಗೆ ಹಾಲು ಕುಡಿಸುತ್ತಿದ್ದ ದೃಶ್ಯವನ್ನೂ, ಈಗ ಮುಂದೆ ಮಗಳು ಹಿಮದಂತೆ ಕೊರೆಯುತ್ತ ಮಲಗಿದ್ದ ರೂಮಿನಲ್ಲಿ ದೀಪ ತಂದಿಡುತ್ತಿದ್ದ ಚಿತ್ರವನ್ನೂ ವೆಂಕೂ ಹೋಲಿಸಿ ನೋಡಿದಳು. ಆದರೆ ಮೀರಳ ಕಂಬನಿಗರೆಯದ ಮುಖ ಅವಳಿಗೆ ಅರ್ಥವಾಗಲಿಲ್ಲ. 'ಕಲ್ಲು ಮನಸ್ಸು' ಎಂದು ತನ್ನೊಳಗೇ ಹೇಳಿಕೊಂಡಳು.

ಮೀರ ನಿಧಾನವಾಗಿ ಒಳಗೆ ಬಂದು ಮೇಜಿನ ಮೇಲೆ ದೀಪವಿರಿಸಿ ಮೊದಲಿ ನಂತೆಯೇ ಶಾಂತಭಾವದಿಂದ ಹೊರಗೆ ಹೊರಟಿದ್ದನ್ನು ನೋಡಿ ಇತರರಂತೆಯೇ ಶಾಮುವೂ ಚಕಿತನಾದ. ಕಳೆದ ಸುಂದರ ದಿನಗಳಿಗೂ, ಈಗಿನ ಘೋರ ದಿನಕ್ಕೂ ಯಾವ ಏರಿಳಿತವೂ ಇಲ್ಲದಂತೆ ಮೀರ ವರ್ತಿಸುತ್ತಿರುವುದನ್ನು ನೋಡಿ ದಿಗ್ಭ್ರಾಂತನಾದ.

"ತಾಯೀ, ಒಂದು ಗಳಿಗೆ ನಿಂತುಕೊಳ್ಳುತ್ತೀರಾ?"

ಜೋಯಿಸರು ಹೇಳಿದರು.

ಮೀರಳ ಕಾಲು ತಡೆಯಿತು. "ಏನು?" ಎಂದಳು. ದನಿ ಸೀಸದಂತೆ ಭಾರವಾಗಿತ್ತು.

"ಎಲ್ಲಾ ಸಿದ್ಧವಾಗಿದೆ. ಮಗೂನ ಕೊನೆಯ ಬಾರಿ ನೋಡಿಬಿಡಮ್ಮ. ಇನ್ನು ಕರೆದುಕೊಂಡು ಹೋಗುತ್ತೇವೆ."

ಜೋಯಿಸರು ವೀಣಳ ಮುಖದ ಮೇಲಿದ್ದ ಮುಸುಕನ್ನು ಸರಿಸಿದರು. ತಾಯಿ ಮಡಿಲನ್ನಪ್ಪಿ ಶಾಂತವಾಗಿ ನಿದ್ರಿಸುವ ಮಗುವಿನಂತೆ ಮಲಗಿದ್ದ ವೀಣಳ ಬಳಿ ಮೀರ ನಿಂತಳು. ಒಂದು ಗಳಿಗೆ ಮಗಳನ್ನು ಎವೆಯಿಕ್ಕದೆ ನೋಡಿ ಮಂಜಿನಂತೆ ಕೊರೆಯುತ್ತಿದ್ದ ಮಗಳ ಕೆನ್ನೆಗೆ ಮುದ್ದಿಟ್ಟು ಹಿಂದೆ ಸರಿದಳು. ವೀಣಳ ಕೊರಳಿನಲ್ಲಿದ್ದ ಮುತ್ತು ಮತ್ತು ಕೆಂಪಿನ ನೆಕಲೇಸು ಬೆಳಕಿನಲ್ಲಿ ಹೊಳೆಯಿತು.

"ಇದೇನು ತಾಯಿ?" ಎನ್ನುತ್ತ ಜೋಯಿಸರು ಕೊರಳನ್ನು ತಡಕಿದರು.

ವೀಣಳ ಕೊರಳಿನಲ್ಲಿದ್ದ ನೆಕಲೇಸು ಆಲಿಕಲ್ಲಿನಂತೆ ತಣ್ಣಗಿತ್ತು.

"ಶಾಮಣ್ಣ, ಮಗು ಕೊರಳಲ್ಲಿ ಸರ ಇದೆ. ತೆಗೆದುಬಿಡಪ್ಪಾ."

ಆ ಮಾತನ್ನು ಕೇಳಿ ಮೀರಳಿಗೆ ತಲೆ ತಿರುಗಿದಂತಾಯಿತು. ಗೋಡೆಯನ್ನು ಆಶ್ರಯಿಸಿ ನಿಂತಳು. ಶಾಮು ಮುಖ ಬೇರೆ ಕಡೆ ತಿರುಗಿಸಿ,

"ನೀವೇ ತೆಗೆದುಬಿಡಿ" ಎಂದ.

ಜೋಯಿಸರು ಸರ ತೆಗೆದು ಮೀರಳ ಕೈಗೆ ಕೊಟ್ಟರು. ಮಗಳ ಮೆಚ್ಚಿನ ಆಭರಣವನ್ನು ಮೀರ ಶೂನ್ಯವಾಗಿದ್ದ ತನ್ನ ಹೃದಯಕ್ಕೆ ಒತ್ತಿಕೊಂಡಳು.

ಮಗಳನ್ನು ಸಮಾಧಾನ ಪಡಿಸುವ ಸಲುವಾಗಿ ಧಾವಿಸಿ ಬಂದ ಕೃಷ್ಣಪ್ಪನವರನ್ನೂ, ಕಮಲಮ್ಮನವರನ್ನೂ ಮೀರ ಮುಂಬಾಗಿಲಿನಲ್ಲಿ ನಿಂತು, "ಬನ್ನಿ ದೊಡ್ಡಪ್ಪ, ಮನೇಲಿ ಎಲ್ಲರೂ ಸೌಖ್ಯವೇ?" ಎಂದು ಸ್ವಾಗತಿಸಿದಳು. ತಮ್ಮನ್ನು ಕಂಡೊಡನೆ ಮೀರ ಅತ್ತು ಕಣ್ಣೀರ ಕೋಡಿ ಹರಿಯಿಸಬಹುದೆಂದು ತಿಳಿದಿದ್ದರು ಅವರು. ಅವಳು ಯಾವ ರೀತಿ ಸಮಾಧಾನವನ್ನೂ ಅಪೇಕ್ಷಿಸಿದಂತೆ ಕಂಡುಬರಲಿಲ್ಲ. ತಾವಾಗಿ ವೀಣಳ ಸುದ್ದಿಯೆತ್ತಿ ಗಾಯವನ್ನು ಮತ್ತೆ ಕೆದಕದಂತೆ ಎಚ್ಚರಿಕೆಯಿಂದ ವರ್ತಿಸಿದರು. ಮಾತಿನ ನಡುವೆ ಬಾಯಿ ತಪ್ಪಿಯಾದರೂ ವೀಣಳ ಹೆಸರು ಬರಲಿಲ್ಲ. ವೀಣ ಆ ಮನೆಯಲ್ಲಿದ್ದಳು ಎಂಬಂಶವನ್ನೇ ಮೀರ ಮರೆತಂತಿತ್ತು.

ಎರಡು ದಿನಗಳ ನಂತರ ಕೃಷ್ಣಪ್ಪನವರು, ಕಮಲಮ್ಮ ಊರಿಗೆ ಹೊರಟರು. ಮೀರ ನಗುನಗುತ್ತ ಅವರನ್ನು ಬೀಳ್ಕೊಟ್ಟಳು. ಅರ್ಥವಿಲ್ಲದ ಆ ಒಡಕು ನಗುವಿನ ಹಿಂದೆ ಅಡಗಿದ್ದ ಹೃದಯವನ್ನು ದಹಿಸುತ್ತಿದ್ದ ಶೋಕವನ್ನು ಅವರು ತಿಳಿಯಲಿಲ್ಲ. ಗೆಳತಿಯಿಂದ, ನೆಂಟರಿಂದ ಬಂದಿದ್ದ ಒಂದು ಹೊರೆ ಸಂತಾಪಸೂಚಕ ಕಾಗದಗಳನ್ನು ಮೀರ ಒಡೆದು ಸಹ ನೋಡದೆ, ಎಲ್ಲವನ್ನೂ ಒಟ್ಟುಗೂಡಿಸಿ ಕಡ್ಡಿಗೀರಿ ಹತ್ತಿಸಿದಳು.

ವೀಣಾ ಅಗಲಿ ಹೋದಾಗಿನಿಂದಲೂ ಮನೆಯಲ್ಲಿ ಸ್ಮಶಾನಮೌನ

ತುಂಬಿತ್ತು. ಶಾಮು, ಮೀರ ಬಾಯಿ ಬಿಟ್ಟರೆ ಹೃದಯವೆಲ್ಲಿ ಒಡೆಯುವುದೋ ಎಂಬಂತೆ ವರ್ತಿಸುತ್ತಿದ್ದರು. ಇಬ್ಬರೂ ಪ್ರಯತ್ನಪೂರ್ವಕವಾಗಿ ಒಬ್ಬರ ಕಣ್ಣ ನ್ನೊಬ್ಬರು ತಪ್ಪಿಸಿ ಓಡಾಡುತ್ತಿದ್ದರು. ಶಾಮುವೆಲ್ಲಿ ವೀಣಳ ಸುದ್ದಿ ಎತ್ತುವನೋ ಎಂದು ಮೀರಳ ಕಳವಳ. ಮೀರಳನ್ನು ಮಾತನಾಡಿಸಿದರೆ, ನಡುವೆ ವೀಣಳ ಪ್ರಸ್ತಾಪ ಬರುವುದೆಂದು ಅಂಜಿ ಶಾಮು ಮೌನ ತಾಳಿದ್ದ.

ಶಾಮು ಹಗಲೆಲ್ಲಾ ಕೆರೆಯ ಕಟ್ಟೆಯ ಮೇಲೋ, ಎತ್ತುಗಳ ಬಳಿಯಲ್ಲೋ, ಹೊಂಗೆಯ ಮರದ ನೆರಳಿನಲ್ಲೋ ಕಾಲ ಕಳೆದು ನಿಸರ್ಗನಿಯಮ 'ಹೊಟ್ಟೆ ಹಸಿವು, ಅನ್ನ ಹಾಕು' ಎಂದು ಬಡಿದೆಬ್ಬಿಸಿದಾಗ ಮನೆಗೆ ಬರುತ್ತಿದ್ದ. ಮಾತಿಲ್ಲದೆ ಊಟ ಮುಗಿಸಿ ಪುನಃ ಹುಚ್ಚಲೆದಾಟಕ್ಕೆ ಹೊರಡುತ್ತಿದ್ದ.

ಮೀರ ರೂಮಿನಲ್ಲಿ ಬಾಗಿಲು ಹಾಕಿಕೊಂಡು ಕುಳಿತರೆ, ಮನಸ್ಸು ಬಂದಾಗ ಬಂದು ತಿಂದು ಹೋಗುತ್ತಿದ್ದಳು. ಒಂದು ಸಲ ಎರಡು ದಿನವಾದರೂ ಮೀರ ಊಟ ಮಾಡದಿರುವುದನ್ನು ನೋಡಿ ವೆಂಕಮ್ಮನವರು ಗಾಬರಿಯಾದರು. ಹೊರಗೆ ಹೊರಟಿದ್ದ ಶಾಮುವಿನ ಬಳಿಗೆ ಬಂದು,

"ಶಾಮಣ್ಣಾ, ಮೀರ ಊಟ ಮಾಡಿ ಎರಡು ದಿನವಾಯಿತಪ್ಪ, ಯಾವಾಗಲೂ ರೂಮಿನಲ್ಲಿ ಬಾಗಿಲು ಹಾಕಿಕೊಂಡು ಕುಳಿತಿರುತ್ತಾಳೆ. ಏನಾದರೂ ಸಮಾಧಾನ ಹೇಳಿ ಊಟಕ್ಕೆಬ್ಬಿಸು" ಎಂದರು.

"ಹಾಗೇನು? ನನಗೆ ಗೊತ್ತೇಯಿರಲಿಲ್ಲ" ಎಂದು ಶಾಮು ಹಾಕಿದ್ದ ಬಾಗಿಲನ್ನು ತಟ್ಟಿ "ಮೀರಾ, ಮೀರಾ" ಎಂದು ಕೂಗಿದ. ಮೀರ ಬಾಗಿಲು ತೆಗೆದಳು. ಇಬ್ಬರೂ ಒಬ್ಬರ ಮುಖವನ್ನೊಬ್ಬರು ನೋಡಿ ತಲೆ ತಗ್ಗಿಸಿದರು.

"ಊಟ ಮಾಡುವಿಯಂತೆ, ಬಾ."

"ನನಗೆ ಹಸಿವಿಲ್ಲ."

"ಊಟ ಮಾಡಿ ಎರಡು ದಿನವಾಯಿತಂತೆ."

"........"

"ಉಪವಾಸ ಮಾಡಿ ನೀನೂ ನನ್ನ ಬಿಟ್ಟು ಹೋಗುತ್ತೀಯೇನು? ನೀನು ಉಪವಾಸ ಮಾಡುವುದರಿಂದ ಜಾನಿ ಹಿಂದಿರುಗಿ ಬರುತ್ತಾಳೇನು? ಹೀಗೆ ಪ್ರಾಣ ಒಪ್ಪಿಸಬೇಡ."

"ನಾನು ಹೇಗಾದರೂ ಇರುತ್ತೀನಿ. ನಿಮಗೇನು?"

ಶಾಮು ಸಹನೆ ತಂದುಕೊಂಡು ಅವಳನ್ನು ಸಮಾಧಾನ ಪಡಿಸಲು ಯತ್ನಿಸಿದ. ಆದರೆ ಮೀರ ಅವನಿಗೆ ಅಸಂಬದ್ಧವಾಗಿ ಉತ್ತರ ಕೊಟ್ಟು, ಹುಚ್ಚಿಯಂತೆ ವರ್ತಿಸಲು ಮೊದಲು ಮಾಡಿದುದನ್ನು ನೋಡಿ ಗಾಬರಿಯಾಗಿ ತನ್ನ ದಾರಿ ಹಿಡಿದು

ಹೊರಟುಹೋದ.

ಮೀರಳಿಗೆ ಮನೆಯಲ್ಲಿ, ಮನೆಯ ಹೊರಗೆ ವೀಣಳ ನೆನಪು ಕಾಡುತ್ತಿತ್ತು. ಮಗಳ ಮಾತು, ಕತೆ, ಆಟ, ತುಂಟತನ, ಚೆಲುವು ಅವಳ ಮನಸ್ಸಿನಲ್ಲಿ ಚಿರಸ್ಮರಣೀಯವಾಗಿ ಉಳಿದು ಕಿಚ್ಚೆಬ್ಬಿಸುತ್ತಿದ್ದವು.

ಊಟಕ್ಕೆ ಕುಳಿತಾಗೊಮ್ಮೆ ವೆಂಕಮ್ಮನವರು ಆಲೂಗೆಡ್ಡೆ ಹುಳಿಯನ್ನು ತಂದು ಬಡಿಸಿದರು. ಮೀರಳ ಕಿವಿಯಲ್ಲಿ ವೀಣಳ ಕ್ಷೀಣವಾದ ದನಿ ಕೇಳಿಸಿತು.

"ಅಮ್ಮ, ನನಗೆ ಆಲೂಗೆಡ್ಡೆ ಹುಳಿ." ಮೀರ ತಟ್ಟೆಯನ್ನು ದೂರ ತಳ್ಳಿ, ಬೇರೆ ತಟ್ಟೆ ಹಾಕಿಕೊಂಡು ಬರಿಯ ಮಜ್ಜಿಗೆ ಅನ್ನವನ್ನು ತಿನ್ನಲು ಪ್ರಯತ್ನಿಸಿ, ಗಂಟಲಲ್ಲಿ ಅನ್ನವಿಳಿಯದೆ ಕಂಬನಿ ತುಂಬಿ ಅರೆಯೂಟದಲ್ಲಿ ಎದ್ದು ಹೋದಳು.

ಐದು ವರ್ಷ ತನ್ನ ಬಾಳನ್ನು ತುಂಬಿ ಹಿಂದಿನಾಕಾಂಕ್ಷೆಯೆಲ್ಲವನ್ನೂ ಮರೆಸಿ ಸಂಸಾರದಲ್ಲಿನ್ನೂ ಸಾರವಿದೆ ಎಂದು ತನ್ನನ್ನು ನಂಬಿಸಿ, ನಂಬಿಕೆ ಇನ್ನೂ ಬಲಿಯುವ ಮುನ್ನವೇ ವೀಣಾ ಅವಳ ಬದುಕನ್ನು ಅಗಾಧವಾದ ಕತ್ತಲೆಯ ಸಮುದ್ರಕ್ಕೆ ತಳ್ಳಿ ಹೊರಟುಹೋಗಿದ್ದಳು.

ಜೂಲು ನಾಯಿ, ಕೋಳಿ, ಆನೆ, ಮೊದಲಾದ ಅವಳ ಬೊಂಬೆ ಪ್ರತಿ ಮೂಲೆಯಿಂದಲೂ ಇಣಕಿಹಾಕಿ, 'ವೀಣಾ ಎಲ್ಲಿ?' ಎಂದು ಪ್ರಶ್ನಿಸುತ್ತಿದ್ದವು. ವೀಣಳ ಲಂಗ, ಬನೀನು, ಪೈಜಾಮ, ಸ್ವೆಟರುಗಳು ಆಗೊಮ್ಮೆ ಈಗೊಮ್ಮೆ ಕಣ್ಣಿಗೆ ಬಿದ್ದು ಚುಚ್ಚುತ್ತಿದ್ದವು. ತಾಯಿ ಸತ್ತ ಕಂದ ಸೊರಗಿದಂತೆ ವೀಣಳಿಲ್ಲದ ಅವಳ ಅಸಂಖ್ಯಾತ ಬಟ್ಟೆ ಬರೆಗಳು ಮುದುರಿ ಬಿದ್ದುಕೊಂಡು ಅನಾಥ ಕಳೆ ಸುರಿಸುತ್ತಿದ್ದವು. ಕಣ್ಣು ಮುಚ್ಚಿದರೆ ವೀಣಾ ಎದುರಿಗೆ ಬಂದು ನಿಲ್ಲುತ್ತಿದ್ದಳು. ಕಣ್ಣು ತೆರೆದರೆ ಗೋಡೆಯ ಮೇಲಿದ್ದ ಅವಳ ಭಾವಚಿತ್ರಗಳು ವ್ಯಂಗ್ಯವಾಗಿ ನಕ್ಕು 'ನಾನಿಲ್ಲೇ ಇದೀನಿ. ನೀನು ನನ್ನಿಂದ ತಪ್ಪಿಸಿಕೊಳ್ಳಲಾರೆ' ಎಂದು ಹೇಳುತ್ತಿದ್ದವು. ಮಗಳ ನೆನಪನ್ನು ಬಾರಿ ಬಾರಿಗೂ ಒತ್ತುತ್ತಿದ್ದ ಆ ಮನೆ, ಹಳ್ಳಿ, ಗಂಡ ಇವರೆಲ್ಲರಿಂದಲೂ ದೂರ ಓಡಿ ಹೋಗಬೇಕೆಂದು ಮೀರ ಬಯಸುತ್ತಿದ್ದಳು. ಅಗುಳಿನ ಸುತ್ತಲೂ ಮುತ್ತಿಕೊಳ್ಳುವ ಮೀನುಗಳಂತೆ ತನ್ನನ್ನು ಮುತ್ತಿ ಕಾಡುತ್ತಿದ್ದ ನೆನಪುಗಳಿಂದ ಮೀರ ದೂರವಾಗಲು ತನಗೆ ಅತಿಪ್ರಿಯವೆನಿಸಿದ್ದ ಪುಸ್ತಕಗಳ ಶರಣು ಹೋದಳು. ಆದರೆ ಪುಸ್ತಕದ ಪ್ರತಿಯೊಂದು ಪುಟದಿಂದಲೂ, ಪ್ರತಿಯೊಂದು ಅಕ್ಷರದಿಂದಲೂ ವೀಣಳ ಮುದ್ದುಮುಖ, ಪ್ರತಿಬಿಂಬಿಸತೊಡಗಿತ್ತು. ಮೀರ ತನ್ನ ಅಸಹಾಯಕತೆಯನ್ನು ಕಂಡು ಕಂಗೆಟ್ಟಳು.

ಮೀರ ಕೊಟ್ಟಿಗೆಯಲ್ಲಿ ಕರುವಿಗೆ ಹುಲ್ಲು ಹಾಕುತ್ತಿದ್ದಂತೆ ಎರಡು ತಿಂಗಳ ಹಿಂದೆ ವೀಣಾ ಆ ಕರುವಿನೊಡನೆ ಆಟವಾಡುತ್ತಿದ್ದ ದೃಶ್ಯ ಮೀರಳ ಕಣ್ಮುಂದೆ ನಿಂತಿತ್ತು. ಕೊಟ್ಟಿಗೆಯಲ್ಲಿ ಒಂದು ಗಳಿಗೆಯೂ ನಿಲ್ಲಲಾರದೆ ಅಡಿಗೆಯ ಮನೆಗೆ

ಬಂದಳು. ವೆಂಕಮ್ಮನವರು ವೀಣಾ ಊಟ ಮಾಡುತ್ತಿದ್ದ ಬೆಳ್ಳಿಯ ತಟ್ಟೆಯನ್ನು ಈಳಿಗೆ ಮಣೆಯ ಮುಂದಿರಿಸಿಕೊಂಡು ಸೌತೇಕಾಯಿ ಹೆಚ್ಚಿ ತಟ್ಟೆಯಲ್ಲಿ ಹಾಕುತ್ತಿದ್ದರು. ಮೀರ ಒಳಗೆ ಬಂದೊಡನೆ ಅವಳ ಕಣ್ಣಿಗೆ ಕಂಡುದು ಮಗಳ ತಟ್ಟೆ. ಮೀರ ಮುಳ್ಳು ತುಳಿದವಳಂತೆ ಹಾಲಿನೊಳಗೆ ಬಂದಳು. ಕೂಡಲೇ ಸ್ಟ್ಯಾಂಡಿನ ಮೇಲಿದ್ದ ವೀಣಳ ಗುಲಾಬಿ ಬಣ್ಣದ ಸ್ವೆಟರು ಮೀರಳ ಗಮನವನ್ನು ಸೆಳೆಯಿತು. 'ಯಾವ ಪಾಪಕ್ಕೆ ಈ ಶಿಕ್ಷೆ' ಎಂದುಕೊಳ್ಳುತ್ತ ಮೀರ ಮಲಗುವ ಮನೆಗೆ ಹೋಗಿ ಹಾಸಿಗೆಯ ಮೇಲೆ ಬಿದ್ದಳು. ಒಂದು ತಿಂಗಳ ಹಿಂದೆ ತನ್ನ ಮುದ್ದಿನ ಮಗಳು ಅದೇ ಜಾಗದಲ್ಲಿ ಅದೇ ಹಾಸಿಗೆಯ ಮೇಲೆ ಅಂತಿಮ ಶ್ವಾಸ ಎಳೆಯುತ್ತಿದ್ದ ಚಿತ್ರ ಅವ್ಯಕ್ತವಾಗಿ ಗೋಚರಿಸಿತು. ಮೀರ ಮನಸ್ಸಿನಿಂದ ಆ ದೃಶ್ಯವನ್ನು ಹೊಡೆದೋಡಿಸಲು ಪ್ರಯತ್ನಿಸಿದಷ್ಟೂ ಅದು ಮತ್ತೆ ಬಂದು ಎದುರಿಗೆ ನಿಲ್ಲುತ್ತಿತ್ತು. ಉರಿಯುವ ಬಾಣಲೆಯಲ್ಲಿನ ತುಪ್ಪದಂತೆ ಅವಳ ಮನಸ್ಸು ಕುದಿಯತೊಡಗಿತು. ಶರೀರವನ್ನು ಎಳೆದು ಹಾಕುತ್ತ ಮೀರ ವರಾಂಡಕ್ಕೆ ಬಂದು ಬೆಂಚಿನ ಮೇಲೆ ಕುಳಿತಳು. ಬೆಂಚಿನ ಕೆಳಗೆ ಕಾಲಿಗೆ ಏನೋ ತಗುಲಿದಂತಾಗಲು ಮೀರ ಬಗ್ಗಿ ನೋಡಿದಳು. ವೀಣಳ ಬೂಟ್ಸುಗಳು, ಜೂಲುನಾಯಿ ಧೂಳಿನ ತೆರೆ ಹಾಕಿಕೊಂಡು ಮಲಗಿತ್ತು. ಭಕ್ತರ ಕಣ್ಣಿಗೆ ಎಲ್ಲೆಲ್ಲೂ ಸರ್ವವ್ಯಾಪಿ ಭಗವಂತ ಕಾಣುವಂತೆ ಕಂದನನ್ನು ಕಳೆದುಕೊಂಡಿದ್ದ ತಾಯಿಯ ಕಣ್ಣಿಗೆ ಎಲ್ಲೆಲ್ಲೂ ಮಗುವಿನ ಚಿತ್ರ ಕಾಣತೊಡಗಿತು. ಕಣ್ಣುಗಳಲ್ಲಿ ಉಗ್ರನೋವಿನ ಛಾಯೆ ಮಿಂಚಿ ಕ್ರಮೇಣ ಅದು ಉನ್ಮಾದವಾಗಿ ರೂಪಾಂತರ ಹೊಂದಿತು.

ಮೀರ ಮೂಲೆಗಳನ್ನು ಹುಡುಕಿ ವೀಣಳ ನೆನಪು ತರುವ ಪ್ರತಿಯೊಂದು ವಸ್ತುವನ್ನೂ ರಾಶಿ ಹಾಕತೊಡಗಿದಳು. ಹಳೆಯ ಸಾಮಾನುಗಳನ್ನು ತುಂಬಿದ್ದ ರೂಮಿನಿಂದ ಪೆರಾಂಬ್ಯುಲೇಟರ್ ಮೊದಲ್ಗೊಂಡು ಮಗಳ ಆಟದ ಸಾಮಾನುಗಳು, ಬಟ್ಟೆಗಳು, ಬೂಟ್ಸುಗಳು, ಪುಸ್ತಕ, ಗೋಡೆಯ ಮೇಲಿದ್ದ ಭಾವಚಿತ್ರಗಳು ಎಲ್ಲವನ್ನೂ ಒಟ್ಟುಹಾಕಿದಳು. ಪೆಟ್ಟಿಗೆಯನ್ನು ತೆಗೆದು ವೀಣಳ ರೇಷ್ಮೆ, ಸಿಲ್ಕಿನ ಲಂಗಗಳು, ನೆಕಲೇಸು, ಕಮಲದ ಹೂವಿನ ಲೋಲಕ್ಕು ತಂದು ಗುಡ್ಡೆಯ ಮೇಲೆ ಎಸೆದಳು. ವೀಣಳ ಉಳಿದ ಸಾಮಾನುಗಳನ್ನು ಮೀರ ತುಟಿ ಕಚ್ಚಿಹುಡುಕುವುದನ್ನು ನೋಡಿ ವೆಂಕಮ್ಮನವರು ಗಾಬರಿಯಾದರು. ಸೌತೇಕಾಯಿ ತುಂಬಿದ್ದ ತಟ್ಟೆಯನ್ನು ಮೀರ ತಂದು ರಾಶಿಯಮೇಲೆ ಹಾಕಿದಾಗ ವೆಂಕಮ್ಮ ಹಿಂದುಗಡೆ ಬಾಗಿಲಿನಲ್ಲಿ ನಿಂತು,

"ಬೋರಾ, ಶಾಮಣ್ಣನ್ನ ಕರೆದುಕೊಂಡು ಬಾರಪ್ಪಾ. ಮೀರ ಹೇಗೇಗೋ ಆಡ್ತಿದಾಳೆ ಅಂತ ಹೇಳಿ ಜಾಗ್ರತೆ ಕರೆದುಕೊಂಡು ಬಾ" ಎಂದರು.

ಬೋರ ಸಹಾನುಭೂತಿಯ ಸ್ವರದಿಂದ "ರಾಯರಿಗೆ ಬುದ್ಧಿ ನೆಟ್ಟಗಿದ್ದರಲ್ಲವೇ ಅಮ್ಮಾವರಿಗೆ ಬುದ್ಧಿ ಯೇಳೋದು? ನಾನೂ ನೋಡಿವ್ನಿ ಅವ್ರು ಯೆಂಗೆ ಯೆಂಗೋ ಆಡ್ತಾರೆ. ಇಲ್ಲೇ ಕುಂತಿರ್‍ತಾರೆ. ನೀವು 'ಬುದ್ಧೀ' ಅಂತ ನೂರ್‍ಸಲ ಕೂಗಿ, ತಿರುಗೋಕಿಲ್ಲ" ಎಂದ.

"ಬೇಗ ಹೋಗು. ಶಾಮಣ್ಣ ಅರೆ ಹುಚ್ಚನಾದರೆ, ಮೀರ ಪೂರ್ತಿ ಹುಚ್ಚಿಯಾಗಿದ್ದಾಳೆ."

ಬೋರ ಓಡುತ್ತ ಹೊರಟ. ಅವನು ಶಾಮಣ್ಣನನ್ನು ಅಲ್ಲಲ್ಲಿ ಹುಡುಕಿ ಕರೆದುತರುವ ವೇಳೆಗೆ ಮೀರ ಸಾಮಾನುಗಳನ್ನು ಇನ್ನೂ ಹುಡುಕುತ್ತಿದ್ದಳು.

"ವೀಣಳ ಒಂದು ಚೂರು ಸಾಮಾನೂ ಇಲ್ಲಿರಬಾರದು. ಅವಳೇ ಹೋದ ಮೇಲೆ ಅವಳ ಸಾಮಾನೇಕೆ ಇಲ್ಲಿರಬೇಕು; ಎಲ್ಲಾ ಅವಳಂತೆಯೇ ಸುಟ್ಟುಹೋಗಲಿ" ಎಂದು ತನಗೆ ತಾನೇ ಮಾತನಾಡಿಕೊಳ್ಳುತ್ತ ಹುಡುಕುತ್ತಿದ್ದಳು.

ಆಗಾಗ್ಗೆ ತಾನೇ ಮಾತನಾಡಿಕೊಳ್ಳುತ್ತ ದುಃಖ, ಉನ್ಮಾದ, ಕೋಪದ ಭಾವಗಳು ಮುಖದಲ್ಲಿ ರುದ್ರನಾಟ್ಯವಾಡುತ್ತಿದ್ದ ಹೆಂಡತಿಯನ್ನು ನೋಡಿ ಶಾಮುವಿಗೆ ದಿಗಿಲಾಯಿತು.

ವೀಣಾ ಹೋದ ಮೇಲೆ ಬಿಟ್ಟುಹೋದ ಸರಪಳಿಗಳಂತೆ ಮೀರ ಶಾಮು ಬೇರೆಯಾಗಿದ್ದರು.

ಮೀರ ಕಡ್ಡಿಪೆಟ್ಟಿಗೆ ಹುಡುಕಲು ಮೊದಲು ಮಾಡುತ್ತಲೂ ಶಾಮು ಅವಳ ಬಳಿ ನಿಂತು ಮೃದುವಾದ ದನಿಯಲ್ಲಿ,

"ಮೀರಾ, ಏನು ಮಾಡುತ್ತಿರುವೆ?" ಎಂದ.

"ವೀಣಳ ಸಾಮಾನುಗಳನ್ನೆಲ್ಲಾ ಸುಟ್ಟುಬಿಡುತ್ತೇನೆ."

"ಯಾಕೆ?"

"ಅವಳ ಸಾಮಾನುಗಳು ಇಲ್ಲೇಕಿರಬೇಕು?"

"ಬೇಡ ಮೀರಾ. ಈಗೊಂದು ಗಳಿಗೆ ನುಲಗಿ ನಿದ್ದೆಮಾಡು."

"ಊಹ್ಞೂ" ಎಂದು ಮೀರ ಕಡ್ಡಿಗೀರಿದಳು. ಶಾಮು ಹತ್ತಿಸಿದ್ದ ಕಡ್ಡಿಯನ್ನು ದೂರ ಎಸೆದು ಪೆಟ್ಟಿಗೆ ಕಸಿದುಕೊಂಡ.

"ಕೊಡಿ. ಪೆಟ್ಟಿಗೆ ಕೊಟ್ಟುಬಿಡಿ. ನೀವು ನನ್ನ ಬತ್ತಿರ ಬರಬೇಡಿ. ನನ್ನಿಷ್ಟ ಬಂದ ಹಾಗೆ ಮಾಡ್ತೀನಿ" ಎಂದು ಚೀರುತ್ತ ಮೀರ ಅವನನ್ನು ದೂರ ತಳ್ಳಿದಳು. ಶಾಮು ನಿಮಿಷದಲ್ಲಿ ಅವಳೆರಡು ತೋಳುಗಳನ್ನೂ ಹಿಡಿದು ಅಲುಗಿಸಿ,

"ಎಚ್ಚರ ಮಾಡಿಕೋ ಮೀರಾ. ಒಂದು ಗಳಿಗೆ ಮಲಗಿ ನಿದ್ದೆ ಮಾಡು" ಎನ್ನುತ್ತ ಅವಳು ವಿರೋಧಿಸುತ್ತಿದ್ದರೂ, ಬಲವಂತವಾಗಿ ಕರೆದೊಯ್ದು ಹಾಸಿಗೆಯ

ಮೇಲೆ ಮಲಗಿಸಿ ತಾನೂ ಅವಳ ಪಕ್ಕದಲ್ಲಿ ಕುಳಿತ.

"ನೀವೆಲ್ಲಾ ನನ್ನ ಶತ್ರುಗಳು. ನಿಮ್ಮಿಂದಲೇ ನನ್ನ ಜೀವನ ಹಾಳಾಯಿತು" ಎಂದು ಮೀರ ಬಿಕ್ಕಿಬಿಕ್ಕಿ ಅಳತೊಡಗಿದಳು. ಕಣ್ಣೀರಿನಿಂದ ದಿಂಬೆಲ್ಲಾ ತೊಯಿದು ಹೋಯಿತು. ಅತ್ತು ಸೊರಗಿದ ಮಗು ನಿದ್ದೆ ಮಾಡುವಂತೆ ಮೀರ ಅತ್ತು, ಸೊರಗಿ ಹಣ್ಣಾಗಿ ಮಲಗಿದಳು. ಒಂದೊಂದು ದಿನ ಮೀರಾ ಇದೇ ರೀತಿ ಅತ್ತು ಮಲಗಿ ನಿದ್ರಿಸಿದ ನೆನಪು ಶಾಮುವಿಗೆ ಹೊಳೆಯಿತು. ಅಳಿದ ಪ್ರೇಮದ ಮಗಳ ಮುಖವನ್ನೇ ನೆನಪಿಗೆ ತರುತ್ತಿದ್ದ ಹೆಂಡತಿಯ ಮುಖವನ್ನು ಅಂಗೈಯಿಂದ ಮೃದುವಾಗಿ ಸವರಿ, ಹಣೆಯ ಮೇಲೆ ಮುದ್ದಿಟ್ಟು ಸದ್ದಾಗದಂತೆ ರೂಮಿನಿಂದಾಚೆ ಬಂದ.

ಆಮೇಲೆಂದೂ ವೀಣಳ ಸಾಮಾನುಗಳು ಮೀರಳ ಕಣ್ಣಿಗೆ ಬೀಳಲಿಲ್ಲ. ದಿನದಿನಕ್ಕೆ ಮೀರಳಿಗೆ ಬದುಕು ಭಾರವಾಯಿತು. ಕಾಲಿಗೆ ಕಟ್ಟಿದ್ದ ಕಲ್ಲುಗುಂಟು ಈಜು ಬಾರದವನನ್ನು ಸಾಗರದೊಳಕ್ಕೆ ಸೆಳೆಯುವಂತೆ, ವೀಣಳ ಮೃತ್ಯು ಮೀರ ಳನ್ನು ದುಃಖಸಮುದ್ರದೊಳಕ್ಕೆ ಸೆಳೆಯುತ್ತಿತ್ತು. ಹೆಜ್ಜೆ ಹೆಜ್ಜೆಗೂ ತನ್ನ ಮಗುವಿನ ನೆನಪು ತರುತ್ತಿದ್ದ ಸ್ಥಳ, ಸನ್ನಿವೇಶ ಅವಳ ಮಿದುಳನ್ನು ಕೊರೆದವು. ವೀಣಳನ್ನು ಮರೆಯಲು, ಅವಳಿಲ್ಲದ ತನ್ನ ಬಾಳನ್ನು ಸಾಗಿಸಲು ಮೀರ ಸಾಹಸ ಮಾಡಿದಳು. ಆದರೆ ಮನಸ್ಸಿನ ಅಶಾಂತಿ ಹೆಚ್ಚಾಯಿತೇ ಹೊರತು ಕಡಿಮೆಯಾಗಲಿಲ್ಲ. ಬೇರೊಂದು ಹವ್ಯಾಸವಿಲ್ಲದ ಮನಸ್ಸಿಗೆ ಕಳೆದ ದಿನಗಳನ್ನು ಮೆಲುಕು ಹಾಕುವ ಗೀಳು ಹಿಡಿದಿತ್ತು. ಮೀರ ತಾನಿದ್ದ ಸನ್ನಿವೇಶದಲ್ಲಿ ಏನನ್ನೂ ಮಾಡಲಾರದೆ ಬಿರು ಗಾಳಿಗೆ ಸಿಕ್ಕಿ ಕಣ್ಣು ತುಂಬ ಧೂಳು ತುಂಬಿಕೊಂಡ ಪಥಿಕನಂತೆ ದಾರಿಗಾಣದಾದಳು.

ವೀಣಾ ಹೋಗಿ ಎರಡು ತಿಂಗಳಾಗಿತ್ತು. ಒಂದು ದಿನ ಶಾಮು ಎತ್ತುಗಳಿಗೆ ನೀರು ಕುಡಿಸುತ್ತ ನಿಂತಿದ್ದ. ಮೀರ ಅವನನ್ನು ಹುಡುಕುತ್ತ ಒಳಗೆ ಬಂದಳು.

ಕೆದರಿದ ತಲೆ, ಬಡಕಲಾದ ದೇಹ, ಬಿಳಿಚಿಕೊಂಡಿದ್ದ ಮುಖ, ಅಂತರಂಗದ ಯಾತನೆಯನ್ನು ಸ್ಪಷ್ಟವಾಗಿ ಹೊರಚೆಲ್ಲುತ್ತಿದ್ದ ಕಣ್ಣುಗಳು.... ಶಾಮುವಿಗೆ ಮೀರಳ ಬಗ್ಗೆ ಕನಿಕರ ಹುಟ್ಟಿತು. 'ಬಡ ಹುಡುಗಿ' ಎಂದುಕೊಂಡ.

"ನಾನೊಂದು ವಿಷಯ ಹೇಳಬೇಕಾಗಿದೆ. ಆದರೆ ನೀವೇನೂ ತಿಳಿಯಬಾರದು."

ಶಾಮು ಮೀರಳ ಕಡೆ ತಿರುಗಿ ನಿಂತ.

"ನಾವು ಈ ಹಳ್ಳಿಯನ್ನು ಬಿಟ್ಟು ಹೊರಟುಹೋಗೋಣ."

'ನಾವಿಬ್ಬರೂ ಆತ್ಮಹತ್ಯೆ ಮಾಡಿಕೊಳ್ಳೋಣ' ಎಂದು ಮೀರ ಸೂಚಿಸಿ ದ್ದರೂ ಶಾಮುವಿಗೆ ಆಶ್ಚರ್ಯವಾಗುತ್ತಿರಲಿಲ್ಲ.

"ನಾನು ಈ ಹಳ್ಳಿಯಲ್ಲೇ ಉಳಿದರೆ ಏನಾಗುವೆನೋ ನನಗೆ ಗೊತ್ತಿಲ್ಲ. ಸಾಯಬಹುದು, ಹುಚ್ಚು ಹಿಡಿಯಬಹುದು, ದೇಶಾಂತರ ಓಡಿಹೋಗಬಹುದು.

ನನ್ನ ಬೇಡಿಕೆಗೆ ಇಲ್ಲವೆಂದು ಹೇಳಬೇಡಿ. ನಿಮಿಷ ನಿಮಿಷವೂ ವೀಣಳ ನೆನಪಿನಿಂದ ನಾನು ದಗ್ಧವಾಗುತ್ತಿದ್ದೇನೆ. ನನ್ನ ಮೇಲೆ ಕರುಣೆಯಿಟ್ಟು ಬನ್ನಿ."

"ಮೈಸೂರಿಗೆ ಹೋದರೆ ನೀನು ಜಾನಿಯನ್ನು ಮರೆಯಬಲ್ಲೆಯಾ ಮೀರಾ?"

"ಈ ಹಳ್ಳಿಯಲ್ಲಿ ಖಂಡಿತ ನಾನವಳನ್ನು ಮರೆಯಲಾರೆ. ಹಳ್ಳಿಯ ಮಣ್ಣಿನೊಂದಿಗೆ ವೀಣಾ ಮಣ್ಣಾಗಿದ್ದಾಳೆ. ಈ ನೆಲದಲ್ಲಿರುವವರೆಗೆ ನಾನವಳನ್ನು ಮರೆಯಲಾರೆ. ನನ್ನ ಮಗುವನ್ನು ನುಂಗಿದ ಹಳ್ಳಿಯನ್ನು ನಾನು ದ್ವೇಷಿಸುತ್ತೇನೆ. ಹೊಸ ಸ್ಥಳ, ಹೊಸ ಸನ್ನಿವೇಶ, ಹೊಸ ವಾತಾವರಣದಲ್ಲಿ ನನ್ನ ನೋವು, ಕಾವು ಸ್ವಲ್ಪವಾದರೂ ಕುಗ್ಗಬಹುದು. ನಿಮ್ಮಿಂದ ನಾನು ಇದುವರೆವಿಗೂ ಏನನ್ನೂ ಬೇಡಿಲ್ಲ. ದಯವಿಟ್ಟು ಇದೊಂದು ಕೋರಿಕೆಯನ್ನು ನಡೆಸಿಕೊಡಿ."

ಶಾಮು ನಿಧಾನವಾಗಿ ತಲೆ ಅಲುಗಿಸಿ ಹೇಳಿದ:

"ನಿನ್ನ ಕೋರಿಕೆಯನ್ನು ಪೂರೈಸುವುದು ನನ್ನಿಂದಾಗದು ಮೀರ. ತಲೆಮಾರುಗಳಿಂದ ನಮ್ಮ ಪೂರ್ವಿಕರು ವಾಸವಾಗಿರುವ ಈ ಹಳ್ಳಿ, ವಂಶ ಪಾರಂಪರ್ಯವಾಗಿ ಬಂದ ಗದ್ದೆ, ತೋಟಗಳನ್ನು ತೊರೆದು ನಾನು ಬರಲಾರೆ. ಅವುಗಳೊಡನೆ ಬೆಳೆದು ಬಂದಿರುವ ಆತ್ಮೀಯತೆಯನ್ನು ನಾನು ಕತ್ತರಿಸಿ ಹಾಕಲಾರೆ. ನನ್ನ ಜಾನಿ ಮಲಗಿದ್ದಾಳೆ. ಒಂದಲ್ಲ ಒಂದು ದಿನ ನಾನು ಅವಳೊಡನೆ ಚಿರವಿಶ್ರಾಂತಿ ಪಡೆಯುವ ಸಲುವಾಗಿಯಾದರೂ ಈ ಹಳ್ಳಿಯಲ್ಲೇ ಉಳಿಯುತ್ತೇನೆ."

ಶಾಮುವಿನ ಧ್ವನಿಯಲ್ಲಿ ದೃಢ ನಿರ್ಧಾರವಿತ್ತು.

ಭೋರ್ಗರೆದು ಬರುತ್ತಿರುವ ಪ್ರವಾಹದ ವಿರುದ್ಧ ದಿಕ್ಕಿನಲ್ಲೇ ಈಜು ಬಾರದವನು ಹೋರಾಡಿ ಪ್ರವಾಹದೊಡನೆ ತೇಲಿಹೋಗುವಂತೆ ಮೀರ ದಿನ ದಿನಕ್ಕೂ ಉಲ್ಬಣಾವಸ್ಥೆಗೆ ಬರುತ್ತಿದ್ದ ದುಃಖಪ್ರವಾಹವನ್ನು ಇದಿರಿಸಲು ಪ್ರಯತ್ನಿಸಿ ವಿಫಲಳಾದಳು.

ವೀಣಳ ಬರುವಿಕೆಯಿಂದ ಹಳ್ಳಿಯ ನೀರವತೆಯನ್ನೂ ಮರೆತೂ, ಬಾಳಿನಲ್ಲಿ ಉತ್ಸಾಹ ಪಡೆದು ಸುಂದರ ಭವಿಷ್ಯವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತಿದ್ದ ಮೀರಳಿಗೆ ವೀಣಾ ತೀರಿಹೋದ ಮೇಲೆ ಹಳ್ಳಿಯಲ್ಲಿ ಮುಂದೆಯೂ ವಾಸ ಮಾಡುವ ಅಗತ್ಯ ಕಂಡುಬರಲಿಲ್ಲ. ಹಳ್ಳಿಯ ಜೀವನಕ್ಕೆ, ಶಾಮುವಿಗೆ ಮೀರಳನ್ನು ಬಂಧಿಸಿದ್ದ ಒಂದೇ ಒಂದು ಕೊಂಡಿಯಾದ ವೀಣಾ ಕಳಚಿ ಬಿದ್ದ ಮೇಲೆ, ಅವಳ ನೆನಪಿನೊಂದಿಗೇ, ತನ್ನ ಬಾಳಿನೊಂದಿಗೇ ಹೊಂದಿ ಬಂದಿದ್ದ ಇತರ ಬಂಧನಗಳನ್ನೂ ಹಿಂದೆಯೇ ಬಿಟ್ಟು, ತಾನೇಕೆ ದೂರ ಹೊರಟುಹೋಗಬಾರದೆಂದು ಮೀರ ಯೋಚಿಸತೊಡಗಿದಳು. ಗಂಡನನ್ನು ತೊರೆದು ಬಂದಳೆಂಬ ಅಪಖ್ಯಾತಿ ತನಗೆ ಅಂಟುವುದೆಂದು ಮೀರ ಮನಗಂಡರೂ, ಅಳಿದ ಮಗುವಿನ ನೆನಪಿನ ಕ್ರೌರ್ಯ, ತೀಕ್ಷ್ಣತೆ

ಯನ್ನು ತಡೆಯಲಾರದೆ, ತನ್ನ ಬಸಿರು ಎಂದೆಂದಿಗೂ ಬರಡೆಂಬ ಶೂನ್ಯತೆಯನ್ನು ಎದುರಿಸಲಾರದೆ ಮೀರ ಹಳ್ಳಿಯನ್ನು ಬಿಟ್ಟರೇ ತಾನು ಬದುಕಲು ಸಾಧ್ಯವೆಂಬ ನಿರ್ಧಾರಕ್ಕೆ ಬಂದಳು.

ದಿನಗಳುರುಳಿದವು. ಬೇಸಿಗೆಯ ರಜ ಮುಗಿಯಲು ಎರಡು ವಾರಗಳಿದ್ದವು. ಮೀರಳ ಹೃದಯದಲ್ಲಿ ಆಂದೋಲನ ನಿರಂತರವಾಗಿ ಸಾಗಿತ್ತು. ಒಂದು ವಾರ ದಿಂದಲೂ ಶಾಮು ಮೀರಳ ಹೋರಾಟ, ವಿಪ್ಲವವನ್ನು ಗಮನಿಸಿದ್ದ. ಎರಡು ಭಾವನೆಗಳಿಗುಂಟಾದ ಘರ್ಷಣೆ ಅವಳ ಮುಖದ ಮೇಲೆ ಚೆನ್ನಾಗಿ ವ್ಯಕ್ತವಾಗುತ್ತಿತ್ತು.

ಅದೊಂದು ರಾತ್ರಿ ಊಟವಾದ ನಂತರ ಶಾಮು ಹಸುಗಳಿಗೆ ಹುಲ್ಲು ಹಾಕಿ, ನೀರು ಕುಡಿಸಿ, ಮಲಗಲು ಬಂದಾಗ ಮೀರ ಹಾಸಿಗೆಯ ಮೇಲೆ ಕುಳಿತಿದ್ದಳು. ಮನೋನಿಶ್ಚಯ, ನಿರ್ಧಾರ ಮುಖದಲ್ಲಿ ಒಡೆದು ಮೂಡಿತ್ತು. ಶಾಮು ದೀಪವನ್ನು ಸಣ್ಣದು ಮಾಡಿ, ಅವಳ ಹತ್ತಿರ ಕುಳಿತು,

"ಮೀರಾ, ಮಲಗುವುದಿಲ್ಲವೇ?" ಎಂದ.

"ನಿದ್ದೆ ಬರುವುದಿಲ್ಲ, ಮತ್ತೆ...."

"ಏನು?"

"ನೀವು ನನ್ನನ್ನು ಹೇಡಿ ಎಂದುಕೊಂಡರೂ ಚಿಂತೆಯಿಲ್ಲ. ನನ್ನನ್ನು ಕಿತ್ತು ತಿನ್ನುವ ಈ ನೆನಪುಗಳಿಂದ ನಾನು ಮುಕ್ತಳಾಗಬೇಕಾದರೆ ಮೊದಲನೆಯದಾಗಿ ನಾನು ಈ ಹಳ್ಳಿಯನ್ನು ಬಿಟ್ಟುಹೋಗಬೇಕು. ಎರಡನೆಯದಾಗಿ.... ನನ್ನ ಮನಸ್ಸು, ಬುದ್ಧಿಗೆ ಒಂದು ಗಳಿಗೆಯೂ ವಿರಾಮ ಕೊಡದಂತೆ ಬೇರೊಂದು ಹವ್ಯಾಸದಲ್ಲಿ ತೊಡಗಬೇಕು. ನಾನು ಎರಡು ಕೆಲಸಗಳನ್ನೂ ಮಾಡಲು ನಿಶ್ಚಯಿಸಿದ್ದೇನೆ."

"ಹಾಗಾದರೆ ನನ್ನನ್ನು ಬಿಟ್ಟು ಹೋಗುವೆಯಾ?"

"ನಾನು ಬೇಕಿದ್ದರೆ ನೀವೂ ಹಳ್ಳಿಯನ್ನು ಬಿಡಬೇಕಾಗುತ್ತದೆ. ಅದಕ್ಕೆ ನೀವು ಸಿದ್ಧರಿಲ್ಲವೆಂಬುದು ನನಗೆ ಗೊತ್ತು."

"ನಿನ್ನ ಅಸಹಾಯಕತೆ ನನಗೇನೂ ತಿಳಿಯದ ಅಂಶವಲ್ಲ ಮೀರಾ. ನಮ್ಮಿಬ್ಬರ ಮನಸ್ಸನ್ನೂ ಒಂದು ಮಾಡಿದ್ದ ಜಾನಿ ಇನ್ನಿಲ್ಲವಾದುದರಿಂದ ದಾರ ಕಿತ್ತು ಹೋದ ಬಿಲ್ಲಿನ ಎರಡು ತುದಿಗಳಂತೆ ನಾವು ಬೇರೆಯಾಗಿದ್ದೇವೆ. ಒಬ್ಬರಿಗೊಬ್ಬರು ಮರುಗಬಲ್ಲವೇ ಹೊರತು ಹೆಚ್ಚು ಮಾಡುವ ಸ್ಥಿತಿಯಲ್ಲಾಗಲಿ, ಹೇಳುವ ಸ್ಥಿತಿಯಲ್ಲಾಗಲಿ ಇಲ್ಲ. ಜಾನಿ ಹೋದ ಕೊರತೆಯನ್ನು ತುಂಬಲು ಇನ್ನೊಂದು ಮಗುವಾದರೂ ಇದ್ದಿದ್ದರೆ....

"ಮಗು! ಮುಂದಿನ ಜನ್ಮದಲ್ಲೇ ನನಗಿನ್ನು ಮಗು. ಪಾಪಿಜೀವನಕ್ಕೆ ಕೊರಗನಳಿಸಿ ನಗಿಸಬಲ್ಲ ಕಂದನೂ ಇಲ್ಲ."

ಶಾಮು ತನ್ನಲ್ಲಿ ಸಹಾನುಭೂತಿ ತೋರಿಸುತ್ತಿರುವುದನ್ನು ಕಂಡು ಮೀರ ಆಶ್ಚರ್ಯಪಟ್ಟಳು. ಮೊದಲಿನಿಂದಲೂ ಒರಟೊರಟಾಗಿ ವರ್ತಿಸಿ, ತಾನು ಅವನಿಗೆ ಬೇಕಾದಾಗ ಒಲಿಸಿ, ಬೇಡವಾದಾಗ ತ್ಯಜಿಸಿದ ವ್ಯಕ್ತಿ ಈ ಮಾತುಗಳನ್ನು ಆಡಬಹುದೆಂದು ಅವಳು ಕನಸಿನಲ್ಲಿಯೂ ಊಹಿಸಿರಲಿಲ್ಲ.

ವೀಣಾ ತಮ್ಮಿಬ್ಬರ ಮನಸ್ಸನ್ನೂ, ಪ್ರೀತಿಯ ಜಲದಲ್ಲಿ ಮಿದುಮಾಡಿ ಒಂದು ಮಾಡಿದ್ದಳು. ಮರಳಿನಂತೆ ಅಂಟಿಕೊಳ್ಳದೆ ಒಂದು ಬಾರಿ ಒದರಿದರೆ, ಬೇರೆಯಾಗುವ ಮರಳಿನ ಕಣಗಳಂತೆ ಶಾಮು-ಮೀರಳ ಮನಸ್ಸು ದೂರವಿದ್ದರೂ, ದೈಹಿಕ ಆಕರ್ಷಣೆಗೊಳಪಟ್ಟು ಹತ್ತಿರ ಬಂದಿದ್ದರೂ, ಮತ್ತೆ ಒಮ್ಮತವಲ್ಲದ ಅಭಿಪ್ರಾಯದಿಂದ ಸಿಡಿದು ದೂರ ಸರಿಯುತ್ತಿದ್ದವು. ವೀಣಳ ಮೇಲಿದ್ದ ಪ್ರೀತಿ ಗಂಡ ಹೆಂಡಿರಿಬ್ಬರಲ್ಲೂ ಆತ್ಮೀಯ ಭಾವವನ್ನು ಬೆಳೆಸಿತ್ತು. ಸುಂದರವಾದ ಮನೆಯೊಂದನ್ನು ನಿರ್ಮಿಸಿ, ತಾನೇ ಆ ಮನೆಗೆ ಆಧಾರ ಸ್ತಂಭದಂತಿದ್ದಳು ವೀಣಾ. ಆದರೆ ಆಧಾರಸ್ತಂಭ ಯಾವ ಗಳಿಗೆಯಲ್ಲಿ ಉರುಳಿಬಿತ್ತೋ, ಅದೇ ಗಳಿಗೆಯಲ್ಲಿ ಮನೆಯೂ ನೆಲಕ್ಕೆ ಕುಸಿದುಬಿದ್ದಿತ್ತು. ಮುರಿದು ಚೂರಾಗಿರುವ ಮನೆಯನ್ನು ಒಂದು ಮಾಡುವುದೆಂದರೆ ಮರಳಿನಲ್ಲಿ ಮನೆ ಕಟ್ಟಿದಂತೆಯೇ ಸರಿ.

"ಹಳ್ಳಿಯನ್ನು ಬಿಟ್ಟು ಎಲ್ಲಿಗೆ ಹೋಗುವೆ?"

"ಮೈಸೂರಿಗೆ ಹೋಗಿ ಮೆಡಿಕಲ್ ಕಾಲೇಜು ಸೇರಬೇಕೆಂದಿದ್ದೇನೆ. ಆಗಲಾದರೂ ವಿದ್ಯಾ ವ್ಯಾಸಂಗದಲ್ಲಿ ಅಳಿದ ದಿನಗಳನ್ನು ಮರೆಯಲು ಸಾಧ್ಯವಾಗಬಹುದು. ಹಳೆಯದನ್ನು ಮರೆತು, ಹೊಸ ಬಾಳನ್ನು ಆರಂಭಿಸಬಹುದು."

ಶಾಮು ನಸುಬೆಳಕಿನಲ್ಲಿ ತನ್ನೆದುರಿಗೆ ಕುಳಿತಿದ್ದ ಬಡಕಲು ಮೂರ್ತಿಯನ್ನು ದಿಟ್ಟಿಸಿ ನೋಡಿದ. ಕಡ್ಡಿಯಂತಿದ್ದ ಕೈಕಾಲುಗಳು, ಬತ್ತಿಹೋದ ಕೆನ್ನೆ, ತೀವ್ರ ನಿರಾಶೆಯ ಪೆಟ್ಟಿನಿಂದ ಯಾತನೆ ಸುರಿಯುತ್ತಿರುವ ಕಣ್ಣುಗಳು, ಮುಂದಲೆಯಲ್ಲಿ ಕಪ್ಪು ಕೂದಲಿನ ರಾಶಿಯಲ್ಲಿ ಬೆಳ್ಳಿಯ ಗೆರೆಯಂತೆ ಹೊಳೆಯುತ್ತಿದ್ದ ಬಿಳಿ ಕೂದಲು.... ಮೀರ ದೈನ್ಯದ ಮೂರ್ತಿಯಂತೆ ಕುಳಿತಿದ್ದಳು. ಶಾಮೂಗೆ ಹೃದಯದಲ್ಲಿ ಅಪಾರ ವ್ಯಥೆಯಾಯಿತು. ಕನಿಕರದಿಂದ ಮನಸ್ಸು ತುಂಬಿ ಬಂತು. ಮೀರಳನ್ನಪ್ಪಿಕೊಂಡು ಸಂತೈಸಿ ಅವಳೇನು ಕೇಳಿದರೂ ಒಪ್ಪಿಬಿಡಬೇಕೆಂದು ನಿರ್ಧರಿಸಿದ. ಆದರೆ ಅದೇಕೋ ಅವಳ ಬಳಿ ಹೋಗುವ ಧೈರ್ಯ ಬರಲಿಲ್ಲ.

"ನೀನು ಅದರಿಂದ ಸುಖಿಯಾಗುವೆಯಾ ಮೀರಾ?"

"ಹಾಗೆಂದು ಭಾವಿಸಿದ್ದೇನೆ. ಸಂತೋಷವಲ್ಲದಿದ್ದರೂ ದುಃಖ ಆರುತ್ತದೆಂಬ ಭರವಸೆಯಿದೆ."

"ಬೇರೆ ಯಾವ ದಾರಿಯೂ ಇಲ್ಲವೇ?"

"ನನಗೆ ಗೊತ್ತಾಗುವುದಿಲ್ಲ."

ಶಾಮು ಕೈಗಳನ್ನು ಉಜ್ಜುತ್ತ, ಹೆಂಚುಗಳ ಕಡೆ ನೋಡುತ್ತ ಒಂದು ಗಳಿಗೆ ಕುಳಿತ.

ತಾನು ಬಯಸಿ ಮದುವೆಯಾದ ಹೆಣ್ಣು ತನ್ನನ್ನು ಬಿಟ್ಟು ಮರಳಿ ಬಾರದಂತೆ ಹೋಗುತ್ತಿರುವ ವಿಷಯ ನೆನೆದು ಶಾಮುವಿನ ಹೃದಯ ಕಂಪಿಸಿತು. ಮೀರಳಿಲ್ಲದ ಬಾಳು ನೀರಸವೆಂದು ತೋರಿತು. ಅವಳ ನಿರ್ಧಾರವನ್ನು ಕಂಡು ಕೋಪವೂ ಬಂದಿತು. ತನ್ನ ಯಾವ ತಪ್ಪಿಗೆ ಈ ಶಿಕ್ಷೆ? ಅವಳನ್ನು ಪ್ರೀತಿಸಿದ್ದಕ್ಕೇ? ಮುಳ್ಳು ತುಳಿದವನಂತೆ ಶಾಮುವಿನ ಮನಸ್ಸು ಅಳುಕಿತು. ತಾನು ಅವಳನ್ನು ಪ್ರೀತಿಸಿದ್ದನೇ ಅಥವಾ ಕಾಮಿಸಿದ್ದನೇ? ಅಂತೂ ಮೀರ ಅವನಿಗೆ ಬೇಕಾದ ವಸ್ತುವಾಗಿದ್ದಳು. ಮೀರಳಂತಹ ಚೆಲುವೆಯಾದ, ಜಾಣೆಯಾದ ಹುಡುಗಿ ತನ್ನ ಹೆಂಡತಿಯಾಗಿ ಬಂದುದಕ್ಕಾಗಿ ಶಾಮುವಿಗೆ ತುಂಬಾ ಸಂತೋಷವಾಗಿತ್ತು. ವೆಂಕಟರಮಣಯ್ಯ ನವರು ತಮ್ಮ ಫಲವತ್ತಾದ, ಸುಂದರವಾದ, ಚಿನ್ನದಂತಹ ಜಮೀನನ್ನು ಅಲ್ಪ ಬೆಲೆಗೆ ತನಗೆ ಮಾರಿದಾಗ ಸಂತೋಷವಾದಂತೆ, ಮೀರ ಶಾಮೂಗೆ ಬೇಕಾಗಿದ್ದಳು. ಆದುದರಿಂದ ಅವಳ ಕೋರಿಕೆಯನ್ನು ನೆರವೇರಿಸುವುದು ತೀರ ತಪ್ಪೆನಿಸಿತು.

ಆದರೆ ಮರುಗಳಿಗೆಯೇ ಮುದ್ದಿನ ಕಂದನನ್ನು ಸಾವಿನ ದವಡೆಗೊಪ್ಪಿಸಿ ಅನಾಥೆಯಂತೆ, ಹುಚ್ಚಿಯಂತೆ ಪರಿತಪಿಸುತ್ತಿರುವ ತನ್ನ ಹುಡುಗಿಯ ಅಸಹಾಯ ಕತೆಯನ್ನು ಕಂಡು ಶಾಮುವಿನ ಹೃದಯ ಕರಗಿತು. ಪಾಪ! ಕಾಲೇಜಿನಲ್ಲಿ ಓದು ತ್ತಿದ್ದಾಗ ತನ್ನ ಭವಿಷ್ಯದ ಬಗ್ಗೆ ಎಷ್ಟು ಸುಂದರ ಕನಸುಗಳನ್ನು ಹೆಣೆದಿದ್ದಳೋ! ಅವುಗಳೆಲ್ಲವನ್ನು ತನ್ನನ್ನು ಕೈ ಹಿಡಿದಾಗಲೇ ಕಳೆದುಕೊಂಡಿದ್ದ ಮೀರಳನ್ನು, ತನ್ನ ಮಗುವಿನ ಸಾವಿನಿಂದ ಬೆಂದು, ಬಗೆತೋರದೆ, ಕತ್ತಲನ್ನು ಕಂಡು ಬೆದರಿದ ಕಂದ ನಂತೆ ತೋರುತ್ತಿದ್ದ ತನ್ನ ಮುದ್ದಿನ ಮಡದಿಯನ್ನು ಹಳ್ಳಿಯಲ್ಲೇ ಇರುವಂತೆ, ದಿಗ್ಬಂಧನ ಮಾಡಿ ಅವಳನ್ನು ಜೀವಶವವಾಗಿ ಪರಿವರ್ತಿಸಲು ಶಾಮುವಿಗೆ ಮನಸ್ಸು ಬರಲಿಲ್ಲ.

ಸ್ವಾರ್ಥಕ್ಕೂ, ತ್ಯಾಗಕ್ಕೂ ಹೋರಾಟ ನಡೆಯಿತು.

"ಮೀರಾ, ಮೈಸೂರಿನಲ್ಲಿ ನಿಮ್ಮ ದೊಡ್ಡಪ್ಪನ ಮನೆಯಲ್ಲಿರುವುದು ನನಗೆ ಇಷ್ಟವಿಲ್ಲ. ಅವರು ಎಂದು ನಿನ್ನನ್ನು ನನಗೆ ಧಾರೆ ಎರೆದುಕೊಟ್ಟರೋ ಅಂದಿಗೇ ಅವರ ಜವಾಬ್ದಾರಿಯೆಲ್ಲವೂ ಮುಗಿಯಿತು. ಆದುದರಿಂದ ನೀನು ಹಾಸ್ಟಲಿ ನಲ್ಲಿರುವುದು ಸರಿಯೆಂದು ನನಗೆ ತೋರುತ್ತದೆ."

"ಆದರೆ.... ಹಣ...."

"ಹಣದ ಯೋಚನೆ ನನಗಿರಲಿ...."

ಮೀರಳ ಬಿಳಿಚಿಕೊಂಡಿದ್ದ ಮುಖಕ್ಕೆ ಒಮ್ಮೆಲೇ ದೇಹದಲ್ಲಿನ ರಕ್ತವೆಲ್ಲಾ ನುಗ್ಗಿಬಂತು. ತಾನಾಗಿ ಗಂಡನನ್ನು ತೊರೆದು ಹೋಗುತ್ತಿದ್ದರೂ, ತನ್ನ ಒದಿಗಾಗಿ ಸಹಾಯ ಮಾಡಲು ಸಿದ್ಧನಾಗಿದ್ದ ಪತಿಯ ಹೃದಯ ವೈಶಾಲ್ಯ ಮೀರಳ ಕೋಮಲ ಭಾವನೆಗಳನ್ನು ಜಾಗರಿಸಿತು. ಅವಳ ಕಣ್ಣುಗಳು ತೇವಗೊಂಡವು.

"ನಾನಲ್ಲದೆ ಬೇರೆ ಯಾವ ಹುಡುಗಿಯ ಕೈಯನ್ನು ನೀವು ಹಿಡಿದಿದ್ದರೂ ನೀವಿಬ್ಬರೂ ಸುಖವಾಗಿರುತ್ತಿದ್ದಿರಿ. ನನ್ನಂತಹ ಅತೃಪ್ತ ಸ್ವಭಾವದ ಹುಡುಗಿ ಸಿಕ್ಕಿ ನಿಮ್ಮ ಬಾಳು ಚೂರಾಯಿತು."

"ಹಾಗೆ ಹೇಳಬೇಡ ಮೀರಾ. ನನ್ನೊಂದಿಗೆ ನಿನ್ನ ಬಾಳೂ ಚೂರಾಗಿದೆ. ಮದುವೆಯಾದಾಗಿನಿಂದ ನನಗೆ ನಿನ್ನ ಕೈ ಹಿಡಿದುದು ತಪ್ಪು ಎನಿಸತೊಡಗಿತ್ತು. ನಿನ್ನ ಬುದ್ಧಿಯನ್ನು ಕೆಲಸವಿಲ್ಲದೆ ಬಂಧನದಲ್ಲಿರಿಸಿದುದಕ್ಕಾಗಿ ಕೆಲವು ಬಾರಿ ನನಗೆ ಅಪರಾಧಿ ಎನಿಸತೊಡಗಿತ್ತು. ಫಲವತ್ತಾದ ಭೂಮಿಯನ್ನು ಹಾಳುಗೆಡವಿದರೆ ಸರ್ಕಾರದವರೇನು ಮಾಡುವರು ಗೊತ್ತೆ? ಪಾಳುಗೆಡವಿದವನಿಗೆ ಜುಲ್ಮಾನೆ ಹಾಕುತ್ತಾರೆ. ನಾನು ಕೊಡುವ ಜುಲ್ಮಾನೆಯೆಂದು ತಿಳಿದು ನನ್ನ ಹಣ ತೆಗೆದುಕೋ. ನನ್ನ ಅಪಾರ ಸಂಪತ್ತಿನಿಂದ ನಿನಗೆ ಸ್ವಲ್ಪ ಸಮಾಧಾನವಾದರೂ, ಸಮಾಧಾನ...."

ಮೀರ ಮಾತನಾಡದೇ ಮಂಡಿಯ ಮೇಲೆ ಗಲ್ಲವೂರಿ ಗಂಡನ ಮುಖವನ್ನೇ ನೋಡುತ್ತಿದ್ದಳು. ಮಂಕಾದ ಬೆಳಕಿನಲ್ಲಿ ಅವಳ ಮುಖಭಾವ ಇಂತಹದೇ ಎಂದು ಹೇಳುವ ಹಾಗಿರಲಿಲ್ಲ.

ತನ್ನಿಂದ ಗಂಡನ ಜೀವನ ಹಾಳಾಯಿತು ಎಂದವಳಿಗೆ ಭಾಸವಾಗುತ್ತಿತ್ತು. ಒಬ್ಬರ ಕೈ ಒಬ್ಬರು ಹಿಡಿದು ಇಬ್ಬರ ಬದುಕೂ ವ್ಯರ್ಥವಾಗಿತ್ತು. ಸಾಮರಸ್ಯವಿಲ್ಲದ ಸಂಸಾರ ಇಬ್ಬರನ್ನೂ ಬಲಿ ತೆಗೆದುಕೊಂಡಿತ್ತು.

"ಆದರೆ ಒಂದು ಮಾತು ಮಾತ್ರ ನಿನ್ನ ನೆನಪಿನಲ್ಲಿರಲಿ ಮೀರಾ."

ಮೀರಾ ತಲೆಯೆತ್ತಿ ಶಾಮುವನ್ನು ನೋಡಿದಳು.

ಶಾಮು ನಿಟ್ಟುಸಿರು ಬಿಟ್ಟು, ಹೇಳಿದ:

"ನನ್ನ ಜಾನಿಯನ್ನು ನೆನಪಿಗೆ ತರುವ ನಿನ್ನ ಮುಖವನ್ನು ಕಂಡರೆ ನನಗೆ ತುಂಬಾ ಪ್ರೀತಿ."

ಒಂದು ಗಳಿಗೆ ತಡೆದು ಪುನಃ ಹೇಳಿದ:

"ಆ ಜೀವನ ಬೇಸರವಾದರೆ ನಿನ್ನ ಮನೆಯ ಬಾಗಿಲು ಯಾವಾಗಲೂ ನಿನ ಗಾಗಿ ತೆರೆದಿರುತ್ತದೆ."

# ಅಪಜಯ

# ಅಪಜಯ

"ಆ ಜೀವನ ಬೇಸರವಾದರೆ ನಿನ್ನ ಮನೆಯ ಬಾಗಿಲು ಯಾವಾಗಲೂ ನಿನಗಾಗಿ ತೆಗೆದಿದೆ" ಎಂದು ಶಾಮುವಾಡಿದ ಮಾತು ಮೀರಳ ಕಿವಿಯಲ್ಲಿ ಪ್ರತಿಧ್ವನಿಸುತ್ತಲೇ ಇತ್ತು. ಮೂಕಪೆಟ್ಟಾದ ಸ್ಥಳವನ್ನು ಮೃದುವಾಗಿ ತಡವರಿಸಿದರೆ ಹಿತವಾಗಿರುವುದಲ್ಲದೆ ಜೊತೆಗೆ ಹಿತವಾದ ನೋವೂ ಇರುವಂತೆ, ಅವಳಿಗೆ ಶಾಮುವಿನ ಮಾತಿನಿಂದ ನೋವು, ನಲಿವು ಎರಡೂ ಉಂಟಾಗಿತ್ತು.

ಶಾಮುವಿನದು ನಿಜವಾಗಿಯೂ ದೊಡ್ಡ ಹೃದಯ. ತಾನಾಗಿ ಅವನನ್ನು ತೊರೆದು ಓದು ಮುಂದುವರಿಸಲು, ತನ್ನ ಸ್ವಪ್ನವನ್ನು ನನಸಾಗಿಸಲು ಹೊರಟಿದ್ದರೂ ಅವನು ತಾನಾಗಿಯೇ ಧನಸಹಾಯ ಮಾಡಲು ಒಪ್ಪಿದುದು ಅವಳಿಗೆ ಆಶ್ಚರ್ಯವನ್ನುಂಟುಮಾಡಿತ್ತು. 'ಎಲ್ಲಿಯಾದರೂ ಹಾಳಾಗು. ನಾನು ಬೇರೆ ಮದುವೆ ಮಾಡಿಕೊಂಡು ಸುಖವಾಗಿರುತ್ತೇನೆ' ಎಂದು ಗಂಡಿನ ದರ್ಪ ತೋರುವುದು ಶಾಮುವಿಗೆ ಸಾಧ್ಯವಿತ್ತು. ಪತಿಯ ಅಧಿಕಾರವನ್ನು ಚಲಾಯಿಸಿ 'ನೀನು ನನ್ನ ಹೆಂಡತಿ. ನನ್ನನ್ನು ಬಿಟ್ಟು ಹೋಗುವ ಹಕ್ಕು ನಿನಗಿಲ್ಲ. ನೀನು ಇಲ್ಲಿಯೇ ಸಾಯುವವರೆಗೂ ಇರಬೇಕು' ಎಂದು ಅವಳನ್ನು ಬಂಧನದಲ್ಲಿರಿಸಬಹುದಾಗಿತ್ತು. ಹಾಗೇನಾದರೂ ಅವನು ಮಾಡಿದ್ದರೆ ಅವಳು ರೊಚ್ಚಿಗೆದ್ದು ಬಂಧನವನ್ನು ಹರಿದೊಗೆದು ಓಡಿ ಹೋಗುತ್ತಿದ್ದಳೋ ಏನೋ? ಆದರೆ ಅವಳ ಮೇಲೆ ತನ್ನ ಒಡೆತನವನ್ನು ಸ್ಥಾಪಿಸುವ ಯೋಚನೆಯನ್ನು ಮಾಡದೆ, ಕಂದನನ್ನು ಕಳೆದುಕೊಂಡಿದ್ದ ತಾಯಿ ತನ್ನ ಮನದ ಅಳಲನ್ನು ಸ್ವಲ್ಪವಾದರೂ ಮರೆತು ನೆಮ್ಮದಿಯಿಂದಿರಲಿ ಎಂಬ ಉದ್ದೇಶವೊಂದರಿಂದಲೇ ಅವನು ಅವಳಿಗೆ ಮೆಡಿಕಲ್ ಕಾಲೇಜು ಸೇರಲು ಅನುಮತಿ ಕೊಟ್ಟಿದ್ದ.

ವೀಣಾಳ ಮೃತ್ಯು ಮೀರಳ ಮನಸ್ಸಿನ ಶಾಂತಿಯ ಬುಡವನ್ನು ಹಿಡಿದು ಅಲುಗಿಸಿದೆ ಎಂಬ ವಿಚಾರ ಶಾಮುವಿಗೆ ತಿಳಿದಿತ್ತು. ಸಂಸಾರ ಸಾಗರದ ಮೇಲೆ ಬಿರುಗಾಳಿಯಂತೆ ಬೀಸಿ ಬಂದ ಮೃತ್ಯುವಿನ ಪೌರುಷದಿಂದ ಎದ್ದ ಶೋಕದ ಅಲೆಗಳ ಹೊಡೆತಕ್ಕೆ ಮೀರ ಅಸಹಾಯಕಳಾಗಿ ತೇಲಿಹೋಗುತ್ತಿದ್ದಳು. ಕರುಳಿನ ಚೂರನ್ನು ಬೆಂಕಿಗರ್ಪಿಸಿ ತೊಳಲುತ್ತಿದ್ದ ತಾಯಿಯನ್ನು ಶಾಮು ಅರ್ಥ ಮಾಡಿಕೊಂಡಿದ್ದ. ಶಾಮುವಿಗೂ ತನ್ನ ಮುದ್ದಿನ ಜಾನಿಯನ್ನು ಮರೆಯುವುದು ಸಾಧ್ಯವಿರಲಿಲ್ಲ. ಐದು ವರ್ಷ ತಮ್ಮ ಬಾಳನ್ನು ಬೆಳಗಿ, ಆನಂದದ ಅಮೃತ ವರ್ಷವನ್ನೆರೆದು ವೀಣಾ ಕಣ್ಮರೆಯಾಗಿದ್ದಳು. ವೀಣ ಬದುಕಿದ್ದಾಗ ಒಂದೊಂದು ದಿನವೂ ಒಂದೊಂದು ಹಬ್ಬದಂತಿತ್ತು. ಮನೆಯ ಮೂಲೆ ಮೂಲೆಯೂ ಅವಳ ನಗೆಯ ಬೆಳದಿಂಗಳಿನಿಂದ

ಕಾಂತಿಯುತವಾಗಿರುತ್ತಿತ್ತು. ತನ್ನ ಮುದ್ದು ಮಾತುಗಳಿಂದ ವೀಣ ಬೇರೊಂದು ಪ್ರಪಂಚವನ್ನೇ ಸೃಷ್ಟಿಸಿದ್ದಳು. ಅಂತಹ ಮಗಳನ್ನು ಕಳೆದುಕೊಂಡ ತಾಯಿತಂದೆಗೆ ಭವಿಷ್ಯವೆಲ್ಲ ಅಂಧಕಾರಮಯವಾಗಿತ್ತು.

ಶಾಮುವಿಗಾದರೂ ತನ್ನ ಜಮೀನು, ಹೊಲ, ತೋಟ, ಎತ್ತು ಇವುಗಳ ಸಂರಕ್ಷಣೆಯಲ್ಲಿ ದುಃಖವನ್ನು ಸ್ವಲ್ಪಮಟ್ಟಿಗಾದರೂ ಮರೆಯುವುದು ಸಾಧ್ಯವಿತ್ತು. ಜಮೀನು, ಹೊಲ, ತೋಟಗಳೊಡನೆ ಬೆಳೆದುಬಂದಿದ್ದ ಆತ್ಮೀಯತೆಯನ್ನು ಅವನು ಕತ್ತರಿಸಿಹಾಕಲಾರದವನಾಗಿದ್ದ. ಪ್ರಕೃತಿದೇವಿಯ ನಿತ್ಯಪೂಜೆಯಲ್ಲಿ ಅವನಿಗೆ ಆತ್ಮ ತೃಪ್ತಿ ಸಿಕ್ಕಿತ್ತು. ವೀಣ ಮರೆಯಾದಾಗಿನಿಂದ ಅವನ ಉತ್ಸಾಹ ತಗ್ಗಿದ್ದರೂ ಪೂರ್ತಿ ಮರೆಯಾಗಿರಲಿಲ್ಲ. ಜಮೀನಿನ ಮೇಲೆ ಭಕ್ತಿ ಸ್ವಲ್ಪವಾದರೂ ಅಳಿದಿರಲಿಲ್ಲ. ವೀಣ ಹೋದ ಹೊಸತರಲ್ಲಿ ಕೆಲವು ವಾರಗಳು ಅವನು ಮಂಕನಂತೆ, ಬೆಪ್ಪನಂತೆ ಏನೂ ಮಾಡಲೂ ತೋರದೆ ಭೂಮಿಯನ್ನು ಅಲಕ್ಷಿಸಿದ್ದ. ಊಟ ತಿಂಡಿಯಲ್ಲಿ ಅನಾದರ ತೋರಿದ್ದ. ಮನೆಯನ್ನು ಸೇರದೇ ಮನೆಯ ಹೊರಗೇ ಕಾಲ ಕಳೆಯುತ್ತಿದ್ದ.

ಒಂದು ದಿನ ಶಾಮು ಅಲೆದಾಡುತ್ತಾ ಹಾಗೆಯೇ ಕೊಟ್ಟಿಗೆಯ ಕಡೆ ಹೋದ. 'ಲಕ್ಷ್ಮಣ' ಶಾಮುವನ್ನು ನೋಡುತ್ತಲೇ ಕೊರಳನ್ನು ಅವನ ಮುಂದೆ ನೀಡಿತು. ತನ್ನ ಪ್ರೀತಿಯ ಎತ್ತು ವಿಶ್ವಾಸದಿಂದ ಮುಂದೆ ನೀಡಿದ ಕೊರಳನ್ನು ಅಲಕ್ಷಿಸಿ ಹೋಗುವುದು ಶಾಮುವಿಗೆ ಸಾಧ್ಯವಾಗಲಿಲ್ಲ. ಶಾಮುವಿನ ಕೈ ಅವನರಿಯದಂತೆ ಅಭ್ಯಾಸಬಲದಿಂದ ಎತ್ತಿನ ಗಂಗೆದೊಗಲನ್ನು ನೇವರಿಸಿತು. ಕಣ್ಣುಗಳು ಎತ್ತಿನ ಬೆನ್ನು, ಪಕ್ಕೆಯ ಮೇಲೆ ಓಡಾಡಿದವು. ಪಕ್ಕೆಯ ಮೇಲೆ ಸಗಣಿಯ ಉಂಡೆಗಳು ಅಂಟಿಕೊಂಡಿದ್ದವು. ಎತ್ತಿನ ಮೈಯಿಂದ ಗಂಜಲದ ವಾಸನೆ ಹೊರಡುತ್ತಿತ್ತು. ನೊಣ, ಸೊಳ್ಳೆಗಳು ಅದರ ಮೈಮೇಲೆ ಮುತ್ತಿಕೊಂಡು ಹಿಂಸೆ ಮಾಡುತ್ತಿದ್ದವು. ಎತ್ತು ಆಗಾಗ್ಗೆ ತನ್ನ ಬಾಲದಿಂದ ಅವುಗಳನ್ನು ಓಡಿಸುತ್ತಿದ್ದರೂ ಹಿಂಸೆ ತಪ್ಪಿರಲಿಲ್ಲ. ಎತ್ತಿನ ಮೈಮೇಲೆ ಮೂಳೆ ಎದ್ದು ಕಾಣುತ್ತಿತ್ತು. ಕಣ್ಣಿಂದ ನೀರು, ಜಿಬುರು ಸೋರುತ್ತಿತ್ತು.

ಎತ್ತಿನ ಸ್ಥಿತಿ ನೋಡಿ ಶಾಮು ಚಕಿತನಾದ.ಅವನಿಗೆ ತಿಳಿವು ಬಂದಾಗಿನಿಂದ ಒಂದು ದಿನವಾದರೂ ಎತ್ತನ್ನು ಈ ಸ್ಥಿತಿಯಲ್ಲಿಟ್ಟಿರಲಿಲ್ಲ. ಪ್ರತಿದಿನ ತಾನೆ ನಿಂತು ನಿಂಗನ ಕೈಲಿ ಎತ್ತುಗಳನ್ನು ತೊಳೆಸುತ್ತಿದ್ದ. ಅವುಗಳ ಮೈಮೇಲೆ ಒಂದು ಚುಕ್ಕಿ ಯಾಗಲೀ, ಕಲೆಯಾಗಲಿ ಕಂಡರೆ ಶಾಮು ನಿಂಗನ ಮೇಲೆ ರೇಗಿಬಿಡುತ್ತಿದ್ದ. ಶಾಮು ವಿಗೆ ಹೆದರುತ್ತಿದ್ದ ನಿಂಗ ಎತ್ತುಗಳನ್ನು ಶುಭ್ರವಾಗಿಡುತ್ತಿದ್ದ. ಹುಲ್ಲು, ನೀರು, ಹಿಂಡಿ, ಕಲಗಚ್ಚನ್ನು ತಾನೇ ಖುದ್ದಾಗಿ ನಿಂತು ಎತ್ತುಗಳಿಗೆ ಹಾಕಿಸುತ್ತಿದ್ದ. ಹಗಲೆಲ್ಲಾ

ಎತ್ತಿನ ಕೈಲಿ ದುಡಿಸಿ ಅದನ್ನು ಉಪವಾಸ ಕೆಡವಿದರೆ ಅದಕ್ಕಿಂತಲೂ ಪಾಪದ ಕೆಲಸ ಬೇರೊಂದಿಲ್ಲ ಎಂಬುದೇ ಅವನ ಭಾವನೆಯಾಗಿತ್ತು. ತನ್ನ ಅತುಳೈಶ್ವರ್ಯ ದಿನದಿನಕ್ಕೆ ವೃದ್ಧಿಯಾಗುತ್ತಿರುವುದು ಗೋಮಾತೆ, ಭೂಮಾತೆಯಿಂದಲೇ ಎಂಬುದು ಅವನಿಗೆ ಖಚಿತವಾಗಿ ತಿಳಿದಿತ್ತು.

ವೀಣಳ ಸಾವಿನಿಂದ ಅವನು ಎಲ್ಲವನ್ನೂ ಅಲಕ್ಷಿಸಿದ್ದ. ಅವನಿಗೆ ಯಾವುದೂ ಬೇಡವಾಗಿತ್ತು. ಶಾಮು ನಿರಾಸಕ್ತಿಯಿಂದಿರುವುದನ್ನು ನೋಡಿ ನಿಂಗನೂ ತನ್ನ ಕೆಲಸಗಳಲ್ಲಿ ಆಸಕ್ತಿ ವಹಿಸಿರಲಿಲ್ಲ. "ಶಾಮಪ್ನೋರು ದುಃಖವಾಗವ್ರೆ. ನಾನು ಎಂಗೆ ಮಾಡಿದ್ರೂ ಆಯ್ತು" ಎಂದುಕೊಂಡು ಕೆಲಸಗಳನ್ನು ಹಾರಿಸಿಬಿಡುತ್ತಿದ್ದ. ಅದರ ಪರಿಣಾಮವಾಗಿ ಎತ್ತುಗಳು ಕೊಳಕಾಗಿ ಬಡಕಲಾಗಿದ್ದವು.

ಶಾಮುವಿಗೆ ಎತ್ತುಗಳ ಅವಸ್ಥೆ ನೋಡಿ ಒಂದು ಗಳಿಗೆ ಉಸಿರು ಕಟ್ಟಿದಂತಾಯಿತು. ಅವನು ತನ್ನ ಕಣ್ಣುಗಳನ್ನೆ ನಂಬಿರಲಿಲ್ಲ. ಕಣ್ಣುಜ್ಜಿಕೊಂಡು ಪುನಃ ನೋಡಿದ. ಎತ್ತುಗಳ ಸ್ಥಿತಿ ನೋಡಿ ಅವನ ರಕ್ತ ಕುದಿಯಿತು. 'ಎತ್ತುಗಳು ಎಷ್ಟೊಂದು ಹೀನಸ್ಥಿತಿಯಲ್ಲಿದ್ದರೂ ತಾನು ಅವುಗಳನ್ನು ಗಮನಿಸದೇ ಇದ್ದುದು ತನ್ನ ತಪ್ಪು' ಎಂದು ಶಪಿಸಿಕೊಂಡ. ವೀಣ ತೀರಿಹೋದ ದಿನದಿಂದ ಮೊದಲ್ಗೊಂಡು ಯಾವ ಕೆಲಸ ತಾನೆ ನಿಂತಿದೆ? ಸೂರ್ಯ ಎಂದಿನಂತೆ ಹುಟ್ಟಿ ಮುಳುಗುತ್ತಾನೆ. ಚಂದ್ರ ಉದಯಿಸುತ್ತಾನೆ. ವೆಂಕಮ್ಮನವರು ಅಡಿಗೆ ಮಾಡುತ್ತಾರೆ. ತಾವು ಊಟ ಮಾಡುವುದು ತಪ್ಪಿಲ್ಲ. ಯಾವ ಕಾರ್ಯ ಅವಳ ಸಾವಿನಿಂದ ನಿಂತಿದೆ? ದಿನಗಳು ಉರುಳುತ್ತಿವೆ. ಆದರೆ ಕರ್ತವ್ಯಭ್ರಷ್ಟರಾಗುವುದು ಸರಿಯೇ? ಕೆಲಸ ಕಾರ್ಯಗಳು ಮೊದಲಿನ ಆತುರ ಹುಮ್ಮಸ್ಸಿನಿಂದ ಸಾಗುತ್ತಿಲ್ಲ ನಿಜ. ಆದರೆ ತನ್ನ ಕರ್ತವ್ಯ ತಾನು ಪಾಲಿಸಬೇಡವೇ? ಸುಖ, ಆನಂದ ಅನುಭವಿಸಲು ತಾನು ಬದುಕಬೇಕಾಗಿಲ್ಲ. ಆದರೂ ಬದುಕಿರುವುದಂತೂ ಅನಿವಾರ್ಯ. ಬದುಕಿರುವವರೆಗೆ ತನ್ನ ಕರ್ತವ್ಯ ತಾನು ಮಾಡಬೇಡವೆ? ತಂದೆ ತನ್ನ ಮೇಲೆ ನಂಬಿಕೆಯಿಟ್ಟಿರಲಿಲ್ಲವೇ? ತಮ್ಮ ಅಪಾರ ಸಂಪತ್ತನ್ನು ತನಗೊಪ್ಪಿಸಿ ನಿಶ್ಚಿಂತರಾಗಿ ಸತ್ತಿರಲಿಲ್ಲವೇ? ತನ್ನ ಈ ಅನಾದರದಿಂದ ಅವರ ಆತ್ಮಕ್ಕೆ ಎಷ್ಟು ದುಃಖವಾಗಿರಬೇಕು. ತಂದೆಗೆ ದ್ರೋಹ.... ಭೂದೇವಿಗೆ, ಗೋಮಾತೆಗೆ ದ್ರೋಹ.... ತಪ್ಪು ಹಾದಿ ಹಿಡಿದು ಚಾಟಿಯೇಟು ತಿಂದ ಕುದುರೆಯಂತೆ ಶಾಮು ಜಾಗೃತಗೊಂಡ.

"ನಿಂಗಾ.... ನಿಂಗಾ...." ಶಾಮು ಗಡುಸಾಗಿ ಕೂಗಿದ. ಅಂಗಳದಲ್ಲಿ ಕುಳಿತು ತೆಂಗಿನಕಾಯಿ ಮೊಟ್ಟೆ ಸುಲಿಯುತ್ತಿದ್ದ ನಿಂಗ ಶಾಮುವಿನ ಕೂಗು ಕೇಳಿ ಓಡಿಬಂದ. ನಿಂಗನ ಮುಖ ನೋಡಿದ ಕೂಡಲೇ ಶಾಮುವಿನ ಸಿಟ್ಟು ದ್ವಿಗುಣವಾಯಿತು.

"ಏನು ಮಾಡ್ತಾ ಇದ್ದೆಯೋ?"

ರಾಯರು ಕೋಪಗೊಂಡಿರುವರೆಂಬುದು ನಿಂಗನಿಗೆ ತಿಳಿಯಿತು. ಅವನು ಮೆಲ್ಲಗೆ "ವೆಂಕಮ್ಮಾವ್ರು ಉಪ್ಪಿಟ್ಟಿಗೆ ಕಾಯಿಲ್ಲಾಂತಿದ್ರು. ಕಾಯಿ ಸುಲೀತಿದ್ದೆ ಒಡೆಯಾ" ಎಂದ.

ಶಾಮು ಎತ್ತಿನ ಮೂಳೆಗಳನ್ನು ತೋರಿಸಿ, "ಹೀಗೇ ಏನೋ ಎತ್ತನ್ನು ನೋಡಿಕೊಳ್ಳೋದು? ಸ್ನಾನ ಮಾಡಿಸಿ ಎಷ್ಟು ತಿಂಗಳಾಯಿತು?" ಎಂದ.

"........"

"ಎಷ್ಟು ದಿವಸವಾಯಿತೋ?"

"ಒಂದು ತಿಂಗಳಾಗಿರಬೈದು."

"ನಾನು ಯಾವ ಕೆಲಸಕ್ಕೂ ಬರೋದಿಲ್ಲಾಂತ ತಿಳಿದು ಬೇಕಾಬಿಟ್ಟಿ ಕೆಲಸ ಮಾಡ್ತಿರುವ ಹಾಗಿದೆ. ಏನು ಕೆಲಸ ಮಾಡಿದ ಹಾಗೆ ಮಾಡಿಸ್ಕೋತಿದೀನಿಂತ ಅಂದ್ಕೊಂಡಿದೀಯೇನು? ದಿನಾ ಹಿಂಡಿ ಕಲಸಿಡುತ್ತಿದ್ದೀಯಾ?"

"........"

"ಹೋಗು, ಎತ್ತುಗಳನ್ನು ಕೆರೆ ಕಡೆ ಕರ್ಕೊಂಡು ಹೋಗಿ ಚೆನ್ನಾಗಿ ತೊಳೆದು ಕರೆದುಕೊಂಡು ಬಾ. ಎಲ್ಲವನ್ನೂ ಕರ್ಕೊಂಡು ಹೋಗು."

ನಿಂಗ ಮರುಮಾತನಾಡದೆ ಸಾಲಾಗಿ ನಿಂತು ಒಣಹುಲ್ಲು ಮೇಯುತ್ತಿದ್ದ ಹತ್ತು ಎತ್ತುಗಳನ್ನು ಬಿಚ್ಚಿ ಕೆರೆಯ ಕಡೆ ಕರೆದುಕೊಂಡು ಹೋದ.

"ಹಸುಗಳು ಹೇಗಿವೆಯೋ?" ಎಂದುಕೊಂಡೇ ಶಾಮು ಹಸುವಿನ ಕೊಟ್ಟಿಗೆಗೆ ಹೋದ. ಆದರೆ ಹಸುಗಳು ಶುಭ್ರವಾಗಿ ಎಂದಿನಂತೆ ಮೈತುಂಬಿಕೊಂಡಿದ್ದವು. ವೆಂಕಮ್ಮನವರ ವಿಚಕ್ಷಣೆಯಿಂದಾಗಿ ಕೊಟ್ಟಿಗೆ, ಹಸುಗಳು ಎಂದಿನಂತೆಯೇ ಚೊಕ್ಕಟವಾಗಿದ್ದವು.

"ಇನ್ನು ತೋಟ, ಹೊಲ ಯಾವ ಸ್ಥಿತಿಯಲ್ಲಿದೆಯೋ ನೋಡಬೇಕು" ಎಂದುಕೊಳ್ಳುತ್ತಾ ಶಾಮು ಒಳಗೆ ಬಂದ.

ವೆಂಕಮ್ಮನವರು ತೆಂಗಿನಕಾಯಿಯನ್ನು ತುರಿಯುತ್ತಿದ್ದರು.

"ಅತ್ತೇ, ಎತ್ತುಗಳ ಸ್ಥಿತಿ ನೋಡಿದಿರಾ? ಹಸುಗಳೇನೋ ನಿಮ್ಮ ದಯದಿಂದ ಚೆನ್ನಾಗಿದ್ದವು."

"ನನಗೂ ದಿನಾ ನಿಂಗನಿಗೆ ಹೇಳಿ ಹೇಳಿ ಸಾಕಾಗಿಹೋಗಿತ್ತು. ಮನೆಯ ಯಜಮಾನ ಯಾವುದಕ್ಕೂ ಬರದಿದ್ದ ಮೇಲೆ ಅವರಿಗೆಲ್ಲಾ ಆಡಿದ್ದೇ ಆಟವಾಗಿ ಹೋಗಿತ್ತು."

"ನೀವು ನನಗಾದರೂ ಒಂದು ಮಾತು ಹೇಳಬೇಕಾಗಿತ್ತು."

"ನಾನು ಎರಡು ಮೂರು ಸಲ ಹೇಳೋಣಾಂತ ಅಂದುಕೊಂಡೆ. ಆದರೆ ನಿನ್ನ ದುಃಖ ನಿನಗೆ. ನೀನು ಹುಚ್ಚನ ಹಾಗೆ ಕಂಗೆಟ್ಟು ಅಲೀತಿರುವಾಗ ನಾನು ಯಾವ ಬಾಯಲ್ಲಿ...." ಮುಂದೆ ಮಾತು ಹೊರಡದೆ ಕಂಠ ಗದ್ಗದವಾಯಿತು.

ಶಾಮು ಮಾತನಾಡದೆ ಎದ್ದುಹೋಗಿ ಡ್ರಾಯಿಂಗ್ ರೂಮಿನಲ್ಲಿದ್ದ ಸೋಫಾದ ಮೇಲೆ ಒರಗಿಕೊಂಡ. ನಾಲ್ಕು ನಿಮಿಷ ಸೂರಿನ ಕಡೆಯೇ ನೋಡುತ್ತಾ ಕುಳಿತಿದ್ದು ಎದ್ದು ಅಂಗಳಕ್ಕೆ ಬಂದು ಬಾವಿಯ ಕಟ್ಟೆಯ ಮೇಲೆ ಕುಳಿತು ಬಾವಿಯ ತಳದಲ್ಲಿ ಮಿನುಗುತ್ತಿದ್ದ ನೀರನ್ನು ನೋಡಿದ. ನೆತ್ತಿಯ ಮೇಲೆ ಸೂರ್ಯ ಉರಿಯು ತ್ತಿದ್ದ. ಅದರ ಕಾವನ್ನು ತಡೆಯಲಾರದೆ ಶಾಮು ತಾನು ಮಲಗಿಕೊಳ್ಳುವ ರೂಮಿಗೆ ಹೋದ. ಹಾಸಿಗೆಯ ಮೇಲೆ ಉರುಳಿ ತಲೆಯ ಹಿಂದೆ ಕೈಕಟ್ಟಿ ಸ್ವಲ್ಪ ಹೊತ್ತು ಮಲಗಿದ. ಅದು ಬೇಸರವಾಯಿತು. ಏನು ಮಾಡಬೇಕು, ಹೇಗೆ ಸಮಯ ಕಳೆಯ ಬೇಕೆನ್ನುವುದೇ ಅವನಿಗೆ ತೋರಲಿಲ್ಲ. ಪಿಕಾಸಿ ಹಿಡಿದು ಜಾಜಿಪೊದೆಯ ಪಾತಿಯನ್ನು ಸರಿಮಾಡಿದ. ಬಿಸಿಲಿನಲ್ಲಿ ಕುಳಿತು ಮಲ್ಲಿಗೆ ಚಪ್ಪರ ಸರಿಮಾಡಿದ. ಹಾಲಿಗೆ ಬಂದು, ಮಸಿ ಹಿಡಿದು ನೇತಾಡುತ್ತಿದ್ದ ಲಾಂದ್ರವನ್ನು ಅರಿಸಿದ. ಲಾಂದ್ರವನ್ನು ಒರೆಸಿ ಒಂದು ಕಡೆ ಕೈಕಟ್ಟಿ ಕುಳಿತುಕೊಂಡ.

ವೀಣಳಿದ್ದಾಗ ಒಂದು ದಿನ ಒಂದು ಕ್ಷಣದಂತೆ ಕಳೆಯುತ್ತಿತ್ತು. ಆದರೆ ಈಗ ಸಮಯವೇ ಹೋಗುತ್ತಿರಲಿಲ್ಲ.

"ಶಾಮಣ್ಣಾ, ತಿಂಡೀಗೆ ಬಾಪ್ಪ. ಹಾಗೆ ಮೀರಾನೂ ಕರ್ಕೊಂಡು ಬಾ" ಎಂದು ವೆಂಕಮ್ಮನವರು ಕೂಗಿದರು. ಶಾಮು ಜೇಡರಬಲೆ ತೆಗೆಯುತ್ತಿರುವುದನ್ನು ನೋಡಿ ಹೇಳಿದರು.

"ನೀನ್ಯಾಕಪ್ಪ ತೆಗೀಬೇಕು? ಬೋರನಿಗೆ ಹೇಳು, ತೆಗೀತಾನೆ."

"ಯಾಕೋ ಬೇಜಾರಾಯಿತು ಅತ್ತೆ, ಅದಕ್ಕೆ ನಾನೇ ತೆಗೀತಿದ್ದೆ."

"ತಿಂಡೀಗೆ ಬಾಪ್ಪ, ಉಪ್ಪಿಟ್ಟು ಆರಿಹೋಗುತ್ತೆ. ಮೀರಾ ಎಲ್ಲಿ?"

"ನಾನು ಕೂಗುತ್ತೀನಿ, ಮೀರಾ.... ಮೀರಾ...."

ಶಾಮು ಒಂದು ಸಲ ಅವಳನ್ನು ಕೂಗಿ ರೂಮಿಗೆ ಹೋದ. ರೂಮಿನಲ್ಲಿ ಪುಸ್ತಕವೊಂದನ್ನು ಹಿಡಿದು ಮೀರ ಕೂತಿದ್ದಳು. ಅವಳ ಕಣ್ಣುಗಳು ಪುಸ್ತಕದ ಮೇಲೆ ನೆಟ್ಟಿದ್ದರೂ, ಓದುತ್ತಿರಲಿಲ್ಲವೆಂಬುದು ಅವಳ ಮುಖಭಾವದಿಂದ ಸ್ಪಷ್ಟವಾಗಿ ತಿಳಿಯುತ್ತಿತ್ತು. ಅವಳು ಹಾಳೆಗಳನ್ನು ಮಗುಚುತ್ತಿರಲಿಲ್ಲ.

ಶಾಮು ಒಂದು ನಿಮಿಷ ಬಾಗಿಲಿನಲ್ಲಿಯೇ ನಿಂತು ನೋಡಿ ಅನಂತರ

ನಿಧಾನವಾಗಿ ಒಳಗೆ ಬಂದು ಅವಳ ಭುಜದ ಮೇಲೆ ಕೈಯಿಟ್ಟ. ಅನಿರೀಕ್ಷಿತವಾಗಿ ಹೊಡೆಸಿಕೊಂಡವಳಂತೆ ಮೀರ ಮೆಟ್ಟಿಬಿದ್ದಳು.

"ತಿಂಡಿ ತಿನ್ನೋಣ ಬಾ."

ಮೀರ ಎದ್ದು ಶಾಮುವನ್ನು ಹಿಂಬಾಲಿಸಿದಳು.

*****

ತಾನು ಮೆಡಿಕಲ್ ಕಾಲೇಜು ಸೇರಲು ಶಾಮು ತನ್ನ ಒಪ್ಪಿಗೆ ಕೊಟ್ಟ ದಿನ ದಿಂದಲೂ ಮೀರಳಿಗೆ ಅವನಲ್ಲಿ ಒಂದು ಬಗೆಯ ಆದರ, ಗೌರವ ಮೂಡಿದವು. 'ಅವನೂ ತನ್ನಂತೆಯೇ ಮಗಳನ್ನು ಕಳೆದುಕೊಂಡ ಹತಭಾಗ್ಯ ತಂದೆ, ತನ್ನಂತೆಯೇ ದುಃಖಿ' ಎಂಬ ಕಾರಣದಿಂದ ಮೀರಳ ಹೃದಯ ಪತಿಗಾಗಿ ಮಿಡುಕಿತು. ದುಃಖದ ಸುಳಿಯಲ್ಲಿ ಸಿಕ್ಕಿ ತನ್ನಂತೆಯೇ ಆತನೂ ತಲ್ಲಣಿಸುತ್ತಿರುವುದನ್ನು ನೋಡಿ ಮೀರ ಕನಿಕರಪಟ್ಟಿದ್ದಳು. ತನ್ನಿಂದಾಗಿ ಆತ ಹೃದಯದಾಸೆಯೆಲ್ಲವನ್ನೂ ಅಲ್ಲಿಯೇ ಹೂತುಬಿಡಬೇಕಾಗಿ ಬಂದಿರುವುದನ್ನು ನೋಡಿ ಮೀರ ಮರುಕಪಟ್ಟಿದ್ದಳು.

ಹಿಂದೆ ವೀಣ ತನ್ನ ಬಸುರಿನಲ್ಲಿದ್ದಾಗ ಅದೊಂದು ಬೆಳದಿಂಗಳಿನ ರಾತ್ರಿ ಕೆರೆಯ ತೀರದಲ್ಲಿ ಬೆಳದಿಂಗಳೂಟ ಮಾಡುತ್ತಿದ್ದಾಗ ಶಾಮು ತನ್ನ ಹೃದಯದಾಸೆ ಯನ್ನು ಅವಳಿಗೆ ಬಾಯಿಬಿಟ್ಟು ಹೇಳಿದ್ದ, "ನನಗೆ ಮನೆ ತುಂಬಾ ಮಕ್ಕಳಿರಲು ಆಸೆ. ಮನೆ ನಂದಗೋಕುಲದ ಹಾಗಿರುತ್ತದೆ. ನನಗೆ ಆರು ಹೆಣ್ಣು, ಮೂರು ಗಂಡುಮಕ್ಕಳು ಬೇಕು." ಅವನ ಹೆಬ್ಬಯಕೆ ಆಗ ಅವಳನ್ನು ಭಯಭೀತಳನ್ನಾಗಿ ಮಾಡಿತ್ತು. ಆಗ ಅವಳು ಒರಟೊರಟಾಗಿ "ಒಂಭತ್ತು ಮಕ್ಕಳನ್ನು ಹೆರುವುದರಲ್ಲಿ ನನ್ನ ಸಮಾಧಿ ಸಿದ್ಧವಾದಂತೆಯೇ ಸರಿ" ಎಂದು ಕಟುವಾಗಿ ನುಡಿದಿದ್ದಳು. ಪುರುಷರ ಪಶುತ್ವದ ಬಗ್ಗೆ ಅವಳು ತೀವ್ರ ತಿರಸ್ಕಾರ ತಾಳಿದ್ದಳು.

ಆದರೆ ಆಗಿನ್ನೂ ಮೀರ ತಾಯಿಯಾಗಿರಲಿಲ್ಲ. ತಾಯಿಯಾಗುವುದಕ್ಕೆ ಮುಂಚೆ, ವೀಣಳಿನ್ನೂ ಗರ್ಭದಲ್ಲಿ ರೂಪುಗೊಳ್ಳುತ್ತಿದ್ದಾಗ ಅವಳು ಬಯಕೆಯ ಸಂಕಟದಿಂದ ಬಸವಳಿದು ದುರ್ಬಲಳಾಗಿದ್ದಾಗ ಆದಷ್ಟು ಬೇಗ ಮೈಕಳೆದರೆ ಸಾಕು ಎಂದು ಮುಳ್ಳಿನ ಮೇಲೆ ನಿಂತವಳಂತೆ ಮಗುವಿನ ಜನ್ಮಕ್ಕಾಗಿ ಕಾಯುತ್ತಿದ್ದಾಗ ಮೀರಳಿಗೆ ಹಾಗೆನಿಸಿದ್ದು ಸಹಜ. ಮಗು ಬೆಳೆದಂತೆ, ತಾಯ್ತನದ ಮೊಗ್ಗು ಅರಳಿ ದಂತೆ ಮಮತೆಯ ಸೌರಭದಲ್ಲಿ ಮಿಂದ ಮೀರ ತಾನರಿಯದಂತೆ ಮಿದುವಾಗಿದ್ದಳು. ತಾಯ್ತನದ ಕಾವಿಗೆ ಅವಳೆದೆ ಕಾಠಿಣ್ಯ ಕಳೆದುಕೊಂಡು ಮಿದುವಾಗಿತ್ತು. ವೀಣ ಅವಳ ಬಾಳನ್ನು ಪ್ರವೇಶಿಸಿದ ಮೇಲೆ ಸಂಸಾರಾಕಾಶದ ಮೇಲೆ ಪೂರ್ಣಚಂದ್ರ ಸದಾ ಬೆಳಗುತ್ತಿದ್ದ. ಮಕ್ಕಳೇ ಬೇಡ ಎಂದು ನುಡಿಯುತ್ತಿದ್ದ ನಾಲಿಗೆ ಮಕ್ಕಳಿಂದಲೇ

ಬದುಕು ಎಂದು ನುಡಿಯಲು ಸಹ ಸಿದ್ಧವಾಗಿತ್ತು. ಅವಳು ಯಾವ ಕೆಟ್ಟ ಗಳಿಗೆಯಲ್ಲಿ ಮಕ್ಕಳು ಬೇಡ ಎಂದು ನುಡಿದಿದ್ದಳೋ? ವಿಧಿ ಅವಳ ಪಾಲಿಗೆ ಆ ನುಡಿಯನ್ನು ಸತ್ಯವನ್ನಾಗಿಸಿತು. ಅವಳಾಡಿದ ಮಾತೇ ಅವಳಿಗೆ ಶಾಪವಾಯಿತು.

ಮದುವೆ ಮಾಡಿಕೊಂಡು ಗೃಹಿಣಿಯಾಗಿ ಬಾಳುವ ಆಸೆ ಮೀರಳಿಗೆ ಎಂದೂ ಇರಲಿಲ್ಲ. ವೈದ್ಯಳಾಗಿ ಜನಸೇವೆ ಮಾಡುವ ಹಂಬಲ ಚಿಕ್ಕವಯಸ್ಸಿನಲ್ಲಿಯೇ ಅವಳ ಎಳೆಯ ಮನಸ್ಸಿನಲ್ಲಿ ಆಳವಾಗಿ ಬೇರೂರಿತ್ತು. ಮದುವೆಯ ಅಗತ್ಯ ಕಂಡುಬರುವುದಕ್ಕೆ ಮುಂಚೆಯೇ ಅವಳು ಶಾಮುವಿನ ಪತ್ನಿಯಾಗಿದ್ದಳು. ಮದುವೆಯಲ್ಲಿ ಅವಳಾಸೆಯ ಹೋಮವಾಯಿತು. ಗಂಡನೊಡನೆ ಬಾಳಬೇಕು, ಹೆಂಡತಿಗೆ ಗಂಡನೇ ದಿಕ್ಕು, ಅವನನ್ನು ಬಿಟ್ಟು ದೂರವಿರುವುದು ಭೂಷಣವಲ್ಲ ಎಂಬ ಹಿಂದೂ ಸಮಾಜದ ಕಾನೂನಿಗೆ ಅವಳು ತಲೆಬಾಗಿದ್ದಳೇ ಹೊರತು ಗಂಡನನ್ನು ಕಂಡರೆ ಅಮಿತಪ್ರೇಮ ಎಂದೂ ಅವಳಲ್ಲಿ ಮೂಡಿರಲಿಲ್ಲ. ದಾಂಪತ್ಯ ಜೀವನಕ್ಕಾಗಿ ಮೀರ ಎಂದೂ ಮೋಹಗೊಂಡಿರಲಿಲ್ಲ. ಒಮ್ಮೊಮ್ಮೆ ಅದರ ಸೆಳೆತವಿದ್ದರೂ, ಆ ಆಕರ್ಷಣೆಯಿಂದಾಗಿ ಅವಳು ಶಾಮುವಿನೊಡನೆ ಸಹಕರಿಸಿದ್ದರೂ ಬದುಕಿನಲ್ಲಿ ದಾಂಪತ್ಯ ಜೀವನಕ್ಕೆ ಪ್ರಧಾನ ಪಾತ್ರವನ್ನು ಕೊಟ್ಟಿರಲಿಲ್ಲ. ತನ್ನ ಗೆಳೆಯರಾದ ರಾಜು, ಚಂಪಾ, ನರ್ಮದಾ ಬಂದಿದ್ದಾಗ ರಾತ್ರಿ ತನ್ನ ಕೋರಿಕೆಯನ್ನು ತಿರಸ್ಕರಿಸಿ ಶಾಮು ತನ್ನ ಮೇಲೆ ಅತ್ಯಾಚಾರ ನಡೆಸಿದಾಗಿನಿಂದ ಮೀರಳಿಗೆ ಆ ಜೀವನದಲ್ಲಿ ಇದ್ದ ಅಲ್ಪ ಬೆಡಗೂ ಮಾಸಿಹೋಗಿ, ಒಂದು ರೀತಿಯ ಜಿಗುಪ್ಸೆ, ಅಸಹ್ಯ ತಲೆದೋರಿದ್ದವು.

ವೀಣ ಜನ್ಮತಾಳಿದಾಗಿನಿಂದ ಮೀರಳಿಗೆ ಬದುಕಿನಲ್ಲಿ ಉತ್ಸಾಹ ಹುಟ್ಟಿತ್ತು. ಅವಳ ಬಾಳಿಗೊಂದು ಅರ್ಥ ಬಂದಿತ್ತು. ವೀಣ ತನ್ನೊಡನಿದ್ದರೆ ತಾನು ಯಾರೊಡನೆ ಬೇಕಾದರೂ, ಎಲ್ಲಿ ಬೇಕಾದರೂ ಸುಖವಾಗಿರಬಲ್ಲೆ ಎಂಬ ಆತ್ಮವಿಶ್ವಾಸ ಮೀರಳಲ್ಲಿ ಮೊಳಕೆಯಿಟ್ಟಿತ್ತು. ಶಾಮು ತನ್ನ ಗಂಡನೆಂದು ಮೀರ ಪ್ರೀತಿಸದಿದ್ದರೂ ತನ್ನ ಮಗಳ ತಂದೆ ಎಂಬ ಒಂದು ಕಾರಣದಿಂದ ಅವನನ್ನು ವಿಶ್ವಾಸದಿಂದ ಕಾಣತೊಡಗಿದ್ದಳು. ವೀಣಳ ಸಾವಿನಿಂದ ತಮ್ಮಿಬ್ಬರಿಗೂ ಬರಸಿಡಿಲು ಬಡಿದಂತಾಗಿದೆ ಎಂಬ ವಿಚಾರ ಅವಳಿಗೆ ತಿಳಿಯದೇ ಇರಲಿಲ್ಲ. ಶಾಮುವೂ ತನ್ನಷ್ಟೇ ಮೂಕವ್ಯಥೆಯಿಂದ ಸೊರಗುತ್ತಿದ್ದಾನೆ ಎಂದು ಅವಳಲ್ಲಿ ಸಹಾನುಭೂತಿ ಉದಯಿಸಿತ್ತು. ಮೀರ ಓದಲು ಶಾಮು ತನ್ನ ಒಪ್ಪಿಗೆ ಕೊಟ್ಟು, ಧನಸಹಾಯ ಮಾಡಲು ತಾನಾಗಿಯೇ ಒಪ್ಪಿದಾಗ ಮೀರ ಅವನನ್ನು ಆದರದಿಂದ ಕಾಣಲಾರಂಭಿಸಿದ್ದಳು. ತಾನು ಅವನನ್ನು ತಪ್ಪು ತಿಳಿದುಕೊಂಡಿರಲಿಲ್ಲವಷ್ಟೇ ಎಂದವಳು ಯೋಚಿಸುತ್ತಿದ್ದಳು.

ಏಟು ಬಿದ್ದ ಒರಟುಕಲ್ಲು ವಿಗ್ರಹದ ರೂಪ ತಾಳುವಂತೆ, ಬದುಕಿನಲ್ಲಿ ಪೆಟ್ಟುತಿಂದ ಮೀರ, ಶಾಮುವಿನ ಹೃದಯಗಳು ಪಕ್ವವಾಗತೊಡಗಿದ್ದವು. ತನ್ನಂತಹ ಹುಡುಗಿಯ ಕೈಹಿಡಿದು ಶಾಮುವಿನ ಬದುಕು ನೀರಸವಾಯಿತೆಂದು ಮೀರ ತಿಳಿದಿದ್ದಳು. ಅವನ ಬಾಳಿಗೆ ಹೊಂದಿಕೊಂಡು, ಪತಿಯೇ ದೇವರೆಂದು ಭಾವಿಸುತ್ತಾ ಅವನ ಸುಖದಲ್ಲಿ ತನ್ನ ಸುಖವನ್ನು ಕಂಡುಕೊಳ್ಳುವ ಹುಡುಗಿಯಾಗಿದ್ದಿದ್ದರೆ ಶಾಮುವಿನಷ್ಟು ಸುಖಿ ಯಾರೂ ಇರುತ್ತಿರಲಿಲ್ಲವೋ ಏನೋ? ಆ ಯೋಚನೆ ಬಂದಾಗಲೆಲ್ಲಾ ತಪ್ಪಿನ ಭಾರದಿಂದ ಅವಳ ತಲೆ ಬಾಗುತ್ತಿತ್ತು. ವೀಣಾಳ ಮೃತ್ಯು ಗಂಡ-ಹೆಂಡಿರ ನಾಲಿಗೆಯ ಶಕ್ತಿಯನ್ನು ಉಡುಗಿಸಿತ್ತು.

* * * * *

ಮೆಡಿಕಲ್ ಕಾಲೇಜಿಗೆ ಸೇರಲು ಮೀರ ಅಪ್ಲಿಕೇಷನ್ ಫಾರಮ್ಮನ್ನು ತಂದಿದ್ದಳು. ಫಾರಮ್ಮನ್ನು ಭರ್ತಿ ಮಾಡಿ ಅದರೊಡನೆ ಕಳುಹಿಸಬೇಕಾಗಿದ್ದ ಇತರ ಸರ್ಟಿಫಿಕೇಟ್, ಮಾರ್ಕ್ಸ್ ಕಾರ್ಡುಗಳನ್ನು ಪಡೆಯಲು ಅವಳು ಮೈಸೂರಿಗೆ ಹೋಗಬೇಕಾಗಿತ್ತು.

ಶಾಮುವಿನೊಡನೆ ಉಪ್ಪಿಟ್ಟು ತಿನ್ನುವಾಗ ಮೈಸೂರಿಗೆ ಹೋಗುವ ಸುದ್ದಿಯನ್ನು ಅವನ ಕಿವಿಯ ಮೇಲೆ ಹಾಕಬೇಕೆನಿಸಿದರೂ ವೆಂಕಮ್ಮನವರೆದುರಿಗೆ ಆ ವಿಚಾರವನ್ನು ಪ್ರಸ್ತಾಪ ಮಾಡುವ ಮನಸ್ಸಿಲ್ಲದೆ ಮೀರ ಸುಮ್ಮನಾದಳು. ಶಾಮು ತಿಂಡಿ ತಿಂದು, ಗದ್ದೆ ತೋಟ ಯಾವ ಸ್ಥಿತಿಯಲ್ಲಿದೆಯೋ ತಿಳಿಯಬೇಕೆಂದು ಹೊರಗೆ ಹೊರಡುವ ಸಿದ್ಧತೆಯಲ್ಲಿದ್ದ. ಮೀರ ಶಾಮುವನ್ನು ಅನುಸರಿಸಿ ಹಿಂದೆ ಬಂದಳು.

"ಮತ್ತೇ...." ಮಾತು ತೆಗೆದಳು ಮೀರ.

"ಏನು?"

"ನಿಮ್ಮ ಕೈಲಿ ಸ್ವಲ್ಪ ಮಾತನಾಡಬೇಕಾಗಿದೆ."

"ನಡಿ, ಡ್ರಾಯಿಂಗ್ ರೂಮಿಗೆ ಹೋಗೋಣ."

ಮೀರ ಡ್ರಾಯಿಂಗ್ ರೂಮಿನಲ್ಲಿದ್ದ ಸೋಫಾದ ಮೇಲೆ ಕುಳಿತಳು. ಶಾಮು ಅವಳ ಎದುರಿಗಿದ್ದ ಕುರ್ಚಿಯ ಮೇಲೆ ಕುಳಿತ. ಮೀರಳಿಗೆ ಮಾತು ಹೇಗೆ ಮೊದಲು ಮಾಡಬೇಕೆಂಬುದೇ ತಿಳಿಯಲಿಲ್ಲ.

"ಏನಾಗಬೇಕಿತ್ತು?" ಶಾಮುವೇ ಅವಳನ್ನು ಕೇಳಿದ.

"ಕಾಲೇಜಿಗೆ ಸೇರಲು ಬೇಕಾದ ಸರ್ಟಿಫಿಕೇಟುಗಳನ್ನು ಪಡೆಯಲು ನಾನು ಮೈಸೂರಿಗೆ ಹೋಗಬೇಕಾಗಿದೆ."

"ಕಾಲೇಜಿಗೆ ಕಾಗದ ಬರೆದರೆ ಅವರೇ ಕಳುಹಿಸಲಾರರೇ?"

"ಕಳುಹಿಸುತ್ತಾರೆ. ಆದರೆ ನಿಧಾನವಾಗಬಹುದು. ಆದುದರಿಂದ ನಾನೇ ಒಂದು ದಿನ ಮೈಸೂರಿಗೆ ಹೋಗಿ ನನ್ನ ಕೆಲಸಗಳನ್ನೆಲ್ಲಾ ಮುಗಿಸಿಕೊಂಡು ಬರುತ್ತೇನೆ."

ಒಂದು ಗಳಿಗೆ ಮಾತನಾಡದೆ ಶಾಮು ಮೌನವಾಗಿ ಕುಳಿತಿದ್ದ. ಅನಂತರ ತಗ್ಗಿಸಿದ ತಲೆಯನ್ನು ಎತ್ತಿ,

"ನಿಮ್ಮ ದೊಡ್ಡಪ್ಪನ ಮನೆಗೆ ಹೋಗ್ತಿಯೇನು?" ಎಂದ. ಅವನು ಮಾತುಗಳನ್ನು ಬಹಳ ಪ್ರಯಾಸದಿಂದ ಆಡುತ್ತಿರುವಂತೆ ತೋರಿತು.

"ಹೂಂ. ಒಂದೆರಡು ದಿನ ಇರೋದಕ್ಕೆ ಎಲ್ಲಾದರೇನು? ಆಮೇಲೆ ಕಾಲೇಜು ಹಾಸ್ಟೆಲು ತೆಗೆಯುವವರೆವಿಗೆ ಅಲ್ಲೇ ಇರುತ್ತೇನೆ. ಹಾಸ್ಟೆಲಿಗೆ ಬೇರೆ ಅಪ್ಲಿಕೇಷನ್ ಹಾಕಿದೀನಿ."

"ಒಳ್ಳೆಯದು." ಎಂದು ಮಾತ್ರ ನುಡಿದು ಶಾಮು ಹೊರಗೆ ಹೊರಟು ಹೋದ.

ಶಾಮುವಿನ ಊಹೆಯಂತೆಯೇ ರೈತರು ಒಡೆಯನ ನಿರಾಸಕ್ತಿಯ ಪರಿಣಾಮವಾಗಿ ಹೊಲ, ಗದ್ದೆ, ತೋಟವನ್ನು ಅಲಕ್ಷಿಸಿದ್ದರು. ಕಾಳ, ಶಿವಯ್ಯ, ಮುನಿಗೌಡ ಎಲ್ಲರೂ ತಮ್ಮ ತಮ್ಮ ಗುಡಿಸಲಿನ ಬಾಗಿಲುಗಳಲ್ಲಿ ಬೀಡಿ ಸೇದುತ್ತಾ ಕುಳಿತಿದ್ದರು. ಶಾಮು ಗದ್ದೆಯ ಕಡೆ ಹೊರಟಿರುವುದನ್ನು ನೋಡಿಯೂ ಅವರು ಉದಾಸೀನರಾಗಿ "ಹುಚ್ಚಲೆದಾಟಕ್ಕೆ ಒಂಟಿದಾರೆ" ಎಂದುಕೊಂಡು ಸುಮ್ಮನಿದ್ದರು. ಆದರೆ ಶಾಮು ಗುಡಿಸಲುಗಳ ಮುಂದೆ ನಿಂತು ದರ್ಪದಿಂದ 'ಕಾಳಾ, ಬೊಮ್ಮ' ಎಂದು ರೈತರುಗಳ ಹೆಸರನ್ನು ಹಿಡಿದು ಕೂಗಿ ಒಬ್ಬೊಬ್ಬರನ್ನಾಗಿ ಹೊರಗೆ ಹೊರಡಿಸಿದ.

"ತೆಂಗಿನ ಗಿಡಗಳಿಗೆ ಪಾತಿ ಮಾಡಿ, ಮರಳು, ಉಪ್ಪು, ಗೊಬ್ಬರ ಹಾಕಿ ನೀರು ಬಿಡು. ಕಾಲುವೆಯಿಂದ ನೀರು ಹರಿಯಿಸು. ನನ್ನ ಮುಖವನ್ನು ಏನು ನೋಡ್ತ ನಿಂತುಕೊಳ್ಳುತ್ತೀಯ? ಕಾಳಾ, ನಿಂಬೆಗಿಡದ ಪಾತಿಯಲ್ಲಿರುವ ಕಳೇನೆಲ್ಲಾ ಕೀಳು."

ಶಾಮು ಮೊದಲಿನಂತೆ ತೋಟ, ಗದ್ದೆಯಲ್ಲಿ ಆಸಕ್ತಿ ವಹಿಸಿರುವುದನ್ನು ನೋಡಿ ರೈತರು ಆಶ್ಚರ್ಯಭರಿತರಾದರು.

ಸಂಜೆ ಏಳು ಗಂಟೆಯವರೆವಿಗೆ ಶಾಮು ನಿಂತು ಎಲ್ಲವನ್ನೂ ಒಂದು ತಹಬದಿಗೆ ತಂದು ಮನೆಗೆ ಹೊರಟ. ಮನೆಗೆ ಹೊರಡುವುದಕ್ಕೆ ಮುಂಚೆ ರೈತರನ್ನು ಕರೆದು,

"ನಾಳೆಯಿಂದ ಯಾರೂ ಹೀಗೆ ಮಾಡಿದರೆ ಆಗೋದಿಲ್ಲ. ನೀವು ಹೇಗೆ

ಮಾಡಿದರೂ ಮಾಡಿಸಿಕೊಳ್ತೀನೀಂತ ಅಂದ್ಕೊಂಡಿದೀರೇನು? ಹುಷಾರಾಗಿರಿ" ಎಂದು ಎಚ್ಚರಿಕೆ ಕೊಟ್ಟು, ನಿಂಗನ ಕಡೆ ತಿರುಗಿ,

"ನಾಳೆ ಹೊತ್ತಾರೇಗೇ ಗಾಡಿ ಹೂಡಿರು. ಅಮ್ಮಾವರು ಮೈಸೂರಿಗೆ ಹೋಗುತ್ತಾರೆ" ಎಂದು ಹೇಳಿ ಮನೆಗೆ ಹಿಂತಿರುಗಿದ.

ಶಾಮು ಮನೆಗೆ ಬಂದಾಗ ಮೀರ ಲಾಂದ್ರದ ಕೆಳಗೆ ಕುಳಿತು ವೆಂಕುವಿನೊಡನೆ ಮಾತನಾಡುತ್ತಿದ್ದಳು. ಶಾಮು ಬಂದೊಡನೆ ವೆಂಕು ಉತ್ಸಾಹದಿಂದ,

"ಶಾಮಣ್ಣ, ಮೀರ ನಾಳೆ ಮೈಸೂರಿಗೆ ಹೋಗ್ತಾರೇನು?" ಎಂದಳು. ಶಾಮುವಿಗೆ ತಾನು ಎತ್ತಿ ಆಡಿಸಿದ ಜೋಯಿಸರ ಮಗಳು ವೆಂಕುವಿನಲ್ಲಿ ಅಪಾರ ವಿಶ್ವಾಸವಿತ್ತು.

ವೆಂಕುವಿನ ಮಾತು ತನ್ನ ಕಿವಿಗೆ ಬೀಳಲಿಲ್ಲವೆಂಬಂತೆ ಶಾಮು ಒಳಗೆ ಹೋದ. ಶಾಮು ತನ್ನ ಪ್ರಶ್ನೆಗೆ ಉತ್ತರ ಕೊಡದೆ ಒಳಗೆ ಹೋದುದನ್ನು ನೋಡಿ ವೆಂಕು ಅಪ್ರತಿಭಳಾದಳು.

ಶಾಮು ವೆಂಕುವಿನ ಮನಸ್ಸನ್ನು ಉದ್ದೇಶಪೂರ್ವಕವಾಗಿ ನೋಯಿಸಿರಲಿಲ್ಲ. ಅವನ ಮನಸ್ಸು ಬೇರೆ ಆಲೋಚನೆಗಳಿಂದ ತುಂಬಿತ್ತು.

ಮೀರ ಮೆಡಿಕಲ್ ಕಾಲೇಜಿಗೆ ಸೇರುವುದು ಶಾಮುವಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಆದರೆ ಮೀರಾಳ ಸ್ಥಿತಿ ನೋಡಿ ಅವನು ಗಾಬರಿಯಾಗಿದ್ದ. ಹಿಂದೊಮ್ಮೆ ಅವಳೇ ಹೇಳಿದ್ದಂತೆ 'ಹುಚ್ಚು ಹಿಡಿಯಬಹುದು. ದೇಶಾಂತರ ಓಡಿಹೋಗಬಹುದು, ಆತ್ಮಹತ್ಯೆ ಮಾಡಿಕೊಳ್ಳಬಹುದು' ಎಂದು ಅಂಜಿ ಶಾಮು ಅವಳು ಮನಬಂದಂತೆ ಇರಲಿ ಎಂದು ತನ್ನ ಒಪ್ಪಿಗೆ ಕೊಟ್ಟಿದ್ದ. ಮೊದಲೇ ನೊಂದು ಗಾಯಗೊಂಡಿರುವ ಮನಸ್ಸನ್ನು ಬಲಾತ್ಕಾರದಿಂದ ಕಟ್ಟಿಹಾಕಿ ನೋಯಿಸುವುದರಲ್ಲಿ ಯಾವ ಅರ್ಥವೂ ಇಲ್ಲವೆಂದು ಶಾಮು ತಿಳಿದಿದ್ದ. ವ್ಯಾಸಂಗದಿಂದ ಅವಳು ಮತ್ತೆ ಮೊದಲಿನ ಮೀರಳಾಗಬಹುದು ಎಂಬ ದೂರದ ಆಸೆಯೊಂದು ಮಿನುಗುತ್ತಿತ್ತು ಅವನ ಹೃದಯಾಂತರಾಳದಲ್ಲಿ. ಅವನ ಮನಸ್ಸು ಅವಳನ್ನು ಕಾಲೇಜಿಗೆ ಕಳುಹಿಸಲು ನಿಶ್ಚಯಿಸಿದ್ದರೂ ಅವನ ಮನೋಹೋರಾಟ ಕಡಿಮೆಯಾಗಲಿಲ್ಲ. ಮೀರಳೂ ಹೊರಟು ಹೋದ ಮೇಲೆ ತನ್ನ ಗತಿ ಏನು? ತಾನೊಬ್ಬನೇ ದೇಗುಲದಂತಹ ಮನೆಯಲ್ಲಿ ಇರುವುದಾದರೂ ಹೇಗೆ? ತನಗೆ ಹೊಲ, ಗದ್ದೆ, ತೋಟಗಳಿರುವಾಗ ಯೋಚಿಸಬೇಕಾದ ಅಗತ್ಯವೇನಿದೆ? ಅವುಗಳನ್ನು ನೋಡಿಕೊಳ್ಳುವುದರಲ್ಲಿ ತನ್ನ ಸಮಯ ಹೋಗುವುದಿಲ್ಲವೇ? ಆದರೆ ಜಮೀನನ್ನು ನೋಡಿಕೊಳ್ಳುವುದೇ ತನ್ನ ಬಾಳಿನ ಗುರಿಯೇನು? ತನ್ನ ಹೃದಯಕ್ಕೆ ಮತ್ತೊಂದು ಹೃದಯದ ಸಹಾನುಭೂತಿ, ಗೆಳೆತನ ಬೇಕಿಲ್ಲವೇ?

ಯಾರಿಗಾಗಿ ತಾನು ಆಸ್ತಿ ವೃದ್ಧಿಪಡಿಸಬೇಕು? ಯಾರಿಗಾಗಿ ತಾನು ದುಡಿಯಬೇಕು?

ಈ ಪ್ರಶ್ನೆಗಳು ಶಾಮುವಿನ ಮನಸ್ಸಿನಲ್ಲಿ ಪದೇ ಪದೇ ಏಳುತ್ತಿದ್ದವು. ಆದರೆ ಅವುಗಳಿಗೆ ಸರಿಯಾದ ಉತ್ತರ ಮಾತ್ರ ಸಿಕ್ಕಿರಲಿಲ್ಲ.

* * * * *

ಬೆಳಗಿನ ಷಟಲ್ ಟ್ರೈನು ಎಂಟೂವರೆಗೆ ಹಿರೋಡೆಗೆ ಬರುತ್ತಿದ್ದುದರಿಂದ ಮೀರ ರಾತ್ರಿಯೇ ಹೊರಡುವ ಸಿದ್ಧತೆಗಳನ್ನು ಮಾಡಿದಳು. ಚಿಕ್ಕಳದ ಸೂಟ್‌ಕೇಸಿಗೆ ಎರಡು ವಾಯಿಲ್ ಸೀರೆ, ರವಿಕೆಗಳನ್ನು ಮಡಿಸಿಟ್ಟು ತನಗೆ ಅಗತ್ಯವಾಗಿ ಬೇಕಾಗುವ ಇತರ ಸಾಮಾನುಗಳನ್ನು ತೆಗೆದಿರಿಸಿಕೊಂಡಳು. ಶಾಮು ಮೀರಳ ಸಿದ್ಧತೆಗಳನ್ನು ಗಮನಿಸಿದರೂ ಗಮನಿಸದವನಂತೆ ಸುಮ್ಮನಿದ್ದುಬಿಟ್ಟ. ತನ್ನ ವೇದನೆಯನ್ನು ಅದುಮಿಡಲು ಅವನು ಔದಾಸೀನ್ಯದ ಸೋಗು ಹಾಕಿದ್ದ.

ಮೀರ ಬೆಳಗಿನ ಜಾವ ಆರು ಗಂಟೆಗೇ ಎದ್ದು, ತಲೆ ಬಾಚಿ ಹೂ ಮುಡಿದು ಕಾಫಿ ಕುಡಿದು ಬರಲು ವೆಂಕಮ್ಮನವರ ಬಳಿಗೆ ಬಂದಳು. ವೆಂಕಮ್ಮನವರು ಆಶ್ಚರ್ಯದಿಂದ,

"ಇದೇನೆ ತಾಯಿ, ಇಷ್ಟು ಬೇಗ ಎಲ್ಲಿಗೆ ಹೊರಟೆ?" ಎಂದಳು.

"ಮೈಸೂರಿಗೆ ಹೊರಟಿದೀನಿ."

"ನಿನ್ನೆ ರಾತ್ರಿ ಹೇಳಿದ್ದರೆ ಬೆಳಿಗ್ಗೆ ಎದ್ದು ಕಾಫಿ ಮಾಡ್ತಿದ್ದೆ. ನೀನು ಮೈಸೂರಿಗೆ ಹೊರಟಿರುವುದು ನನಗೆ ಗೊತ್ತಿಲ್ಲ. ಹಾಲು ಕಾದಿದೆ, ಕೊಡಲೆ?"

"ನಿನ್ನೆ ರಾತ್ರಿ ನಾನು ನಿಮಗೆ ಏನೂ ಹೇಳಲಿಲ್ಲವೇ?"

"ಇಲ್ಲ."

"ಹಾಳು ಮರೆವು ಬಂದಿದೆ. ಯಾಕೋ ಬುದ್ಧಿ ತೀರಾ ವಿಕಲ್ಪವಾಗಿದೆ."

ವೆಂಕಮ್ಮನವರು ಹಾಲನ್ನು ಬಟ್ಟಲಿಗೆ ಹಾಕುತ್ತಾ, "ಶಾಮಣ್ಣನೂ ಬರುತ್ತಾನೇನು?" ಎಂದರು.

"ಇಲ್ಲ."

"ಒಬ್ಬಳೇ ಹೋಗ್ತೀಯೇನು?"

"ಭಯವೇನು? ಕಂಡೂ ಕಾಣದ ಊರಾದರೆ ಹೆದರಬೇಕು."

"ತಾಯಿ, ನಾನೊಂದು ಮಾತು ಹೇಳ್ತೀನಿ. ಕೋಪಿಸಿಕೊಳ್ಳಬೇಡ. ಶಾಮಣ್ಣನ್ನ ಮಗುವಾದಾಗಿನಿಂದ ಎತ್ತಿ ಆಡಿಸಿದೀನಿ. ಅವನ ಸ್ವಭಾವ ನನಗೆ ಚೆನ್ನಾಗಿ ಗೊತ್ತು. ಮೇಲೆ ತುಂಬಾ ಒರಟು ಎನಿಸಿದರೂ ಅವನ ಹೃದಯ ಬಹಳ ಮೃದು-ಒಳಗೆ ತಿರುಳು ಮೃದುವಾಗಿದ್ದರೂ ಮೇಲಿನ ಕರಟ ಒರಟಾಗಿರೋ ಹಾಗೆ. ನನಗೇನೋ

ಈಗಿನ ಸ್ಥಿತೀಲಿ ನೀನು ಶಾಮಣ್ಣನ್ನ ಬಿಟ್ಟು ಮೈಸೂರಿಗೆ ಹೋಗೋದು ಸರಿಯಲ್ಲ ಎನಿಸುತ್ತದೆ."

ಮೀರ ಒಂದು ಮಾತೂ ಆಡದೆ ನಿಧಾನವಾಗಿ ಹಾಲು ಕುಡಿದು ಮುಗಿಸಿದಳು. ಅವಳು ಮಾತನಾಡದಿರುವುದನ್ನು ನೋಡಿ ವೆಂಕಮ್ಮನವರು ಮುಂದುವರಿಸಿದರು.

"ನಾನು ಯಾಕೆ ಹೀಗೆ ಹೇಳ್ತಿದೀನೆಂದ್ರೆ ಜಾನಿ ಹೋದ ದುಃಖ ಅವನನ್ನು ಹಗಲಿರುಳೂ ತಿನ್ನುತ್ತಿದೆ. ಸಂತೋಷಾನ ಇತರರೊಡನೆ ಹಂಚಿಕೊಂಡರೆ ಹೆಚ್ಚಾಗುತ್ತೆ. ದುಃಖಾನ ಇತರರೊಡನೆ ಹೇಳಿಕೊಂಡರೆ ಕಡಿಮೆಯಾಗುತ್ತದೆ. ಸುಖದ ದಿನಗಳಲ್ಲಿ ನೀನು ಅವನೊಡನಿದ್ದು ಈಗ ಮೈಸೂರಿಗೆ ಹೊರಟಿರುವುದು ಸರಿಯಲ್ಲ. ನೀನು ಹೊರಟುಹೋದರೆ ಶಾಮಣ್ಣ ಇದ್ದಿದ್ದೂ ಮಂಕಾಗಿಬಿಡುತ್ತಾನೆ. ಮೈಸೂರಿನಲ್ಲಿ ತುಂಬಾ ದಿನವಿರಬೇಡ. ಬೇಗ ಬಂದುಬಿಡಮ್ಮ."

ವೆಂಕಮ್ಮನವರ ಮಾತು ಕೇಳಿ ಮೀರಳಿಗೆ ಮುಳ್ಳು ತುಳಿದಂತಾಯಿತು. ಇನ್ನು ಇದೇ ಪ್ರಾರಂಭವಾಗುತ್ತಿದೆ. ಆಗಲೇ ಮುಗಿಸಿಬಿಡು ಎಂದು ಹೇಳುತ್ತಿರುವುದನ್ನು ಕೇಳಿ ಮೀರಳಿಗೆ ಏನು ಉತ್ತರ ಕೊಡಬೇಕೋ ತಿಳಿಯದಾಯಿತು.

ಮೀರ ಎಲ್ಲಿಯೋ ನೋಡುತ್ತಾ "ಆಗಲಿ ಬೇಗ ಬರುತ್ತೇನೆ" ಎಂದಳು. ಮೀರಳ ಮಾತು ಕೇಳಿ ವೆಂಕಮ್ಮನವರು ಪ್ರಸನ್ನಗೊಂಡು,

"ನನಗೆ ಗೊತ್ತು, ನೀನು ಶಾಮಣ್ಣನ್ನ ಬಿಟ್ಟು ತುಂಬ ದಿನ ಇರೋದಿಲ್ಲಾಂತ. ಓದಿದ ಹುಡುಗಿ ನೀನು. ನಿನಗೆ ಅಷ್ಟು ತಿಳಿಯುವುದಿಲ್ಲವೇ? ಶಾಮಣ್ಣನ ಸ್ವಭಾವ ನಿನಗೇನು ಗೊತ್ತಿಲ್ಲವೆ?" ಎಂದರು.

ನಿಂಗ ಎತ್ತುಗಳನ್ನು ಹೂಡಿ ಗಾಡಿಯನ್ನು ಮನೆಯ ಮುಂದೆ ನಿಲ್ಲಿಸಿದ್ದ. ಮೀರ ಕೈಲಿ ಸೂಟ್‌ಕೇಸ್ ಹಿಡಿದಿರುವುದನ್ನು ನೋಡಿ ನಿಂಗ,

"ಕೊಡಿ ತಾಯಿ, ಗಾಡ್ಯಾಗಿಡ್ತೀನಿ" ಎನ್ನುತ್ತಾ ಅವಳ ಕೈಯಿಂದ ಪೆಟ್ಟಿಗೆ ತೆಗೆದುಕೊಂಡ. ಮೀರ ಅಚ್ಚರಿಯಿಂದ,

"ಇದೇನೋ ನಿಂಗ, ಗಾಡಿ ಹೂಡೋದಿಕ್ಕೆ ನಿನಗ್ಯಾರು...."

"ಬುದ್ಧಿಯೋರು ನಿನ್ನೆ ಮಧ್ಯಾಹ್ನವೇ ಗಾಡಿ ಹೂಡಾಕೆ ಹೇಳಿದ್ದರು."

ಶಾಮುವಿನ ಔದಾರ್ಯ ಮೀರಳನ್ನು ಮತ್ತೆ ತಿವಿಯಿತು.

ಮೀರ ಶಾಮು ಮಲಗಿದ್ದ ರೂಮಿನೊಳಗೆ ಬಂದು ಹೊಸಿಲ ಬಳಿ ನಿಂತಳು. ಶಾಮು ಗೋಡೆಯ ಕಡೆ ಮುಖ ಮಾಡಿಕೊಂಡು ನಿಂತಿದ್ದ.

"ನಾನು ಹೋಗಿ ಬರುತ್ತೇನೆ."

"ದುಡ್ಡಿದೆ ತಾನೆ?"

"ಹೂಂ."

"ಒಳ್ಳೆಯದು" ಶಾಮು ಗೋಡೆಯನ್ನೇ ನೋಡುತ್ತಾ ಬೀಳ್ಕೊಟ್ಟ.

ಮೀರ ಗಾಡಿ ಹತ್ತಿ ಕುಳಿತಳು. ಎತ್ತುಗಳು ನಿಧಾನವಾಗಿ ಹೊರಟವು. ಅವಳು ತನ್ನ ಯೋಚನೆಗಳಲ್ಲಿ ಮುಳುಗಿದ್ದಾಗ ನಿಂಗ,

"ಇಳೀರಿ ತಾಯಿ. ಟೇಸನ್ ಬತ್ತು" ಎಂದ.

ಮೀರ ರೈಲನ್ನು ಎದುರು ನೋಡುತ್ತಾ ನಿಂತಿದ್ದಳು. ನಿಂಗನೂ ನಿಂತಿರುವುದನ್ನು ನೋಡಿ,

"ನೀನು ಹೋಗಪ್ಪ. ಸೂಟ್‌ಕೇಸ್ ನಾನೇ ತಗೋತೀನಿ. ಭಾರವಿಲ್ಲ" ಎಂದಳು.

ಒಂಟಿಯಾಗಿ ನಿಂತಿದ್ದ ಚೆಲುವೆಯನ್ನು ನೋಡಿ ಕೆಲಸವಿಲ್ಲದೇ ಓಡಾಡುತ್ತಿದ್ದವರಿಗೆ ಹೊಸ ಉತ್ಸಾಹ ಹುಟ್ಟಿತು. ನೋಡುವವರ ಒಂದು ಕಣ್ಣು ಹತ್ತಾಯಿತು. ಕೆಲವರು ಮೀರಳ ಬಳಿ ಸುಳಿದಾಡಿ ಅವಳ ಗಮನವನ್ನು ಸೆಳೆಯಲು ಯತ್ನಿಸಿದರು. ಒಬ್ಬ ರಸಿಕ "ಸುಂದರ ನಾರೀ ಪ್ರೀತಮ ಪ್ಯಾರೀ...." ಎಂದು ಸಿಳ್ಳೆ ಹಾಕಿದ. ಆದರೆ ಮೀರಳಿಗೆ ಯಾವುದರ ಪರಿವೆಯೂ ಇರಲಿಲ್ಲ. ಆಮೆ ತನ್ನ ಚಿಪ್ಪಿನಲ್ಲಿ ಅಡಗಿಕೊಳ್ಳುವಂತೆ ಮೀರ ತನ್ನ ಚಿಂತೆಯಲ್ಲಿ ಮೈಮರೆತಿದ್ದಳು.

ದೂರದಲ್ಲಿ ರೈಲು ಕೂಗಿದ ಸದ್ದು ಕೇಳಿ ಮೀರ ಎಚ್ಚರಗೊಂಡಳು. ನೂಕುನುಗ್ಗಲಿನಲ್ಲಿ ದಾರಿ ಮಾಡಿಕೊಂಡು ಹೋಗಿ ಇಂಟರ್ ಕಂಪಾರ್ಟ್‌ಮೆಂಟನ್ನು ಹತ್ತಿದಳು. ರೈಲು ಹೊರಟ ಮೇಲೆ ಮೀರ ತನ್ನ ಸುತ್ತಲಿದ್ದವರನ್ನು ಗಮನಿಸಿದಳು. ಅವಳ ಎದುರಿಗೆ ಗಂಡ, ಹೆಂಡತಿ, ಐದಾರು ವರ್ಷದ ಹುಡುಗಿಯೊಂದು ಕುಳಿತಿದ್ದರು. ಆ ಹುಡುಗಿ ಅವರ ಮಗಳಿರಬೇಕೆಂದು ಮೀರ ತರ್ಕಿಸಿದಳು. ಆ ಹುಡುಗಿ ಆಗಾಗ್ಗೆ ಬಾಗಿಲಿನ ಬಳಿ ಹೋಗಿ ನಿಲ್ಲುತ್ತಿದ್ದಳು. ಮಗಳು ಕಿಟಕಿಯಿಂದಾಚೆ ಬಗ್ಗಿ ನೋಡುತ್ತಿರುವುದನ್ನು ನೋಡಿ ತಾಯಿ ಕೂಗಿದಳು,

"ಶೋಭಾ, ಕಿಟಕಿಯಿಂದಾಚೆ ಬಗ್ಗಬೇಡ. ಕಿಡಿ ಬರುತ್ತದೆ."

"ಕಿಡಿ ಎಲ್ಲಿಂದ ಬರುತ್ತೆ?"

"ಎಲ್ಲಿಂದ ಬರುತ್ತೋ ನಂಗೊತ್ತಿಲ್ಲ. ಬಾ, ಬಿಸ್ಕತ್ತು ಕೊಡ್ತೀನಿ."

ಶೋಭಾ ಬಿಸ್ಕತ್ತಿನ ಹೆಸರು ಕೇಳಿ ತಾಯಿಯ ಪಕ್ಕದಲ್ಲಿ ಬಂದು ಕುಳಿತಳು. ಶೋಭಾ ತುಂಬಾ ಮುದ್ದಾಗಿದ್ದಳು. ದುಂಡುಮುಖ, ಹೊಳಪಾದ ಚಂಚಲ ಕಣ್ಣು, ಮೊಂಡು ಮೂಗು, ಅಲೆ ಅಲೆಯಾದ ಬಾಬ್, ಚೀಟಿಯ ಫ್ರಾಕಿನ ಪುಟ್ಟ ಶೋಭ ಮೀರಳ ಮನಸ್ಸನ್ನು ಒಂದು ನಿಮಿಷದಲ್ಲಿ ಸೂರೆಗೊಂಡಳು. ಶೋಭಳನ್ನು

ನೋಡುತ್ತಿದ್ದಂತೆಯೇ ಮೀರಳಿಗೆ ವೀಣಳ ನೆನಪು ಬಂತು. ಹೃದಯ ಭಾರವಾಗಿ ಕಣ್ಣುಗಳು ತೇವಗೊಂಡವು. ಶೋಭಳ ತಾಯಿ ಮೀರಳ ಪರಿಚಯ ಮಾಡಿಕೊಳ್ಳುವ ಉದ್ದೇಶದಿಂದ ಅವಳ ಕಡೆಯೇ ನೋಡುತ್ತಿದ್ದಳು. ತನ್ನ ಕಣ್ಣೀರು ಅವರಿಗೆ ಕಾಣಬಾರದೆಂದು ಮೀರ ಕಿಟಕಿಯ ಕಡೆ ತಿರುಗಿಕೊಂಡಳು. ದುಃಖ ಸ್ವಲ್ಪ ಕಡಿಮೆ ಯಾದ ಮೇಲೆ ಮೀರ ಪುನಃ ಅವರ ಕಡೆ ನೋಡಿದಳು. ಬಿಸ್ಕತ್ತು ಕಡಿಯುತ್ತಿದ್ದ ಶೋಭಾ ಮೀರಳನ್ನು ನೋಡಿ ನಕ್ಕಳು. ಮೀರ ನಗಲೇಬೇಕಾಯಿತು. ಶೋಭಳ ತಾಯಿ ಮಾತಿಗೆ ಮೊದಲು ಮಾಡಿದರು.

"ಯಾವೂರಿಗೆ?"

"ಮೈಸೂರಿಗೆ."

"ನೀವು?"

"ಸದ್ಯಕ್ಕೆ ಮೈಸೂರಿಗೆ ಮಂಗಳೂರಿನಿಂದ ಬಂದಿದೀವಿ-ಮೈಸೂರು ನೋಡೋಣಾಂತ. ನಿಮ್ಮ ಹೆಸರು....?"

"ಮೀರ."

"ಓದುತ್ತಿದ್ದೀರಾ?"

ಮೀರ ಒಂದು ಗಳಿಗೆ ಸುಮ್ಮನಿದ್ದು "ಹೂಂ" ಎಂದಳು.

"ಏನು ಓದುತ್ತಿದ್ದೀರಿ?"

"ಇಂಟರ್ ಆಗಿದೆ. ಮೆಡಿಕಲ್‌ಗೆ ಸೇರಬೇಕೆಂದಿದ್ದೇನೆ."

"ಬಹಳ ಸಂತೋಷ. ನನಗೂ ಓದಲು ಬಹಳ ಆಸೆಯಿತ್ತು. ಇಂಟರ್ ಆದ ಮೇಲೆ ಮದುವೆಯಾಯಿತು. ಪ್ರೈವೇಟಾಗಿ ನಾಗಪುರದ ಯೂನಿವರ್ಸಿಟಿಯ ಪರೀಕ್ಷೆಗೆ ಕುಳಿತು ಬಿ.ಎ. ಮುಗಿಸೋಣವೆಂದು ಮನೆಯಲ್ಲೇ ಓದುತ್ತಿದ್ದೆ. ಆದರೆ ಈ ಶೋಭಳಿಂದಾಗಿ ನನ್ನ ಓದು ಅಲ್ಲಿಗೇ ಮುಗಿಯಿತು."

ವಸಂತಿ ಮಾತನಾಡುತ್ತಾ ಅಕ್ಕರೆಯಿಂದ ಶೋಭಳ ಕಡೆ ನೋಡಿದಳು. ವಸಂತಿಯ ಗಂಡ ಹೆಂಡತಿಯ ಕಡೆ ಕಳ್ಳನೋಟ ಬೀರಿ ನಕ್ಕರು. ಅವರ ಸುಖಸಂಸಾರ ನೋಡಿ ಮೀರಳ ಕುದಿಯುತ್ತಿದ್ದ ಹೃದಯ ತಂಪಾಯಿತು. ಹಾಗಾದರೆ ಸಂಸಾರ ದಲ್ಲಿದ್ದೂ, ಸುಖವಾಗಿರುವವರು ಇದಾರೆಯೇ? ತಾನು ತಿಳಿದುಕೊಂಡಿರುವಂತೆ ಪ್ರಪಂಚ ಕೇವಲ ದುಃಖಿಗಳ ತೌರೂರು ಮಾತ್ರವಲ್ಲ. ವಸಂತಿ ನಿಜವಾಗಿಯೂ ಎಷ್ಟು ಸುಖಿ! ಗಂಡ ಹೆಂಡತಿ ಎಷ್ಟು ಅನ್ಯೋನ್ಯವಾಗಿದ್ದಾರೆ! ಅವರಿಬ್ಬರನ್ನೂ ಪ್ರೇಮಬಂಧನದಿಂದ ಬಂಧಿಸಿದ್ದಾಳೆ ಅವರ ಮಗಳು ಶೋಭ. ಈ ಎಲ್ಲ ಸುಖ ಗಳಿಂದ ತಾನು ವಂಚಿತಳು. ತಾನು ಮಾಡಿದ ತಪ್ಪಾದರೂ ಏನು?

"ಈಗ ಶೋಭಾ ದೊಡ್ಡೋಳಾಗಿದಾಳೆ. ಓದಬಹುದಲ್ಲಾ?"

"ಈಗ ಓದೋಕೆ ಆಗೋದಿಲ್ಲ ಕಣ್ರಿ. ಒಂದು ಗಳಿಗೆ ಕತೆಪುಸ್ತಕ ಕೈಲಿ ಹಿಡಿದು ಕುಳಿತರೂ ಶೋಭಾಗೆ ಕೋಪ ಬಂದುಬಿಡುತ್ತದೆ."

ಮೀರಳ ಮನಸ್ಸು ಮತ್ತೆ ವೀಣಾಳನ್ನು ನೆನೆಯಿತು. ವೀಣಾಳೂ ಸಹ ಎಷ್ಟೋ ಬಾರಿ ಮೀರ ಓದುತ್ತಾ ಕುಳಿತಿದ್ದಾಗ ಓಡಿಬಂದು ಕೈಯಿಂದ ಪುಸ್ತಕ ಕಿತ್ತು ಎಸೆದು,

"ಅಮ್ಮ, ನಂಜೊತೆ ಆಟಕ್ಕೆ ಬಾಮ್ಮ" ಎಂದು ಕರೆಯುತ್ತಿದ್ದಳು.

"ಅದೇನೋ ನಿಜ. ಈಗ ಓದೋದೂಂದ್ರೆ ಕಷ್ಟವೇ ಸರಿ."

"ನೀವು ಮೆಡಿಕಲ್ ಓದಿ ಏನ್ಮಾಡ್ತೀರಿ?" ವಸಂತಿ ಕೇಳಿದಳು.

"ಕಂಡೇ ಇದೆ, ಡಾಕ್ಟರಾಗ್ತೀನಿ."

"ಓದಿ ಕೆಲಸ ಮಾಡಲು ನನಗೂ ಬಹಳ ಆಸೆ. ಏನು ಸಂಸಾರವೊ? ಸಂಸಾರದಲ್ಲಿದ್ದರೆ ಜವಾಬ್ದಾರಿ ಬಹಳ. ಓದಿ ಸುಮ್ಮ ಪಾಡಿಗೆ ನಾವು ಕೆಲಸ ಮಾಡಿಕೊಂಡಿರುವುದಕ್ಕಿಂತ...."

"ಪಾಪ! ಈಗ ನಿನಗೆ ಕಡಿಮೆಯಾಗಿರುವುದೇನೋ?"

ಇದುವರೆಗೂ ಮೌನವಾಗಿ ಕುಳಿತಿದ್ದ ವಸಂತಿಯ ಗಂಡ ಹೆಂಡತಿಯ ದೂರುಗಳನ್ನು ಸಹಿಸಲಾರದೇ ನಡುವೆ ಬಾಯಿ ಹಾಕಿ ಕೇಳಿದರು.

"ಹೆಂಗಸರ ಕಷ್ಟ ನಿಮಗೇನು ಗೊತ್ತಾಗುತ್ತೆ ಬಿಡಿ" ವಸಂತಿ ಗಂಡನ ಪ್ರಶ್ನೆಗೆ ಹೇಳಿದಳು.

"ಕೆಲಸಕ್ಕೆ ಸೇರಿರುವ ಹೆಂಗಸರೆಲ್ಲಾ ಸುಖವಾಗಿರುತ್ತಾರೇಂತ ಹೇಳೋಕ್ಕಾಗುತ್ತದೆಯೇ ವಸಂತಿಬಾಯಿ?" ಮೀರ ಕೇಳಿದಳು.

"ನಮಗಿಂತ ಅವರು ಸುಖವಾಗಿರುತ್ತಾರೆ."

"ನಮಗೆ ಬಹಳ ಅನ್ಯಾಯ ಮಾಡ್ತಿದಿ ವಸಂತಾ" ಅವಳ ಗಂಡ ಎಂದರು.

"ಎರಡು ಬಗೆಯ ಜೀವನದಲ್ಲೂ ಕಷ್ಟ, ಸುಖ ಇವೆ" ಮೀರ ವೇದಾಂತಿಯಂತೆ ಮಾತನಾಡಿದಳು.

"ಸಂಸಾರದ ಕಷ್ಟ ಸುಖ ನಿಮಗೇನು ಗೊತ್ತು? ಇನ್ನೂ ಓದುತ್ತಾ ಇರುವ ನಿಮಗೇನು ತಿಳಿಯುತ್ತದೆ ಬಿಡಿ, ಹಾಯಾಗಿದೀರಿ."

ಮೀರ ಮುಂದೆ ಮಾತನಾಡಲಿಲ್ಲ. ತಾನು ಅನುಭವಿಸಿರುವುದರ ಹತ್ತರಲ್ಲಿ ಒಂದು ಪಾಲನ್ನು ಅನುಭವಿಸಿದಾಳೋ ಇಲ್ಲವೋ?

ಮೀರಳ ಮುಖದಲ್ಲಿ ನೋವಿನ ಗೆರೆಗಳು ಕ್ಷಣಕಾಲ ಮಿಂಚಿ ಮರೆಯಾದವು. ವಸಂತಿ ಕಿಟಕಿಯ ಬಳಿ ನಿಂತಿದ್ದ ತನ್ನ ಮಗಳನ್ನು ಗದರಿಸುತ್ತಿದ್ದುದರಿಂದ ಮೀರಳ

ಮುಖದಲ್ಲಿ ವ್ಯಕ್ತವಾಗಿದ್ದ ಅಪಾರ ಯಾತನೆಯನ್ನು ಗಮನಿಸಲಿಲ್ಲ. ಮೈಸೂರು ಬರುವವರೆವಿಗೆ ಅವರ ಮಾತುಕತೆ ಒಂದೇ ಸಮನೆ ನಡೆದಿತ್ತು.

ಮೀರ ದೊಡ್ಡಪ್ಪನ ಮನೆ ತಲುಪಿದಾಗ ಹನ್ನೊಂದೂವರೆಯಾಗಿತ್ತು. ದೊಡ್ಡಪ್ಪನಿಗೆ ಅವಳು ಕಾಗದ ಬರೆದಿರಲಿಲ್ಲವಾದುದರಿಂದ ಅವಳು ಬರುವ ವಿಷಯ ಯಾರಿಗೂ ತಿಳಿದಿರಲಿಲ್ಲ. ಮೀರ ಮನೆಗೆ ಬಂದಾಗ ಕೃಷ್ಣಪ್ಪನವರು ಮನೆಯಲ್ಲಿರಲಿಲ್ಲ. ಶ್ರೀಪಾದು ಬಿ.ಎಸ್ಸಿ. ಟೆಕ್ಸ್‌ಟೈಲ್ಸ್ ಮುಗಿಸಿ ಬೆಂಗಳೂರಿನ ಗಿರಣಿಯೊಂದರಲ್ಲಿ ನೂರೈವತ್ತು ರೂಪಾಯಿನ ಕೆಲಸಕ್ಕೆ ಸೇರಿದ್ದ. ಶ್ರೀಪಾದು ಅಣ್ಣ ಗೋವಿಂದನ ಮನೆಯಲ್ಲಿರುತ್ತಿದ್ದ. ಶ್ರೀಹರಿಗೆ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಉಪಾಧ್ಯಾಯನ ಕೆಲಸವಿತ್ತು.

ಮೀರ ಬಾಗಿಲು ತಟ್ಟಿದಾಗ ಕಮಲಮ್ಮನವರು ಬಂದು ಬಾಗಿಲು ತೆರೆದರು. ಮೀರಳನ್ನು ನೋಡಿ ಆಶ್ಚರ್ಯ ವ್ಯಕ್ತಪಡಿಸಿ,

"ಬಾಮ್ಮ, ಕಾಗದ ಬರೆದಿದ್ರೆ ಇವರು ಸ್ಟೇಷನ್ನಿಗೆ ಬರುತ್ತಿದ್ದರು. ಶಾಮಣ್ಣ ಬರಲಿಲ್ಲವೇ? ಎಲ್ಲರೂ ಆರೋಗ್ಯವೇ?" ಎಂದು ಕೇಳಿದರು. ಮೀರ ಅನಿರೀಕ್ಷಿತವಾಗಿ ಬಂದುದು ಕಮಲಮ್ಮನವರಿಗೆ ನಿಜವಾಗಿಯೂ ತುಂಬಾ ಸಂತೋಷವನ್ನುಂಟುಮಾಡಿತ್ತು. ನಾಲ್ಕು ಜನ ಗಂಡುಮಕ್ಕಳಿದ್ದರೂ ಎಲ್ಲರೂ ವಿದ್ಯಾಭ್ಯಾಸ ಮುಗಿಸಿ ನೌಕರಿ ಹಿಡಿದು ದೂರ ಹೊರಟುಹೋಗಿದ್ದರು. ಶ್ರೀಪಾದು ಬೆಂಗಳೂರಿನಲ್ಲಿ ನೆಲಸಿ ಒಂದು ವರ್ಷವಾಗಿತ್ತು. ಅಂದಿನಿಂದ ಗಂಡ ಹೆಂಡತಿ ಇಬ್ಬರೇ ಮನೆಯಲ್ಲಿರುತ್ತಿದ್ದರು. ಕೃಷ್ಣಪ್ಪನವರಿಗಿನ್ನೂ ರಿಟೈರ್ ಆಗಿರಲಿಲ್ಲ. ಮನೆಯಲ್ಲಿ ಪತಿಯೊಬ್ಬರನ್ನೇ ಬಿಟ್ಟು, ಅವರ ಊಟ ತಿಂಡಿಗೆ ತೊಂದರೆ ಮಾಡಿ ಮಕ್ಕಳ ಮನೆಯಲ್ಲಿರುವ ಮನಸ್ಸು ಕಮಲಮ್ಮನವರಿಗಿರಲಿಲ್ಲ. ಗೋಪಾಲ, ಗೋವಿಂದ ಆಗಾಗ್ಗೆ ತಾಯಿಯನ್ನು ತಮ್ಮಲ್ಲಿಗೆ ಬರುವಂತೆ ಕರೆಯುತ್ತಿದ್ದರು. ಆದರೆ ಕೃಷ್ಣಪ್ಪನವರಿಗೆ ತೊಂದರೆಯಾಗುವುದೆಂದು ಅವರ ಮಕ್ಕಳ ಆಹ್ವಾನವನ್ನು ಅಂಗೀಕರಿಸಲಿಲ್ಲ. ಕೃಷ್ಣಪ್ಪನವರು ಕೆಲಸಕ್ಕೆ ಹೊರಟು ಹೋದರೆ ಕಮಲಮ್ಮನವರಿಗೆ ಸಮಯವೇ ಹೋಗುತ್ತಿರಲಿಲ್ಲ. ಸಂಜೆಯ ಹೊತ್ತು ಆಗಾಗ್ಗೆ ತಮ್ಮ ಬೀಗರಾದ ಕಾವೇರಮ್ಮನ ಮನೆಗೆ ಹೋಗಿ ಬರುತ್ತಿದ್ದರು. ಆದರೂ ತುಂಬಿದ ಸಂಸಾರದಲ್ಲಿ ಬೆಳೆದು, ದೊಡ್ಡ ಮನೆಯನ್ನು ಸೇರಿದ್ದ ಆಕೆಗೆ ಕಾಲ ಕಳೆಯುವುದು ತುಂಬಾ ಕಷ್ಟವಾಗಿತ್ತು.

ಕಮಲಮ್ಮನವರು ಮೀರಳನ್ನು ಸಂಭ್ರಮದಿಂದ ಸ್ವಾಗತಿಸಿದರು. ಊಟಕ್ಕೆ ಮತ್ತೊಂದು ಪಲ್ಯ ಮಾಡಿ ಹಪ್ಪಳ, ಸಂಡಿಗೆ ಕರಿದರು.

"ಯಾಕಮ್ಮ ಬಡವಾಗಿದ್ದೀಯಾ?" ಎಂದು ಅಕ್ಕರೆಯಿಂದ ವಿಚಾರಿಸಿದರು.

"ಊಟಕ್ಕೇಳು, ಎಷ್ಟು ಹಸಿವಾಗಿದೆಯೋ" ಎಂದು ಕಮಲಮ್ಮ ಬಲವಂತದಿಂದ ಅವಳನ್ನು ಊಟಕ್ಕೆಬ್ಬಿಸಿದರು.

ಮೀರ ಊಟ ಮಾಡುತ್ತಿದ್ದಂತೆ, "ಎರಡು ತಿಂಗಳು ಇಲ್ಲೇ ಇರು. ನನಗೂ ಒಬ್ಬಳೇ ಇದ್ದು ಬೇಜಾರಾಗಿದೆ" ಎಂದರು ಕಮಲಮ್ಮ.

"ಶ್ರೀಹರಿಗೆ ಮದುವೆ ಮಾಡಿ ಅವನ ಹೆಂಡತೀನ ಇಲ್ಲೇ...."

"ಸರಿ, ಅವರಿಗೆ ಮದುವೆ ಮಾಡಿದ ಮೇಲೆ ಅವರವರ ಹೆಂಡತೀರನ್ನ ಕಟ್ಕಿಕೊಂಡು ತಮ್ಮ ಪಾಡಿಗೆ ತಾವು ಓಡಿಹೋಗ್ತಾರೆ."

"ಮತ್ತೆ ಮದುವೆ ಮಾಡಿಕೊಳ್ಳೋದು ಯಾಕೆ? ನಿಮ್ಮ ಹತ್ತಿರ ಬಿಡಲಿಕ್ಕೇನು?"

"ಬೇಡ ತಾಯಿ. ಗಂಡ ಹೆಂಡತಿ ಅವರು ಸುಖವಾಗಿ ಎಲ್ಲಾದರೂ ಇರಲಿ, ನನಗೆ ಅಷ್ಟು ಸಾಕು. ಆದರೆ ಶ್ರೀಪಾದೂದೇ ನನಗೆ ಯೋಚನೆಯಾಗಿದೆ. ಒಂದೊಂದು ಸಲ ಕೆಲಸ ಬಿಟ್ಟಾದರೂ ಬಂದುಬಿಡೂಂತ ಕಾಗದ ಬರೆಯಲೇಂತ ಯೋಚನೆ ಮಾಡ್ತೀನಿ."

"ಶ್ರೀಪಾದು ಎಷ್ಟಾಗಲೀ ನಿಮ್ಮ ಕೈಗೂಸಲ್ಲವೇ? ಇಪ್ಪತ್ತನಾಲ್ಕು ವರ್ಷದ ಹಾಲುಗಲ್ಲದ ಕಂದ" ಮೀರ ದೊಡ್ಡಮ್ಮನನ್ನು ಕೀಟಲೆ ಮಾಡಿದಳು.

ಊಟವಾದ ಸ್ವಲ್ಪ ಹೊತ್ತಿನವರೆವಿಗೆ ಮೀರ ದೊಡ್ಡಮ್ಮನೊಡನೆ ಹರಟೆ ಹೊಡೆಯುತ್ತಿದ್ದಳು. ಅನಂತರ,

"ನನ್ನ ಸ್ನೇಹಿತೆಯೊಬ್ಬಳ ಮನೆಗೆ ಹೋಗ್ಬಿಟ್ಟು ಬರ್ತೀನಿ" ಎಂದಳು.

"ಈ ಬಿಸಿಲಿನಲ್ಲಿ ಹೋಗ್ತೀಯಾ?"

"ಸಂಜೆ ಅವಳು ಸಿಕ್ತಾಳೋ ಇಲ್ಲವೋ? ಸಂಜೆ ಸಮಾಜಕ್ಕೆ ಹೊರಟು ಹೋಗಿರುತ್ತಾಳೆ."

"ಛತ್ರೀನಾದರೂ ತಗೊಂಡು ಹೋಗು...."

"ಬೇಡ ದೊಡ್ಡಮ್ಮ" ಎನ್ನುತ್ತ ಮೀರ ಹೊರಟಳು. ಅವಳು ಮಹಾರಾಣಿ ಕಾಲೇಜು ಸೇರಿದಾಗ ಮಧ್ಯಾಹ್ನ ಒಂದು ಗಂಟೆಯಾಗಿತ್ತು. ರಜಾದಿನವಾದುದರಿಂದ ಕಾಲೇಜು ಮೌನವಾಗಿ ತಪಸ್ಸು ಮಾಡುತ್ತಿರುವಂತೆ ತೋರಿತು. ಐದೂವರೆ ವರ್ಷಗಳ ಹಿಂದೆ ತಾನು ಅದೇ ಕಾಲೇಜಿನ ಅಚ್ಚುಮೆಚ್ಚಿನ ವಿದ್ಯಾರ್ಥಿನಿಯಾಗಿದ್ದುದನ್ನು ಮೀರ ನೆನೆದಳು. ಚರ್ಚಾಕೂಟಗಳಲ್ಲಿ, ಆಟಗಳ ಸ್ಪರ್ಧೆಯಲ್ಲಿ, ನಾಟಕಗಳಲ್ಲಿ ಭಾಗವಹಿಸಿ ಪ್ರತಿಯೊಂದರಲ್ಲಿಯೂ ಅನೇಕ ಬಹುಮಾನಗಳನ್ನು ಪಡೆದಿದ್ದ ದೃಶ್ಯಗಳು ಮತ್ತೆ ಅವಳ ಕಣ್ಣುಗಳ ಮುಂದೆ ಸುಳಿದವು. ಪ್ರತಿಯೊಂದರಲ್ಲಿಯೂ ತನಗೇ

ಮೊದಲ ಬಹುಮಾನ. ನಾಟಕಗಳಲ್ಲಿ ಮೀರಳೇ ನೂರ್‌ಜಹಾನ್, ಸಂಯುಕ್ತ.

ಅವಳ ಹೃದಯ ಮಧುರ ನೆನಪುಗಳಿಂದ ಮೃದುವಾಯಿತು. ತಾನು ಮತ್ತೊಮ್ಮೆ ವಿದ್ಯಾರ್ಥಿನಿಯಾಗಬಹುದು. ಮತ್ತೆ ನೂರ್‌ಜಹಾನಳ ಪಾತ್ರ ವಹಿಸ ಬಹುದು. ಮತ್ತೆ ಮೊದಲ ಬಹುಮಾನ ಗಳಿಸಬಹುದು. ಆದರೆ ಐದೂವರೆ ವರ್ಷ ಗಳ ಹಿಂದಿನ ಮೀರ ತಾನಾಗಲು ಸಾಧ್ಯವೆ? ಏನನ್ನು ಕೊಟ್ಟರೆ ತಾನೆ ಆ ಎಳೆತನ, ಚೈತನ್ಯ, ಉತ್ಸಾಹ ಮತ್ತೆ ಹಿಂತಿರುಗಿ ಬರುತ್ತದೆ?

ಇದೇ ಡ್ರಾಮ ತೆಗೆದುಕೊಳ್ಳುತ್ತಿದ್ದ ಕ್ಲಾಸು. ಉಪಾಧ್ಯಾಯರು ಮಾಡಿದ 'ವೆನಿಸ್ ನಗರದ ವರ್ತಕ' ಈಗಲೂ ನೆನಪಿದೆ. ಅವರನ್ನು ತಾವೇನು ಕಡಿಮೆ ಕೀಟಲೆ ಮಾಡುತ್ತಿದ್ದರೇ? ಪಾಪ! ನಾಟಕ ತೆಗೆದುಕೊಳ್ಳುತ್ತಿದ್ದ ಉಪಾಧ್ಯಾಯರು ಇನ್ನೂ ತರುಣರಾಗಿದ್ದುದರಿಂದ ಅವರ ಗೋಳು ಯಾರಿಗೂ ಬೇಡ. ಒಂದು ದಿನ ನಾಚಿಕೆ, ಸಂಕೋಚದಿಂದ ಗಾಬರಿಯಾಗಿ ರಾಜೇಶ್ವರಿಯ ಪ್ರಶ್ನೆಗೆ ಉತ್ತರ ಹೇಳಲಾರದೆ ಡಸ್ಟರಿನಿಂದಲೇ ಮುಖ ಒರೆಸಿಕೊಂಡುಬಿಟ್ಟಿದ್ದರು.

ಇಲ್ಲಿ ಕನ್ನಡ ಕ್ಲಾಸು-ಕನ್ನಡ ತರಗತಿಯೆಂದರೆ ಹುಡುಗಿಯರಿಗೆಲ್ಲಾ ಚತುರ್ಭುಜ ಬರುತ್ತಿತ್ತು. ಕೊನೆಯ ಬೆಂಚಿನಲ್ಲಿ ಕುಳಿತು, "ಫಿಲಂ ಇಂಡಿಯಾ', 'ಫಿಲಂ ಫೇರ್' ಓದಿದವರೇ ಹೆಚ್ಚು. ಕನ್ನಡ ತಾನೇ-ಓದದೇ ಇದ್ದರೂ ಪಾಸಾಗುತ್ತದೆ ಎಂದು ಧೋರಣೆ ತಾಳಿದ್ದ ವಿನೋದ ಕನ್ನಡದಲ್ಲೇ ಫೇಲಾಗಿದ್ದಳು.

ವಿರಾಮ ಕಾಲದಲ್ಲಿ ಎಲ್ಲರೂ ಬಿಸಿಲು ಮಚ್ಚಿನ ಮೇಲೆ ಹೋಗಿ ಅದೀಬ ಳನ್ನು ಹಿಡಿದು ಅವಳಿಂದ 'ಬೈಜೂ ಬಾವರಾ' ಹಾಡುಗಳನ್ನು ಹಾಡಿಸಿ ಕಲಿಯಲು ಪ್ರಯತ್ನಿಸುತ್ತಿದ್ದರು. 'ಗಂಗಾ ಕೀ ಮೌಜ್ ಮೇ' ಹಾಡು ಕಲಿಯದಿದ್ದರೆ ತನ್ನ ಜೀವನವೇ ವ್ಯರ್ಥ ಎಂದು ಭಾವಿಸಿದ್ದ ಯಶೋದ ಈಗ ಎಲ್ಲಿದ್ದಾಳೋ? 'ಡಿಕ್ಲಮ್ ಡಿ ಅಮ್ಮಿಯಟ್‌ನಲ್ಲೋ' ಎಂಬುದಕ್ಕೆ ಬದಲಾಗಿ 'ಲಾಜಿಕ್ ಓದಿ ನಾನ್ ಕೆಟ್ಟೆ ನಲ್ಲೋ' ಎಂದು ಬೋರ್ಡಿನ ಮೇಲೆ ಬರೆದಿದ್ದ ಪೆದ್ದಿ ಪದ್ಮ ಈಗ ದೊಡ್ಡ ಲೇಖಕಿ ಯಾಗಿದ್ದಾಳೆ. ಇನ್ನೂರ ಹದಿನೆಂಟು ಸೀರೆಗಳ ಒಡತಿ ವನಜಾ'ದೇವರು ಮಳೆಹನಿ ಗಳಿಗೆ ಬದಲಾಗಿ ಸೀರೆಗಳನ್ನು ಆಕಾಶದಿಂದ ಉದುರಿಸಬಾರದೆ' ಎನ್ನುತ್ತಿದ್ದಳು. ಮತ್ತೊಬ್ಬ ವಿಜಯಲಕ್ಷ್ಮಿ, ಪಂಡಿತಳಾಗಲು ಕನಸು ಕಾಣುತ್ತಿದ್ದ ಕನಕ, ಸಿನಿಮಾ ನಟಿಯಾಗಲು ಹಂಬಲಿಸುತ್ತಿದ್ದ ಮೀನಾಕ್ಷಿ ಅವರೆಲ್ಲರೂ ಅವಳ ಮುಂದೆ ಸುಳಿದರು.

ಮೀನಾಕ್ಷಿ ಮದುವೆಯಾಗಿ ಅತ್ತೆ ಮನೆ ಸೇರಿದ್ದಳು. ಅವಳು ಸಿನಿಮಾ ನಟಿ ಯಾಗಲು ಕಾಣುತ್ತಿದ್ದ ಕನಸು ಒಂದು ವಿಧದಲ್ಲಿ ಪೂರ್ಣವಾಗಿತ್ತು. ಅಲಂಕಾರ

ಪ್ರಿಯೆ ಮೀನಾಕ್ಷಿಯನ್ನು ಅವಳತ್ತ 'ಸಾಕು ಸುಮ್ಮನಿರು. ಸಿನಿಮಾ ನಟಿಯ ಹಾಗೆ ಅಲಂಕಾರ ಮಾಡಿಕೊಳ್ಳೋದನ್ನ ಬಿಟ್ಟರೆ ನಿನಗೇನು ತಿಳಿಯುತ್ತದೆ' ಎಂದು ಮೂದಲಿಸುತ್ತಿದ್ದರಂತೆ.

ಮೀರ ಒಂದು ಚೀಟಿಯಲ್ಲಿ ತಾನು ಇಂಟರ್ ಪಾಸ್ ಮಾಡಿದ ವರ್ಷದ ರಿಜಿಸ್ಟರ್ ನಂಬರನ್ನು ಗುರುತು ಹಾಕಿಕೊಟ್ಟಳು. ಗುಮಾಸ್ತರು 'ನಾಡಿದ್ದು ಬನ್ನಿ' ಎಂದರು.

ಮೀರ ಮನೆಗೆ ಬಂದಾಗ ಕಮಲಮ್ಮನವರು ತಿಂಡಿ ಮಾಡುತ್ತಿದ್ದರು. ಮೀರ ಬಂದುದನ್ನು ನೋಡಿ,

"ನಿನ್ನ ಸ್ನೇಹಿತೆ ಸಿಕ್ಕಿದಳೇ?" ಎಂದರು.

"ಹೂಂ" ಎಂದು ಮೀರ ಮಾತು ಬದಲಾಯಿಸಿದಳು.

ಮೀರಳಿಗೆ ಸಂಜೆ ಮನೆಯಲ್ಲಿಯೇ ಕಾಲ ಕಳೆಯಲು ಬೇಸರವಾಯಿತು. ನರ್ಮದೆಯ ಮನೆಗೆ ಹೋಗೋಣವೆಂದರೆ ಅವಳು ಅಕ್ಕನ ಮನೆಯಲ್ಲಿ ಎರಡು ದಿನವಿದ್ದು ಬರಲು ಬೊಂಬಾಯಿಗೆ ಹೊರಟುಹೋಗಿದ್ದಳು. ಮಾರನೆಯ ದಿನ ದೊಡ್ಡಮ್ಮನ ಹಿಂದೆ ಮುಂದೆ ಸುತ್ತಾಡುತ್ತಾ ಮೀರ ಕಾಲ ಕಳೆದಳು.

ಇಂಟರ್ ಸರ್ಟಿಫಿಕೇಟನ್ನು ಪಡೆದು ಮೆಡಿಕಲ್ ಕಾಲೇಜಿಗೆ ಅಪ್ಲಿಕೇಷನ್ ಹಾಕಿದ ಮಧ್ಯಾಹ್ನವೇ ಮೀರ ಹಳ್ಳಿಗೆ ಹೊರಟಳು.

"ಎರಡು ದಿನ ಗಂಡನ್ನ ಬಿಟ್ಟಿದ್ದಕ್ಕೆ ಬೇಜಾರಾಯಿತೇ?" ಎಂದು ಕಮಲಮ್ಮನವರು ಮೀರಳನ್ನು ಹಾಸ್ಯ ಮಾಡಿದರು.

"ಹೇಗಿದ್ದರೂ ಪುನಃ...." ಎಂದು ಹೇಳುತ್ತಾ ಮೀರ ನಾಲಿಗೆ ಕಚ್ಚಿಕೊಂಡು "ಯಾವಾಗಲಾದರೂ ಬಂದರಾಯಿತು" ಎಂದು.

ಹಳ್ಳಿಗೆ ಹೊರಟಾಗ ಅವಳ ಹೃದಯ ಎಂದಿಗಿಂತಲೂ ಸ್ವಲ್ಪ ಹಗುರವಾಗಿದ್ದರೂ ಚಿಂತೆಯ ಕೀಟ ಅವಳನ್ನು ಕೊರೆಯುತ್ತಿತ್ತು. ಮೆಡಿಕಲ್ ಕಾಲೇಜಿಗೆ ಪ್ರವೇಶ ಸಿಗುವುದು ಅತ್ಯಂತ ಕಠಿಣವೆಂಬುದು ಅವಳಿಗೆ ತಿಳಿದಿತ್ತು. ವಿದ್ಯಾರ್ಥಿಗಳ ಬುದ್ಧಿ, ಆಸಕ್ತಿ, ಪರೀಕ್ಷೆಯಲ್ಲಿ ಪಡೆದ ನಂಬರು ಇವುಗಳನ್ನು ಅನುಸರಿಸಿ ಪ್ರವೇಶ ಕೊಡುವುದಾದರೆ ಮೀರಳಿಗೆ ಸ್ಥಾನ ಸಿಕ್ಕುತ್ತಿದ್ದುದರಲ್ಲಿ ಯಾವ ಸಂಶಯವೂ ಇರಲಿಲ್ಲ. ಆದರೆ ಬುದ್ಧಿಗಿಂತಲೂ ಗಣ್ಯವ್ಯಕ್ತಿಗಳ ಪ್ರಭಾವ, ಜಾತಿ ಮುಖ್ಯವಾಗಿದ್ದುದರಿಂದ ಮೀರಳ ಮನಸ್ಸು ವ್ಯಾಕುಲಗೊಂಡಿತ್ತು. ಅದರಲ್ಲೂ ಎಲ್ಲ ವೃತ್ತಿಗಿಂತಲೂ ಅತ್ಯಂತ ಜವಾಬ್ದಾರಿಯುಳ್ಳ ವೈದ್ಯವೃತ್ತಿಯಲ್ಲಿ ಜಾಣ್ಮೆಗಿಂತಲೂ ಜಾತಿಯನ್ನು ನೋಡುವುದರಲ್ಲಿ ಯಾವ ಅರ್ಥವಿದೆ? ವೈದ್ಯರಲ್ಲಿ ಭರವಸೆಯಿಟ್ಟು ರೋಗದಿಂದ ನರಳುವ

ವ್ಯಕ್ತಿ ತನ್ನ ಜೀವನದ ಆಸೆ, ಆಕಾಂಕ್ಷೆಗಳನ್ನೆಲ್ಲಾ ವೈದ್ಯನ ಚಾತುರ್ಯದ ಮೇಲೆ ಹೊರಿಸಿ ಅವನ ಬಳಿಗೆ ಕಂಗೆಟ್ಟು ಅನಾಥನಂತೆ ಬಂದಾಗ, ಸರಿಯಾಗಿ 'ಡಯೋಗ್ನೋಸ್' ಮಾಡಲು ಬಾರದ ವೈದ್ಯ ರೋಗದ ಮೂಲ ಕಾರಣ ತಿಳಿಯಲಾರದೇ ಬೇರೊಂದು ರೀತಿ ಅರ್ಥ ಮಾಡಿಕೊಂಡು ಔಷಧಿ ಕೊಟ್ಟರೆ ಗತಿಯೇನು? ಶಸ್ತ್ರಚಿಕಿತ್ಸೆ ಎಂತಹ ಜವಾಬ್ದಾರಿಯ ಕೆಲಸ! ರೋಗಿಯ ಬದುಕು ಸಾವು ವೈದ್ಯನ ಕೈಯಲ್ಲಿರುವ ಚಾಕು, ಕತ್ತರಿಗಳ ಪ್ರಯೋಗದಲ್ಲಿರುವುದಿಲ್ಲವೇ? ವೈದ್ಯ ವೃತ್ತಿಯಂತಹ ಗುರುತರ ಕೆಲಸದಲ್ಲಿಯೂ ಜಾತಿ, ಪ್ರಭಾವ ನೋಡುವುದೇ?

ಮೀರಳ ವಿಚಾರಲಹರಿ ಒಂದೇ ದಿಕ್ಕಿನಲ್ಲಿ ಓಡುತ್ತಿತ್ತು. ಈ ಅನ್ಯಾಯಗಳಿಗೆ ಕೊನೆ ಎಂದಿಗೆ? ಬೇಲಿಯೆ ಹೊಲ ಮೇಯಲು ಹೊರಟರೇನು ಗತಿ? ರಕ್ಷಿಸ ಬೇಕಾದವರೇ ಭಕ್ಷಿಸತೊಡಗಿದರೆ ಕಾಪಾಡುವವರು ಯಾರು?

ಮೀರಳ ಮನಸ್ಸು ಸಂತಾಪದಿಂದ ಉರಿಯಿತು. ದೇಶವನ್ನೆಲ್ಲ ಒಟ್ಟಿಗೆ ಭಸ್ಮ ಮಾಡಿ, ಹೊಸ ರಾಜ್ಯ ನಿರ್ಮಾಣ ಮಾಡಿದರೇ ಹೊಸ ಭಾವನೆಗಳು ಸಾಧ್ಯವೇನೋ ಎನಿಸಿತು.

ಒಂದು ಪಕ್ಷ ತನಗೆ ಕಾಲೇಜಿನಲ್ಲಿ ಪ್ರವೇಶ ಸಿಗದಿದ್ದರೆ? ಅದೊಂದು ಹಂಬಲದಿಂದಲೇ ಮೀರ ಬದುಕಿಗೆ ಇನ್ನೂ ಹತ್ತಿಕೊಂಡಿದ್ದಳು. ವೈದ್ಯಳಾಗಬೇಕೆಂಬ ಆಶಾಸೂತ್ರ ಮೀರಳನ್ನು ಬಾಳ್ವೆಯ ಕಂಬಕ್ಕೆ ಬಿಗಿದಿತ್ತು.

ಮೀರ ಯಾವಾಗ ಹಿಂತಿರುಗಿ ಬರುವಳೆಂಬುದು ಹಳ್ಳಿಯಲ್ಲಿ ಯಾರಿಗೂ ತಿಳಿದಿರಲಿಲ್ಲ. ನೆತ್ತಿಯ ಮೇಲೆ ಸೂರ್ಯ ಸುಡುತ್ತಿದ್ದುದರಿಂದ ಮೀರ ಗಾಡಿ ಮಾಡಿಕೊಂಡು ಹಳ್ಳಿಯನ್ನು ತಲುಪಿದಳು.

ಅವಳು ಮನೆ ಸೇರಿದಾಗ ಶಾಮು ಇನ್ನೂ ಮನೆಗೆ ಬಂದಿರಲಿಲ್ಲ. ಮೀರ ಒಳಗೆ ಬಂದು ಆರಾಮ ಕುರ್ಚಿಯಲ್ಲಿ ಕುಳಿತಳು. ವೆಂಕಮ್ಮನವರು ಅವಳ ಬಳಿ ನಿಂತು ಹಿಗ್ಗಿನಿಂದ,

"ಒಂದು ಕಾಗದ ಬರೆದಿದ್ದರೆ ಶಾಮು ಗಾಡಿ ಕಳಿಸುತ್ತಿದ್ದ. ಎರಡು ದಿನ ನೀನು ಮನೆ ಬಿಟ್ಟು ಹೋಗಿದ್ದಕ್ಕೆ ಮನೆಯೆಲ್ಲಾ ಬಿಕೋಂತಿತ್ತು. ನೀನು ಬಂದ ಮೇಲೆ ಎಷ್ಟೋ ಕಳೆ ಬಂತು" ಎಂದರು.

ಮೀರ ಕಣ್ಣು ಮುಚ್ಚಿ ಸುಮ್ಮನೆ ಒರಗಿದ್ದಳು.

"ಸದ್ಯ ನಿನ್ನ ಗಂಡನ್ನ ನೀನೇ ಒಪ್ಪಿಸಿಕೋ ತಾಯಿ. ಎರಡು ದಿನದಿಂದ ಅವನು ಸರಿಯಾಗಿ ಮನೆಗೇ ಬರುತ್ತಿಲ್ಲ. ನಿನ್ನೆ ದಿನ ಅವನು ಬೆಳಗಿನ ಊಟಕ್ಕೆ ಮನೆಗೆ ಬಂದಾಗ ಸಂಜೆ ಐದು ಗಂಟೆಯಾಗಿತ್ತು. ರಾತ್ರಿ 'ಹಸಿವಿಲ್ಲ' ಎಂದು ಹೇಳಿ

ಹಾಗೇ ಮಲಗಿಬಿಟ್ಟ."

ಮೀರ ಕಣ್ಣು ಬಿಟ್ಟು, "ಇವತ್ತಿನ್ನೂ ಊಟಕ್ಕೆ ಬಂದಿಲ್ಲವೇ?" ಎಂದಳು.

"ಇಲ್ಲ."

ಮೀರ ಎದ್ದು ನಿಂತು ಕೂಗಿದಳು, "ಬೋರಾ.... ಬೋರಾ...."

ಕೊಟ್ಟಿಗೆಯಲ್ಲಿ ಕೆಲಸ ಮಾಡುತ್ತಿದ್ದ ಬೋರ ಓಡಿ ಬಂದ.

"ರಾಯರನ್ನು ಊಟಕ್ಕೆ ಕರೆದುಕೊಂಡು ಬಾ."

ಬೋರ ಹೊರಟ ಮೇಲೆ ವೆಂಕಮ್ಮನವರು ಹಿಂದಿನಿಂದ ಕೂಗಿ ಹೇಳಿದರು, "ಅಮ್ಮಾವರು ಹೇಳಿದರೂಂತ ಹೇಳೋ."

ಬೋರ ಶಾಮುವನ್ನು ಕರೆದುಕೊಂಡು ಬರುವಾಗ ಮೂರು ಗಂಟೆಯಾಗಿತ್ತು. ಶಾಮುವಿನ ಮುಖ ಬಿಸಿಲಿನ ಝಳಕ್ಕೆ ಕೆಂಪಾಗಿತ್ತು. ಕಣ್ಣುಗಳಲ್ಲಿ ಆಯಾಸ ತೇಲುತ್ತಿತ್ತು.

ಶಾಮು ಒಳಗೆ ಬಂದೊಡನೆ ಮೀರ ತಾನೇ ಒಳಗೆ ಹೋಗಿ ತಟ್ಟೆ ಹಾಕಿ ನೀರಿಟ್ಟಳು. ಶಾಮು ಊಟಕ್ಕೆ ಬಂದು ಕುಳಿತ. ಮೀರ ಅವನಿಗೆ ಸ್ವಲ್ಪ ದೂರದಲ್ಲಿ ಕುಳಿತಳು.

ತಾನು ಮೈಸೂರಿಗೆ ಹೋಗುವುದನ್ನು ಶಾಮು ಮನಸ್ಸಿಗೆ ತುಂಬಾ ಹಚ್ಚಿ ಕೊಂಡಿರುವುದು ಮೀರಳಿಗೆ ತಿಳಿದಿತ್ತು. ಅವನಿಗೆ ಎರಡು ಸಮಾಧಾನದ ಮಾತು ಹೇಳಬೇಕೆನಿಸಿತು. ಆದರೆ ಶಾಮು ಅವಳ ಪ್ರಶ್ನೆಗಳಿಗೆಲ್ಲಾ ಮೊಟಕಾಗಿ ಉತ್ತರ ಕೊಟ್ಟಿದ್ದುದರಿಂದ ಅವನನ್ನು ಸಂಭಾಷಣೆಗೆ ಎಳೆಯುವುದು ಸಾಧ್ಯವಾಗಲಿಲ್ಲ.

ಆದರೆ ರಾತ್ರಿಯೂ ಸುಮ್ಮನಿರುವುದು ಅವಳಿಗಾಗಲಿಲ್ಲ. ರಾತ್ರಿ ಮೀರ ತಾನಾಗಿಯೇ ಮಾತಿಗಾರಂಭ ಮಾಡಿದಳು. ಅವರಿಬ್ಬರ ನಡುವೆ ಮಿಣುಕು ದೀಪ ಅತ್ತಿಂದಿತ್ತ ಒಲೆದಾಡುತ್ತಿತ್ತು-ಇಬ್ಬರ ಮಾತುಗಳನ್ನೂ ಕೇಳಿಸಿಕೊಳ್ಳುವಂತೆ.

"ನೀವೇಕೆ ಹೀಗೆ ಮಾಡ್ತೀರಿ?"

"ಹೇಗೆ ಮಾಡ್ತಿದೀನಿ?"

"ನಿನ್ನೆ ದಿನ ಸಂಜೆ ಐದು ಗಂಟೆಗೆ ಊಟ ಮಾಡಿದರಂತೆ. ರಾತ್ರಿ ಊಟ ಮಾಡಲೇ ಇಲ್ಲವಂತೆ...."

ಶಾಮು ಮಾತನಾಡಲಿಲ್ಲ. ಮೀರ ಮುಂದುವರೆಸಿದಳು.

"ನನಗೆ ಗೊತ್ತು ನೀವು ಯಾಕೆ ಹೀಗೆ ಮಾಡ್ತೀರೀಂತ. ನಾನು ಮೆಡಿಕಲ್‌ಗೆ ಹೋಗುವುದು ನಿಮಗಿಷ್ಟವಿಲ್ಲ...."

"ಛೇ, ನೀನು ನೆಮ್ಮದಿಯಿಂದಿರೋದು ನನಗೆ ಮುಖ್ಯ" ಶಾಮು ನಡುವೆ

ಬಾಯಿ ಹಾಕಿ ಹೇಳಿದ.

"ನಿಮಗೆ ನಾನು ನೆಮ್ಮದಿಯಿಂದಿರೋದು ಬೇಕಾಗಿದೆ, ಅಲ್ವೆ?"

"ಹೌದು."

"ನನ್ನ ನೆಮ್ಮದಿಗಾಗಿ, ಸುಖಕ್ಕಾಗಿ ನೀವೇನು ಮಾಡಲೂ ಸಿದ್ಧವಾಗಿದ್ದೀರಾ?"

"ಹೂಂ."

"ಹಾಗಾದರೆ ನೀವು ಹೀಗೆ ಕೊರಗು ಹಚ್ಚಿಕೊಂಡರೆ ನನ್ನ ನೆಮ್ಮದಿ ಭಂಗವಾಗುತ್ತದೆ. ನೀವು ಹೊತ್ತಿಗೆ ಸರಿಯಾಗಿ ಊಟ ತಿಂಡಿಗೆ ಬರದಿದ್ದರೆ ನನಗೆ ಸಂತೋಷವಿರುವುದಿಲ್ಲ."

"........"

"ನಾನು ನಿಮ್ಮ ಮೇಲೆ ಕೋಪಿಸಿಕೊಂಡು ಕಾಲೇಜು ಸೇರಲು ಹೋಗುತ್ತಿಲ್ಲ. ಈ ಹಳ್ಳಿಯಲ್ಲಿ ಹೇಗೆ ಕಾಲ ಕಳೆಯಬೇಕೋ ನನಗೆ ತಿಳಿಯುತ್ತಿಲ್ಲ. ಹಳೆಯ ನೆನಪುಗಳಿಂದ ಮುಕ್ತಳಾಗಲು ನನಗಿರುವ ದಾರಿ ಇದೊಂದು ಮಾತ್ರ. ನನ್ನ ಬುದ್ಧಿ, ಮನಸ್ಸಿಗೆ ವಿರಾಮ ಕೊಡದೆ ದುಡಿಯಬೇಕು, ಮೆಡಿಕಲ್ ಮುಗಿಸಿ ಸಾಧ್ಯವಾದರೆ ಹಳ್ಳಿಗೇ ಹಿಂದಿರುಗಿ ಕೆಲಸ ಮಾಡುವ ಅಪೇಕ್ಷೆಯಿದೆ...."

ಶಾಮು ತಟ್ಟನೆ ಮೀರಳ ಕೈಹಿಡಿದು ಕಣ್ಣರಳಿಸಿ,

"ನಿಜವೇ?" ಎಂದ.

ಮಗುವಿನಂತೆ ಆಶ್ಚರ್ಯಗೊಂಡಿದ್ದ ಶಾಮುವಿನ ಮುಖ ನೋಡಿ ಮೀರ ನಸುನಕ್ಕು,

"ಈಗಂತೂ ಹಾಗೆ ಯೋಚಿಸಿದ್ದೀನಿ. ಮುಂದೇನಾಗುವುದೋ ಹೇಳಲಾರೆ. ಈ ಗಳಿಗೆ ನಮ್ಮದು. ನಾಳೆಯಲ್ಲಿ ನನಗೆ ನಂಬಿಕೆಯಿಲ್ಲ. ಮೆಡಿಕಲ್ ಮುಗಿಯುವವರೆವಿಗೆ ನಾನು ಬದುಕಿದ್ದರೆ ಇಲ್ಲಿಗೇ-ನಿಮ್ಮಲ್ಲಿಗೇ ಬರುತ್ತೇನೆ. ಹೆಂಡತಿಯಂತಲ್ಲ-ಗೆಳತಿಯ ಹಾಗೆ. ಆದರೆ ನಾನು ಯಾವ ಕೆಲಸವೂ ಇಲ್ಲದೆ ನಿಮ್ಮ ಸುಖವೇ ನನ್ನ ಸುಖ ಎಂದು ತಿಳಿದು ಇಲ್ಲಿಯೇ ಇರಲಾರೆ. ಗಂಡನೇ ನನ್ನ ದೇವರು, ಅವನ ಸುಖ ತನ್ನ ಸುಖ ಎಂದು ಭಾವಿಸುವ ಕಾಲ ಹೋಯಿತು. ಹೆಂಗಸು ತನ್ನ ಪತಿಗಿಂತಲೂ ತನ್ನ ವ್ಯಕ್ತಿತ್ವ, ಅಭಿಪ್ರಾಯ, ಆತ್ಮವನ್ನು ಪ್ರೀತಿಸುತ್ತಾಳೆ. ನನ್ನ ಮಹದಾಸೆಯನ್ನು ನೀವು ಗೌರವಿಸುತ್ತಿರುವುದಕ್ಕಾಗಿ ನಾನು ಅತ್ಯಂತ ಕೃತಜ್ಞಳು."

ಶಾಮು ಮೌನವಾಗಿ ದೀಪವನ್ನು ನೋಡುತ್ತಾ ಕುಳಿತಿದ್ದ. ಮೀರ ಆಡಿದ ಮಾತುಗಳಲ್ಲಿ ಒಂದು ವಾಕ್ಯ ಅವನ ಮನಸ್ಸಿನಲ್ಲಿ ಸ್ಥಿರವಾಗಿ ನಿಂತಿತು.

"ನಾನು ಹಳ್ಳಿಗೇ ಬಂದು ಕೆಲಸ ಮಾಡುತ್ತೇನೆ."

ಅದೊಂದು ವಾಕ್ಯ ಅವನಿಗೆ ಚೈತನ್ಯವನ್ನು ನೀಡಿತ್ತು.

"ನೀವು ಕೊರಗಬಾರದು. ನೀವು ಸಂತೋಷವಾಗಿಯೇ ನನ್ನನ್ನು ಕಳುಹಿಸಿ ಕೊಡಿ. ಆಗ ನನಗೂ ಮನಸ್ಸಿಗೆ ಸಮಾಧಾನವಿರುತ್ತದೆ."

ಶಾಮು ಉತ್ತರ ಕೊಡದಿದ್ದರೂ ಅವನ ಮನಸ್ಸು ಸಮಾಧಾನಗೊಂಡಿತ್ತು. ಕುದಿಯುತ್ತಿದ್ದ ಅವನ ಮನಸ್ಸು ಮೀರಳ ತಂಗಾಳಿಯಂತಹ ಮಾತುಗಳನ್ನು ಕೇಳಿ ಶಾಂತವಾಯಿತು.

* * * * *

ಮಾರನೆಯ ದಿನದಿಂದ ಮೀರಳಿಗೆ ಅಂಚೆಯವನನ್ನು ನೋಡುವುದೇ ಒಂದು ದೊಡ್ಡ ಕೆಲಸವಾಯಿತು. ಊಟ, ತಿಂಡಿ, ನಿದ್ದೆ ಎಲ್ಲವನ್ನೂ ಮರೆತು ಪೋಸ್ಟಿನ ದಾರಿ ಕಾಯುತ್ತಾ ಕುಳಿತುಬಿಟ್ಟಿದ್ದಳು.

ಮೈಸೂರಿನಿಂದ ಮೀರ ಬಂದ ನಂತರ ಅವಳು ಯಾವಾಗಲೂ ಅನ್ಯಮನಸ್ಕಳಾಗಿರುವುದನ್ನು ವೆಂಕಮ್ಮನವರು ಮೊದಲು ಗಮನಿಸಿದರು. ಎಷ್ಟೋ ಬಾರಿ, "ಹೋದ ಮಗಳ ಚಿಂತೆಯಿರಬೇಕು" ಎನಿಸಿದರೂ ಅವರ ಮನಸ್ಸು 'ಊಹೂಂ ಇರಲಾರದು. ಬೇರಾವುದೋ ಚಿಂತೆ ಇರಬೇಕು' ಎಂದು ನುಡಿಯುತ್ತಿತ್ತು.

ವೀಣಳ ನೆನಪು ಮೀರಳ ಹೃದಯವನ್ನು ಹಿಂಡಿದಾಗ ಅವಳು ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡು ಮಲಗಿಬಿಡುತ್ತಿದ್ದಳು. ಮುಖದಲ್ಲಿ ದುಃಖ, ನಿರಾಶೆಯ ಹೊರತು ಬೇರಾವ ಭಾವನೆಗಳಿಗೂ ಅವಕಾಶವಿರುತ್ತಿರಲಿಲ್ಲ.

ಆದರೆ ಈಗ ನೆಪಮಾತ್ರಕ್ಕೆ ಕೈಲಿ ಪುಸ್ತಕವಿರುತ್ತಿತ್ತು. ಆಗಾಗ್ಗೆ ಆಸೆಯ ಹೊಂಬೆಳಕು ಅವಳ ಬೊಗಸೆಗಂಗಳಲ್ಲಿ ಮಿಂಚಿ ಮರೆಯಾಗುತ್ತಿತ್ತು. ಕಣ್ಣುಗಳನ್ನು ಕವಿದಿದ್ದ ದುಃಖದ ತೆರೆಯನ್ನು ಸರಿಸಿ ಆಸೆಯ ದೀಪ ಬೆಳಕನ್ನೆರಚಿ ಮತ್ತೆ ಮಂಕಾಗುತ್ತಿತ್ತು.

ಮೀರ ಅತ್ಯಂತ ಆತುರ, ಕಳವಳದಿಂದ ನಿರೀಕ್ಷಿಸುತ್ತಿದ್ದ ದಿನ ಕೊನೆಗೂ ಬಂದಿತು. ಮೀರಳ ಹೆಸರಿಗೆ ಬಂದಿದ್ದ ಲಕೋಟೆಯೊಂದನ್ನು ಅಂಚೆಯವನು ಅವನ ಕೈಗಿತ್ತು ಹೊರಟುಹೋದ. ಮೀರ ನಡುಗುವ ಕೈಗಳಿಂದ ಕವರನ್ನು ಒಡೆದಳು.

ಪತ್ರದಲ್ಲಿ ಒಂದು ನಿರ್ದಿಷ್ಟ ದಿನವನ್ನು ತಿಳಿಸಿ ಆ ದಿನ ಆಯ್ಕೆ ಸಮಿತಿಯವರೊಡನೆ 'ಇಂಟರ್‌ವ್ಯೂ'ಗೆ ಬರಬೇಕೆಂದು ತಿಳಿಸಿತ್ತು. ತನ್ನ ಬದುಕಿನಾಸೆ ಅವರ ಕೈಲಿದೆ ಎಂದರಿತ ಮೀರಳ ಮನಸ್ಸು ಸಂದೇಹದ ಸುಳಿಗೆ ಸಿಕ್ಕಿ ತಿರುಗಿತು.

ಶಾಮು ಬಂದೊಡನೆ ಮೀರ ಮಾತನಾಡದೇ ಕಾಗದವನ್ನು ಅವನ ಕೈಲಿಟ್ಟಳು. ಶಾಮು ಕಾಗದ ಓದಿಕೊಂಡ. ಮೀರ ಪರೀಕ್ಷಕಳಂತೆ ಅವನ ಮುಖವನ್ನೆ

ನೋಡುತ್ತಿದ್ದಳು. ತುಟಿ ಸೊಟ್ಟ ಮಾಡಿ ಶಾಮು ನಕ್ಕು 'ಸಂತೋಷ' ಎಂದ. ಶಾಮು ವಿನ ಬಾಯಿ ಸೊಟ್ಟಗಾಗುವುದಕ್ಕೆ ಮುಂಚೆಯೇ ಹಣೆಯ ಮೇಲೆ ಮೂಡಿದ ನೋವಿನ ಗೆರೆಯನ್ನು ಮೀರಳ ಚುರುಕು ಕಣ್ಣುಗಳು ಗುರುತಿಸಿದ್ದವು.

"ಯಾವತ್ತು ಹೋಗಲಿ?"

"ನಿನ್ನಿಷ್ಟ."

"ಹೀಗೆಲ್ಲಾ ಹೇಳಿದರೆ ಆಗೋದಿಲ್ಲ. ಸರಿಯಾಗಿ ಹೇಳಿ."

"ಇಂಟರ್‌ವ್ಯೂಗೆ ಹಿಂದಿನ ದಿನ ಹೋಗು."

"ಆಗಲಿ."

ಮೀರ ಎರಡನೆಯ ಬಾರಿ ಮೈಸೂರಿಗೆ ಹೊರಟಾಗ ವೆಂಕಮ್ಮನವರಿಗೆ ಅನುಮಾನವಾಯಿತು. ಒಂದು ತಿಂಗಳಿನೊಳಗೆ ಎರಡು ಸಲ ಮೈಸೂರಿಗೆ ಹೋಗುವ ಕಾರಣವಾದರೂ ಏನು? ತಮ್ಮ ಕುತೂಹಲವನ್ನು ಅದುಮಿಡಲಾರದೇ ವೆಂಕಮ್ಮ ನವರು ಕೇಳಿದರು.

"ಇದೇನು ತಾಯಿ, ಇಷ್ಟು ಬೇಗ ಪುನಃ ಹೊರಟುಬಿಟ್ಟೆ?"

ಮೀರಳಿಗೆ ವಾಸ್ತವಾಂಶ ತಿಳಿಸುವ ಮನಸ್ಸಾಗಲಿಲ್ಲ. ತನಗೆ ಸೀಟು ಸಿಗುವುದೋ ಇಲ್ಲವೋ?

"ಏನೋ ನನಗೆ ಹುಷಾರಿಲ್ಲ. ಸ್ವಲ್ಪ ಔಷಧಿ ತಗೋಬೇಕಿತ್ತು."

"ಏನಾಗಿದೆಯಮ್ಮ?" ವೆಂಕಮ್ಮನವರು ಗಾಬರಿಯಿಂದ ಕೇಳಿದರು.

"ಗಾಬರಿಯಾಗುವಂತಹದೇನೂ ಇಲ್ಲ. ಡಾಕ್ಟರಿಗೆ ತೋರಿಸಿ ಒಳ್ಳೇ ಟಾನಿಕ್ಕು ತಗೋಬೇಕು ಅಷ್ಟೆ."

"ಹಾಗೇ ಮಾಡಮ್ಮ. ಸರಿಯಾದವರಿಗೆ ತೋರಿಸಿಕೊಂಡು ಬಾ. ಮನೆ ಕಡೆ ಏನೂ ಯೋಚನೆ ಮಾಡಬೇಡ. ನಾನು ಎಲ್ಲಾ ನೋಡಿಕೊಳ್ಳುತ್ತೇನೆ. ಎರಡು ದಿನ ಹೆಚ್ಚು ಕಮ್ಮಿಯಾದರೂ ಪರವಾಗಿಲ್ಲ."

ವೆಂಕಮ್ಮನವರ ಮಾತುಗಳು ಮೀರಳನ್ನು ಅಣಕಿಸಿದವು.

ಮೀರ ಮೈಸೂರಿಗೆ ಎರಡನೇ ಬಾರಿ ಬಂದಾಗ ಕಮಲಮ್ಮನವರಿಗೂ ಆಶ್ಚರ್ಯವಾಯಿತು. ಅವರು ಅದನ್ನು ತೋರಗೊಡದೆ,

"ಬಾಮ್ಮ" ಎಂದರು.

ಮಾರನೆಯ ದಿನ ಬೆಳಿಗ್ಗೆ ಮೀರ ಹಿರಿಯರಿಗೆ ಮಾರ್ಕೆಟ್ಟಿಗೆ ಹೋಗಿ ಬರುವು ದಾಗಿ ಹೇಳಿ ಮೆಡಿಕಲ್ ಕಾಲೇಜಿಗೆ ಹೊರಟಳು. ಆಗಲೇ ಅಲ್ಲಿ ಅನೇಕ ಹುಡುಗ, ಹುಡುಗಿಯರು ಬಂದು ಕುಳಿತಿದ್ದರು. ಎಲ್ಲರ ಮುಖದ ಮೇಲೂ ತಳಮಳ,

ಅನುಮಾನ, ಭೀತಿ ತಾಂಡವವಾಡುತ್ತಿದ್ದವು. ಅಲ್ಲಿ ಕುಳಿತಿದ್ದವರಲ್ಲಿ ಮೀರಳಿಗೆ ಯಾರ ಪರಿಚಯವೂ ಇರಲಿಲ್ಲ. ಮೀರ ಮೌನವಾಗಿ ಬೆಂಚೊಂದರ ಮೇಲೆ ಕುಳಿತಳು. ಎಲ್ಲರೂ ಒಬ್ಬರಿಗೊಬ್ಬರು ಸಣ್ಣ ಧ್ವನಿಯಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಮೀರಳ ಪಕ್ಕದಲ್ಲಿ ಸುಮಾರು ಇಪ್ಪತ್ತು ವರ್ಷದ ತರುಣಿಯೊಬ್ಬಳು ಕುಳಿತಿದ್ದಳು. ಆಕೆಯ ಮುಖ ನೋಡಿದ ಕೂಡಲೇ ಅವಳು ಮೈಸೂರಿನವಳಲ್ಲವೆಂದು ಮೀರಳಿಗೆ ಗೊತ್ತಾಯಿತು. ಅವಳು ಎರಡು ಜಡೆ ಹೆಣೆದು ಉಂಗುರದಂತಿದ್ದ ಲೋಲಾಕುಗಳನ್ನು ಹಾಕಿಕೊಂಡಿದ್ದಳು. ಕಸೂತಿ ಕೆಲಸ ಮಾಡಿದ್ದ ಬಿಳಿಯ ವಾಯಿಲ್ ಸೀರೆಯುಟ್ಟು ಕತ್ತುಮುಚ್ಚುವ ಮೊಳಕೈಯನ್ನು ದಾಟಿದ್ದ ಹಸಿರು ಚೋಲಿಯನ್ನು ಹಾಕಿಕೊಂಡಿದ್ದಳು. ಆಕೆ ಮೀರಳನ್ನು ನೋಡಿ ಮುಗುಳ್ನಗೆ ಬೀರಿ ಇಂಗ್ಲೀಷಿನಲ್ಲಿ,

"ನಿಮ್ಮ ಹೆಸರೇನು?" ಎಂದು ಕೇಳಿದಳು.

"ಮೀರ. ತಾವು....?"

"ವಿಜಯ. ಮಿಸ್ ವಿಜಯ ಪರಾಂಜಪೆ."

"ನೀವು ಈ ಊರಿನವರಲ್ಲವೇನೋ?"

"ಅಲ್ಲ, ನಾನು ಮಹಾರಾಷ್ಟ್ರದವಳು. ನಮ್ಮ ಸ್ಥಳ ಪೂನಾ."

"ಮತ್ತೆ ಇಲ್ಲಿ ಕಾಲೇಜಿಗೆ ಸೇರಲು ಕಾರಣ?"

"ನಮ್ಮ ತಂದೆಗೆ ಪೂನಾದಲ್ಲಿ ಕೆಲಸವಿತ್ತು. ಅಲ್ಲಿ ರಿಟೈರ್ ಆದ ನಂತರ ಇಲ್ಲಿಯ ಮಿಲ್ಲಿನಲ್ಲಿ ಮ್ಯಾನೇಜರರ ಕೆಲಸ ಸಿಕ್ಕಿತು. ಇಲ್ಲಿಯೇ ನಾವು ಐದಾರು ವರ್ಷಗಳು ಇರಬೇಕೆಂದು ತೋರುತ್ತದೆ. ಪೂನಾದಲ್ಲಿ ನಾನು ಸೇರಿದರೆ ಹಾಸ್ಟೆಲಿನಲ್ಲಿ ಇರಬೇಕು. ಅದಕ್ಕೋಸ್ಕರ ಇಲ್ಲೇ ಸೇರೋಣವೆಂದು ನಿರ್ಧರಿಸಿದ್ದೇನೆ."

"ನೀವು ಇಂಟರ್ ಮುಗಿಸಿ ಬಂದಿರುವಿರಾ?"

"ಹೌದು. ನೀವು?"

"ನಾನೂ ಅಷ್ಟೆ."

ಅಷ್ಟರಲ್ಲಿ ಇಂಟರ್‌ವ್ಯೂ ಮುಗಿಸಿಕೊಂಡು ಹುಡುಗನೊಬ್ಬ ಹೊರಗೆ ಬಂದ. ಅವನು ಬಂದೊಡನೆ ಇತರ ಹುಡುಗರು ಅವನನ್ನು ಮುತ್ತಿಕೊಂಡರು.

"ಏನು ಕೇಳಿದರೋ, ಏನಾಯಿತೋ, ಯಾರ್‍ಯಾರಿದ್ದರು?"

ಆ ಹುಡುಗ ಸಪ್ಪೆ ಧ್ವನಿಯಿಂದ, "ಕೆಲಸಕ್ಕೆ ಬಾರದ ಪ್ರಶ್ನೆಗಳನ್ನು ಕೇಳ್ತಾರೆ ಕಣೋ. ಇಂಟರ್‌ವ್ಯೂ ಒಂದು ನಾಟಕ ಅಷ್ಟೆ. ಯಾರ್‍ಯಾರಿಗೆ ಸೀಟು ಕೊಡಬೇಕೂಂತ ಮೊದಲೇ ನಿರ್ಧಾರ ಮಾಡಿಕೊಂಡು ಇಂಟರ್‌ವ್ಯೂಗೆ ಕರೆಯುತ್ತಾರೆ. ಸರ್ಕಾರಿ ಕೆಲಸದಲ್ಲಿರುವವರ ಮಕ್ಕಳಿಗೆ, ಅಳಿಯಂದಿರಿಗೆ ಸೀಟು ಮುಡಿಪು. ನಮ್ಮಂತಹ

ಪರದೇಶಿಗಳಿಗೆಲ್ಲಾ ಬುದ್ಧಿಯಿದ್ದರೂ ವ್ಯರ್ಥ. ನಾನು ದೊಡ್ಡ ಅಧಿಕಾರಿಯ ಮನೆಯವನಲ್ಲ. ಜೊತೆಗೆ ಸರ್ಕಾರದ ದೃಷ್ಟಿಯಲ್ಲಿ ಉತ್ತಮ ಜಾತಿಗೆ ಸೇರಿದವನು. ಆದುದರಿಂದ ನಮ್ಮನ್ನು ತುಳಿಯಬೇಕಾಗಿರುವುದು ತನ್ನ ಕರ್ತವ್ಯಾಂತ ಸರ್ಕಾರ ಭಾವಿಸಿದೆ...."

"ಹಾಗಾದರೆ ಇವೆಲ್ಲಾ ನಿಜವೇನೋ?"

"ಎಲ್ಲ ಅಕ್ಷರಶಃ ನಿಜ. ತಾಯಿ ಕಿರಿಮಗುವನ್ನು ಹೆಚ್ಚು ಗಮನವಿಟ್ಟು ಜೋಪಾನ ಮಾಡಬೇಕೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಹಿರಿಯ ಮಗುವನ್ನು ಕೊಂದು ಅದರ ತುತ್ತನ್ನೂ ಅಪಹರಿಸಿ ಕಿರಿಯ ಮಗುವಿಗೆ ಕೊಡುವುದು ಯಾವ ನ್ಯಾಯ? ಹಿಂದಿರುವವರು ಮುಂದೆ ಬರಬೇಕು ನಿಜ. ಆದರೆ ಮುಂದಿರುವವರನ್ನು ತುಳಿದು ಅವರ ಸಮಾಧಿಯ ಮೇಲೆ ಪ್ರಗತಿಯ ಕಟ್ಟಡ ಕಟ್ಟಲು ಹೊರಟಿದೆ ಸ್ವಾತಂತ್ರ್ಯ ಸಾಧಿಸಿರುವ ಸರ್ಕಾರ."

ಆ ಹುಡುಗ ಆವೇಶದಿಂದ ಮಾತನಾಡಿದ. ಅವನ ಮುಖ ಕೋಪದಿಂದ ಕೆಂಪಾಗಿತ್ತು. ಉಳಿದವರು ಬೆರಗಾಗಿ ಅವನ ಮುಖವನ್ನೇ ನೋಡುತ್ತಿದ್ದರು. ವಿಜಯಳಿಗೆ ಅವನ ಮಾತುಗಳು ಅರ್ಥವಾಗದಿದ್ದರೂ ಅವನು ಆವೇಶದಿಂದ ಮಾತನಾಡುತ್ತಿರುವನೆಂಬುದು ತಿಳಿಯಿತು. ಅವಳು ಮೀರಳ ಕಡೆ ತಿರುಗಿ,

"ಏನು ಹೇಳ್ತಿದಾನೆ?" ಎಂದಳು.

"ಇಂಟರ್‌ವ್ಯೂ ಎಲ್ಲಾ ಬರೀ ಬೂಟಾಟ ಅಂತ ಹೇಳ್ತಿದ್ದಾನೆ."

ಮೀರಳಿಗೆ ಒಳಗಿನಿಂದ ಕರೆ ಬಂದಿತು. ಮೀರ ಎದ್ದು ನಿಂತಳು. ವಿಜಯ ನಕ್ಕು "ಗುಡ್ ಲಕ್" ಎಂದಳು ರಾಗವಾಗಿ.

ಮೀರ ಪ್ರವೇಶಿಸಿದ ಕೊಠಡಿಯಲ್ಲಿ ಹನ್ನೊಂದು ಜನ ಕುಳಿತಿದ್ದರು. ಅವರಲ್ಲಿ ಮೀರಳಿಗೆ ಯಾರ ಪರಿಚಯವೂ ಇರಲಿಲ್ಲ. ಮೀರ ಒಳಗೆ ಹೋದೊಡನೆ ಕೈಮುಗಿದಳು. ಅವರಲ್ಲಿ ಒಬ್ಬರ ಕೈಯಲ್ಲಿ ಮೀರ ಹಾಕಿದ ಅರ್ಜಿ ಇತ್ತು.

ಅವರಲ್ಲೊಬ್ಬರು ಕೇಳಿದರು, "ನಿಮ್ಮ ಹೆಸರೇನಮ್ಮ?"

"ಮೀರ."

"ಇಂಟರ್ ಆಗಿ ಎಷ್ಟು ವರ್ಷ ಆಯಿತು?"

"ಆರು ವರ್ಷ ಆಯಿತು."

"ಆರು ವರ್ಷಕ್ಕೆ ಹಿಂದೇನೇ ಯಾಕೆ ಸೇರಲಿಲ್ಲ?"

"ಆಗ ಸೇರೋಕ್ಕಾಗಲಿಲ್ಲ."

"ಯಾಕೆ?"

"ಅಂತಹ ಸಂದರ್ಭ ಬಂದಿತ್ತು."

"ಏನೂಂತ ಕೇಳಬಹುದೇ?"

ಅವರ ಪ್ರಶ್ನೆಗಳು ಅನಾವಶ್ಯಕ ಎಂದು ಮೀರಳಿಗೆ ತೋರಿತು.

"ಮದುವೆ ಆದುದರಿಂದ ಮೆಡಿಕಲ್‌ಗೆ ಸೇರೋಕಾಗಲಿಲ್ಲ."

"ಈಗ?"

"ಈಗ ನಮ್ಮ ಯಜಮಾನರು ನಾನು ಓದಲು ಒಪ್ಪಿದ್ದಾರೆ."

"ಈಗ ನೀವು ಓದಲು ಯಾಕೆ ನಿರ್ಧರಿಸಿರುವಿರಿ?"

"ಮೆಡಿಕಲ್ ಓದಲು ನನಗೆ ಮೊದಲಿನಿಂದಲೂ ಆಸೆಯಿತ್ತು. ನಮ್ಮಣ್ಣ ಗೋಪಾಲ ಇದೇ ಕಾಲೇಜಿನಲ್ಲಿ ಓದಿದವನು."

"ಮೆಡಿಕಲ್ ಬದಲು ಬೇರೇನಾದರೂ ಓದಬಹುದಲ್ಲಾ?"

"ನನಗೆ ವೈದ್ಯಳಾಗಬೇಕೆಂಬ ಆಸೆಯಿದೆ."

"ಮುಂದೆ?"

"ಸರ್ಕಾರಿ ಕೆಲಸದ ಹಂಬಲವಿಲ್ಲ. ಹಳ್ಳಿಗೆ ಹಿಂತಿರುಗಿ ನಮ್ಮ ರೈತರ ಸೇವೆ ಮಾಡುವ ಹಂಬಲವಿದೆ."

ಅವರು ಮೀರಳ ಮಾರ್ಕ್ಸ್ ಕಾರ್ಡನ್ನು ಎರಡು ನಿಮಿಷ ನೋಡಿ,

"ಸರಿ, ಹೋಗಬಹುದು" ಎಂದರು.

ಮೀರ ಕೈಮುಗಿದು ಹೊರಗೆ ಬಂದಳು. ಮೀರ ಹೊರಗೆ ಬಂದೊಡನೆ ವಿಜಯ ಪರಾಂಜಪೆ ಪಿಸುಮಾತಿನಲ್ಲಿ, "ಅನ್ಯಾಯವಾಗಿ ಹುಡುಗರ ಸೀಟುಗಳಿಗೆ ಕಲ್ಲು ಹಾಕುವುದಕ್ಕೆ ಯಾಕೆ ಬರುತ್ತೀರೀಂತ ಕೇಳಿದರೇನು?" ಎಂದಳು.

"ನನಗೆ ಹಾಗೆ ಹೇಳಲಿಲ್ಲ. ನಾನಿನ್ನು ಹೋಗ್ತೀನಿ."

"ಒಳ್ಳೆಯದು. ಇಬ್ಬರ ಅದೃಷ್ಟವೂ ಚೆನ್ನಾಗಿದ್ದರೆ ಒಬ್ಬರನ್ನೊಬ್ಬರು ನೋಡಬಹುದು."

ಆ ದಿನವೆಲ್ಲ ವಿಜಯಳ ಮಗುವಿನಂತಹ ಮುಖ ಮೀರಳ ಕಣ್ಣಿಗೆ ಕಟ್ಟಿದಂತಿತ್ತು.

ಮೀರ ಮೈಸೂರಿಗೆ ಹೋದ ಸಂಜೆ ಶಾಮು ಜೋಯಿಸರ ಮನೆಗೆ ಹೋಗಿ ಬೇಜಾರು ಪರಿಹಾರ ಮಾಡಿಕೊಳ್ಳುವ ಸಲುವಾಗಿ ಹರಟೆ ಹೊಡೆಯುತ್ತ ಕುಳಿತಿದ್ದ. ಜೋಯಿಸರು ಮನೆಯಲ್ಲಿಲ್ಲದಿದ್ದರೂ ಅವರ ಹೆಂಡತಿ, ವೆಂಕು ಮನೆಯಲ್ಲಿದ್ದರು. ಮಾತಿಗೆ ಮಾತು ಬಂದು ಶಾಮು,

"ಮೀರ, ಇಲ್ಲಿ ಇನ್ನೆಷ್ಟು ದಿನವಿರುತ್ತಾಳೋ" ಎಂದುಬಿಟ್ಟ. ಆ ಮೇಲೆ

ತನ್ನ ತಪ್ಪಿನ ಅರಿವಾಗಿ ನಾಲಿಗೆ ಕಚ್ಚಿಕೊಂಡ.

ಶಾಮುವಿನ ಮಾತು ಕೇಳಿ ಜೋಯಿಸರ ಹೆಂಡತಿಗೆ ಆಶ್ಚರ್ಯವಾಯಿತು. ಅವರು ಬೆರಗಾಗಿ,

"ಹಾಗೆಂದರೇನೋ ಶಾಮಣ್ಣಾ?" ಎಂದರು.

"ಇನ್ನೇನಿಲ್ಲ, ಮೀರಳಿಗೆ ಹಳ್ಳಿ ಬೇಜಾರಾಗಿದೆ.... ಸ್ವಲ್ಪ ದಿನ ಮೈಸೂರಿನಲ್ಲಿದ್ದು ಬರ್ತಾಳೆ" ಶಾಮು ಹಿಡಿದು ಮಾತನಾಡಿದ.

"ನೀನೂ ಹೋಗ್ತೀಯೇನು?"

"ಇಲ್ಲ."

"ಮತ್ತೆ ಮೀರ ಒಬ್ಬಳನ್ನೇ ಕಳಿಸಿಬಿಡ್ತೀಯೇನು? ಅವಳಿಲ್ಲದಿದ್ದರೆ ನಿನಗೆ ಊಟ ತಿಂಡಿ ಕೂಡ ಬೇಜಾರೂಂತ ವೆಂಕಮ್ಮನವರು...."

"ಛೇ ಹಾಗೇನಿಲ್ಲ. ಹಳೇ ನೆನಪನ್ನೆಲ್ಲಾ ಮರೆಯಲೀಂತ.... ಇಲ್ಲೇ ಇದ್ರೆ ತುಂಬಾ ಸಂಕಟಪಡುತ್ತಾಳೆ. ನೀವೇ ನೋಡ್ತಿದೀರಲ್ಲಾ ಹೇಗಿದ್ದವಳು ಹೇಗಾಗಿದಾಳೆ?"

"ನೀನು ತಾನೇ ಇನ್ನೇನು? ನಿನ್ನ ಬಣ್ಣ, ಮೈಕಟ್ಟು ಎಲ್ಲಿ ಹೋಯಿತು ದೇವರಿಗೇ ಗೊತ್ತು. ಶಾಮಣ್ಣ, ನಾನು ನಿನಗೆ ತಾಯಿ ಇದ್ದ ಹಾಗೆ ಇದೀನಿ. ಒಂದು ಮಾತು ಹೇಳಿದರೆ ತಪ್ಪಾಗೋದಿಲ್ಲ. ಮೀರ ಹೊರಟುಹೋದರೆ ನೀನು ಇನ್ನೂ ಮಂಕಾಗಿಬಿಡ್ತೀಯ. ಹೋಗುವ ಹಾಗಿದ್ದರೆ ನೀನೂ ಅವಳ ಜೊತೆಗೆ ಹೋಗು."

"ನಾನು ಹೋಗುವುದು ಸಾಧ್ಯವೇ ಇಲ್ಲ."

"ಯಾಕೆ?"

"ಹೊಲ, ಗದ್ದೆ, ಎತ್ತುಗಳನ್ನು ಬಿಟ್ಟು ನಾನು ಹೋಗಲಾರೆ. ಜಾನಿ ಹೋದ ಹೊಸತರಲ್ಲಿ ನನಗೆ ಯಾವುದರಲ್ಲಿಯೂ ಆಸಕ್ತಿಯಿರಲಿಲ್ಲ. ಅಷ್ಟರಲ್ಲೇ ಎಲ್ಲರೂ ತಮ್ಮ ಕೆಲಸ ಮರೆತುಬಿಟ್ಟಿದ್ದರು."

"ಮೀರ ಹೊರಟುಹೋದರೆ ನೀನು ತುಂಬಾ ಪೆಚ್ಚಾಗ್ತೀಯಲ್ಲ?"

"ಮೀರ ಇಲ್ಲಿರುವುದೂ ಸಾಧ್ಯವಿಲ್ಲ. ನಾನು ಹೋಗುವುದೂ ಸಾಧ್ಯವಿಲ್ಲ. ಮೀರ ಇಲ್ಲೇ ಇದ್ದರೆ ಕ್ರಮೇಣ ಹುಚ್ಚಾಸ್ಪತ್ರೆಗೆ ಸೇರಿಸಬೇಕಾಗುತ್ತದೆ. ಅವಳು ಮೈಸೂರಿನಲ್ಲಿ ಮುಂದೆ ಓದಿ...."

ಜೋಯಿಸರ ಹೆಂಡತಿ ಚಕಿತರಾದರು.

"ಏನು! ಮೀರ ಓದುತ್ತಾಳೆಯೇ? ಅದೂ ಈ ವಯಸ್ಸಿನಲ್ಲಿ!"

"ಹೂಂ. ಮೀರ ಮೆಡಿಕಲ್ ಕಾಲೇಜಿನಲ್ಲಿ ಓದಿ ಡಾಕ್ಟರಾಗುತ್ತಾಳೆ. ವಿದ್ಯೆ

ಕಲಿಯಲು ಯಾವ ವಯಸ್ಸಾದರೇನು? ನನಗೂ ಅವಳನ್ನು ಕಳಿಸೋದಕ್ಕೆ ಇಷ್ಟವಿಲ್ಲ. ಆದರೆ ಅವಳನ್ನು ಹುಚ್ಚಾಸ್ಪತ್ರೆಯಲ್ಲಿ ನೋಡುವುದಕ್ಕಿಂತಲೂ ಮೆಡಿಕಲ್ ಕಾಲೇಜಿನಲ್ಲಿ ನೋಡುವುದು ಮೇಲಲ್ಲವೇ?"

ಶಾಮು ಮಾತನಾಡುತ್ತಲೇ ಎದ್ದು ನಿಂತು 'ಬರ್ತೀನಿ' ಎಂದು ಸಹ ಹೇಳದೇ ಹೊರಟುಹೋದ.

ಜೋಯಿಸರ ಹೆಂಡತಿಗೆ ಮೀರಳ ನಡವಳಿಕೆ ಒಂದು ಒಗಟೆಯಾಯಿತು. ಅಪಾರ ಸಂಪತ್ತನ್ನೂ, ಅರಸು ಮಗನಂತಹ ಗಂಡನನ್ನೂ ಬಿಟ್ಟು ಓದಲು ಹೊರ ಟಿರುವ ಮೀರ ಅವರಿಗೆ ಆಗಲೇ ಹುಚ್ಚಿಯಂತೆ ತೋರಿದಳು. ಆ ಸುದ್ದಿ ಕೇಳಿದಾಗಿ ನಿಂದಲೂ ಅವರ ಮನಸ್ಸಿನ ಸ್ವಾಧೀನ ತಪ್ಪಿಹೋಯಿತು. ದಿನಚರಿಯ ಕೆಲಸ ಗಳೊಂದಿಗೆ ದೇವರಿಗೆ ದೀಪ ಹಚ್ಚುವುದೂ ಸಹ ಮರೆತುಹೋಯಿತು. ಅವರು ಚಾಪೆಯ ಮೇಲೆ ಕುಳಿತು ಗಲ್ಲಕ್ಕೆ ಕೈಕೊಟ್ಟು,

'ಇದೇನು ಕೇಡಮ್ಮ, ಗಂಡ ಹೆಂಡತಿಯನ್ನು ಬಿಟ್ಟು ಹೋಗುವುದನ್ನು ನಾನು ಕೇಳಿದ್ದೆ. ಆದರೆ ಹೆಂಡತಿ ಗಂಡನನ್ನು ಬಿಟ್ಟು ಹೋಗುವುದನ್ನು ನಾನು ಎಲ್ಲಿಯೂ ಕೇಳಿರಲಿಲ್ಲ' ಎಂದುಕೊಂಡರು.

ಮನೆಯಲ್ಲಿ ಕುಳಿತಿರುವುದು ಸಾಧ್ಯವಾಗದೆ, "ವೆಂಕೂ, ನೀನೇ ಹಾಲು ಕರೆದು ಒಲೆ ಹೊತ್ತಿಸಿರು, ನಾನು ದೇವಸ್ಥಾನಕ್ಕೆ ಹೋಗಿ ಬರುತ್ತೇನೆ" ಎಂದು ಕಾಯಿ, ಎಲೆ-ಅಡಿಕೆಯನ್ನು ತೆಗೆದುಕೊಂಡು ದೇವಸ್ಥಾನಕ್ಕೆ ಹೊರಟರು.

ದೇವಸ್ಥಾನದಿಂದ ಅವರ ಮನಸ್ಸಿನ ತಳಮಳವನ್ನು ಕಡಿಮೆ ಮಾಡಿಕೊಳ್ಳು ವುದಕ್ಕಾಗಿ ಪಂಡಿತರ ಮನೆಗೆ ಹೋದರು. ಪಂಡಿತರ ಹೆಂಡತಿ ಪುಟ್ಟಮ್ಮ "ಬನ್ನಿ ಸಾಕಮ್ಮ" ಎಂದರು.

"ಕೆರೆ ಹತ್ತಿರ ಹೋಗೋಣ ಬನ್ನಿ" ಎಂದರು ಸಾಕಮ್ಮ.

ಇಬ್ಬರೂ ಕೆರೆಯಂಚಿನ ಬಳಿ ನಡೆದರು. ಸಾಕಮ್ಮನವರು ಸ್ವಭಾವತಃ ಮಾತುಗಾತಿ. ಆದರೆ ಶಾಮುವಿನಿಂದ ಮೀರಳ ಸುದ್ದಿ ತಿಳಿದಾಗಿನಿಂದ ಅವರ ಬಾಯಿ ಕಟ್ಟಿಹೋಗಿತ್ತು. ಸಾಕಮ್ಮನವರ ಮೌನವನ್ನು ಗಮನಿಸಿದ ಪುಟ್ಟಮ್ಮನವರು,

"ಇದೇನು ಸಾಕಮ್ಮ ಬಾಯಿಬಿಟ್ಟರೆ ಮುತ್ತು ಸುರಿಯುತ್ತದೆ ಎನ್ನುವ ಹಾಗೆ ಕೂತಿದೀರಲ್ಲಾ?"

ಸಾಕಮ್ಮ ಬಾಯಿಬಿಟ್ಟರು. "ಈ ಹುಡುಗಿ ಕರ್ಮ ನೋಡಿ ನನಗೆ ವ್ಯಥೆ ಯಾಗುತ್ತಿದೆ."

"ವೆಂಕೂ ವಿಚಾರ ಹೇಳ್ತಿದೀರೇನು?"

"ಮೀರಳ ವಿಚಾರ ಹೇಳ್ತಿದೀನಿ. ವೆಂಕು ವಿಷಯ ಅಲ್ಲ."

"ಯಾಕೆ ಅವಳಿಗೇನಾಗಿದೆ? ರಾಣಿ ಇದ್ದ ಹಾಗೆ ಇದ್ದಾಳೆ. ಅವಳಿಗೆಂತಹ ಕರ್ಮ ಇರಬಹುದು? ಮಗಳು ಹೋದ ದುಃಖ ಇರಬಹುದು. ಆದರೆ ಆ ದುಃಖ ಎಷ್ಟು ದಿನವಿರುತ್ತದೆ ಹೇಳಿ. ಗೋಡೆ ಇದ್ದರೆ ಸಾವಿರ ಚಿತ್ತಾರಾಂತ ಗಾದೆ ಕೇಳಿಲ್ಲವೇ? ಕಂಕುಳಿಗೆ ಇನ್ನೊಂದು ಮಗು ಬರುವವರೆಗೆ ದುಃಖ ಪಡ್ತಾಳೆ. ಆಮೇಲೆ ಸರಿಹೋಗ್ತಾಳೆ."

"ಜಾನಿಗೆ ಐದು ವರ್ಷವಾಗಿತ್ತು. ಅದೇಕೋ ಜಾನಿಯ ಹಿಂದೆ ಮಕ್ಕಳಾಗಲೇ ಇಲ್ಲ. ಹುಳಿತು ಹೋಗುವಷ್ಟು ಆಸ್ತಿ ಇದೆ. ವರ್ಷಕ್ಕೊಂದು ಮಗುವಾಗಬಾರದೇ?"

"ಈಗಿನ ಕಾಲದ ಹುಡುಗಿಯರು ಏನೇನು ಮಾಡ್ತಾರೋ ದೇವರಿಗೇ ಗೊತ್ತು."

"ನೋಡಿ, ಈಗ ಮೀರಳಿಗೆ ಹಳ್ಳಿ ಬೇಜಾರಾಗಿದೆಯಂತೆ. ಮೈಸೂರಿಗೆ ಓದೋಕೆ ಹೋಗ್ತಾಳಂತೆ." ಎಂದರು ಸಾಕಮ್ಮ.

ಪುಟ್ಟಮ್ಮ ಬೆಚ್ಚಿ "ಏನು?" ಎಂದರು.

"ಮೀರ ಗಂಡನ್ನ ಬಿಟ್ಟು ಮೈಸೂರಿಗೆ ಹೋಗಿ ಓದುತ್ತಾಳಂತೆ."

"ಯಾಕೆ ಅವಳಿಗೇನು ಕಡಿಮೆಯಾಗಿದೆ? ಓದಿ ಕೆಲಸ ಮಾಡಿ ದುಡ್ಡು ಸಂಪಾದಿಸಬೇಕಾಗಿದೆಯೇನು? ದೇವರು ಕೈತುಂಬಾ ಕೊಟ್ಟಿದ್ದಾನೆ. ಅದನ್ನು ಅನುಭವಿಸಿಕೊಂಡಿದ್ದರೆ ಸಾಲದೆ?"

"ನಿಜ ಪುಟ್ಟಮ್ಮ, ಈ ಮಾತು ಕೇಳಿದಾಗಿನಿಂದ ಬೇಸರವಾಗಿ ಮೀರಳಿಗೆ ಒಳ್ಳೇ ಬುದ್ಧಿ ಕೊಡಲೀಂತ ದೇವರನ್ನು ಪ್ರಾರ್ಥಿಸಲು ದೇವಸ್ಥಾನಕ್ಕೆ ಬಂದೆ."

"ಅವಳನ್ನು ಕರೆಸಿ ಎರಡು ಬುದ್ಧಿಮಾತು ಯಾಕೆ ಹೇಳಬಾರದು?" ಪುಟ್ಟಮ್ಮನವರು ಕಳವಳದಿಂದ ನುಡಿದರು.

"ಹೂ, ಶಾಮಣ್ಣ ತಾನೆ ಯಾಕೆ ಇಷ್ಟಕ್ಕೆ ಅವಕಾಶ ಕೊಟ್ಟ? ಕಡ್ಡಿ ಎರಡು ತುಂಡು ಮಾಡಿದ ಹಾಗೆ 'ಖಂಡಿತ ಆಗೋದಿಲ್ಲ' ಎನ್ನಬಾರದೆ?"

"ನಾನು ಶಾಮಣ್ಣನಿಗೆ ಈ ಮಾತು ಹೇಳಿದೆ. ಆದರೆ ಅವನು ನನ್ನ ಮಾತನ್ನು ಒಪ್ಪಿಕೊಳ್ಳಲಿಲ್ಲ."

"ಇನ್ನೊಂದೆರಡು ಮಕ್ಕಳಾದರೆ ಜಾನೀನ ಮರೆಯುತ್ತಾರೇನೋ?"

"ಯಾರಿಗೆ ಗೊತ್ತಮ್ಮ."

"ಮೀರನ್ನ ಒಂದು ದಿನ ನಮ್ಮ ಮನೇಗೆ ಊಟಕ್ಕೆ ಕರೆಯುತ್ತೇನೆ. ಆಗ ಎರಡು ಬುದ್ಧಿಮಾತು ಹೇಳೋಣ."

"ಅವಳು 'ನಿಮಗೇನು? ನನ್ನಿಷ್ಟ' ಎಂದರೆ?" ಸಾಕಮ್ಮನವರು ತಮ್ಮ ಸಂಶಯವನ್ನು ವ್ಯಕ್ತಪಡಿಸಿದರು.

"ಅವಳು ಹಾಗೆ ಮಾಡುವುದಿಲ್ಲ. ದೊಡ್ಡವರಲ್ಲಿ ಅವಳಿಗೆ ಗೌರವವಿದೆ" ಎಂದು ಪುಟ್ಟಮ್ಮನವರು ಅಭಿಮಾನದಿಂದ ನುಡಿದರು.

ಮೀರ ಹಳ್ಳಿಗೆ ಬಂದ ಮಾರನೆಯ ದಿನವೇ ಸಾಕಮ್ಮನವರ ಮಗಳು ವೆಂಕೂ ಬಂದು ಕರೆದಳು.

"ಮೀರಕ್ಕ ಇವತ್ತು ನಮ್ಮ ಮನೇಗೆ ಊಟಕ್ಕೆ ಬರಬೇಕಂತೆ. ಅಮ್ಮ ಹೇಳಿಕಳಿಸಿದಾಳೆ."

ಮೀರ ಒಂದು ನಿಮಿಷ ಅನುಮಾನಿಸಿ 'ಇವರಿನ್ನೂ ಮನೆಗೆ ಬಂದಿಲ್ಲವಲ್ಲಾ' ಎಂದು ರಾಗ ತೆಗೆದಳು.

"ಶಾಮಣ್ಣ ಮನೆಗೆ ಬರೋದು ಎಷ್ಟು ಹೊತ್ತಾಗುತ್ತೋ ಏನೋ. ನೀವು ಬನ್ನಿ. ಬಿಸಿಯಾಗಿದ್ದಾಗಲೇ ಶಾಮಿಗೆ ಚೆನ್ನ."

ಅಲ್ಲಿಯೇ ಹೂಬತ್ತಿ ಮಾಡುತ್ತಾ ಕುಳಿತಿದ್ದ ವೆಂಕಮ್ಮನವರು, "ಹೋಗು ಪಾಪ. ಅಷ್ಟು ವಿಶ್ವಾಸದಿಂದ ಹೇಳಿಕಳಿಸಿದಾರೆ. ಶಾಮಣ್ಣ ಬಂದರೆ ನಾನು ಹೇಳ್ತೀನಿ" ಎಂದರು.

ಇನ್ನೂ ಯಾವುದನ್ನೂ ನಿರ್ಧರಿಸದಿದ್ದ ಮನಸ್ಸು ವೆಂಕಮ್ಮನವರ ಮಾತನ್ನು ಕೇಳಿ 'ಆಗಲಿ' ಎಂದಿತು.

ಮೀರ ಜೋಯಿಸರ ಮನೆಗೆ ಹೋಗುವ ಹೊತ್ತಿಗೆ ಪಂಡಿತರ ಹೆಂಡತಿ ಪುಟ್ಟಮ್ಮನವರು ಬಂದು ಕುಳಿತಿದ್ದರು. ಸಾಕಮ್ಮನವರು ಮೀರಳನ್ನು ನೋಡಿ, "ಬಾಮ್ಮ, ಮೈಸೂರಿನಿಂದ ಯಾವಾಗ ಬಂದೆ?" ಎಂದರು.

"ನಿನ್ನೆ ಬಂದೆ."

"ಎಲ್ಲಾ ಅಲ್ಲಿ ಆರೋಗ್ಯವೇ?"

"ಹೂಂ."

"ಒಳಗೇ ಹೋಗೋಣ ಬನ್ನಿ" ಎನ್ನುತ್ತಾ ಸಾಕಮ್ಮನವರು ಅಡಿಗೆ ಮನೆಗೆ ಹೋದರು.

ನಡುಮನೆಯಲ್ಲಿ ಬಾಳೆಎಲೆ ಹಾಕಿದ್ದರು. ಸಾಕಮ್ಮನವರು ಬಡಿಸತೊಡಗಿದರು. ಮಾತಿನ ನಡುವೆ ಊಟ ಸಾಗಿತ್ತು. ಊಟವಾದ ನಂತರ ಸಾಕಮ್ಮನವರು ಒಂದು ಡಬ್ಬಿಯಲ್ಲಿ ಸ್ವಲ್ಪ ಶಾಮಿಗೆ, ಕಾಯಿಹಾಲು ಹಾಕಿ ವೆಂಕುವನ್ನು ಕರೆದು,

"ಅರ್ಚಕರ ಮನೆಗೆ ಕೊಟ್ಟು ಬಾ" ಎಂದರು.

ವೆಂಕು ಅರ್ಚಕರ ಮನೆಗೆ ಹೋದರೆ ತನ್ನ ಓರಗೆಯವಳಾದ ಶಾರದೆಯೊಡನೆ ಮಾತನಾಡುತ್ತಾ ಕುಳಿತುಬಿಡುವಳೆಂದು ಅವರಿಗೆ ತಿಳಿದಿತ್ತು. ಅವಳು ಡಬ್ಬಿ ಹಿಡಿದು ಹೊರಟಾಗ ಎಂದಿನಂತೆ ಅವರು,

"ಬೇಗ ಬಂದುಬಿಡು" ಎನ್ನಲಿಲ್ಲ.

ಸಾಕಮ್ಮನವರ ಮಗ ವೆಂಕಟೇಶ ರಸ್ತೆಯಲ್ಲಿ ಆಡಿಕೊಳ್ಳುತ್ತಿದ್ದ.

ಜೋಯಿಸರು ರೂಮಿನಲ್ಲಿ ತೋಳಿಗೆ ತಲೆಕೊಟ್ಟು ಮಲಗಿದ್ದರು. ಜಗುಲಿಯ ಮೇಲೆ ಸಾಕಮ್ಮನವರು ಚಾಪೆ ತಂದು ಹಾಕಿ ಎಲೆ ಅಡಿಕೆಯ ತಟ್ಟೆಯನ್ನಿರಿಸಿ, "ತಗೊಳ್ಳಿ ಪುಟ್ಟಮ್ಮನವರೇ, ತಗೋಮ್ಮ ಮೀರ" ಎಂದರು.

"ನನಗೆ ಬೇಡ" ಮೀರ ನಯವಾಗಿ ಹೇಳಿದಳು.

ಪುಟ್ಟಮ್ಮನವರು ಎಲೆಗೆ ಸುಣ್ಣ ಹಚ್ಚುತ್ತಾ ಮಾತಿಗಾರಂಭ ಮಾಡಿದರು.

"ಮೀರ ನಾನೊಂದು ವಿಷಯಾನ ಕೇಳಬೇಕೆಂದಿದ್ದೇನೆ. ನೀನು ತಪ್ಪು ತಿಳಿದುಕೊಳ್ಳೋದಿಲ್ಲಾಂದರೆ ಕೇಳುತ್ತೇನೆ."

ಚಾಪೆಯ ಕಡ್ಡಿಯನ್ನು ಉಗುರಿನಿಂದ ಕೀಳುತ್ತಿದ್ದ ಮೀರ ಪುಟ್ಟಮ್ಮನವರ ಮಾತು ಕೇಳಿ ತಲೆ ಎತ್ತಿದಳು. ಅವರೇನು ಕೇಳಬೇಕೆಂದಿರುವರೆಂಬುದು ಮೊದಲು ಅವಳಿಗೆ ತಿಳಿಯಲಿಲ್ಲ. ಅರೆಕ್ಷಣದ ನಂತರ ತಾನು ಮೈಸೂರಿಗೆ ಹೋದುದರ ಬಗ್ಗೆ ಕೇಳಬಹುದೆಂದು ಅನುಮಾನವಾಯಿತು. ಕ್ಷೀಣಸ್ವರದಿಂದ, "ಕೇಳಿ, ನಾನೇನು ತಿಳಿದುಕೊಳ್ಳೋಲ್ಲ" ಎಂದಳು.

"ನೀನು ಮೈಸೂರಿಗೆ ಓದೋಕೆ ಹೋಗ್ತೀಯಂತೆ, ನಿಜವೇ?"

"........"

"ನಿಜವೇ ಮೀರಾ?"

"ನಿಜ."

"ಯಾಕೆ?"

"ನನ್ನ ಮನಸ್ಸನ್ನು ಹಗುರಗೊಳಿಸಲು ನನಗುಳಿದಿರುವ ದಾರಿ ಅದೊಂದೇ."

"ಶಾಮಣ್ಣ ನಿನಗೇನು ಕಡಿಮೆ ಮಾಡಿದಾನೆ? ನಿನಗೆ ಹಣಕ್ಕೆ ಕೊರತೆಯೇ? ಶಾಮಣ್ಣ ಹಿಂಸೆ ಮಾಡುತ್ತಾನೆಯೇ? ಅವನನ್ನು ಬಿಟ್ಟು ಹೋಗುವುದು ನ್ಯಾಯವೇನಮ್ಮ? ಹೆಂಗಸಿನ ಜಾಗ ಗಂಡನ ಮನೆಯಲ್ಲಿ ಮೀರ. ನೀನೇಕೆ ಓದಬೇಕು?"

ಮೀರ ಅಸಹಾಯಕಳಂತೆ ನುಡಿದಳು.

"ನಾನು ವೀಣಳನ್ನು ಮರೆಯಲಾರೆ. ಅವಳನ್ನು ಮರೆಯಬೇಕಾದರೆ ನಾನು ಓದಬೇಕು. ಕೆಲಸ ಮಾಡಲೇಬೇಕು. ನಿಮಗೆ ಗೊತ್ತಿಲ್ಲ-ನನ್ನ ಕರುಳು, ಹೃದಯ

ಹೇಗೆ ಸುಟ್ಟುಹೋಗುತ್ತಿದೇಂತ. ಚಿಂತಾಗ್ನಿಯಲ್ಲಿ ನಾನು ಬೇಯುತ್ತಿದ್ದೇನೆ. ನನಗೆ ಹಣವಿರಬಹುದು. ಆದರೂ ನಾನು ಸುಖಿಯಲ್ಲ. ನೀವು ಹೇಳಿದಂತೆ ಅವರು ಒಳ್ಳೆಯವರು. ಆದರೆ ನಾನು ಇಲ್ಲಿಗೆ ಹೊಂದಿಕೊಳ್ಳಲಾರದೇ ಹೋಗಿರುವುದು ನನ್ನ ತಪ್ಪು. ಆದರೆ ನಾನೇನೂ ಮಾಡಲಾರೆ. ನನಗೆ ಹಣ ಬೇಡ. ನನಗೆ ಶಾಂತಿ ಬೇಕು...."

ಮೀರಳ ಆವೇಶ ನೋಡಿ ಪುಟ್ಟಮ್ಮನವರು ಗಾಬರಿಯಾದರು.

"ಮೀರ, ಮಗುವನ್ನು ಕಳೆದುಕೊಂಡ ತಾಯಿಯ ಮನಸ್ಸು ಹೇಗಿರುವುದೆಂಬುದು ನನಗೂ ಗೊತ್ತು. ನಾನೂ ಆ ದುಃಖವನ್ನು ಅನುಭವಿಸಿದೀನಿ. ನನ್ನ ಮೊದಲನೆಯ ಮಗು ಎಳೆವಿನಿಂದ ಸತ್ತುಹೋಯಿತು. ಆಗ ನಾನೂ ನಿನ್ನಂತೆಯೇ ದುಃಖಪಟ್ಟೆ. ಆದರೆ ಈಗ ಇತರ ಮಕ್ಕಳ ಮುಖ ನೋಡಿ ಸಮಾಧಾನ ತಂದುಕೊಂಡಿಲ್ಲವೇ?"

"ಆದರೆ.... ಆದರೆ.... ನಿಮ್ಮ ಸ್ಥಿತಿಯೇ ಬೇರೆ, ನಾನಿರುವ ಸ್ಥಿತಿಯೇ ಬೇರೆ" ಎನ್ನುತ್ತಾ ಮೀರ ಮೊಳಕಾಲ ಮೇಲೆ ತಲೆಯಿಟ್ಟು ಬಿಕ್ಕಿ ಬಿಕ್ಕಿ ಅತ್ತಳು.

ಮೀರ ದಾರಿಗಾಣದ ಮಗುವಿನಂತೆ ಅಳಬಹುದು ಎಂದು ಪುಟ್ಟಮ್ಮನವರು ಭಾವಿಸಿರಲಿಲ್ಲ. ಮೀರ ಧೈರ್ಯಶಾಲಿ, ಕೆಚ್ಚೆದೆಯ ಹುಡುಗಿ ಎಂಬುದೇ ಅವರ ಭಾವನೆಯಾಗಿತ್ತು. ಅವಳು ಈಗ ತಮ್ಮೆದುರಿಗೆ ಕುಳಿತು ಎಳೆಯ ಮಗುವಿನಂತೆ ಅಳುತ್ತಿರುವುದನ್ನು ನೋಡಿ ಅವರಿಗೆ ಏನೂ ತೋರಲಿಲ್ಲ. ಸಾಕಮ್ಮನವರು ಮೀರಳ ಬಳಿಗೆ ಬಂದು ಆದರದಿಂದ ಅವಳ ತಲೆ ಸವರಿ,

"ಅಳಬೇಡಮ್ಮ. ಆದದ್ದು ಆಗಿಹೋಯಿತು" ಎಂದರು.

ಕ್ರಮೇಣ ಮೀರಳ ದುಃಖ ಶಾಂತವಾಯಿತು.

ಅವಳ ದುಃಖದ ಆವೇಗ ಕಡಿಮೆಯಾದ ಮೇಲೆ ಪುಟ್ಟಮ್ಮನವರು ಕೇಳಿದರು,

"ಮಕ್ಕಳಿಲ್ಲದಿದ್ದರೇನು ಗಂಡನೊಡನಿರಲು ಸಾಧ್ಯವಿಲ್ಲವೇ ಮೀರ? ನಮ್ಮ ದೊಡ್ಡಮ್ಮನಿಗೂ ಮಕ್ಕಳಿಲ್ಲ. ಆದರೆ ಅವರಿಗೆ ಗಂಡನೆಂದರೆ ಎಷ್ಟು ಭಕ್ತಿ, ಪ್ರೀತಿ. ಅರವತ್ತು ವರ್ಷದ ಮೇಲಾಗಿದ್ದರೂ ಗಂಡ, ಹೆಂಡತಿ ನಿನ್ನೆ ಮೊನ್ನೆ ಮದುವೆಯಾದವರ ಹಾಗೆ ಇದಾರೆ."

"ಇರಬಹುದು. ಆದರೆ ನಿಮ್ಮ ದೊಡ್ಡಮ್ಮ ಬೆಳೆದ ಕಾಲ, ಸನ್ನಿವೇಶಗಳಿಗೂ, ನಾನು ದೊಡ್ಡವಳಾದ ಕಾಲ ಸನ್ನಿವೇಶಗಳಿಗೂ ಬಹಳ ವ್ಯತ್ಯಾಸವಿದೆ. ಅವರು ಗಂಡನನ್ನು ಪ್ರತ್ಯಕ್ಷ ದೇವರು ಎಂದು ಭಾವಿಸಿದ್ದಾರೆ. ಗಂಡ ಹಾಕಿದ ಗೆರೆ ದಾಟುವುದು ತಪ್ಪು ಎಂದು ತಿಳಿದಿದ್ದಾರೆ. ಗಂಡನಲ್ಲೇ ಸರ್ವಸುಖ ಸಂಪತ್ತು ವೈಭವ

ಕಾಣುತ್ತಿದ್ದಾರೆ...."

"ನೀನು?"

"ನಾನು ಪತಿಯೇ ಪರದೈವ ಎಂದು ಭಾವಿಸಿಲ್ಲ. ಗಂಡನೂ ನನ್ನಂತೆಯೇ ಒಬ್ಬ ಮನುಷ್ಯ ಎಂದು ಭಾವಿಸಿದ್ದೇನೆ. ನನ್ನ ಧ್ಯೇಯ, ಆಕಾಂಕ್ಷೆಗಳಿಗೆ ಪತಿ ಅಡ್ಡ ಬಂದರೆ ಅವರ ಮಾತು ಮೀರಿ ನಡೆಯುವುದು ತಪ್ಪಲ್ಲ ಎಂದು ಭಾವಿಸಿದ್ದೇನೆ."

ಮೀರಳ ಮಾತು ಕೇಳಿ ಹಿರಿಯ ಮುತ್ತೈದೆಯರಿಬ್ಬರೂ ಅಚ್ಚರಿಗೊಂಡರು. ಹಳೆಯ ವಾತಾವರಣದಲ್ಲಿ ಬೆಳೆದು ಪತಿಯೇ ಪರದೈವ ಎಂಬ ಪಾಠ ಕಲಿತಿದ್ದ ಅವರಿಗೆ ಮೀರಳ ಮಾತುಗಳು ಹಿಡಿಸಲಿಲ್ಲ. ಗಂಡನ ಮಾತು ಮೀರಿ ನಡೆಯುವುದೆಂದರೆ ಅವರ ದೃಷ್ಟಿಯಲ್ಲಿ ಕ್ಷಮಿಸಲಾಗದಂತಹ ಅನ್ಯಾಯವಾಗಿತ್ತು.

"ಹಿಂದೂ ಹೆಂಗಸರಿಗೆ ಗಂಡನೇ ದೇವರಮ್ಮ. ಗಂಡನ ಮಾತು ಮೀರುವುದು ಮಹಾಪಾಪ."

"ಆದರೆ ನಾನು ಹಾಗೆ ತಿಳಿದಿಲ್ಲ. ಅವರ ಕೈಹಿಡಿದ ನಾನು ಭಾಗ್ಯಶಾಲಿ. ಆದರೆ ಅವರು ಭಾಗ್ಯಹೀನರು. ಅವರೂ ನನ್ನ ಆಸೆಗೆ ಬೆಂಬಲ ಕೊಡುತ್ತಿದ್ದಾರೆ. ಅದಕ್ಕಾಗಿ ನಾನು ಕೃತಜ್ಞಳು."

"ಶಾಮಣ್ಣ ಇನ್ನೂ ಹುಡುಗ. ಹೆಂಡತಿಯಿಲ್ಲದೆ ಎಷ್ಟು ದಿನ ಹೀಗೆಯೇ ಇರುತ್ತಾನೆ? ನೀನು ಆ ಯೋಚನೆ ಮಾಡಬೇಡವೇ?"

"ಅವರು ಬೇರೆ ಮದುವೆಯಾಗಲು ನನ್ನ ಅಡ್ಡಿಯೇನೂ ಇಲ್ಲ. ನಾನಿನ್ನು ಬರ್ತೀನಿ" ಎನ್ನುತ್ತಾ ಮೀರ ಎದ್ದು ನಿಂತಳು.

ಸಾಕಮ್ಮನವರು, "ನಾನು ನಿನ್ನ ಅಳಿಸುವುದಕ್ಕೆ ಕರೆಸಿದ ಹಾಗಾಯಿತು, ಮೀರ. ನಮ್ಮ ಮೇಲೆ ಕೋಪಿಸಿಕೊಳ್ಳಬೇಡ. ಎಷ್ಟಾಗಲಿ ನಾವು ಪೂರ್ವ ಕಾಲದವರು. ನಮ್ಮ ನಿಮ್ಮ ಭಾವನೆಗಳು ಹೊಂದಲಾರವು" ಎಂದರು.

"ನಿಮ್ಮ ಮಾತಿನಿಂದ ನನಗೇನೂ ಕೋಪವಿಲ್ಲ."

ಕೆನ್ನೆಯ ಮೇಲೆ ನಿಂತಿದ್ದ ಕಣ್ಣೀರಿನ ಗುರುತನ್ನು ಕರವಸ್ತ್ರದಿಂದ ಚೆನ್ನಾಗಿ ಒರೆಸಿಕೊಂಡು ಮೀರ ಹೊರಟುಹೋದಳು.

ಪುಟ್ಟಮ್ಮನವರು ನಿಟ್ಟುಸಿರು ಬಿಟ್ಟು, "ಒಳ್ಳೆಯ ಹುಡುಗಿ, ಯಾವ ಗ್ರಹಚಾರ ಅವಳನ್ನು ಕಾಡಿಸುತ್ತಿದೆಯೋ" ಎಂದರು.

ಮೀರ ಗಂಡನನ್ನು ಬಿಟ್ಟು ಓದಲು ಮೈಸೂರಿಗೆ ಹೊರಟಿರುವಳೆಂಬ ಸುದ್ದಿ ಬಾಯಿಂದ ಬಾಯಿಗೆ ಕಾಡ್ಗಿಚ್ಚಿನಂತೆ ಹಬ್ಬಿತು. ಹಳ್ಳಿಯವರು ಮೊದಲು ಈ ಸುದ್ದಿಯನ್ನು ನಂಬಲಿಲ್ಲ. ಆದರೆ ಹಳ್ಳಿಯವರ ಗೌರವಾದರಗಳಿಗೆ ಪಾತ್ರರಾಗಿದ್ದ

ಸಾಕಮ್ಮ, ಪುಟ್ಟಮ್ಮನವರಿಂದಲೇ ಈ ಸುದ್ದಿ ಬಂದ ಮೇಲೆ ನಂಬದಿರಲು ಹೇಗೆ ಸಾಧ್ಯ?

ಹಳ್ಳಿಯವರಿಗೆ ಮಾತನಾಡಲು ಹೊಸದೊಂದು ವಿಷಯ ಸಿಕ್ಕಿದಂತಾಯಿತು. ತಲೆ ಹಣ್ಣಾದ ಬೀರಮ್ಮ ಮೊರದಲ್ಲಿ ರಾಗಿ ಕಾಳು ಕೇರುತ್ತಾ ಕೆನ್ನೆ ಸರಪಳಿಯ ರಾಮಕ್ಕನೊಂದಿಗೆ, "ಕೇಳಿದೆಯಾವ್ವಾ?" ಎಂದಳು.

"ಕೇಳಿದೆ ಕನವ್ವ. ಕಾಲ ತಲ್ಕೆಳಗಾಗೋಯ್ತು. ಎಂಡಿರೇ ಗಂಡಂದ್ರನ್ನ ಬುಡೋಕೆ ಮೊದಲು ಮಾಡವ್ರೆ. ಬ್ರಾಂಬ್ರೂ ಹಿಂಗೇ ಮಾಡ್ತಾರಾ?"

"ಶಾಮಪ್ನೋರು ಮೀರವ್ನನಿಗೇನು ಕಡಿಮೆ ಮಾಡವ್ರೆ?"

"ಮಗ ಸತ್ತೋದ ದುಕ್ಕ ಮರೆಯೋಕೆ ಓಂಟಿವರಂತೆ."

"ಒಂದ್ಮಗ ಹೋದ್ರೇನವ್ವ, ಇನ್ನೊಂದು ಆಯ್ತದೆ. ಮಗು ಸತ್ತೋಯ್ತೂಂತ ಗಂಡನ್ನ ಬುಡಬೇಕಾ?"

"ಆ ಸಿವಂಗೇ ಗೊತ್ತು ಒಳಗೆ ಏನು ಜಗಳ ಇದ್ದಾತೋ? ಸುಂಕೆ ಹೀಗೆ ಹೇಳ್ತಾರೇಂತ ಕಾಣಸ್ತದೆ."

"ದೊಡ್ಡವರ ಮಾತು ನಮಗೇಕೆ" ಎಂದು ಇಬ್ಬರೂ ಆ ಮಾತನ್ನು ಅಲ್ಲಿಗೆ ನಿಲ್ಲಿಸಿದರು.

ಒಬ್ಬೊಬ್ಬರು ಒಂದೊಂದು ರೀತಿ ಬಾಯಿಗೆ ಬಂದಂತೆ ಮಾತನಾಡಿದರು. ನೀಲಮ್ಮನ ಗಂಡ ಶಿವಯ್ಯ ತಾತ್ಸಾರವಾಗಿ,

"ಶಾಮಪ್ನೋರಿಂದಾನೇ ಅವರು ಇಂಗಾಡ್ತಿರೋದು. ಸಲಿಗೆ ಕೊಟ್ಟು ಎಂಡ್ತೀನ ತಲೇ ಮ್ಯಾಗೆ ಕುಂದ್ರಸ್ಕೊಂಡವ್ರೆ. ಇಡಿದು ನಾಲ್ಕು ಬಿಗಿದರೆ ತಾವಾಗೇ ದಾರೀಗೆ ಬರ್ತಾರೆ" ಎಂದ.

ಎಲ್ಲರಿಗಿಂತಲೂ ಹೆಚ್ಚು ಗಾಬರಿಗೊಂಡವರು ವೆಂಕಮ್ಮ. ಚಿಕ್ಕ ವಯಸ್ಸಿನಲ್ಲೇ ವಿಧವೆಯಾದ ಆಕೆ ಇನ್ನೊಬ್ಬರ ಸೇವೆಯಲ್ಲಿ ತಮ್ಮ ಬದುಕಿನ ಸಾರ್ಥಕತೆಯನ್ನು ಕಂಡಿದ್ದರು. ಮೈನೆರೆಯುವುದಕ್ಕೆ ಮುಂಚೆಯೇ ಗಂಡನನ್ನು ಕಳೆದುಕೊಂಡು, ಆಕೆ ತಮ್ಮ ಶ್ರೀಮಂತ ನೆಂಟರಾದ ಶಾಮುವಿನ ತಂದೆಯ ಆಸರೆಯನ್ನು ಪಡೆದು ಕೆಲಸ ಮಾಡುತ್ತಿದ್ದರು. ಶಾಮುವಿನ ತಾಯಿ ಆಕೆಯನ್ನು ಕೇವಲ ಪರಿಚಾರಿಕೆಯೆಂದು ಭಾವಿಸಿರಲಿಲ್ಲ. ಗಂಡ ಹೆಂಡತಿಯರಿಬ್ಬರೂ ವೆಂಕಮ್ಮನವರನ್ನು ಸ್ನೇಹ, ವಿಶ್ವಾಸದಿಂದ ಕಾಣುತ್ತಿದ್ದರು. ಅವರ ಜೀವವೃಕ್ಷಕ್ಕೆ ವೆಂಕಮ್ಮನವರ ಬಾಳಬಳ್ಳಿ ಹೆಣೆದುಕೊಂಡಿತ್ತು. ಶಾಮುವನ್ನು ಅವರು ತಮ್ಮ ಪ್ರಾಣಕ್ಕಿಂತಲೂ ಮಿಗಿಲಾಗಿ ಪ್ರೀತಿಸುತ್ತಿದ್ದರು. ಅವರ ವಂಶಕ್ಕೆಲ್ಲಾ ಶಾಮು ಒಬ್ಬನೇ ಮಗನಾದುದರಿಂದ ಅವನು

ನಡೆದರೆ ಬಾಡುವನೇನೋ ಎನ್ನುವ ರೀತಿಯಲ್ಲಿ ವೆಂಕಮ್ಮನವರು ಅವನನ್ನು ನೋಡಿಕೊಳ್ಳುತ್ತಿದ್ದರು. ಶಾಮುವಿನ ಮೋಹದ ಮಡದಿಯನ್ನು ಅವರು ಅಭಿಮಾನ, ಪ್ರೀತಿಯಿಂದ ಕಾಣುತ್ತಿದ್ದರು. ಕೆಲವು ಬಾರಿ ಮೀರಳ ಜಾಣ್ಮೆ, ದಿಟ್ಟತನ, ಮಾತುಗಾರಿಕೆ ಇವುಗಳನ್ನು ನೋಡಿ ಅವರು ಮೆಚ್ಚುಗೆಯಿಂದ,

"ತಾಯೀ, ನೀನು ಗಂಡಾಗಿ ಹುಟ್ಟಿದ್ದರೆ ಲೋಕಾನೇ ಆಳ್ತಿದ್ದೆ" ಎನ್ನುತ್ತಿದ್ದರು. ಆಗ ಶಾಮು ನಸುನಗುತ್ತಾ ಮೀರಳನ್ನು ಕೀಟಲೆ ಮಾಡುವವನಂತೆ ನೋಡಿ, "ಆಗ ನನ್ನ ಗತಿ?" ಎನ್ನುತ್ತಿದ್ದ.

ದೇಗುಲದಂತಹ ಶಾಮುವಿನ ಮನೆಗೆ ಓಡಾಡುವ ದೀಪದಂತಿದ್ದ ಮೀರ ಮೈಸೂರಿಗೆ ಹೊರಟಿರುವುದನ್ನು ನೋಡಿ ವೆಂಕಮ್ಮನವರು ದಿಗಿಲುಗೊಂಡರು. ಅವರಿಗೆ ಶಾಮಣ್ಣನಿಂದ ಮೀರಳಿಗೆ ಎರಡು ಮಾತು ಹೇಳಿಸಬೇಕೆನಿಸಿತು.

ಒಂದು ದಿನ ಮೀರ ಎಲ್ಲಿಗೋ ಹೋಗಿದ್ದಾಗ ಶಾಮು ಯಾವುದೋ ಕೆಲಸಕ್ಕೆ ಒಳಗೆ ಬಂದ. ಈ ಸಮಯವನ್ನೇ ಕಾಯುತ್ತಿದ್ದ ವೆಂಕಮ್ಮನವರು "ಶಾಮಣ್ಣ, ಒಂದು ಮಾತು" ಎಂದರು.

ಶಾಮು ಪ್ರಶ್ನಾರ್ಥಕವಾಗಿ ಅವರ ಕಡೆ ನೋಡಿದ.

"ಮೀರಾನ ನೀನಾದರೂ ಇಲ್ಲಿಯೇ ಇರಿಸಲಾರೆಯಾ?"

"ಸಾಧ್ಯವಿಲ್ಲ ಅತ್ತೆ."

"ಹೀಗೆಂದರೆ ಹೇಗಪ್ಪಾ? ಅವಳಿಗೇನು ಕಡಿಮೆಯಾಗಿದೆ?"

"ಅವಳ ಮನಸ್ಸಿಗೆ ಶಾಂತಿಯಿಲ್ಲ."

"ಓದಿದರೆ ಶಾಂತಿ ಬರುತ್ತದೆಯೇ ಶಾಮಣ್ಣ. ಶಾಂತಿ ಹೊರಗಿನಿಂದ ಬರುವುದಿಲ್ಲ. ನಮ್ಮ ಮನಸ್ಸಿನಿಂದಲೇ ಬರಬೇಕು."

ಶಾಮು ಒಂದು ಗಳಿಗೆ ತಲೆ ತಗ್ಗಿಸಿ ನಿಂತಿದ್ದು, "ಅವಳು ಜಾನಿಯನ್ನು ಮರೆಯೋದಕ್ಕೋಸ್ಕರ ಹೋಗ್ತಾಳೆ" ಎಂದ.

ಜಾನಿಯ ಹೆಸರು ಬಂದೊಡನೆ ವೆಂಕಮ್ಮನವರ ಕಣ್ಣುಗಳು ಹನಿಗೂಡಿದವು.

"ಎಲ್ಲಿ ಹೋದರೆ ತಾನೆ ಮಗೂನ ಮರೆಯೋದಕ್ಕಾಗುತ್ತಪ್ಪಾ? ವಿದ್ಯೆಯಿಂದ ಮಗೂನ ಮರೆಯಲು ಸಾಧ್ಯವೇ? ಇನ್ನೊಂದು ಮಗುವಾದರೆ ಈ ದುಃಖ ತಾನಾಗಿಯೇ ಮರೆತುಹೋಗುತ್ತದೆ."

ವೆಂಕಮ್ಮನವರ ಮಾತು ಕೇಳಿ ಶಾಮು ಪ್ರತ್ಯುತ್ತರ ಕೊಡದೆ ಆ ಜಾಗದಿಂದ ಹೊರಟುಹೋದ. ವೆಂಕಮ್ಮನವರ ಮನಸ್ಸಿನಲ್ಲಿ ಯೋಚನಾ ತರಂಗಗಳೆದ್ದುವು.

ಹಾಗಾದರೆ ಇದುವರೆವಿಗೆ ಯಾವ ಹೆಂಗಸೂ ಮಗುವನ್ನು ಕಳೆದು

ಕೊಂಡಿಲ್ಲವೆ? ಮಗುವನ್ನು ಕಳೆದುಕೊಂಡವರೆಲ್ಲ ಗಂಡನನ್ನು ಬಿಟ್ಟು ಹೋಗಿರುವರೆ? ಅಭಿಮನ್ಯುವಿನಂತಹ ಮಗನನ್ನು ಕಳೆದುಕೊಂಡು ಸುಭದ್ರೆ ಬದುಕಿರಲಿಲ್ಲವೇ? ಮತ್ತೊಂದು ಕಂದ ಹುಟ್ಟಿ ಈ ಮನೆಯನ್ನು ಮುಸುಕಿರುವ ಕತ್ತಲನ್ನು ಓಡಿಸಿ ನಗೆಯ ಬೆಳದಿಂಗಳನ್ನು ಹರಡಬಾರದೇ?

ಮೀರ ಹೊರಟುಹೋದರೆ ಶಾಮು ಸುಖಿಯಾಗಿರುವುದಿಲ್ಲವೆಂಬ ಸಂಗತಿ ವೆಂಕಮ್ಮನವರಿಗೆ ತಿಳಿದಿತ್ತು. ಅವನು ತಾನೆ ಹೆಂಡತಿಗೆ ಯಾಕೆ ಅಷ್ಟೊಂದು ಸಲಿಗೆ ಕೊಡುತ್ತಾನೋ? ಅವಳನ್ನು ತುಂಬಾ ಮುದ್ದಿಸಿ ಹಾಳುಮಾಡಿದ್ದಾನೆ. ಹೂಂ. ತಮಗೇಕೆ ಆ ವಿಷಯ? ಆದರೂ.... ತಮ್ಮ ತೊಡೆಯ ಮೇಲೆ ಬೆಳೆದ ಶಾಮು ಅಸುಖಿಯಾಗಿರುವುದನ್ನು ತಾವು ನೋಡಲು ಸಾಧ್ಯವೇ? ಈ ಹುಡುಗಿಯನ್ನು ಯಾವ ಕೆಟ್ಟ ಗಳಿಗೆಯಲ್ಲಿ ಕೈಹಿಡಿದನೋ? ಅಂದಿನಿಂದ ಒಂದಲ್ಲ ಒಂದು ಬಗೆಯ ಹಿಂಸೆ ಇದ್ದೇ ಇದೆ. ಕೊನೆಗೆ ಅವನ ಸೋದರಮಾವನ ಮಗಳು ಸರಸಿಯನ್ನು ಕೈಹಿಡಿದಿದ್ದರೆ ರಾಜನಂತಿರಬಹುದಾಗಿತ್ತು. ನಿಜ, ಮೀರ ಅನುಪಮ ಸುಂದರಿ. ಸರಸಿಯನ್ನು ಅವಳ ಜೊತೆಯಲ್ಲಿ ನಿಲ್ಲಿಸುವುದೂ ತಪ್ಪಾದೀತು. ಆದರೆ ಕೈಹಿಡಿದ ಗಂಡನನ್ನು ಸುಖದಲ್ಲಿಡಲಾರದೇ ಹೋದ ಹೆಂಡತಿಯ ಸೌಂದರ್ಯಕ್ಕೆ ಯಾವ ಬೆಲೆ? ಮೀರ ಚಿನ್ನದಂತಹ ಹುಡುಗಿ. ಆದರೆ ಬುದ್ಧಿ ಮಾತ್ರ ಕೊಂಚ.... ಐಬು.

"ವೆಂಕಮ್ಮನವರೇ.... ವೆಂಕಮ್ಮನವರೇ" ಮೀರ ಕೂಗಿದಳು.

ವೆಂಕಮ್ಮನವರು ಎಚ್ಚರಗೊಂಡು 'ಏನಮ್ಮ?' ಎನ್ನುತ್ತಾ ಹೊರಗೆ ಬಂದರು. ಮೀರ ಎಳೆಗರುವೊಂದರ ಹಿಂದೆ ಓಡಾಡುತ್ತಿದ್ದಳು. ಕರು ಅವಳ ಕೈಗೆ ಸಿಕ್ಕದೆ ನುಸುಳಿಕೊಂಡು ಎಗರಾಡುತ್ತಾ ಓಡಿಹೋಗುತ್ತಿತ್ತು. ಅದನ್ನು ಹಿಡಿಯಲು ಹಿಂಬಾಲಿಸಿ ಓಡಿಯಾಡಿ ಮೀರ ಬಸವಳಿದಿದ್ದಳು. ಅವಳ ಗುಂಗುರುಕೂದಲಿನ ತಲೆ ಗಾಳಿಗೆ ಸಿಕ್ಕಿ ಕೆದರಿದ ಚಪ್ಪರವಾಗಿತ್ತು. ಕೆನ್ನೆ ಬಿಸಿಲಿನ ಝಳಕ್ಕೆ ಕೆಂಪಾಗಿತ್ತು. ಸೀರೆಯ ಸೆರಗನ್ನು ನಡುವಿಗೆ ಸಿಕ್ಕಿಸಿ ಮೀರ ಎಳೆಯ ಹುಡುಗಿಯಂತೆ ಕರುವಿನ ಹಿಂದೆ ಓಡುತ್ತಿದ್ದಳು. ಉತ್ಸಾಹದಲ್ಲಿದ್ದ ಅವಳ ಮುಖ ತುಂಟತನದಿಂದ ಕಳೆಯೇರಿತ್ತು. ದುಃಖದ ಮಾಸಲು ಬಣ್ಣ ಅವಳ ಮುಖದಿಂದ ಮರೆಯಾಗಿ ಚೈತನ್ಯದ ಹೊಳಪಿನಿಂದ ಕಣ್ಣುಗಳು ಮಿನುಗುತ್ತಿದ್ದವು.

ವೆಂಕಮ್ಮನವರನ್ನು ನೋಡಿ ಮೀರ ಹೇಳಿದಳು,

"ಕರು ಆಗಿನಿಂದ ಮಣ್ಣು ತಿನ್ನುತ್ತಿದೆ. ಬಾಯಿಗೆ ಬುಟ್ಟಿ ಹಾಕೋಣಾಂತ ಹಿಡಿಯೋಕೆ ಪ್ರಯತ್ನ ಪಡ್ತಿದೀನಿ. ಆದರೆ ಅದು ನನ್ನ ಕೈಗೆ ಸಿಕ್ತಾನೆ ಇಲ್ಲ."

ಮೀರಳ ಮುಖ ನೋಡಿ ವೆಂಕಮ್ಮನವರಿಗೆ ಅವಳ ಮೇಲಿನ ಕೋಪ

ಮರೆಯಾಯಿತು.

ಜಾನಿ ಇನ್ನೂ ಹತ್ತು ವರ್ಷ ಬದುಕಿದ್ದರೆ ಹೀಗೇ ಕಾಣುತ್ತಿದ್ದಳೇನೋ?

ಚೆಲುವಾಗಿ ಕಾಣುತ್ತಿದ್ದ ಮೀರಳ ಮುಖದಲ್ಲಿ ಜಾನಿಯ ಮುಖವನ್ನು ಚಿತ್ರಿಸಿಕೊಳ್ಳುತ್ತಾ ವೆಂಕಮ್ಮನವರು ನಿಂತುಕೊಂಡರು. ವೆಂಕಮ್ಮನವರು ತನ್ನನ್ನೇ ನೋಡುತ್ತಿರುವುದನ್ನು ಗಮನಿಸಿ ಮೀರ ನಾಚಿ,

"ಇದೇನು, ನನ್ನ ನೋಡ್ತಾ ನಿಂತುಬಿಟ್ಟಿರಿ?" ಎಂದಳು.

"ಏನಿಲ್ಲಮ್ಮ. ಕಣ್ವಾಶ್ರಮದಲ್ಲಿ ಜಿಂಕೆಯೊಡನೆ ಆಟವಾಡುವಾಗ ಶಕುಂತಳೆ ಹೀಗೇ ಇದ್ದಳೇನೋ ಎಂದುಕೊಳ್ಳುತ್ತಿದ್ದೆ."

"ಈ ಕರೂನ ಕರೆಯಿರಿ."

"ಗಂಗೇ ಬಾ.... ಬಾ...." ಎಂದು ಲೊಚಕೆ ಹಾಕಿದರು ವೆಂಕಮ್ಮ. ಕರು ವೆಂಕಮ್ಮನವರನ್ನು ನೋಡಿ ಸುಮ್ಮನೆ ನಿಂತುಕೊಂಡಿತು. ವೆಂಕಮ್ಮನವರು ಕರುವಿನ ಬಳಿಗೆ ಹೋಗಿ ಕೊರಳಿನಲ್ಲಿ ಜೋಲಾಡುತ್ತಿದ್ದ ಬುಟ್ಟಿಯನ್ನು ಅದರ ಬಾಯಿಗೆ ಕವಿದು ಹಾಕಿದರು. ಮೀರ ಪವಾಡವನ್ನು ನೋಡುವವಳಂತೆ ಅವರ ಕೆಲಸವನ್ನು ನೋಡುತ್ತಿದ್ದಳು.

"ನೀವು ಕರೂಗೆ ಅದೇನು ಮಾಟ ಮಾಡಿದೀರೀಂತೀನಿ" ಎಂದಳು ಮೀರ ಅಚ್ಚರಿಯಿಂದ.

ವೆಂಕಮ್ಮನವರು ಬದಲು ಹೇಳಲಿಲ್ಲ. ಆದರೆ,

"ನೀನು ಶಾಮಣ್ಣನಿಗೆ ಅದೇನು ಮಾಟ ಮಾಡಿದೀಯೋ ಮಾಯಾಂಗನೆ" ಎಂದು ಮನಸ್ಸಿನಲ್ಲಿಯೇ ಹೇಳಿಕೊಂಡರು.

* * * * *

ಮೀರಳಿಗೆ ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಕ್ಕಿದ ಸುದ್ದಿ ಬಂದ ದಿನ ಜೊತೆಗಾರರಿಂದ ಬೇರೆಯಾದ ಎಳೆಗರುವಿನಂತೆ ಶಾಮು ತಲ್ಲಣಿಸಿದ. 'ನೀನು ಓದುವುದು ಸಾಧ್ಯವಿಲ್ಲ' ಎಂದವನು ಹೆಂಡತಿಗೆ ಕಟುವಾಗಿ ಹೇಳಲಾರದವನಾಗಿದ್ದ. ಅವಳಿಗೆ ಸ್ವಲ್ಪವಾದರೂ ಸಮಾಧಾನವನ್ನು ನೀಡುವ ಉದ್ದೇಶದಿಂದ ಅವನು ತಾನು ಅಶಾಂತಿಯಲ್ಲಿ ಬೇಯಲು ಸಿದ್ಧನಾಗಿದ್ದ. ಅವಳೊಬ್ಬಳಾದರೂ ನೆಮ್ಮದಿಯಿಂದಿರಲಿ ಎಂದವನ ಮನ ಬಯಸಿತ್ತು.

ಮೀರ ಮೈಸೂರಿಗೆ ಹೊರಡಲು ಸಿದ್ಧತೆಗಳನ್ನು ಮಾಡುತ್ತಿದ್ದಳು. ಮೆಡಿಕಲ್ ಕಾಲೇಜಿನ ಹಾಸ್ಟೆಲಿನಲ್ಲಿ ಆಗಲೇ ಸ್ಥಳವನ್ನು ದೊರಕಿಸಿಕೊಂಡಿದ್ದಾಗಿತ್ತು. ತಾನು ಮೆಡಿಕಲ್‌ಗೆ ಸೇರುವ ವಿಷಯವನ್ನು ದೊಡ್ಡಪ್ಪನಿಗೆ ತಿಳಿಸಿಯೂ ಆಗಿತ್ತು. ಅವರಿಂದ

ಬಂದಿದ್ದ ಬಹು ಭಾರವಾಗಿದ್ದ ಕವರನ್ನು ಅವಳು ಒಡೆದು ಸಹ ನೋಡದೆ ಹರಿದು ಬಿಸಾಡಿದಳು. ಒಳಗೆ ಕಾಗದದಲ್ಲಿ ಏನಿರುವುದೆಂಬುದು ಅವಳಿಗೆ ತಿಳಿದಿತ್ತು.

ಮೀರ ಹೊರಡುವ ದಿನ ನಿಶ್ಚಯವಾದ ಮೇಲಂತೂ ಮನೆಯಲ್ಲಿ ರುದ್ರ ಮೌನ ಕವಿದಿತ್ತು. ಶಾಮುವಂತೂ ಮನೆಯನ್ನೇ ಸೇರುತ್ತಿರಲಿಲ್ಲ. ಎಷ್ಟೋ ದಿನ ರಾತ್ರಿ ಶಾಮುವಿನ ದಾರಿ ಕಾಯುತ್ತಾ ಮೀರ ಕುರ್ಚಿಯ ಮೇಲೆ ನಿದ್ದೆ ಹೋದದ್ದೂ ಉಂಟು. ಆರಾಮಕುರ್ಚಿಯ ಮೇಲೆ ನಿದ್ರಿಸುತ್ತಿದ್ದ ಹೆಂಡತಿಯ ಮೈಮೇಲೆ ಶಾಲೊಂದನ್ನು ಮೆಲ್ಲನೆ ಹೊದಿಸಿ ಶಾಮು ತಾನು ಮಲಗುತ್ತಿದ್ದ. ಬೆಳಿಗ್ಗೆ ಅವಳಿಗೆ ಎಚ್ಚರವಾಗುವುದಕ್ಕೆ ಮುಂಚೆ ಶಾಮು ಗದ್ದೆ ಕಡೆ ಹೊರಟುಹೋಗುತ್ತಿದ್ದ. ಬೆಳಿಗ್ಗೆ ತನ್ನ ಮೈಮೇಲೆ ಶಾಲು ನೋಡಿ ಒಮ್ಮೊಮ್ಮೆ ಮೀರ ಕುಪಿತಳಾಗುತ್ತಿದ್ದಳು.

"ನನ್ನನ್ನು ಎಬ್ಬಿಸಬಾರದಾಗಿತ್ತೇ?" ಎಂದವಳು ಕೇಳಿದಾಗ ಶಾಮು ನಕ್ಕು ಹೊರಟುಹೋಗುತ್ತಿದ್ದ.

ಮೀರ ಹೊರಡುವ ಹಿಂದಿನ ದಿನ ಶಾಮು ಗಾಡಿಯನ್ನು ಮುಂಜಾವಿಗೆ ಹೂಡುವಂತೆ ನಿಂಗನಿಗೆ ಹೇಳಿದ್ದ. ವೆಂಕಮ್ಮನವರಿಗೆ ಏನಾದರೂ ತಿಂಡಿ ಮಾಡುವಂತೆ ಸೂಚಿಸಿದ್ದ.

ಹಿಂದಿನ ರಾತ್ರಿ ಮೀರ ತನ್ನ ಟ್ರಂಕಿಗೆ ಬಟ್ಟೆಗಳನ್ನು ಹಾಕಿಕೊಳ್ಳುವುದನ್ನೇ ನೋಡುತ್ತಾ ಹಾಸಿಗೆಯನ್ನೊರಗಿ ಕುಳಿತಿದ್ದ.

ಮೀರ ಟ್ರಂಕಿಗೆ ಸಾಧಾರಣವಾದ ವಾಯಿಲ್ ಚೀಟಿ ಸೀರೆಗಳನ್ನು ಹಾಕಿ ಕೊಳ್ಳುತ್ತಿದ್ದಳು. ಅವಳಿಗೆ ಅತ್ಯಂತ ಪ್ರಿಯವಾಗಿದ್ದ ಜಾರ್ಜೆಟ್ ಸೀರೆಗಳನ್ನೂ, ಶಾಮು ಮೆಚ್ಚುತ್ತಿದ್ದ ಧರ್ಮಾವರದ ಸೀರೆಗಳನ್ನು ಬೇರೆ ಬೇರೆಯಾಗಿ ತೆಗೆದಿರಿಸು ವುದನ್ನು ನೋಡಿ ಶಾಮು ಕೇಳಿದ.

"ಈ ಸೀರೆಗಳು ಬೇಡವೇ?"

"ಬೇಡ."

"ಅವೆಲ್ಲಾ ಇಲ್ಲಿ ಯಾಕೆ? ನೀನೇ ತಗೊಂಡು ಹೋಗು."

"ಅಯ್ಯೋ ಬೇಡಿ. ನನಗೆ ನೂಲಿನದು ಸಾಕು."

ಎಷ್ಟು ಸೀರೆ ಕೊಟ್ಟರೂ ತೃಪ್ತಿಯನ್ನೇ ಕಾಣದಿದ್ದ ಮೀರ ಇಂದು ವಿರಕ್ತಳಾಗಿ, 'ಏನೂ ಬೇಡ' ಎಂದು ಹೇಳುತ್ತಿರುವುದನ್ನು ನೋಡಿ ಶಾಮುವಿಗೆ ವ್ಯಥೆಯಾಯಿತು. ವ್ಯಥೆಯೊಡನೆ ಕ್ರೋಧವೂ ಹೆಡೆಯಾಡಿಸಿತು. ಶಾಮು ಧಿಗ್ಗನೆ ಎದ್ದು ಬಂದು ಮೀರ ಬೇಡವೆಂದು ತೆಗೆದಿರಿಸಿದ್ದ ಬೆಲೆ ಬಾಳುವ ಸೀರೆಗಳನ್ನು ಅವಳ ಟ್ರಂಕಿನಲ್ಲಿಯೇ ಒರಟಾಗಿ ತುರುಕಿ 'ನಿನ್ನ ಸೀರೆಗಳನ್ನು ನಿನ್ನ ಜೊತೆ ತೆಗೆದುಕೊಂಡು

ಹೋಗು' ಎನ್ನುತ್ತಾ ಪೆಟ್ಟಿಗೆಯ ಬಾಗಿಲನ್ನು ಟಪ್ಪನೆ ಹಾಕಿದ. ಇದುವರೆವಿಗೂ ಅತ್ಯಂತ ಶಾಂತನಾಗಿದ್ದ ಶಾಮು ಇದ್ದಕ್ಕಿದ್ದಂತೆಯೇ ರೇಗಿದುದನ್ನು ನೋಡಿ ಮೀರ ಚಕಿತಳಾದಳು.

ಬೆಳಗಾಯಿತು. ಮೀರ ಸ್ನಾನ, ಫಲಾಹಾರ ಮುಗಿಸಿ ಹಾಸಿಗೆ ಕಟ್ಟಿಸಿದಳು. ಗಾಡಿಯಾಳು ನಿಂಗ ಮೀರಳ ಸಾಮಾನುಗಳನ್ನು ಗಾಡಿಯಲ್ಲಿರಿಸಿದ. ಮೀರ ವೆಂಕಮ್ಮನವರ ಬಳಿಗೆ ಹೋಗಿ "ನಾನು ಬರುತ್ತೇನೆ" ಎಂದಳು.

"ರಜದಲ್ಲಾದರೂ ಬಾಮ್ಮ."

"ಆಗಲಿ. ನನಗೆ ತಾನೆ ಬೇರೆ ಯಾವ ಮನೆಯಿದೆ. ನೀವು ಬೇಡಾಂದರೂ ಇಲ್ಲಿಗೇ ಬರ್‍ತೀನಿ."

ಶಾಮು ರೂಮಿನಲ್ಲಿ ಕುಳಿತಿದ್ದ. ಮೀರ ಬಾಗಿಲಲ್ಲಿ ನಿಂತು, "ನಾನು ಹೊರಡ್ತೀನಿ" ಎಂದಳು.

"ಒಳ್ಳೆಯದು."

ಮೀರ ರೂಮಿನೊಳಗೆ ಬಂದು ಸದ್ದಾಗುವಂತೆ ರೂಮಿನ ಬಾಗಿಲನ್ನು ಹಾಕಿದಳು. ಶಾಮು ಮಿಸುಕಾಡದೆ ಅಚಲನಾಗಿ ನಿಂತಿದ್ದ. ಮೀರ ನಿಧಾನವಾಗಿ ಹತ್ತಿರ ಬಂದು ಶಾಮುವಿನ ಕಣ್ಣಲ್ಲಿ ಕಣ್ಣಿಟ್ಟು "ನಾನು ಹೋಗ್ತೀನಿ" ಎಂದಳು. ಹಾಗೆ ಹೇಳುವಾಗ ಅವಳ ಮುಖ ಅವನ ಮುಖದ ಹತ್ತಿರಕ್ಕೆ ಬಂದಿತ್ತು.

"ಆಗಲಿ."

ಮೀರ ಒಂದು ಗಳಿಗೆ ಅನುಮಾನಿಸಿ ಬಾಗಿಲಿನ ಕಡೆ ನೋಡಿ, ನಂತರ ತಟ್ಟನೆ ಅವನ ಕ್ರಾಪಿನ ಕೂದಲನ್ನು ಹಿಡಿದು ಜಗ್ಗಿಸಿ, ಅವನ ಮುಖವನ್ನು ಕೆಳಗೆ ಮಾಡಿ ಮುತ್ತಿಟ್ಟಳು. ಶಾಮುವಿನ ಸಹನೆಯ ಕಟ್ಟೆಯೊಡೆಯಿತು. ಅವನ ಕೈಗಳು ಅವಳನ್ನು ಬಿಗಿದುವು. ಹೂವಿನಿಂದ ಹೂವಿಗೆ ಹಾರಿ ಮಕರಂದವನ್ನು ರಮಿಸುವಂತೆ ಮೀರ ಅವನ ತಲೆಯ ಮೇಲೆ ಕೈಯಾಡಿಸಿದಳು.

"ನಿಮ್ಮ ಯೋಗಕ್ಷೇಮ ಸರಿಯಾಗಿ ನೋಡಿಕೊಳ್ಳಿ. ವೆಂಕಮ್ಮನವರಿಗೆ ಹಿಂಸೆ ಕೊಡಬೇಡಿ. ಅವರು ಹೇಳಿದ ಹಾಗೆ ಕೇಳಿಕೊಂಡಿರಿ."

"ಹೂಂ."

"ಇನ್ನು ನನ್ನ ಬಿಡ್ತೀರಾ? ನಿಂಗ ಕಾದುಕೊಂಡಿದಾನೆ."

ಶಾಮು ಮೀರಳಿಂದ ದೂರ ನಿಂತ.

ವೆಂಕಮ್ಮನವರು ಮುಂಬಾಗಿಲಿನಲ್ಲಿ ನಿಂತಿದ್ದರು. ಮೀರ ಅವರನ್ನು ನೋಡಿ, "ಇವರೇನಾದರೂ ತಮ್ಮ ಯೋಗಕ್ಷೇಮಾನ ಅಲಕ್ಷ್ಯ ಮಾಡಿದರೆ ನನಗೆ

ಕೊಟ್ಟಿರುವ ಭಾಷೇನ ಜ್ಞಾಪಿಸಿ" ಎನ್ನುತ್ತಾ ಗಾಡಿ ಹತ್ತಿದಳು. ಗಾಡಿಯ ಗಾಲಿಗಳು ಮುಂದಕ್ಕುರುಳಿದವು. ಮೀರ ಗಾಡಿಯೊಳಗಿನಿಂದ ಕೂಗಿದಳು.

"ಪಂಡಿತರು ಇವರಿಗೆ ಮಾಡಿಕೊಟ್ಟಿರುವ ತೈಲ ಬೊಂಬೆ ಬೀರುವಿನಲ್ಲಿದೆ. ಮರೆಯದೇ ಹಚ್ಚಿಕೊಳ್ಳುವಂತೆ ಹೇಳಿ."

ವೆಂಕಮ್ಮನವರು, 'ಪರವಾಗಿಲ್ಲ ಗಂಡನ ಮೇಲೆ ಇನ್ನೂ ವಿಶ್ವಾಸವಿದೆ' ಎಂದುಕೊಂಡರು. ವೆಂಕಮ್ಮನವರು ಒಳಗೆ ಬಂದಾಗ ಶಾಮು ರೂಮಿನಲ್ಲಿರಲಿಲ್ಲ.

"ಹುಚ್ಚು ಹುಡುಗ. ಆಗಲೇ ಅಲೆದಾಡಲು ಹೊರಟುಹೋಗಿದ್ದಾನೆ" ಎಂದು ಅಕ್ಕರೆಯಿಂದ ಶಾಮುವನ್ನು ಬೈದುಕೊಂಡು ವೆಂಕಮ್ಮನವರು ಅಡಿಗೆಮನೆಗೆ ಹೋದರು.

ಆದರೆ ವೆಂಕಮ್ಮನವರ ಎಣಿಕೆಯಂತೆ ಶಾಮು ಗದ್ದೆಯ ಕಡೆ ಹೋಗಿರಲಿಲ್ಲ. ಮಲಗುವ ಮನೆಗೆ ಹೋಗಿ ಮಂಚದ ಮೇಲೆ ಉರುಳಿಕೊಂಡಿದ್ದ.

ಮದುವೆಯಾದ ಇಷ್ಟು ವರ್ಷಗಳ ನಂತರ ಈ ದಿನವೇ ಮೀರ ತಾನಾಗಿಯೇ ಒಲಿದು ಶಾಮುವಿಗೆ ಮುದ್ದಿಟ್ಟಿದ್ದಳು. ತನ್ನ ದೌರ್ಬಲ್ಯವನ್ನು ಅವಳೆದುರಿಗೆ ಪ್ರದರ್ಶಿಸಿದುದಕ್ಕಾಗಿ ಅವನಿಗೆ ತನ್ನ ಬಗೆಗೇ ತೀರಾ ನಾಚಿಕೆಯಾಯಿತು.

ದೂರದಲ್ಲಿ ರೈಲು ಕೂಗಿದ ಸದ್ದು ಕೇಳಿಸಿತು. ಶಾಮು ಮತ್ತೊಂದು ಪಕ್ಕಕ್ಕೆ ಹೊರಳಿಕೊಂಡ.

* * * * *

ಮೆಡಿಕಲ್ ಕಾಲೇಜಿನ ಹಾಸ್ಟೆಲ್ ಸ್ಟೇಷನ್ನಿಗೆ ಅತ್ಯಂತ ಸಮೀಪದಲ್ಲಿದ್ದುದರಿಂದ ಮೀರ ಕೂಲಿಯವನೊಬ್ಬನನ್ನು ಗೊತ್ತು ಮಾಡಿಕೊಂಡು ನಡೆದುಕೊಂಡೇ ಹೊರಟಳು.

ಅವಳ ಜೀವನದಲ್ಲಿ ಹಾಸ್ಟೆಲಿನಲ್ಲಿ ವಾಸ ಮಾಡುತ್ತಿದ್ದುದು ಇದೇ ಮೊದಲು. ಹಾಸ್ಟೆಲಿನ ಜೀವನ ಹೇಗಿರುತ್ತದೋ ನೋಡಬೇಕು ಎಂಬ ಕುತೂಹಲ ಅವಳಿಗಿತ್ತು.

ಮೀರ ಹಾಸ್ಟೆಲು ತಲುಪಿ ವಾರ್ಡನ್‌ರವರಿಂದ ತನ್ನ ರೂಮಿನ ಬೀಗದ ಕೈಯನ್ನು ಪಡೆದು ರೂಮಿನ ಬೀಗವನ್ನು ತೆಗೆದಳು. ಅವಳ ರೂಮ್‌ಮೇಟ್ ಮನೋರಮಾ ಇನ್ನೂ ಬಂದಿರಲಿಲ್ಲ. ರೈಲು ಪ್ರಯಾಣದಿಂದ ಬಳಲಿದ ಮೀರ ಮಂಚದ ಮೇಲೆ ಹಾಸಿಗೆ ಉರುಳಿಸಿ ಮಲಗಿಕೊಂಡಳು.

ಊಟದ ಗಂಟೆಯಾದೊಡನೆ ತಟ್ಟೆ ಬಟ್ಟಲನ್ನು ತೆಗೆದುಕೊಂಡು ಹುಡುಗಿಯರು ಊಟದ ಮನೆಯ ಕಡೆ ಹೊರಟರು. ಸೀನಿಯರ್ ಹುಡುಗಿಯರು

ಜೂನಿಯರ್ ವಿದ್ಯಾರ್ಥಿನಿಯರಲ್ಲಿ ಯಾವ ವಿಧವಾದ ಕುತೂಹಲವನ್ನಾಗಲೀ, ಆಸಕ್ತಿಯನ್ನಾಗಲೀ ತೋರಿಸಲಿಲ್ಲ. ಅವರೆಲ್ಲರೂ ತಮ್ಮ ಉಪಾಧ್ಯಾಯರ, ಸಹಾಧ್ಯಾಯಿಗಳ ಟೀಕೆಯಲ್ಲಿ ಮಗ್ನರಾಗಿದ್ದರು. ತನ್ನಂತೆಯೇ ಪೆಚ್ಚುಪೆಚ್ಚಾಗಿ ಕುಳಿತಿದ್ದ ಮತ್ತಿಬ್ಬರು ಹುಡುಗಿಯರು ಜೂನಿಯರ್ ವಿದ್ಯಾರ್ಥಿನಿಯರಿರಬೇಕೆಂದು ಮೀರ ಭಾವಿಸಿದಳು. ಅವಳ ಭಾವನೆ ಸುಳ್ಳಾಗಿರಲಿಲ್ಲ.

ಚಿಕ್ಕಮಗಳೂರಿನ ಕಾಫಿ ಪ್ಲಾಂಟರರ ಮಗಳು ಡಾಲಿ ಇಂಟರ್ ಮುಗಿಸಿ ಮೆಡಿಕಲ್ ಓದಲು ಬಂದಿದ್ದಳು. ಇಂಟರ್‌ನಲ್ಲಿ ಮೂರನೆ ದರ್ಜೆಯಲ್ಲಿ ಪಾಸಾಗಿದ್ದರೂ ಹಿಂದುಳಿದ ಪಂಗಡ ಎಂಬ ಒಂದೇ ಒಂದು ಅರ್ಹತೆಯ ಮೇಲೆ ಅವಳಿಗೆ ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಕ್ಕಿತ್ತು.

ಊಟಕ್ಕೆ ಕುಳಿತಿದ್ದಾಗ ಮೀರಳಿಗೆ ಡಾಲಿ, ಯಶೋದೆಯ ಪರಿಚಯ ವಾಯಿತು. ಯಶೋದ ಬಾಟನಿ ಆನರ್ಸ್ ಮುಗಿಸಿ ಮೆಡಿಕಲ್ ಕಾಲೇಜನ್ನು ಸೇರಿದ್ದಳು. ಊಟ ಮಾಡುವಾಗ ಡಾಲಿ ತನ್ನ ಪುರಾಣ ಬಿಚ್ಚಿದಳು.

"ನನಗೇನೋ ಡಾಕ್ಟರಾಗಬೇಕೂಂತ ಸ್ವಲ್ಪವೂ ಆಸೆಯಿಲ್ಲ. ಮೆಡಿಕಲ್ ಕಾಲೇಜಿನ ಬೆಡಗಿನ ಜೀವನವನ್ನು ಮೋಹಿಸಿ ನಾನು ಇಲ್ಲಿಗೆ ಬಂದೆ. ಇಲ್ಲಿ ಹಾಯಾಗಿ ಯಾರ ಅಂಕೆಯೂ ಇಲ್ಲದೆ ಇರಬಹುದು."

ಅವಳ ಮಾತು ಕೇಳಿ ಮೀರಳಿಗೆ ಜುಗುಪ್ಸೆಯಾಯಿತು. ಊಟ ಮುಗಿಸಿ ರೂಮಿಗೆ ತೆರಳುವ ಮುನ್ನ ಡಾಲಿ ಮೀರಳಿಗೆ,

"ಸಂಜೆ ಷಾಪಿಂಗಿಗೆ ಹೋಗೋಣ. ನಾಳೆ ಕಾಲೇಜಿಗೆ ಉಟ್ಟುಕೊಂಡು ಹೋಗೋಕೆ ನನ್ನಲ್ಲಿ ಒಂದು ಸರಿಯಾದ ಸೀರೆಯಿಲ್ಲ. ಬರ್‍ತೀರಾ?" ಎಂದಳು.

"ಕ್ಷಮಿಸಿ, ನನಗೆ ಬೇರೆ ಕೆಲಸವಿದೆ."

ಸಂಜೆ ಡಾಲಿ ಯುವಕನೊಬ್ಬನೊಡನೆ ಷಾಪಿಂಗ್‌ಗೆ ಹೊರಟಳು. ತನ್ನನ್ನೇ ಪ್ರಶ್ನಾರ್ಥಕವಾಗಿ ನೋಡುತ್ತಿದ್ದ ಮೀರ, ಯಶೋದೆಯ ಕಡೆ ತಿರುಗಿ ಡಾಲಿ,

"ಇವರು ನನ್ನ ಕಸಿನ್" ಎಂದಳು.

ಸಿನಿಮಾ ತಾರೆಯರ ಚಿತ್ರಗಳಿದ್ದ ಬುಷ್‌ಕೋಟ್ ಹಾಕಿಕೊಂಡಿದ್ದ ಆ ತರುಣ, ಮೀರ, ಯಶೋದರಿಗೆ ಕೈಮುಗಿದು ಡಾಲಿಯೊಡನೆ ಹೊರಟ.

ರಾತ್ರಿಯ ಟ್ರೈನಿನಲ್ಲಿ ಮೀರಳ ರೂಮ್‌ಮೇಟ್ ಮನೋರಮಾ ಹಾಸನ ದಿಂದ ಬಂದಳು.

ರಾತ್ರಿ ಡೈನಿಂಗ್ ಹಾಲಿನಲ್ಲಿ ಡಾಲಿ ತಾನು ಕೊಂಡ ಸಾಮಾನುಗಳ ವರ್ಣನೆ ಮಾಡಿದಳು. ಅವಳು ಮಾರನೆಯ ದಿನ ಕಾಲೇಜಿಗೆ ಉಡಲು, ಯಾವುದೋ

ಚಿತ್ರವೊಂದರಲ್ಲಿ ಪ್ರಸಿದ್ಧ ನಟಿಯೊಬ್ಬಳು ಆತ್ಮಹತ್ಯೆ ಮಾಡಿಕೊಳ್ಳಲು ಹೊರಟಾಗ ಉಟ್ಟಿದ್ದ ಮಾದರಿಯ ಸೀರೆಯನ್ನೇ ತಂದಿದ್ದಳಂತೆ.

ಅವಳ ವರ್ಣನೆ ಕೇಳಿ ಮೀರಳಿಗೆ ತುಂಬಾ ನಗು ಬಂತು.

"ಆದರೆ ನೀವು ಆತ್ಮಹತ್ಯೆಗೆ ಹೊರಟಿಲ್ಲ ತಾನೆ?"

"ಇಲ್ಲಮ್ಮ, ಬದುಕಿನ ಹಣ್ಣಿನ ರುಚಿ ನಾನಿನ್ನೂ ನೋಡಿಲ್ಲ."

"ಆತುರ ಪಡಬೇಡಿ. ಹಣ್ಣು ಸಿಹಿಯಾಗಿಯೇ ಇರುತ್ತೇಂತ ಏನು ಖಾತ್ರಿ? ಕಹಿಯಾಗಿಯೂ ಇರಬಹುದಲ್ಲವೇ?"

"ನನ್ನ ಹೆದರಿಸಬೇಡೀಪ್ಪ."

"ಇಲ್ಲಮ್ಮ ಇಲ್ಲ. ಧೈರ್ಯವಾಗಿ ಜೀವನ ಎದುರಿಸಿ."

ಮೀರಳ ರೂಮಿನ ಬಳಿ ಎಲ್ಲರೂ ಚದುರಿದರು. ಮೀರಳಿಗೆ ರಾತ್ರಿ ಚೆನ್ನಾಗಿ ನಿದ್ದೆ ಬರಲಿಲ್ಲ. ಹೊಸ ಜಾಗ, ಹೊಸ ಬಗೆಯ ಜೀವನ ಅವಳಲ್ಲಿ ಅಧೈರ್ಯವನ್ನು ಹುಟ್ಟಿಸಿದವು.

ಮೀರ ಸುತ್ತಲೂ ನೋಡಿದಳು. ಎದುರು ಮಂಚದ ಮೇಲೆ ಮನೋರಮಾ ಸುಖವಾಗಿ ಮಲಗಿ ನಿದ್ರಿಸುತ್ತಿದ್ದಳು.

ಈಗ ಅವರೇನು ಮಾಡ್ತಿದಾರೋ? 'ಹೋದಕೂಡಲೇ ಕಾಗದ ಹಾಕು' ಎಂದಿದ್ದರು. ತಾನು ಮರೆತೇಬಿಟ್ಟಿದ್ದಳು.

ಮೀರ ತಟ್ಟನೆ ಮೇಲೆದ್ದು ದೀಪ ಹಚ್ಚಿ ಕಾಗದ ಬರೆಯತೊಡಗಿದಳು. ದೀಪ ಹಾಕಿದೊಡನೆ ಮನೋರಮಾಗೆ ಎಚ್ಚರವಾಯಿತು.

"ಏನು ಮಾಡ್ತಿದೀರಿ ಮೀರ?"

"ಕಾಗದ ಬರೀತಿದೀನಿ."

"ಯಾರಿಗೆ?"

"ಮನೆಯವರಿಗೆ."

"ಪಾಪ! ಅಮ್ಮನ್ನ ಬಿಟ್ಟಿರಲಾರಿರಿ ಎಂದು ತೋರುತ್ತದೆ, ಅಲ್ಲವೇ?"

ಮೀರ ಮಾತನಾಡಲಿಲ್ಲ. ಅವಳು ಕಾಗದ, ಪೆನ್ನು ತೆಗೆದಿಟ್ಟು ದೀಪ ಆರಿಸಿದಳು.

"ಯಾಕೆ ಕಾಗದ ಬರೆಯೋಲ್ಲವೇ?".

"ನಾಳೆ ಬರೀತೀನಿ."

"ಹೋಗಲಿ, ಈಗ ನಿದ್ದೆ ಮಾಡಿ. ಗುಡ್‌ನೈಟ್."

ಮಾರನೆಯ ದಿನ ಮೀರಾ ಕಾಲೇಜಿಗೆ ಹೊರಟಳು. ಅನೇಕ ವರ್ಷಗಳ

ತಪಸ್ಸಿನ ಪ್ರತಿಫಲವಾಗಿ ಅವಳು ಈ ವಿದ್ಯಾಮಂದಿರದೆದುರಿನಲ್ಲಿ ಭಕ್ತೆಯಾಗಿ ನಿಂತಿದ್ದಳು.

ಮೀರ ಕಾಂಪೌಂಡಿಗೆ ಕಾಲಿಡುತ್ತಿದ್ದಂತೆಯೇ ಹಿಂದಿನಿಂದ ಯಾರೋ ಬಂದು ಮೀರಳ ಬೆನ್ನಿನ ಮೇಲೆ ಮೃದುವಾಗಿ ಹೊಡೆದರು. ಮೀರ ಬೆಚ್ಚಿ ತಿರುಗಿ ನೋಡಿದಳು.

"ವಿಜಯ ಪರಾಂಜಪೆ!"

"ಜೀ ಹಾಂ. ತಾವು ಹೇಗಿದೀರಿ?" ವಿಜಯ ನಗುತ್ತಾ ಪ್ರಶ್ನಿಸಿದಳು. ಉಂಗುರದ ಮಾದರಿಯ ಲೋಲಕ್ಕು ಅವಳ ಗೋಧಿ ಬಣ್ಣದ ಕೆನ್ನೆಯ ಮೇಲೆ ತೂಗಾಡಿತು. ಅವಳ ಶಿಶುಮುಖ ಆನಂದದಿಂದ ಅರಳಿತ್ತು.

"ನೀವೆಲ್ಲಿ ತಪ್ಪಿಸಿಕೊಂಡುಬಿಡ್ತೀರೋಂತ ಹೆದರಿಕೆಯಾಗಿತ್ತು."

"ಏನೋ ಅದೃಷ್ಟ ಚೆನ್ನಾಗಿತ್ತು."

ಪ್ರೀ ಮೆಡಿಕಲ್‌ನಲ್ಲಿ ಒಂಬತ್ತು ಜನ ಹುಡುಗಿಯರಿದ್ದರು. ಮೀರ ಸೀನಿಯರ್ ವಿದ್ಯಾರ್ಥಿಗಳನ್ನು ಭಯಭಕ್ತಿಯಿಂದ ನೋಡಿದಳು. ಅವರು ಆಗಲೇ ದೇಹದ, ಸೃಷ್ಟಿಯ ರಹಸ್ಯ, ವೈಚಿತ್ರ್ಯಗಳನ್ನೆಲ್ಲ ತಿಳಿದುಕೊಂಡಿರುವವರಲ್ಲವೇ?

ತರಗತಿಗಳು ಮೊದಲಾದವು. ದಿನಗಳು ಉರುಳಿದವು. ಮೆಡಿಕಲ್ ಕಾಲೇಜಿಗೆ ಮೀರ ಹಳಬಳಾದಳು.

ವಿಜಯ, ಮೀರ ಗೆಳತಿಯರಾದರು. ತಾನು ಬಾಟನಿ ಆನರ್ಸ್ ಮಾಡಿ ಬಂದಿರುವೆನೆಂಬ ಜಂಭ ಯಶೋದೆಗಿತ್ತು. ಡಾಲಿಯನ್ನಂತೂ ಯಾರೂ ಮಾತನಾಡಿಸುವ ಹಾಗೇ ಇರಲಿಲ್ಲ. ಅವಳ ತಂದೆ ಮಗಳು ಕೇಳಿದಾಗಲೆಲ್ಲಾ ಊರಿನಿಂದ ಹಣ ಕಳಿಸುತ್ತಿದ್ದರು. ಡಾಲಿ ಆ ಹಣವನ್ನು ಸೀರೆ, ಸಿನಿಮಾ, ಹೋಟಲು, ಕಾಸ್ಮೆಟಿಕ್ಸ್ ಮೊದಲಾದವುಗಳಿಗಾಗಿ ಖರ್ಚು ಮಾಡುತ್ತಿದ್ದಳು. ಸಾಲದುದಕ್ಕೆ ವಾರಕ್ಕೆರಡು ಮೂರು ಬಾರಿ ಯಾರಾದರೂ ಅವಳ 'ಕಸಿನ್'ಗಳು ಬರುತ್ತಿದ್ದರು.

ಒಂದು ಭಾನುವಾರ ಡಾಲಿ ಇಂಗ್ಲಿಷ್ ಚಿತ್ರವೊಂದಕ್ಕೆ ಹೊರಟಿದ್ದಳು. ಅದಕ್ಕೆ ಮೂರು ದಿನದಿಂದಲೂ ಮೀರಳನ್ನೂ ತನ್ನೊಡನೆ ಬರುವಂತೆ ಒತ್ತಾಯ ಮಾಡಿದ್ದಳು.

ಇಂಗ್ಲೀಷ್ ಚಿತ್ರಗಳೆಂದರೆ ಮೀರಳಿಗೇನೋ ಆಸೆ. ಆದರೆ ಡಾಲಿಯೊಡನೆ ಹೋಗುವುದು ಮೀರಳಿಗಿಷ್ಟವಿರಲಿಲ್ಲ. ಡಾಲಿಯ ಒತ್ತಾಯಕ್ಕೆ ಕಟ್ಟುಬಿದ್ದು 'ಕಂಟ್ರಿಗರ್ಲ್' ಚಿತ್ರವನ್ನು ನೋಡಲು ಮೀರ ಒಪ್ಪಿಕೊಂಡಳು. 'ಕಂಟ್ರಿಗರ್ಲ್' ಉತ್ತಮವೆಂದು ಎಲ್ಲ ವಿಮರ್ಶಕರೂ ಹೊಗಳಿದ್ದರು. ಆದರೆ ಒಂದು ಶರತ್ತಿನ

ಮೇಲೆ ಮೀರ ಅವಳೊಡನೆ ಚಿತ್ರಕ್ಕೆ ಹೋಗಲು ಒಪ್ಪಿಕೊಂಡಳು.

"ನಿಮ್ಮ ಕಸಿನ್ ಯಾರೂ ಬರುವುದಿಲ್ಲ ತಾನೆ?"

ಡಾಲಿಯ ಮುಖ ಕೆಂಪಾಯಿತು. ಅವಳು ತಡವರಿಸುತ್ತಾ, "ಇಲ್ಲ" ಎಂದಳು.

"ಈಗಲೇ ಹೇಳಿಬಿಡಿ. ನಿಮ್ಮ ಕಸಿನ್ ಯಾರಾದರೂ ಬರುವ ಹಾಗಿದ್ದರೆ ನಾನು ಬರೋದಿಲ್ಲ."

"ಯಾರೂ ಬರೋದಿಲ್ಲ."

ಮೀರ ಡಾಲಿಯೊಡನೆ ಚಿತ್ರಕ್ಕೆ ಹೊರಟಳು. ಡಾಲಿ ತಾನೇ ಮುಂದುವರಿದು ಬಾಲ್ಕನಿಗೆ ಟಿಕೇಟು ತೆಗೆದುಕೊಂಡಳು. ಮೆಟ್ಟಿಲಿನ ಬಳಿಯೇ ಡಾಲಿಯ 'ಫೇರ್ ಕಸಿನ್' ಕಾಯುತ್ತಿದ್ದ.

"ಹಲೋ ಡಾಲಿ, ನೀನೂ ಚಿತ್ರಕ್ಕೆ ಬಂದೆಯಾ?"

"ಹೂಂ. ಈಕೆ ಮೀರಾ. ಇವರು ನನ್ನ ಕಸಿನ್ ಜಾನಿ."

"ಜಾನಿ!"

ಮೀರ ಬೆಚ್ಚಿದಳು. ವೀಣಾಳ ಮುಖ ಅವಳ ಮುಂದೆ ತೇಲಿ ಬಂದಂತಾಯಿತು. ಶಾಮು ವೀಣಾಳನ್ನು 'ಜಾನಿ' ಎಂದು ಕರೆಯುತ್ತಿರಲಿಲ್ಲವೇ? ಮೀರ ಬಿಗಿಯಾಗಿ ಮೆಟ್ಟಿಲಿನ ಕಟಕಟೆಯನ್ನು ಹಿಡಿದುಕೊಂಡಳು.

"ಏನಾಯಿತು?" ಜಾನಿ ಕೇಳಿದ.

"ಏನಿಲ್ಲ ತಲೆ ತಿರುಗಿದಂತಾಯಿತು."

ಜಾನಿ ಬಹಳ ನಮ್ರತೆಯಿಂದ ತನ್ನ ಬಲಗೈಯನ್ನು ಅವಳಿಗೆ ಆಸರೆ ಕೊಡುವುದಕ್ಕಾಗಿ ನೀಡಿದ.

"ಕೈ ಹಿಡಿದುಕೊಂಡು ಹೋಗುವಂತ ಪ್ರಮಾದವೇನೂ ಆಗಿಲ್ಲ" ಎಂದು ಮೀರ ನಮ್ರವಾಗಿ ಹೇಳಿದಳು.

ಚಿತ್ರ ಮುಗಿದು ಹಾಸ್ಟೆಲಿಗೆ ಬಂದೊಡನೆಯೇ ಮೀರ ಡಾಲಿಯನ್ನು ತರಾಟೆಗೆ ತೆಗೆದುಕೊಂಡಳು.

"ನಿಮ್ಮ ಫೇರ್ ಕಸಿನ್ ಯಾಕೆ ಬಂದಿದ್ದ? ನೀವೇ ಕರೆದಿದ್ದಿರಾ?"

ಡಾಲಿ ತಬ್ಬಿಬ್ಬಾಗಿ ನುಡಿದಳು.

"ಇಲ್ಲ, ಅವನು ಬಂದಿದ್ದು ಆಕಸ್ಮಿಕ ಅಷ್ಟೇ."

"ನಿಜ ಹೇಳಿ. ಸುಳ್ಳಾಡಬೇಡಿ. ನೀವು ಸುಳ್ಳು ಹೇಳ್ತಿದೀರೀಂತ ನನಗೆ ಗೊತ್ತಾಗಿದೆ. ನೀವು ಮುಂಚೇನೆ ಅವನಿಗೆ ಚಿತ್ರಕ್ಕೆ ಹೋಗುವ ಸೂಚನೆ ಕೊಟ್ಟು ಆಮೇಲೆ ನನ್ನೂ ಕರ್‍ಕೊಂಡು ಹೋಗಿದೀರಿ ಅಲ್ವೆ?"

ಡಾಲಿ ನಿಜವನ್ನು ಒಪ್ಪಿಕೊಂಡಳು.

"ನನ್ನದು ತಪ್ಪಾಯಿತು ಮೀರ. ನನ್ನ ಕಸಿನ್ ನಾವಿಬ್ಬರೂ ಮಾರ್ಕೆಟ್ಟಿನಲ್ಲಿ ಹೋಗುತ್ತಿದ್ದಾಗ ನೋಡಿದನಂತೆ. ಅಂದಿನಿಂದ ಒಂದೇ ಸಮ ನಿಮ್ಮನ್ನು ಪರಿಚಯ ಮಾಡಿಕೊಡೆಂದು ಅವನು ನನ್ನ ಪ್ರಾಣ ಹಿಂಡಿದ. ನಾನು ಎಷ್ಟೋ ಹೇಳಿದೆ, 'ಬೇಡ ಆಕೆ ಬಹಳ ಸೀರಿಯಸ್' ಅಂತ. ಆದರೆ ಅವನು ಬಿಡಲಿಲ್ಲ. 'ನೀನು ಜಲಸ್ ಆಗಿದೀಯಾ' ಅಂತ ರೇಗಿಸಿದ. ಅದಕ್ಕೆ ನಿಮ್ಮನ್ನು ಅವನಿಗೆ ಗುರುತು ಮಾಡಿಸೋದಕ್ಕೆ ಒಪ್ಪಿಕೊಂಡೆ. ಚಿತ್ರಕ್ಕೆ ಕರ್ಕೊಂಡು ಬಾ ಅಂತ ಹೇಳಿದ್ದೂ ಅವನ ಸಲಹೆಯೇ, ನನ್ನದಲ್ಲ."

ಮೀರ ಗಂಭೀರ ಧ್ವನಿಯಿಂದ ಹೇಳಿದಳು.

"ನಿಮ್ಮ ಕಸಿನ್‌ಗೆ ಹೇಳಿಬಿಡಿ, ಪರಿಚಯವಿದೇಂತ ಸಲಿಗೆಗೆ ಪ್ರಯತ್ನಿಸ ದಿರಲಿ. ಅವನೇನಾದರೂ ಬೀದೀಲಿ ಮಾತುಗೀತಾಡಿಸೋಕೆ ಪ್ರಯತ್ನಿಸಿದರೆ...." ಮೀರಳ ಕಣ್ಣು ಮಂಚದ ಕೆಳಗಿದ್ದ ಚಪ್ಪಲಿಯ ಕಡೆ ಹರಿಯಿತು.

ಡಾಲಿಯ ಮುಖದ ಮೇಲೆ ಬೆವರ ಹನಿಗಳು ಮೂಡಿದವು.

"ಆಗಲಿ. ನಾನಿನ್ನು ಬರ್‍ತೀನಿ."

"ಒಂದು ನಿಮಿಷ ನಿಲ್ಲಿ" ಎನ್ನುತ್ತಾ ಮೀರಾ ತನ್ನ ಪರ್ಸನ್ನು ತೆಗೆದು ಒಂದೂ ಕಾಲು ರೂಪಾಯಿಯನ್ನು ಡಾಲಿಯ ಕೈಲಿರಿಸಿ "ನನ್ನ ಟಿಕೇಟಿನ ಹಣ ಇದು. ನಿಮ್ಮ ಹಂಗು ನನಗೆ ಬೇಡ" ಎಂದಳು.

"ಬೇಡ, ಬೇಡ ಸ್ನೇಹಿತರೂಂದ ಮೇಲೆ...."

"ನಮ್ಮ ನಿಮ್ಮ ಸ್ನೇಹ ಹಣದ ವಿಷಯಕ್ಕೆ ಬೇಡ."

ಡಾಲಿ ಹಣ ತೆಗೆದುಕೊಂಡು ಹೊರಟುಹೋದಳು. ಮೀರಳನ್ನು ಮತ್ತೆ ಮಾತನಾಡಿಸುವ ಸಾಹಸ ಅವಳಲ್ಲಿರಲಿಲ್ಲ.

ಡಾಲಿಯ ಸಂಧಾನಯತ್ನ ಮೀರಳಿಂದ ಕೇಳಿ ವಿಜಯಾ ಬೆಟ್ಟು ಕಚ್ಚಿದಳು.

"ನೀವಾಗುವ ಹೊತ್ತಿಗೆ ಸುಮ್ಮನಿದ್ದಿರಿ. ನಾನಾಗಿದ್ದರೆ ಥಿಯೇಟರಿನಲ್ಲೇ ಇಬ್ಬರಿಗೂ ಚಪ್ಪಲಿಯಿಂದ ಹೊಡೆದು ಮನೆಗೆ ಬರುತ್ತಿದ್ದೆ."

"ಡಾಲಿಯ ಕಸಿನ್‌ಗಳ ಕಾಟವಂತೂ ಹೇಳೋಕಾಗೋದಿಲ್ಲ. ದಿನಕ್ಕೆ ಒಬ್ಬೊಬ್ಬ ಕಸಿನ್ ಬರ್‍ತಾನೆ. ಅವರೇನು ನಿಜವಾದ ಕಸಿನ್‌ಗಳೋ ಅಥವಾ...."

"ಅವಳ ಪಾಡು ಹಾಳಾಗಲಿ. ನಮಗೇಕೆ? ನಮ್ಮ ತಂಟೆಗೆ ಅವರು ಬರದಿದ್ದರೆ ಸಾಕು."

ಅಂದಿನಿಂದ ಡಾಲಿ ಮೀರಳನ್ನು ಎಲ್ಲಿಗೂ ಕರೆಯುತ್ತಿರಲಿಲ್ಲ.

ಕೃಷ್ಣಪ್ಪನವರು ಆಗಾಗ್ಗೆ ಮೀರಳನ್ನು ನೋಡಲು ಬರುತ್ತಿದ್ದರು. ಅವರು ಬಂದು ಹೋಗುವವರೆವಿಗೆ ಮಾತನಾಡುತ್ತಿದ್ದ ವಿಷಯ ಒಂದೇ ಆಗಿತ್ತು.

"ಓದುವುದು ಬೇಡ. ಶಾಮುವಿನೊಡನೆ ಸಂಸಾರ ಮಾಡಿಕೊಂಡಿರು."

ಅವರ ಮಾತು ಕೇಳಿ ಕೇಳಿ ಮೀರಳಿಗೆ ತಲೆಚಿಟ್ಟು ಹಿಡಿದುಹೋಗುತ್ತಿತ್ತು. ಅವರು ಬಂದು ಹೋದ ಎರಡು ದಿನಗಳು ಮೀರಳ ಕಿವಿಯಲ್ಲಿ ದೊಡ್ಡಪ್ಪನ ಮಾತುಗಳೇ ಪ್ರತಿಧ್ವನಿಸುತ್ತಿದ್ದವು. ಯಾವುದೋ ಒಂದು ರೀತಿಯಲ್ಲಿ ಸಮಾಧಾನಕ್ಕೆ ಬರುತ್ತಿದ್ದ ಮನಸ್ಸು ಗಾಳಿ ಬೀಸಿದಾಗ ಹತ್ತಿಕೊಳ್ಳುವ ಉರಿಯಂತೆ ಹತ್ತಿಕೊಳ್ಳುತ್ತಿತ್ತು. ಈ ಅಶಾಂತಿಯಿಂದಾಗಿ ಅವಳ ಮನಸ್ಸು ಸ್ಥಿರವಾಗಿ ನಿಲ್ಲುತ್ತಿರಲಿಲ್ಲ. ಕ್ಲಾಸಿನಲ್ಲಿ ಮಾಡಿದ ಪಾಠಗಳು ತಲೆಗೆ ಹಿಡಿಯುತ್ತಿರಲಿಲ್ಲ. ಏನು ಮಾಡಬೇಕೆಂಬುದೇ ಮೀರಳಿಗೆ ತೋರದಾಯಿತು. ಯಾವುದೂ ಬಗೆಹರಿಯದೆ ಮೀರ ಶಾಮುವಿಗೆ ಕಾಗದ ಬರೆದಳು. ಕಾಗದದಲ್ಲಿ ದೊಡ್ಡಪ್ಪನಿಂದ ತನಗಾಗುತ್ತಿದ್ದ ತೊಂದರೆಯನ್ನು ವಿವರಿಸಿ, ಹೇಗಾದರೂ ಮಾಡಿ ಅವರು ಹಾಸ್ಟೆಲಿಗೆ ಬರುವುದನ್ನು ತಪ್ಪಿಸುವಂತೆ, ಅಥವಾ ಬಂದರೂ ಈ ವಿಷಯ ಮಾತನಾಡದಂತೆ ಮಾಡಬೇಕೆಂದು ಶಾಮುವನ್ನು ಕೇಳಿಕೊಂಡಿದ್ದಳು.

ಮೀರ ಶಾಮುವಿಗೆ ಕಾಗದ ಬರೆದ ಹದಿನೈದು ದಿನಗಳ ಮೇಲೆ ಒಂದು ದಿನ ಕೃಷ್ಣಪ್ಪನವರು ಮೀರಳನ್ನು ನೋಡಲು ಹಾಸ್ಟೆಲಿಗೆ ಬಂದರು.

ಪ್ರೀ ಮೆಡಿಕಲ್ ಪರೀಕ್ಷೆ ಆಗಲೇ ಹತ್ತಿರವಾಗುತ್ತಿದ್ದುದರಿಂದ ಮೀರ ಕೈಲಿ ಪುಸ್ತಕ ಹಿಡಿದು, ಹಾಸ್ಟೆಲಿನ ಕಾಂಪೌಂಡಿನಲ್ಲಿದ್ದ ಮರವೊಂದರ ಕೆಳಗೆ ಓದುತ್ತಿದ್ದಳು. ವಾರ್ಡನ್ನರ ಸಮ್ಮತಿ ಪಡೆದು ಕೃಷ್ಣಪ್ಪನವರು ವಿಸಿಟರ್ಸ್ ರೂಮಿಗೆ ಹೋದರು. ಮನೋರಮಾ ಓಡಿ ಬಂದು,

"ನಿಮ್ಮ ದೊಡ್ಡಪ್ಪ ಬಂದಿದಾರೆ" ಎಂದಳು.

ಮೀರ ಹುಬ್ಬುಗಂಟಿಕ್ಕಿ ಬೇಸರದಿಂದ "ಸರಿ" ಎನ್ನುತ್ತಾ ಪುಸ್ತಕವನ್ನು ಮುಚ್ಚಿ ವಿಸಿಟರ್ಸ್ ರೂಮಿಗೆ ಹೋದಳು.

ವಿಸಿಟರ್ಸ್ ರೂಮಿನಲ್ಲಿ ಕೃಷ್ಣಪ್ಪನವರ ಹೊರತು ಬೇರೆ ಯಾರೂ ಇರಲಿಲ್ಲ. ದೊಡ್ಡಪ್ಪನನ್ನು ಕಂಡೊಡನೆ ಮೀರ ಹಸನ್ಮುಖದಿಂದ,

"ಏನು ಸಮಾಚಾರ?" ಎಂದಳು.

"ಶಾಮು ಬಂದಿದ್ದ. ಇವತ್ತು ಬೆಳಿಗ್ಗೆ ಬಂದು ಮಧ್ಯಾಹ್ನದ ರೈಲಿಗೆ ಹೊರಟು ಹೋದ...."

"ಏನು?"

ಮೀರಳ ಮುಖದಲ್ಲಿದ್ದ ಆಶ್ಚರ್ಯ ಗಮನಿಸಿ ದೊಡ್ಡಪ್ಪ ಕೇಳಿದರು,

"ಯಾಕೆ ನಿನ್ನ ನೋಡೋಕೆ ಬರಲಿಲ್ಲವೇನು?"

"ಇಲ್ಲ. ಅಲ್ಲೇ ಊಟ ಮಾಡಿ ಹೋದರೇನು?"

"ಹೂಂ. 'ರೈಲಿಗೆ ಹೋಗುವಾಗ ಹಾಸ್ಟೆಲಿಗೆ ಹೋಗಿ ನಿನ್ನ ನೋಡಿಕೊಂಡು ಹೋಗುತ್ತೇನೆ' ಎಂದು ಹೇಳಿದ. ಯಾಕೆ ಬರಲಿಲ್ಲವೋ?"

ಮೀರ ತನ್ನ ಭಾವನೆಗಳನ್ನು ಅದುಮಲು "ರೈಲಿಗೆ ಹೊತ್ತಾಯಿತೂಂತ ಏನಾದರೂ ಹೊರಟುಹೋದರೋ ಏನೋ" ಎಂದಳು.

ಕೃಷ್ಣಪ್ಪನವರು ಸುತ್ತಲೂ ನೋಡಿ ದನಿ ತಗ್ಗಿಸಿ,

"ಮೀರಾ, ನೀನು ಶಾಮು ಜಗಳವಾಡಿರುವಿರಾ?" ಎಂದರು.

"ಇಲ್ಲ."

"ಹಾಗಾದರೆ ಶಾಮು ನಿನ್ನ ನೋಡೋಕೆ ಯಾಕೆ ಬರಲಿಲ?"

"ನನಗೆ ಗೊತ್ತಿಲ್ಲ. ಆದರೆ ನಿಮ್ಮನ್ನು ನೋಡೋಕೆ ಯಾಕೆ ಬಂದಿದ್ದರು?"

"ಇಲ್ಲಿಗೆ ಏನೋ ಕೆಲಸದ ಮೇಲೆ ಬಂದಿದ್ದನಂತೆ. ಹಾಗೇ ನನ್ನ ನೋಡಿ ತುಂಬಾ ದಿನವಾಯಿತೂಂತ ಬಂದನಂತೆ. ನಾನು ಇದುವರೆವಿಗೂ ನಿನ್ನ ತಪ್ಪು ತಿಳಿದುಕೊಂಡಿದ್ದೆ ಮೀರ. ಈ ದಿನ ನಿಜಸಂಗತಿ ಶಾಮುವಿನಿಂದ ತಿಳಿಯಿತು."

"ಯಾವ ಸಂಗತಿ?"

"ನೀನು ಹಠ ಮಾಡಿ ಓದಲು ಗಂಡನನ್ನೂ ಬಿಟ್ಟು ಇಲ್ಲಿಗೆ ಬಂದಿರಬೇಕೆಂದು ನಾನು ಭಾವಿಸಿದ್ದೆ. ಅದಕ್ಕೇ ನಿನಗೆ ಪುನಃ ಹಳ್ಳಿಗೆ ಹೊರಟುಹೋಗುವಂತೆ ಬಲವಂತ ಮಾಡುತ್ತಿದ್ದೆ. ಇವತ್ತು ಏನೋ ಮಾತಿಗೆ ಮಾತು ಬಂದು ಶಾಮು ಹೇಳಿದ-ಅವನು ತಾನಾಗಿಯೇ ನಿನ್ನ ಓದಲು ಕಳಿಸಿದಾನಂತೆ. ಹೌದೆ?"

"ಹೌದು."

"ನೀನು ಓದಿ ವೈದ್ಯಳಾಗಿ ಅವರ ಹಳ್ಳಿಯ ಸಂಸಾರಗಳಿಗೆ ಸಾಧ್ಯವಾದಷ್ಟು ಸೇವೆ ಮಾಡಲಿ ಎನ್ನುವ ಉದ್ದೇಶದಿಂದ ನಿನ್ನ ಇಲ್ಲಿಗೆ ಕಳಿಸಿರುವುದಾಗಿ ಅವನೇ ಹೇಳಿದ. ಒಟ್ಟಿನಲ್ಲಿ ಶಾಮು ಚಿನ್ನದಂತಹ ಹುಡುಗ."

ಕೃಷ್ಣಪ್ಪನವರು ಹೊರಟುಹೋದೊಡನೆ ಮೀರಾ ತನ್ನ ರೂಮಿಗೆ ಓಡಿಹೋಗಿ ಕಾಗದ, ಪೆನ್ನನ್ನು ಕೈಲಿ ಹಿಡಿದು ಶಾಮುವಿಗೆ ಕೃತಜ್ಞತೆಯನ್ನರ್ಪಿಸಿ ದೊಡ್ಡದೊಂದು ಪತ್ರ ಹಾಕಿದಳು.

ಶಾಮು ತನ್ನನ್ನು ನೋಡದೆ ಹೊರಟುಹೋದುದು ಅವಳ ಮನಸ್ಸಿಗೆ ಪಿಚ್ಚೆನ್ನಿಸಿತು. ಆದರೆ ಶಾಮು ತನ್ನನ್ನು ನೋಡಬೇಕಿತ್ತು ಎಂದು ತಾನು ಬಯಸುವು

ದಾದರೂ ಸರಿಯೇ? ಅದರಲ್ಲೂ ತಾನಾಗಿಯೇ ಅವನನ್ನು ತೊರೆದು ಬಂದಿರುವಾಗ? ತಾನು ಅವನಿಂದ ಬಹಳ ನಿರೀಕ್ಷಿಸಬಾರದಲ್ಲವೇ? ಆದರೂ.... ಆದರೂ.... ಅವರೊಂದು ಬಾರಿ ಇಲ್ಲಿಗೆ ಬಂದಿದ್ರೆ?

* * * * *

ಮೀರ ಪರೀಕ್ಷೆಯಲ್ಲಿ ಚೆನ್ನಾಗಿಯೇ ಮಾಡಿದ್ದಳು. ಅವಳು ತನ್ನ ತನು, ಮನ, ಧನವನ್ನೆಲ್ಲಾ ತನ್ನ ಕನಸಿನ ಮಹಲನ್ನು ಕಟ್ಟಲು ಧಾರೆ ಎರೆದಿದ್ದಳು. ಮೊದಲನೆ ತರಗತಿ ಬರುವುದರಲ್ಲಿ ಯಾವ ಸಂಶಯವೂ ಇರಲಿಲ್ಲ.

ಪರೀಕ್ಷೆ ಮುಗಿಸಿಕೊಂಡು ಮೀರ ಹಳ್ಳಿಗೆ ಹೊರಟಳು. ಅವಳು ಹಳ್ಳಿಗೆ ಹೊರಟ ದಿನವೇ ಡಾಲಿಯೂ ತನ್ನೂರಿಗೆ ಹೊರಟಿದ್ದಳು. ಡಾಲಿಯನ್ನು ಬೀಳ್ಕೊಡಲು ಅವಳ ಏಳೆಂಟು ಯುವಕ 'ಕಸಿನ್ಸ್ ಬಂದಿದದರು. ಎಲ್ಲರ ಕೈಯಲ್ಲೂ ಹೊಗೆ ಕಾರುತ್ತಿದ್ದ ಸಿಗರೇಟು. ಡಾಲಿ ತನ್ನ 'ಫೇರ್ ಕಸಿನ್'ನನ್ನು ಒರಗಿಕೊಂಡೇ ನಿಂತು ಕಿಲಕಿಲನೆ ನಗುತ್ತಿದ್ದಳು. ಅವಳ ಕೈಯಲ್ಲಿ ಏಳೆಂಟು ಆಂಗ್ಲ ಸಿನಿಮಾ ಪತ್ರಿಕೆ ಗಳಿದ್ದವು.

ಮೀರಳನ್ನು ನೋಡಿ ಡಾಲಿಯ 'ಫೇರ್ ಕಸಿನ್' ಹಲ್ಲು ಕಿರಿದ. ಮೀರ ಹುಬ್ಬುಗಂಟಿಕ್ಕಿ ಸರಸರನೆ ಹೋಗಿ ಕಂಪಾರ್ಟ್‌ಮೆಂಟಿನಲ್ಲಿ ಕುಳಿತು, ಬೇರೆ ಕಡೆ ಮುಖ ತಿರುಗಿಸಿಕೊಂಡಳು.

"ಇಂಥಾ ಗುಗ್ಗೂಗಳೆಲ್ಲಾ ಮೆಡಿಕಲ್ ಕಾಲೇಜಿಗೆ ಯಾಕಾದರೂ ಬರುತ್ತವೋ?" ಡಾಲಿಯ ಚಿತ್ರವಿಚಿತ್ರ ಬುಷ್‌ಕೋಟಿನ ಕಸಿನ್ ಹೇಳಿದ.

"ಬಾಯ್‌ಫ್ರೆಂಡ್ಸ್ ಇಲ್ಲದ ಮೇಲೆ ಅದೆಂಥಾ ಜೀವನವೋ?"

"ಅಮೆರಿಕಾದಲ್ಲಿ ಹುಡುಗಿಯರು ತಮಗೆ ಬಾಯ್ ಫ್ರೆಂಡ್ಸ್ ಹೆಚ್ಚಿಗೆ ಇದ್ದಷ್ಟೂ ತಮ್ಮ ಗೌರವ ಹೆಚ್ಚಿದಂತೆ ಎಂದು ಭಾವಿಸಿದ್ದಾರೆ. ನಮ್ಮ ದೇಶ ಇನ್ನೂ ಮುಂದುವರಿಯಬೇಕು ಜಾನಿ."

"ಜಾನಿ!"

ಮತ್ತೆ ಅದೇ ಹೆಸರು, ಯಾವ ಹೆಸರನ್ನು ಅವಳು ಮರೆಯಲು ಯತ್ನಿಸುತ್ತಿದ್ದಳೋ ಮತ್ತೆ ಅದೇ ಹೆಸರು ಅವಳ ಕಿವಿಯ ಮೇಲೆ ಅಪ್ಪಳಿಸುತ್ತಿತ್ತು.

"ಸ್ಟೂಡೆಂಟ್ ದಿನಗಳಲ್ಲಿ ಪೆಟ್ಟಿಂಗ್ ಮತ್ತು ನೆಕಿಂಗ್ ಇಲ್ಲದ ಮೇಲೆ ಅದೆಂಥಾದೋ?"

"ಹಿಯರ್ ಹಿಯರ್."

ಮೀರಳ ಪುಣ್ಯಕ್ಕೆ ಟ್ರೈನು ಹೊರಟಿತು. ಡಾಲಿಯೊಬ್ಬಳ ವಿನಾ ಅವಳ

ಇತರ ಕಸಿನ್ಸುಗಳು ಕೈವಸ್ತ್ರ ಬೀಸಿದರು. ಮೀರ ನಿಟ್ಟುಸಿರು ಬಿಟ್ಟು ಸೀಟಿನ್ನೊರಗಿ ಕುಳಿತುಕೊಂಡಳು.

ಶಾಮುವಿಗೆ ಮೀರ ಬರುವ ಸಂಗತಿ ತಿಳಿದಿರಲಿಲ್ಲ. ಮೀರ ಮನೆಗೆ ಬಂದಾಗ ಶಾಮು ಗದ್ದೆಯಿಂದ ಬಂದಿರಲಿಲ್ಲ. ವೆಂಕಮ್ಮನವರಂತೂ ಮೀರಳನ್ನು ನೋಡಿ ಅತ್ಯಂತ ಸಂಭ್ರಮದಿಂದ "ಬಾಮ್ಮ" ಎಂದರು. ಮೀರ ಬಂದುದು ಅವರಿಗೆ ನೂರು ಜನ ಆಪ್ತನೆಂಟರು ಮನೆಗೆ ಬಂದಷ್ಟೇ ಸಂತೋಷವಾಯಿತು. ಮೀರಳಿಗೆ ಪ್ರಿಯವಾದ ಉಪ್ಪೇರಿಯನ್ನು ಕರಿದು ಅವರು,

"ಊಟಕ್ಕೇಳಮ್ಮ, ಶಾಮು ಯಾವಾಗ ಬರುತ್ತಾನೋ?" ಎಂದರು.

"ಅವರೂ ಬಂದುಬಿಡಲಿ" ಎಂದಳು ಮೀರ.

ಶಾಮು ಮನೆಗೆ ಬಂದಾಗ ಮೀರ ಅಡಿಗೆಯ ಮನೆಯಲ್ಲಿ ಕುಳಿತು ವೆಂಕಮ್ಮನವರೊಡನೆ ಹಾಸ್ಟೆಲಿನ ವಿಷಯವನ್ನು ಹೇಳುತ್ತಿದ್ದಳು. ಮಗಳ ಹೊಸ ಅನುಭವಗಳನ್ನು ಆಲಿಸುವ ತಾಯಿಯಂತೆ ವೆಂಕಮ್ಮನವರು ಅವಳ ಮಾತುಗಳನ್ನು ಕೇಳುತ್ತಿದ್ದರು. ವೆಂಕಮ್ಮನವರು ಮುಗ್ಧತೆಯಿಂದ,

"ಅದೆಲ್ಲಾ ಸರಿ, ನೀವು ಮೂರು ದಿನ ಹೊರಗೆ ಕೂತ್ಕೋತೀರಾ?" ಎಂದು ಕೇಳಿದರು.

ಮೀರ ಬಿದ್ದು ಬಿದ್ದು ನಗಲು ಮೊದಲು ಮಾಡಿದಳು. ವೆಂಕಮ್ಮನವರಿಗೆ ಮಾತ್ರ ತಮ್ಮ ಪ್ರಶ್ನೆ ಉಚಿತವಾದುದೇ ಎಂಬ ಭಾವನೆ. ಮೀರ ನಗಲು ಮೊದಲು ಮಾಡುತ್ತಲೇ ವೆಂಕಮ್ಮನವರು ಬೆರಗಾಗಿ ಅವಳ ಕಡೆ ನೋಡಿದರು.

ಮೀರ ಪಕ್ಕೆ ಹಿಡಿದುಕೊಂಡು, "ಅಮ್ಮಾ.... ನಂಕ್ಕೈಲಿನ್ನಾಗೋದಿಲ್ಲಾ.... ಅಯ್ಯೋ.... ದೇವ್ರೇ" ಎಂದು ನಗುತ್ತಿದ್ದಳು. ಅವಳ ಎರಡು ಕಣ್ಣುಗಳಿಂದಲೂ ನೀರು ಕಿತ್ತು ಹರಿಯಿತು.

ಮನೆಯ ಒಳಗೆ ಬಂದ ಕೂಡಲೇ ಶಾಮುವಿಗೆ ಮೀರಳ ದನಿ ಕೇಳಿಸಿತು. ಆದರೆ ಅವಳು ನಗುತ್ತಿರುವಳೋ, ಅಳುತ್ತಿರುವಳೋ ಎಂಬುದು ತಿಳಿಯದೆ ಶಾಮು ಗಾಬರಿಯಾಗಿ ಅಡಿಗೆಮನೆಗೆ ಓಡಿಬಂದ.

ಮೀರಳ ನಗುವಿನಿಂದ ವೆಂಕಮ್ಮನವರು ಬೆಪ್ಪಾಗಿ ಗೋಡೆಯೊರಗಿ ಕುಳಿತುಬಿಟ್ಟಿದ್ದರು.

"ಮೀರಾ...."

ಶಾಮುವಿನ ದನಿ ಕೇಳಿ ಮೀರಳ ನಗು ತಟ್ಟನೆ ನಿಂತುಹೋಯಿತು.

ಅವಳು ನಗು ನಿಲ್ಲಿಸಿ ಶಾಮುವಿನ ಕಡೆ ನೋಡಿದಳು.

ಹೊಸ ಬಗೆಯ ಜೀವನದಲ್ಲಿ ಮಿಂದು ಬಂದಿದ್ದ ಮೀರ ಶಾಮುವಿನ ಕಣ್ಣಿಗೆ ಹೊಸಬಳಂತೆ ಕಾಣಿಸಿದಳು. ಅವಳ ಮುಖ ಮೊದಲಿಗಿಂತಲೂ ತುಂಬಿ ಕೊಂಡು ಹೊಳಪಿನಿಂದ ಮಿನುಗುತ್ತಿತ್ತು. ನಗುವಿನ ಕಾವಿಗೆ ಅವಳ ಮುಖ ಕೆಂಪಾಗಿತ್ತು.

"ಯಾವಾಗ ಬಂದೆ?"

"ಸ್ವಲ್ಪ ಹೊತ್ತಾಯಿತು. ಊಟಕ್ಕೆ ಬರ್ತೀರಾ?"

"ಬಂದೆ."

ಮೀರ ಗಡಿಬಿಡಿಯಿಂದ ಎದ್ದು ತಟ್ಟೆ, ಮಣೆಗಳನ್ನು ಹಾಕಿದಳು. ಊಟ ಮಾಡುವಾಗ ವೆಂಕಮ್ಮನವರು ಮೀರಳಿಗೆ ಎರಡು ಮಿಳ್ಳೆ ತುಪ್ಪ ಜಾಸ್ತಿ ಹಾಕಿದರು. ಅವರ ವಾತ್ಸಲ್ಯ ಕಂಡು ಮೀರಳ ಕಣ್ಣು ತೇವಗೊಂಡಿತು. ಆಕೆಗೂ, ತನಗೂ ಯಾವ ಸಂಬಂಧವೂ ಇರಲಿಲ್ಲ. ಆದರೂ ತಾನೆಂದರೆ ಆಕೆ ಎಷ್ಟು ಅಕ್ಕರೆ ಪಡುತ್ತಾರೆ?

"ಅಡಿಗೆ ಹೇಗಿದೆಯಮ್ಮ?"

"ಸೊಗಸಾಗಿದೆ. ಹಾಸ್ಟೆಲಿನಲ್ಲಿ ಇಂಥ ಊಟ, ನಿಮ್ಮ ಹಾಗೆ ವಾತ್ಸಲ್ಯದಿಂದ ಬಡಿಸುವವರು ಯಾರಿದ್ದಾರೆ? ಅವರಿಗೆ ನಾವು ಕೊಡುವ ಹಣ ಮುಖ್ಯವೇ ಹೊರತು ನಾವು ಸರಿಯಾಗಿ ಊಟ ಮಾಡುತ್ತೇವೋ ಇಲ್ವೋ ಎನ್ನುವುದು ಮುಖ್ಯವಲ್ಲ."

"ಅಲ್ಲಿ ಸರಿಯಾಗಿ ಬಡಿಸುತ್ತಿದ್ದರೇ?"

"ಹೂಂ. ಆದರೆ ನಿಮ್ಮ ಹಾಗೆ ಪ್ರೀತಿಯಿಂದ ಒಂದು ಮಿಳ್ಳೆ ತುಪ್ಪ ಹಾಕೋರು ಎಲ್ಲಿಂದ ಬರಬೇಕು? ನಾವು ಊಟ ಮಾಡದಿದ್ದರೂ ವಿಚಾರಿಸು ವವರಿಲ್ಲ."

ಮೀರ ವೆಂಕಮ್ಮನವರಿಗೆ ಒಂದು ಒಳ್ಳೆಯ ಮಾತನಾಡಿದುದನ್ನು ನೋಡಿ ಶಾಮು ಪ್ರಸನ್ನಗೊಂಡ.

"ನೀನು ನಗ್ತಾ ಇದ್ದಿದ್ದೇಕೆ?"

ಅದರ ನೆನಪು ಬಂದೊಡನೆ ಊಟ ನಿಲ್ಲಿಸಿ ಮೀರ ಮತ್ತೆ ನಗತೊಡಗಿದಳು.

"ಅದೇನು ಹೇಳಬಾರದೇ? ನಾನೂ ನಿನ್ನೊಡನೆ ಸ್ವಲ್ಪ ನಗ್ತೀನಿ."

"ಅದೆಲ್ಲಾ ನಿಮಗೆ ಹೇಳುವಂತಹ ವಿಷಯವಲ್ಲ."

"ಅದೇನು ಹೇಳೆ ಅಂದ್ರೆ ತುಂಬ ಜಂಭ ಮಾಡ್ತಾಳೆ."

"ಸ್ವಲ್ಪ.... ತಾಳಿ. ನಗು.... ಹತೋಟಿಗೆ........ ಬಂದ್ಮೇಲೆ ಹೇಳ್ತೀನಿ."

ವೆಂಕಮ್ಮನವರು ತೃಪ್ತಿಯಿಂದ ಎದುರಿಗೆ ಊಟ ಮಾಡುತ್ತಿದ್ದ ಜೋಡಿ

ಯನ್ನು ನೋಡಿ ಸಮಾಧಾನ ಪಟ್ಟುಕೊಂಡರು. ಶಾಮು, ಮೀರ ಹೀಗೆ ಅನ್ಯೋನ್ಯ ವಾಗಿದ್ದುದನ್ನು ನೋಡಿ ಎಷ್ಟೋ ತಿಂಗಳಾಗಿ ಹೋಗಿದ್ದವು. ಅವರು ಮೊಸರು ಬಡಿಸಿ,

"ಕರು ಕಟ್ಟೆಹಾಕಿದಾರೋ ಇಲ್ವೋ ನೋಡಿಕೊಂಡು ಬರ್ತೀನಿ" ಎನ್ನುತ್ತಾ ಹೊರಗೆ ಹೋದರು.

ಅವರಿಬ್ಬರೂ ಒಬ್ಬರನ್ನೊಬ್ಬರು ನೋಡಿ ಆರು ತಿಂಗಳಾಗಿದ್ದವು. ಆರು ತಿಂಗಳಿನಲ್ಲಿ ನಡೆದ ವಿಷಯವನ್ನು ಹೇಳಿಕೊಳ್ಳುವುದು ಎಷ್ಟೋ ಉಳಿದಿತ್ತು. ವೆಂಕಮ್ಮನವರು ಹೊರಗೆ ಹೋದೊಡನೆ ಮೀರ ಶಾಮುವನ್ನು ನೋಡಿ,

"ಬಡವಾಗಿರುವ ಹಾಗಿದೆ" ಎಂದಳು.

"ವೆಂಕಮ್ಮನವರ ಕೈ ಅಡಿಗೆ ತಿಂದವನು ಬಡವಾಗಲು ಸಾಧ್ಯವೇ? ಕಾಲೇಜಿನಲ್ಲಿ ನಿನಗೆ ತುಂಬಾ ಸ್ನೇಹಿತರಿದಾರಾ?"

"ಓಹೋ, ಅದರಲ್ಲೂ ಡಾಲಿ ಅಂತ ಒಂದು ಹುಡುಗಿ ಇದಾಳೆ. ನಮ್ಮಿಬ್ಬರಿಗೂ ಎಷ್ಟು ಸ್ನೇಹ ಅಂದರೆ-ಅವಳನ್ನ ನೋಡಿದ ತಕ್ಷಣ ಕೆನ್ನೆಗೆ ಹೊಡೆಯೋಣಾಂತ ಎನಿಸುತ್ತದೆ."

"ಯಾಕೆ, ಅವಳ ಕೆನ್ನೆ ಅಷ್ಟೊಂದು ಚೆನ್ನಾಗಿದೆಯೇನು?"

"ಅವಳನ್ನೇ ಕರ್ಕೊಂಡು ಬರ್ತೀನಿ, ನೀವೇ ನೋಡಿ ಹೇಳಿ."

"ಸದ್ಯ, ಹುಡುಗಿಯರ ಸಹವಾಸವೇ ನನಗೆ ಬೇಡ."

"ಅವರೇನೂ ನಿಮ್ಮನ್ನು ತಿಂದುಬಿಡುವುದಿಲ್ಲ."

ಊಟ ಮುಗಿದೊಡನೆ ಶಾಮು ಕೈ ತೊಳೆದುಕೊಂಡು ಹೋಗಿ ಮಲಗಿಕೊಂಡ. ಮೀರ ಅವನ ಹಿಂದೆಯೇ ಎಲೆ ಅಡಿಕೆ ತಟ್ಟೆಯನ್ನು ತಂದು,

"ಎಲೆ ಅಡಿಕೆ ಬೇಡವೇನು?" ಎಂದಳು.

"ಹಾಕಿಕೊಂಡರಾಯಿತು."

ಶಾಮುವಿಗೆ ಎಲೆ ಅಡಿಕೆಯೆಂದರೆ ಎಷ್ಟೊಂದು ಆಸೆಯೆಂದು ಮೀರಳಿಗೆ ತಿಳಿದಿತ್ತು. ಶಾಮುವಿನೊಡನೆ ಅವಳ ಮದುವೆಯಾದ ತರುಣದಲ್ಲಿ ಅವನು ಎಲೆ-ಅಡಿಕೆ ಹಾಕಿಕೊಳ್ಳುವುದನ್ನು ನೋಡಿ ಮೀರ ಜುಗುಪ್ಸೆ ಪಟ್ಟಿದ್ದಳು.

"ಹಸು ಹುಲ್ಲು ಮೇಯುವ ಹಾಗೆ ನೀವು ಮೇಯ್ತೀರಿ" ಎಂದು ಗಂಡನನ್ನು ಅವಳು ಹಾಸ್ಯ ಮಾಡಿದ್ದಳು. ಆದರೆ ಈ ದಿನ ಶಾಮು ಉದಾಸೀನದಿಂದ 'ಹಾಕಿಕೊಂಡರಾಯಿತು' ಎಂದಾಗ ಮೀರಳಿಗೆ ಅಚ್ಚರಿಯಾಯಿತು.

"ನಾನು ಮಡಿಸಿಕೊಟ್ಟರೆ ಹಾಕ್ಕೋತೀರಾ?"

"ಅದೇನು ಎಂದೂ ಇಲ್ಲದ್ದು ಈ ದಿನ ಇಷ್ಟೊಂದು ಬಲವಂತ?"

"ಎಲೆ, ಅಡಿಕೆ, ಸುಣ್ಣದಲ್ಲಿ ಮನುಷ್ಯನ ದೇಹಕ್ಕೆ ಅಗತ್ಯವಾಗಿ ಬೇಕಾದಂಥಾ ವಿಟಮಿನ್ನುಗಳಿವೆ. ಆದುದರಿಂದ ಹಾಕಿಕೊಳ್ಳಿ ಎಂದೆ."

"ನೀನು ಡಾಕ್ಟರ ಪರೀಕ್ಷೆಗೆ ಓದಲು ಹೋಗಿದ್ದು ಸಾರ್ಥಕವಾಯಿತು."

ಮೀರ ಮತ್ತೆ ನಕ್ಕಳು. ಅವಳ ನಗುಮುಖವನ್ನು ಶಾಮು ನೋಡಿ ಅನೇಕ ತಿಂಗಳಾಗಿದ್ದವು. ಅವಳ ನಗೆಯ ಹೊಂಬಿಸಿಲಿನಿಂದ ಅವನ ಮುಖವೂ ಪ್ರಫುಲ್ಲಿತವಾಯಿತು. ಮೀರ ಶಾಮುವಿಗೆ ಎಲೆ ಅಡಿಕೆ ಕೊಟ್ಟು,

"ಮನೇನೆಲ್ಲಾ ಒಂದು ಸಲ ನೋಡಿಕೊಂಡು ಬರ್ತೀನಿ" ಎಂದಳು. ಶಾಮುವಿಗೆ ಅವಳೊಡನೆ ಬಹಳ ಮಾತನಾಡಬೇಕೆನಿಸಿತ್ತು. ಅವಳ ಮಾತು ಕೇಳಿ ನಿರಾಸೆ ಯಾದರೂ ಮೇಲೆ ಅದನ್ನು ತೋರಗೊಡದೆ 'ಆಗಲಿ' ಎಂದ. ಮೀರ ಶಾಮು ಮಲಗಿದ್ದ ರೂಮಿನ ಬಾಗಿಲನ್ನು ಮುಂದಕ್ಕೆಳೆದುಕೊಂಡು ಹೋದಳು.

ಗಂಡನ ಮನೆಯ ಮೇಲಿನ ಮೋಹ ಮೀರಳಲ್ಲಿ ಇನ್ನೂ ಆರಿರಲಿಲ್ಲ. ತನ್ನ ಮನೆ ಎಂಬ ಅಭಿಮಾನ ಮೊದಲಿಗಿಂತಲೂ ಈಗ ಹೆಚ್ಚಾಗಿರುವಂತೆ ತೋರಿತು. ಈ ಅಭಿಮಾನಕ್ಕೆ ಕಾರಣವೇನಿರಬಹುದು ಎಂದಿತು ಮನಸ್ಸು. ತಾನು ತನ್ನ ಮನೆ, ಗಂಡನನ್ನು ಬಿಟ್ಟು ಆರು ತಿಂಗಳು ಪರ ಊರಿನಲ್ಲಿದ್ದುದೇ ಇದಕ್ಕೆ ಕಾರಣವಿರ ಬೇಕೆನಿಸಿತು. ಗಂಡ, ಹೆಂಡತಿ ವರ್ಷದಲ್ಲಿ ಹನ್ನೆರಡು ತಿಂಗಳೂ ಖಂಡಿತ ಒಟ್ಟಿಗೆ ಇರಬಾರದು. ಹಾಗೆ ಯಾವಾಗಲೂ ಒಟ್ಟಿಗೆ ಇದ್ದರೆ ಜಗಳ, ಮನಸ್ತಾಪ, ಅಸಮಾಧಾನ ಅವರಿಬ್ಬರ ನಡುವೆ ಬರುವುದು ಖಂಡಿತ. ಹಾಗೆ ಮನೆಯಲ್ಲಿ ಅಶಾಂತಿ ತಲೆದೋರುವುದೆಂಬ ಭೀತಿ ಬಂದ ಕೂಡಲೇ ಇಬ್ಬರಲ್ಲಿ ಯಾರಾದರೂ ಒಬ್ಬರು ಹದಿನೈದು ದಿನ ಬೇರೆ ಎಲ್ಲಿಗಾದರೂ ಹೋಗಿದ್ದು ಬರುವುದು ಒಳ್ಳೆಯದು. ಅಗಲಿಕೆಯಲ್ಲಿ ಒಬ್ಬರ ಬೆಲೆ ಮತ್ತೊಬ್ಬರಿಗೆ ತಿಳಿಯುತ್ತದೆ. ಹದಿನೈದು ದಿನಗಳ ಅಗಲಿಕೆ ನಂತರ ಮತ್ತೆ ಪುನರ್ಮಿಲನವಾದಾಗ.... ಎಷ್ಟು ಕಾತುರ, ಸಂಭ್ರಮ!

ಮೀರ ಮನೆಯ ಗೋಡೆ, ಕಿಟಕಿ, ಬಾಗಿಲುಗಳನ್ನು ಮುಟ್ಟಿ ನೋಡಿದಳು. ಡ್ರಾಯಿಂಗ್ ರೂಮಿಗೆ ಹೋಗಿ ತಾನು ಮೆಚ್ಚಿ ತರಿಸಿಕೊಂಡಿದ್ದ ಸೋಫಾ, ಮೆತ್ತೆಯ ಕುರ್ಚಿಗಳನ್ನು ಕಣ್ಣು ತುಂಬುವಂತೆ ನೋಡಿದಳು.

'ಬೋರನ ಕೈಯಿಂದ ಧೂಳು ಹೊಡೆಸಬೇಕು' ಎಂದಿತು ಅವಳ ಮನಸ್ಸು. ಕೊಟ್ಟಿಗೆಯ ಬಾಗಿಲಿನಲ್ಲಿ ನಿಂತು ಕರುಗಳ ಆಟವನ್ನು ನೋಡಿದಳು. ಅವಳು ಮನೆ ಬಿಟ್ಟು ಹೋಗುವಾಗ ಇನ್ನೂ ಜನ್ಮ ತಾಳದಿದ್ದ ಎರಡು ಪುಟ್ಟಕರುಗಳು

ಜಿಗಿದಾಡುತ್ತಾ ಆಟವಾಡುತ್ತಿದ್ದವು.

ಮೀರ ಮನೆಯನ್ನೆಲ್ಲಾ ಸುತ್ತಿ ಶಾಮು ಮಲಗಿದ್ದ ರೂಮಿನ ಬಾಗಿಲನ್ನು ಮೆಲ್ಲನೆ ತಳ್ಳಿ ಒಳಗೆ ಇಣುಕಿ ನೋಡಿದಳು. ಅವನು ನಿದ್ದೆ ಮಾಡುತ್ತಿದ್ದ. ಮೀರಳಿಗೆ ಶಾಮುವಿನೊಡನೆ ಮಾತನಾಡುವುದು ಬಹಳವಿತ್ತು. ಶಾಮು ನಿದ್ದೆ ಮಾಡುತ್ತಿದ್ದುದನ್ನು ನೋಡಿ ಅವಳಿಗೆ ನಿರಾಶೆಯಾಯಿತು. ಅವಳು ಬಾಗಿಲನ್ನು ಮೆಲ್ಲನೆ ಮುಂದೆಳೆದುಕೊಂಡು ಅಂಗಳಕ್ಕೆ ಬಂದಳು. ಅಂಗಳದಲ್ಲಿ ಜೋಯಿಸರ ಮಗಳು ವೆಂಕು ನಿಂತಿದ್ದಳು. ಮೀರಳನ್ನು ನೋಡಿ ವೆಂಕೂ ನಕ್ಕು,

"ನೀವು ಬಂದಿದ್ದೀರೀಂತ ಗೊತ್ತಾಯಿತು. ಅದಕ್ಕೇ ಓಡಿ ಬಂದೆ. ಅಮ್ಮ 'ಬಿಸಿಲಿನಲ್ಲಿ ಹೋಗಬೇಡ' ಅಂತ ಕೂಗ್ತಿದ್ದರು. ಆದರೂ ಓಡಿ ಬಂದೆ" ಎಂದಳು.

ವೆಂಕೂ ಮೊದಲಿಗಿಂತಲೂ ಎತ್ತರವಾಗಿ ಬೆಳೆದಿದ್ದಳು. ಕೋಲು ಕೋಲಾಗಿದ್ದ ಅವಳ ಮುಖ ಈಗ ತುಂಬಿಕೊಂಡಿತ್ತು. ಮೂಳೆಯಂತಿದ್ದ ದೇಹ ಯೌವನದ ಮೋಡಿಯಿಂದ ಮಾಟವಾದ ಆಕಾರವನ್ನು ಪಡೆದಿತ್ತು. ಹೊಸಬಳನ್ನು ನೋಡುವಂತೆ ಮೀರ ವೆಂಕೂವನ್ನೇ ದಿಟ್ಟಿಸಿ ನೋಡಿದಳು.

"ನಿನಗೆಷ್ಟು ವರ್ಷ ವೆಂಕೂ?"

"ಹದಿನಾರು ವರ್ಷವಾಯಿತು."

"ಇನ್ನೂ ಯಾಕೆ ನಿಮ್ಮಮ್ಮ ನಿನಗೆ ಮದುವೆ ಮಾಡಿಲ್ಲ."

ವೆಂಕೂ ಮುಖ ಕೆಂಪಗೆ ಮಾಡಿಕೊಂಡು "ಥೂ ಹೋಗ್ರಿ. ನೀವು ಹೀಗೆಲ್ಲಾ ಹಾಸ್ಯ ಮಾಡುವ ಹಾಗಿದ್ದರೆ ಹೋಗ್ತೀನಿ" ಎಂದು ಬಾಗಿಲಿನ ಕಡೆ ತಿರುಗಿದಳು.

"ಹಾಸ್ಯ ಮಾಡೊಲ್ಲ ಬಾ."

ವೆಂಕು, ಮೀರ ರೂಮಿಗೆ ಹೋಗಿ ಮಾತನಾಡುತ್ತಾ ಕುಳಿತರು.

"ಪರೀಕ್ಷೇಲಿ ನೀವು ಹೇಗೆ ಮಾಡಿದೀರಿ?"

"ಚೆನ್ನಾಗಿ ಮಾಡಿದೀನಿ."

"ನೀವು ನಿಜವಾದ ಹೆಣ ಕುಯ್ಯಬೇಕಂತೆ, ಹೌದಾ?"

"ಅದೆಲ್ಲಾ ಮುಂದಿನ ವರ್ಷದಿಂದ ಶುರುವಾಗುತ್ತೆ."

ವೆಂಕು ಮೀರಳ ಕೆಲವು ಪುಸ್ತಕಗಳನ್ನು ನೋಡಿ ಆಶ್ಚರ್ಯದಿಂದ "ಇದನ್ನೆಲ್ಲಾ ಹೇಗ್ರಿ ಓದುತ್ತೀರಿ? ಎಲ್ಲಾ ಮರೆತು ಹೋಗೋದಿಲ್ಲವೇ?" ಎಂದಳು.

"ಮರೆತುಹೋದರೆ ಫೇಲಾಗುತ್ತೆ ಅಷ್ಟೆ."

ಅಲ್ಲಿಂದ ಅವರ ಮಾತು ಎಲ್ಲೆಲ್ಲಿಗೋ ಹೊರಳಿತು. ನಿದ್ದೆ ಮುಗಿಸಿ ಶಾಮು ಎದ್ದು ಬಂದಾಗಲೂ ಅವರ ಹರಟೆ ಮುಗಿದಿರಲಿಲ್ಲ.

"ಶಾಮಣ್ಣ, ಮೈಸೂರಿಗೆ ಹೋಗಿ ಬಂದ ಮೇಲೆ ಮೀರಕ್ಕ ತುಂಬಾ ಚೆನ್ನಾಗಿ ಆಗಿದಾರೆ ಅಲ್ವೇ?"

ಅದೇ ಸಲಿಗೆ, ಅದೇ ಸ್ನೇಹ. ಆಗ ಹುಡುಗಿ. ಈಗ ಯುವತಿ.

"ಹೌದೇನು? ನಾನಿನ್ನೂ ಮೀರಾನ ಸರಿಯಾಗಿ ನೋಡೇ ಇಲ್ಲ" ಎಂದ ಶಾಮು.

"ಶಾಮಣ್ಣನಿಗೆ ನನ್ನ ಮಾತೂಂದ್ರೆ ಹಾಸ್ಯ" ವೆಂಕು ಕೆನ್ನೆ ದಪ್ಪಗೆ ಮಾಡಿಕೊಂಡು ನಸುಕೋಪ ತೋರಿಸಿದಳು.

ನಾಲ್ಕು ವರ್ಷದ ಹಿಂದಿನ ಮಾತಾಗಿದ್ದರೆ ಶಾಮು ವೆಂಕುವಿನ ಕೆನ್ನೆ ಹಿಂಡಿ, ಕಚಗುಳಿಯಿಟ್ಟು ಕೀಟಲೆ ಮಾಡುತ್ತಿದ್ದ. ಆದರೆ ಈಗ ಅವಳು ಬೆಳೆದ ಹುಡುಗಿ.

"ಎಲ್ಲಿ ಮೀರಾ, ನನ್ನೆದುರಿಗೆ ನಿಂತ್ಕೋ ಬಾ. ನಿನ್ನ ಸರಿಯಾಗಿ ನೋಡಿ ಹೇಳ್ತೀನಿ."

"ಹೋಗಿ ಹೋಗಿ. ನಿಮಗೆ ಮಾಡೋಕೆ ಕೆಲಸವಿಲ್ಲ" ಮೀರ ಹುಬ್ಬು ಗಂಟಿಕ್ಕಿದಳು.

"ಕಣ್ಣು ಪರವಾಗಿಲ್ಲ. ಕೆನ್ನೆ ತುಂಬಿಕೊಂಡಿರುವುದರಿಂದಲೋ ಏನೋ ಚಿಕ್ಕದಾಗಿ ಕಂಡರೂ ಹೊಳಪಾಗಿದೆ. ಹುಬ್ಬು-ಕಣ್ಣಿಗೆ ಹಚ್ಚಿರುವ ಕಾಡಿಗೆಯೊಡನೆ ಸ್ಪರ್ಧೆ ಹೂಡಿದೆ-ಯಾರ ಬಣ್ಣ ಹೆಚ್ಚು ಕಪ್ಪೂಂತ. ಮೂಗು-ಜಡೆಯಷ್ಟೇ ಮೊಂಡಾಗಿದೆ...."

ಶಾಮುವಿನ ವರ್ಣನೆ ಕೇಳಿ ವೆಂಕು ಬಿದ್ದು ಬಿದ್ದು ನಗತೊಡಗಿದಳು. ಮೀರಳ ಮುಖ ಕೋಪದಿಂದ ಕೆಂಪಾಗಿತ್ತು.

"ಬುದ್ಧಿ-ಚಾಕು, ಕತ್ತರಿ ಹಿಡಿಯುವುದರಿಂದಲೋ ಏನೋ ಅಷ್ಟೇ ಹರಿತವಾಗಿರುವ ಹಾಗಿದೆ. ಕೂದಲು-ಗುಂಗುರುಗಳು ಮೊದಲಿಗಿಂತ ಜಾಸ್ತಿಯಾಗಿದ್ದರೂ ಒಂದಿಂಚೂ ಬೆಳೆದಂತಿಲ್ಲ. ತುಟಿ-ಅದೇನು ಎಲೆ ಅಡಿಕೆಯ ಕೆಂಪೋ, ನಿಜವಾದ ಕೆಂಪೋ ನಿಧಾನವಾಗಿ ಪರೀಕ್ಷೆ ಮಾಡಿ ಹೇಳಬೇಕು. ಕೈಯಿ...."

ಮೀರ ಧಢಧಡನೆ ಬಂದು ಶಾಮುವನ್ನು ನೂಕಿ ಅಡಿಗೆ ಮನೆಗೆ ಹೊರಟುಹೋದಳು. ವೆಂಕು ಉಸಿರಾಡಲು ಅವಕಾಶವಿಲ್ಲದವಳಂತೆ ನಗುತ್ತಿದ್ದಳು.

ಮೀರ ಬಿರುಗಾಳಿಯಂತೆ ಒಳಗೆ ಹೋದುದನ್ನು ನೋಡಿ ವೆಂಕು ನಗು ನಿಲ್ಲಿಸಿ,

"ಶಾಮಣ್ಣಾ, ಮೀರಳಿಗೆ ಕೋಪ ಬಂದಿರಬೇಕು" ಎಂದಳು.

"ಇರಲಾರದು. ತನ್ನ ವರ್ಣನೆ ಕೇಳಿ ಸಂತೋಷ ತಡೆಯಲಾಗದೆ ಒಳಗೆ

ಹೋಗಿರಬೇಕು."

ವೆಂಕು ಮೀರಳನ್ನು ಹುಡುಕಿಕೊಂಡು ಅಡಿಗೆ ಮನೆಗೆ ಹೋದಳು. ವೆಂಕುವಿಗೂ ಅಲ್ಲಿಯೇ ಕಾಫಿ ತಿಂಡಿ ಆಯಿತು. ಸಂಜೆ ಐದು ಗಂಟೆಯ ಮೇಲೆ ವೆಂಕು ತನ್ನ ಮನೆ ಜ್ಞಾಪಿಸಿಕೊಂಡು,

"ಹೋಗ್ತೀನಿ ಮೀರಕ್ಕ. ಅಮ್ಮ ಬೈತಾರೋ ಏನೋ" ಎಂದಳು.

'ಮೀರಾನೇ ಬಲವಂತ ಮಾಡಿ ನನ್ನ ಇಲ್ಲೇ ಇರಿಸಿಕೊಂಡಳು' ಅಂತ ತಪ್ಪನ್ನೆಲ್ಲಾ ನನ್ನ ಮೇಲೆ ಹಾಕಿಬಿಡು."

ವೆಂಕು ಹೊರಟುಹೋದಳು. ವೆಂಕುವನ್ನು ಕಳಿಸಿ ಮೀರ ಒಳಗೆ ಬರುವಷ್ಟ ರಲ್ಲಿ ಶಾಮು ಅದಾವ ಮಾಯದಲ್ಲೋ ತಿಂಡಿ ತಿಂದು ಗದ್ದೆಯ ಕಡೆ ಹೊರಟು ಹೋಗಿದ್ದ. ಮೀರಳಿಗೆ ಅದೇಕೋ ಮತ್ತೆ ನಿರಾಸೆಯಾಯಿತು. ಹಾಗಾದರೆ ಅವರಿಗೆ ತನ್ನ ವೈದ್ಯ ವಿದ್ಯಾರ್ಥಿ ಜೀವನದ ಬಗ್ಗೆ ಏನೇನೂ ಆಸಕ್ತಿಯಿಲ್ಲವೇ?

ಮೀರಾ ಜಾಜಿ ಪೊದೆಯ ಬಳಿಗೆ ಹೋದಳು. ಬಿಳಿ ಜಾಜಿಯ ಗಿಡ ತನ್ನ ಹಸಿರು ಒಡಲಿನ ತುಂಬ ಬಿಳಿಯ ಮೊಗ್ಗುಗಳನ್ನು ತುಂಬಿಕೊಂಡು ಗಾಳಿಗೆ ಬಳುಕಾಡುತ್ತಿತ್ತು. ಮೀರಳ ಕೈ ಮೊಗ್ಗುಗಳನ್ನು ಬಿಡಿಸತೊಡಗಿತು. ಉಡಿ ತುಂಬಿದ ಮೇಲೆ ಮೀರ ಸೂಜಿ ದಾರ ಹಿಡಿದು ಪೋಣಿಸಿದಳು. ಮೊಗ್ಗಿಗಾಗಿ ಮತ್ತೊಮ್ಮೆ ಅವಳು ತಲೆ ಬಾಚಲೇಬೇಕಾಯಿತು. ಮೊಗ್ಗಿನದಂಡೆ ಮುಡಿದು ಬಿಳಿಯ ವಾಯಿಲ್ ಸೀರೆಯುಟ್ಟು, ಬೇಸರ ನೀಗಲು ಮೀರ ಜೋಯಿಸರ ಮನೆಗೆ ಹೋದಳು. ಸಾಕಮ್ಮ ನವರು ಮೀರಳ ಕಾಲೇಜು, ಅಲ್ಲಿಯ ಹಾಸ್ಟೆಲಿನ ಬಗ್ಗೆ ನೂರಾರು ಪ್ರಶ್ನೆಗಳನ್ನು ಕೇಳಿದರು. ಅವರೊಡನೆ ಮಾತುಕತೆ ಮುಗಿಸಿ ಮೀರ ಮನೆಗೆ ಬಂದಾಗ ಎಂಟೂವರೆ ಗಂಟೆಯಾಗಿತ್ತು. ಶಾಮು ಆಗಲೇ ಬಂದು ಮೀರಳಿಗಾಗಿ ಕಾಯುತ್ತಿದ್ದ. ಹೆಚ್ಚು ಮಾತಿಲ್ಲದೆ ಊಟ ಮುಗಿಯಿತು.

ಮೀರ ಎಲೆ, ಅಡಿಕೆ ತೆಗೆದುಕೊಂಡು ಶಾಮುವಿನ ಬಳಿಗೆ ಬಂದಾಗ ಅವನು ಲಾಂದ್ರದಲ್ಲಿದ್ದ ದೀಪದ ಕುಡಿಯ ಹೊಯ್ದಾಟವನ್ನು ನೋಡುತ್ತಾ ಕುಳಿತಿದ್ದ.

"ಎಲೆ ಮಡಿಸಿಕೊಡಲೇನು?"

"ಊಹೂಂ. ಎಲೆ ಅಡಿಕೆ ಹಾಕಿಕೊಳ್ಳೋಕೆ ಮುಂಚೆ ಒಂದು ಕೆಲಸ ಇದೆ."

"ಏನು ಕೆಲಸ?"

"ಮಧ್ಯಾಹ್ನ ವೆಂಕೂ...."

ಮೀರ ಹುಬ್ಬು ಗಂಟಿಕ್ಕಿ "ನಿಮ್ಮ ಹಾಸ್ಯ ಸಾಕು. ನೀವು ನನ್ನ ಹಾಗೆ ವರ್ಣನೆ ಮಾಡಿದರೆ ವೆಂಕು ಏನು ತಿಳಿದುಕೊಳ್ಳುತ್ತಾಳೆ. ಹಾಸ್ಯಕ್ಕೂ ಸಮಯ ಸಂದರ್ಭ

ಇಲ್ಲವೆ?" ಎಂದಳು.

"ನಾನು ಎತ್ತಿ ಆಡಿಸಿ ಬೆಳೆಸಿದ ಮಗು ವೆಂಕು. ಅವಳೆದುರಿಗೆಂಥ ಸಂಕೋಚವೂ ಇಲ್ಲ ನನಗೆ."

"ಅವಳೇನೂ ಈಗ ಮಗುವಲ್ಲ, ಹುಡುಗಿ."

"ಆದರೂ ನನ್ನ ಪಾಲಿಗೆ ಅವಳು ಚಿಕ್ಕ ಹುಡುಗಿಯೇ."

"ಚಿಕ್ಕ ಹುಡುಗೀಂತ ಹುಚ್ಚು ಹುಚ್ಚಾಗಿ ಮಾತನಾಡಬಹುದೆ?"

"ಎಲ್ಲಿ ಈ ಕಡೆ ತಿರುಗು, ನಾನು ಮಾಡಿದ ವರ್ಣನೆ ಸರಿಯೇ ತಪ್ಪೇಂತ ಖಾತ್ರಿ ಮಾಡಿಕೊಳ್ಳಬೇಕು" ಎನ್ನುತ್ತಾ ಶಾಮು ಲಾಂದ್ರವನ್ನು ಮೀರಳ ಮುಖದ ಬಳಿ ಹಿಡಿದು ನೋಡಿದ. ಮೀರಳಿಗೆ ತುಂಬಾ ನಗು ಬಂತು.

"ನಗಬಾರದು, ಗಂಭೀರವಾಗಿರಬೇಕು. ನಾನು ಮಾಡಿದ್ದ ವರ್ಣನೆ ಅಕ್ಷರಶಃ ನಿಜ. ಆದರೆ ಒಂದು ಅನುಮಾನ ಪರಿಹಾರವಾಗಲಿಲ್ಲ."

"ಯಾವುದು?"

"ಮತ್ತೆ ನಿನ್ನ ತುಟಿಯ ಬಣ್ಣ ಎಲೆ ಅಡಿಕೆಯ ಕೆಂಪೋ ಅಥವಾ ನಿಜವಾದ ಕೆಂಪೋ ಎನ್ನುವುದು ಮಾತ್ರ ಇತ್ಯರ್ಥವಾಗಲಿಲ್ಲ. ಅದರ ಬಣ್ಣದ ನೈಜತೆಯನ್ನು ಈಗ ಪರೀಕ್ಷಿಸಬೇಕಾಗಿದೆ."

"ಏನೂ ಬೇಕಾಗಿಲ್ಲ" ಎನ್ನುತ್ತಾ ಮೀರ ದೂರ ಸರಿದಳು.

"ನನ್ನ ಅನುಮಾನ ಪರಿಹಾರ ಮಾಡಿಕೊಳ್ಳೋಣಾಂತ ಅಷ್ಟೇ."

"ನಿಮ್ಮ ಅನುಮಾನಕ್ಕಾಗಿ ಅಷ್ಟೇ, ನಿಮಗಾಗಿ ಅಲ್ಲ, ಅಲ್ಲವೇ?"

"ಹೌದು, ಹೌದು."

"ಯೂ ಸ್ವೀಟ್ ಸ್ಕ್ಯಾಂಡ್ರಲ್" ಎನ್ನುತ್ತಾ ಮೀರ ಶಾಮುವಿನ ತೋಳಿನೊಳಗೆ ನುಸುಳಿ ಮುಖ ಮೇಲೆತ್ತಿ,

"ಪರೀಕ್ಷೆ ಮಾಡಿ" ಎಂದಳು.

ಶಾಮು ತನ್ನ ತುಟಿಗಳಿಂದ ಮೀರಳ ಅಧರದ ಬಣ್ಣವನ್ನು ಪರೀಕ್ಷೆ ಮಾಡಿದ. ಶಾಮು ತನ್ನನ್ನು ಬಿಟ್ಟೊಡನೆ ಮೀರ ಕೇಳಿದಳು,

"ಪರೀಕ್ಷೆ ಮುಗಿಯಿತೇ? ನಿಮಗೆ ಏನೆನಿಸುತ್ತದೆ?"

"ಎಲೆ ಅಡಿಕೆ ಹಾಕಿಕೊಂಡರೆ ತುಟಿ ಇಷ್ಟು ಕೆಂಪಗಾಗೋಲ್ಲ. ಆದುದರಿಂದ ಇದು ನಿಜವಾದ ಬಣ್ಣ" ಎಂದು ಒಪ್ಪಿಕೊಂಡ ಶಾಮು.

"ನೀವು ಮೈಸೂರಿಗೆ ಬಂದಿದ್ದಾಗ ಹಾಸ್ಟೆಲಿಗೇಕೆ ಬರಲಿಲ್ಲ?"

"ನಾನು ಬರಲೀಂತ ನಿನಗೆ ಆಸೆಯಿತ್ತೇ?"

ಮೀರ ತನ್ನ ಭಾವನೆಗಳನ್ನು ಅಡಗಿಸಿ, "ಹಾಗೇನಿಲ್ಲ. ಬಂದಿದ್ದರೆ ಚೆನ್ನಾಗಿತ್ತು" ಎಂದಳು.

'ಹೌದು, ನೀವು ಬರಲೀಂತ ನನಗೆ ತುಂಬ ಆಸೆಯಿತ್ತು' ಎಂಬ ಮಾತುಗಳನ್ನು ಕೇಳಲು ಶಾಮುವಿನ ಹೃದಯ ತವಕಿಸುತ್ತಿತ್ತು. ಮೀರಳ ಮಾತು ಕೇಳಿ ಶಾಮುವಿಗೆ ನಿರಾಸೆಯಾಯಿತು.

"ಏನೋ ಬರೋಕ್ಕಾಗಲಿಲ್ಲ."

"ಅಷ್ಟೊಂದು ಕೆಲಸವಿತ್ತೇ?"

"ಒಂದು ಜೊತೆ ಎತ್ತು ತಗೋಬೇಕಾಗಿತ್ತು. ಆದ್ದರಿಂದ ಅಲ್ಲಿ ನಿಲ್ಲೋಕ್ಕಾಗಲಿಲ್ಲ."

ತನ್ನನ್ನು ನೋಡದೇ ಹಳ್ಳಿಗೆ ಹಿಂತಿರುಗುವಂಥ ಅಗತ್ಯವಾದರೂ ಏನಿತ್ತೋ. ಶಾಮುವಿನ ಮಾತು ಕೇಳಿ ಮೀರಳ ಮುಖ ಕೊಂಚ ಪೆಚ್ಚಾಯಿತು. ಅದನ್ನು ಗಮನಿಸಿ ಶಾಮು ಹೇಳಿದ,

"ಜೊತೆಗೆ ಇನ್ನೊಂದು ಕಾರಣವೂ ಇತ್ತು."

"ಏನು ಕಾರಣ?"

"ಅಗಲಿಕೆ ದಿನಗಳು ಹೆಚ್ಚಿದಷ್ಟೂ ಪುನರ್ಮಿಲನದ ಮಾಧುರ್ಯ ಹೆಚ್ಚು."

"ನಾನು ಈಗ ಬಂದಿರೋದರಿಂದ ನಿಮ್ಮ ಮನಸ್ಸು ಸಿಹಿಯಾಯಿತೇನೋ?"

"ಬರೀ ಮನಸ್ಸು ಮಾತ್ರ ಸಿಹಿಯಾಗಲಿಲ್ಲ. ಜೊತೆಗೆ ಬಾಯಿ ಸಹ ಸಿಹಿಯಾಯಿತು."

ಮೀರ ಆಕಳಿಸಿ ಮೈ ಮುರಿದು ಹೇಳಿದಳು,

"ಪರೀಕ್ಷೆ ಗಲಾಟೇಲಿ ಸರಿಯಾಗಿ ನಿದ್ದೆ ಮಾಡಿ ಎರಡು ತಿಂಗಳಾದವು."

"ಮಲಗಬಹುದಲ್ಲಾ, ದೀಪ ಆರಿಸಲೇನು?"

"ಹೂಂ, ಆರಿಸಬಹುದು."

ಶಾಮು ದೀಪ ಊದಿ ಆರಿಸಿದ. ರೂಮು ಕತ್ತಲೆಯಲ್ಲಿ ಮುಳುಗಿತು.

ದೀಪ ಆರಿದ ಐದು ನಿಮಿಷದೊಳಗೆ ಮೀರ ನಿದ್ದೆ ಮಾಡಿದಳು. ಶಾಮುವಿಗೆ ಮಾತ್ರ ನಿದ್ದೆ ಬರಲಿಲ್ಲ. ಅವನಿಗೆ ಗೇಣು ದೂರದಲ್ಲಿ ಅಪ್ಸರೆಯೊಬ್ಬಳು ನಿರಾತಂಕವಾಗಿ ನಿದ್ರಿಸುತ್ತಿದ್ದಳು. ಹೊಗೆ ತುಂಬಿದ ಕೊಠಡಿಯಿಂದ ಉಸಿರು ಸಿಕ್ಕಿಕೊಂಡ ಮನುಷ್ಯ ಓಡಿಹೋಗುವಂತೆ ಶಾಮು ಎದ್ದು ರೂಮಿನಿಂದ ಹೊರಗೆ ಬಂದು ಬೇರೊಂದು ಕೊಠಡಿಗೆ ಹೋಗಿ ಮಲಗಿದ.

ರಜದ ದಿನಗಳು ಬಹುಬೇಗ ಕಳೆದುಹೋದವು. ರಜ ಕಳೆದ ಕೂಡಲೇ

ಮೀರ ಮತ್ತೆ ಮೈಸೂರಿಗೆ ಹೋಗುವವಳಾಗಿದ್ದುದರಿಂದ ಶಾಮು ಅವಳನ್ನು ಆದಷ್ಟು ಸುಖಿಯಾಗಿಡಲು ಪ್ರಯತ್ನಿಸುತ್ತಿದ್ದ. ಸದ್ಯದಲ್ಲೇ ತಾನು ಹೊರಟುಹೋಗ ಲಿದ್ದುದರಿಂದ ಶಾಮುವಿನ ಮನಸ್ಸು ನೋಯದಂತೆ ಮೀರ ಎಚ್ಚರಿಕೆಯಿಂದಿರು ತ್ತಿದ್ದಳು.

ಮೀರ ಹೊರಡುವುದಕ್ಕೆ ಮುಂಚೆ ಒಂದು ದಿನ ಶಾಮು, ಮೀರ ಇಬ್ಬರೂ ಸುತ್ತಾಡಿಕೊಂಡು ಕೆರೆಯ ಅಂಚಿನ ಬಳಿ ಕುಳಿತಿದ್ದರು. ಆಗಲೇ ಕತ್ತಲಾಗುತ್ತಾ ಬಂದಿತ್ತು. ಕೆರೆಯ ಪ್ರದೇಶ ನಿರ್ಜನವಾಗಿತ್ತು. ಆಗೊಂದು ಈಗೊಂದು ಹಕ್ಕಿಗಳು ಸದ್ದು ಮಾಡುತ್ತಾ ಗೂಡಿನ ಬಳಿಗೆ ಹಾರಿಹೋಗುತ್ತಿದ್ದವು.

ಮೀರ ಚಿಕ್ಕ ಹುಡುಗಿಯಂತೆ ಕಾಲನ್ನು ನೀರಿನಲ್ಲಿ ಇಳಿಬಿಟ್ಟು ಹುಲ್ಲುಕಡ್ಡಿ ಯನ್ನು ಅಗಿಯುತ್ತಾ ಕುಳಿತಿದ್ದಳು. ಮೀರ ನೀರಿನಲ್ಲಿ ಕಾಲಾಡಿಸುವುದನ್ನು ನೋಡಿ ಶಾಮು,

"ಈ ಕಡೆ ಬಾ. ಶೀತವಾದೀತು" ಎಂದ.

"ಆದರೆ ಆಗಲಿ ಬಿಡಿ, ನಷ್ಟವೇನು?"

"ನೀನೇ ಡಾಕ್ಟರಾಗಿ ಹೀಗೆ ಹೇಳಬಹುದೇ ಮೀರ?"

"ನಾನಿನ್ನೂ ಪೂರ್ತಿ ಡಾಕ್ಟರಾಗಿಲ್ಲವಲ್ಲ."

"ಅದಕ್ಕೇ ಹಿರಿಯರು ಅರ್ಧ ತಿಳುವಳಿಕೆ ಅಪಾಯಾಂತ ಹೇಳುವುದು."

"ನಾನೊಂದು ವಿಷಯ ನಿಮಗೆ ಹೇಳೋಣಾಂತ ಬಂದ ದಿನದಿಂದಲೂ ಯೋಚಿಸುತ್ತಿದ್ದೀನಿ. ಆದರೆ ಹೇಳೋಕೆ ನನಗೆ ಧೈರ್ಯವಿಲ್ಲ."

"ನೀನು ಯಾವತ್ತಿನಿಂದ ಹೇಡಿಯಾದೆ?"

ಮೀರ ಕೆರಳಿ ನುಡಿದಳು, "ನಾನೇನು ಹೇಡಿಯಲ್ಲ."

"ನೀನೀಗ ನಿಜವಾಗಿಯೂ ನನ್ನ ಮೀರ" ಶಾಮು ನಕ್ಕು ಹೇಳಿದ.

"ಹಾಗಾದರೆ ಹೇಳಲೇನು?"

"ನಾನು ಕೇಳಲು ತಯಾರು."

"ನೀವು ನಗಬಾರದು. ನನ್ನ ಮೇಲೆ ರೇಗಬಾರದು. ಬೈಯಬಾರದು. ಉದಾಸೀನರಾಗಬಾರದು. ನಾನು ಹೇಳಿದ್ದನ್ನು ನಡೆಸಿಕೊಡಬೇಕು."

"ಅದೇನು ಹೇಳುವವರೆವಿಗೆ ನಾನು ಖಂಡಿತ ಭಾಷೆ ಕೊಡೋದಿಲ್ಲ."

"ನನ್ನ ಮಾತು ದಯವಿಟ್ಟು ನಡೆಸಿಕೊಡಿ."

"ಅದೇನು ಹೇಳು."

"ನಿಮಗೆಷ್ಟು ವರ್ಷ?"

"ಎಷ್ಟೋ ನನಗೆ ಗೊತ್ತಿಲ್ಲ."

"ಎಷ್ಟಾದರೂ ಇರಲಿ. ಒಟ್ಟಿನಲ್ಲಿ ನಿಮಗಿನ್ನೂ ಚಿಕ್ಕವಯಸ್ಸು. ಅಲ್ಲವೇ?"

"ಇರಬಹುದು."

"ಆದ್ದರಿಂದ.... ನೀವು... ಯಾಕೆ ಇನ್ನೊಂದು ಮದುವೆ ಮಾಡಿಕೋ ಬಾರದು?" ಮೀರ ದೈನ್ಯನೋಟವನ್ನು ಶಾಮುವಿನ ಕಡೆ ಬೀರಿದಳು.

"ನೀನೀಗ ಮೈಸೂರು ಮೆಡಿಕಲ್ ಕಾಲೇಜಿನ ಹಾಸ್ಟೆಲಿಗೆ ಹೋಗ್ತೀಯೋ ಅಥವಾ ಬೆಂಗಳೂರಿನ ಮೆಂಟಲ್ ಆಸ್ಪತ್ರೆಗೆ ಹೋಗ್ತೀಯೋ?"

"ನನ್ನ ಪ್ರಶ್ನೆಗೆ ಉತ್ತರ ಸಿಕ್ಕಲಿಲ್ಲ."

"ನನಗೆ ಇನ್ನೊಂದು ಮದುವೆ! ಯಾಕೆ?"

"ನಾನು ವರ್ಷವೆಲ್ಲಾ ಮೈಸೂರಿನಲ್ಲಿರುತ್ತೇನೆ. ರಜದ ದಿನಗಳಲ್ಲಿ ಮಾತ್ರ ಎರಡು ದಿನ ಇಲ್ಲಿರುತ್ತೇನೆ. ನಿಮಗಿನ್ನೂ ಚಿಕ್ಕ ವಯಸ್ಸು...."

"ನೀನು ವೈದ್ಯಳಾಗಿ ಇಲ್ಲಿಯೇ ಬಂದು ಇರುತ್ತೀನೀಂತ ಹೇಳಿದೀಯಲ್ಲಾ-ಹಾಗಾದರೆ ಅದು ನಾಲಿಗೆ ತುದಿಯ ಮಾತೇನು?"

"ಇಲ್ಲ. ನಾನು ಡಾಕ್ಟರಾಗಿ ಇಲ್ಲಿ ಬರುವುದು ಖಂಡಿತವಾಗಿಯೂ ನಿಜ. ಆದರೆ.... ಆದರೆ.... ನಿಮ್ಮ ವಂಶಕ್ಕಾಗಿ.... ನಿಮ್ಮ ಆಸ್ತಿಗಾಗಿ...."

"ನನ್ನ ಆಸ್ತೀನೆಲ್ಲಾ ನಿನ್ನ ಹೆಸರಿಗೆ ಬರೆದುಬಿಡ್ತೇನೆ. ನೀನು ಏನಾದರೂ ಮಾಡಿಕೋ."

"ಅದು ನ್ಯಾಯ ಅಲ್ಲ. ನಿಮ್ಮ ಆಸ್ತಿ ನಿಮ್ಮ ಮಕ್ಕಳಿಗೇ ಹೋಗಬೇಕು.... ದಯವಿಟ್ಟು ನನಗಾಗಿ, ನಿಮಗಾಗಿ, ನಿಮ್ಮ ವಂಶಕ್ಕಾಗಿ...."

"ನನಗೆ ವಯಸ್ಸಾಯಿತು ಮೀರ. ನನಗೆ ಯಾರು ಹೆಣ್ಣು ಕೊಡುತ್ತಾರೆ?" ಶಾಮು ನಗೆಯಾಡುತ್ತಾ ಹೇಳಿದ.

ಮೀರ ಶಾಮುವಿನ ಉಕ್ಕಿನಂತಹ ತೋಳುಗಳನ್ನು, ವಿಸ್ತಾರವಾದ ಎದೆ ಯನ್ನೂ, ಆರೋಗ್ಯ ಸೂಸುವ ಮುಖವನ್ನೂ ಅಭಿಮಾನ, ಮೆಚ್ಚುಗೆಯಿಂದ ನೋಡುತ್ತಾ,

"ನಿಮಗೆ ಹೆಣ್ಣು ಹುಡುಕುವ ಭಾರ ನನಗಿರಲಿ" ಎಂದಳು.

"ಆಗಲಿ ಡಾಕ್ಟರ್ ಸಾಹೇಬಾ."

"ನಮ್ಮ ವೆಂಕೂ ಏನಾಗಿದಾಳೆ? ಚಿಕ್ಕ ಹುಡುಗಿಯಲ್ಲಿ ಹೇಗೇಗೋ ಇದ್ದಳು. ಈಗ ಮೈಕೈ ತುಂಬಿಕೊಂಡು...."

ಶಾಮು ಗಟ್ಟಿಯಾಗಿ ನಗುತ್ತಾ, "ವೆಂಕು ತಂಗಿ ಒಂದಿದೆ, ಆರು ವರ್ಷದ್ದು.

ಅದೇ ಯಾಕಾಗಬಾರದೂಂತ ಅಂತೀನಿ."

"ನಿಮಗೆಲ್ಲಾ ತಮಾಷೀನೆ."

"ಯೋಚನೆ ಮಾಡು ಮೀರ. ವೆಂಕೂನ ನಾನು ಆಡಿಸಿದ್ದೇನೆ. ನನ್ನ ಕಣ್ಣೆದುರಿಗೆ ಹುಟ್ಟಿದ ಮಗು ಅವಳು. ನನಗೆ ಅವಳು ಪುಟ್ಟ ತಂಗಿ ಇದ್ದ ಹಾಗೆ ಇದ್ದಾಳೆ. ಸದ್ಯ ನೀನು ಅವಳೆದುರಿಗೆ ಈ ವಿಷಯ ಹೇಳೀಯ ಜೋಕೆ. ಆಮೇಲೆ ಆ ಹುಡುಗಿ ನಾಚಿಕೊಂಡು ಇಲ್ಲಿಗೆ ಬರೋದನ್ನೇ ನಿಲ್ಲಿಸಿಬಿಡಬಹುದು. ಅವಳೆದುರಿಗೆ ಈ ಸುದ್ದಿ ತೆಗೆಯಬೇಡ" ಶಾಮು ಖಂಡಿತವಾದ ದನಿಯಲ್ಲಿ ಹೇಳಿದ. ಮೀರಳ ಮೊದಲನೆಯ ಯೋಜನೆ ಕುಸಿದುಬಿತ್ತು.

"ನಿಮಗೆ ಹುಡುಗಿ ಹೇಗಿರಬೇಕು ಹೇಳಿ. ನಾನು ಹುಡುಕುತ್ತೇನೆ."

"ನಾನು ಹೇಳಿದಂತಹ ಹುಡುಗಿಯನ್ನೇ ತರಬೇಕು."

"ಆಗಲಿ" ಮೀರ ಉತ್ಸಾಹದಿಂದ ನುಡಿದಳು.

"ಅವಳು ನಿನ್ನಷ್ಟೇ ಎತ್ತರ ಗಾತ್ರ ಇರಬೇಕು. ನಿನ್ನ ಬಣ್ಣ ಇದ್ದರೆ ಸಾಕು. ತಲೆಗೂದಲು ಗುಂಗುರಾಗಿ ಮೋಟಾಗಿರಬೇಕು. ಕಣ್ಣು ಹೊಳಪಾಗಿರಬೇಕು. ತುಟಿ ಯಾವಾಗಲೂ ಎಲೆ ಅಡಿಕೆ ಹಾಕಿಕೊಂಡಂತೆ-ಅಂದರೆ-ನಿನ್ನ ತುಟಿಯಷ್ಟೇ ಕೆಂಪಾಗಿರಬೇಕು. ಅವಳ ಹೆಸರು ಮೀರ ಎಂದೂ ಇರಬೇಕು."

ಮೀರ ನಿರಾಶಳಾಗಿ, "ನಾನೇನು ತಮಾಷೆ ಮಾಡ್ತಿದೀನೀಂತ ತಿಳ್ಕೊಂಡಿರಾ?" ಎಂದಳು.

ಶಾಮು ಎದ್ದು ನಿಂತು ಗಡಸು ದನಿಯಿಂದ, "ಇಲ್ಲ, ಹುಚ್ಚಾಟ ಆಡ್ತಿದೀಂತ ತಿಳ್ಕೊಂಡಿದೀನಿ. ನಡಿ ಮನೆಗೆ ಹೋಗೋಣ" ಎಂದ.

"ಊಹೂಂ, ನಾನು ಬರೋದಿಲ್ಲ. ನಾನು ಹೇಳಿದ ಮಾತಿಗೆ ನೀವು ಒಪ್ಪಿ ಕೊಳ್ಳುವವರೆಗೆ ನಾನು ಈ ಜಾಗದಿಂದ ಕದಲೋದಿಲ್ಲ" ಮೀರ ಮೊಂಡುತನದಿಂದ ಹೇಳಿದಳು.

"ನನಗೇನು ಈಗ ಮಾತು ಕೊಡ್ತೀನಿ. ಆಮೇಲೆ ಮುರೀತೀನಿ ಅಷ್ಟೆ."

"ಹಾಗೆಲ್ಲಾ ಮಾಡಬೇಡಿ."

"ಈಗ ಸದ್ಯಕ್ಕೆ ಮನೆಗೆ ಹೋಗೋಣ, ಏಳು" ಶಾಮು ಎಳೆಯ ಮಗುವನ್ನು ರಮಿಸುವಂತೆ ಮಾತನಾಡಿದ.

"ಊಹೂಂ."

"ಏಳ್ತೀಯೋ ಇಲ್ಲ ನಿನ್ನ ಎತ್ತಿಕೊಂಡು ಹೊರಡಲೋ?" ಶಾಮು ಕೊಂಚ ಖಾರವಾಗಿಯೇ ಹೇಳಿದ.

ಮೀರ ಮಾತನಾಡದೆ ಮೌನವಾಗಿ ತನ್ನ ಅಸಮ್ಮತಿಯನ್ನು ಸೂಚಿಸಿದಳು.

ಅಬ್ಬ! ಹಠದಲ್ಲಿ ಇವಳು ಜಾನಿಯ ತಾಯಿಯೇ ಎಂದುಕೊಂಡ ಶಾಮು.

"ಸರಿ, ಹಾಗಾದರೆ ನೀನಿಲ್ಲಿ ಎಷ್ಟು ಹೊತ್ತು ಬೇಕಾದರೂ ಕುಳಿತಿರು. ನಾನು ಮನೆಗೆ ಹೋಗ್ತೀನಿ. ಆದರೆ ಒಂದು ಎಚ್ಚರಿಕೆಯ ಮಾತು. ಈ ಹೊಂಗೆಮರದಲ್ಲಿ ದೆವ್ವಗಳಿವೇಂತ ಎಲ್ಲರೂ ಹೇಳ್ತಾರೆ."

ಶಾಮು ಅವಳನ್ನು ಹೆದರಿಸಿ ಅಲ್ಲಿಂದ ಏಳಿಸಲು ಪ್ರಯತ್ನಿಸಿದ.

ಮೀರ ನಗುತ್ತಾ, "ನನಗೆ ದೆವ್ವಾಂದ್ರೆ ಸ್ವಲ್ಪವೂ ಹೆದರಿಕೆ ಇಲ್ಲ. ಮುಂದಿನ ವರ್ಷದಿಂದ ಹೆಣ ಕುಯ್ಯೋಕೆ ಹೊರಟಿರೋರಿಗೆ ದೆವ್ವದ ಹೆದರಿಕೆ ಎಲ್ಲಿಂದ ಬರಬೇಕು?" ಎಂದಳು.

ತನ್ನೆಲ್ಲ ಪ್ರಯತ್ನಗಳೂ ಮುಗಿದ ನಂತರ ಶಾಮು ವಿಫಲನಾಗಿ ನುಡಿದ.

"ಒಂದು ಷರತ್ತಿನ ಮೇಲೆ ನಾನು ಎರಡನೆ ಮದುವೆ ಮಾಡಿಕೋತೀನಿ."

"ಏನದು?"

"ನೀನೂ ಬೇರೆ ಮದುವೆ ಮಾಡಿಕೊಂಡರೆ ನಾನೂ ಮಾಡ್ಕೋತೀನಿ."

"ನಾನು ವೈದ್ಯ ವೃತ್ತೀನೆ ಮದುವೆ ಮಾಡಿಕೊಳ್ಳುತ್ತೇನೆ."

"ನಾನು ಹೊಲ, ಗದ್ದೆ, ತೋಟಾನ ಮದುವೆ ಮಾಡಿಕೊಂಡಿದ್ದೀನಿ."

ಶಾಮು ಅವಳಷ್ಟೇ ಜಾಣತನದಿಂದ ಉತ್ತರ ಕೊಟ್ಟ. ಮೀರ ಶಾಮುವನ್ನು ಸಕಾರಣವಾಗಿ ಒಪ್ಪಿಸಲು ಪ್ರಯತ್ನಿಸಿದಳು.

"ನನಗೇನಿದೇಂತ ನಾನು ಎರಡನೆ ಮದುವೆ ಮಾಡಿಕೊಳ್ಳಬೇಕು?"

"ನಾನೇಕೆ ಮಾಡಿಕೋಬೇಕು?"

"ನಿಮಗಾದರೆ ಅಪಾರ ಆಸ್ತಿಯಿದೆ. ನಿಮ್ಮ ಆಸ್ತಿ-ನಿಮ್ಮ ತಂದೆ, ನೀವು ದುಡಿದು ವೃದ್ಧಿಗೊಳಿಸಿರುವ ಆಸ್ತಿ-ಅನ್ಯರ ಪಾಲಾಗಬಾರದೆಂದು ನನ್ನ ಆಸೆ. ನನ್ನಿಂದಾಗಿ ನಿಮ್ಮ ಐಶ್ವರ್ಯ ಹಂಚಿಹೋಗಬಾರದೆಂದು ನಿಮಗೆ ಈ ಸಲಹೆ ಕೊಡುತ್ತಿದ್ದೇನೆ. ನಿಮ್ಮಷ್ಟು ಆಸ್ತಿ ನನಗಿದ್ದಿದ್ದರೆ ಬೇರೆಯ ಮಾತಾಗಿತ್ತು. ನಿಮಗಾಗಿ ಅಲ್ಲದಿದ್ದರೂ ಹಿರಿಯರು ಸಂಪಾದಿಸಿರುವ ಈ ಜಮೀನು ಅನ್ಯರ ಪಾಲಾಗದಂತೆ ಮಾಡಲು ನಿಮಗೆ ಮರುಮದುವೆಯಾಗಲು ಹೇಳುತ್ತಿದ್ದೇನೆ. ನನ್ನಿಂದಾಗಿ ನಿಮ್ಮ ವಂಶ ನಿಲ್ಲಬಾರದು."

"ನೀನು ವೈದ್ಯಳಾಗಿ ಇಲ್ಲಿಯೇ ಬಂದು ನೆಲೆಸು, ಆಮೇಲೆ ಯೋಚನೆ ಮಾಡೋಣ" ಎಂದ ಶಾಮು.

ಅವನ ಮಾತಿನಿಂದ ಅವಳಿಗೆ ಭರವಸೆ ಸಿಕ್ಕಿದಂತಾಯಿತು. ಅವನ ಭರವಸೆ

ಅವಳಿಗೆ ಉತ್ಸಾಹ ನೀಡಿತು. ಮೀರ ಎದ್ದು ನಿಂತಳು.

ನಿಧಾನವಾಗಿ ಕ್ರಮೇಣವಾಗಿ ಅವರ ಮನಸ್ಸನ್ನು ಮೆದು ಮಾಡಬೇಕು ಎಂದುಕೊಂಡಳು ಮೀರ.

* * * * *

ಮೀರಳಿಗೆ ಉತ್ತಮ ದರ್ಜೆಯಲ್ಲಿ ಪಾಸಾಗಿತ್ತು. ಯಾವಾಗಲೂ ಸಿನಿಮಾ, ಹೋಟಲು, ಕಸಿನ್ ಎಂದು ಅಲಂಕಾರ ಮಾಡಿಕೊಂಡು ಓಡಾಡುತ್ತಿದ್ದ ಡಾಲಿಯೂ ಒಂದೇ ಬಾರಿಗೆ ಪಾಸಾಗಿರುವುದನ್ನು ಕಂಡು ಮೀರಳಿಗೆ ಅತ್ಯಾಶ್ಚರ್ಯವಾಯಿತು. ನಿಜವಾಗಿಯೂ ಕಷ್ಟಪಟ್ಟು ಓದುತ್ತಿದ್ದ ಮಂಜುಳಾ ಫೆಯಿಲಾದುದು ಅವಳಿಗೆ ನಂಬಲಾಗದಂತಹ ಸುದ್ದಿಯಾಗಿತ್ತು. 'ಪರೀಕ್ಷೆ ವಿದ್ಯಾರ್ಥಿಗಳ ಬುದ್ಧಿಯನ್ನು ಅಳೆಯುವ ಅಳತೆಗೋಲಲ್ಲ. ಇದು ಬರೀ ಅದೃಷ್ಟ ಪರೀಕ್ಷೆ' ಎಂದುಕೊಂಡಳು ಮೀರ.

ಡಾಲಿ ಈ ಬಾರಿ ಹಾಸ್ಟೆಲಿಗೆ ಬರುವಾಗ ಲೇಡೀಸ್ ಸೈಕಲನ್ನೂ ತೆಗೆಸಿಕೊಂಡು ಬಂದಿದ್ದಳು. ಹಾಸ್ಟೆಲಿಗೂ, ಕಾಲೇಜಿಗೂ ಅಷ್ಟೇನೂ ದೂರವಿಲ್ಲದಿದ್ದರೂ ಅವಳ ಇತರ ಮೋಜಿನ ಕೆಲಸಗಳಿಗಾಗಿ ಸೈಕಲ್ ಬೇಕಾಗಿತ್ತು. ಮನೋರಮಾ ಡಾಲಿಯನ್ನು ಕೇಳಿಯೇಬಿಟ್ಟಳು.

"ಹಾಸ್ಟೆಲಿನಿಂದ ಕಾಲೇಜಿಗೆ ನಿಮಗೆ ನಡೆಯೋದು ಕಷ್ಟವೇನ್ರೀ?"

"ಹಾಗೇನಿಲ್ಲ. ಆದರೆ ಷಾಪಿಂಗ್, ಪಿಕ್ಚರ್‌ಗೆ ಹೋಗಬೇಕಾದರೆ ನಡೆಯಬೇಕು. ನನಗಂತೂ ನಡೆಯೋದೂಂದ್ರೆ ತುಂಬಾ ಬೇಸರ. ಈ ಸಲ ಪರೀಕ್ಷೇಲಿ ಪಾಸಾಗಿದ್ದಕ್ಕೆ ನಮ್ಮ ತಂದೆ ಕೊಟ್ಟ ಬಹುಮಾನ ಈ ಸೈಕಲ್" ಎಂದಳು ಡಾಲಿ ಹೆಮ್ಮೆಯಿಂದ.

ಮಗಳ ವ್ಯಾಸಂಗವನ್ನು ಹುರಿದುಂಬಿಸಲು ಆ ತಂದೆ ಸೈಕಲ್ಲನ್ನು ಬಹುಮಾನವಾಗಿ ಕೊಟ್ಟಿದ್ದರು. ಆದರೆ ಈ ಮಗಳು?

ಈ ವರ್ಷದಿಂದ ಮೀರಳಿಗೆ ಸ್ವಲ್ಪವೂ ಬಿಡುವಿರಲಿಲ್ಲ. ಬೆಳಿಗ್ಗೆ ಡಿಸೆಕ್ಷನ್, ಅದು ಮುಗಿದ ಕೂಡಲೇ ಮತ್ತೆ ಕಾಲೇಜು ಪ್ರಾರಂಭವಾಗುತ್ತಿತ್ತು. ಬೆಳಿಗ್ಗೆ ಎಂಟರಿಂದ ಹತ್ತೂವರೆವರೆಗೆ ಡಿಸೆಕ್ಷನ್ ಮುಗಿಸಿಕೊಂಡು, ಆತುರಾತುರವಾಗಿ ಹಾಸ್ಟೆಲಿಗೆ ಬಂದು ಗಡಿಬಿಡಿಯಿಂದ ಊಟ ಮುಗಿಸಿ, ಮತ್ತೆ ಪುಸ್ತಕಗಳನ್ನು ತೆಗೆದುಕೊಂಡು ಕಾಲೇಜಿಗೆ ಓಡಬೇಕಾಗಿತ್ತು. ಕಾಲೇಜಿಗೆ ಹೊತ್ತಾಗುವುದೆಂಬ ಆತುರದಲ್ಲಿ ಹಸಿವು ಹಿಂಗುವಾಗ ಊಟ ಮಾಡಲೂ ಬಿಡುವಿರುತ್ತಿರಲಿಲ್ಲ.

ಡಿಸೆಕ್ಷನ್ ಥಿಯೇಟರನ್ನು ಪ್ರವೇಶಿಸಿದ ಮೊದಲನೆಯ ದಿನವಂತೂ ಮೀರ ಭಯ, ಅಸಹ್ಯದಿಂದ ಕಂಪಿಸಿದ್ದಳು.

ಫಾರ್ಮಲ್ ಆಸಿಡ್‌ನ ವಾಸನೆ ಥಿಯೇಟರಿನ ತುಂಬ ತುಂಬಿತ್ತು. ಮೇಜಿನ ಮೇಲೆ ಮಲಗಿದ್ದ ಹೆಣವನ್ನು ನೋಡಿದ ಕೂಡಲೇ ಮೀರಳಿಗೆ ಹೆದರಿಕೆಯಿಂದ ಚೀರುವಂತಾಯಿತು. ಮೀರ ಭೀತಿಯಿಂದ ವಿಜಯಳ ಕೈ ಬಿಗಿಯಾಗಿ ಹಿಡಿದು ಕೊಂಡಳು.

ನೀರಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದ ಪರದೇಶಿಯೊಬ್ಬನ ಕಳೇಬರ ವದು. ನೀರು ಕುಡಿದು ಮೈಯೆಲ್ಲಾ ಊದಿ ಬಾದಾಳವಾಗಿತ್ತು. ಕಣ್ಣು ಕತ್ತಲಿಡು ವಂತಹ, ತಲೆ ತಿರುಗಿಸುವಂತಹ, ತಿಂದ ಅನ್ನವನ್ನೆಲ್ಲಾ ವಾಂತಿ ಮಾಡಿಸುವಂತಹ ಅಸಹ್ಯ ವಾಸನೆ ರೂಮಿನ ತುಂಬ ಹರಡಿಕೊಂಡಿತ್ತು. ಈ ಗಬ್ಬು ವಾಸನೆಯ ಮುಂದೆ ಹುಡುಗಿಯರು ಮುಡಿದಿದ್ದ ಸುವಾಸನೆಯಾದ ಹೂಗಳ ಸುಗಂಧ, ಹುಡುಗರು ಹಚ್ಚಿದ್ದ ಸೆಂಟಿನ ಪರಿಮಳ ಎಲ್ಲೋ ಅಡಗಿಹೋಗಿತ್ತು.

ವಿದ್ಯಾರ್ಥಿಗಳು ಹೆಣದ ಸುತ್ತಲೂ ಗುಂಪು ಕಟ್ಟಿಕೊಂಡಿದ್ದರು. ಡೆಮಾನ್ ಸ್ಪ್ರೇಟರು ಸೂಚನೆಗಳನ್ನು ಕೊಟ್ಟ ನಂತರ ಸೀನಿಯರ್ ವಿದ್ಯಾರ್ಥಿಗಳು ಡಿಸೆಕ್ಷನ್‌ಗೆ ಮೊದಲು ಮಾಡಿದರು; ಮೀರ ಕುತೂಹಲ, ಕಳವಳದಿಂದ ನೋಡತೊಡಗಿದಳು.

ಆ ದೇಹ ಹುಳುಗಳ ಬೀಡಾಗಿತ್ತು. ಬೇಕಾದ ಸ್ಥಳವನ್ನು ಎಡಗೈಯಿನ ಬೆರಳುಗಳಿಂದ ಹಿಡಿದು ಬಲಗೈಯಿಂದ ಡಿಸೆಕ್ಟ್ ಮಾಡಿದ ಸೀನಿಯರ್ ವಿದ್ಯಾರ್ಥಿ ಯೊಬ್ಬ. ಶರೀರದಿಂದ ಕ್ರಿಮಿಗಳು ಅವನ ಎಡಗೈ ಮೇಲೆ ಹರಿದಾಡಲಾರಂ ಭಿಸಿದವು. ಆದರೂ ಅವನು ತನ್ನ ಕೈಯನ್ನು ತೆಗೆಯುವಂತಿರಲಿಲ್ಲ. ಅವನಿಗೆ ಬೇಕಾದ ನರ ಸಿಗದೇ ಹೋಗಬಹುದಲ್ಲವೇ? ಅವನು ಆಗಾಗ್ಗೆ ಬಲಗೈಯಿಂದ ಎಡಗೈ ಮೇಲೆ ಹತ್ತಲು ಪ್ರಯತ್ನಿಸುತ್ತಿದ್ದ ಕ್ರಿಮಿಗಳನ್ನು ಕೊಡವಿ ಮತ್ತೆ ತನ್ನ ಕೆಲಸದಲ್ಲಿ ತೊಡಗುತ್ತಿದ್ದ.

ಅವರು ಹುಡುಕುತ್ತಿದ್ದ ನರ ಸಿಕ್ಕಿದಾಗ ವಿದ್ಯಾರ್ಥಿಗಳಿಗಾದ ಸಂತೋಷ ಹೇಳತೀರದು. ಏನೋ ಒಂದು ದೊಡ್ಡ ನಿಧಿ ಸಿಕ್ಕಿದ ಹಾಗೆ ಎಲ್ಲರೂ ಹಿಗ್ಗಿದರು.

ಆ ದಿನ ಮೀರಳಿಗೆ ಊಟ ಸೇರಲಿಲ್ಲ. ಹಾಸ್ಟೆಲಿಗೆ ಬಂದವಳೇ ಬಿಸಿನೀರಿಲ್ಲ ದಿದ್ದರೂ ತಣ್ಣೀರಿನಲ್ಲಿಯೇ ಸ್ನಾನ ಮಾಡಿದಳು. ಕೈಗಳನ್ನಂತೂ ಎಷ್ಟು ಬಾರಿ ಸೋಪು ಹಾಕಿ ಉಜ್ಜಿ ತೊಳೆದರೂ ತೃಪ್ತಿಯಿರಲಿಲ್ಲ. ಸೋಪು ಹಾಕಿ ತೊಳೆದು ತೊಳೆದು ಕೈ ಉರಿಯುವಂತಾದ ಮೇಲೆ ಅವಳು ಸುಮ್ಮನಾದಳು. ಅನ್ನ ಒಂದು ತುತ್ತೂ ಗಂಟಲಿನಲ್ಲಿ ಇಳಿಯಲಿಲ್ಲ. ಅನ್ನ ತಿನ್ನಲು ಹೋದರೆ ಡಿಸೆಕ್ಷನ್ ರೂಮಿನಲ್ಲಿದ್ದ ವಾಸನೆಯೇ ಬಂದಂತಾಗುತ್ತಿತ್ತು.

ಏನೋ ಅಸಹ್ಯ, ವಾಕರಿಕೆ, ಜುಗುಪ್ಸೆ.

ಆ ದಿನವೆಲ್ಲಾ ಮೀರ ಮಂಕಾಗಿದ್ದಳು. ಆದರೆ ಡಿಸೆಕ್ಟ್ ಮಾಡುವುದು ದಿನಚರಿಯಾದ ಮೇಲೆ, ಹೆಣದ ನರನರವನ್ನೂ ಬಿಡಿಸಿ ನೋಡುವುದು ಸಾಮಾನ್ಯ ವಾದ ಮೇಲೆ, ಹೆಣ ಕುಯ್ಯುವುದು ತರಕಾರಿ ಹೆಚ್ಚುವಷ್ಟೇ ಮಾಮೂಲಾದ ಮೇಲೆ ಮೀರ ಕ್ರಮೇಣ ಚೇತರಿಸಿಕೊಂಡಳು. ದೇಹದ ಅಂಗಾಂಗಗಳೆಲ್ಲವನ್ನೂ ಕತ್ತರಿಸಿ, ಬಿಡಿಸಿ ನೋಡಿ ನೋಟ್ಸ್ ಮಾಡಿ ಮತ್ತೆ ಹೊಲಿದು ಹಾಕುವುದೆಂದರೆ ಸಾಧಾರಣ ವಾದ ಕೆಲಸವಾಗಿ ಹೋಯಿತು. ಡಿಸೆಕ್ಷನ್ ಮುಗಿಸಿ ಹಾಸ್ಟೆಲಿಗೆ ಬಂದು, ಹೊಟ್ಟೆ ತುಂಬ ಊಟ ಮಾಡಿ ಮತ್ತೆ ಕಾಲೇಜಿಗೆ ಹೋಗುತ್ತಿದ್ದಳು. ಮೊದಲ ದಿನದ ಅನುಭವ ಅವಳಿಗೆ ಮತ್ತೆ ಎಂದಿಗೂ ಆಗಲಿಲ್ಲ.

ಡಿಸೆಕ್ಷನ್ ಮಾಡುವಾಗ ಮೀರ ತನ್ನನ್ನು ತಾನೇ ಮರೆಯುತ್ತಿದ್ದಳು. ಪವಾಡವನ್ನು ನೋಡುವ ಮಗುವಿನಂತೆ ಅವಳ ಕಣ್ಣುಗಳು ಅಚ್ಚರಿ, ಆನಂದದಿಂದ ಅರಳುತ್ತಿದ್ದವು. ತಾನು ಹುಡುಕುತ್ತಲಿದ್ದ ನರ, ರಕ್ತನಾಳ, ಮೂಳೆ ಸಿಕ್ಕಿದಾಗಲಂತೂ ಅವಳ ಆನಂದಕ್ಕೆ ಪಾರವೇ ಇರುತ್ತಿರಲಿಲ್ಲ.

ಮೀರಾ ತುಂಬಾ ಚಿಕ್ಕ ಹುಡುಗಿಯಾಗಿದ್ದಾಗ ಗೋಪಾಲ ಹೇಳುತ್ತಿದ್ದ,

"ಚರ್ಮ ನಮ್ಮ ದೇಹದ ಹೊರಗಿನ ಮುಸುಕು. ಚರ್ಮದ ಒಳಗೆ ರಕ್ತ, ಮಾಂಸ ಇವೆ. ಅದರೊಳಗೆ ಮೂಳೆಯಿದೆ. ನೀನೂ ಡಾಕ್ಟರ್ ಪರೀಕ್ಷೆ ಮಾಡು. ಆಗ ಎಲ್ಲ ನಿನಗೇ ಅರ್ಥವಾಗುತ್ತದೆ."

ಆಗ ಮೀರ ಕೌತುಕದಿಂದ ಗೋಪಾಲ ಹೇಳುವುದನ್ನೇ ಕೇಳುತ್ತಿದ್ದಳು. ಈಗಲೂ ಆಗಿದ್ದ ಕುತೂಹಲ, ಆತುರ, ಆಸಕ್ತಿ ಕಡಿಮೆಯಾಗಿರಲಿಲ್ಲ. ಸೃಷ್ಟಿರಹಸ್ಯ ವನ್ನು ಭೇದಿಸುವವಳಂತೆ ಮೀರ ದಾಹದಿಂದ ತನ್ನ ಸುತ್ತಲೂ ನೋಡಿ ಗ್ರಹಿಸುತ್ತಿದ್ದಳು.

ಒಂದು ದಿನ ಪೋಸ್ಟ್‌ಮಾರ್ಟಂಗೆ ಹತ್ತೊಂಬತ್ತು ಇಪ್ಪತ್ತು ವರ್ಷದ ಹುಡುಗಿಯೊಬ್ಬಳ ದೇಹ ಬಂದಿತು. ಆ ಹುಡುಗಿ ಜೀವನದ ವಸಂತದಲ್ಲೇ ಬೇಸರಗೊಂಡು ಬದುಕನ್ನು ಕೊನೆಗಾಣಿಸಿಕೊಂಡಿದ್ದಳು.

ಮೆಡಿಕಲ್ ವಿದ್ಯಾರ್ಥಿಗಳು ಪೋಸ್ಟ್‌ಮಾರ್ಟಂಗಿಂತಲೂ ಹುಡುಗಿಯ ವೈಯಕ್ತಿಕ ಜೀವನವನ್ನು ಅರಿಯಲು ಹೆಚ್ಚು ಕಾತರರಾದರು. ಹುಡುಗಿಯ ದೇಹ ಬಂದ ಸ್ವಲ್ಪ ಹೊತ್ತಿನೊಳಗೆ ಹುಡುಗಿಯ ಖಾಸಗಿ ವಿಷಯಗಳನ್ನೆಲ್ಲಾ ಪ್ರಚಂಡ ಹುಡುಗರು ಪತ್ತೆ ಹಚ್ಚಿದರು.

ತಾರಾ ಮಹಾರಾಜ ಕಾಲೇಜಿನಲ್ಲಿ ಎಂ.ಎ. ತರಗತಿಯಲ್ಲಿ ಓದುತ್ತಿದ್ದಳು. ಹುಡುಗಿ ತುಂಬಾ ಬುದ್ಧಿವಂತೆಯಾಗಿದ್ದಳು. ಸೌಂದರ್ಯ, ಬುದ್ಧಿ, ಹಣ

ಯಾವುದಕ್ಕೂ ದೇವರು ಕಡಿಮೆ ಮಾಡಿರಲಿಲ್ಲ. ಅಂತಹ ಹುಡುಗಿ ಒಂದು ದಿನ ಕಾಲೇಜಿನಿಂದ ಮನೆಗೆ ಬಂದವಳೇ ಬಚ್ಚಲು ಮನೆಗೆ ಹೋದವಳು ಎಷ್ಟು ಹೊತ್ತಾದರೂ ಬಾಗಿಲು ತೆರೆಯಲಿಲ್ಲ. ಮನೆಯವರು ಗಾಬರಿಗೊಂಡು ಬಾಗಿಲು ಒಡೆಸಿದಾಗ, ನೋಡಿದವರ ಎದೆ ಒಡೆಯುವಂತೆ ಹಗ್ಗವೊಂದು ಬಚ್ಚಲುಮನೆಯ ತೊಲೆಯಿಂದ ನೇತಾಡುತ್ತಿತ್ತು. ಎರಡು ಗಂಟೆಯ ಹಿಂದೆ ನಗುನಗುತ್ತಿದ್ದ ಸುಂದರ ಹುಡುಗಿ ಈಗ ಹಲ್ಲು ಗಿಟರಿಕೊಂಡಿದ್ದ ಹೆಣವಾಗಿದ್ದಳು. ಮನೆಯವರ ಬೊಬ್ಬೆ ಕೇಳಿ ನೆರೆಹೊರೆಯವರು ಬಂದರು. ಈ ಸುದ್ದಿ ಕಾಲೇಜಿಗೆ ತಲುಪಲು ತಡವಾಗ ಲಿಲ್ಲ. ಇಡೀ ಕಾಲೇಜೇ ಅವರ ಮನೆಯ ಮುಂದೆ ನೆರೆಯಿತು. ವಾರ್ತೆ ಪೊಲೀಸರಿಗೆ ತಲುಪಿ, ತನಿಖೆ ಕ್ರಮ ನಡೆದು, ಹೆಣವನ್ನು ಪೋಸ್ಟ್‌ಮಾರ್ಟಂಗಾಗಿ ಮೆಡಿಕಲ್ ಕಾಲೇಜಿಗೆ ತಂದಿದ್ದರು.

ನಾನಾ ಬಗೆಯ ಮಾತುಗಳು ನಗರದಲ್ಲೆಲ್ಲಾ ಓಡಾಡಿದವು.

"ಹುಡುಗಿಯ ನಡತೆ ಸ್ವಲ್ಪವೂ ಚೆನ್ನಾಗಿರಲಿಲ್ಲವಂತೆ. ಎಷ್ಟು ಹೊತ್ತಿನಲ್ಲಿ ಅಂದರೆ ಅಷ್ಟು ಹೊತ್ತಿನಲ್ಲಿ ಸಿಕ್ಕಿದವರ ಜೊತೆ ಅಲೆದಾಡುತ್ತಿದ್ದಳಂತೆ. ಪ್ರಾಯದ ಹುಡುಗಿ ಏನು ಅನರ್ಥ ಮಾಡಿಕೊಂಡಳೋ?"

"ಕಾಲೇಜಿನಲ್ಲಿ ತನ್ನ ಸಹಪಾಠಿಯೊಬ್ಬನನ್ನು ಪ್ರೀತಿಸುತ್ತಿದ್ದಳಂತೆ. ಅವನು ಅವಳಿಗೆ ಮದುವೆ ಮಾಡಿಕೋತೀನಿ ಅಂತ ಆಸೆ ತೋರಿಸಿದನಂತೆ. ಅವನ ಜೊತೆ ಸಲಿಗೆಯಾಗಿದ್ದುಬಿಟ್ಟಳಂತೆ. ಅವಳಿಗೆ ಎರಡು ತಿಂಗಳಾಯಿತು. ಅವನು ಅವಳ ಕೈಬಿಟ್ಟ. ಮಾನಕ್ಕೆ, ಸಮಾಜಕ್ಕೆ ಹೆದರಿ ನೇಣು ಹಾಕಿಕೊಂಡಳಂತೆ."

"ಅಪ್ಪ, ಅಮ್ಮನೇ ಮಗಳನ್ನು ಮುಂದೆ ಮಾಡಿ ತಮ್ಮ ತಮ್ಮ ಜೀವನ ನಡೆಸುತ್ತಿದ್ದರಂತೆ. ಅದೇನು ಬೇಸರ ಬಂತೋ ಕತ್ತಿಗೆ ನೂಲು ಹಾಕಿಕೊಂಡಳು."

"ಮದುವೆ ಗೊತ್ತಾಗಿತ್ತಂತೆ. ಗಂಡೊಬ್ಬನ ಕೈಯಿಂದ ಕೊರಳಿಗೆ ತಾಳಿ ಬಿಗಿಸಿಕೊಳ್ಳೋದಕ್ಕಿಂತ ತಾನೇ ಹಗ್ಗ ಬಿಗಿದುಕೊಳ್ಳೋದು ವಾಸೀಂತ ನೇಣು ಹಾಕಿಕೊಂಡಳಂತೆ."

ಸುಂದರ ಯುವತಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಿದ್ದಳು. ಎಲ್ಲರೂ ಶೀಲ, ನಡತೆಯನ್ನು ಪ್ರಶ್ನಿಸುವವರೇ! ಪ್ರಾಯದ, ಮದುವೆಯಿಲ್ಲದ ಹುಡುಗಿ ಯೊಬ್ಬಳು ಅಕಾಲ ಮೃತ್ಯುವಿಗೀಡಾದರೆ ಜನರಿಗೆ ಯೋಚಿಸಲು ಬೇರೊಂದು ಕಾರಣವೇ ಇರಲಿಲ್ಲ.

"ಅದಕ್ಕೆ ಹೆಣ್ಣು ಹುಡುಗಿಯರನ್ನು ಓದಿಸಬಾರದೂಂತ ಹೇಳೋದು. ಓದಿಸಿದರೆ ಅವರು ಕುಲಗೆಟ್ಟು ಹಾಳಾಗಿಹೋಗುತ್ತಾರೆ."

ಕುರುಡನೊಬ್ಬ ಆನೆಯ ಸೊಂಡಿಲನ್ನು ಮುಟ್ಟಿ ನೋಡಿ, 'ಇದೇ ಆನೆ' ಎಂದು ನಿರ್ಧರಿಸಿದ್ದ.

ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಹುಡುಗಿಯ ಹೆಣದ ಸುತ್ತಲೂ ಗುಂಪು ಕೂಡಿದ್ದರು.

ತಮ್ಮೆಲ್ಲರ ಕುತೂಹಲದ ವಸ್ತುವಾಗಿ, ಪ್ರಯೋಗದ ಸಾಧನವಾಗಿ ಮೇಜಿನ ಮೇಲೆ ನಗ್ನವಾಗಿ ಬಿದ್ದಿದ್ದ ಹುಡುಗಿಯ ದೇಹ ನೋಡಿ ಮೀರಳ ಕಣ್ಣುಗಳು ತೇವಗೊಂಡವು.

ಈ ಹುಡುಗಿ ಬದುಕಿದ್ದರೆ?

ಯಾರ ಮನೆಯ ನಂದಾದೀಪವಾಗಿ ಬೆಳಗುತ್ತಿದ್ದಳೋ?

ಯಾವ ರಸಿಕನ ಹೃದಯ ಸಾಮ್ರಾಜ್ಞಿಯಾಗಿ ಮೆರೆದಾಡುತ್ತಿದ್ದಳೋ?

ಯಾವ ರಾಮನ್, ರವೀಂದ್ರ, ನೆಹರೂ, ಸರೋಜಿನಿಯಂತಹವರಿಗೆ ಜನ್ಮ ಕೊಡುತ್ತಿದ್ದಳೋ?

ಅರಳುತ್ತಿದ್ದ ಈ ಜೀವನದ ಹೂವನ್ನು ಅದಾವ ಕರಾಳ ಹಸ್ತ ಹೊಸಕಿ ಹಾಕಿರಬಹುದು? ಯಾವ ಕಾರಣ ಅವಳನ್ನು ಈ ಕೃತ್ಯಕ್ಕೆ ಪ್ರೇರೇಪಿಸಿರಬಹುದು? ಯಾವ ಚಿಂತೆ ಅವಳ ಎಳೆಯ ಒಡಲಿನಲ್ಲಿ ಕಿಚ್ಚನ್ನು ಹೊತ್ತಿಸಿರಬಹುದು?

ಮೇಜಿನ ಮೇಲೆ ನಿರ್ಲಜ್ಜೆಯಿಂದ ಮಲಗಿತ್ತು ಮಾಟವಾದ ದೇಹ. ಅವಳ ಕೊರಳಿನ ಸುತ್ತ ನೀಲಿ ಗುರುತೊಂದರ ವಿನಃ ದೇಹ ಮತ್ತೆಲ್ಲ ಕಡೆಯೂ ಸರಿಯಾಗಿತ್ತು. ಅವಳ ಮುಖದ ಮೇಲಿದ್ದ ಸ್ನೋ ಪೌಡರ್ ಮಾಸಿರಲಿಲ್ಲ. ಹಣೆಯ ಕುಂಕುಮ ಅಳಿಸಿರಲಿಲ್ಲ. ಮುಡಿಯಲ್ಲಿದ್ದ ಹೂವು ಮಾತ್ರ ಕೊಂಚ ಬಾಡಿತ್ತು.

ಕೆಲವು ವಿದ್ಯಾರ್ಥಿಗಳು ಮುಸಿಮುಸಿ ನಕ್ಕರು.

"ಎಕ್ಸ್‌ಪೆಕ್ಟ್ ಮಾಡ್ತಿದ್ದಳೂಂತ ಕಾಣುತ್ತೆ?"

"ಯಾರನ್ನ? ಮಗೂನೋ, ಸಾವನ್ನೋ?"

"ಮಗೂನ ಎಕ್ಸ್‌ಪೆಕ್ಟ್ ಮಾಡಿ ಸಾವನ್ನ ಇನ್‌ವೈಟ್ ಮಾಡಿರಬೇಕು."

ಹುಡುಗಿಯರೆಲ್ಲ ಒಂದು ಮಾತೂ ಆಡದೇ, ಜೀವ ಬಿಗಿ ಹಿಡಿದುಕೊಂಡು ಪೋಸ್ಟ್‌ಮಾರ್ಟಮ್ಮನ್ನು ನೋಡುತ್ತಿದ್ದರು.

ಹುಡುಗಿಯ ಸುಂದರ ದೇಹದ ಮೇಳೆ ಹರಿತವಾದ ಆಯುಧಗಳು ಸ್ವೇಚ್ಛೆಯಾಗಿ ಓಡಾಡಿದವು. ಡಾಕ್ಟರು ಅವಳ ದೇಹದ ಅನೇಕ ಭಾಗಗಳನ್ನು ಕತ್ತರಿಸಿ ನೋಡಿದರು. ಪರೀಕ್ಷೆ ಮುಗಿದ ನಂತರ ಮತ್ತೆ ಹೊಲೆದು ಅವಳ ಛಿದ್ರ ದೇಹವನ್ನು ಜೋಲುಮೋರೆ ಮಾಡಿಕೊಂಡು ನಿಂತಿದ್ದ ಅವಳ ತಂದೆಗೆ

ಒಪ್ಪಿಸಿದರು.

ಆತ ಪ್ರಶ್ನಾರ್ಥಕ ದೃಷ್ಟಿಯಿಂದ ನೋಡಿದರು.

"ಜನರ ಅನುಮಾನ ಬುಡವಿಲ್ಲದ್ದು" ಎಂದು ಅವರಿಗೆ ತಿಳಿಯಿತು. ಫಲಿತಾಂಶ ತಿಳಿದೊಡನೆ ಬಾಡಿದ್ದ ಹುಡುಗಿಯರ ಮುಖಗಳು ಮತ್ತೊಮ್ಮೆ ಅರಳಿದವು. ತಮ್ಮ ಜಾತಿಗೆ ಆಗಬಹುದಾಗಿದ್ದ ಅಪಮಾನಕ್ಕೆ ಆಸ್ಪದವಿಲ್ಲವೆಂದು ತಿಳಿದು ಯಶೋದ ಕರವಸ್ತ್ರವನ್ನು ಮೇಲೆ ಹಾರಿಸಿದಳು.

ವಿಜಯ "ಪೂರ್ ಗರ್ಲ್" ಎಂದಳು.

ಡಾಲಿ, "ಯಾವಾಗ ಸಾಯ್ತೀವೋ ಏನೋ? ಬದುಕಿರುವಾಗಲೇ ಲೈಫ್‌ನ ಎಂಜಾಯ್ ಮಾಡಬೇಕು" ಎಂದಳು.

'ಕೋಮಲ ಹೂವಿನಿಂದ ಆತ್ಮಸೌರಭವನ್ನು ಹೀರಿದ ಕಾರಣವಾದರೂ ಏನು?' ಎಂದು ಮೀರ ತನ್ನನ್ನು ತಾನೇ ಪ್ರಶ್ನಿಸಿಕೊಂಡಳು.

ರಂಗುರಂಗಿನ ಕತೆ ಕಟ್ಟಿ, ಊರಿನಲ್ಲಿ ಡಂಗೂರ ಸಾರಲು ತವಕಿಸುತ್ತಿದ್ದ ಅನೇಕ ನಾಲಿಗೆಗಳು ಮೌನವಾದವು.

ಹುಡುಗಿಯ ನಡತೆಯ ಬಗ್ಗೆ ಸಂಶಯಪಟ್ಟು, ಬಸುರಿಯಾಗಿದ್ದಿರಬೇಕು ಎಂದು ಹಗುರವಾಗಿ ಮಾತನಾಡಿದ ವಿದ್ಯಾರ್ಥಿಗಳ ಕಡೆ ತಿರುಗಿ ವಿಜಯ,

"ಯಾವುದೂ ಸರಿಯಾಗಿ ತಿಳಿದುಕೊಳ್ಳದೇ ಬಾಯಿಗೆ ಬಂದಂತೆ ಮಾತನಾಡ ಬಾರದು. ಪಾಪ! ಆಕೆ ಗಂಗಾನದಿಯಷ್ಟೇ ಪವಿತ್ರವಾಗಿದಾಳೆ."

ತಮ್ಮ ವಾದ ನಿರರ್ಥಕ ಎಂದು ತಿಳಿದಿದ್ದ ಹುಡುಗರು ಸುಮ್ಮನಾದರು.

ಕೊನೆಯ ವರ್ಷದಲ್ಲಿದ್ದ ಮೆಡಿಕಲ್ ವಿದ್ಯಾರ್ಥಿಗಳನ್ನು ಬೀಳ್ಕೊಡಲು ವಾರ್ಷಿಕ ಸಮಾರಂಭವೊಂದನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಬೇಕೆಂದು ಕಿರಿಯ ವಿದ್ಯಾರ್ಥಿಗಳು ನಿಶ್ಚಯ ಮಾಡಿದರು.

ಸಮಾರಂಭದ ದಿನ 'ಕಿಸಾಗೋತಮಿ' ನಾಟಕವಾಡಬೇಕೆಂದು ತೀರ್ಮಾನ ವಾಯಿತು. ಜೊತೆಗೆ 'ರೀಫಂಡ್' ಎಂಬ ಇಂಗ್ಲಿಷ್ ನಾಟಕವನ್ನಾಡಬೇಕೆಂದೂ ನಿಶ್ಚಯವಾಯಿತು.

'ಗೋತಮಿ' ಪಾತ್ರದ ಹೊಣೆಗಾರಿಕೆಯನ್ನು ಮೀರ ನಿರ್ವಹಿಸಿದ್ದಳು. 'ಆನಂದ'ನ ಪಾತ್ರವನ್ನು ಎರಡನೇ ವರ್ಷದಲ್ಲಿ ಓದುತ್ತಿದ್ದ ಗೋಪಿನಾಥ ವಹಿಸಿದ್ದ. ಬುದ್ಧನ ಪಾತ್ರವನ್ನು ತಲೆಯೆಲ್ಲಾ ಪಟ್ಟುಗಟ್ಟಿದ್ದ ಹಿರಿಯ ಉಪಾಧ್ಯಾಯರೊಬ್ಬರಿಗೆ ಒಪ್ಪಿಸಲಾಗಿತ್ತು.

ಒಂದು ಭಾನುವಾರ ಮೂರು ಗಂಟೆಗೆ ಉತ್ಸವ ಮೊದಲಾಯಿತು. 'ಟೀ'

ನಂತರ ಫೋಟೋ ಕಾರ್ಯಕ್ರಮವಿದ್ದಿತು. ಮನರಂಜನೆಯ ಕಾರ್ಯಕ್ರಮ ಸಂಜೆ ಐದು ಗಂಟೆಗೆ ಪ್ರಾರಂಭವಾಗಲಿತ್ತು.

ಮೀರ ಶಾಮುವಿಗೆ ಆಹ್ವಾನ ಪತ್ರಿಕೆಯನ್ನು ಕಳುಹಿಸಿದ್ದಳು. ಆದರೆ ಶಾಮು ತಾನು ಸಮಾರಂಭಕ್ಕೆ ಬರಲಾಗುವುದಿಲ್ಲವೆಂದು ತಿಳಿಸಿದ್ದ. ಅವನು ಬರುವುದಿಲ್ಲವೆಂದು ಮೀರಳಿಗೂ ತಿಳಿದಿತ್ತು.

ಅಧ್ಯಕ್ಷರ ಭಾಷಣ, ಸ್ವಾಗತ ಭಾಷಣಗಳಾದ ನಂತರ ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಲಾಯಿತು. ಇಂಗ್ಲಿಷ್ ನಾಟಕವಾದ ನಂತರ, 'ಕಿಸಾ-ಗೋತಮಿ' ನಾಟಕ ಆರಂಭವಾಯಿತು.

ಮೀರ ರಂಗಮಂಟಪದ ಮೇಲೆ ಸುಳಿದು ಬಹಳ ದಿನಗಳಾಗಿದ್ದವು. ಆದುದರಿಂದ ಒಂದು ಅಧೈರ್ಯ ಹುಟ್ಟಿತು.

ತೆರೆ ಎದ್ದಿತು. ಕೈಲೊಂದು ಬಟ್ಟೆಯಿಂದ ಸುತ್ತಿದ ದೊಡ್ಡ ಕರ್ಪೂರದ ಬೊಂಬೆಯನ್ನು ಎದೆಗವಚಿಕೊಂಡು ಮೀರ ರಂಗಸ್ಥಳದ ಮೇಲೆ ಬಂದಳು. ಬಿಚ್ಚಿ ಹಾರಾಡುತ್ತಿದ್ದ ತಲೆಗೂದಲು, ಕಪ್ಪು ವಾಯಿಲ್ ಸೀರೆ, ಕಪ್ಪು ರವಿಕೆ, ಹಣೆಯಲ್ಲಿ ಕುಂಕುಮ, ದುಃಖಿದಾವೇಗದಿಂದ ಕಂಪಿಸುತ್ತಿದ್ದ ತುಟಿಗಳು-ಇವುಗಳನ್ನು ನೋಡಿ ಪ್ರೇಕ್ಷಕರು ಉಸಿರು ಬಿಗಿಹಿಡಿದು ಕುಳಿತರು.

ಶೋಕ, ದೈನ್ಯ ಅವಳ ಮುಖದ ಮೇಲೆ ನಾಟ್ಯವಾಡುತ್ತಿದ್ದವು.

*ಹಗಲೆಲ್ಲ ಕತ್ತಲಾಯ್ತು*
*ಬಾಳೆಲ್ಲ ಬರಿದಾಯ್ತು*
*ಜಗವೆಲ್ಲ ಮಾಯವಾಯ್ತು....*

ಗೋತಮಿ ತುಂಬಿ ಬಂದ ಶೋಕದಿಂದ ರೋಧಿಸಿ ಹಾಡಿದಳು. ರಂಗ ಮಂಟಪದ ಮೇಲೆ ಬಂದೊಡನೆ, ಮೊದಲನೆಯ ಸಾಲನ್ನು ಹಾಡಿದೊಡನೆ 'ಗೋತಮಿ' ಮರೆಯಾದಳು. ಮೀರ-ತನ್ನ ಕಂದನನ್ನು ಕಳೆದುಕೊಂಡಿದ್ದ ತಾಯಿ ಮೀರ-ಅವಳ ಸ್ಥಾನದಲ್ಲಿ ನಿಂತು ಆನಂದನನ್ನು ಯಾಚಿಸುತ್ತಿದ್ದಳು.

*ಕಂಡಿರಾ ಕಂದನನು?*
*ಕೊಡಿಸುವಿರಾ ಬದುಕನ್ನು?*
*ಜೀವನದ ಬೆಳಕನ್ನು....*

-ವೀಣಳನ್ನು ನೆನೆದು ಮೀರಳ ಕಣ್ಣುಗಳಿಂದ ನೀರು ಹರಿಯತೊಡಗಿತು. ಗೋತಮಿಯ ದುಃಖ ಮೀರಳ ಪಾಲಿಗೆ ಕೇವಲ ಅಭಿನಯವಾಗಲಿಲ್ಲ.

ಮಗುವನ್ನು ಕಳೆದುಕೊಂಡಿದ್ದ ತಾಯಿಯ ಶೋಕದಿಂದ ಮೀರ ಆರ್ತಳಾಗಿ ನುಡಿದಳು.

*ನಗುವ ತೋರದು ಕೂಸು*

*ಎದೆಯ ತಬ್ಬದು ಕೂಸು...*

-'ವೀಣಾ, ವೀಣಾ' ಎಂದು ನರಳಿತು ಹೃದಯ.

-ತನ್ನ ಬಾಳನ್ನು ಬರಿದು ಮಾಡಿ ವೀಣ ಎಲ್ಲಿ ಹೋದಳು? ತನ್ನೊಬ್ಬಳನ್ನೇ ಬಿಟ್ಟು ಅವಳು ಹೋದುದಾದರೂ ಎಲ್ಲಿಗೆ?

ಮೀರಳ ಕಂಠ ಗದ್ಗದವಾಯಿತು. ಅವಳ ಬಳಿಯೇ ನಿಂತಿದ್ದ ಆನಂದ-ಗೋಪಿನಾಥ-ಅವಳ ಶೋಕ ಕಂಡು ಗಾಬರಿಯಾದ. ಇದೇನು ನಟನೆಯೋ ಅಥವಾ ನಿಜವಾದ ವ್ಯಥೆಯೋ? ಅವಳ ಕಣ್ಣುಗಳಿಂದ ನೀರು ಒಂದೇ ಸಮನೆ ಹರಿದು ಬರುತ್ತಿತ್ತು. ಗಂಟಲಿನ ನರ ಉಬ್ಬಿ ಮರೆಯಾಗುತ್ತಿತ್ತು. ಎದೆ ಏರಿಳಿಯುತ್ತಿತ್ತು.

*ಬದುಕಿಪನೇ ಈ ಕೂಸ*

*ನಗಿಸುವನೇ ಈ ಕೂಸ...*

ಎಂದವಳು ಹೇಳಿದಾಗ ಗಂಟಲು ಗದ್ಗದವಾಯಿತು.

ತೆರೆ ಕೆಳಗೆ ಬಂದೊಡನೆ ಅಭಿನಯವನ್ನು ಮೆಚ್ಚಿದ್ದ ಪ್ರೇಕ್ಷಕರು ಚಪ್ಪಾಳೆ ಹೊಡೆದರು.

ಎರಡನೆಯ ದೃಶ್ಯದಲ್ಲಿ, ಬುದ್ಧ ಸುಜಾತ ಮಾತನಾಡುತ್ತಿದ್ದಾಗ ವಿಂಗ್ಸ್‌ನಲ್ಲಿ ಮೀರಳನ್ನು ನೋಡಿ ಗೋಪಿನಾಥ ಹೇಳಿದ,

"ತುಂಬಾ ಎಕ್ಸೈಟ್ ಆಗಬೇಡಿ, ಮೀರ. ನೀವು ಬಹಳ ಎಮೋಷನಲ್ ಅಂತ ಕಾಣುತ್ತೆ."

ವಿಜಯ ಕುಣಿದಾಡುತ್ತಾ ಬಂದು ಮೀರಳ ಕೈ ಅದುಮಿದಳು.

"ಇಂತಹ ಅಭಿನಯ ನಾನು ಎಂದೂ ನೋಡಿರಲಿಲ್ಲ. ಈ ಮೇಕ್‌ಅಪ್‌ನಲ್ಲಿ, ಕಪ್ಪು ಉಡುಪಿನಲ್ಲಿ ನೀನು ಎಷ್ಟು ಚೆನ್ನಾಗಿ ಕಾಣ್ತೀ ಗೊತ್ತಾ?"

ಎರಡನೆಯ ದೃಶ್ಯ ಆರಂಭವಾಯಿತು.

ಬುದ್ಧನ ಪ್ರಶ್ನೆಗೆ ಗೋತಮಿ ನುಡಿದಳು:

*ಕೊಡಿಸುವೆಯಾದರೆ ಪೇಳುವೆ ತಂದೆ...*

-ತನ್ನ ವೀಣಳನ್ನು ಯಾರು ಬದುಕಿಸಿದರು? ಅವಳನ್ನು ಉಳಿಸಿಕೊಳ್ಳಲು ತಾನೂ ಶಾಮೂ ಎಷ್ಟು ಕಷ್ಟಪಟ್ಟಿದ್ದರು!

ಬುದ್ಧನ ಅಭಯವಾಣಿಗೆ ಗೋತಮಿ ನುಡಿಯುತ್ತಾಳೆ:

*ಕೊಡಿಸುವೆಯಾ ಕಂದನನು?*

*ನಲಿಸುವೆಯಾ ಚಂದಿರನ?*

*ಬೆಳಗುವೆಯಾ ಬಾಂದಳವ?*

*ಒಂದೆ ಕೂಸಿದು ಚಿನ್ನ,*
*ಒಂದು ನಲಿಸಿತು ಎನ್ನ,*
*ನಕ್ಕು ನಗಿಸಿತು ಮನವ....*

-ವೀಣಾ ತನ್ನ ಒಬ್ಬಳೇ ಮಗಳು. ಜಾನಿಯೊಬ್ಬಳೇ ಶಾಮುವಿನ ಪ್ರೇಮದ ಪುತ್ಥಲಿ, ತಮ್ಮಿಬ್ಬರ ಒಬ್ಬಳೇ ಮಗಳು ವೀಣಾ. ಒಬ್ಬಳಾದರೂ ಮನೆಯಲ್ಲಿ ಹತ್ತು ಜನವಿದ್ದಂತೆ ಸಂಭ್ರಮ. ತಮ್ಮನ್ನು ನಕ್ಕುನಲಿಸಿದ ವೀಣ ಈಗೆಲ್ಲಿ?

*"ನಲಿಸುವೆಯಾ ಚಂದಿರನ?"*

-ಇನ್ನೆಲ್ಲಿಯ ಚಂದ್ರ? ವೀಣ ಮಣ್ಣಿನೊಳಗೆ ಮಣ್ಣಾಗಿ ಹೋಗಿದ್ದಾಳೆ. ತನ್ನ ಬದುಕು? ಕತ್ತಲು ಕವಿದ ಶೂನ್ಯ ಆಕಾಶ. ಅಲ್ಲಿ ಒಂದು ನಕ್ಷತ್ರದ ಮಿಣುಕು ಆಸೆಯೂ ಇಲ್ಲ. ಅವಳ ಸೌಂದರ್ಯ, ಜಾಣ್ಮೆ, ತುಂಟತನ ಎಲ್ಲ ಒಂದು ಹಿಡಿಬೂದಿ? ಒಂದೇ ಒಂದು ಹಿಡಿ ಬೂದಿ!

ಎರಡನೆಯ ದೃಶ್ಯ ಮುಗಿದೊಡನೆ ಕಂಬನಿಯಿಂದ ಕಣ್ಣು ಕಾಣಿಸದಾದ ಮೀರ ಗ್ರೀನ್ ರೂಮಿನಲ್ಲಿದ್ದ ಕುರ್ಚಿಯೊಂದರ ಮೇಲೆ ಕುಳಿತು ಬಿಕ್ಕಿ ಬಿಕ್ಕಿ ಅತ್ತಳು. ಗೋಪಿನಾಥ ಅವಳ ಅಳು ನೋಡಿ ಹೆದರಿಬಿಟ್ಟ.

"ಸ್ವಲ್ಪ ಸ್ಥೈರಿಸಿಕೊಳ್ಳಿ ಮೀರ. ಹೀಗೆ ಉದ್ವೇಗಗೊಳ್ಳಬಾರದು. ಇದು ನಾಟಕ ಅಷ್ಟೆ. ಇದಕ್ಕೇಕೆ ಇಷ್ಟೊಂದು ದುಃಖ?"

ಅವನಿಗೆ ಇದು ಕೇವಲ ನಾಟಕವಿರಬಹುದು. ಆದರೆ ತನಗೋ? ತನ್ನ ಕರುಳಿನ ಒಂದು ಚೂರನ್ನು ಅಗ್ನಿಗೆ ಅರ್ಪಿಸಿದ ತನಗೋ?

ವಿಜಯ ಧಾವಿಸಿ ಬಂದು ಮೀರಳ ಕೊರಳಿನ ಸುತ್ತಲೂ ಕೈ ಹಾಕಿ,

"ಮೀರ.... ಮೀರಾ ಸ್ಥೈರಿಸಿಕೋ" ಎಂದಳು.

ಕಂಬನಿಯಿಂದ ಅಳಿಸಿಹೋಗಿದ್ದ ಬಣ್ಣವನ್ನು ಮತ್ತೆ ಮುಖಕ್ಕೆ ಬಳಿದುದಾಯ್ತು. ತನ್ನ ನೋವನ್ನು ನುಂಗಿಕೊಂಡು ಮೀರ ಮೇಲೆದ್ದಳು.

ಸಾವು ಕಾಣದ ಮನೆಯ ಸಾಸಿವೆಯ ಕಾಣದೆ ಗೋತಮಿ ದಯಾಳುವಾದ ಬುದ್ಧದೇವನೆಡೆಗೆ ಮರಳಿ ಬಂದಳು. ಬುದ್ಧನ ಅಮೃತವಾಣಿಯಿಂದ ಗೋತಮಿಯ ಶೋಕ ತೊಲಗಿ ಅವಳು ಬೆಳಕನ್ನು ಕಂಡಳು.

"ಸಾವಿಲ್ಲದೆಡೆಯಿಲ್ಲ-ನೋವಿಲ್ಲದೆಡೆಯಿಲ್ಲ" ಎಂಬ ಮಾತು ಕೇಳಿ ಗೋತಮಿಗೆ ಜ್ಞಾನೋದಯವಾಗಿ ನುಡಿದಳು,

*ಯಾರೋ ಕೊಟ್ಟರು ಅದನು!*
*ಯಾರೋ ಕಿತ್ತರು ಅದನು!*
*ಆದೇಕೆ ಆ ಹಿಗ್ಗು, ಈಗೇಕೆ ಈ ಕುಗ್ಗು....*

-ಗೋತಮಿಯ ನೋವು ಪರಿಹಾರ ಮಾಡಲು ಅವಳಿಗೆ ಗೌತಮನಂತಹ ಮಹಾತ್ಮ ಸಿಕ್ಕಿದ್ದ. ಆದರೆ ತನಗೆ?

ಗೋತಮಿ ಬುದ್ಧನ ಚರಣಗಳಿಗೆ ನಮಿಸುತ್ತಿದ್ದಂತೆಯೇ ತೆರೆ ಜಾರಿತು.

ಉತ್ತಮ ಅಭಿನಯ ನೀಡಿದುದಕ್ಕಾಗಿ ಮೀರಳಿಗೆ ಪ್ರಥಮ ಬಹುಮಾನ ಬಂದಿತು. ಅಧ್ಯಕ್ಷರು ತನ್ನ ಹೆಸರನ್ನು ಕೂಗಿದಾಗ ವಿಂಗ್ಸ್‌ನಲ್ಲಿ ನಿಂತಿದ್ದ ಮೀರ ಗೋಪಿನಾಥನಿಗೆ,

"ನನ್ನದು ಅಭಿನಯವಲ್ಲ. ಆದುದರಿಂದ ನನಗೆ ಬಹುಮಾನ ಬೇಡ" ಎಂದಳು.

"ಅಷ್ಟೊಂದು ಅದ್ಭುತವಾಗಿ ಅಭಿನಯಿಸಿ ಈ ಬಹುಮಾನ ಬೇಡವೆನ್ನುವುದು ನ್ಯಾಯವಲ್ಲ."

"ನನ್ನದು ಅಭಿನಯವಲ್ಲ. ದಯವಿಟ್ಟು ನನ್ನ ಮಾತಿಗೆ ಮನ್ನಣೆ ಕೊಡಿ."

ಗೋಪಿನಾಥ ರಂಗಮಂಟಪವನ್ನೇರಿ ಅಧ್ಯಕ್ಷರ ಕಿವಿಯಲ್ಲಿ ಮೀರಳ ಮಾತನ್ನು ಹೇಳಿದ. ಅಧ್ಯಕ್ಷರು ಅದೇ ಬಹುಮಾನವನ್ನು 'ರೀಫಂಡ್' ನಾಟಕದಲ್ಲಿ ಪಾತ್ರವಹಿಸಿದ್ದ ವೆಂಕಟೇಶಮೂರ್ತಿಗಿತ್ತರು.

ಗೋಪಿನಾಥ ಮತ್ತೆ ಮೀರಳ ಬಳಿಗೆ ಬಂದು,

"ನೀವು ಹಾಗೆ ಅಳಲು ಹೇಗೆ ಸಾಧ್ಯವಾಯಿತು? ನಿಮ್ಮ ಕಣ್ಣಿಂದ ನೀರು ಹರಿಯುತ್ತಿದ್ದುದು ನೋಡಿ ನನಗೆ ಗಾಬರಿಯಾಗಿತ್ತು" ಎಂದ.

ಮಗಳ ಮೃತ್ಯುವಿನ ನೆನಪು ಮರುಕಳಿಸಿ, ನೆನಪು ಹೃದಯವನ್ನು ಹಿಂಡಿದಾಗ ಕಣ್ಣೀರು ಬರುವುದು ಆಶ್ಚರ್ಯವೇ?

ಗೋಪಿನಾಥನ ಮಾತಿಗೆ ಮೀರ ವಿಷಾದದಿಂದ ನಕ್ಕಳು. ಅಧ್ಯಕ್ಷರು ಮೀರಳ ಅಭಿನಯವನ್ನು ಹೊಗಳಿ,

"ನೀವು ಬಹುಮಾನ ಯಾಕೆ ಬೇಡವೆಂದಿರಿ?" ಎಂದಾಗ ಮೀರ,

"ಅಭಿನಯದ ಪ್ರಥಮ ಬಹುಮಾನ ಪಡೆಯುವ ಯೋಗ್ಯತೆ ನನಗಿರಲಿಲ್ಲ" ಎಂದು ವಿನಯವಾಗಿ ನುಡಿದಳು.

ಸಮಾರಂಭವೆಲ್ಲಾ ಮುಗಿದ ಮೇಲೆ ಮೀರಳ ಮಿತ್ರರು ಬಂದು ಅವಳನ್ನು ಅಭಿನಂದಿಸಿದರು.

"ನಿಮ್ಮ ಅಭಿನಯ ಸೊಗಸಾಗಿತ್ತು."

ಅಭಿನಯ! ಹೃದಯ ಬೆಂದು ಹೋಗುತ್ತಿದ್ದುದು ಅವರಿಗೇನು ಗೊತ್ತು?

* * * * *

ಮೊದಲನೆ ವರ್ಷದ ಪರೀಕ್ಷೆ ಮುಗಿಯಿತು.

ಮೀರ ಹಳ್ಳಿಗೆ ಹಿಂದಿರುಗಿದಳು. ದಸರೆಯ ರಜದಲ್ಲೂ ಅವಳು ಹಳ್ಳಿಗೆ ಹೋಗಿರಲಿಲ್ಲ. ಶಾಮುವೂ ಅವಳನ್ನು ಹಳ್ಳಿಗೆ ಬರಬೇಕೆಂದು ಒತ್ತಾಯಮಾಡಿ ಕರೆದಿರಲಿಲ್ಲ. ತಾನು ಅವನಿಂದ ದೂರವಿದ್ದಷ್ಟೂ ಹೆಂಡತಿಯ ಅಭಾವ ಕಂಡು ಬಂದು ಶಾಮು ಬೇಗ ಮರುಮದುವೆಯಾದರೂ ಆಗಬಹುದು ಎಂಬ ದೂರದ ಆಸೆಯೊಂದು ಅವಳಲ್ಲಿ ಉದಯವಾಗಿತ್ತು. ಆದುದರಿಂದ ಮೀರ ಏನೇನೋ ಕಾರಣಗಳನ್ನು ಹೂಡಿ ಹಳ್ಳಿಗೆ ಹೋಗಲಿಲ್ಲ.

ವೆಂಕಮ್ಮನವರು ಮೀರಳನ್ನು ಆದರದಿಂದ ಬರಮಾಡಿಕೊಂಡರೂ ಅಸಮಾಧಾನ ಅವರ ಅಂತರಂಗದಲ್ಲೇ ಹೊಗೆಯಾಡುತ್ತಿತ್ತು. ಶಾಮುವಿನಂತಹ ಗಂಡನನ್ನು ಒಂದು ವರ್ಷ ಪೂರ್ತಿ ಬಿಟ್ಟು, ಹೆಂಡತಿಯಾದವಳು ಮೈಸೂರಿನಲ್ಲಿ ಓದಿನ ನೆಪ ಹಾಕಿಕೊಂಡು ಕುಳಿತಿರುವುದೇನು ಚೆಂದ?

ಶಾಮು ಒಳ್ಳೆಯ ಹುಡುಗ. ಮೀರಳ ವ್ಯಾಸಂಗಕ್ಕೆ ಒಂದು ದಿನವೂ ಅಡ್ಡಿ ಮಾಡಿದವನಲ್ಲ. ಆದರೆ ಅವನನ್ನು ಹೀಗೆ ಬಾಡಿಸಬಹುದೇ? ಮೀರಳಂತಹ ಸುಂದರಿಯಾದ ಹೆಂಡತಿಯಿದ್ದೂ ಅವನ ಪಾಲಿಗೆ ಇಲ್ಲವಾಗಿದೆ.

"ಅವರು ಬಂದ ಮೇಲೆ ನಾನು ಊಟ ಮಾಡುತ್ತೇನೆ" ಎಂದು ಹೇಳಿ ಮೀರ ವೆಂಕಮ್ಮನವರೊಡನೆ ಮಾತನಾಡುತ್ತಾ ಕುಳಿತಿದ್ದಳು. ಮೀರ ತನ್ನ ಕಾಲೇಜಿನ ವಿಷಯಗಳನ್ನು ಹೇಳಿದಾಗ ವೆಂಕಮ್ಮನವರಿಗೆ ಆಶ್ಚರ್ಯವಾಯಿತು.

"ಅಬ್ಬ! ನಿನಗೆ ಹೆಣ ಕುಯ್ಯೋಕೆ ಧೈರ್ಯ ಎಲ್ಲಿಂದ ಬಂತು?"

"ಮೊದಲನೆಯ ದಿನ ಸ್ವಲ್ಪ ಹೆದರಿಕೆ ಆಯ್ತು. ಈಗ ಸರಿಹೋಗಿದೆ."

"ನಿಮಗೆ ಕುಯ್ಯೋಕೆ ಅವುಗಳನ್ನು ಎಲ್ಲಿಂದ ಒದಗಿಸುತ್ತಾರೆ?"

"ಪಾಪಿ ಪರದೇಶಿಗಳು, ಭಿಕ್ಷುಕರು ಇವರ ಒಂದು ದೇಹಕ್ಕೆ ಐದು ರೂಪಾಯಿ ಕೊಟ್ಟು ಕೊಂಡುಕೊಳ್ಳುತ್ತಾರೆ. ಬಡತನದಲ್ಲಿರುವವರಿಗೆ ಐದು ರೂಪಾಯಿಯೂ ಒಂದು ದೊಡ್ಡ ನಿಧಿ. ಹಣದಾಸೆಗೆ ಅವರು ಕೊಟ್ಟುಬಿಡ್ತಾರೆ."

"ಗಂಡು ಹುಡುಗರು, ಹೆಣ್ಣು ಹುಡುಗಿಯರೂ ಒಟ್ಟಿಗೆ ಹೆಣ ಕುಯ್ತೀರಾ?"

"ಹೂಂ."

"ಹೆಂಗಸರ ಶವಾನೂ ನಿಮಗೆ ಸಿಕ್ಕುತ್ತಾ?"

"ಹೂ. ಇಲ್ಲದಿದ್ದರೆ ಹೆಂಗಸಿನ ಅಂಗರಚನೆ ನಮಗೆ ಹೇಗೆ ತಿಳಿಯಬೇಕು?"

"ಹೆಣಗಳು ಬರೀ ಮೈಲಿ ಮಲಗಿರುತ್ತವೋ ಅಥವಾ ಏನಾದರೂ ಬಟ್ಟೆ ಹೊದೆಸಿರುತ್ತಾರೋ?"

ವೆಂಕಮ್ಮನವರ ಮಾತು ಕೇಳಿ ಮೀರ ಮನಃಪೂರ್ತಿಯಾಗಿ ನಕ್ಕಳು. ಅವಳ ನಗು ನಿಲ್ಲುವುದಕ್ಕೆ ಮುಂಚೆಯೇ ಶಾಮು ಒಳಗೆ ಬಂದ.

ಶಾಮುವಿಗೆ ಮೀರಳ ಮೇಲೆ ಅಗಾಧವಾದ ಕೋಪ ಬಂದಿತ್ತು. ರಜೆಯಲ್ಲಿ ಅವಳು ಹಳ್ಳಿಗೆ ಬಾರದೇ ಊರಿನಲ್ಲಿಯೇ ಉಳಿದುದರ ಕಾರಣವನ್ನು ಅವನು ಊಹಿಸಿದ್ದ. ಈಗ ಅವಳು ಬಂದಿರುವುದನ್ನು ನೋಡಿ ಶಾಮು ವ್ಯಂಗ್ಯವಾಗಿ ಕೇಳಿದ,

"ಈ ರಜದಲ್ಲಿ ಎಲ್ಲಿಗೂ ಹೋಗಲಿಲ್ಲವೇ?"

ಅವನ ಮಾತಿನಲ್ಲಡಗಿದ್ದ ವ್ಯಂಗ್ಯ ಮೀರಳಿಗೆ ತಿಳಿಯಿತು. ಆದರೂ ಅವಳು ತನಗೆ ಏನೂ ಅರ್ಥವಾಗದವಳಂತೆ,

"ಇಲ್ಲ. ಮುಂದಿನ ಸಲ ವಿಜಯ ನನ್ನ ಪೂನಾಗೆ ಬರುವಂತೆ ಹೇಳಿದಾಳೆ. ಅವಳೊಡನೆ ಪೂನಾ, ಬೊಂಬಾಯಿ ಎಲ್ಲವನ್ನೂ ನೋಡಿಕೊಂಡು ಬರ್ತೀನಿ" ಎಂದು ಉತ್ತರ ಕೊಟ್ಟಳು.

"ಈ ಸಲ ಯಾರೂ ಕರೆಯಲಿಲ್ಲವೇ?"

"ಇಲ್ಲ."

ಗಂಡ ಹೆಂಡತಿಯ ಮಾತುಗಳನ್ನು ಕೇಳುತ್ತಾ ವೆಂಕಮ್ಮನವರು ಸುಮ್ಮನೆ ಕುಳಿತಿದ್ದರು. ಆದರೆ ಅವರು ಮನಸ್ಸಿನಲ್ಲಿಯೇ ಮೀರಳನ್ನು ನಿಂದಿಸಿದರು.

ಸಂಜೆ ಶಾಮು ಹೊರಗೆ ಹೋದೊಡನೆ ವೆಂಕಮ್ಮನವರು ಮೀರಳನ್ನು ತರಾಟೆಗೆ ತೆಗೆದುಕೊಂಡರು.

"ಮನೆ ಯಜಮಾನ್ತೀಂತ ಅನ್ನಿಸಿಕೊಂಡ ನೀನು ಗಂಡನ್ನ ಬಿಟ್ಟು ದೂರ ಇರೋದು ಚೆನ್ನಾಗಿರೋಲ್ಲಮ್ಮ. ಶಾಮು ಬಹಳ ಸೊರಗಿ ಹೋಗಿದಾನೆ."

ಹೌದು ಶಾಮು ಸೊರಗಿದ್ದುದು ಮೀರಳಿಗೂ ತಿಳಿದಿತ್ತು.

"ನಾನೇನು ಮಾಡಲಿ ಹೇಳಿ? ಡಾಕ್ಟರ್ ಪರೀಕ್ಷೆ ಬಹಳ ಸುಲಭವಾದ ಪರೀಕ್ಷೆಯಲ್ಲ. ತುಂಬ ಓದುವುದಿರುತ್ತದೆ. ಆದುದರಿಂದ ರಜದಲ್ಲಿ ಊರಿಗೆ ಬರಲೂ ಆಗುವುದಿಲ್ಲ."

"ನನಗೇನೋ ಇದೆಲ್ಲಾ ಚೆನ್ನಾಗಿಲ್ಲಮ್ಮ."

ತಾನು ಯಾವುದೋ ಒಂದು ಒಳ್ಳೆಯ ಉದ್ದೇಶವಿಟ್ಟುಕೊಂಡು ದೂರ ಉಳಿದರೆ ಜನ ಏನೇನೋ ಅಪಾರ್ಥ ಮಾಡುವರಲ್ಲಾ?

"ನಾನೇನು ಮಾಡಲಿ?"

"ಶಾಮುವಿನ ಗೃಹಲಕ್ಷ್ಮಿಯಾಗಿರು ಸಾಕು."

ಮೀರ ಒಂದು ಕ್ಷಣ ಹಿಂದೆ ಮುಂದೆ ಯೋಚಿಸಿ ಹೇಳಿದಳು,

"ನಾನು ಅವರಿಗೆ ಬೇರೆ ಮದುವೆ ಮಾಡಿಕೊಳ್ಳಲು ಹೇಳಿದ್ದೇನೆ."

ವೆಂಕಮ್ಮನವರು ಬೆಚ್ಚಿದರು. ಅವಳು ಹೇಳಿದ ಮಾತನ್ನು ತಾವು ಸರಿಯಾಗಿ ಕೇಳಿಸಿಕೊಂಡರೋ ಹೇಗೆ?

"ಏನೆಂದೆ?"

"ನಾನು ಅವರಿಗೆ ಬೇರೆ ಮದುವೆ ಮಾಡಿಕೊಳ್ಳಲು ಹೇಳಿದ್ದೇನೆ. ಅವರನ್ನು ಒಪ್ಪಿಸುವ ಭಾರ ನಿಮ್ಮದು."

"ಹೀಗೆಂದರೆ ಹೇಗಮ್ಮಾ?"

"ನಾನು ಸ್ಪಷ್ಟವಾಗಿ ಹೇಳಿಬಿಡುತ್ತೇನೆ ಕೇಳಿ. ನನ್ನ ಬಾಳು ಮೊದಲಿನಿಂದಲೂ ಒಂದು ರೀತಿಯಿಂದ ಸೊಟ್ಟಾಯಿತು. ನನ್ನ ಮನಸ್ಸಿಗಾಗಿರುವ ಅಶಾಂತಿಯನ್ನು ಹೋಗಲಾಡಿಸಿಕೊಳ್ಳುವುದಕ್ಕೋಸ್ಕರ ಓದುತ್ತಿದ್ದೇನೆ. ನಾನು ಓದಿ ಡಾಕ್ಟರಾದ ಮೇಲೆ ಹಳ್ಳಿಗೇ ಹಿಂತಿರುಗಿ ಬರುತ್ತೇನೆ. ಇಲ್ಲಿಯೇ ನಿಂತು ರೋಗರುಜಿನಗಳಿಂದ ನರಳುತ್ತಿರುವ ಬಡರೈತರಿಗೆ ನನ್ನ ಕೈಲಾದಷ್ಟು ಸೇವೆಯನ್ನು ಮಾಡಬೇಕೆಂದಿದ್ದೇನೆ. ಅವರೂ ದೊಡ್ಡ ಮನಸ್ಸು ಮಾಡಿ, ನನಗೆ ಎಲ್ಲ ವಿಧದಲ್ಲಿಯೂ ಸಹಾಯ ಮಾಡುವುದಾಗಿ ಒಪ್ಪಿಕೊಂಡಿದ್ದಾರೆ.... ಅವರೊಡನೆ ಸಂಸಾರ ಮಾಡಲು ಬೇರೊಬ್ಬ ಹುಡುಗಿಯನ್ನು ತಂದು ಮದುವೆ ಮಾಡಬೇಕೆಂದಿದ್ದೇನೆ."

"ನೀನು?"

"ನನ್ನನ್ನು ನಂಬಿದರೆ ಏನೇನೂ ಪ್ರಯೋಜನವಿಲ್ಲ. ನೀವು ಅವರಿಗೆ ಹೇಳಿ ಅವರ ಮನಸ್ಸನ್ನು ತಿರುಗಿಸಲು ಯತ್ನಿಸಿ. ನಾನೂ ಕೈಲಾದ ಪ್ರಯತ್ನ ಮಾಡುತ್ತೇನೆ" ಎಂದು ಹೇಳಿದವಳೇ ಮೀರ ಎದ್ದು ಹೊರಟುಹೋದಳು.

ರಾತ್ರಿ ಊಟ ಮುಗಿಸಿ ಮೀರ ಹಾಸಿಗೆಯ ಮೇಲೆ ಒರಗಿದಾಗ ಶಾಮು ಒಳಗೆ ಬಂದ, ಮಧ್ಯಾಹ್ನ ಹೆಂಡತಿಯನ್ನು ಸರಿಯಾಗಿ ಮಾತನಾಡಿಸದೇ ಹೋದುದಕ್ಕಾಗಿ ಶಾಮುವಿಗೆ ಆಮೇಲೆ ಪಶ್ಚಾತ್ತಾಪವಾಗಿತ್ತು.

"ಏನ್ರೀ ಬಡವನ ನೆನಪು ಈಗಲಾದರೂ ಬಂತೇ?" ಎಂದ ಶಾಮು.

"ಇಲ್ಲ, ಈಗಲೂ ಬರಲಿಲ್ಲ."

"ಹಾಗಾದರೆ ಈಗ ಯಾಕೆ ಇಲ್ಲಿಗೆ ಬಂದೆ?"

"ಇನ್ನೆಲ್ಲಿಗೆ ಹೋಗಬೇಕಾಗಿತ್ತು?"

"ಎಲ್ಲಿಗಾದರೂ ಸರಿ. ನನ್ನಿಂದ ದೂರ...."

"ಇನ್ನೆಲ್ಲಾದರೂ ಹೋದರೆ ನನಗೆ ಅನ್ನ ಹಾಕೋರು ಯಾರು? ನೀವೇನೋ ದೊಡ್ಡ ಮನಸ್ಸು ಮಾಡಿ, ನಾನು ಕೊಟ್ಟ ಕಾಟಾನೆಲ್ಲಾ ಸಹಿಸಿಕೊಂಡಿದೀರಿಂದ್ರೆ

ಎಲ್ಲರೂ ನಿಮ್ಮ ಹಾಗಿರುತ್ತಾರೆಯೇ?"

"ಇನ್ನು ಹೇಗೆ ಇರುತ್ತಾರೆ?"

"ಇವಳಲ್ಲದಿದ್ದರೆ ಮತ್ತೊಬ್ಬಳೊಂತ ಬೇರೆ ಮದುವೆ ಮಾಡಿಕೋತಿದ್ರು."

"ಪುನಃ ಅದೇ ಮಾತು. ಇನ್ನೊಂದು ಸಲ ಆ ಮಾತನಾಡಿದರೆ...."

"ಏನು ಮಾಡ್ತೀರಿ?

"ಬಾಯಿ ಮುಚ್ಚುತ್ತೇನೆ."

"ನನ್ನ ಮಾತು ದಯವಿಟ್ಟು ಕೇಳಿ. ನೀವು ಬೇರೆ ಮದುವೆ...."

ಮೀರ ಮಾತನಾಡುತ್ತಿದ್ದಂತೆಯೇ ಶಾಮು ಅವಳ ಬಳಿ ನಿಂತು,

"ಸಾಕು" ಎಂದ.

"ನನ್ನ ಮಾತಿಗೆ ಬೆಲೆ ಕೊಡಿ. ನಿಮಗಿನ್ನೂ...."

ಶಾಮು ತನ್ನ ಮಾತಿನಂತೆ ಮೀರಳಿಗೆ ಮಾತನಾಡಲು ಮುಂದೆ ಅವಕಾಶ ಕೊಡಲಿಲ್ಲ. ರೆಕ್ಕೆಯಿಲ್ಲದ ಕಿನ್ನರಿಯಂತೆ ಕಾಣುತ್ತಿದ್ದ ಮೀರಳನ್ನು ಆಸೆಯಿಂದ ನೋಡುತ್ತಾ ಶಾಮು ಕೇಳಿದ,

"ಭಿಕ್ಷಾಂದೇಹಿ."

ಅದೇಕೋ ಮೀರ ನವವಧುವಿನಂತೆ ನಾಚಿದಳು.

ಶಾಮು ಮರುಮದುವೆಯ ಬಗ್ಗೆ ಅವರಿಬ್ಬರಲ್ಲೂ ಆಗಾಗ್ಗೆ ಜಗಳಗಳಾಗುತ್ತಿದ್ದವು. ಮೀರಳ ಮಾತನ್ನು ಶಾಮು ಮನಸ್ಸಿಗೆ ಹಚ್ಚಿಕೊಂಡಿರಲಿಲ್ಲ. ಒಂದೊಂದು ಸಲ ಏನೂ ಕೆಲಸವಿಲ್ಲದೆ ಸುಮ್ಮನೆ ಕುಳಿತಿದ್ದಾಗ, ಶಾಮು ಮೀರಳನ್ನು ತಾನಾಗಿಯೇ ಬೇರೆ ಮದುವೆಯ ಮಾತಿಗೆಳೆದು ಕೀಟಲೆ ಮಾಡುತ್ತಿದ್ದ.

"ಮೀರಾ ನನ್ನ ಮದುವೆಯ ವಿಷಯ ಮಾತಾಡೋಣ ಬಾ. ಯಾಕೋ ಬೇಜಾರಾಗ್ತಿದೆ."

ಅವನು ಹಾಗೆ ಹೇಳಿದೊಡನೆ ಮೀರಳಿಗೆ ಕೋಪ ಬಂದುಬಿಡುತ್ತಿತ್ತು.

ಅವಳು ತನ್ನ ಕೈಲಿ ಹಿಡಿದಿದ್ದ ಪಾತ್ರೆಯನ್ನು ಎಸೆದು ತನ್ನ ಕೋಪ ಪ್ರದರ್ಶಿಸಿದಾಗ ಶಾಮು ಶಾಂತನಾಗಿ ನುಡಿಯುತ್ತಿದ್ದ,

"ಡಾಕ್ಟರಿಗೆ ಸಹನೆಯೇ ಮುಖ್ಯವಾದುದು. ನೀನು ಹೀಗೆ ರೋಗಿಗಳೊಡನೆ ಕೋಪ ಮಾಡಿಕೊಂಡರೆ ಅವರ ಗತಿಯೇನು?"

"ನೀವೇನೂ ರೋಗಿಯಲ್ಲ."

"ನಾನೂ ಒಂದು ವಿಧವಾದ ರೋಗಿಯೇ. ಆದರೆ ನನ್ನದು ಬೇರೆ ರೀತಿಯ ರೋಗ."

"ನಿಮ್ಮ ರೋಗಾನ ನಾನು ವಾಸಿ ಮಾಡಲಾರೆ. ನೀವು ಇನ್ನೊಂದು ಮದುವೆ ಮಾಡಿಕೊಂಡರೆ ಬರುವ ಹುಡುಗಿ ವಾಸಿ ಮಾಡ್ತಾಳೆ."

"ನಿನ್ನೇ ಯಾಕೆ ಇನ್ನೊಂದು ಸಲ ಮದುವೆ ಮಾಡಿಕೋಡಬಾರದು?"

"ನಾನು ಸತ್ತಾದ್ರೂ, ಹೋದ್ರೆ ನೀವು ಬೇರೆ ಮದುವೆ ಆಗ್ತೀರೋ ಏನೋ" ಮೀರ ನಿರಾಶೆ, ಕೋಪದಿಂದ ಕಹಿಯಾಗಿ ನುಡಿದಳು. ಶಾಮು ಅವಳ ಮಾತಿಗೆ ನಕ್ಕು,

"ಇನ್ನೂ ಒಳ್ಳೆಯದೇ ಆಯಿತು. ಆಗ ನನ್ನ ಮದುವೆ ಮಾಡಿಕೊಳ್ಳೀಂತ ಪೀಡಿಸುವವರೇ ಇರುವುದಿಲ್ಲ" ಎಂದ.

"ನಿಮ್ಮ ಕೈಲಿ ಮಾತನಾಡುವವರಿಗೆ ಬುದ್ಧಿಯಿಲ್ಲ."

"ಬುದ್ಧಿಯಿಲ್ಲದೇ ಇರುವವರ ಮಾತು ಕೇಳಿ ಕೇಳಿ ನನ್ನ ಬುದ್ಧಿಯೂ ಕೆಟ್ಟುಹೋಗುತ್ತಿದೆ."

"ಈ ಸಲ ಹೊರಟುಹೋದ ಮೇಲೆ ಪುನಃ ನಾನು ಹಳ್ಳಿಗೆ ತಲೆಹಾಕುವುದಿಲ್ಲ."

"ಇಲ್ಲಿಗೆ ಬಾರದೇ ಎಲ್ಲಿಗೆ ಹೋಗ್ತೀಯ?"

"ಎಲ್ಲಿಗೋ ಸುಡುಗಾಡಿಗೆ."

ಶಾಮು ಹಾಸ್ಯವನ್ನು ನಿಲ್ಲಿಸಿ ಗಂಭೀರ ದನಿಯಿಂದ ಹೇಳಿದ,

"ನೀನು ಪರೀಕ್ಷೆ ಮುಗಿಸಿ ಇಲ್ಲಿಗೆ ಬರುವವರೆಗೆ ನನ್ನ ಮದುವೆಯ ಮಾತನ್ನೆತ್ತಬೇಡ. ಆಮೇಲೆ ಬೇಕಾದರೆ ಯೋಚನೆ ಮಾಡಿ ಹೇಳ್ತೀನಿ."

ಮೀರ ಆನಂದದಿಂದ ಕಣ್ಣರಳಿಸಿ, "ನಿಜವಾಗಿ!" ಎಂದಳು.

"ಹೂಂ."

"ನೀವು ಬಹಳ ಒಳ್ಳೆಯವರು."

"ಈ ಬೆಣ್ಣೆ ಹಚ್ಚುವ ಮಾತುಗಳು ಸಾಕು" ಎಂದ ಶಾಮು.

* * * * *

ಜೋಯಿಸರ ಮಗಳು ವೆಂಕುವಿನ ಮದುವೆ ನಿಶ್ಚಯವಾಯಿತು. ಹುಡುಗನಿಗೆ ಮಂಡ್ಯದ ಸಕ್ಕರೆ ಕಾರ್ಖಾನೆಯಲ್ಲಿ ನೂರಿಪ್ಪತ್ತು ರೂಪಾಯಿನ ಕೆಲಸವಿತ್ತು. ಜೋಯಿಸರ ಮನೆಯ ಮದುವೆಗೆ ಅಣಿಮಾಡಲು, ಹಳ್ಳಿಯ ಬ್ರಾಹ್ಮಣ ಹೆಂಗಸರೆಲ್ಲಾ ಜೋಯಿಸರ ಮನೆಯಲ್ಲಿ ಸೇರುತ್ತಿದ್ದರು. ಹಪ್ಪಳ, ಸಂಡಿಗೆ, ಚಕ್ಕುಲಿಹಿಟ್ಟು ಮೊದಲಾದವುಗಳು ಭರದಿಂದ ಸಿದ್ಧವಾದವು.

ಧಾರೆಯ ದಿನ ಅಕ್ಕಿಯ ಖರ್ಚು, ತೆಂಗಿನಕಾಯಿಯ ಖರ್ಚನ್ನು ಶಾಮು ತಾನೇ ವಹಿಸಿಕೊಂಡಿದ್ದ. ವೆಂಕುವಿಗೆ ಮದುವೆ ಗೊತ್ತಾಗಿದ್ದುದು ಅವಳ

ತಾಯಿಗಿಂತಲೂ ಶಾಮುವಿಗೇ ಹೆಚ್ಚು ಸಂತೋಷವಾಗಿತ್ತು. ಸಂತೋಷದೊಡನೆ ವೆಂಕು ದೂರ ಹೊರಟುಹೋಗುವಳಲ್ಲಾ ಎಂಬ ವ್ಯಥೆಯೂ ಇತ್ತು. ವೆಂಕುವಿಗೆ ಧಾರೆಯ ಸೀರೆಯನ್ನೂ ತನ್ನ ಲೆಕ್ಕದಲ್ಲೇ ತಂದು ಅವಳಿಗೆ ತೋರಿಸಿದ.

"ಈ ಸೀರೆ ನಿನ್ನ ಮನಸ್ಸಿಗೊಪ್ಪಿತೇ ವೆಂಕೂ?"

ಶಾಮು ತಂದಿದ್ದ ಭಾರಿ ಸೀರೆಯನ್ನು ನೋಡಿ ವೆಂಕುವಿಗೆ ಆನಂದವಾದರೂ, "ನನ್ನ ಸೀರೆಗೋಸ್ಕರ ಇಷ್ಟೊಂದು ಯಾಕೆ ಖರ್ಚು ಮಾಡಿದೆ ಶಾಮಣ್ಣಾ?" ಎಂದಳು.

"ನನಗೊಬ್ಬಳು ತಂಗಿ ಇದ್ದಿದ್ದರೆ ಅವಳಿಗೆ ಮಾಡುತ್ತಿದ್ದೆನೋ ಇಲ್ಲ್ವೋ?"

ಅವನ ಅಂತಃಕರಣ ಕಂಡು ವೆಂಕುವಿನ ಕಣ್ಣುಗಳಲ್ಲಿ ನೀರೂರಿತು. ಅವಳು ಶಾಮುವನ್ನು ತುಂಬಾ ಪ್ರೀತಿಸುತ್ತಿದ್ದಳು. ಪುಟ್ಟ ಹುಡುಗಿಯಾಗಿದ್ದಾಗಿನಿಂದಲೂ ಶಾಮಣ್ಣನೆಂದರೆ ಅವಳಿಗೆ ತುಂಬಾ ಸಲಿಗೆ, ವಿಶ್ವಾಸ. ವೆಂಕುವಿನ ಹಿಂದೆ ಬೇಗ ಬೇಗ ಮಕ್ಕಳಾಗುತ್ತಿದ್ದುದರಿಂದ ಅವಳಿಗೆ ಮನೆಯಲ್ಲಿ ಹಿರಿಯರ ಆದರ, ಪ್ರೀತಿ ಅಷ್ಟಾಗಿ ದೊರಕಲಿಲ್ಲ. ಮನೆಯಲ್ಲಿ ಇತರ ಮಕ್ಕಳಿಗಿಂತ ದೊಡ್ಡವಳಾದ ಅವಳೇ ಕಿರಿಯರ ಪಾಲಿಗೆ ಒಮ್ಮೊಮ್ಮೆ ತಾಯಿಯಾಗುತ್ತಿದ್ದಳು. ವೆಂಕುವಿನ ತಾಯಿ ಅವಳಿಗೆ ಎಷ್ಟೋ ಬಾರಿ ಮನೆಯ ಜವಾಬ್ದಾರಿ, ಇತರ ಮಕ್ಕಳ ಲಾಲನೆ ಪಾಲನೆಯನ್ನೂ ವಹಿಸುತ್ತಿದ್ದರು. ತನ್ನ ಮನೆಯಲ್ಲಿ ವೆಂಕು ಮಗುವಿನಂತಾಡುವುದು ಸಾಧ್ಯವಿರಲಿಲ್ಲ.

ಆದರೆ ಶಾಮಣ್ಣನ ಮನೆಯಲ್ಲಿ ಅವಳೇ ಮಗುವಾಗುತ್ತಿದ್ದಳು. ಮಕ್ಕಳೆಂದರೆ ಶಾಮುವಿಗೆ ತುಂಬಾ ಪ್ರೀತಿಯಿತ್ತು. ಆದರೆ ವಂಶಕ್ಕೆಲ್ಲಾ ಒಬ್ಬನೇ ಮಗನಾಗಿ ಹುಟ್ಟಿದ ಶಾಮು ತಂಗಿ, ತಮ್ಮಂದಿರನ್ನು ಆಡಿಸುವ ಪುಣ್ಯವನ್ನು ಪಡೆದಿರಲಿಲ್ಲ. ಮದುವೆಯಾಗುವ ವಯಸ್ಸಾಗಿದ್ದರೂ ಮದುವೆಯಾಗದೇ ಉಳಿದಿದ್ದ ಶಾಮುವಿಗೆ ವೆಂಕುವಿನ ಮುಗ್ಧ ಮಾತುಗಳನ್ನು ಕೇಳುವುದರಲ್ಲಿ ಪರಮ ಆನಂದವಿತ್ತು. ಹೊಲ, ಗದ್ದೆಯಲ್ಲಿ ದುಡಿದು ಬಂದಾಗ ವೆಂಕುವಿನ ಸರಳ ನಡೆ, ನುಡಿಗಳು ಅವನ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿದ್ದವು. ವೆಂಕು ಒಂದು ದಿನ ತನ್ನ ಮನೆಗೆ ಬಾರದಿದ್ದರೆ ಆ ದಿನವೆಲ್ಲಾ ಬೇಸರವಾಗುತ್ತಿತ್ತು. ಅಂತಹ ದಿನಗಳಲ್ಲಿ ತಾನೇ ಜೋಯಿಸರ ಮನೆಗೆ ಹೋಗಿ ಗಂಟೆಗಟ್ಟಲೆ ಹರಟೆ ಹೊಡೆದು ಬರುತ್ತಿದ್ದ. ಮೀರಳೊಡನೆ ಮದುವೆಯಾದ ತರುಣದಲ್ಲಿ ವೆಂಕು ಶಾಮುವಿನ ಮನೆಗೆ ಮೊದಲಿನಂತೆ ಬರುತ್ತಿರಲಿಲ್ಲ. ಮದುವೆಯಾಗಿ ಹೊಸ ಹೆಂಡತಿ ಬಂದಿರುವಾಗ, ನೂತನ ದಂಪತಿಗಳ ನಡುವೆ ತಾನು ಬೆರೆಯುವುದು ಸರಿಯಲ್ಲವೆಂದು ಅವಳಿಗೆ ತೋರುತ್ತಿರಲಿಲ್ಲ. ಆದರೆ ವೆಂಕುವಿನ ತಾಯಿ ಅವಳನ್ನು ತಡೆದು,

"ಈಗ ಮೀರಾ ಬಂದಿದಾಳಮ್ಮ, ಹಾಗೆಲ್ಲ ಹೋಗಿ ಅಲ್ಲಿ ಕುಳಿತುಕೋ

ಬಾರ್ದು" ಎನ್ನುತ್ತಿದ್ದರು.

ಮೀರಳಿಗೆ ಮಗುವಾಗಿ ವೀಣ ಶಾಮುವಿನ ಮನೆಯನ್ನು ಬೆಳಗಲಾರಂಭಿಸಿದ ಮೇಲೆ ಯಾರ ಮಾತಿಗೂ ಬಗ್ಗದೆ ವೆಂಕು ಯಾವಾಗಲೂ ಶಾಮಣ್ಣನ ಮನೆಯಲ್ಲಿ ವೀಣಳನ್ನು ಆಟವಾಡಿಸಿಕೊಂಡು ಇದ್ದುಬಿಡುತ್ತಿದ್ದಳು. ಇದರಿಂದ ಮೀರಳಿಗೂ ಎಷ್ಟೋ ಪ್ರಯೋಜನವಿತ್ತು. ತುಂಟಿಯಾದ ಮಗಳನ್ನು ನೋಡಿಕೊಳ್ಳುವುದು ಅವಳಿಗೆ ಸ್ವಲ್ಪವಾದರೂ ತಪ್ಪುತ್ತಿತ್ತು.

ವೀಣ ಮಡಿದ ಮೇಲೆ, ವೆಂಕು ದೊಡ್ಡವಳಾಗುತ್ತಾ ಬಂದಂತೆ ಅವಳು ಕ್ರಮೇಣ ಶಾಮುವಿನ ಮನೆಯಿಂದ ದೂರವಾಗಿದ್ದಳು. ಆದರೆ ಶಾಮಣ್ಣನಲ್ಲಿದ್ದ ಪ್ರೀತಿ, ವಿಶ್ವಾಸ ಮಾತ್ರ ಸ್ವಲ್ಪವೂ ಕಡಿಮೆಯಾಗಿರಲಿಲ್ಲ.

ತನ್ನ ಮದುವೆಗಾಗಿ ಶಾಮು ಅಕ್ಕರೆಯಿಂದ ತಂದುಕೊಟ್ಟಿದ್ದ ಸೊಗಸಾದ ಹಸಿರು ಸೀರೆಯನ್ನು ಕೈಗೆ ತೆಗೆದುಕೊಂಡು ವೆಂಕು ಶಾಮುವಿನ ಮುಖ ನೋಡಿದಳು.

ಹಳ್ಳಿಯ ಮನೆಯಾದುದರಿಂದ ರೂಮಿನ ಭಾವಣಿ ತುಂಬಾ ಕೆಳಗಿತ್ತು. ನೆಲಕ್ಕೂ ಭಾವಣಿಗೂ ಏಕವಾಗಿ ಶಾಮು ನಿಂತಿದ್ದ. ಅವನ ಎತ್ತರವಾದ ಭವ್ಯ ನಿಲುವು ವೆಂಕುವಿಗೆ ಅತ್ಯಂತ ಪ್ರಿಯವಾದ ದೃಶ್ಯವಾಗಿತ್ತು.

"ನಮ್ಮ ಶಾಮಣ್ಣನಷ್ಟು ಉದ್ದ ಈ ಹಳ್ಳಿಲೇ ಯಾರೂ ಇಲ್ಲ" ಎಂದವಳು ಜಂಭದಿಂದ ಹೇಳಿಕೊಳ್ಳುತ್ತಿದ್ದಳು.

ಆದರೆ ಶಾಮು ಈಗ ಮೊದಲಿನ ಶಾಮುವಾಗಿರಲಿಲ್ಲ. ಅವನ ಮೈ ಬಡಕಲಾಗಿತ್ತು, ಅವನ ಕೆಂಪು ಬಣ್ಣ ಮಾಸಲು ಬಣ್ಣಕ್ಕೆ ತಿರುಗಿತ್ತು. ಕಣ್ಣುಗಳು ಅಪಾರ ವೇದನೆಗೆ ಗುರಿಯಾಗಿ ಮಂಕಾಗಿ ಹೋಗಿದ್ದವು.

ವೆಂಕು ಗದ್ಗದ ಕಂಠದಿಂದ ನುಡಿದಳು,

"ನಿನ್ನ ತಂಗಿಯಾಗೋ ಪುಣ್ಯ ನನಗೆಲ್ಲಿದೆ ಶಾಮಣ್ಣ? ನಿನ್ನ ತಂಗಿ ಯಾಗಿದ್ದರೇ ಚೆನ್ನಾಗಿತ್ತು."

"ಆಗ ತಾನೇ ಏನು? ಹೀಗೆ ಒಬ್ಬನ್ನ ಕಟ್ಕೊಂಡು ಓಡಿಹೋಗ್ತಿದ್ದೆ. ಅಲ್ವೇ?"

"ಆದರೂ ಆಗ ನಿನ್ನ ದುಃಖಾನ ಸ್ವಲ್ಪವಾದರೂ ಕಡಿಮೆ ಮಾಡಬಹುದಿತ್ತು."

ವೆಂಕು ನಿಟ್ಟುಸಿರಿನೊಡನೆ ಹೇಳಿದಳು. ಅವಳ ಮಾತು ಕೇಳಿ ಶಾಮು ಚಕಿತನಾದ.

ಯಾರನ್ನು ತಾನು ಇನ್ನೂ ಮಗುವೆಂದು ಭಾವಿಸಿದ್ದನೋ ಅವಳು ಈಗ ಹಿರಿಯವಳಂತೆ ಮಾನವನ ಸುಖದುಃಖದ ಬಗ್ಗೆ ಮಾತನಾಡುತ್ತಿದ್ದಾಳೆ!

"ದುಃಖ! ನನಗೆಂತಹ ದುಃಖ?"

"ನನಗೆಲ್ಲಾ ಗೊತ್ತು ಶಾಮಣ್ಣ. ನಾನೇನೂ ನೀನು ತಿಳಿದುಕೊಂಡಿರುವಂತೆ ಇನ್ನೂ ಮಗುವಲ್ಲ. ಇದು ನನಗೆ ಗೊತ್ತು."

"ಬೊಂಬೆ ಜೊತೆ ಆಟ ಆಡೋದು ಬಿಟ್ಟು ನಿನಗಿನ್ನೇನು ಗೊತ್ತಿದೆ?" ಶಾಮು ಹಾಸ್ಯದಲ್ಲಿ ಅವಳ ಮಾತನ್ನು ಹಾರಿಸಲೆತ್ನಿಸಿದ.

"ನೀನು ತಪ್ಪು ತಿಳಿದುಕೊಂಡಿದೀಯ. ನನಗೆಲ್ಲಾ ಗೊತ್ತಾಗುತ್ತೆ. ನಮ್ಮ ಮನೆಗಿಂತಲೂ ನಾನು ನಿಮ್ಮ ಮನೆಯಲ್ಲಿ ಹೆಚ್ಚು ಕಾಲ ಕಳೆದಿದ್ದೇನೆ. ನಾನು ನಿನ್ನ ತಂಗಿಯಾಗಿದ್ದಿದ್ದರೆ ಅವರಿಗೆ 'ನಮ್ಮ ಅಣ್ಣನ್ನ ನೋಡಿಕೊಂಡು ಬರ್ತೇನೆ' ಎಂದು ಹೇಳಿ ಎರಡೆರಡು ದಿನಕ್ಕೆ ಇಲ್ಲಿಗೆ ಬರಬಹುದಾಗಿತ್ತು. ಈಗ ಹಾಗೆ ಹೇಳಿ ಬರೋಕ್ಕಾಗುತ್ತದೆಯೇ?"

ಈ ಪುಟ್ಟ ಹುಡುಗಿಗೆ ಎಷ್ಟೊಂದು ವಿಷಯ ಗೊತ್ತಿದೆ!

ವೆಂಕುವಿನ ಎದುರಿನಲ್ಲಿ ಈಗ ಶಾಮು ಮಗುವಿನಂತಾದ. ಅವನಿಗೆ ಏನು ಹೇಳಬೇಕೋ ತೋರದಾಯಿತು. ಅವನು ಮಾತು ಬದಲಾಯಿಸಲೆಂದು,

"ವೆಂಕು, ನಿನ್ನ ಗಂಡನ ಹೆಸರು ಹೇಳು" ಎಂದ.

ವೆಂಕು ಅವನ ಮಾತು ಕೇಳಿಸದವಳಂತೆ, "ಎಲ್ಲಿ ಶಾಮಣ್ಣನಿಗೆ ನಮಸ್ಕಾರ ಮಾಡುತ್ತೇನೆ" ಎಂದು ಹೇಳಿ ಶಾಮುವಿಗೆ ನಮಸ್ಕಾರ ಮಾಡಿ ಒಳಗೆ ಹೊರಟು ಹೋದಳು.

ಹುಡುಗಿಯರ ಬುದ್ಧಿ ಹೀಗೇಂತ ಹೇಳೋಕ್ಕಾಗುವುದಿಲ್ಲ ಎಂದುಕೊಂಡ ಶಾಮು.

ವೆಂಕುವಿನ ಮದುವೆ ಜೋಯಿಸರ ಅಂತಸ್ತಿಗೆ ತಕ್ಕಂತೆ ನಡೆಯಿತು. ಹುಡುಗ ವೆಂಕುವಿಗೆ ಅನುರೂಪನಾದ ವರನಾಗಿದ್ದ. ಅವನಿಗೂ ಸುಮಾರು ಇಪ್ಪತ್ತೆರಡು ವರ್ಷಗಳಾಗಿದ್ದವು. ಹಸೆ ಮೇಲೆ ಕುಳಿತಿದ್ದ ಜೋಡಿಯನ್ನು ಶಾಮು ಕಣ್ಣು ತುಂಬಾ ನೋಡಿದ. ವೆಂಕುವಿಗೆ ಸೋದರಮಾವನಿರಲಿಲ್ಲ. ಆದರೆ ಜೋಯಿಸರು ಏನೇನೋ ಇಲ್ಲದ ಸೋದರಿಕೆ ಕಲ್ಪಿಸಿ ಶಾಮುವನ್ನು ಅವಳ ಸೋದರಮಾವನನ್ನಾಗಿ ಮಾಡಿದ್ದರು. ಶಾಮುವೇ ಸರ್ವಾಲಂಕಾರಭರಿತಳಾದ ವಧುವನ್ನು ಧಾರೆಗೆ ಕರೆದುಕೊಂಡು ಬಂದಿದ್ದ.

ವೆಂಕು ಬಹಳ ಗಂಭೀರಳಾಗಿ ಕುಳಿತಿದ್ದಳು. ಅವಳ ಪುಟ್ಟ ಹೃದಯದಲ್ಲಿ ಇಷ್ಟೊಂದು ಒಲವು, ಅಂತಃಕರಣ, ಮಮತೆ ಎಲ್ಲಿಂದ ಬಂದವೋ?

ಶಾಮು ಹಸೆಯ ಮಣೆಯ ಬಳಿಯೇ ಕುಳಿತು, ವೆಂಕುವಿನ ಗಂಡನೊಡನೆ ಮಾತನಾಡುತ್ತಾ, ಯಾವುದೋ ಮಾತಿಗೆ "ನೀವು ಭಾಗ್ಯಶಾಲಿಗಳು" ಎಂದ.

ವೆಂಕು ತಲೆ ಎತ್ತಿ ಶಾಮುವಿನ ಮುಖ ನೋಡಿದಳು. ಅವಳ ಕಣ್ಣುಗಳಲ್ಲಿ ನೀರು ತುಂಬಿಕೊಂಡಿದ್ದಂತೆ ಶಾಮುವಿಗೆ ಭಾಸವಾಯಿತು.

ವೆಂಕುವಿನ ಮದುವೆ ಮೂರು ದಿನ ನಡೆಯಿತು. ಶಾಮು, ಮೀರ ಮದುವೆ ಮನೆಯಲ್ಲಿ ಸಂಭ್ರಮದಿಂದ ಓಡಾಡಿದರು.

ಹುಡುಗನಿಗೆ ಕೆಲಸವಿದ್ದುದರಿಂದ ಮದುವೆ ಮುಗಿಸಿಕೊಂಡು ಊರಿಗೆ ಹೊರಟಾಗಲೇ ಹೆಂಡತಿಯನ್ನು ಜೊತೆಯಲ್ಲೇ ಕರೆದುಕೊಂಡು ಹೊರಟ. ಬೀಗರು ಊರಿಗೆ ಹೊರಡುವ ದಿನ ಶಾಮುವಿನ ಮನೆಯಲ್ಲಿ ಎಲ್ಲರಿಗೂ ಭಾರಿ ಔತಣ ವಾಯಿತು. ವೆಂಕು ಶಾಮುವಿನ ಕಾಲಿಗೆ ನಮಸ್ಕಾರ ಮಾಡಿ,

"ಹೋಗಿಬರುತ್ತೇನೆ, ಶಾಮಣ್ಣ. ನಿನ್ನ ಆರೋಗ್ಯ ನೋಡಿಕೋ" ಎಂದಳು. ಮೀರ ವೆಂಕುವನ್ನು ದೇವರ ಮನೆಗೆ ಕರೆದೊಯ್ದು ಮಡಿಲು ತುಂಬಿದಳು. ಎಲೆ, ಅಡಿಕೆಯೊಡನೆ ರವಿಕೆಯ ಕಣವನ್ನು ನೋಡಿ ವೆಂಕು,

"ಶಾಮಣ್ಣ ನನ್ನ ಮದುವೆಯ ಅರ್ಧ ಖರ್ಚನ್ನು ವಹಿಸಿಕೊಂಡಿದ್ದು ಸಾಲದೇ? ಈಗ ಕಣವೇಕೆ?" ಎಂದಳು.

"ಸಾಕು ಜಂಭ ತಗೋ" ಎಂದಳು ಮೀರ.

ವೆಂಕು ಹಿಂದೆಮುಂದೆ ನೋಡಿ ತಗ್ಗಿದ ದನಿಯಲ್ಲಿ ನುಡಿದಳು,

"ಮೀರಕ್ಕ, ನಾನು ಒಂದು ಮಾತು ಹೇಳ್ತೀನಿ, ಕೋಪಿಸಿಕೊಳ್ಳಬೇಡಿ. ವಯಸ್ಸಿನಲ್ಲಿ ನಾನು ನಿಮಗಿಂತಲೂ ಚಿಕ್ಕವಳು. ಆದರೂ...."

"ಏನು?"

"ಶಾಮಣ್ಣ ನಿಮ್ಮನ್ನು ತುಂಬಾ ಪ್ರೀತಿಸುತ್ತಾನೆ. ನಿಮಗದು ಗೊತ್ತೇ?"

"........"

"ಶಾಮಣ್ಣ ನಿಮ್ಮನ್ನು ಪ್ರೀತಿಸುತ್ತಾನೆಂಬುದು ನಿಮಗೆ ಗೊತ್ತಿಲ್ಲ. ಆದರೆ ನನಗೆ ಗೊತ್ತು. ಅವನ ಪ್ರೀತಿಯ ಆಳ ನನಗೆ ಗೊತ್ತು. ನೀವೂ ಅವನನ್ನು ಪ್ರೀತಿಸಿ. ಶಾಮು ಹೇಗಿದಾನೆ ಒಂದು ಸಾರಿ ಕಣ್ಣೆತ್ತಿ ನೋಡಿ. ನಿಮಗೋಸ್ಕರವಾಗಲ್ಲದಿದ್ದರೂ ಶಾಮುವಿಗೋಸ್ಕರ ಅವನನ್ನು ಪ್ರೀತಿಸಿ."

"ನಾನೇನು ಅವರನ್ನು ದ್ವೇಷಿಸುವುದಿಲ್ಲವೆಂದು ನಿನಗೆ ಗೊತ್ತು."

"ನೀವು ಶಾಮಣ್ಣನನ್ನು ಬಿಟ್ಟಾದರೂ ವಿದ್ಯೆಯನ್ನು ಮುಂದುವರಿಸಬೇಕೆ? ನೀವು ಎಂತಹ ನಿಧಿಯ ಕೈಹಿಡಿದಿರುವಿರಿ ಎಂಬುದು ನಿಮಗೆ ಗೊತ್ತಿಲ್ಲ. ವಜ್ರವನ್ನು ಕೈಲಿಟ್ಟುಕೊಂಡು ಗಾಜಿನ ಚೂರಿಗಾಗಿ ಹಂಬಲಿಸುತ್ತಿರುವಿರಿ."

"ವೆಂಕೂ!"

"ನಾನು ಹೇಗಿದ್ದರೂ ಈ ದಿನ ಹೊರಟುಹೋಗುತ್ತೇನೆ. ನನ್ನ ಮನಸ್ಸಿನಲ್ಲಿರುವುದನ್ನೆಲ್ಲಾ ನಿಮಗೆ ಹೇಳಿ ಹೊರಟುಹೋಗುತ್ತೇನೆ. ಏಳೇಳು ಜನ್ಮದ ಪುಣ್ಯ ಮಾಡಿದೀರಿ ನೀವು ಶಾಮಣ್ಣನ ಕೈ ಹಿಡಿಯೋಕೆ. ಅವನಿಗಿಂತಲೂ ನಿಮಗೆ ಓದು ಹೆಚ್ಚೇ? ನಿಮಗೋಸ್ಕರ ಅವನು ಪ್ರಾಣ ಬೇಕಾದರೂ ಕೊಡ್ತಾನೆ. ನೀವು ಅವನಿಗೋಸ್ಕರ ಓದು ನಿಲ್ಲಿಸಲಾರಿರಾ? ಅವನನ್ನು ಬಿಟ್ಟಿರಲು ನಿಮಗೆ ಹೇಗೆ ಮನಸ್ಸು...."

ಎದುರಿಗೆ ನಿಂತಿದ್ದ ವೆಂಕುವಿನ ಕೆನ್ನೆಗೆ ಹೊಡೆಯಬೇಕೆನಿಸಿತು ಮೀರಳಿಗೆ. ಅವಳು ಬಹಳ ಸಂಯಮದಿಂದ ತನ್ನ ಕೋಪವನ್ನು ತಡೆದಳು.

"ನಿಮಗೆ ಶಾಮಣ್ಣನನ್ನು ಪ್ರೀತಿಸುವುದು ಸಾಧ್ಯವಾಗದಿದ್ದರೆ ದಯೆಯಿಂದ ನೋಡಬಹುದಲ್ಲವೇ? ನೀವು ಅವನನ್ನು ಅರಿತುಕೊಂಡರೆ ಶಾಮು ನಿಜವಾಗಿಯೂ ಸುಖಿಯಾಗುತ್ತಾನೆ. ನಾನಿನ್ನು ಬರ್ತೀನಿ" ಎನ್ನುತ್ತಾ ವೆಂಕು ದೇವರಮನೆಯಿಂದ ಹೊರಗೆ ಬಂದಳು.

ವೆಂಕು ಹೊರಟುಹೋದ ಎಷ್ಟೋ ಹೊತ್ತಿನವರೆಗೆ ಮೀರ ಕಲ್ಲುಕಂಬದಂತೆ ದೇವರ ಮನೆಯಲ್ಲಿಯೇ ನಿಂತಿದ್ದಳು.

ತಾನು ಶಾಮುವನ್ನು ಮದುವೆಯಾಗಿ ಹಳ್ಳಿಗೆ ಬಂದಾಗ ವೆಂಕುವಿಗೆ ಸುಮಾರು ಒಂಭತ್ತು ವರ್ಷಗಳಿದ್ದಿರಬಹುದು. ತನ್ನ ಕಣ್ಣೆದುರಿಗೇ ಬೆಳೆದು ದೊಡ್ಡವಳಾದ ಹುಡುಗಿ ಈಗ ತನಗೆ ಬುದ್ಧಿವಾದ ಹೇಳುತ್ತಿದ್ದಾಳೆ! ವೆಂಕುವಿನ ಬಾಯಿಂದ ಈ ಬಗೆಯ ಮಾತುಗಳು ಬರಬಹುದು ಎಂದು ಮೀರ ಕನಸಿನಲ್ಲಿಯೂ ಎಣಿಸಿರಲಿಲ್ಲ. ವೆಂಕುವಿನ ಗಂಡ ನಿಜವಾಗಿಯೂ ಭಾಗ್ಯಶಾಲಿ. ತನ್ನ ಮಾತನ್ನು ಶಾಮು ಗೌರವಿಸಿದ್ದರೆ ಅವನೇ ಆ ಭಾಗ್ಯಶಾಲಿಯಾಗಬಹುದಿತ್ತು.

ಎಲ್ಲರ ಕರುಣೆ, ಸಹಾನುಭೂತಿ ಶಾಮುವಿನ ಕಡೆಯಿತ್ತೇ ಹೊರತು, ಮೀರಳಿಗಾಗಿ ಯಾರೂ 'ಅಯ್ಯೋ' ಎನ್ನುತ್ತಿರಲಿಲ್ಲ. ಎಲ್ಲರೂ ಶಾಮುವಿಗಾಗಿ ಮರುಗುತ್ತಿದ್ದರು. ಆದರೆ ತನಗೋ? ಯಾರಿಗೂ ತನ್ನಲ್ಲಿ ಸಹಾನುಭೂತಿಯಿಲ್ಲ. ಎಲ್ಲರೂ ತನ್ನನ್ನು ಟೀಕಿಸುವವರೇ. ತಾನು ಮಾಡಿದ ತಪ್ಪಾದರೂ ಏನು?

ಮೀರಳ ಹೃದಯ ಛಲದಿಂದ ಮತ್ತೆ ಬಿರುಸಾಯಿತು.

-ಪ್ರಪಂಚವೇ ನನಗಿದಿರಾಗಿ ಬಂದರೂ ನಾನು ಇಟ್ಟ ಹೆಜ್ಜೆಯನ್ನು ಹಿಂದೆ ತೆಗೆಯುವುದಿಲ್ಲ. ನಾನು ಓದಿಯೇ ಓದುತ್ತೇನೆ. ವೈದ್ಯಳಾಗುತ್ತೇನೆ. ನನ್ನ ಗಂಡನೇ ನನಗೆ ಬೆಂಬಲ ಕೊಡುತ್ತಿರುವಾಗ ಉಳಿದವರು ಏನು ಭಾವಿಸಿದರೇನು? ನನ್ನ ಗುರಿ ಸಾಧಿಸಲು ಕೊನೆಯವರೆವಿಗೂ ಹೋರಾಡಲೇಬೇಕು.

ಜೋಯಿಸರ ಮನೆಯ ಬೀಗರನ್ನು ಕಳುಹಿಸಿ ಶಾಮು ಒಳಗೆ ಬಂದಾಗ ಮೀರ ಬೆಪ್ಪಾಗಿ ಒಂದು ಕಡೆ ಕುಳಿತಿದ್ದಳು.

"ಅಮ್ಮಾವರಿಗೆ ಓಡಾಡಿ ಆಯಾಸವಾಯಿತೇನೋ?"

ಮೀರ ಶಾಮುವಿನ ಕಡೆ ತಿರುಗಿ ಅವನನ್ನು ಪರೀಕ್ಷಿಸುವಂತೆ ನೋಡಿದಳು.

ವೆಂಕುವಿನ ಮಾತು ನಿಜ. ಜಟ್ಟಿಯಂತಿದ್ದ ಶಾಮು ಬಡಕಲಾಗಿದ್ದ. ಕೆನ್ನೆ, ಎದೆಯ ಮೂಳೆ ಹಾಯ್ದುಕೊಂಡಿತ್ತು.

"ನನ್ನ ಹತ್ತಿರ ಬನ್ನಿ."

"ಬಂದ್ರೆ ಏನು ಕೊಡುತ್ತೀಯ?"

"ಡಾಕ್ಟರ್ ಹತ್ತಿರ ಬಂದರೆ ರೋಗಿಗಳಿಗೆ ಸಿಕ್ಕುವುದೇನು? ಔಷಧಿ."

"ನೀನು ಇನ್ನೂ ಡಾಕ್ಟರಾಗಿಲ್ಲ. ನಾನು ರೋಗಿಯೂ ಅಲ್ಲ."

"ಕೆಲವು ರೋಗಿಗಳಿಗೆ ತಮಗಿರುವ ಖಾಯಿಲೆ ಏನೂನ್ನೋದೆ ತಿಳಿಯೋಲ್ಲ. ಇಲ್ಲಿ ಹತ್ತಿರ ಬನ್ನಿ."

ಶಾಮು ಮರುಮಾತನಾಡದೆ ಮೀರಳ ಹತ್ತಿರ ನಿಂತ. ಮೀರ ಅವಳ ಕೆನ್ನೆಯ ಮೇಲೆ ಕೈಯಾಡಿಸಿದಳು.

"ನಾಳೆ ಮೈಸೂರಿಗೆ ಹೋಗೋಣ ನಡೆಯಿರಿ."

"ಯಾಕೆ?"

"ಅಲ್ಲಿ ನಿಮ್ಮನ್ನು ಸರಿಯಾದ ವೈದ್ಯರಿಗೆ ತೋರಿಸಿ ಔಷಧಿ ಕೊಡಿಸುತ್ತೇನೆ."

"ನಿನ್ನ ವೈದ್ಯರು 'ಶಾಂತಿ' ಎನ್ನುವ ಟಾನಿಕ್ಕನ್ನು ಕೊಡುತ್ತಾರೇನು?"

"ನಿಮಗೀಗ ಬಂದಿರುವ ಕಷ್ಟವಾದರೂ ಏನು?"

ಅದನ್ನು ನಾನು ಹೇಗೆ ಹೇಳಲಿ ಎನ್ನುವಂತೆ ಶಾಮು ನಕ್ಕ.

ಮೀರಳ ಹಠಕ್ಕೆ ಅವನು ಮೈಸೂರಿನ ಯಾತ್ರೆ ಮಾಡಲೇಬೇಕಾಯಿತು. ವೈದ್ಯರು ಶಾಮುವನ್ನು ಪರೀಕ್ಷೆ ಮಾಡಿ, "ಇವರು ತಮ್ಮ ದುಡಿಮೆಗೆ ತಕ್ಕಂತೆ ಆಹಾರ ತೆಗೆದುಕೊಳ್ಳುವುದಿಲ್ಲ. ಆದುದರಿಂದ ಹೀಗಾಗಿದಾರೆ" ಎಂದು ಹೇಳಿ ಟಾನಿಕ್ಕೊಂದರ ಹೆಸರನ್ನು ಬರೆದುಕೊಟ್ಟು, ಹಣ್ಣು, ಹಾಲನ್ನು ಹೆಚ್ಚಾಗಿ ತೆಗೆದು ಕೊಳ್ಳುವಂತೆ ಸೂಚಿಸಿದರು.

ಹಳ್ಳಿಯಲ್ಲಿರುವವರೆವಿಗೂ ಶಾಮುವಿನ ಆರೈಕೆಯನ್ನು ಮೀರ ತಾನೇ ನೋಡಿಕೊಂಡಳು. ಅವಳ ಆರೈಕೆಯ ಫಲವಾಗಿ ಶಾಮು ಮೊದಲಿನಂತೆ ಮೈಕೈ ತುಂಬಿಕೊಂಡ. ಬಿಳಿಚಿಕೊಂಡಿದ್ದ ಅವನ ಮುಖ ಮತ್ತೆ ಕೆಂಪಾಯಿತು.

ರಜ ಮುಗಿದು ಮೀರ ಮತ್ತೆ ಮೈಸೂರಿಗೆ ಹೊರಟಾಗ, ಶಾಮು ಕೇಳಿದ,

"ಸೌಭಾಗ್ಯವತಿಯವರ ದರ್ಶನ ಮತ್ತೆಂದು?"

"ಮುಂದಿನ ರಜದಲ್ಲಿ ನಾನು ಇಲ್ಲಿಗೆ ಬರುವುದಿಲ್ಲ. ವಿಜಯಳೊಡನೆ ಪೂನಾ, ಬೊಂಬಾಯಿಗೆ ಹೋಗಿಬರುತ್ತೇನೆ. ಮುಂದಿನದನ್ನು ಈಗಲೇ ಹೇಗೆ ಹೇಳಲಿ?"

ಅವಳಾಡಿದ ಮಾತು ಕೇಳಿ ಶಾಮುವಿನ ಮುಖ ಪೆಚ್ಚಾಯಿತು. ಮೀರ ತುಂಟನಗೆ ಬೀರಿ,

"ಪೂಣೆಯಿಂದ ಬರುವಾಗ ನಿಮಗೇನು ತರಲಿ?" ಎಂದು ಕೇಳಿದಳು.

"ನನಗೇನೂ ಬೇಡ."

"ನಿಮಗೇನಾದರೂ ತರುತ್ತೇನೆ, ಹೇಳಿ."

"ಪೂನಾ ಯಾವುದಕ್ಕೆ ಪ್ರಸಿದ್ಧಿಯಾಗಿದೆ?"

"ಪೂನಾ-ಪ್ರಸಿದ್ಧವಾಗಿರುವ ವಸ್ತುವನ್ನೇ ನಿಮಗೆ ತಂದುಕೊಡಲೇನು?"

"ಹೂಂ."

"ಪೂನಾ ಸುಂದರವಾದ ಹುಡುಗಿಯರ ತವರೂರು. ಅಲ್ಲಿಂದ ಹುಡುಗಿಯೊಬ್ಬಳನ್ನು ನಿಮಗಾಗಿ ತರುತ್ತೇನೆ."

"ಕರ್‍ಕೊಂಡು ಬಾ. ಅವಳು ಮರಾಠಿ ಆಡಲಿ, ನಾನು ಕನ್ನಡ ಆಡುತ್ತೇನೆ. ನೀನು ಅದನ್ನು ನೋಡಿ ಸಂತೋಷಪಡು."

"ಪ್ರೇಮಕ್ಕೆ ಯಾವ ಭಾಷೆಯೂ ಬೇಕಾಗಿಲ್ಲ."

"ನಾನು ನಿನ್ನ ಪ್ರೀತಿಸುತ್ತೇನೆಂತ ಹೇಳಬೇಕಾದ್ರೂ ಭಾಷೆ ಬೇಕಲ್ಲ."

"ಅದಕ್ಕೂ ಬೇಕಿಲ್ಲ. ಮೌನವೇ ಪ್ರೇಮದ ಭಾಷೆ, ಕಣ್ಣು ಭಾಷೆಯನ್ನಾಡುವ ನಾಲಿಗೆ."

"ಈಗ ನಾನು ನಿನ್ನ ಪ್ರೀತಿಸುತ್ತೇನೋ ಇಲ್ಲವೋ ನನ್ನ ಕಣ್ಣು ನೋಡಿ ಹೇಳು."

ಮೀರ ಬಹಳ ಬಲ್ಲವಳಂತೆ ಶಾಮುವಿನ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡಿದಳು. ಅವನ ಕಣ್ಣುಗಳಲ್ಲಿ ಅವಳನ್ನು ಅಲ್ಲಿಯೇ ಉಳಿಸಿಕೊಳ್ಳುವ ತೀವ್ರ ಆಸೆಯಿತ್ತು. ಕಣ್ಣುಗಳಿಗೆ ಸೆರೆಹಿಡಿಯುವ ಶಕ್ತಿಯಿದ್ದಿದ್ದರೆ ಮೀರ ಆಜನ್ಮ ಬಂಧಿಯಾಗಿರುತ್ತಿದ್ದಳು. ಮೀರ ಒಂದು ಕ್ಷಣ ತಲೆ ಅಲುಗಿಸಿ,

"ನಿಮಗೆ ನನ್ನಲ್ಲಿ ಪ್ರೀತಿಯಿಲ್ಲ" ಎಂದಳು.

"ಹೇಗೆ ಹೇಳ್ತೀಯ?"

"ನನ್ನಲ್ಲಿ ಪ್ರೀತಿ ಇದ್ದಿದ್ದರೆ ನೀವು ನಾನು ಹೇಳಿದ ಹಾಗೆ ಕೇಳುತ್ತಿದ್ದಿರಿ."

"ನಿನ್ನ ಮಾತು ನಾನು ಯಾವಾಗ ಮೀರಿದ್ದೇನೆ?"

"ನೀವು ಎರಡನೆ ಮದುವೆ ಮಾಡಿಕೊಳ್ಳಿ ಎಂದಾಗ...."

ಶಾಮು ನಗುತ್ತಿದ್ದವನು ತಟಕ್ಕನೆ ಸಿಟ್ಟುಗೊಂಡು,

"ನಿನಗೆ ಯಾವಾಗಲೂ ಅದೇ ಧ್ಯಾನವಾಯಿತು" ಎಂದ.

"ನನ್ನ ಅದೊಂದು ಮಾತು ನಡೆಸಿಕೊಟ್ಟರೆ ನಾನು ಯಾವಾಗಲೂ ನಿಮ್ಮ ಬಳಿಯೇ ಇರುತ್ತೇನೆ."

"ಹೋಗು, ಹೋಗು. ನೀನು ಎಲ್ಲಿಗಾದರೂ ಹೊರಟುಹೋಗು" ಎನ್ನುತ್ತಾ ಶಾಮು ಅವಳನ್ನು ತಳ್ಳಿದ.

ಮಂಚದ ತುದಿಯಲ್ಲಿ ಹಗುರವಾಗಿ ಕುಳಿತಿದ್ದ ಮೀರ ನೆಲದ ಮೇಲೆ ಬಿದ್ದಳು. ಅವಳ ಗಾಜಿನ ಬಳೆಗಳು ಪುಡಿಪುಡಿಯಾದವು.

ಮಂಚದ ಮೇಲೆ ಮಲಗಿದ್ದ ಶಾಮು ಎದ್ದು, ಮೀರಳ ಕೈ ಹಿಡಿದು ಮೇಲೆಬ್ಬಿಸಿ, "ಅಲ್ಲವೇ ಹುಡುಗಿ, ಮುಟ್ಟಿದ ಮಾತ್ರಕ್ಕೆ ಬಿದ್ದುಹೋಗಬೇಕೆ?" ಎಂದ.

"ಅಷ್ಟೊಂದು ಜೋರಾಗಿ ತಳ್ಳಿದರೆ ಬೀಳದೇ?"

"ತಪ್ಪಾಯಿತು. ನೀನು ಬೀಳಬಹುದೂಂತ ನಾನು ತಿಳಿದುಕೊಂಡಿರಲಿಲ್ಲ."

"ನಾನು ಹೇಳಿದ ಹಾಗೆ ಕೇಳಿದರೆ ನಿಮ್ಮ ಈ ತಪ್ಪು ಕ್ಷಮಿಸುತ್ತೇನೆ."

"ಎರಡನೆಯ ಮದುವೆ ಮಾಡಿಕೊಳ್ಳುವ ಒಂದು ವಿಷಯ ಬಿಟ್ಟು ಬೇರೆ ಏನಾದರೂ ಹೇಳು. ನಾನು ಕೇಳುತ್ತೇನೆ."

ಮೀರ ರೇಗಿಕೊಂಡು ರೂಮಿನಿಂದ ಆಚೆಗೆ ಹೊರಟುಹೋದಳು. ಶಾಮು 'ಮೀರಾ' ಎಂದು ಕೂಗುತ್ತಿದ್ದುದೂ ಅವಳ ಕಿವಿಗೆ ಬೀಳಲಿಲ್ಲ.

ತಾನು ಹೇಳಿದ ಮಾತನ್ನು ಶಾಮು ಪುರಸ್ಕರಿಸಲಿಲ್ಲವೆಂದು ಮೀರಳಿಗೆ ಗಂಡನ ಮೇಲೆ ಬಹಳ ಕೋಪ ಬಂತು. ಆ ಕೋಪ, ಅಸಮಾಧಾನದಲ್ಲಿಯೇ ಮೀರ ಹಳ್ಳಿಯನ್ನು ಬಿಟ್ಟು ಕಾಲೇಜಿಗೆ ಬಂದಳು.

ಹಾಸ್ಟೆಲಿಗೆ ಬಂದ ದಿನವೂ ಮೀರಳ ಮನಸ್ಸಿಗೆ ಸಮಾಧಾನವಿರಲಿಲ್ಲ. ಶಾಮುವಿನ ಚಿಂತೆಯಿಂದ ಅವಳ ಮನಸ್ಸು ವ್ಯಗ್ರವಾಗಿತ್ತು. ಆದರೆ ಕಾಲೇಜಿನ ಬಾಗಿಲು ತೆಗೆದು ಪಾಠಗಳು ಪ್ರಾರಂಭವಾದೊಡನೆ ಮೀರ ತನ್ನ ಸಂಸಾರದ ವಿಷಯಗಳನ್ನೆಲ್ಲಾ ಮರೆತು ಪಾಠಪ್ರವಚನಗಳಲ್ಲಿ ಮಗ್ನಳಾದಳು.

ಪೋಸ್ಟ್‌ಮಾರ್ಟಂಗೆ ಚಿಕ್ಕ ಬಾಲಕನೊಬ್ಬನ ಶವ ಬಂದ ದಿನ ಕಾಲೇಜಿನಲ್ಲೆಲ್ಲಾ ಹುಡುಗರು ಕೂಗಾಡಿದರು.

"ಹೆಣ ಬಂದಿದೆಯಂತೆ. ಕೊಲೆ ಮಾಡಿದ್ದಾರಂತೆ...."

ವಿಜಯ ಕಣ್ಣರಳಿಸಿ ಕೇಳಿದಳು, "ಆರು ವರ್ಷದ ಹುಡುಗನನ್ನು ಕೊಲೆ ಮಾಡೋದಕ್ಕೆ ಕಾರಣ? ಹಸುಳೆಯ ಮೇಲೆ ಈ ದ್ವೇಷ?"

ಮೂರನೆಯ ವರ್ಷದಲ್ಲಿದ್ದ ಗೋಪಿನಾಥ ಹೇಳಿದ.

"ಈ ಹುಡುಗನ ಮೇಲೆ ಯಾರಿಗೂ ಕೋಪವಿರಲಿಲ್ಲ. ಈ ಹುಡುಗನ ತಂದೆ ಹಳ್ಳಿಯಲ್ಲಿ ಒಬ್ಬ ರೈತ. ಒಂದು ಹುಣಸೆ ಮರಕ್ಕಾಗಿ ಈ ರೈತನಿಗೂ, ಮತ್ತೊಬ್ಬ ರೈತನಿಗೂ ಬಹಳ ಜಗಳವಾಯಿತಂತೆ. ಜಗಳದಲ್ಲಿ ಮತ್ತೊಬ್ಬ ರೈತನಿಗೆ ಸ್ವಲ್ಪ ಹೆಚ್ಚಾಗಿ ಏಟು ಬಿತ್ತು. ಅವನು ಅದನ್ನೇ ಮನಸ್ಸಿನಲ್ಲಿಟ್ಟುಕೊಂಡಿದ್ದ. ಒಂದು ದಿನ ಈ ಹುಡುಗ ತನ್ನ ತಂದೆಯ ಆಡುಗಳು, ಹಸುವನ್ನು ಮೇಯಿಸಿಕೊಂಡು ಬರಲು ಹೋಗಿದ್ದ. ಹಳ್ಳಿಯಿಂದ ದೂರ ಒಂಟಿಯಾಗಿ ಸಿಕ್ಕಿದ ಈ ಮಗುವಿನ ಮೇಲೆ ಆ ರೈತ ತನ್ನ ಸೇಡು ತೀರಿಸಿಕೊಂಡ. ಈ ಹುಡುಗ ಎಷ್ಟು ಹೊತ್ತಾದರೂ ಹಳ್ಳಿಗೆ ಬಾರದಿರುವುದನ್ನು ನೋಡಿ ತಂದೆಯು ಮಗನನ್ನು ಹುಡುಕಿಕೊಂಡು ಹೊರಟ. ರಕ್ತದ ಮಡುವಿನಲ್ಲಿ ಮಲಗಿದ್ದ ದೇಹವನ್ನು ನೋಡಿದ. ಮುಂದೆ ಪೊಲೀಸಿನವರು ಬಂದರು. ಇಲ್ಲಿಗೆ ಪೋಸ್ಟ್‌ಮಾರ್ಟಂಗೆ ಹೆಣ ಕಳಿಸಿದ್ದಾರೆ."

ಎಲ್ಲರೂ ಡಿಸೆಕ್ಷನ್ ಥಿಯೇಟರಿನ ಬಳಿಗೆ ಧಾವಿಸಿದರು. ಹೆಣ ಕುಯ್ದು ಮನಸ್ಸು ಕಲ್ಲಾಗಿದ್ದ ವಿದ್ಯಾರ್ಥಿಗಳು ಹೆಣವನ್ನು ನೋಡಿದಾಗ ಅವರಿಗೆ ಭೀತಿಯಾಗಲೀ ಅಸಹ್ಯವಾಗಲೀ ಆಗುತ್ತಿರಲಿಲ್ಲ. ಮರದ ತುಂಡಿನಂತೆ ಬಿದ್ದಿದ್ದ ನಿರ್ಜೀವ ದೇಹಗಳು ಅವರಲ್ಲಿ ಯಾವ ವಿಧವಾದ ಭಾವನೆಯನ್ನೂ ಹುಟ್ಟಿಸುತ್ತಿರಲಿಲ್ಲ.

ಆದರೆ ಇದು?

ಸುಮಾರು ಆರು ವರ್ಷದ ಹುಡುಗನ ದೇಹ ಮೇಜಿನ ಮೇಲೆ ಮಲಗಿತ್ತು.

ಅವನ ಮೈಮೇಲೆ ಎಣಿಸಲಾಗದಷ್ಟು ಗಾಯಗಳಿದ್ದವು. ಅವನ ದೇಹ ರಕ್ತದಿಂದ ಕಡೆದಂತಿತ್ತು. ತಲೆಯ ಬುರುಡೆಯ ಮೇಲೆ ಆರು ಕಡೆ ಮಚ್ಚಿನಿಂದ ಏಟು ಬಿದ್ದಿತ್ತು. ಕೂದಲು ರಕ್ತದಲ್ಲಿ ನೆನೆದು ತಲೆಗೆ ಅಂಟಿಕೊಂಡಿತ್ತು. ಇನ್ನು ಅವನ ಮುಖ!

ಅದು ಮನುಷ್ಯನ ಮುಖವೋ, ಪ್ರಾಣಿಯದೋ ಎಂಬ ಗುರುತು ಸಹ ಸಿಕ್ಕದಷ್ಟು ಅವನ ಮುಖವನ್ನು ಕೊಚ್ಚಿಹಾಕಿದ್ದರು. ಮುಖದ ಬಲಭಾಗ ಸಂಪೂರ್ಣವಾಗಿ ಕೊಚ್ಚಿಹೋಗಿತ್ತು. ಎಡಗಡೆಯ ಕಣ್ಣುಗುಡ್ಡೆ ಈಚೆಗೆ ಹೊರಟುಕೊಂಡಿತ್ತು.

ವಿಜಯ ದೇಹವನ್ನು ನೋಡಿ ಹಿಂದೆ ಸರಿದಳು. ಮೀರ ಕಲ್ಲಿನಂತೆ ಮಾಡಿಕೊಂಡು, ಅಳುಕದೆ ಧೈರ್ಯವಾಗಿ ನಿಂತಿದ್ದಳು. ಯಾವುದೋ ಮಾತುಗಳು ಕೇಳಿಬಂದವು:

"ಹುಡುಗನ ಮೈಮೇಲೆ, ಮುಖದ ಮೇಲೆ ಆಗಿರುವ ಗಾಯ, ಏಟುಗಳಿಂದಲೇ ಪ್ರಾಣ ಹೋಗಿದ್ದಿರಬಹುದೇ? ಅಥವಾ ಪ್ರಾಣ ಹೋದ ಮೇಲೆ ಬಿದ್ದ ಪೆಟ್ಟುಗಳೇ ಇವು?"

ಪರೀಕ್ಷೆಯ ನಂತರ ವಿದ್ಯಾರ್ಥಿಗಳು ಒಮ್ಮತದಿಂದ ಹೇಳಿದರು,

"ತಲೆಯ ಮೇಲೆ ಮಚ್ಚಿನಿಂದ ಒಂದು ಏಟು ಬಿದ್ದಕೂಡಲೇ ಹುಡುಗ ಸತ್ತು ಹೋಗಿದ್ದಾನೆ. ಕೋಪದಿಂದ ಹುಚ್ಚನಾಗಿದ್ದ ಕೊಲೆಗಾರ ಆಮೇಲೆ ಅವನ ದೇಹವನ್ನು ಕೊಚ್ಚಿ ತುಂಡು ಮಾಡಿದ್ದಾನೆ."

ಅಬ್ಬಾ! ಇವನೇ ಮಾನವ!

ಯಾವುದೋ ಒಂದು ಕ್ಷುಲ್ಲಕ ಕಾರಣಕ್ಕಾಗಿ ಏನೂ ಅರಿಯದ ಹಸುಳೆಯನ್ನು ತನ್ನ ಕಿಚ್ಚಿನ ಕಿಡಿಗೆ ಆಹುತಿ ಮಾಡಿದ್ದಾನೆ. ಅವನನ್ನು ಮಚ್ಚಿನಿಂದ ಹೊಡೆದು ಕೊಂದುಹಾಕಿದುದಲ್ಲದೇ, ಸತ್ತ ಹೆಣದ ಮೇಲೆ ಗಾಯಗಳನ್ನು ಮಾಡಿ ತನ್ನ ಕೋಪವನ್ನು ಶಾಂತ ಮಾಡಿಕೊಂಡಿದ್ದಾನೆ.

ಮಾನವನನ್ನು 'ನಾಗರೀಕ' ಎಂದು ಹೇಗೆ ಹೇಳುವುದು?

ಮೀರಳಿಗೆ ಅಮೇರಿಕಾದಿಂದ ಹೊರಡುವ 'ಲೈಫ್' ಮಾಸಪತ್ರಿಕೆಯಲ್ಲಿ ಬಂದಿದ್ದ ಸುದ್ದಿಯೊಂದು ನೆನಪಿಗೆ ಬಂತು.

ಅಮೇರಿಕಾ ಪ್ರಪಂಚದ ದೃಷ್ಟಿಯಲ್ಲಿ ಅತ್ಯಂತ ಮುಂದುವರಿದಿರುವ ದೇಶ. ನಾಗರೀಕತೆ, ಸಭ್ಯತೆ, ಶ್ರೀಮಂತಿಕೆಯಿಂದ ಮೆರೆದಾಡುವ ದೇಶವದು. ಆದರೆ ಅಲ್ಲಿ ನಡೆದ ಒಂದು ಪ್ರಸಂಗ-

ಯಾವುದೋ ನಗರವೊಂದರಲ್ಲಿ, ಊರಿನ ನಾಗರೀಕರು ಬೆಳೆದು ಬಲಿಷ್ಠವಾಗಿದ್ದ ಗೂಳಿಯೊಂದಕ್ಕೂ ಸಿಂಹವೊಂದಕ್ಕೂ ಕಾಳಗವೇರ್ಪಡಿಸಿದ್ದರು. ಬಿಗಿಯಾದ ಸರಳಿನ ಪಂಜರವನ್ನು ಏರ್ಪಡಿಸಿ ಅದರಲ್ಲಿ ಗೂಳಿಯನ್ನು, ಸಿಂಹವನ್ನೂ ಕಾಳಗವಾಡಲು ಬಿಟ್ಟು, ಊರಿನ ಜನ 'ಮನರಂಜನೆ' ನೋಡುತ್ತಾ ಕುಳಿತರು.

ಎರಡು ಪ್ರಾಣಿಗಳಿಗೂ ಭಯಂಕರ ಜಗಳವಾಯಿತು. ಕಾಳಗದಲ್ಲಿ ಗೂಳಿ ಸಿಂಹವನ್ನು ಹರಿದುಹಾಕಿತು. ಈ ಕಾಳಗವನ್ನು ನೋಡುತ್ತಿದ್ದ ಜನ ಎಷ್ಟು ಉದ್ರೇಕಗೊಂಡರೆಂದರೆ, ಆ ಕಾಳಗದಿಂದ ಸ್ಫೂರ್ತಿ ಹೊಂದಿದ ಪ್ರೇಕ್ಷಕರಿಗೇ ಜಗಳಗಳು

ಆರಂಭವಾದವು. ಬೆಂಚು, ಕುರ್ಚಿಗಳು ಹಾರಾಡಿ ಮತ್ತೊಬ್ಬರ ತಲೆಯ ಮೇಲೆ ಬಿದ್ದವು. ಕೊನೆಗೆ ಪೋಲೀಸಿನವರು ಬಂದು ಪರಿಸ್ಥಿತಿಯನ್ನು ಶಾಂತ ಮಾಡ ಬೇಕಾಯಿತು.

ಸಿಂಹವನ್ನು ಸೀಳಿಹಾಕಿದ ಗೂಳಿಗೆ ಸಿಕ್ಕ ಬಹುಮಾನ? ಮೈಯೆಲ್ಲಾ ಗಾಯವಾಗಿ ರಕ್ತ ಸೋರುತ್ತಿದ್ದ ಗೂಳಿಯನ್ನು ಕಟುಕನ ಅಂಗಡಿಗೆ ಒಪ್ಪಿಸಿದರಂತೆ ಆ ಜನ.

ಇಪ್ಪತ್ತನೆಯ ಶತಮಾನದಲ್ಲಿ ನಾಗರೀಕ ಅಮೇರಿಕಾದ ನಾಗರೀಕತೆಯಿದು. ಹಸಿದ ಗೂಳಿ, ಸಿಂಹದ ಕಾಳಗದಿಂದ ಮನರಂಜನೆ ಪಡೆಯುವ ಮಾನವರು, ಕಂದನ ಹೆಣವನ್ನು ಕೊಚ್ಚಿ ತಂದೆಯ ಮೇಲಿನ ಕ್ರೋಧವನ್ನು ತೀರಿಸಿಕೊಳ್ಳುವ ಮಾನವ!

ಮೀರಳಿಗೆ ತುಂಬ ಸಂಕಟವಾಯಿತು. ಕರುಳು ಎದ್ದು ಬಾಯಿಗೆ ಬರುತ್ತಿದೆ ಯೇನೋ ಎಂಬಂತೆ ಅವಳಿಗೆ ಭಾಸವಾಯಿತು. ಸೆರಗಿನಿಂದ ಬಾಯನ್ನು ಗಟ್ಟಿಯಾಗಿ ಮುಚ್ಚಿ ಹೊರಗೆ ಹೋದಳು.

* * * * *

ಶಾಂತಾರಾಮ್, ಜಯಶ್ರೀ ಯಾವುದೋ ಚಿತ್ರದ ಷೂಟಿಂಗಿಗಾಗಿ ಮೈಸೂರಿಗೆ ಬರುವರೆಂದು ತಿಳಿದು ವಿದ್ಯಾರ್ಥಿಗಳು ಪುಲಕಿತರಾದರು. ಶಾಂತಾ ರಾಮ್ ಮೀರಳ ಅಚ್ಚುಮೆಚ್ಚಿನ ದಿಗ್ದರ್ಶಕ. ಅವನ ಜಾಣ್ಮೆ, ಕಲೆಯಲ್ಲಿರುವ ಆಸಕ್ತಿಯನ್ನು ಮೀರಾ ತುಂಬಾ ಮೆಚ್ಚಿಕೊಂಡಿದ್ದಳು. ಅಭಿನಯ ಕಲೆಯ ಮೇಲೆ ಅವರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುವರೆಂದು ತಿಳಿದು ಹಾಸ್ಟೆಲಿನಲ್ಲಿ ವಿದ್ಯಾರ್ಥಿನಿಯರೂ ಹೊರಟರು.

ಮೈಸೂರಿನ ಎಲ್ಲಾ ಕಾಲೇಜುಗಳಿಂದಲೂ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಬಂದಿದ್ದರು.

"ಮೈಸೂರಿನಲ್ಲಿ ಇಷ್ಟೊಂದು ವಿದ್ಯಾರ್ಥಿಗಳಿದ್ದಾರೆ ಎಂದು ತಿಳಿದುದು ಈ ದಿನವೇ" ಎಂದು ವಿಜಯ ನಗೆಯಾಡಿದಳು.

ಶಾಂತಾರಾಮ್, ಜಯಶ್ರೀ ಕಾರಿನಲ್ಲಿ ಬಂದಿಳಿದರು. ವಿದ್ಯಾರ್ಥಿಗಳ ಮುಖಂಡ ಅವರಿಗೆ ಹಾರ, ತುರಾಯಿ ಹಾಕಿ ಸ್ವಾಗತಿಸಿದ. ಅವರು ವೇದಿಕೆಯ ಮೇಲೆ ಹೋಗಿ ಕುಳಿತರು.

ಶಾಂತಾರಾಮ್ ಚಲನಚಿತ್ರ ಅಭಿನಯದ ಮೇಲೆ ಪುಟ್ಟ ಭಾಷಣ ಮಾಡಿದರು. ಅವರು "ನೀವೇನಾದರೂ ಪ್ರಶ್ನೆ ಕೇಳುವ ಹಾಗಿದ್ದರೆ ಕೇಳಬಹುದು" ಎಂದು ಹೇಳಿ ಕುಳಿತುಕೊಂಡರು.

ಆತ ನಿರೀಕ್ಷಿಸಿದ್ದರೇನೋ.... ವಿದ್ಯಾರ್ಥಿಗಳು ಕಲೆಯ ಮೇಲೆ ಪ್ರಶ್ನೆಗಳನ್ನು ಕೇಳಬಹುದೆಂದು.

ಪ್ರಶ್ನೆಗಳು ಬರತೊಡಗಿದವು.

"ಜಯಶ್ರೀಯೊಡನೆ ಬೇರೆ ನಟ ಅಭಿನಯಿಸುವಾಗ ನಿಮಗೇನು ಅನಿಸುತ್ತದೆ?"

"ಶಾಕುಂತಲದ ಶೃಂಗಾರರಸ ಪ್ರಧಾನ ಚಿತ್ರದಲ್ಲಿ ಸಹ ದುಷ್ಯಂತ ಶಕುಂತಲೆಯನ್ನು ಒಂದು ಬಾರಿಯೂ ಮುತ್ತಿಡಲಿಲ್ಲವೇಕೆ?"

"ಜಯಶ್ರೀಯ 'ಮೆಷರ್‌ಮೆಂಟ್ಸ್' ಏನು?"

ಕೆಲವು ಪುಂಡರ ತಂಡದಿಂದಾಗಿ ವಿದ್ಯುತ್ ದೀಪಗಳು ತಟ್ಟನೆ ಆರಿಹೋದವು. ಇದನ್ನು ನಿರೀಕ್ಷಿಸಿಯೇ ಏನೋ ಪೆಟ್ರೋಮ್ಯಾಕ್ಸ್ ದೀಪವನ್ನು ವಿದ್ಯಾರ್ಥಿಗಳ ಮುಖಂಡ ಸಿದ್ಧಮಾಡಿ ತಂದಿದ್ದ.

ಹಿಂದಿನಿಂದ ಕೂಗುಗಳು ಕೇಳಿಬಂದವು.

"ನಾವು ಜಯಶ್ರೀನ ನೋಡಬೇಕು, ಅವಳ ಮುಖಕ್ಕೆ ದೀಪ ಹಿಡಿಯಿರಿ."

ಅಷ್ಟೊಂದು ಜನ ವಿದ್ಯಾರ್ಥಿಗಳ ಎದುರಿನಲ್ಲಿ ಏನೂ ಮಾಡಲಾರದೇ ಶಾಂತಾರಾಮ್ ದೀಪವನ್ನು ಎತ್ತಿ ಜಯಶ್ರೀಯ ಮುಖದ ಬಳಿ ಹಿಡಿದರು.

ಆಕೆಯ ಮುಖ ಕೋಪದಿಂದ ಕೆಂಪಾಗಿತ್ತು. ಆಕೆ ಕೆಳತುಟಿಯನ್ನು ಕಚ್ಚುತ್ತಾ, ಕರವಸ್ತ್ರವನ್ನು ತಿರುಚುತ್ತಾ ಮುಖ ಕೆಳಗೆಮಾಡಿ ಕುಳಿತಿದ್ದಳು.

ಆ ದಂಪತಿಗಳು ವಿದ್ಯಾರ್ಥಿಗಳ ಕೋಟೆಯನ್ನು ಭೇದಿಸಿಕೊಂಡು ಹೊರಗೆ ಹೋಗಬೇಕಾದರೆ ಸಾಕಾಗಿ ಹೋಯಿತು.

ಆಮೇಲೆ ಮುಖಂಡ ವಿದ್ಯಾರ್ಥಿಗಳ ನಡತೆಯನ್ನು ಖಂಡಿಸಿ ಕ್ಷಮಾಪಣೆ ಕೇಳಿಕೊಂಡನಂತೆ.

"ಹೊರಗಿನ ಜನಕ್ಕೆ ನಮ್ಮ ವಿದ್ಯಾರ್ಥಿಗಳು ಕೊಡುವ 'ಇಂಪ್ರೆಷನ್' ಎಷ್ಟು ಚೆನ್ನಾಗಿದೆಯೋ?" ಎಂದು ವಿಜಯ ಪರಿತಾಪಪಟ್ಟಳು.

"ಜಯಶ್ರೀ 'ಮೆಷರ್‌ಮೆಂಟ್" ಕಟ್ಟಿಕೊಂಡು ಇವರಿಗೇನಾಗಬೇಕಾಗಿದೆ? ಆಕೆಯ ಎದೆ, ಸೊಂಟ, ನಿತಂಬದ ಸುತ್ತಳತೆ ಅರಿತು ಅವಳಿಗೆ ಈಜುವ ಉಡುಗೆ ಹೊಲಿಸಬೇಕೇನೋ?" ಎಂದು ಮೀರ ವ್ಯಸನಪಟ್ಟಳು.

"ಪ್ರತಿಯೊಬ್ಬ ವಿದ್ಯಾರ್ಥಿಯೂ ಹೀಗೆ ಎಂದು ಹೇಳಲಾಗದಿದ್ದರೂ, ಒಟ್ಟಿನಲ್ಲಿ ವಿದ್ಯಾರ್ಥಿಗಳ ಮನೋಭಾವ ಯಾವ ಕಡೆ ಹರಿಯುತ್ತಿದೆ ಎಂದು ಈ ದಿನ ತಿಳಿಯಿತು" ಯಶೋದ ಹೇಳಿದಳು.

"ಕೆಲವು ಹುಡುಗಿಯರು ತಾನೇ ಇನ್ನೇನು-'ಜಯಶ್ರೀ ಯಾವ ಸೆಂಟು ಹಚ್ತಾಳೆ, ಯಾರ ಹತ್ತಿರ ರವಿಕೆ ಹೊಲಿಸುತ್ತಾಳೆ' ಎಂದು ಕೇಳಲಿಲ್ಲವೇ?"

"ವಿದ್ಯಾರ್ಥಿಗಳೆಂದ ಮೇಲೆ ಅವರೂ ಸೇರಿಕೊಂಡ ಹಾಗಾಯಿತು."

"ಇವರು ಜಯಶ್ರೀಯಲ್ಲಿ ತೋರಿಸಿದ ಕುತೂಹಲದ ನೂರರಲ್ಲಿ ಒಂದು ಭಾಗವನ್ನು ಕಲೆಯಲ್ಲಿ ತೋರಿಸಬಾರದಿತ್ತೇ?"

"ಈ 'ಮಾಬ್ ಮೆಂಟಾಲಿಟಿ'ಗೆ ಏನೂ ಮಾಡೊಕ್ಕಾಗುವುದಿಲ್ಲ. ಎಲ್ಲ ದೇಶಗಳಲ್ಲೂ ಒಂದು ನೂರು ಜನ ಸೇರಿದರೆ ಹೀಗೆ ವರ್ತಿಸುತ್ತಾರೆ."

ವಿದ್ಯಾರ್ಥಿನಿಯರು ಖಿನ್ನ ಮನಸ್ಸಿನಿಂದ ಹಾಸ್ಟೆಲನ್ನು ಸೇರಿದರು.

ಮಾರನೆಯ ದಿನ ಎರಡನೇ ವರ್ಷದವರಿಗೆ ಒಂದು ಗಂಟೆ ಕ್ಲಾಸಿರಲಿಲ್ಲ. ಹಾಸ್ಟೆಲಿಗೆ ಹೋಗೋಣವೆಂದು ಮೀರ, ವಿಜಯ, ಯಶೋದ ಹೊರಟರು. ಅವರು ಕಾರಿಡಾರಿನಲ್ಲಿ ಬರುತ್ತಿದ್ದಾಗ ಬರಿದಾಗಿದ್ದ ರೂಮೊಂದರಲ್ಲಿ ಗೋಪಿನಾಥ ಗೆಳೆಯನೊಬ್ಬನ ಹಸ್ತವನ್ನು ನೋಡುತ್ತಾ ಕುಳಿತಿದ್ದ.

ಬಾಗಿಲಿನ ಮುಂದೆ ಹಾದುಹೋಗುತ್ತಿದ್ದ ಮೀರಳನ್ನು ನೋಡಿ ನಕ್ಕು, "ನಮಸ್ಕಾರ" ಎಂದ.

"ನಮಸ್ಕಾರ. ನಿಮಗೆ ಕೈ ನೋಡಲು ಬೇರೆ ಬರುತ್ತದೆಯೇ?"

"ಸುಮಾರಾಗಿ ಬರುತ್ತದೆ. ಪುಸ್ತಕವನ್ನು ಓದಿ ತಿಳಿದುಕೊಂಡಿದ್ದೇನೆ."

ವಿಜಯ ಮೀರಳನ್ನು ಚುಚ್ಚಿ, "ನಾವೂ ಕೈ ತೋರಿಸೋಣ" ಎಂದಳು.

ಮೀರ ನಿರುಪಾಯಳಾಗಿ ಗೆಳತಿಯರೊಡನೆ ಒಳಗೆ ಬಂದಳು.

"ಇವರು ವಿಜಯ, ಯಶೋದ, ಇವರು ಗೋಪಿನಾಥ್-ನಾಟಕದ ಸಂದರ್ಭದಲ್ಲಿ ನನಗೆ ಇವರ ಪರಿಚಯವಾಯಿತು."

ನಮಸ್ಕಾರಗಳ ವಿನಿಮಯವಾಯಿತು. ಗೋಪಿನಾಥ ಗೆಳೆಯನ ಕೈಬಿಟ್ಟು ಹುಡುಗಿಯರ ಕಡೆ ತಿರುಗಿದ.

ವಿಜಯ ಕುತೂಹಲದಿಂದ ತನ್ನ ಪುಟ್ಟ ಕೈ ನೀಡಿ,

"ನನ್ನ ಕೈ ನೋಡಿ" ಎಂದಳು.

ಅವಳು ತನ್ನ ಮುಂದೆ ನೀಡಿದ ಕೈಯನ್ನು ಗೋಪಿನಾಥ ಪರೀಕ್ಷಿಸಿ ನೋಡತೊಡಗಿದ. ಪೆನ್ಸಿಲೊಂದನ್ನು ಕೈಲಿ ಹಿಡಿದು ಹಸ್ತರೇಖೆಗಳನ್ನು ಬಿಡಿಸಿ ನೋಡಿದ.

"ನಿಮ್ಮದು ಬಹಳ ಪುಟ್ಟ ಕೈ. ಗೆರೆಗಳು ಇನ್ನೂ ಸರಿಯಾಗಿಯೇ ಡೆವಲಪ್ ಆಗಿಲ್ಲ. ನಿಮ್ಮದು ಪ್ರೀತಿ, ವಿಶ್ವಾಸದಿಂದ ತುಂಬಿದ ಹೃದಯ. ಅತ್ಯಂತ ಸ್ನೇಹಪರರು-ಸಂಗೀತದಲ್ಲಿ ಬಹಳ ಆಸಕ್ತಿಯಿದೆ...."

"ಹೌದು, ನಾನು ಒಳ್ಳೆಯ ಡಾಕ್ಟರಾಗುತ್ತೀನೋ ಇಲ್ಲವೋ ಹೇಳಿ."

"ಸಾಧಾರಣವಾದ ವೈದ್ಯರಾಗುವಿರಿ. ಯಾಕೆಂದರೆ...."

"ಅವಳಿಗೆ ಯಾವಾಗ ಮದುವೆಯಾಗುತ್ತದೆ ಹೇಳಿ. ಯಾರನ್ನು ಮದುವೆಯಾಗುತ್ತಾಳೆ?" ಮೀರ ಕುತೋದ್ಯದಿಂದ ಹೇಳಿದಳು.

"ಓ ಸಾಕು ಬಿಡು" ವಿಜಯ ಕೆಂಪಾಗಿ ಹೇಳಿದಳು.

ವಿಜಯಳ ನಾಚಿಕೆ ನೋಡಿ ಗೋಪಿನಾಥ ತಲೆ ಎತ್ತಿ ಅವಳ ಮುಖದ ಕಡೆ ನೋಡಿದ.

ಎಷ್ಟು ಮುದ್ದಾದ ಹುಡುಗಿ! ಅವಳ ದುಂಡು ಮುಖಕ್ಕೆ ಉಂಗುರದ ಮಾದರಿಯ ಲೋಲಾಕುಗಳು ಎಷ್ಟು ಚೆನ್ನಾಗಿ ಕಾಣುತ್ತವೆ. ಗೋಧಿಯ ಬಣ್ಣದ ತನುಕಾಂತಿ, ದೊಡ್ಡ ಕಣ್ಣುಗಳು, ಅವುಗಳಲ್ಲಿನ ಮುಗ್ಧತೆಯಿಂದಾಗಿ ಅವಳ ಮುಖ ಮಗುವಿನ ಮುಖದಂತೆ ಕಾಣುತ್ತಿತ್ತು. ಸಾಧಾರಣವಾದೊಂದು ನೂಲಿನ ಸೀರೆಯಲ್ಲೂ ಅವಳು ರಾಣಿಯಂತೆ ಕಾಣುತ್ತಿದ್ದಳು.

ಗೋಪಿನಾಥ ಮತ್ತೆ ನೋಟವನ್ನು ಅವಳ ಕೈಯಿನ ಕಡೆಗೆ ಹರಿಸಿದ. ನೀಳವಾದ ಮೃದುವಾದ ಬೆರಳುಗಳು....

"ಈ ರೀತಿ ಬೆರಳುಗಳಿದ್ದರೆ ಅವರು ಯಾವುದಾದರೊಂದು ಕಲೆಯಲ್ಲಿ ಪರಿಣತರಾಗುತ್ತಾರೆ."

"ವಿಜಯ ಹಿಂದೂಸ್ಥಾನಿ ಸಂಗೀತ ಬಹಳ ಚೆನ್ನಾಗಿ ಹೇಳ್ತಾಳೆ. ನಿಮಗೆ ಗೊತ್ತಿರಲಿಲ್ಲವೇನು?" ಎಂದು ಯಶೋದ ಕೇಳಿದಳು.

ಗೋಪಿನಾಥ ತಲೆ ಅಲುಗಿಸಿದ. ಅದೇಕೋ ಅವನ ಮುಖ ಬೆವರಿತು.

"ನೀವು ಮದುವೆ ವಿಷಯ ಹೇಳಲಿಲ್ಲವಲ್ಲಾ?" ಮೀರ ಕೇಳಿದಳು.

"ಅವರು ಓದು ಮುಗಿಸುವವರೆಗೆ ಮದುವೆಯಾಗುವುದಿಲ್ಲ. ಆಮೇಲೆ ಈ ಕಾಲೇಜಿನಲ್ಲಿರುವವರಲ್ಲೇ ಒಬ್ಬರನ್ನು ಮದುವೆಯಾಗುತ್ತಾರೆ...."

"ಆ ಭಾಗ್ಯಶಾಲಿ ಯಾರು?"

"ಅದು ನನಗೆ ಗೊತ್ತಾಗೋದಿಲ್ಲ. ಅವರು ಆಮೇಲೆ ತಮ್ಮ ಸಂಸಾರದಲ್ಲೇ ಹೆಚ್ಚು ಆಸಕ್ತಿ ವಹಿಸುತ್ತಾರಾದ್ದರಿಂದ ಒಳ್ಳೆಯ ಡಾಕ್ಟರಾಗುವುದಿಲ್ಲ. ಇದು ಕೆರಿಯರ್ ಗರ್ಲ್‌ನ ಕೈಯಲ್ಲ. ಸದ್ಗೃಹಿಣಿಯ ಕೈ...."

"ಸಾಕು ಬಿಡಿ. ಏನೇನೋ ಹೇಳ್ತೀರಾ...." ಎನ್ನುತ್ತಾ ವಿಜಯ ಕೈ ಹಿಂದಕ್ಕೆ ತೆಗೆದುಕೊಂಡಳು. ಗೋಪಿನಾಥ ವಸ್ತ್ರದಿಂದ ಮುಖ ಒರೆಸಿಕೊಂಡ.

ಯಶೋದ ತನ್ನ ಕೈಯನ್ನೂ ತೋರಿಸಿಕೊಂಡಳು. ಅವರಿಬ್ಬರ ಒತ್ತಾಯ

ದಿಂದ ಮೀರ ತನ್ನ ಕೈಯನ್ನೂ ತೋರಿಸಲೇಬೇಕಾಯಿತು.

"ನಿಮಗೆ ಹಣಕ್ಕೆ ಕಡಿಮೆಯಿಲ್ಲ. ತುಂಬಾ ಶ್ರೀಮಂತರು-ಉತ್ತಮ ವೈದ್ಯರಾಗುವಿರಿ-ನಿಮಗೆ ಅತ್ಯಂತ ಪ್ರಿಯರಾದವರನ್ನು ಕಳೆದುಕೊಂಡಿದ್ದೀರಿ ಅಥವಾ ಕಳೆದುಕೊಳ್ಳುವಿರಿ. ನಿಮಗೆ ಜೀವನದಲ್ಲಿ ಅಷ್ಟೇನೂ ಸುಖವಿಲ್ಲ. ನೀವು ಒಳ್ಳೆಯ ಗೆಳತಿ, ಒಳ್ಳೆಯ ವಿದ್ಯಾರ್ಥಿನಿ. ಉತ್ತಮ ವೈದ್ಯರಾಗುವುದರಲ್ಲಿ ಸಂದೇಹವಿಲ್ಲ. ಆದರೆ ಎಂದಿಗೂ ಉತ್ತಮ ಗೃಹಿಣಿ ಎನಿಸಿಕೊಳ್ಳುವುದಿಲ್ಲ."

ಮೀರ ಬೆಚ್ಚಿ ತನ್ನ ಕೈಯನ್ನು ಹಿಂದಕ್ಕೆ ತೆಗೆದುಕೊಂಡಳು.

"ನಮ್ಮ ಕೈಯನ್ನು ನೋಡಿದ್ದಕ್ಕೆ ನಿಮ್ಮ ಫೀಸೇನು?" ವಿಜಯ ಕೇಳಿದಳು.

"ನನ್ನೊಡನೆ ಕ್ಯಾಂಟೀನಿಗೆ ಬಂದು ತಿಂಡಿ ತಿನ್ನಬೇಕು" ಗೋಪಿ ಹೇಳಿದ.

"ನಿಮ್ಮ ಲೆಕ್ಕದಲ್ಲೇ? ಇದೇನು ಅನ್ಯಾಯ" ವಿಜಯ ಪ್ರತಿಭಟಿಸಿದಳು. ಯಶೋದೆಯೂ ಅವಳೊಡನೆ ದನಿಗೂಡಿಸಿದಳು.

"ಹಾಗಾದರೆ ನಿಮ್ಮಿಷ್ಟ" ಎಂದ ಗೋಪಿ.

"ಹಾಗಾದರೆ ಬನ್ನಿ, ನಾಳೆ ನಾವು ಅವರಿಗೆ ಕೊಡಿಸಿದರಾಯಿತು" ಮೀರ ಪರಿಹಾರ ಸೂಚಿಸಿದಳು.

ಎಲ್ಲರೂ 'ಕ್ಯಾಂಟೀನ್' ಕಡೆ ನಡೆದರು.

ದಿನವೆಲ್ಲಾ ಗೋಪಿನಾಥನ ಮಾತುಗಳು ಮೀರಳ ಕಿವಿಯಲ್ಲಿ ಮೊರೆಯುತ್ತಿದ್ದವು.

"ಯು ಆರ್ ಎ ಗುಡ್ ಫ್ರೆಂಡ್, ಗುಡ್ ಸ್ಟೂಡೆಂಟ್, ಬಟ್ ನಾಟ್ ಎ ಗುಡ್ ಹೌಸ್‌ವೈಫ್."

ಅವನ ಮಾತು ನಿಜವಿರಬಹುದೆ? ಇದ್ದರೂ ಇರಬಹುದು. ಮೀರಳಿಗೆ ತನ್ನ ಸಂಸಾರವೇ ಸರ್ವಸ್ವ ಎನ್ನುವ ಭಾವನೆ ಎಂದೂ ಬಂದಿರಲಿಲ್ಲ. ವೀಣಳಿದ್ದಾಗ ಮಾತ್ರ.... ಒಡೆದ ಕನಸು.

ಕ್ಲಾಸಿನಲ್ಲಿ ಪಾಠಗಳನ್ನು ಸಹ ಮುಚ್ಚಟ್ಟು ಕೇಳಲಾಗಲಿಲ್ಲ ಮೀರಳಿಗೆ. ಕಾಲೇಜು ಮುಗಿದಾಗ ಏನೋ ಯೋಚನೆ ಮಾಡುತ್ತಿದ್ದ ಮೀರ ವಿಜಯಳ ಮಾತುಗಳಿಂದ ಎಚ್ಚರಗೊಂಡಳು.

"ಗೋಪಿನಾಥ ಒಳ್ಳೆಯವರು. ಅಲ್ಲವೇ ಮೀರಾ?"

ಮೀರಳಿಗೆ ತುಂಬಾ ನಗು ಬಂತು. ಅವಳು ಕೀಟಲೆ ಮಾಡುತ್ತಾ,

"ಉಳಿದ ಹುಡುಗರು ನಿನ್ನ ತಲೆಯ ಮೇಲೆ ಕಲ್ಲು ಹಾಕಿದರೇನು?"

"ಹಾಗಲ್ಲ, ಆತ ಬಹಳ ಗಂಭೀರವಾಗಿ ಇರುತ್ತಾರೆ. ಹುಡುಗಿಯರನ್ನು

ದಿಟ್ಟಿಸಿ ನೋಡುವುದಿಲ್ಲ. ಯಾರನ್ನೂ ರೇಗಿಸುವುದಿಲ್ಲ. ಕ್ಲಾಸಿನಲ್ಲೂ ತಮ್ಮ ಪಾಡಿಗೆ ತಾವಿರುತ್ತಾರೆ ಎಂದು ಸಹಪಾಠಿ ಕಾಂತಿ ಹೇಳಿದಳು."

"ಅವರು ಪುಕ್ಕಟೆಯಾಗಿ ನಿನ್ನ ಕೈ ನೋಡಿದರೂಂತ ಒಳ್ಳೆಯವರಾಗಿ ಬಿಟ್ಟರೇನೋ" ಯಶೋದ ಕೆಣಕಿದಳು.

ಅವರು ತರಗತಿಯೊಂದರ ಮುಂದೆ ಹಾದುಹೋಗುತ್ತಿದ್ದಂತೆ ತರಗತಿ ಮುಗಿದು, ಹುಡುಗರ ತಂಡ ಹೊರಗೆ ಬರತೊಡಗಿತು. ಗುಂಪಿನಲ್ಲಿ ಗೋಪಿ ನಾಥನನ್ನು ಕಂಡು ಮೀರ,

"ನೋಡು, ನಿನ್ನ ಹೀರೋ ಅಲ್ಲಿದ್ದಾರೆ. ನಿನ್ನ ಸರ್ಟಿಫಿಕೇಟನ್ನು ಅವರಿಗೆ ಕೊಡು" ಎಂದಳು.

"ನಿನಗೂ ಗೊತ್ತು ಅವರು ಒಳ್ಳೆಯವರೂಂತ. ಆದರೂ ಸುಮ್ಮನೆ ನನ್ನ ಹಾಸ್ಯ ಮಾಡ್ತೀಯ."

ಗುಂಪಿನಲ್ಲಿ ಹಿಂದೆ ಹೋಗುತ್ತಿದ್ದ ಗೋಪಿನಾಥನನ್ನು ಯಶೋದ,

"ಮಿಸ್ಟರ್ ಗೋಪಿನಾಥ್" ಎಂದು ಕೂಗಿದಳು.

ಗೋಪಿ ಹಾಗೇ ನಿಂತು ಹಿಂತಿರುಗಿ ಏನು ಎನ್ನುವಂತೆ ನೋಡಿದ.

"ಮಿಸ್ ವಿಜಯ ಪರಾಂಜಪೆ ಅದೇನೋ ನಿಮ್ಮನ್ನು ಕೇಳಬೇಕೆಂದಿದಾರೆ."

ವಿಜಯಾಗೆ ಈಗ ನಿಜವಾಗಿಯೂ ಯಶೋದಳ ಮೇಲೆ ಕೋಪ ಬಂತು. ಎಲ್ಲರ ಎದುರಿನಲ್ಲಿ ಆತನನ್ನು ಕೂಗಿ ನಿಲ್ಲಿಸುವಂತಹ ಅಗತ್ಯವಾದರೂ ಏನು?

ಅವಳ ಕಿವಿಯಲ್ಲಿದ್ದ ಉಂಗುರಗಳು-ಎರಡು ಜಡೆ-ನೂಲಿನ ಸೀರೆ-ಮಗುವಿನಂತಹ ಮುಖ-

ಗೋಪಿನಾಥ ತಡವರಿಸುತ್ತಾ ಕೇಳಿದ,

"ಏನಾಗಬೇಕಿತ್ತು?"

ವಿಜಯಳಿಗೆ ಅವನೊಡನೆ ಮಾತನಾಡುವುದು ಏನೂ ಇರಲಿಲ್ಲ. ಯಶೋದ ಅವನನ್ನು ಕೂಗಿ ನಿಲ್ಲಿಸಿದ ಮೇಲೆ ಅವಳಿಗೆ 'ಏನೂ ಇಲ್ಲ, ಹೋಗಿ' ಎನ್ನಲು ಸಂಕೋಚವಾಯಿತು. ಮೀರ ಅವಳ ಸಹಾಯಕ್ಕೆ ಬಂದು,

"ತಾನು ಈ ವರ್ಷ ಪರೀಕ್ಷೆಯಲ್ಲಿ ಪಾಸಾಗಬಹುದೇ ಎಂದು ಕೇಳುತ್ತಾಳೆ" ಎಂದಳು.

"ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಿದರೆ ಖಂಡಿತ ಪಾಸಾಗುವಿರಿ."

"ಅದನ್ನು ಹೇಳುವುದಕ್ಕೆ ನೀವೇ ಆಗಬೇಕೇನೋ?" ವಿಜಯ ಕೇಳಿದಳು.

"ನಿಮ್ಮ ಹಸ್ತ ಸಾಮುದ್ರಿಕ ವಿವರವಾಗಿ ತಿಳಿಯಲು ಆಸೆಯಿದೆಯೇ?"

"ಯಾರಿಗೆ ತಾನೆ ಆಸೆ ಇರುವುದಿಲ್ಲ."

"ನಾನು ಇನ್ನೊಂದು ದಿನ ನಿಧಾನವಾಗಿ ನೋಡಿ ಹೇಳುತ್ತೇನೆ. ನಿಮಗೆ ಮೀರಾ...."

"ನನಗೆ ಅದರಲ್ಲಿ ಅಷ್ಟೊಂದು ಆಸಕ್ತಿಯಿಲ್ಲ. ಬೇಕಾದರೆ ಯಶೋದ...."

"ಸದ್ಯ ಬೇಡಮ್ಮ. ಕೈ ತೋರಿಸಿ ಅವಲಕ್ಷಣ ಎನಿಸಿಕೊಳ್ಳಲು ನನಗಾಸೆಯಿಲ್ಲ."

"ಈಗ ವಿಜಯಳಿಗೊಬ್ಬಳಿಗೇ 'ಪಾಮಿಸ್ಟ್ರಿ'ಯಲ್ಲಿ ಆಸಕ್ತಿ ಬಂದಿದೆ" ಮೀರ ನಗುತ್ತಾ ಹೇಳಿದಳು.

"ನೋಡೋಣ. ನನಗೆ ಬಿಡುವಿದ್ದಾಗ ಒಂದು ದಿನ ಹೇಳುತ್ತೇನೆ. ಬರಲಾ?" ಎಂದು ಹುಡುಗಿಯರ ಅಪ್ಪಣೆ ಪಡೆದು ಗೋಪಿ ಹೊರಟುಹೋದ.

"ವಿಜಯಾಗೆ 'ಪಾಮಿಸ್ಟ್ರಿ'ಗಿಂತಲೂ 'ಪಾಮಿಸ್ಟ್'ನಲ್ಲಿ ಆಸಕ್ತಿಯಿದೆ" ಯಶೋದ ಮತ್ತೆ ಕೀಟಲೆ ತೆಗೆದಳು.

"ನನ್ನ ಕೈ ತೋರಿಸಿಕೊಂಡಾದ ಮೇಲೆ ಆತ ಎದುರಿಗೆ ಸಿಕ್ಕಿದರೂ ವಿಷ್ ಕೂಡ ಮಾಡೋಲ್ಲ. ಬೇಕಾದರೆ ನೋಡು" ಎಂದಳು ವಿಜಯ.

"ಪಾಪ! ಅವಳನ್ನು ಯಾಕೆ ಹಾಸ್ಯ ಮಾಡ್ತೀಯ ಯಶೋದ. ಹುಡುಗಿ ಕೈ ತೋರಿಸೋಣಾಂತ ಆಸೆಪಟ್ಟಾಳೆ. ಅದು ಸಹಜ" ಎಂದು ಮೀರ ಹಿರಿಯಳಂತೆ ಇಬ್ಬರಿಗೂ ಸಮಾಧಾನ ಹೇಳಿದಳು.

ಎರಡನೇ ವರ್ಷದ ಪರೀಕ್ಷೆ ಅತ್ಯಂತ ಕಠಿಣವಾದುದೆಂದು ಮೀರಳಿಗೆ ತಿಳಿದಿತ್ತು. ಎಂತಹ ಬುದ್ಧಿವಂತರೂ ಎರಡನೇ ವರ್ಷದಲ್ಲಿ ಫೇಲಾಗುವರೆಂದು ಎಲ್ಲರೂ ಹೆದರಿಸುತ್ತಿದ್ದರು. ಬೆಳಿಗ್ಗೆ ಓದಲು ಮೀರಳಿಗೆ ಬಿಡುವು ಸಿಕ್ಕುತ್ತಿರಲಿಲ್ಲ. ಆದುದರಿಂದ ಅವಳು ಪ್ರತಿ ದಿನ ರಾತ್ರಿ ಎರಡು ಗಂಟೆಯವರೆಗೆ ಓದಿ ಮಲಗುತ್ತಿದ್ದಳು. ಯಶೋದ, ಮನೋರಮಾ ಸಹ ವ್ಯಾಸಂಗದಲ್ಲಿ ಹೆಚ್ಚು ಸಮಯವನ್ನು ಕಳೆಯುತ್ತಿದ್ದರು.

ಆದರೆ ಡಾಲಿಗೆ ಮಾತ್ರ ಓದಲು ಸಮಯವಿರುತ್ತಿರಲಿಲ್ಲ. ಅವಳು ಮೊದಲಿನಂತೆಯೇ ಅಲಂಕಾರ ಮಾಡಿಕೊಂಡು ತನ್ನನ್ನು ಹುಡುಕಿಕೊಂಡು ಬರುತ್ತಿದ್ದ ಕಸಿನ್ನಿನ ಜೊತೆ ಹೊರಗೆ ಹೊರಡುತ್ತಿದ್ದಳು. 'ಡಾಲಿಯ ಕಸಿನ್' ಎಂಬುದು ಹುಡುಗಿಯರಿಗೆ ಹಾಸ್ಯದ ಮಾತಾಗಿ ಹೋಗಿತ್ತು.

"ಈ ಸಲ ಡಾಲಿ ಪಾಸಾದರೆ ಅವಳ ಕಸಿನ್ನಿನಾಣೆ" ಎಂದು ಯಶೋದ ಹೇಳಿದ್ದಳು. ಪರೀಕ್ಷೆ ಮುಗಿಯಿತು. ಪರೀಕ್ಷೆ ಮುಗಿದೊಡನೆ ವಿಜಯ, ಮೀರಾ

ಪೂನಾಗೆ ಹೊರಟರು. ವಿಜಯ ಮುಂಚಿತವಾಗಿ ಪೂನಾದಲ್ಲಿದ್ದ ತನ್ನ ಸೋದರತ್ತೆಗೆ ಬರುವ ವಿಷಯವಾಗಿ ಕಾಗದ ಬರೆದಿದ್ದಳು. ಮೀರಾ ಶಾಮುವಿಗೂ ತಾನು ಪುಣೆಗೆ ಹೊರಡುವ ವಿಷಯ ತಿಳಿಸಿ, 'ಸಾಧ್ಯವಾದರೆ ಲಕ್ಷಣವಾಗಿರುವ ಹುಡುಗಿ ಯೊಬ್ಬಳನ್ನು ನಿಮಗಾಗಿ ತರುತ್ತೇನೆ' ಎಂದು ಬರೆದಿದ್ದಳು.

ಮೀರ, ವಿಜಯ ಸಾಮಾನುಗಳ ಸಮೇತ ಪ್ಲಾಟ್‌ಫಾರಮ್ಮಿಗೆ ಬಂದರು. ಪೂನಾಗೆ ಹೊರಡುವ ರೈಲು ಇನ್ನೂ ಲೈನಿಗೆ ಬಂದಿರಲಿಲ್ಲ. ಸಾಮಾನುಗಳನ್ನು ಒಂದು ಕಡೆ ಇರಿಸಿ ಇಬ್ಬರೂ ಸುತ್ತಲೂ ನೋಡುತ್ತಾ ನಿಂತರು.

"ಅರಸೀಕೆರೆ ರೈಲು ಬರೋಕೆ ಇನ್ನೂ ಎಷ್ಟು ಹೊತ್ತೋ?" ಮೀರ ಕೇಳಿದಳು.

"ಮೀರ, ಅಲ್ಲಿರೋದು ಗೋಪಿನಾಥ್ ಹಾಗಿಲ್ಲವೇ?"

"ಸರಿ, ನಿನಗೆ ಯಾರನ್ನು ನೋಡಿದರೂ ಗೋಪಿನಾಥನ ಹಾಗೇ ಕಾಣ್ತಾರೆ" ಮೀರ ವಿಜಯಳನ್ನು ಕೆಣಕಿದಳು.

"ಈ ಕಡೆಯೇ ತಿರುಗಿದರು.... ಅವರೇ.... ನೋಡು ನಮ್ಮನ್ನು ನೋಡಿ ನಕ್ಕರು.... ಈ ಕಡೆಗೆ ಬರುತ್ತಿದ್ದಾರೆ."

ವಿಜಯಳ ಮಾತು ನಿಜವಾಗಿತ್ತು. ಗೋಪಿನಾಥ ಗೆಳತಿಯರಿಬ್ಬರನ್ನೂ ನೋಡಿ ನಕ್ಕು ಹತ್ತಿರ ಬಂದು,

"ಎಲ್ಲೋ ಪ್ರಯಾಣ ಹೊರಟಹಾಗಿದೆ" ಎಂದ.

"ವಿಜಯಳ ತವರುಮನೆಗೆ ಹೋಗ್ತಿದೀವಿ."

"ಅಂದರೆ....?"

"ಪೂನಾಗೆ ಹೋಗ್ತಿದೀವಿ. ಅಲ್ಲಿ ಅವಳ ಸೋದರತ್ತೆ ಇದ್ದಾರೆ. ಹಾಗೇ ಬೊಂಬಾಯಿಯನ್ನು ನೋಡಿ ಬರುತ್ತೇವೆ. ಅಲ್ಲಿ ನಮ್ಮಣ್ಣ ಗೋಪಾಲ ಇದಾನೆ."

"ಸಂತೋಷ. ನಿಮ್ಮ ಪ್ರಯಾಣ ಸುಖಕರವಾಗಿರಲಿ. ನೀವೇ ಪುಣ್ಯವಂತರು."

"ವಿಜಯಾ ಜೊತೆ ಪ್ರಯಾಣ ಮಾಡ್ತೀನೀಂತ ಹಾಗೆ ಹೇಳುತ್ತಿರುವಿರೇನು?"

ಗೋಪಿ ಹುಡುಗಿಯಂತೆ ಕೆಂಪಾದ.

"ಹಾಗಲ್ಲ.... ನೀವು ಊರು ನೋಡಿ.... ಬರ್ತೀರೀಂತ...."

"ನಮ್ಮ ವಿಜಯಾ ಕೈ ಕೊನೆಗೂ ನೀವು ನೋಡಲೇ ಇಲ್ಲ" ಮೀರ ಅವನನ್ನು ಆಕ್ಷೇಪಿಸಿದಳು.

"ನನಗೆ ಈಗ ಕೈ ತೋರಿಸುವ ಆಸೆ ಇದೆ" ವಿಜಯ ಹೇಳಿದಳು.

"ನೀವು ಬಂದ ಮೇಲೆ...."

"ಏನೂ ಬೇಕಿಲ್ಲ. ನಿಮಗ್ಯಾಕೆ ತೊಂದರೆ."

"ತೊಂದರೆ ಏನಿಲ್ಲ. ನೀವು ವಾಪಸ್ಸು ಬಂದ ಮೇಲೆ ಬೇಡಾಂದ್ರೂ ನಾನು ಬಿಡೋದಿಲ್ಲ" ಗೋಪಿ ಒತ್ತಿ ನುಡಿದ.

"ನೀವು ರಜದಲ್ಲಿ ಎಲ್ಲಿಗೂ ಹೋಗುವುದಿಲ್ಲವೇನು?"

"ಇಲ್ಲ. ಯಾರೋ ಸ್ನೇಹಿತರನ್ನ ಕಳಿಸಿಕೊಡೋಕೆ ಬಂದಿದ್ದೆ. ಅಕಸ್ಮಾತ್ ನಿಮ್ಮ ಭೇಟಿಯಾಯಿತು" ಹಾಗೆ ಹೇಳುವಾಗ ಅವನು ವಿಜಯಳ ಕಡೆ ನೋಡಿದ.

ಅವಳ ಕೆನ್ನೆಯ ಮೇಲೆ ಗೋಪಿಯ ಗಲ್ಲ, ಬಾಯಿಯ ನೆರಳು ಬಿದ್ದಿತ್ತು. ಸ್ವಚ್ಛ ಕೆನ್ನೆಯ ಮೇಲೆ ಮೂಡಿದ್ದ ತನ್ನ ನೆರಳನ್ನೇ ಮತ್ಸರದಿಂದ ನೋಡಿದ ಗೋಪಿ.

ಅದೇ ಸರಳತೆ, ಮುಗ್ಧತೆ.

ಗೋಪಿ ಅಸೂಯೆಗೊಂಡು ಹಿಂದಕ್ಕೆ ಸರಿದ. ಅವನ ಕ್ರಾಪಿನ ನೆರಳು ಅವಳ ಕೊರಳಿನ ಮೇಲೆ ಪ್ರತಿಬಿಂಬಿತವಾಯಿತು. ಗಾಳಿ ಅವನ ಕ್ರಾಪನ್ನು ಕೆದರಿದಾಗ ಕೊರಳಿನ ಮೇಲಿದ್ದ ನೆರಳೂ ಅಲುಗಾಡುತ್ತಿತ್ತು.

ವಿಜಯ ಕೊರಳಿಗೆ ಹವಳದ ಸರ ಹಾಕಿಕೊಂಡಿದ್ದಳು. ಅವಳ ಕೊರಳಿನ ಬಣ್ಣಕ್ಕೂ, ಹವಳದ ಸರಕ್ಕೂ ತುಂಬಾ ಚೆನ್ನಾಗಿ ಹೊಂದಿಕೆಯಾಗಿತ್ತು.

ವಿಜಯ ಮೌನಗೌರಿಯಂತೆ ನಿಂತು ಅವರಿಬ್ಬರೂ ಆಡುತ್ತಿದ್ದ ಮಾತುಗಳನ್ನು ಕೇಳುತ್ತಿದ್ದಳು. ಇಂಗ್ಲೀಷಿನಲ್ಲಿ ಪ್ರಾರಂಭವಾದ ಸಂಭಾಷಣೆ ಈಗ ಕನ್ನಡಕ್ಕೆ ತಿರುಗಿತ್ತು. ವಿಜಯಳಿಗೆ ಕನ್ನಡ ಈಗ ಸುಮಾರಾಗಿ ತಿಳಿಯುತ್ತಿತ್ತು. ತಪ್ಪುತಪ್ಪಾಗಿ ಎಳೆಯ ಮಗುವಿನಂತೆ ತೊದಲು ಕನ್ನಡವನ್ನು ಆಡುತ್ತಿದ್ದಳು.

ಗೋಪಿ ಮೀರಳೊಡನೆ ಮಾತನಾಡುತ್ತಿದ್ದರೂ, ಅವನ ಗಮನವೆಲ್ಲವೂ ವಿಜಯಳ ಕೊರಳಿನ ಮೇಲಿತ್ತು.

ಎಷ್ಟು ಸುಂದರ! ಎಷ್ಟು ಮೃದು!

ತನ್ನ ನೆರಳೇ ತನಗಿಂತಲೂ ಭಾಗ್ಯಶಾಲಿ.

ಟ್ರೈನು ಲೈನಿಗೆ ಬಂತು. ಗೋಪಿ ಹತ್ತಿ ಹುಡುಗಿಯರಿಬ್ಬರಿಗೂ ಕೂಡಲು ಜಾಗ ಮಾಡಿಕೊಟ್ಟ. ಅವರ ಸಾಮಾನುಗಳನ್ನು ಸರಿಯಾಗಿರಿಸಿ,

"ಯಾವುದಾದರೂ ಪೇಪರು ಬೇಕಿತ್ತೇ?" ಎಂದ.

"ಕನ್ನಡ ವಾರಪತ್ರಿಕೆಗಳನ್ನು ತಂದುಕೊಡಿ" ಎನ್ನುತ್ತಾ ಮೀರ ಪರ್ಸ್ ತೆಗೆದಳು. ಗೋಪಿ ತಿರುಗಿ ನೋಡದೆ ಹೊರಟುಹೋದ.

ಅವನು ಹಿಂತಿರುಗಿ ಬಂದು ಮೀರಳ ಕೈಗೆ ಕನ್ನಡ ಪತ್ರಿಕೆಗಳನ್ನು ಕೊಟ್ಟು, ವಿಜಯಳ ಕೈಗೆ ಹಿಂದಿ ಮಾಸಪುಸ್ತಕವನ್ನು ನೀಡುತ್ತಾ,

"ನಿಮಗೆ ಹಿಂದಿ ಬರುತ್ತದಲ್ಲವೇ?" ಎಂದ.

"ಓಹೋ" ಎನ್ನುತ್ತಾ ವಿಜಯ ಅದರ ಹೆಸರು ಓದಿ ನಗತೊಡಗಿದಳು.

"ಯಾವ.... ಎಂತಹ ಪುಸ್ತಕ ಅದು?" ಗೋಪಿ ಗಾಬರಿಗೊಂಡು ಕೇಳಿದ.

ನಗುವಿನ ನಡುವೆ ವಿಜಯ ಹೇಳಿದಳು.

"ಹಿಂದಿ 'ಚಂದಮಾಮ' ತಂದಿದ್ದೀರಿ ನನಗೆ...."

"ಹಿಂದೀದು ಅದೊಂದೇ ಇದ್ದಿದ್ದು...."

"ಇದು ಮಕ್ಕಳ ಪುಸ್ತಕ"

"ಕೊಡಿ. ಬದಲಾಯಿಸಿ ಬೇರೆ ಯಾವುದಾದರೂ ಇಂಗ್ಲಿಷಿನದು ತಂದು ಕೊಡ್ತೀನಿ."

"ಊಹೂಂ. ನನಗಿದೇ ಇರಲಿ. ನೀವು ಮೊದಲು ತಂದಿದ್ದೇ ನನಗಿರಲಿ" ಎನ್ನುತ್ತಾ ವಿಜಯ ಪುಸ್ತಕವನ್ನು ತನ್ನ ಕೈಚೀಲದಲ್ಲಿರಿಸಿಕೊಂಡಳು.

"ಕಾಲೇಜು ಬಾಗಿಲು ತೆಗೆದ ಮೇಲೆ ನಿಮ್ಮ ಭೇಟಿ" ಎನ್ನುತ್ತಾ ಗೋಪಿ ಟ್ರೈನಿನ ಕಿಟಕಿಯ ಮೇಲೆ ಕೈಯಿಟ್ಟ. ವಿಜಯಳೂ ಕಿಟಕಿಯ ಮೇಲೆ ಕೈಯಿಟ್ಟಿದ್ದಳು. ಗೋಪಿ ತನ್ನ ಕೈಮೇಲೆ ಕೈ ಇಟ್ಟೊಡನೆಯೇ ವಿಜಯ ಕಂಪಿಸಿ ತನ್ನ ಕೈ ಹಿಂದಕ್ಕೆಳೆದುಕೊಂಡಳು.

"ಸಾರಿ."

ಅವನೇಕೆ 'ಸಾರಿ' ಎಂದುದು ಮೀರಳಿಗೆ ತಿಳಿಯಲಿಲ್ಲ. ವಿಜಯಳ ಮುಖ ಮುಂಜಾವಿನ ಅರುಣನಂತಿತ್ತು.

"ನಿಮ್ಮ ಸಹಾಯಕ್ಕೆ ನಾವು ಕೃತಜ್ಞರು" ಮೀರ ಅವನನ್ನು ಬೀಳ್ಕೊಡುವವಳಂತೆ ಮಾತನಾಡಿದಳು.

ಆದರೆ ಗೋಪಿಗೆ ಅದೇಕೋ ಅಲ್ಲಿಂದ ಹೋಗುವ ಮನಸ್ಸಿರಲಿಲ್ಲ. ಅವನು ಹಿಂದೆ ಸರಿದು ಭಾರವಾದ ದನಿಯಲ್ಲಿ "ಹೋಗಿ ಬನ್ನಿ. ವಿಷ್ ಯು ಎ ಹ್ಯಾಪಿ ಜರ್ನಿ" ಎನ್ನುತ್ತಾ ಮರೆಯಾದ.

ಬೆಳಕು ಹೋಗಿ ಕತ್ತಲು ಕವಿಯುತ್ತಾ ಬಂದಿತು. ಮೈಸೂರಿನಿಂದ ಹೊರಟಮೇಲೆ ದಾವಣಗೆರೆಯವರೆಗೆ ಕನ್ನಡ ಸುಮಾರಾಗಿ ಒಂದೇ ರೀತಿಯಿತ್ತು. ಅಲ್ಲಿಂದ ಕ್ರಮೇಣ ಕನ್ನಡ ರೂಪಾಂತರ ತಾಳತೊಡಗಿತ್ತು. ಧಾರವಾಡ ಕಳೆದ ನಂತರ ಕನ್ನಡ, ಮರಾಠಿ ಕಂಪಾರ್ಟ್‌ಮೆಂಟಿನಲ್ಲಿ ಕೇಳಿಬಂದವು. ಬೆಳಗಾಂ ಕಳೆದಮೇಲಂತೂ ಕನ್ನಡದ ಸೊಲ್ಲು ಅಡಗಿಹೋಗಿತ್ತು.

ವಿಜಯ ಪ್ರಯಾಣ ಬೇಸರವಾದಾಗಲೆಲ್ಲಾ 'ಚಂದಮಾಮ' ಹಿಡಿದುಕೊಂಡು ಕುಳಿತುಕೊಳ್ಳುತ್ತಿದ್ದಳು. ಅದರಲ್ಲಿ ಅವಳೇನು ಓದುತ್ತಿದ್ದಳೋ?

ಓದುವ ನೆಪದಲ್ಲಿ ಅವಳು ಕನಸಿನ ಮನೆಯನ್ನು ಕಟ್ಟುತ್ತಿದ್ದಳು. ಆಗಾಗ್ಗೆ ನಗೆಯ ತರಂಗವೊಂದು ಅವಳ ತುಟಿಯಂಚಿನಲ್ಲಿ ಆಡಿ ಮರೆಯಾಗುತ್ತಿತ್ತು.

"ಚಂದಮಾಮ ಎಷ್ಟು ಸಲ ಓದುತ್ತೀಯ? ಸಾಕು" ಎಂದು ಮೀರ ಅವಳನ್ನು ಹಾಸ್ಯಮಾಡಿದ್ದಳು.

ಪೂನಾದಲ್ಲಿ ಗೆಳತಿಯರನ್ನು ಎದುರುಗೊಳ್ಳಲು ವಿಜಯಳ ಸೋದರಮಾವ ಕೇತ್ಕರ್ ಬಂದಿದ್ದರು. ವಿಜಯ ಅವರಿಗೆ ಗೆಳತಿಯ ಪರಿಚಯ ಮಾಡಿಕೊಟ್ಟಳು.

ಪೂನಾದಲ್ಲಿ ಗೆಳತಿಯರಿಬ್ಬರೂ ಹದಿನೈದು ದಿನವಿದ್ದರು. ಅಲ್ಲಿಯ ಪೇಶ್ವಾ ಪಾರ್ಕ್, ಸಾಂಬಾಜಿ ಪಾರ್ಕುಗಳನ್ನೂ, ಪಾರ್ವತಿ ಬೆಟ್ಟವನ್ನೂ ನೋಡಿದ್ದಾಯಿತು. ಬಾಯಾರಿದಾಗಲೆಲ್ಲಾ ರಸ್ತೆಯ ಪಕ್ಕದಲ್ಲಿದ್ದ 'ರಮಣೀಯ ರಸವಂತಿ'ಗೆ ನುಗ್ಗಿ, ಮಂಜಿನ ಗೆಡ್ಡೆ ಹಾಕಿದ ಕಬ್ಬಿನ ಹಾಲನ್ನು ಕುಡಿದು ಬರುತ್ತಿದ್ದರು.

ಪೂನಾದಿಂದ ಅವರು ಮುಂಬಯಿಗೆ ಹೊರಟರು. ಮುಂಬಯಿಯಂತಹ ಮಹಾನಗರವನ್ನು ನೋಡಿ ಮೀರ ಅಚ್ಚರಿಗೊಂಡಳು. ಆ ಜನಸಂಖ್ಯೆ, ಟ್ರಾಮು, ಬಸ್ಸುಗಳು, ಟ್ರೈನುಗಳು, ಯಾವಾಗಲೂ ತಲೆಚಿಟ್ಟು ಹಿಡಿಸುವಷ್ಟು ಗದ್ದಲ.

ಸೆಖೆ, ಬೆವರನ್ನಂತೂ ಸಹಿಸುವುದಕ್ಕೆ ಆಗುತ್ತಿರಲಿಲ್ಲ.

ಗೋಪಾಲನ ಮನೆಯಲ್ಲಿ ವಿಜಯಾ, ಮೀರ ಬಿಡಾರ ಹೂಡಿದ್ದರು. ಗೋಪಾಲನ ಮನೆಯನ್ನು ನೋಡಿ ಮೀರ,

"ಎಷ್ಟೊಂದು ಪುಟ್ಟ ಮನೆ!" ಎಂದಳು.

"ಇಂಥ ದೊಡ್ಡ ಮನೆ ಸಿಕ್ಕಿರೋದು ನನ್ನ ಪುಣ್ಯ" ಎಂದ ಗೋಪಾಲ. ರಾಧ ನಾಲ್ಕು ಮಕ್ಕಳ ತಾಯಿಯಾಗಿದ್ದಳು. ಹಿರಿಯವನು ಕಿಶೋರ ಹತ್ತು ವರ್ಷದವನಾಗಿದ್ದ.

ಗೋಪಾಲನ ಮೊದಲಿನ ಹುಡುಗಾಟಿಕೆ, ಸರಸ ಸ್ವಭಾವ ಮಾಯವಾಗಿದ್ದನ್ನು ಮೀರ ಗಮನಿಸಿದಳು.

'ಏನು ಸಂಸಾರ ತಾಪತ್ರಯವೋ' ಎಂದಿತು ಮನಸ್ಸು.

ಮುಂಬಯಿಯಲ್ಲಿ ನೋಡಬೇಕಾದ ಸ್ಥಳಗಳೆಲ್ಲವನ್ನೂ ನೋಡಿದ್ದಾಯಿತು.

ಮಲಬಾರ್ ಹಿಲ್ಸ್, ಮೆಟ್ರೋ, ಜೋಗೇಶ್ವರಿ, ಅರೆ ಕಾಲೋನಿ, ಮಿಂಟು, ಮರೀನ್ ಡ್ರೈವ್, ಗೇಟ್‌ವೇ ಆಫ್ ಇಂಡಿಯಾ, ಚೌಪಾತಿ, ತಾಜ್.... ಬಲಾರ್ಡ್ ಪೀರ್, ಸಾಂತಾಕ್ರೂಜ್ ನಿಲ್ದಾಣ....

ಅಲೆದು ಅಲೆದು ಗೆಳತಿಯರಿಬ್ಬರೂ ಹಣ್ಣಾದರು.

ಅವರು ಊರಿಗೆ ಹೊರಡುವ ಹಿಂದಿನ ದಿನ ಗೋಪಾಲನ ಮನೆಯಲ್ಲಿ

ಭಾರಿ ಔತಣವಾಯಿತು. ಗೋಪಾಲ ಮೀರಳಿಗೂ, ವಿಜಯಳಿಗೂ ಸಿಲ್ಕಿನ ಸೀರೆಯೊಂದನ್ನು ಉಡುಗರೆಯಾಗಿ ಕೊಟ್ಟ.

ಅವರು ಮುಂಬಯಿನಿಂದ ನೇರವಾಗಿ ಮೈಸೂರಿಗೆ ಹೊರಟರು. ಮೈಸೂರಿಗೆ ಬರುವ ವೇಳೆಗೆ ಪರೀಕ್ಷೆಯ ಫಲಿತಾಂಶ ಬಂದಿತ್ತು. ಮೀರ, ವಿಜಯ, ಯಶೋದ ಪಾಸಾಗಿದ್ದರು. ಯಶೋದಳ ಊಹೆಯಂತೆ ಡಾಲಿ ಫೇಯಿಲಾಗಿದ್ದಳು.

ಇನ್ನೂ ಒಂದು ವಾರ ರಜವಿದ್ದುದರಿಂದ ಮೀರ ಮೈಸೂರಿನಲ್ಲಿ ಟ್ರೈನು ಬದಲಾಯಿಸಿ ಹಳ್ಳಿಗೆ ಹೊರಟಳು.

ಮುಂಬಾಗಿಲಿನಲ್ಲಿಯೇ ರೈತನೊಡನೆ ಮಾತನಾಡುತ್ತಿದ್ದ ಶಾಮು ಮೀರಳನ್ನು ನೋಡಿ ಆಶ್ಚರ್ಯದಿಂದ,

"ಈ ಸಲ ಬರೋದಿಲ್ಲಾಂತ ಬರೆದಿದ್ದೆಯಲ್ಲಾ" ಎಂದ.

"ಅಲ್ಲಿಗೆ ಹೋಗಿ ಬಂದೆವು. ಇನ್ನೂ ಒಂದು ವಾರ ರಜ ಇದೆ...." ಎನ್ನುತ್ತಾ ಮೀರ ಒಳಗೆ ಹೋದಳು. ಶಾಮು ರೈತರನ್ನು ಕಳುಹಿಸಿ ಒಳಗೆ ಬಂದಾಗ ಮೀರ ಎಲ್ಲಿಯೂ ಕಾಣಲಿಲ್ಲ. ಅವನು,

"ಅತ್ತೇ, ಎಲ್ಲಿ ಹೋದಳು ಮೀರ?" ಎಂದ ವೆಂಕಮ್ಮನವರಿಗೆ.

"ಸ್ನಾನ ಮಾಡಿ ಮೂರು ದಿನವಾಗಿತ್ತಂತೆ. ಬಂದವಳೇ ಸ್ನಾನ ಮಾಡಲು ಹೋಗಿದ್ದಾಳೆ."

ಮೀರ ಸ್ನಾನ ಮುಗಿಸಿ ಹೊರಗೆ ಬರಲು ಮುಕ್ಕಾಲು ಗಂಟೆಯಾಯಿತು. ರೈಲಿನ ಧೂಳು ಹೋಗಿಸಲು ಅವಳು ತಲೆಗೆ ಸ್ನಾನ ಮಾಡಿದ್ದಳು. ತನ್ನ ದಾರಿಯನ್ನೇ ಕಾಯುತ್ತಿದ್ದ ಶಾಮುವಿಗೆ,

"ಬಂದುಬಿಟ್ಟೆ, ಒಂದು ನಿಮಿಷ" ಎಂದವೇ ರೂಮಿಗೆ ಓಡಿದಳು. ಇಬ್ಬರೂ ಜೊತೆಯಾಗಿ ಊಟಕ್ಕೆ ಕುಳಿತರು. ಶಾಮುವಿಗಂತೂ ಮೀರಳನ್ನು ಎಷ್ಟು ನೋಡಿದರೂ ತೃಪ್ತಿಯಾಗಲಿಲ್ಲ.

ಅವಳಿಂದ ಮೈಸೂರು ಗಂಧದ ಸಾಬೂನಿನ ವಾಸನೆ ಹೊರಹೊಮ್ಮುತ್ತಿತ್ತು. ತಲೆಗೂದಲಂತೂ ಅಂಕೆಯಿಲ್ಲದ ಹುಚ್ಚು ಕುದುರೆಯಂತೆ ಹಾರಾಡುತ್ತಿತ್ತು. ಹಣೆಗೆ ಆತುರಾತುರವಾಗಿ ಮೂರುಕಾಸಿನಗಲ ಕುಂಕುಮವಿರಿಸಿಕೊಂಡಿದ್ದಳು. ವೆಂಕಮ್ಮನವರು 'ದೇವರಪ್ರಸಾದ'ವೆಂದು ಕೊಟ್ಟಿದ್ದ ಚೂರು ಮಲ್ಲಿಗೆಹೂವು ಮುಡಿಯಲ್ಲಿ ಜೋಲುತ್ತಿತ್ತು. ಬಿಸಿಲಿನ ಅಲೆದಾಟದಿಂದ ಮೈಬಣ್ಣ ಸ್ವಲ್ಪ ಮಾಸಿದ್ದರೂ ಮುಖ ಆರೋಗ್ಯದಿಂದ ಮಿನುಗುತ್ತಿತ್ತು.

ಮೀರ ಶಾಮುವಿಗೆ ಯಾವಾಗಲೂ ಹೊಸ ಹುಡುಗಿಯಂತೆ ಕಾಣುತ್ತಿದ್ದಳು.

ಮದುವೆಯಾಗಿ ಸುಮಾರು ಎಂಟೊಂಬತ್ತು ವರ್ಷಗಳಾಗಿದ್ದರೂ ಮದುವೆಯ ಮೊದಲು ಅವಳನ್ನು-ತನಗೆ ಟಿಕೀಟು ಮಾರಲು ಬಂದಾಗ ನೋಡಿದಾಗ ತನ್ನಲ್ಲಿ ಮೂಡಿದ್ದ ಭಾವನೆಗಳೇ ಈಗಲೂ ಅವನಿಗೆ ಇದ್ದವು.

ಈಗಲೂ ಅದೇ ಆಕರ್ಷಣೆ, ಮೋಹ.

ಮದುವೆಯ ದಿನ ರಾತ್ರಿ ಅವಳು ತನ್ನ ಕೊಠಡಿಗೆ ಬಂದಾಗ ಅವಳಲ್ಲಿ ಎಷ್ಟು ಸೆಳೆತವಿತ್ತೋ ಈಗಲೂ ಅದೇ ಸೆಳೆತ.

ಒಂದೊಂದು ಸಲ ಅವಳು ತನ್ನನ್ನು ಬಹಳ ಪ್ರೀತಿಸುವವಳಂತೆ ಮಾತನಾಡಿಸುತ್ತಾಳೆ. ಮತ್ತೊಂದು ಸಲ ತನ್ನ ಪರಮದ್ವೇಷಿಯಂತೆ ದೂರ ಸರಿಯುತ್ತಾಳೆ. ಒಮ್ಮೆ ತನ್ನನ್ನು ಮಗುವಿನಂತೆ ಮುದ್ದು ಮಾಡಿದರೆ, ಮತ್ತೊಮ್ಮೆ ತಾನೇ ಅವನ ಮಗುವಿನಂತೆ ಮುದ್ದುಗರೆಯುತ್ತಾಳೆ. ಅತಿ ಬುದ್ಧಿವಂತಿಕೆಯಿಂದ ಮಾತನಾಡುವ ಅವಳ ಸುಂದರ ಬಾಯಿ ಮತ್ತೊಮ್ಮೆ ಅತಿಮೂರ್ಖತನದಿಂದ ಮಾತನಾಡುತ್ತದೆ. ಪ್ರೀತಿ, ಕನಿಕರ, ಮಮತೆ, ಸ್ನೇಹ ತುಳುಕಿಸುವ ಆ ಹೊಳಪುಕಣ್ಣುಗಳೇ ಮತ್ತೊಮ್ಮೆ ತಿರಸ್ಕಾರ, ತಾತ್ಸಾರವನ್ನು ಉಗಿಯುತ್ತವೆ. ತನ್ನ ಕೊರಳಿಗೆ ಹಾರವಾಗುವ ಆ ನೀಳತೋಳುಗಳೇ ಮತ್ತೊಮ್ಮೆ ಹತ್ತಿರ ಹೋದ ತನ್ನನ್ನು ಒರಟಾಗಿ ದೂರ ತಳ್ಳುತ್ತವೆ.

ಇಲಿಯನ್ನು ಆಟವಾಡಿಸುವ ಬೆಕ್ಕು ಅವಳು. ಸುಂದರ, ಆದರೆ ಕ್ರೂರ.

"ಇದೇನು ನನ್ನ ಹೀಗೆ ನೋಡ್ತೀರಿ? ಎಲೇನ ನೋಡಿಕೊಂಡು ಸುಮ್ಮನೆ ಊಟ ಮಾಡಬಾರದೆ" ಮೀರ ನಸುಕೋಪದಿಂದ ವೆಂಕಮ್ಮನವರಿಗೆ ಕೇಳಿಸದಂತೆ ಪಿಸುಗುಟ್ಟಿದಳು.

ಶಾಮು ಎಚ್ಚರಗೊಂಡು ಹೇಳಿದ.

"ನಿನ್ನ ನೋಡಿ ಬಹಳ ದಿನವಾಯಿತು. ಸುಮಾರು ಒಂದು ವರ್ಷವಾಗಿರಬಹುದು. ನಿನ್ನ ಮುಖ ಹೇಗಿತ್ತು ಎನ್ನುವುದೇ ಮರೆತುಹೋಗಿತ್ತು. ಅದಕ್ಕೆ ಜ್ಞಾಪಿಸಿ...."

"ಊಟವಾದ ಮೇಲೆ ನಿಧಾನವಾಗಿ ಜ್ಞಾಪಿಸಿಕೊಳ್ಳುವಿರಂತೆ. ನೀವು 'ಸಾಕು' ಎನ್ನುವವರೆಗೂ ನಿಮ್ಮ ಮುಂದೇನೆ ಕುಳಿತಿರುತ್ತೇನೆ."

"ಆಮೇಲೆ ಕೊಟ್ಟ ಮಾತಿಗೆ ತಪ್ಪಬಾರದು."

ಊಟ ಮುಗಿದ ಮೇಲೆ ಮೀರ ಹೇಳಿದಳು.

"ಪೂನಾದಿಂದ ನಿಮಗೆ ಚೆಲುವೆಯೊಬ್ಬಳನ್ನು ತರುವುದಾಗಿ ಹೇಳಿದ್ದೆ. ಆದರೆ ಸರಿಯಾದವರು ಯಾರೂ ಸಿಕ್ಕಲಿಲ್ಲ."

"ನೀನು ತಪ್ಪು ತಿಳಿದುಕೊಂಡಿದ್ದೀಯ. ನೀನು ಚೆಲುವೇನ ತಂದಿದೀಯ ನನಗೆ."

"ಎಲ್ಲಿ? ಯಾರು?"

"ನೀನೇ" ಶಾಮು ನಕ್ಕು ಹೇಳಿದ.

"ನಾನಿಲ್ಲಿ ಒಂದು ವಾರ ಮಾತ್ರ ಇರುವ ಚೆಲುವೆ. ಆಮೇಲೆ ಹಾರಿ ಹೋಗುತ್ತೇನೆ."

"ಪರವಾಗಿಲ್ಲ. ಒಂದು ವಾರ ನಾನು ಹೇಳಿದಂತೆ ನೀನಿದ್ದರೆ ಸಾಕು. ಹಕ್ಕಿಗಳು ಬೆಳಗಿನಲ್ಲಿ ಎಲ್ಲಿ ಹಾರಿಹೋದರೂ, ಸಂಜೆ ತಮ್ಮ ಗೂಡಿಗೆ ಮರಳಿ ಬರುತ್ತವೆ" ಎಂದ ಶಾಮು.

"ನನಗಿಂತ ಒಂದು ವರ್ಷ ಮುಂದಿರುವ ಹುಡುಗನೊಬ್ಬ, ಚೆನ್ನಾಗಿ ಕೈ ನೋಡ್ತಾನೆ. ಅವನು ನನ್ನ ಕೈ ನೋಡಿ 'ನೀವು ಒಳ್ಳೆಯ ಗೃಹಿಣಿಯಲ್ಲ' ಎಂದು ಹೇಳಿದ. ಅವನ ಮಾತು ನಿಜ ಅಲ್ಲವೇ?"

"ಹೇಗೆ ಹೇಳ್ತೀಯ?"

"ಒಳ್ಳೆಯ ಗೃಹಿಣಿ ಗಂಡನ್ನ ಬಿಟ್ಟು ಓದೋಕೆ ಹೋಗೋದಿಲ್ಲ. ಗಂಡನಿಗೆ ನೀನು ಬೇರೆ ಮದುವೆ ಮಾಡಿಕೋ ಎಂದು ಪೀಡಿಸುವುದಿಲ್ಲ. ಆದರೆ ನೀವು ಒಳ್ಳೆಯ ಗೃಹಸ್ಥರು, ಇಷ್ಟಾದರೂ ನನ್ನೇ ಕಟ್ಟಿಕೊಂಡು ಅಳ್ತೀರಿ."

"ನಿನ್ನ ಅಳ್ಸೋದಕ್ಕಾಗದ ಮೇಲೆ ಅಳಲೇಬೇಕು"

"ಇದೆಲ್ಲಿಯ ಹಣೆಬರಹ. ಹಾಯಾಗಿ ಬೇರೊಬ್ಬ ಹುಡುಗೀನ..."

"ತೆಗೆದೆಯಲ್ಲಾ ಹಳೇ ರಾಗಾನ"

"ನನಗಾಗಿ, ನಿಮಗಾಗಿ..."

"ಅವತ್ತು ನಿನ್ನ ಮಂಚದಿಂದ ತಳ್ಳಿದ್ದು ನೆನಪಿದೆಯೇ? ನೀನು ಹೀಗೆ ಮಾತನಾಡಿದರೆ ನಿನ್ನ ತಗೊಂಡು ಹೋಗಿ ಕೆರೆಗೆ ಎಸೆದು ಬರುತ್ತೇನೆ."

"ಹಾಗೆ ಮಾಡಿದರೆ ನಿಮಗೆ ಪುಣ್ಯ ಬರುತ್ತದೆ."

"ನನ್ನ ಯಾಕೆ ಹಿಂಸೆ ಮಾಡ್ತೀಯಾ, ಮೀರಾ? ನೀನು ಇಲ್ಲಿ ಒಂದು ವಾರ ಮಾತ್ರ ಇರ್ತೀಯ. ಒಂದು ವಾರವಾದರೂ ನಾವು ಸುಖವಾಗಿರೋಣ. ಕೆಲಸಕ್ಕೆ ಬಾರದ ಮಾತುಗಳನ್ನಾಡಿ, ನನ್ನ ಮನಸ್ಸಿಗೂ ಬೇಜಾರುಮಾಡಿ ನೀನೂ ಯಾಕೆ ಬೇಜಾರು ಮಾಡ್ಕೊಳ್ತೀಯ?"

ಅವನ ದನಿಯಲ್ಲಡಗಿದ್ದ ನೋವನ್ನು ಗುರುತಿಸಿ ಮೀರ,

"ಸಧ್ಯಕ್ಕೆ ನಿಮ್ಮನ್ನ ಬಿಟ್ಟಿದ್ದೀನಿ" ಎಂದಳು.

ಕಾಲೇಜಿನಲ್ಲಿ ಮೂರನೆಯ ವರ್ಷ ಪ್ರಾರಂಭವಾಯಿತು. ಈಗ ಬೆಳಗಿನ ಹೊತ್ತು ಆಸ್ಪತ್ರೆಯ ಡ್ಯೂಟಿ ಬೀಳುತ್ತಿತ್ತು. ಪ್ರತಿದಿನ ಬೆಳಿಗ್ಗೆ ಎಂಟೂವರೆಯಿಂದ ಹತ್ತು ಗಂಟೆಯವರೆಗೆ, ತಮ್ಮ ನೋಟೀಸ್ ಬೋರ್ಡಿನಲ್ಲಿ ಹಾಕಿದ್ದ ಸೂಚನೆಯಂತೆ ಒಂದೊಂದು ಗುಂಪು ಒಂದೊಂದು ವಾರ್ಡನ್ನು ಸುತ್ತಿ ಅಲ್ಲಿರುವ ರೋಗಿಗಳ ರೋಗದ ಇತಿಹಾಸ, ಚಿಹ್ನೆ, ಪರಿಹಾರ ಇವುಗಳನ್ನು ಅರಿತುಕೊಳ್ಳ ಬೇಕಾಗಿತ್ತು. ಒಂದು ದಿನ ಚೆಲುವಾಂಬ ಆಸ್ಪತ್ರೆಗೆ ಹೋದರೆ ಮತ್ತೊಂದು ದಿನ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಹೋಗಬೇಕಾಗಿತ್ತು.

ಕೊರಳಿಗೆ ಸ್ಟೆತಾಸ್ಕೋಪಿನ ಹಾರ ಹಾಕಿಕೊಂಡು ಓಡಾಡುವ ಮೀರಳಿಗೆ ತುಂಬಾ ಹೆಮ್ಮೆಯೆನಿಸುತ್ತಿತ್ತು.

ರೋಗಿಗಳ ರೋಗದ ಇತಿಹಾಸವೋ ಬಹಳ ವಿಚಿತ್ರವಾಗಿರುತ್ತಿತ್ತು. ಒಂದೇ ರೀತಿಯಿರುವ ಇಬ್ಬರು ರೋಗಿಗಳಿಗೆ ಒಂದೇ ಔಷಧಿ ಹಿಡಿಯುತ್ತಿರಲಿಲ್ಲ.

ಸ್ಪೆಷಲ್ ವಾರ್ಡ್, ಜನರಲ್ ವಾರ್ಡು ಎಲ್ಲದರಲ್ಲಿಯೂ ವಿದ್ಯಾರ್ಥಿಗಳು ಸ್ವತಂತ್ರವಾಗಿ ಓಡಾಡುತ್ತಿದ್ದರು. ಆದರೆ ಸ್ಪೆಷಲ್ ವಾರ್ಡಿನಲ್ಲಿರುತ್ತಿದ್ದ ಹಲವರು ಈ ವಿದ್ಯಾರ್ಥಿಗಳನ್ನು ಒಳಗೆ ಕಾಲಿರಿಸಲು ಸಹ ಬಿಡುತ್ತಿರಲಿಲ್ಲ.

ಒಂದು ಸಲ ಹಳ್ಳಿಯ ಗೌಡನೊಬ್ಬ ಆಸ್ಪತ್ರೆಗೆ ಬಂದ. ಅವನ ಗಂಟಲಿನ ಮೇಲೆ ಬೆಳೆದಿದ್ದ ತೆಂಗಿನಕಾಯಿ ಗಾತ್ರದ ಗಂಟನ್ನು ಸರ್ಜನರಿಗೆ ತೋರಿಸಲು ಅವನು ಬಂದಿದ್ದ.

ಸರ್ಜನರ ಹಿಂದೆ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಗುಂಪೂ ಬಂದಿತು. ಸರ್ಜನ್ ಅವನ ಗಂಟಲನ್ನು ಪರೀಕ್ಷಿಸಿ ವಿದ್ಯಾರ್ಥಿಗಳ ಕಡೆ ತಿರುಗಿ,

"ಈ ಗೌಡ ಮೊದಲೇ ಬಂದು ಆಪರೇಷನ್ ಮಾಡಿಸಿಕೊಂಡಿದ್ದರೆ ಚೆನ್ನಾಗಿತ್ತು. ಮೊದಲು ಅಲಕ್ಷ್ಯ ಮಾಡಿ ಈಗ ಅತಿ ದೊಡ್ಡದಾದ ಮೇಲೆ ಹಿಂಸೆ ತಡೆಯಲಾರದೆ ಬಂದಿದ್ದಾನೆ. ಈ ಆಪರೇಷನ್ ಮಾಡುವುದು ಕಷ್ಟ. ಯಾಕೆಂದರೆ ಈ ಗಂಟಲಿನಲ್ಲಿ ರಕ್ತದ ಸರಬರಾಜು ಬಹಳ ಆಗುತ್ತದೆ. ಆದ್ದರಿಂದ ಆಪರೇಷನ್ ಮಾಡುವಾಗಲೇ ಅತೀ ರಕ್ತಸ್ರಾವವಾಗಿ ಇವನು ಸತ್ತುಹೋದರೂ ಹೋಗ ಬಹುದು. ನನ್ನ ಕೈಲಾದ ಪ್ರಯತ್ನ ಮಾಡುತ್ತೇನೆ" ಎಂದು ಇಂಗ್ಲೀಷಿನಲ್ಲಿ ಹೇಳಿ, ಗೌಡನ ಕಡೆ ತಿರುಗಿ ಅವನ ಬೆನ್ನು ತಟ್ಟಿ ನಗುತ್ತಾ,

"ನಾನು ಆಪರೇಷನ್ ಮಾಡ್ತೀನಿ. ನೀನು ಹೆದರಿಕೋಬೇಡ. ಎಲ್ಲಾ ಸರಿಯಾಗುತ್ತದೆ" ಎಂದರು.

"ಪ್ರಾಣಕ್ಕೇನೂ ಭಯವಿಲ್ಲವಾ ಬುದ್ಧಿ?"

"ಏನೂ ಭಯವಿಲ್ಲ."

ಡಾಕ್ಟರ ಅಭಯನುಡಿ ಕೇಳಿದ ಗೌಡ ಸುಪ್ರೀತನಾಗಿ ಎದ್ದುಹೋದ. ಗೊತ್ತಾದ ದಿನದಲ್ಲಿ ಆಪರೇಷನ್ ಮೊದಲಾಯಿತು. ವಿದ್ಯಾರ್ಥಿಗಳು 'ಮಾಸ್ಕು'ಗಳನ್ನು ಧರಿಸಿ, ಉಸಿರು ಬಿಗಿಹಿಡಿದು ಸರ್ಜನರ ಕೈಚಳಕವನ್ನು ನೋಡುತ್ತಾ ನಿಂತರು. ಗೌಡನಿಗೆ ಕ್ಲೋರೋಫಾರಂ ಕೊಟ್ಟು ಜ್ಞಾನ ತಪ್ಪಿಸಲಾಗಿತ್ತು.

ಗಂಟಿಗೆ ಚಾಕು ಹಾಕಿ ಅರ್ಧ ಅಂಗುಲ ಕತ್ತರಿಸುವುದರಲ್ಲಿ ರಕ್ತದಿಂದ ಆಪರೇಷನ್ನಿನ ಮೇಜೆಲ್ಲಾ ಕೆಂಪಗಾಗಿ, ರಕ್ತ ನೆಲದ ಮೇಲೆ ಸೋರತೊಡಗಿತು.

ಸರ್ಜನರ ಬೆರಳುಗಳು ಮರಗಟ್ಟಿದವು. ಅವರ ಕಣ್ಣುಗಳು ಕಿರಿದಾದವು. ಗಂಟಿನಲ್ಲಿ ನೂರರಲ್ಲಿ ಒಂದು ಭಾಗವನ್ನೂ ಅವರು ಕೊಯ್ದಿರಲಿಲ್ಲ. ಆಗಲೇ ಅವನ ದೇಹದಿಂದ ರಕ್ತ ಪ್ರವಾಹವಾಗಿ ಹರಿದು ಬರುತ್ತಿತ್ತು.

ನಿಟ್ಟುಸಿರಿನೊಡನೆ ಸರ್ಜನ್ ಹೇಳಿದರು.

"ಆಪರೇಷನ್ ಸಾಧ್ಯವಿಲ್ಲ. ಆಪರೇಷನ್ ಪೂರ್ತಿ ಮುಗಿಯುವುದರೊಳಗೆ ಅವನು ಆ ಸ್ಥಳದಲ್ಲಿಯೇ ಸತ್ತು ಹೋಗುತ್ತಾನೆ. ಆದುದರಿಂದ ಯಾತನೆ ಅನುಭವಿಸಿಯಾದರೂ ಕೆಲವು ದಿನಗಳು ಈತ ಬದುಕಿರಲಿ" ಎನ್ನುತ್ತಾ ನರ್ಸ್ ಕಡೆ ತಿರುಗಿ,

"ಬ್ಯಾಂಡೇಜ್ ಕಟ್ಟಿಬಿಡಿ" ಎನ್ನುತ್ತಾ ಕೈತೊಳೆದು ಹೊರಗೆ ಬಂದರು.

ವಿದ್ಯಾರ್ಥಿಗಳ ಗುಂಪೂ ಅವರ ಹಿಂದೆಯೇ ಹೊರಕ್ಕೆ ಬಂತು. ಸರ್ಜನ್ ಸಿಗರೇಟು ಎಳೆಯುತ್ತಾ ಹೇಳಿದರು.

"ಗೌಡನಿಗೆ ಎಚ್ಚರವಾದ ಮೇಲೆ ಅವನಿಗೆ ಬಹಳ ನಿರಾಸೆಯಾಗಬಹುದು. ಆದರೆ ನಾನೇನು ಮಾಡಲಿ? ನಾನಾಗಿಯೇ ಆಪರೇಷನ್ ಮಾಡಿ ಅವನನ್ನು ಕೊಲ್ಲಲಾರೆ. ಯಶಸ್ವಿಯಾಗಿ ಆಪರೇಷನ್ ಮಾಡಲಾಗಲಿಲ್ಲವಲ್ಲಾ ಎಂಬ ಕೊರಗು ಮಾತ್ರ ನನ್ನಲ್ಲುಳಿಯಿತು."

ಸಿಗರೇಟಿನ ಹೊಗೆ ಬಿಡುತ್ತಾ ಅವರು ಮುಂದುವರಿಸಿದರು.

"ಗೌಡ, ಅವನ ಹೆಂಡತಿ ಮಕ್ಕಳಿಗೆ ನಾನು ಸಾಕಷ್ಟು ಭರವಸೆ ಕೊಟ್ಟಿದ್ದೆ! ಈಗ ಎಲ್ಲಾ ನೀರಿನಲ್ಲಿ ಹೋಮ ಮಾಡಿದಂತಾಯಿತು. ನನ್ನ ಕೈಚಳಕ, ಜಾಣ್ಮೆ ಎಲ್ಲವೂ ಈ ದಿನದ ಮಟ್ಟಿಗೆ, ಗೌಡನ ಮಟ್ಟಿಗೆ ವ್ಯರ್ಥವಾಯಿತು."

ವಿದ್ಯಾರ್ಥಿಗಳು ಮಾತನಾಡುತ್ತಾ ನಿಂತಿದ್ದಂತೆಯೇ ಟ್ರಾಲಿಯಲ್ಲಿ ಜ್ಞಾನ ವಿಹೀನನಾಗಿದ್ದ ಗೌಡನನ್ನು ತಳ್ಳಿಕೊಂಡು ಹೋಗಿ, ವಾರ್ಡ್‌ಬಾಯ್‌ಗಳು ಅವನನ್ನು ವಾರ್ಡಿನಲ್ಲಿ ಮಲಗಿದರು. ವಿದ್ಯಾರ್ಥಿಗಳು ಅಲ್ಲಿಂದ ಚೆದುರಿದರು.

"ಆಸೆ, ಭರವಸೆ-ಇವುಗಳೇ ರೋಗಿಗಳನ್ನುಳಿಸುವ ಜೀವಮಂತ್ರಗಳು" ಸರ್ಜನ್ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದರು

"ರೋಗಿ ಕೊನೆಯುಸಿರು ಎಳೆಯುತ್ತಿರುವಾಗಲೂ ಅವನಿಗೆ ಧೈರ್ಯ, ಭರವಸೆ ಕೊಡಿ. ರೋಗಿಯಾಗಲಿ ವೈದ್ಯನಾಗಲಿ ಸಹನೆ, ಭರವಸೆಯನ್ನು ಎಂದಿಗೂ ಕಳೆದುಕೊಳ್ಳಬಾರದು. ನಿರಂತರ ಪ್ರಯೋಗದಲ್ಲೇ ವೈದ್ಯನ ಜೀವನ ಕಳೆಯುತ್ತದೆ. ಆದರೆ ಭರವಸೆ ಅದರ ಬೆಂಗಾವಲಿಗಿರಬೇಕು. ನಿಮ್ಮಲ್ಲಿ ಆತ್ಮವಿಶ್ವಾಸವಿರಲಿ. ಅದನ್ನೆಂದಿಗೂ ಕಳೆದುಕೊಳ್ಳಬೇಡಿ. ಈ ಪ್ರಪಂಚದಲ್ಲಿ ನಾವು ಮಾಡಲಾಗದಿರುವುದು ಯಾವುದೂ ಇಲ್ಲ. ಕಣ್ಣಿಲ್ಲದವನಿಗೆ ಕಣ್ಣು, ಕೈಕಾಲಿಲ್ಲದವನಿಗೆ ಕೈಕಾಲು ನೀಡಿ ವಿಜ್ಞಾನ ನಿಧಾನವಾಗಿ ನಿಸರ್ಗವನ್ನು ಗೆಲ್ಲುತ್ತಿದೆ. ನಿಸರ್ಗ ನಮ್ಮ ಅಡಿಯಾಳಾಗದಿದ್ದರೂ, ಸಾಕಷ್ಟು ನಮ್ಮ ಕೈವಶವಾಗಿದೆ."

ಸರ್ಜನರ ಮಾತು ಕೇಳುತ್ತಾ, ಮೀರ ತನ್ನನ್ನು ತಾನೇ ಮರೆಯುತ್ತಿದ್ದಳು.

ವಿಜಯ ಪರಾಂಜಪೆ ತನ್ನನ್ನು ತಾನೇ ಮರೆತಿದ್ದಳು-ಬೇರೊಂದು ರೀತಿಯಲ್ಲಿ. ಮುಂಬಯಿ, ಪೂನಾ ಪ್ರವಾಸ ಮುಗಿಸಿಕೊಂಡು ಬಂದ ಮೇಲೆ ವಿಜಯ ತುಂಬಾ ಬದಲಾಯಿಸಿದ್ದಳು. ಅವಳು ಮೊದಲಿನಂತೆ ಕಾಲೇಜಿಗೆ ಬರುತ್ತಿದ್ದಳು. ಮೊದಲಿನಷ್ಟೇ ಸ್ನೇಹದಿಂದ ಮೀರಳೊಡನೆ ಮಾತನಾಡುತ್ತಿದ್ದಳು. ಆದರೂ ಅವಳಲ್ಲಿ ಏನೋ ಬದಲಾವಣೆಯಾಗಿದೆಯೆಂದು ಮೀರಳಿಗೆ ತೋರಿತು.

ಕ್ಲಾಸಿನಲ್ಲಿ ಪಾಠ ಕೇಳುತ್ತಿದ್ದಂತೆಯೇ ವಿಜಯಳ ಕಣ್ಣುಗಳು ಕನಸು ಕಾಣುತ್ತಿದ್ದವು. ಅನ್ಯಮನಸ್ಕತೆ ದಿನದಿನಕ್ಕೆ ಹೆಚ್ಚಾಯಿತು.

ಒಂದು ದಿನ ಚೆಲುವಾಂಬ ಆಸ್ಪತ್ರೆಯ ಜನರಲ್ ವಾರ್ಡಿನಲ್ಲಿ ಮೀರ ರೋಗಿಗಳ ಟೆಂಪರೇಚರನ್ನು ನೋಡುತ್ತಿದ್ದಳು. ವಿಜಯ ಮಾತ್ರ ವಾರ್ಡಿನೊಳಗೆ ಬರದೆ ಕಾರಿಡಾರಿನಲ್ಲಿಯೇ ನಿಂತಿದ್ದಳು.

ಗೋಪಿನಾಥ ತನ್ನ ಮತ್ತೊಬ್ಬ ಗೆಳೆಯನೊಡನೆ ಅಲ್ಲಿಗೆ ಬಂದ.

"ನಮಸ್ಕಾರ. ನಿಮ್ಮ ಪ್ರವಾಸ ಮುಗಿದ ಮೇಲೆ ನೋಡಲೇ ಇಲ್ಲ."

"ನಮಸ್ಕಾರ."

"ಮೀರ ಎಲ್ಲಿ? ಅವರು ಬರಲಿಲ್ಲವೇನು?"

"ಬಂದಿದ್ದಾಳೆ. ಒಳಗೆ ಚಾರ್ಜ್ ಶೀಟುಗಳನ್ನು ನೋಡುತ್ತಿದ್ದಾಳೆ."

"ನಾವೂ ಹೋಗೋಣ ಬನ್ನಿ."

ಗೋಪಿನಾಥ ತನ್ನ ಪಕ್ಕದಲ್ಲಿ ನೋಡಿದ. ಅದಾವ ಮಾಯದಲ್ಲೋ ಅವನ ಸ್ನೇಹಿತ ಒಳಗೆ ಹೊರಟುಹೋಗಿದ್ದ.

"ನೀವು ಹೋಗಿ ಬನ್ನಿ. ಅದೇಕೋ ಈ ದಿನ ನನಗೆ ತಲೆನೋವು ಬಂದಿದೆ."

"ನೀವು ಬಂದರೆ ನಾನು ಹೋಗುತ್ತೇನೆ."

"ನಾನು ಬರುವುದಿಲ್ಲ."

"ಹಾಗಾದರೆ ನಾನೂ ಹೋಗುವುದಿಲ್ಲ."

"ಹೀಗೆ ಹೇಳಿದರೆ ಹೇಗೆ? ಎಷ್ಟಾದರೂ ನೀವು ನಾಲ್ಕನೆ ವರ್ಷದಲ್ಲಿರುವಿರಿ. ನಮಗಿಂತಲೂ ನಿಮ್ಮ ಜವಾಬ್ದಾರಿ ಹೆಚ್ಚಾಗಿದೆ."

"ಇವತ್ತೊಂದು ದಿನ ಹೋಗದಿದ್ದರೆ ಏನೂ ಆಗುವುದಿಲ್ಲ."

"ಸರಿ ನಿಮ್ಮಿಷ್ಟ."

ಇಬ್ಬರೂ ಮಾತನಾಡುತ್ತಾ ನಿಧಾನವಾಗಿ ಅಲ್ಲಿಂದ ಸರಿದರು.

ವಿಜಯಳ ಕೈ ಅವಳ ಸರದೊಡನೆ ಆಟವಾಡುತ್ತಿತ್ತು. ಗೋಪಿನಾಥನ ಎತ್ತರದ ನಿಲುವಿನೆದುರಿಗೆ ಪುಟ್ಟ ವಿಜಯ ಮಗುವಿನಂತೆ ಕಾಣುತ್ತಿದ್ದಳು.

"ನಾನಿನ್ನೂ ನಿಮ್ಮ ಸಾಲ ತೀರಿಸಿಯೇ ಇಲ್ಲ."

"ವಿಜಯ ಕೊರಳೆತ್ತಿ "ಯಾವುದು?" ಎಂದಳು.

"ನಿಮ್ಮ ಕೈನ ಸರಿಯಾಗಿ ನೋಡುತ್ತೇನೇಂತ ಹೇಳಿದ್ದೆ, ಮರೆತಿರಾ?"

ವಿಜಯ ನಾಚಿದಳು. ತಲೆ ಬಗ್ಗಿಸಿಕೊಂಡೇ ಹೇಳಿದಳು.

"ಓ ಅದೇನು ಪರವಾಗಿಲ್ಲ ಬಿಡಿ. ನನಗೀಗ ಕೈ ತೋರಿಸಿಕೊಳ್ಳುವುದರಲ್ಲಿ ಶ್ರದ್ಧೆ ಇಲ್ಲ."

"ಆದರೆ ನನಗೆ ನಿಮ್ಮ ಕೈ ನೋಡಬೇಕೆಂದು ಆಸೆಯಿದೆ. ಇನ್ ಮೈ ಓನ್ ಇಂಟರೆಸ್ಟ್...."

ವಿಜಯ ತಲೆ ಅಲುಗಿಸಿ 'ಊಹೂಂ' ಎಂದಳು.

"ನೀವು ಇಷ್ಟೊಂದು ಹಟ ಮಾಡ್ತೀರೀಂತ ನನಗೆ ತಿಳಿದಿರಲಿಲ್ಲ. ನಾನು ಅಂದುಕೊಂಡಿದ್ದೆ-ನೀವು ಬಹಳ ಸಬ್‌ಮಿಸಿವ್ ಅಂತ."

"ಈಗಲಾದರೂ ನಾನು ಸಬ್‌ಮಿಸಿವ್. ಕಾಂಪೌಂಡಿನಲ್ಲಿಯೇ ಕುಳಿತು ನನ್ನ ಕೈ ನಿಮಗೆ ತೋರಿಸಲಾರೆ. ಆಮೇಲೆ ಒಂದು ನಿಮಿಷದಲ್ಲಿ ಇಲ್ಲಿ ಗುಂಪು ಸೇರುತ್ತದೆ."

"ಗಾಯತ್ರಿ ಭವನ್‌ಗೆ ಹೋಗೋಣ. ಬರುವಿರಾ?"

ಇಬ್ಬರೂ ಗಾಯತ್ರಿ ಭವನ್‌ಗೆ ನಡೆದರು. ವಿಜಯಳ ಮನಸ್ಸಿನಲ್ಲಿ ನಾನಾ ಯೋಚನೆಗಳು ಮೂಡಿ ಮರೆಯಾದವು.

ಇದೇನು ಹುಚ್ಚು ತನಗೆ! ಯಾವುದೇ ಕನಸಿನ ಸುಳಿಗೆ ಸಿಕ್ಕಿ ನಾನೇಕೆ ಹೀಗೆ

ವರ್ತಿಸಬೇಕು? ತನ್ನ ಗುರಿ, ಆದರ್ಶ ಎಲ್ಲವನ್ನೂ ಮರೆಸಿ, ತನ್ನನ್ನು ಇಷ್ಟು ದೀನಳನ್ನಾಗಿ ಮಾಡಿರುವುದು ಯಾವುದು ಅದು?

ಗೋಪಿನಾಥನೆ? ಅವನ ಚೆಲುವಾದ ಮುಖವೆ? ಎತ್ತರವಾದ, ಭವ್ಯವಾದ ನಿಲುವೇ? ಇಬ್ಬರೂ ಜೊತೆಯಾಗಿ ಹೋಟೆಲಿನ ಮೆಟ್ಟಲುಗಳನ್ನೇರಿದರು. ಗೋಪಿಯ ಕಾಲುಗಳು ಒಟ್ಟಿಗೆ ಎರಡು ಮೂರು ಮೆಟ್ಟಲುಗಳನ್ನು ಹಾರುತ್ತಿದ್ದುವು.

ಗೋಪಿನಾಥ ಎಂತಹ ಹುಡುಗನೋ ಏನೋ? ತಾನು ಅವನೊಡನೆ ಬಂದುದು ಸರಿಯೇ? ತಾನು ಬರಬಾರದಿತ್ತು. ತಾನು ಅವನೊಡನೆ ಒಂಟಿಯಾಗಿ ಬಂದುದು ಸರಿಯೇ? ನಾಳೆ ಉಳಿದ ಹುಡುಗರು ತಮ್ಮನ್ನು ಕೀಟಲೆ ಮಾಡುವು ದಿಲ್ಲವೇ? ತನಗೆ ಅದೆಷ್ಟು ಧೈರ್ಯ ಬಂದಿದೆ! ಹುಡುಗರು ರೇಗಿಸಬಹುದೆಂಬ ಭೀತಿಯನ್ನೂ ಮೆಟ್ಟಿ ತನ್ನನ್ನು ಇಲ್ಲಿಗೆ ಕರೆತಂದ ಶಕ್ತಿ ಯಾವುದು?

ವಿಜಯ ತನ್ನ ಭಾವನೆಗಳಲ್ಲಿ ಮುಳುಗಿದ್ದಳು. ತಗ್ಗಿದ ಅವಳ ಮುಖ ಅವನಿಗೆ ಸರಿಯಾಗಿ ಕಾಣುತ್ತಿರಲಿಲ್ಲ. ಕಪ್ಪು ಕೂದಲಿನ ಕಾರ್ಮೋಡ, ಭುಜದ ಮೇಲೆ ಎರಡಾಗಿ ಒಡೆದ ಕಪ್ಪು ಜಡೆಯ ಜಲಪಾತ, ಉಂಗುರದ ಲೋಲಕ್ಕುಗಳು- ಇವುಗಳ ಹೊರತು ಅವನಿಗೆ ಅವಳು ಕಾಣಲಿಲ್ಲ.

ಈ ಹುಡುಗಿಯಲ್ಲಿ ತನಗಿರುವ ಆಕರ್ಷಣೆಯಾದರೂ ಯಾವುದು? ತನ್ನ ಜಾತಿಯಲ್ಲ, ಕುಲವಲ್ಲ. ಕೊನೆಗೆ ತನ್ನ ಭಾಷೆಯೂ ಅವಳಿಗೆ ಸರಿಯಾಗಿ ತಿಳಿಯು ವುದಿಲ್ಲ. ತನ್ನ ಮನಸ್ಸಿನ ಏಕಾಗ್ರತೆಯನ್ನು ನಾಶ ಮಾಡಿದ ಈ ಪುಟ್ಟ ಹುಡುಗಿ ಯಾರು? ಐದು ಅಡಿಯಿರುವ ಇವಳ ಪುಟ್ಟ ದೇಹದ ಶಕ್ತಿ ಅಷ್ಟೊಂದು ದೊಡ್ಡದೇ? ತನಗೆ ಯಾವಾಗಲೂ ಹುಡುಗಿಯರಲ್ಲಿ ಆಸಕ್ತಿಯಿರಲಿಲ್ಲ. ಹುಡುಗಿಯರನ್ನು ದ್ವೇಷಿಸುತ್ತಿರಲಿಲ್ಲವಾದರೂ, ಇತರ ಹುಡುಗರಂತೆ ಹುಡುಗಿ ಯರೆಂದರೆ ಆಸೆಪಡುತ್ತಿರಲಿಲ್ಲ. ಆದರೆ ಈಗ ಎಲ್ಲವೂ ಹೇಗೆ ಬದಲಾವಣೆ ಯಾಯಿತು! ಹುಡುಗಿಯರೊಡನೆ ಏನಾದರೂ ನೆಪ ಹಾಕಿಕೊಂಡು ಓಡಾಡುವ ಹುಡುಗರನ್ನು ಕಂಡರೆ ತನಗೆ ಎಷ್ಟು ತಿರಸ್ಕಾರವಿತ್ತು. ಈಗ?

ಇಬ್ಬರೂ ಮೆಟ್ಟಲನ್ನೇರಿ ಪುಟ್ಟ ರೂಮೊಂದರಲ್ಲಿ ಹೋಗಿ ಕುಳಿತರು. ಮಾಣಿ ಬಂದು ನಿಂತು "ಏನು ತರಲಿ ಸಾರ್?" ಎಂದ.

"ಏನು ತಗೋತೀರಿ?"

"ನನಗೇನೂ ಬೇಡ. ನೀವೇನು ಬೇಕಾದರೂ ತರಿಸಿಕೊಳ್ಳಿ."

"ಎರಡು ಕಾಫಿ ತನ್ನಿ."

"ನಾನು ಮಹಾರಾಷ್ಟ್ರದವಳೆಂಬುದನ್ನು ಮರೆತಿರೇನೋ? ನಾವು 'ಚಾಯ್'

ಕುಡಿಯುವುದು. ಕಾಫಿ ಸೇರುವುದಿಲ್ಲ."

"ಎರಡು 'ಚಾಯ್' ತನ್ನಿ."

"ನಿಮಗೇಕೆ ಟೀ? ಈ ಕಡೆ ಟೀ ಯಾರೂ ಕುಡಿಯುವುದಿಲ್ಲ."

"ಪರವಾಗಿಲ್ಲ. ನಿಮಗೆ ಕಂಪನಿ ಕೊಡಲು ಕುಡಿಯುತ್ತೇನೆ." ಮಾಣಿ ಎರಡು ಬಟ್ಟಲುಗಳಲ್ಲಿ 'ಟೀ' ತಂದಿರಿಸಿ ಹೋದ. ಗೋಪಿ ಆಸಕ್ತಿಯಿಂದ ಹೇಳಿದ "ನಿಮ್ಮ ಕೈ ತೋರಿಸಿ." ಅವಳು ಮೇಜಿನ ಮೇಲೆ ತನ್ನ ಕೈ ನೀಡಿದಳು. ಜೇಬಿನಿಂದ ಸಿಲ್ಕಿನ ಕರವಸ್ತ್ರವನ್ನು ತೆಗೆದು ಮೇಜಿನ ಮೇಲೆ ಹರಡಿ 'ಅದರ ಮೇಲೆ ಕೈಯಿಡಿ' ಎಂದ.

ದೇವರ ಪೂಜೆಗೆ ಅಣಿಮಾಡಿಕೊಳ್ಳುವ ಭಕ್ತನ ಭಕ್ತಿಯಿತ್ತು. ಅವನ ಮುಖದಲ್ಲಿ. ವಿಜಯ ಮತ್ತೆ ಕೈ ನೀಡಿದಳು. ಗೋಪಿ ತನ್ನ ಜೇಬನ್ನು ತಡಕಾಡಿ ಪೆನ್ಸಿಲನ್ನು ಹೊರಗೆ ತೆಗೆದು, ಅವಳ ಹಸ್ತರೇಖೆಗಳನ್ನು ನೋಡತೊಡಗಿದ.

ಕೈ ನೋಡುವ ನೆಪದಲ್ಲಿ ಆತ ಕೈ ಹಿಡಿಯಬಹುದಿತ್ತು. ಆದರೆ ಆತ ಎಷ್ಟು ಗೌರವ, ಸಭ್ಯತನದಿಂದ ವರ್ತಿಸುತ್ತಾನೆ !

ಗೋಪಿ ತಲೆ ಬಗ್ಗಿಸಿ ಅವಳ ಕೈ ನೋಡುತ್ತಿದ್ದ. ಅವಳು ಅವನ ಮುಖವನ್ನು ನೆಟ್ಟನೋಟದಿಂದ ನೋಡುತ್ತಿದ್ದಳು.

ದಟ್ಟವಾಗಿ ಬೆಳೆದ ಕೂದಲಿನ ಕ್ರಾಪು, ಕಪ್ಪು ದಪ್ಪ ಹುಬ್ಬುಗಳು, ನೇರವಾದ ಮೂಗು, ಹೊಳಪಾದ, ಅಷ್ಟೇನೂ ವಿಸ್ತಾರವಲ್ಲದ ಕಣ್ಣುಗಳು, ತುಂಬಿದ ತುಟಿಗಳು, ಸಾದುಗಪ್ಪು ಬಣ್ಣ, ರೋಮ ತುಂಬಿದ ಕೈ ಇವುಗಳನ್ನು ನೋಡುತ್ತಾ ವಿಜಯ ಮೈ ಮರೆತಳು.

ತನಗಿಂತ ಒಂದೆರಡು ವರ್ಷ ದೊಡ್ಡವನಿರಬಹುದು ಅಷ್ಟೇ. ಅವನನ್ನು ನೋಡುತ್ತಿದ್ದಂತೆಯೇ ಯಾವುದೋ ಭಾವನೆಯಿಂದ ಅವಳ ಹೃದಯ ಕರಗಿ ನೀರಾಯಿತು.

ಇವನಾರೋ ಏನೋ? ಇವನಿಗಾಗಿ ತನ್ನ ಹೃದಯವೇಕೆ ಮಿಡಿಯುತ್ತದೆಯೋ? ಎಲ್ಲಿಯೋ ಹುಟ್ಟಿ, ಎಲ್ಲಿಯೋ ಬೆಳೆದು, ತನಗೇನೇನೂ ಅಲ್ಲದ ಈತನಿಗಾಗಿ ತಾನೇಕೆ ತವಕಿಸಬೇಕು?

ಗೋಪಿ ಪೆನ್ಸಿಲ್ಲಿನಿಂದ ಅವಳ ಕೈ ರೇಖೆಗಳನ್ನು ಬಿಡಿಸಿ ನೋಡುತ್ತಿದ್ದ. ಅವಳ ಬೆರಳುಗಳು, ಬಳೆಯಿಲ್ಲದ ದುಂಡುಗೈ, ಮೊಳಕೈನವರೆಗೆ ಬಂದಿದ್ದ ರವಿಕೆಯ ತೋಳು, ಹವಳದ ಸರ-

ಅಲ್ಲಿಂದ ಮುಖವನ್ನು ನೋಡುವ ಸಾಹಸ ಬರಲಿಲ್ಲ, ಗೋಪಿಗೆ. ಅವಳ ಮುಖ ನೋಡಿದರೆ ಅಲ್ಲಿಂದ ತನ್ನ ಕಣ್ಣುಗಳನ್ನು ಕೀಳಲಾಗುವುದಿಲ್ಲವೆಂಬುದು

ಅವನಿಗೆ ತಿಳಿದಿತ್ತು. ಅವನ ಕಣ್ಣುಗಳು ಧೀರನನ್ನು ಎದುರಿಸಲಾರದೆ ಓಡುವ ಹೇಡಿಯಂತೆ ಅವಳ ಮುಖದಿಂದ ಓಡುತ್ತಿದ್ದವು. ಅವನು ಅವಳ ಕಣ್ಣುಗಳನ್ನು ಪ್ರಯಾಸಪಟ್ಟು ತಪ್ಪಿಸುತ್ತಿದ್ದ.

ಅವನು ಅವಳ ಕೈಗಳಲ್ಲಿ ಅದೇನು ನೋಡುತ್ತಿದ್ದನೋ! ಇದುವರೆವಿಗೂ ಅವನು ಒಂದೂ ಮಾತನಾಡಿರಲಿಲ್ಲ. ಅವನ ಕಣ್ಣುಗಳು ಅಂಗೈ ಮೇಲೆ ನೆಟ್ಟಿದ್ದವು. ಅವಳ ಅಂಗೈ ನಾಚಿತು. ಅದರ ಮೇಲೆ ಬೆವರಿನ ಹನಿಗಳು ಮೂಡಿದವು. ಇನ್ನು ಆತ ಮುಖ ನೋಡಿದರೆ ಗತಿಯೇನು?

ವಿಜಯ ಕೈ ಹಿಂದಕ್ಕೆಳೆದುಕೊಂಡು, ಕರವಸ್ತ್ರದಿಂದ ಕೈಯನ್ನು ಒರೆಸಿ ಕೊಂಡು ಮತ್ತೆ ನೀಡಿದಳು.

"ಹೋಗಿ ನೀವೇನೂ ಹೇಳುವುದೇ ಇಲ್ಲ. ಸುಮ್ಮನೇ ಕೈ ನೋಡ್ತಾ ಇದೀರಿ. ಅಥವಾ ನನ್ನ ಕೈಯಲ್ಲಿ ಎಷ್ಟು ಮೂಳೆಗಳಿವೆ, ನರಗಳಿವೆ, ರಕ್ತನಾಳಗಳಿದೇಂತ ನೋಡ್ತಿದ್ದೀರೇನೋ?"

"ಹಾಗಲ್ಲ. ನಿಮಗೆ ಸರಿಯಾಗಿ ಹೇಳಬೇಕಾದರೆ ರೇಖೆಗಳನ್ನು ಚೆನ್ನಾಗಿ ಸ್ಟಡಿ ಮಾಡಬೇಕು."

"ನೀವೇನು ಹೇಳಿದರೂ ನಾನು ನಂಬಬೇಕು ಅಲ್ಲವೆ?" ವಿಜಯ ನಕ್ಕಳು.

"ಈ ಬೆರಳಿನ ಮೇಲೆ ಸಣ್ಣ ಗಾಯವಾಗಿದೆಯಲ್ಲಾ ಅದೇನು?"

"ಬೆಳಿಗ್ಗೆ ಆಲೂಗೆಡ್ಡೆ ಹೆಚ್ಚಲು ಹೋಗಿ ಕೈ ಕುಯಿದುಕೊಂಡೆ."

"ಹಾಗಾದರೆ ನೀವು ಒಳ್ಳೆಯ ಡಾಕ್ಟರಾಗುತ್ತೀರಿ. ಒಂದು ಆಲೂಗೆಡ್ಡೆ ಹೆಚ್ಚಲು ಬಾರದಿದ್ದವರು ಹೆಣ ಕುಯ್ಯುತ್ತಾರೆಯೇ? ನೀವು ಡಾಕ್ಟರಾಗಿ ಒಂದು ಆಪರೇಷನ್ ಮುಗಿಸಿದ ಮೇಲೆ ನಿಮ್ಮ ಕೈ ಕಾಲುಗಳಿಗೆ ಮದ್ದು ಹಚ್ಚುವವರನ್ನು ಬೇರೆ ತರಬೇಕು."

"ನೀವು ಕೈ ನೋಡಿ ಸಾಕು. ಗಾಯ ನೋಡಬೇಕಾಗಿಲ್ಲ."

"ನಾನು ಈ ದಿನ ನಿಮ್ಮ ಕೈ ನೋಡಲಾರೆ. ಅದಕ್ಕೆ ಕಾನ್‌ಸನ್‌ಟ್ರೇಟ್ ಮಾಡಬೇಕು. ಇನ್ನೊಂದು ದಿನ ನೋಡುತ್ತೇನೆ. ಕ್ಷಮಿಸಿ."

"ಹಾಗಾದರೆ ಸುಳ್ಳು ಹೇಳಿ ನನ್ನ ಯಾಕೆ ಇಲ್ಲಿಗೆ ಕರೆದುಕೊಂಡು ಬಂದಿರಿ?"

"ಅದರ ತಪ್ಪಿಗೆ ಜುಲ್ಮಾನೆ... ಇಗೋ ಈ 'ಟೀ' ತೆಗೆದುಕೊಳ್ಳಿ ಎನ್ನುತ್ತಾ ಗೋಪಿ ಕಪ್ಪನ್ನು ಎತ್ತಿ ವಿಜಯಳ ಕೈಗಿತ್ತ. ಅವಳು ಟೀ ಬಟ್ಟಲನ್ನು ತನ್ನ ತುಟಿಯ ಬಳಿಗೆ ತೆಗೆದುಕೊಂಡು ಹೋದಳು. ಅವನು ಸುಮ್ಮನೆ ಅವಳ ಕಡೆ ನೋಡುತ್ತಿದ್ದ. ವಿಜಯ ನಕ್ಕು ತನ್ನ ಬಟ್ಟಲನ್ನು ಕೆಳಗಿರಿಸಿ, ಅವನ ಮುಂದಿದ್ದ ಬಟ್ಟಲನ್ನು ಎತ್ತಿ,

"ನಾನು ಕುಡಿದರೆ ನೀವು ಕುಡಿದ ಹಾಗಾಯಿತೇ?ತಗೊಳ್ಳಿ" ಎಂದಳು. ತನ್ನ ನೋಟದ ಅಸಭ್ಯತನಕ್ಕಾಗಿ ಅವನು ನಾಚಿದ. ಅವಳು ಕೊಟ್ಟ ಬಟ್ಟಲನ್ನು ಕೈಲಿ ಹಿಡಿದ.

"ಇಬ್ಬರೂ ಒಟ್ಟಿಗೆ ಕುಡಿಯೋಣ. ಒನ್, ಟೂ, ತ್ರೀ, ಆಫ್" ವಿಜಯ ಬಟ್ಟಲನ್ನು ಬರಿದುಮಾಡಿ ಕೆಳಗಿರಿಸಿದಳು. ಗೋಪಿ ಕೋಟಿನ ತೋಳನ್ನು ಹಿಂದೆ ಮಾಡಿ ಗಂಟೆ ನೋಡಿ "ಹೋಗೋಣ" ಎಂದ.

ಇಬ್ಬರಿಗೂ ಅಲ್ಲಿಂದ ಹೊರಡುವ ಮನಸ್ಸಿರಲಿಲ್ಲ. ಅಲ್ಲಿಂದ ಕಾಲು ತೆಗೆಯಲು ಇಷ್ಟಪಡದೆ ನಿಂತಿದ್ದ ಗೋಪಿಯನ್ನು ನೋಡಿ ವಿಜಯ ಹೇಳಿದಳು.

"ಹೋಗೋಣ, ನೀವಿನ್ನು ಮನೆಗೆ ಹೋಗಿ ಊಟಮಾಡಿ ಬರಬೇಕೇನೋ?"

"ನೀವು?"

"ನಾನು ಈ ದಿನ ಹಾಸ್ಟೆಲಿನಲ್ಲಿ ಮೀರಳ ಅತಿಥಿ."

"ಹಾಸ್ಟೆಲಿನಲ್ಲಿ ಏನು ಈ ದಿನ?"

"ಏನೂ ಇಲ್ಲ. ನಾನೆ ನನ್ನನ್ನು ಮೀರಳ ಅತಿಥಿಯನ್ನಾಗಿ ಮಾಡಿ ಕೊಂಡಿದ್ದೇನೆ"

ವಿಜಯ ಹಾಸ್ಟೆಲಿನ ಕಡೆ ನಡೆದಳು. ಅವನು ಕಾಲೇಜಿನಲ್ಲಿರಿಸಿದ್ದ ಸೈಕಲನ್ನು ತೆಗೆದುಕೊಳ್ಳಲು ಹೋದ.

ವಿಜಯ ಮೀರಳ ರೂಮಿಗೆ ಬಂದಾಗ ಮೀರ ಇನ್ನೂ ಬಂದಿರಲಿಲ್ಲ.

ವಿಜಯ ಆಲಸ್ಯದಿಂದ ಮೀರಳ ಮಂಚದ ಮೇಲೆ ಉರುಳಿಕೊಂಡಳು. ಮೀರ ಒಳಗೆ ಬಂದು ವಿಜಯಳನ್ನು ನೋಡಿ,

"ಕೆಟ್ಟ ಹುಡುಗಿ, ನಿನಗಾಗಿ ನಾನು ಆಸ್ಪತ್ರೆಯೆಲ್ಲಾ ಅಲೆದಾಡಿ ಬಂದೆ. ಓಡಿಹೋಗುವುದಕ್ಕೆ ಅಷ್ಟೊಂದು ಆತುರವೇ?"

"ಸಾರಿ, ನಿನಗೆ ಹೇಳಿ ಬರಬೇಕಾಗಿತ್ತು."

"ನೀನು ಹೇಳದಿದ್ದರೂ ಗೋಪಿನಾಥನ ಗೆಳೆಯ ಕೇಶವನ್ ಹೇಳಿದರು...."

ವಿಜಯ ಮೀರಳ ಕಣ್ಣು ತಪ್ಪಿಸುತ್ತಾ ಕೇಳಿದಳು.

"ಏನೆಂದು ಹೇಳಿದರು?"

"ಗೋಪಿ, ವಿಜಯ ಮಾತನಾಡುತ್ತಿದ್ದರು. ಅವರಿಬ್ಬರೂ ಒಟ್ಟಿಗೆ ಹೋಗಿರ ಬಹುದು ಎಂದರು. ರಾಧೆ ಅವಳ ಕೃಷ್ಣನೊಡನೆ ಹೋದಮೇಲೆ ನಾನೇಕೆ ಯೋಚನೆ ಮಾಡಲೀಂತ ನೇರವಾಗಿ ಇಲ್ಲಿಗೆ ಬಂದೆ."

"ದಯವಿಟ್ಟು ನನ್ನ ಅಣಕಿಸಬೇಡ ಮೀರಾ."

ಮೀರ ಹಾಸಿಗೆಯ ಮೇಲೆ ಕುಳಿತು ವಿಜಯಳ ಕಿವಿಯಲ್ಲಿ ಪಿಸುಗುಟ್ಟಿದಳು. "ವಿಜಯಾ, ಅವನು ನಿನ್ನ ಕೆನ್ನೆಗೆ ಮುತ್ತಿಟ್ಟನಾ?" ಎಂದಳು.

ಮಲಗಿದ ವಿಜಯ ಹೆದರಿ, ಕುಳಿತು, "ಏನಂದೆ?" ಎಂದಳು.

ಮೀರ ಕನ್ನಡಿಯನ್ನು ತೆಗೆದು ವಿಜಯಳ ಕೈಗೆ ಕೊಟ್ಟಳು. ವಿಜಯ ಕನ್ನಡಿ ತೆಗೆದು ತನ್ನ ಮುಖಕ್ಕೆ ಹಿಡಿದುಕೊಂಡಳು. ಅವಳ ಒಂದೊಂದು ಕೆನ್ನೆಯಲ್ಲೂ ರೋಜಾ ಹೂವು ಅರಳಿತು. ಅವಳು ಕನ್ನಡಿಯನ್ನು ಹಿಂತಿರುಗಿಸಿದಳು.

"ನನ್ನ ಊಹೆ ಸರಿಯೇ?"

ವಿಜಯ ತಲೆ ಅಲುಗಿಸಿದಳು. "ಊಹೂಂ" ಎಂದಿತು ಬಾಯಿ.

"ಹಾಗಾದರೆ ಕೆನ್ನೆ ಯಾಕೆ ಇಷ್ಟು ಕೆಂಪಗಿದೆ?"

"...."

"ಕಣ್ಣಿನಿಂದ ಮುತ್ತಿಟ್ಟಿರಬಹುದಲ್ಲವೇ? ನೋಡಿದ ಮಾತ್ರಕ್ಕೆ ನೀನು ಹೀಗಾಗಬೇಕಾದರೆ ಇನ್ನು ಅವನು...."

"ಮೀರಾ ದಯವಿಟ್ಟು ಸುಮ್ಮನಾಗು."

"ಗೋಪಿನಾಥ್ ಜೊತೆ ಯಾಕೆ ಹೋದೆ?"

"'ಕೈ ನೋಡುತ್ತೇನೆ' ಎಂದರು. ಆದುದರಿಂದ ಅವರೊಡನೆ ಹೋದೆ."

"ಕೈ ನೋಡಿ ಏನು ಹೇಳಿದರು?"

"ಏನೂ ಹೇಳಲಿಲ್ಲ."

"ನೋಡಿದ್ದು ಕೈಯೋ ಅಥವಾ ಮುಖವೋ?"

"ಗೊತ್ತಿಲ್ಲ."

"ಏಳು ಊಟಮಾಡಿ ಬರೋಣ. ಇನ್ನು ಕಾಲೇಜಿಗೆ ಹೊತ್ತಾಗುತ್ತದೆ." ಎಂದು ಮೀರ ವಿಜಯಳನ್ನು ಎಬ್ಬಿಸಿದಳು.

ಆಗಸ್ಟ್ ಹದಿನೈದರ ದಿನಾಚರಣೆಯನ್ನು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಬಹಳ ಸಂಭ್ರಮದಿಂದ ಆಚರಿಸುತ್ತಿದ್ದರು. ಹಿಂದಿನ ವರ್ಷ ಶ್ರೀರಂಗಪಟ್ಟಣಕ್ಕೆ ಅವರ ತಂಡ ಹೋಗಿತ್ತು. ಈ ಬಾರಿ 'ಬೃಂದಾವನ'ಕ್ಕೆ ಹೋಗಲು ತೀರ್ಮಾನವಾಗಿತ್ತು. ಎರಡು ದಿನಗಳಿಗೆ ಮುಂಚೆಯೇ ಕೃಷ್ಣರಾಜಸಾಗರದ ಹೋಟಲಿಗೆ ರಾತ್ರಿಯ ಭೋಜನವನ್ನು ತಯಾರು ಮಾಡಬೇಕೆಂದು ಸೂಚನೆ ಕೊಟ್ಟಿದ್ದಲ್ಲದೇ, ಏನೇನು ತಯಾರು ಮಾಡಬೇಕೆಂಬ ವಿಷಯವನ್ನು ಸಹ ತಿಳಿಸಲಾಗಿತ್ತು.

ಮಧ್ಯಾಹ್ನ ಮೂರು ಗಂಟೆಗೆ ದೊಡ್ಡ ಐದು ಬಸ್ಸುಗಳು ಬಂದು ಕಾಲೇಜಿನ ಮುಂದೆ ನಿಂತವು. ಸೊಗಸಾಗಿ ಸಿಂಗರಿಸಿಕೊಂಡಿದ್ದ ಹುಡುಗ, ಹುಡುಗಿಯರ ತಂಡ

ಗಲಾಟೆ ಮಾಡುತ್ತಾ ಬಸ್ಸನ್ನೇರಲು ಮೊದಲು ಮಾಡಿತು. ಒಂದು ಬಸ್ಸಿನಲ್ಲಿ ತುಂಬಿಕೊಂಡಿದ್ದ ಹುಡುಗರು ಕೆಳಗೇ ನಿಂತಿದ್ದ ಗೋಪಿಗೆ.

"ಬಾರೋ, ಒಳಗೆ ಜಾಗವಿದೆ" ಎಂದು ಕೂಗಿದರು.

ಆದರೆ ಗೋಪಿ ಯಾರೊಡನೆಯೋ ಮಾತನಾಡುತ್ತಿರುವವನಂತೆ ನಟಿಸಿದ. ಷರಾಯಿ ಜೇಬಿನಲ್ಲಿ ಕೈಹಾಕಿ, ಕಣ್ಣಿಗೆ ಕಪ್ಪು ಕನ್ನಡಕ ಹಾಕಿಕೊಂಡಿದ್ದ ಗೋಪಿ ಯಾರನ್ನೋ ನಿರೀಕ್ಷಿಸುತ್ತಿರುವವನಂತೆ ನಿಂತಿದ್ದ.

ಹುಡುಗಿಯರ ಗುಂಪಿನಲ್ಲಿ ಅವನ ಕಣ್ಣುಗಳು ಚುರುಕಾಗಿ ಓಡಾಡಿದವು. ಆದರೆ ವಿಜಯಳಾಗಲೀ ಮೀರಳಾಗಲೀ ಅವನ ಕಣ್ಣಿಗೆ ಬೀಳಲಿಲ್ಲ. ಅವನಿಗೆ ಬೃಂದಾವನಕ್ಕೆ ಹೋಗುವ ಉತ್ಸಾಹವೆಲ್ಲಾ ಒಂದೇಸಲಕ್ಕೆ ಇಳಿದುಹೋಯಿತು.

ಅಷ್ಟರಲ್ಲಿ ಮೀರಳ ಎತ್ತರವಾದ ನಿಲುವು ಅವನ ಕಣ್ಣಿಗೆಬಿತ್ತು. 'ಮೀರ ಬಂದಿದ್ದ ಮೇಲೆ ವಿಜಯ ಬಂದೇ ಇರಬೇಕು' ಎಂದಿತು ಅವನ ಮನಸ್ಸು. ಮೀರ, ವಿಜಯ, ಯಶೋದ ಮಾತನಾಡುತ್ತಾ ಗೋಪಿ ಇದ್ದಲ್ಲಿಗೇ ಬಂದರು.

"ನಮಸ್ಕಾರ ನೀವು ಬರಲಾರಿರಿ ಎಂದು ಭಾವಿಸಿದ್ದೆ."

"ನಾನೇನೊ ಬರಬಾರದು ಎಂದೇ ಮಾಡಿದ್ದೆ. ಯಶೋದ, ವಿಜಯಳ ಹಿಂಸೆ ಸಹಿಸಲಾರದೇ ಬರಬೇಕಾಯಿತು. ನೀವು ಯಾಕೆ ಇನ್ನೂ ಕೆಳಗೇ ನಿಂತಿದ್ದೀರಿ? ಯಾವುದಾದರೂ ಬಸ್ಸು ಹತ್ತುವುದು ತಾನೇ?"

"ಹುಡುಗಿಯರು ಮೊದಲು ಹತ್ತಲಿ. ಆ ಮೇಲೆ ನಾವು."

ಮೀರ, ವಿಜಯ, ಯಶೋದ ಬಳಿಯೇ ನಿಂತಿದ್ದ ಅರ್ಧ ತುಂಬಿದ್ದ ಬಸ್ಸೊಂದನ್ನು ಹತ್ತಿ ಕುಳಿತರು.

"ನೀವು ಇಲ್ಲೇ ಬರಬಹುದು, ಸ್ಥಳವಿದೆ" ಮೀರ ಕರೆದಳು.

ಮೀರ ಅವನನ್ನು ಆಹ್ವಾನಿಸದಿದ್ದರೂ ಗೋಪಿ ಆ ಬಸ್ಸನ್ನೇ ಖಂಡಿತವಾಗಿ ಹತ್ತುತ್ತಿದ್ದ. ಮೀರ ಕರೆದುದೇ ಸಾಕೆಂದು ಅವನು ಬಸ್ಸು ಹತ್ತಿದ. ಗೋಪಿ ಬಸ್ಸು ಹತ್ತಿ ಅವರು ಕುಳಿತಿದ್ದ ಎದುರು ಸಾಲಿನಲ್ಲಿ ಕುಳಿತ. ಕೂಡಲೇ ವಿಜಯ ಕಿಟಕಿಯ ಕಡೆ ಮುಖ ತಿರುಗಿಸಿಕೊಂಡಳು.

ಬಿಳಿಯ ಅರ್ಧ ತೋಳಿನ ಶರಟು, ಬಿಳಿಯ ಗರಿಮುರಿಯಾದ ಶರಾಯಿ, ಕಾಲಿಗೆ ಕಪ್ಪು ಶೂಸುಗಳು ಅಷ್ಟೇ ಅವನ ಉಡಿಗೆ.

ಕಡುನೀಲಿವರ್ಣದ ಜಾರ್ಜೆಟ್ ಸೀರೆ, ತಿಳಿಹಳದಿ ಸ್ಯಾಟಿನ್ ಚೋಲಿ. ಹವಳದ ಸರ, ಉಂಗುರದ ಲೋಲಕ್ಕುಗಳು ಇಷ್ಟೇ ವಿಜಯಳ ಉಡುಪು. ಯಾವಾಗಲೂ ಬರಿದಾಗಿರುತ್ತಿದ್ದ ಅವಳ ಕೈಗಳಲ್ಲಿ ಒಂದು ನೀಲಿ ಬಳೆಯಿತ್ತು.

ಒಂದೊಂದು ಜಡೆಯಲ್ಲೂ ಒಂದೊಂದು ಹಳದಿ ಗುಲಾಬಿ.

ಮೀರ ಈರುಳ್ಳಿ ಬಣ್ಣದ ರೇಶಿಮೆಯ ಸೀರೆಯುಟ್ಟು, ದಟ್ಟ ಕೆಂಪಿನ ಮಕಮಲ್ ಚೋಲಿ ಹಾಕಿಕೊಂಡಿದ್ದಳು.

ಗೋಪಿ ಮತ್ತೆ ವಿಜಯಳ ಕಡೆ ನೋಡಿದ.

ಅವಳ ಕೊರಳು ಹಾಗೂ ಅವಳು ಹಾಕಿಕೊಂಡಿದ್ದ ಹವಳದ ಸರ. ಅವಳ ಕೊರಳನ್ನು ಮೆಲ್ಲನೆ ಮುಟ್ಟುವ ಆಸೆಯಾಯಿತು ಅವನಿಗೆ. ಗೋಪಿ ಕಷ್ಟಪಟ್ಟು ತನ್ನಾಸೆಯನ್ನು ನುಂಗಿಕೊಂಡ.

ವಿಜಯಳಿಗಿಂತಲೂ ಸುಂದರಿಯರಿದ್ದರು. ಆದರೂ ಅವನ ಕಣ್ಣು ಅವಳ ಕಡೆಗೇ ಓಡುತ್ತಿತ್ತು. ಅದರಲ್ಲಿ ಈ ದಿನವಂತೂ ಅವಳನ್ನು ಪಾಪದ ಕಣ್ಣಿನಿಂದ ನೋಡಬಾರದು.

ಗೋಪಿ ಕಣ್ಣಿಗೆ ಕಪ್ಪು ಕನ್ನಡಕ ಧರಿಸಿದ್ದರಿಂದ ನಿರ್ಭಯವಾಗಿ ವಿಜಯಳನ್ನು ನೋಡುತ್ತಿದ್ದ. ಅವಳು ಮಾತ್ರ ಅವನ ಕಡೆ ತಿರುಗಿರಲಿಲ್ಲ.

"ಲೋ ಗೋಪಿ, ಕ್ಯಾಮರಾ ತಂದಿದ್ದೀಯೇನೋ?" ಕೇಶವನ್ ಕೇಳಿದ.

"ತಂದಿದೀನೋ ಮಾರಾಯ. ನೀನೀಗ ಯಾರ ಫೋಟೋ ತೆಗೆಯಬೇಕು?"

"ಇಲ್ಲಿ ಯಾರದ್ದೂ ತೆಗೆಯಬೇಕಾಗಿಲ್ಲ."

"ನೀವು ಫೋಟೋಗ್ರಾಫರ್ ಬೇರೆ ಏನು?" ಮೀರ ಕೇಳಿದಳು.

"ಫೋಟೋಗ್ರಫಿ ನನ್ನ ಹಾಬಿ. ಆದರೆ ಅದು ಬಹಳ ಖರ್ಚಿನ ಹಾಬಿ. ಈಚೀಚೆಗೆ ಶುರುಮಾಡಿದ್ದೇನೆ."

"ನಮ್ಮ ಯಶೋದೆಗೂ ಈ ಹುಚ್ಚಿದೆ. ಇಲಸ್ಟ್ರೇಟೆಡ್ ವೀಕ್ಲಿಗೆ ಪ್ರತಿ ತಿಂಗಳೂ ಫೋಟೋಗಳನ್ನು ಕಳಿಸುತ್ತಾಳೆ. ಅವು ವಾಪಸ್ಸು ಅವಳಿಗೇ ಬರುತ್ತವೆ."

"ನನ್ನ ಮಾನ ತೆಗೆಯಬೇಡ ಸುಮ್ಮನಿರೆ" ಎಂದಳು ಯಶೋದ.

"ಈ ಮಗುನೇಕೆ ಮೌನವಾಗಿ ಕುಳಿತುಕೊಂಡಿದೆ!" ಮೀರ ವಿಜಯಳ ಕಡೆ ತಿರುಗಿ ಮಾತನಾಡಿದಳು.

ಗೋಪಿಯೊಡನೆ ಹೋಟೆಲಿಗೆ ಹೋಗಿದ್ದ ವಿಜಯ ಈಗ ಇತರರ ಎದುರಿಗೆ ಒಂದೂ ಮಾತನ್ನಾಡಿರಲಿಲ್ಲ.

"ನೀವಾಡುವುದನ್ನು ನಾನು ಕೇಳುತ್ತೇನೆ" ವಿಜಯ ಹೇಳಿದಳು.

ಬಸ್ಸು ಹೊರಟಿತು. ಗಾಳಿ ಭರ‍್ರೆಂದು ಬೀಸಿತು. ಹುಡುಗಿಯರು ಮುಡಿದಿದ್ದ ಹೂವಿನ ಪರಿಮಳ, ಹುಡುಗರು ಹಚ್ಚಿದ್ದ ಸೆಂಟುಹೊತ್ತ ಗಾಳಿ ಬಸ್ಸಿನ ತುಂಬಾ ಅಲೆದಾಡಿತು. ಹುಡುಗರು ಸಿನಿಮಾ ಹಾಡುಗಳನ್ನು ಹಾಡಿದರು. ಅವರಲ್ಲಿ

ಒಬ್ಬನೆಂದ.

"ಎಲ್ಲರೂ ಹುಚ್ಚುಹುಚ್ಚಾಗಿ ಕೂಗಾಡುವುದು ಬೇಡ. ಚೆನ್ನಾಗಿ ಹಾಡುವವರು ಒಬ್ಬರು ಹಾಡಲಿ. ಉಳಿದವರು ಕೇಳೋಣ."

"ನರಹರೀ, ನೀನು ಹೇಳೋ."

ನರಹರಿ ಗಂಟಲು ಸರಿಮಾಡಿಕೊಂಡು ಕೇಳಿದ.

"ಸಿನಿಮಾ ಹಾಡು ಹೇಳಲೋ, ಕನ್ನಡ ಗೀತೆಗಳನ್ನು ಹೇಳಲೋ?"

"ಎರಡೂ ಹೇಳು."

"ಯೇ ರಾತ್ ಯೇ ಚಾಂದನೀ ಫಿರ್ ಕಾಹಾಂ...." ನರಹರಿ ಹಾಡಲು ಮೊದಲು ಮಾಡಿದ. ಹಾಡಿನ ಅರ್ಥ ತಿಳಿದ ವಿಜಯ ನಾಚಿಕೆಯಿಂದ ಕೆಂಪಾದಳು. ಆ ಹಾಡು ಮುಗಿದೊಡನೆ ನರಹರಿ ಎರಡು ಕನ್ನಡ ಗೀತೆಗಳನ್ನು ಹಾಡಿದ. ಅವನ ಹಾಡು ಮುಗಿದೊಡನೆ ಗೋಪಿ ಕೇಳಿದ,

"ನೀವು ಹಾಡಿ, ಮಿಸ್ ವಿಜಯ ಪರಾಂಜಪೆ."

"ಈ ಬಸ್ಸಿನ ಗದ್ದಲವನ್ನು ಮೆಟ್ಟಿ ನಾನು ಹಾಡಲಾರೆ. ಕೆ.ಆರ್.ಎಸ್.ನಲ್ಲಿ ಬೇಕಾದರೆ ಹಾಡುತ್ತೇನೆ."

"ಥ್ಯಾಂಕ್ಸ್, ನೀವು ಮೀರಾ?"

"ಕ್ಷಮಿಸಿ. ನನಗೆ ಹಾಡು ಬರುವುದಿಲ್ಲ."

ಬಸ್ಸು ಕೃಷ್ಣರಾಜಸಾಗರ ಸೇರಿದಾಗ ಸುಮಾರು ಐದು ಗಂಟೆಯಾಗಿತ್ತು. ರಾತ್ರಿ ಎಂಟು ಗಂಟೆಗೆ ಊಟವಿತ್ತು. ಅಲ್ಲಿಯವರೆಗೆ ಹುಡುಗ, ಹುಡುಗಿಯರು ಮನಬಂದಂತೆ ಅಲೆಯತೊಡಗಿದರು. ಗೋಪಿ, ಕೇಶವನ್ ಮೀರಳ ಗುಂಪಿಗೆ ಸೇರಿಕೊಂಡರು. ವಿಜಯಳೇನೋ ಮೂಕಿಯಾಗಿದ್ದಳು. ಆದರೆ ಕಣ್ಣಿಗಾದರೂ ಹಬ್ಬಮಾಡಿಕೊಳ್ಳಲು ಅಡ್ಡಿ ಏನು? ಹೂವಿನ ಪೊದೆಯ ಬಳಿ ಗೋಪಿ ಎಲ್ಲರನ್ನೂ ನಿಲ್ಲಿಸಿ ಫೋಟೋ ತೆಗೆದ. ಅವನು ತೆಗೆದಾದ ಕೂಡಲೇ ಯಶೋದ ಬಂದು.

"ಈಗ ನೀವು ನಿಂತುಕೊಳ್ಳಿ. ನೀವು ಗುಂಪಿನಲ್ಲಿರುವ ಫೋಟೋನ ನಾನು ತೆಗೆಯುತ್ತೇನೆ" ಎಂದಳು.

"ಸಾಕು ಬಿಡು ಯಶೋದಾ" ವಿಜಯ ಹೇಳಿದಳು.

"ಶ್..... ಸುಮ್ಮನಿರು."

ಗೋಪಿ ಹೋಗಿ ಮೀರ, ವಿಜಯಳ ನಡುವೆ ನಿಂತ.

"ರೆಡೀ .... ಥ್ಯಾಂಕ್ಸ್" ಯಶೋಧ ಕ್ಯಾಮರಾ ಅವನ ಕೈಗಿತ್ತಳು.

ಚಿಲುವೆಯ ಬಳಿ ವಿಜಯ ಎಲ್ಲರಿಂದಲೂ ಸ್ವಲ್ಪ ದೂರ ನಿಂತಿದ್ದಾಗ

ಗೋಪಿ ಹೂವಿನ ಪೊದೆಯ ಫೋಟೋ ತೆಗೆದುಕೊಳ್ಳುವವನಂತೆ ನಟನೆಮಾಡಿ ಕ್ಯಾಮರಾನ ವಿಜಯಳ ಮೇಲೆ ಫೋಕಸ್ ಮಾಡಿ 'ಕ್ಲಿಕ್' ಎನಿಸಿದ.

ವಿಜಯಳಿಗೆ ಅನುಮಾನವಾಯಿತು. ಅವಳು ಸಂದೇಹದಿಂದ ಗೋಪಿಯ ಕಡೆ ನೋಡಿದಾಗ ತುಂಟನಗೆ ಅವನ ಕಣ್ಣುಗಳಲ್ಲಿತ್ತು. ವಿಜಯ ಗಡುಸಾಗಿ ಹೇಳಿದಳು,

"ನಿಮ್ಮ ತುಂಟತನ ನನಗೆ ಬೇಕಾಗಿಲ್ಲ."

ಗೋಪಿಯ ತುಂಟನಗೆ ಮಾಯವಾಯಿತು. ಅವನು ಅವಳ ಗಡಸು ನೋಡಿ ಗಾಬರಿಯಿಂದ,

"ಕ್ಷಮಿಸಿ. ನೀವಿಷ್ಟು ಸಿಟ್ಟುಗೊಳ್ತೀರಂತ ನಾನು ತಿಳಿದಿರಲಿಲ್ಲ" ಎಂದ.

"ನೀವು ತೆಗೆದ ~~ಈ~~ ಫೋಟೋನ ನನಗೇ ಕೊಡುವ ಹಾಗಿದ್ದರೆ ಕ್ಷಮಿಸುತ್ತೇನೆ."

"ಆಗಲಿ" ಎನ್ನುತ್ತಾ ಅವನು ಒಂಟಿಯಾಗಿ ನಿಂತಿದ್ದ ವಿಜಯಳ ಬಳಿಗೆ ಹೋಗಿ ತಗ್ಗಿದ ದನಿಯಲ್ಲಿ,

"ನಾವಿಬ್ಬರೇ ಸುತ್ತಾಡಿಬರೋಣ ಬರ್ತೀರಾ?" ಎಂದ.

"ನಾನು ಬರೋದಿಲ್ಲ."

"ಸ್ವಲ್ಪ ಹೊತ್ತು ತಿರುಗಾಡಿ ಬರೋಣ. ಅವರೆಲ್ಲ ಹಿಂತಿರುಗಿ ಸಹ ನೋಡದೆ ಮುಂದೆ ಹೋಗುತ್ತಿದ್ದಾರೆ."

"ಊಹೂಂ. ನನಗೆ ಭಯ."

"ನನ್ನನ್ನು ಕಂಡರೆ ನಿಮಗೆ ಭಯವೇ? ನಾನೂ ನಿಮಗೇನು ಮಾಡುವುದಿಲ್ಲ."

"ನಿಮ್ಮನ್ನು ಕಂಡರೆ ಭಯವಿಲ್ಲ. ಮೀರಳನ್ನು ಕಂಡರೆ ಭಯವಿದೆ."

"ಯಾಕೆ ಅವರೇನು ಮಾಡ್ತಾರೆ?"

"ಹಾಸ್ಯ ಮಾಡ್ತಾಳೆ. ಆ ದಿನ ನಿಮ್ಮೊಡನೆ ಬಂದಿದ್ದಾಗ ತುಂಬಾ ಕೀಟಲೆ ಮಾಡಿಬಿಟ್ಟಳು. ಅವಳ ಬಾಯಿಗೆ ನಾನು ಹೆದರುತ್ತೇನೆ."

ವಿಜಯ ಗೋಪಿಯೊಡನೆ ಹೆಜ್ಜೆ ಹಾಕಿದಳು.

"ಏನೆಂದು ಕೀಟಲೆ ಮಾಡಿದರು?"

"ಏನೇನೋ ಹುಚ್ಚುಪ್ರಶ್ನೆಗಳನ್ನು ಕೇಳುತ್ತಾಳೆ."

"ಏನೆಂದು ನಾನು ಕೇಳಬಹುದೇ?"

ಮೀರ ತನ್ನನ್ನು ಕೇಳಿದುದನ್ನು ತಾನು ಹೇಗೆ ಹೇಳುವುದು? ಅವಳು ಕೇಳಿದಳು-'ಅವನು ನಿನ್ನ ಕೆನ್ನೆಗೆ ಮುತ್ತಿಟ್ಟನೇ?' ಎಂದು ಇದೇ ಮಾತನ್ನು ಹೇಗೆ

ಹೇಳುವುದು?

"ಓ ಬಿಡಿ. ಅವಳೊಬ್ಬಳು ಹುಚ್ಚುಹುಡುಗಿ."

"ಊಹೂಂ. ಅವರೇನೆಂದರೆಂಬುದನ್ನು ನೀವು ಹೇಳಲೇಬೇಕು."

"ನನ್ನಿಂದಂತೂ ಸಾಧ್ಯವಿಲ್ಲ."

"ನಾನೇ ಊಹಿಸಲಾ? ನೀವೇನು ಮಾತನಾಡಿದಿರಿ ಎಂದು ಕೇಳಿರಬಹುದು."

"ಅಲ್ಲ"

"ಅಷ್ಟೊಂದು ರಹಸ್ಯವೇನಿದೆ ಎಂದಿರಬಹುದು."

"ಅಲ್ಲ."

"ಅವರೇನೆಂದರೆಂಬುದನ್ನು ನನಗೂ ಹೇಳುವುದಿಲ್ಲವೇ?"

"ಹೇಳಲೇಬೇಕೆ?"

"ಹೂಂ."

"ನಾನು ಹೇಳಲಾರೆ. ಬರೆದು ತೋರಿಸುತ್ತೇನೆ."

"ಕಾಗದ ಪೆನ್ನು ತಂದಿಲ್ಲವಲ್ಲಾ."

"ಇಲ್ಲೇ ನೆಲದ ಮೇಲೆ ಬೆರಳಿನಿಂದ ಬರೆಯುತ್ತೇನೆ. ನಾನು ಪೂರ್ತಿ ಬರೆದು, ಈ ಕಡೆ ತಿರುಗಬಹುದು ಎಂದು ಹೇಳುವವರೆಗೆ ನೀವು ಬೆನ್ನು ಮಾಡಿ ಕೊಂಡು ನಿಂತಿರಬೇಕು. ನಾನು ಬರೆದಿದ್ದನ್ನು ಓದಿಯಾದ ಕೂಡಲೇ ಅಳಿಸಿ ಬಿಡಬೇಕು. ಇದಕ್ಕೊಪ್ಪುವ ಹಾಗಿದ್ದರೆ ಬರೆಯುತ್ತೇನೆ."

"ಆಗಲಿ"

"ಆ ಕಡೆ ತಿರುಗಿಕೊಳ್ಳಿ."

ಗೋಪಿ ಬೇರೆ ಕಡೆ ತಿರುಗಿಕೊಂಡ. ವಿಜಯ ಮೊಳಕಾಲೂರಿ ಕುಳಿತು, ನೆಲದ ಮೇಲೆ ಸಣ್ಣಗೆ ಬರೆದು,

"ಇನ್ನು ತಿರುಗಬಹುದು" ಎಂದು ಹೇಳಿದನಳೇ ಅಲ್ಲಿಂದ ಓಡಿಹೋದಳು. ಗೋಪಿ ಓಡಿಹೋದ ವಿಜಯಳನ್ನು ಮೊದಲು ನೋಡಿದ. ಅನಂತರ ಅರ್ಧಬಾಗಿ, ನೆಲದ ಮೇಲೆ ಅವಳು ಇಂಗ್ಲಿಷಿನಲ್ಲಿ ಬರೆದುದನ್ನು ಓದಿಕೊಂಡ.

"ಅವನು ನಿನ್ನ ಕೆನ್ನೆಗೆ ಮುತ್ತಿಟ್ಟನಾ? ನಿನ್ನ ಕೆನ್ನೆಯೇಕೆ ಇಷ್ಟು ಕೆಂಪಗಿದೆ?"

ವಿಜಯ ಅಲ್ಲಿಯೇ ನಿಂತಿದ್ದರೆ ಗೋಪಿ ನಿಜವಾಗಿಯೂ ಅವಳ ಕೆನ್ನೆಗೆ ಮುತ್ತಿಡುತ್ತಿದ್ದನೋ ಏನೋ?

ಹಿಂದಿನಿಂದ ಓಡಿ ಬಂದು ಮತ್ತೆ ತಮ್ಮ ಗುಂಪಿಗೆ ಸೇರಿಕೊಂಡ ವಿಜಯಳನ್ನು ನೋಡಿ ಮೀರ ನಕ್ಕು ತನ್ನ ಕೆನ್ನೆ ಮುಟ್ಟಿ ತೋರಿಸಿ,

"ಹೌದಾ?" ಎಂದಳು.

"ಇಲ್ಲ. ಇಲ್ಲ. ಇಲ್ಲ."

"ಹಾಗಾದರೆ... ಯಾಕೆ... ಈ ಬಣ್ಣ?"

"ಗೊತ್ತಿಲ್ಲ."

"ಕೇಶವನ್ ವಿಜಯಳನ್ನು ಕೇಳಿದ, "ಗೋಪಿ ಎಲ್ಲಿ?"

"ನನಗೆ ಗೊತ್ತಿಲ್ಲ. ನಾನು ಅವರನ್ನು ನೋಡಲಿಲ್ಲ."

"ನಿಮ್ಮ ಜೊತೆ ಚಿಲುಮೆಯ ಬಳಿ ನಿಂತಿದ್ದರಲ್ಲಾ."

"ಆಗ ನಿಂತಿದ್ದರು. ಆಮೇಲೆ ಎಲ್ಲಿ ಹೋದರೋ ನನಗೆ ಗೊತ್ತಿಲ್ಲ. ಬಾ ಮೀರ, ನಾವು ಹೋಗೋಣ."

ಕೇಶವನ್ ಗೋಪಿಗಾಗಿ ಕಾಯದೆ ಮತ್ತೆ ಅವರೊಡನೆ ಹೊರಟ. ವಿಜಯ ಮೀರಳ ಕೈಯನ್ನು ಬಿಡಲಿಲ್ಲ.

"ನನ್ನ ಕೈ ಯಾಕೆ ಹಿಡಿದುಕೊಂಡಿದೀಯ? ಬಿಡು" ಎಂದಳು ಮೀರ.

"ಊಹೂ. ನಾನು ಬಿಡೋದಿಲ್ಲ."

"ಯಾರಾದರೂ ಬಂದು ಎಳೆದುಕೊಂಡು ಹೋಗ್ತಾರೇಂತ ಹೆದರಿಕೆ ಯೇನೋ?"

"ನೀನೇನು ಬೇಕಾದರೂ ಹೇಳಿಕೋ. ನಾನಂತೂ ನಿನ್ನ ಕೈಬಿಡುವುದಿಲ್ಲ."

"ಅದಕ್ಕೇ ಮಕ್ಕಳನ್ನು ಕರೆದುಕೊಂಡು ಎಲ್ಲೂ ಹೋಗಬಾರದೂಂತ ಹಿರಿಯರು ಹೇಳುತ್ತಾರೆ" ವಿಜಯಳನ್ನು ಅಣಕಿಸಿದಳು.

"ನಾನು ಮಗುವಲ್ಲ."

ಎಂಟು ಗಂಟೆಗೆ ಸರಿಯಾಗಿ ಊಟ ಪ್ರಾರಂಭವಾಯಿತು. ಊಟದ ಸಮಯದಲ್ಲಿ ಗೋಪಿ ಅವರ ಗುಂಪಿಗೇ ಬಂದು ಸೇರಿಕೊಂಡ.

ಕೇಶವನ್ ಕೇಳಿದ "ಎಲ್ಲಿ ಹೋಗಿದ್ದೆಯೋ ಮಾರಾಯ?"

"ಎಲ್ಲೂ ಇಲ್ಲ."

"ಕಟ್ಟೆ ಏನಾರ ಹಾರಿದೆಯೇನೋಂತ ಮಾಡಿದ್ದೆ ನಾನು."

"ಸಂತೋಷ ಸಮಯದಲ್ಲಿ ಯಾಕೆ ಕೆಟ್ಟ ಮಾತಾಡ್ತೀರಿ?" ವಿಜಯ ಕೆರಳಿ ಕೇಳಿದಳು.

ಮೀರ, ಕೇಶವನ್ ಅಚ್ಚರಿಯಿಂದ ವಿಜಯಳನ್ನು ನೋಡಿದರು. ಅವನೇನೋ ತಮಾಷೆಯಾಗಿ ಕೇಳಿದರೆ ಅವಳೇಕೆ ಕೋಪಿಸಿಕೊಳ್ಳಬೇಕು?

ಗೋಪಿ ವಿಜಯಳ ಪಕ್ಕದಲ್ಲೇ ಊಟಕ್ಕೆ ಕುಳಿತಿದ್ದ. ಅವನು ಅವಳ

ಪಕ್ಕದಲ್ಲಿ ಕುಳಿತೊಡನೆ ಮೀರ ವಿಜಯಳ ಕಿವಿಯಲ್ಲಿ ಪಿಸುಗುಟ್ಟಿದಳು.

"ಎಚ್ಚರಿಕೆಯಾಗಿರು. ನಿನ್ನ ಕೆನ್ನೆ ಅವನಿಗೆ ಬಹಳ ಹತ್ತಿರದಲ್ಲಿದೆ."

ಗೋಪಿ ಊಟಮಾಡುತ್ತಾ ಆಗಾಗ್ಗೆ ಅವಳ ಕೆನ್ನೆಯ ಕಡೆ ಕಣ್ಣು ಹೊರಳಿಸುತ್ತಿದ್ದ. ಅವನ ತುಟಿಗಳು ಕೆನ್ನೆಯಿಂದ ದೂರವಾಗಿದ್ದರೂ ಕೆನ್ನೆ ಕೆಂಪಾಗಿತ್ತು. ಅವಳ ಬಲಗೈ ಅವನ ಎಡಗೈನ ಬಳಿಯಿದ್ದರೂ, ಗೋಪಿ ಏನೂ ಮಾಡುವ ಹಾಗಿರಲಿಲ್ಲ.

ಮೀರಳಂತೂ ಅವರಿಬ್ಬರನ್ನು ಪರೀಕ್ಷೆಮಾಡುವವಳಂತೆ ನೋಡುತ್ತಿದ್ದಳು.

"ಸದ್ಯ, ವಿಜಯಾನ ಸುರಕ್ಷಿತವಾಗಿ ಅವಳ ಮನೆ ಸೇರಿಸಿಬಿಟ್ಟರೆ ಸಾಕು" ಎಂದಳು ಮೀರಾ.

"ಯಾಕೆ?"

" 'ಬರೋದು ಹೊತ್ತಾಗಬಹುದು. ನಾವು ವಿಜಯಾನ ಕಳಿಸೋಲ್ಲ' ಎಂದರು ಅವರ ತಾಯಿ. ನಾನೇ ಅವರಿಗೆ ಧೈರ್ಯ ಹೇಳಿ ಕರೆದುಕೊಂಡು ಬಂದೆ."

"ನಾನು ಬೇಕಾದರೆ ಅವರನ್ನು ಮನೆಗೆ ಬಿಟ್ಟುಹೋಗುತ್ತೇನೆ" ಗೋಪಿ ಉದಾರವಾಗಿ ಸಹಾಯಮಾಡಲು ಮುಂದೆ ಬಂದ.

ವಿದ್ಯಾರ್ಥಿಗಳು ಕೆ.ಆರ್.ಎಸ್. ಬಿಟ್ಟಾಗ ರಾತ್ರಿ ಹತ್ತು ಗಂಟೆಯಾಗಿತ್ತು. ಹಾಸ್ಟೆಲಿನ ಬಳಿ ಎಲ್ಲರೂ ಬೇರೆಯಾದರು.

"ಮೀರ ನಾನಿವತ್ತು ಇಲ್ಲಿಯೇ ಮಲಗುತ್ತೇನೆ. ಮನೆಗೆ ಹೋಗೋಲ್ಲ" ಎಂದಳು ವಿಜಯ.

"ಗೋಪಿನಾಥ್ ಕರ್ಕೊಂಡು ಹೋಗುತ್ತಾರೆ, ಹೋಗು."

"ಊಹೂಂ."

"ಅವರಲ್ಲಿ ನಂಬಿಕೆ ಇಲ್ಲವೇ?"

"ಆತ ಚಿನ್ನದಂತ ಹುಡುಗ."

"ಮತ್ತೆ ಹೋಗಲು ಅಡ್ಡಿಯೇನು? ಆದರೆ....ಕೆನ್ನೆ....ಜೋಪಾನ."

ವಿಜಯ ಮೀರಳ ಬಳಿಗೆ ಬಂದು ಕಿವಿಯಲ್ಲಿ ಪಿಸುಗುಟ್ಟಿದಳು.

"ಆದರೆ ನಾನೇ ಎಲ್ಲಿ ಮೈಮರೆಯುತ್ತೀನೋ ಎಂಬ ಭಯ. ಮತ್ತು ಅಷ್ಟು ಸಮೀಪದಲ್ಲಿ ಊಟಕ್ಕೆ ಕುಳಿತಿದ್ದರೂ ಸಹ ಅಪ್ಪಿತಪ್ಪಿಯಾದರೂ ಅವರ ಕೈ ನನಗೆ ತಗಲಲಿಲ್ಲ. ನನ್ನ ಒಪ್ಪಿಗೆಯಿಲ್ಲದೆ ಅವರೇನೂ ಮಾಡುವುದಿಲ್ಲ. ಆದರೆ ನನ್ನಲ್ಲೇ ನನಗೆ ನಂಬಿಕೆಯಿಲ್ಲ. ಈಗ ನಾನೇನು ಮಾಡಲಿ?"

"ಅಷ್ಟು ಹೆದರಿಕೆ ಇದ್ದರೆ ಇಲ್ಲೇ ಮಲಗಿಕೋ."

"ಬೇಡ. ಅವರು ಹಾಸ್ಟೆಲಿನ ಬಾಗಿಲಿನಲ್ಲಿ ಕಾಯುತ್ತಿದ್ದಾರೆ. ಬರ್ತೀನಿ" ಎಂದವಳೇ ವಿಜಯ ಕಾಂಪೌಂಡಿನಿಂದ ಹೊರಗೆ ಓಡಿದಳು.

ಗೋಪಿ ಅವಳಿಗಾಗಿ ಕಾಯುತ್ತಿದ್ದ.

ಬೀದಿ ನಿರ್ಜನವಾಗಿತ್ತು. ಇಬ್ಬರೂ ಮಾತಿಲ್ಲದೆ ಮೌನವಾಗಿ ನಡೆದರು.

"ಮೀರಾ, ಈಗ ಏನೂ ಹಾಸ್ಯಮಾಡಲಿಲ್ಲವಾ?"

"ಇಲ್ಲ."

"ಅವರು ಹೀಗೆಲ್ಲಾ ಯೋಚಿಸುತ್ತಾರೇಂತ ನಾನು ತಿಳಿದಿರಲಿಲ್ಲ...."

"ಪಾಪ! ಒಳ್ಳೆಯ ಹುಡುಗಿ. ನನಗೆ ಸ್ವಂತ ಅಕ್ಕನಿಗಿಂತಲೂ ಹೆಚ್ಚಾಗಿದ್ದಾಳೆ. ನನ್ನ ಕಂಡರೆ ಅವಳಿಗೆ ತುಂಬಾ ಪ್ರೀತಿ."

"ನಿಮ್ಮನ್ನು ಯಾರು ದ್ವೇಷಿಸುತ್ತಾರೆ? ಪುಟ್ಟ ಹುಡುಗಿಯರನ್ನು ಯಾರೂ ದ್ವೇಷಿಸುವುದಿಲ್ಲ."

"ನೋಡಿ ಅಲ್ಲಿ ನೆರಳು... ಯಾರ ನೆರಳು? ನನಗೆ ಹೆದರಿಕೆ..."

"ನಾನು ನಿಮ್ಮೊಡನಿರುವಾಗಲೂ ಹೆದರಿಕೆಯೇ? ಬೇಕಾದರೆ ನನ್ನ ಕೈ ಹಿಡಿದುಕೊಳ್ಳಿ."

"ವಿಜಯ ಅವನ ಕೈ ಕಡೆ ನೋಡಿದಳು. ಆ ಕೈ ಹಿಡಿದರೆ ತನ್ನ ಹೃದಯ ಎಷ್ಟು ಹಗುರವಾಗಬಹುದೋ?

"ಬೇಡ, ಬೇಡ... ಅಂತಹ ಹೆದರಿಕೆ ಏನಿಲ್ಲ."

ಗೋಪಿ ತನ್ನ ಕೈಯನ್ನು ಹಿಂದಕ್ಕೆ ತೆಗೆದುಕೊಂಡ.

"ನೀವು ಅಲ್ಲಿ ನೆಲದ ಮೇಲೆ ಬರೆದೊಡನೆ ಹಾಗೇಕೆ ಓಡಿಹೋದಿರಿ?" ವಿಜಯ ಮಾತನಾಡಲಿಲ್ಲ.

ಬೀದಿಯ ದೀಪವೊಂದರ ಕೆಳಗೆ ಬರುತ್ತಲೇ ಗೋಪಿ ತಟ್ಟನೆ ನಿಂತು, "ಈ ಬೆಳಕಿನಲ್ಲಿ ನಾನು ನಿಮ್ಮನ್ನು ನೋಡಬೇಕು. ತಲೆ ಎತ್ತಿ" ಎಂದ.

ತಲೆ ತಗ್ಗಿಸಿ ನಿಂತಿದ್ದ ವಿಜಯಳ ಗಲ್ಲ ಹಿಡಿದು ಹೋಗಿ ಅವಳ ಮುಖವನ್ನು ಮೇಲಕ್ಕೆತ್ತಿದ.

ಅವಳ ಸುಳಿಗಲ್ಲ-ಪ್ರಪಂಚದಲ್ಲೇ ಅದಕ್ಕಿಂತಲೂ ಸುಂದರವಾದ ಗಲ್ಲ ಬೇರೊಂದು ಇರಲಾರದು.

"ವಿಜಯ್ ಡಾರ್ಲಿಂಗ್, ನಿನ್ನ ಕೆನ್ನೆಯ ಮೇಲಿರುವ ಕಂಬನಿಯನ್ನು ನನ್ನ ತುಟಿಗಳಿಂದ ಒರೆಸಬೇಕು."

"......"

"ನಿನ್ನ ತುಟಿಯ ಕಂಪನ ನಿಲ್ಲಿಸಲೇ?"

ವಿಜಯ ತಲೆ ಅಲುಗಿಸಿ, ತನ್ನ ಗಲ್ಲವನ್ನು ಹಿಡಿದಿದ್ದ ಅವನ ಕೈ ಮೇಲೆ ತನ್ನ ಕೈಯಿರಿಸಿ, ಅವನ ಕೈಯಿಂದ ತನ್ನ ಗಲ್ಲ ಬಿಡಿಸಿಕೊಂಡಳು.

"ನಿನ್ನ ಕೆನ್ನೆ ಕೆಂಪಾಗುವುದನ್ನು ನಾನು ನೋಡಬೇಕು."

"ನೋಡಲೇಬೇಕೆ?"

"ಬೇಡ. ಬೇಡ. ನಾನೂ ಮೀರಾಗೆ ಮಾತುಕೊಟ್ಟಿದ್ದೇನೆ."

"ಏನೆಂದು?"

"ನನ್ನ ಕೆನ್ನೆಯನ್ನು ಜೋಪಾನವಾಗಿ ನೋಡಿಕೊಳ್ಳುತ್ತೇನೆಂದು ಹೇಳಿದ್ದೇನೆ."

"ವಿಜಯ್..."

"ಬೇಡ. ನನ್ನನ್ನು ಮರುಳುಗೊಳಿಸಬೇಡಿ. ನನ್ನ ಮನಸ್ಸಿನ ಮೇಲೆ ನಾನು ಈ ದಿನ ವಿಜಯ ಸಾಧಿಸಲೇಬೇಕು."

"ವಿಜಯಾ..."

"ನಿಮ್ಮ ತೋಳಿನ ಕೈದಿಯಾಗಲು ನಾನೆಷ್ಟು ಹಂಬಲಿಸುತ್ತಿದ್ದೇನೆ ಗೊತ್ತೆ?"

"ಎಷ್ಟು?"

"ಈ ಆಕಾಶದಷ್ಟು; ನಕ್ಷತ್ರಗಳಷ್ಟು, ಈ ಕತ್ತಲಿನಷ್ಟು."

"ಆದರೂ ನನ್ನ ತೋಳುಗಳು ಮಾತ್ರ ಪರದೇಶಿಗಳಾಗಿವೆ."

"ಗೋಪಿ, ಗೋಪಿ, ನನ್ನನ್ನು ಇನ್ನು ಪರೀಕ್ಷಿಸಬೇಡಿ. ನೀನು ಇನ್ನೂ ನನ್ನನ್ನು ಪರೀಕ್ಷಿಸಿದರೆ ನಾನು ಖಂಡಿತ ಸೋಲುತ್ತೇನೆ."

"ಈ ಸೋಲಿನಲ್ಲೂ ಗೆಲುವಿದೆ. ಅಲ್ಲವೇ?"

"ಮನಸ್ಸಿನ ಸೋಲು. ಪ್ರೇಮದ ಗೆಲವು."

"ಆದರೂ ನೀನೇ ಇಂದು ಗೆದ್ದಿರುವೆ."

"ನಾನು ಗೆಲ್ಲಬೇಕೆಂದು ನಿರ್ಧರಿಸಿಯೇ ನಿನ್ನೊಡನೆ ಹೊರಟೆ. ಮೀರಾಗೆ ಹೇಳಿದ್ದೆ 'ನಾನು ಅಷ್ಟೊಂದು ದುರ್ಬಲಳಲ್ಲ' ಎಂದು. ನನ್ನ ಮಾತನ್ನು ನಾನೇ ಗೌರವಿಸದಿದ್ದರೆ ಹೇಗೆ?"

"ನಿನ್ನ ನಿರ್ಧಾರವನ್ನು ಸೋಲಿಸಿದರೆ ಹೇಗೆ?" ಗೋಪಿ ಅವಳ ಹತ್ತಿರ ಬಂದ.

"ನಾನು ಸೋತರೆ ನೀವು ಸೋತಂತೆ. ಇಬ್ಬರೂ ಈ ದಿನ ನಮ್ಮ ಮನಸ್ಸನ್ನು ಗೆಲ್ಲೋಣ."

ಗೋಪಿ ದೂರ ಸರಿದ.

ವಿಜಯಳ ಮನೆ ಹತ್ತಿರ ಬಂತು. ವಿಜಯ ಒಂದು ಗಳಿಗೆ ತಲೆ ಎತ್ತಿ, ಕತ್ತಲಿನಲ್ಲೇ ಅವನ ಮುಖವನ್ನು ಕಣ್ಣರಳಿಸಿ ನೋಡಿ,

"ಗುಡ್ ನೈಟ್" ಎಂದಳು.

"ಗುಡ್ ನೈಟ್, ಸ್ವೀಟ್ ಡ್ರೀಮ್ಸ್" ಎಂದ ಗೋಪಿ.

ವಿಜಯ ಮೆಟ್ಟಲು ಹತ್ತಿ ಬಾಗಿಲನ್ನು ತಟ್ಟಿದಳು. ಹಾಲಿನ ದೀಪ ಹತ್ತಿಕೊಂಡೊಡನೆ ಗೋಪಿ ಅಲ್ಲಿಂದ ಹೊರಟ.

ಮಾರನೆಯ ದಿನ ಮೀರ ಸಿಕ್ಕಿದಾಗ, ಅವಳು ಪ್ರಶ್ನೆಗಳನ್ನು ಕೇಳುವುದಕ್ಕೆ ಮುಂಚೆಯೇ ವಿಜಯ ಹೇಳಿದಳು.

"ನಿನ್ನೆ ರಾತ್ರಿ ಏನೂ ಅನಾಹುತವಾಗಲಿಲ್ಲ. ನಿನ್ನ ಎಣಿಕೆ ತಪ್ಪು."

"ನಾನು ನಂಬಲಾರೆ. ರಾತ್ರಿ....ನೀವಿಬ್ಬರೇ ಇರುವಾಗ.... ಅದರಲ್ಲೂ ಈ ಆಹ್ವಾನಿಸುವ ಮುಖ ಎದುರಿಗಿರುವಾಗ.... ನಾನಂತೂ ನಂಬಲಾರೆ."

"ನನ್ನಲ್ಲಿ ಅಷ್ಟು ನಂಬಿಕೆ ಇಲ್ಲವೇ?"

ಮೀರ ವಿಜಯಳ ಕೆನ್ನೆಯನ್ನು ತನ್ನ ಬೆರಳುಗಳಿಂದ ಸವರಿ,

"ಇದ್ದರೂ ಇರಬಹುದು. ಕೆನ್ನೆ ಇನ್ನೂ ಅರಳಿಲ್ಲ. ಮೊಗ್ಗಾಗಿಯೇ ಇದೆ" ಎಂದಳು.

"ನಿನ್ನವಂತೂ ವಿಚಿತ್ರ ಕಲ್ಪನೆಗಳು."

"ಅದು ಹೇಗಪ್ಪ ಅವನು ಸುಮ್ಮನಿದ್ದ? ನಿನ್ನಂತಹ ಹುಡುಗಿ ಒಂಟಿಯಾಗಿ ತನ್ನ ಕೈಗೆ ಸಿಕ್ಕಾಗಲೂ ಅದು ಹೇಗೆ ಅವನು ಸುಮ್ಮನಿದ್ದ? ಕಲ್ಲೆದೆ ಇರಬೇಕು."

"ಅವರು ಕೇಳಿದರು. ನಾನೇ ಒಪ್ಪಿಕೊಳ್ಳಲಿಲ್ಲ."

"ಗುಡ್. ಇಬ್ಬರೂ ಸಾಕಷ್ಟು ದೂರದಲ್ಲಿಯೇ ಇದ್ದಿರಿ ತಾನೇ? ಸೂಜಿಗಲ್ಲಿಗೆ ಒಂದು ಪರಿಮಿತಿಯ ದೂರದಲ್ಲಿ ಕಬ್ಬಿಣ ಇಟ್ಟರೆ ಏನೂ ಆಗುವುದಿಲ್ಲ. ಕಬ್ಬಿಣವನ್ನು ಪರಿಮಿತಿ ಮೀರಿ ಹತ್ತಿರವಿಟ್ಟರೆ, ಸೂಜಿಗಲ್ಲು ಕಬ್ಬಿಣವನ್ನು ತನ್ನ ಕಡೆಗೆ ಎಳೆದುಕೊಳ್ಳುತ್ತದೆ."

ಅವಳು ಕೊಟ್ಟ ಉಪಮಾನ ಕೇಳಿ ವಿಜಯ ನಕ್ಕಳು.

"ಇಲ್ಲೂ ನಿನ್ನ ಊಹೆ ಸುಳ್ಳು. ಅವರು ಸಾಕಷ್ಟು ಹತ್ತಿರ ಬಂದಿದ್ದರು."

"ಹತ್ತಿರದಲ್ಲಿಯೇ ನಿಂತು ಹೂವನ್ನು ನೋಡಿದ್ದಿರಬೇಕು."

"ಊಹೂಂ. ನನ್ನ ಗಲ್ಲ ಮಾತ್ರ ಪುಣ್ಯಮಾಡಿತ್ತು. ಒಂದೇ ಬಾರಿಗೆ ಬಹಳ ಭಾಗ್ಯ ಸಿಕ್ಕುವುದೂ ಅಪಾಯವೇ. ಆದುದರಿಂದ...."

"ವಿಜಯ, ನಿನ್ನ ವಿದ್ಯೆ ಮುಗಿಯಲು ಇನ್ನೂ ಎರಡೂವರೆ ವರ್ಷಗಳಿವೆ.

ಗೋಪಿಯ ವ್ಯಾಸಂಗ ಮುಗಿಯಲು ಒಂದೂವರೆ ವರ್ಷವಿದೆ."

"ನನಗೆ ಆ ವಿಷಯ ತಿಳಿದಿದೆ ಮೀರ."

"ಹೀಗೆ ಮೈಮರೆಯಬೇಡ. ನೀವಿಬ್ಬರೂ ಮೊದಲು ವಿದ್ಯೆಯನ್ನು ಪೂರೈಸಿ. ನಿಮ್ಮ ಹಾದಿ ಕಲ್ಲುಮುಳ್ಳುಗಳಿಂದ ತುಂಬಿದೆ. ಈಗಲೇ ಅಲ್ಲಿ ಕಾಲಿಟ್ಟು ನೋಯಿಸಿಕೊಳ್ಳಬೇಡಿ. ಮೊದಲು ವಿದ್ಯೆ, ಆಮೇಲೆ ಪ್ರೇಮ."

"ಮುಂದೆ ಕಲ್ಲುಮುಳ್ಳನ್ನು ತುಳಿಯಬೇಕಾಗುವುದಲ್ಲಾ ಎಂದು ಈಗಿನಿಂದ ಹೆದರುತ್ತಿದ್ದೇನೆ. ನಮ್ಮ ತಂದೆಗೆ ಸ್ವಲ್ಪ ಸುಳಿವು ಸಿಕ್ಕಿದರೂ ಸಾಕು, ನನ್ನ ಕೊಂದೇಬಿಡುತ್ತಾರೆ. ಏನು ಮಾಡಲಿ?"

"ಸದ್ಯಕ್ಕೆ ಯಾವ ಯೋಚನೆಯೂ ಮಾಡಬೇಡ. ಮೊದಲು ನಿನ್ನ ಕೋರ್ಸ್ ಮುಗಿಯಲಿ. ಅವನೇನೂ ನಿನ್ನ ಪ್ರೀತಿಸುತ್ತೇನೆಂದು ಇನ್ನೂ ಹೇಳಿಲ್ಲವಲ್ಲಾ?"

"ನಾನೂ ಹೇಳಿಲ್ಲ. ಆದರೆ ಅದನ್ನು ಬಾಯಿಬಿಟ್ಟು ನುಡಿಯಬೇಕೆ?"

"ಅತ ಬರೀ ಫ್ಲರ್ಟ್ ಇರಬಹುದು. ಏನೋ ಎರಡು ದಿನ ಓಡಾಡಿ ಆಮೇಲೆ ಕೈಬಿಡೋಣಾಂತಿದ್ದರೂ ಇರಬಹುದು. ಗಂಡಸರನ್ನು ಸಂಪೂರ್ಣವಾಗಿ ನಂಬಬೇಡ ವಿಜಯ. ನೀನು ಎಲ್ಲರನ್ನೂ ಬೇಗ ನಂಬಿಬಿಡುತ್ತೀಯ."

"ಅವರ ವಿಷಯ ಹಾಗೆ ಮಾತನಾಡಬೇಡ ಮೀರ. ನನಗೆ ತುಂಬ ದುಃಖ ವಾಗುತ್ತದೆ. ನಿನ್ನೆ ರಾತ್ರಿ ಅವರೆಷ್ಟು ವಿನಯದಿಂದಿದ್ದರು ಗೊತ್ತೇ? ಅವರು ಒಂದು ಮಾತು ಒತ್ತಿ ಹೇಳಿದ್ದರೆ ನಾನು ಆ ಕ್ಷಣದಲ್ಲೇ ಆತ್ಮಸಮರ್ಪಣೆ ಮಾಡಿ ಬಿಡುತ್ತಿದ್ದೆ."

"ಪ್ರೀತಿಸುವುದು ತಪ್ಪಲ್ಲ. ಆದರೆ ಹೀಗೆ ಮೈಮರೆಯುವುದನ್ನು ನಾನು ಒಪ್ಪುವುದಿಲ್ಲ. ಎಂತಹ ಸಂದರ್ಭದಲ್ಲಿಯೂ ಮನಸ್ಸಿನ ಬಿಗಿ ತಪ್ಪಬಾರದು."

"ನೀನು ಇದುವರೆವಿಗೂ ಯಾರನ್ನೂ ಪ್ರೀತಿಸಿಲ್ಲವೇ ಮೀರಾ? ಪ್ರೇಮದ ಸುಳಿಗೆ ಸಿಕ್ಕುವುದು ಎಷ್ಟು ಭಯಂಕರವೋ ಅಷ್ಟೇ ಸುಂದರ. ನೀನು ಪ್ರೇಮದ ಸವಿ ಕಂಡಿಲ್ಲವೆಂದು ತಿಳಿದು ನನಗೆ ನಿನ್ನ ಮೇಲೆ ಮರುಕ ಬರುತ್ತಿದೆ."

"ಏಳು, ಹುಚ್ಚು ಹುಡುಗಿ. ಆಮೇಲೆ ನನಗೆ ಪ್ರೇಮದ ಪಾಠ ಕಲಿಸುವಿ ಯಂತೆ. ಈಗ ಸದ್ಯಕ್ಕೆ ಆಸ್ಪತ್ರೆಗೆ ಹೊರಡೋಣ." ಎನ್ನುತ್ತಾ ಮೀರ ಎದ್ದಳು. ವಿಜಯ ಉತ್ಸಾಹದಿಂದ,

"ನಡಿ ಅಲ್ಲಿ ಅವರು ಸಿಕ್ಕರೂ ಸಿಗಬಹುದು" ಎಂದಳು.

****

ಈ ಸಲ ರಜದಲ್ಲಿ ಹಳ್ಳಿಗೆ ಮೀರ ಹೋಗಿದ್ದಾಗ ಶಾಮುವಿನೊಡನೆ ದೊಡ್ಡ

ಜಗಳವೇ ಆಗಿಹೋಯಿತು. ಕುಳಿತಲ್ಲಿ, ನಿಂತಲ್ಲಿ ಮೀರ ಶಾಮುವನ್ನು ಕಾಡಲು ಮೊದಲು ಮಾಡಿದಳು.

"ಇನ್ನೊಂದು ಮದುವೆ ಮಾಡಿಕೊಳ್ಳಿ."

ಅವಳ ಹಿಂಸೆ ತಡೆಯಲಾರದೆ ಶಾಮು ಒಂದು ಸಲ ಕೋಪಗೊಂಡು ಹೇಳಿದ.

"ನೀನು ನನ್ನ ಹೀಗೆ ಹಿಂಸೆ ಮಾಡುವ ಹಾಗಿದ್ದರೆ ರಜದಲ್ಲಿ ಇಲ್ಲಿಗೆ ಬರಲೇಬೇಡ."

ಇದೊಂದು ವಿಚಾರದಲ್ಲಿ ಮೀರ ಮನಸ್ಸನ್ನು ದೃಢಮಾಡಿದ್ದಳು. ಅವಳ ಹಠ, ದೃಢತೆ, ಮೊಂಡುತನವನ್ನು ನೋಡಿ ಬೇಸರಗೊಂಡು ಶಾಮು,

"ನಿನ್ನ ಹಿಂಸೆ ತಡೆಯಲಾರದೆ ನಾನು ಮದುವೆ ಮಾಡಿಕೋಬೇಕು ಅಷ್ಟೇ" ಎಂದ.

"ನೀವು ಯಾವ ಕಾರಣಕ್ಕಾಗಿ ಮದುವೆ ಮಾಡಿಕೊಂಡರೂ ನನಗೆ ಸಂತೋಷ."

"ಈಗ ಹೀಗೆ ಹೇಳ್ತೀಯ ಮೀರಾ. ನಾನು ಇನ್ನೊಂದು ಮದುವೆ ಮಾಡಿಕೊಂಡ ಮೇಲೆ ನನಗೂ ಸುಖವಿರುವುದಿಲ್ಲ, ನಿನಗೂ ಸುಖವಿರುವುದಿಲ್ಲ. ಆಮೇಲೆ ನೀವಿಬ್ಬರೂ ಜಗಳ ಕಾಯುತ್ತಾ ಕುಳಿತುಕೊಂಡರೆ ನನ್ನ ಗತಿ ಏನು?"

"ನಾವಿಬ್ಬರೂ ಜಗಳ ಕಾಯುವುದಿಲ್ಲ. ಅವಳೇ ಜಗಳ ತೆಗೆದು ಬಂದರೂ ನಾನು ಸುಮ್ಮನಿರುತ್ತೇನೆ."

"ಆದರೂ ನೀನು ಸುಮ್ಮನಿರುವವಳು" ಶಾಮು ಮೀರಳನ್ನು ಮೂದಲಿಸಿದ.

"ಬೇಕಾದರೆ ನನ್ನ ಪರೀಕ್ಷೆ ಮಾಡಿರಿ" ಮೀರ ಅಂಗಲಾಚಿದಳು.

"ಒಂದು ಪಕ್ಷ ಅವಳು ನಿನ್ನ ಮನೆ ಬಿಟ್ಟು ಹೋಗೂಂತ ಅಂದರೆ?"

"ಹೊರಟುಹೋಗುತ್ತೀನಿ. ನನ್ನ ವೈದ್ಯವೃತ್ತಿ ನನಗಿದ್ದೇ ಇದೆ."

"ನನ್ನ ಯಾಕೆ ಹಿಂಸೆ ಮಾಡ್ತೀಯಾ ಮೀರಾ?" ಶಾಮು ನೊಂದ ದನಿಯಲ್ಲಿ ಕೇಳಿದ.

"ನಿಜ ಹೇಳಲೇ? ನಾನು ನಿಮ್ಮ ಕೈ ಹಿಡಿದು ತಪ್ಪುಮಾಡಿದ್ದೇನೆ. ನಾನಲ್ಲದೆ ಬೇರಾದ ಹುಡುಗಿ ನಿಮ್ಮ ಕೈ ಹಿಡಿದಿದ್ದರೂ ನಿಮ್ಮನ್ನು ಸುಖವಾಗಿರಿಸುತ್ತಿದ್ದಳು. ನಾನು ಮಾಡಿದ ತಪ್ಪನ್ನು ಈಗ ಸರಿಮಾಡಿದ ಹೊರತು ನನಗೆ ಆತ್ಮತೃಪ್ತಿಯಿಲ್ಲ. ನೀವು ಬೇರೊಂದು ಮದುವೆಯಾಗಿಬಿಡಿ. ಆಮೇಲೆ ನಾನು ನಿಮ್ಮಿಂದ ಏನನ್ನೂ ಬಯಸುವುದಿಲ್ಲ."

ಶಾಮು ಮಾತನಾಡಲಿಲ್ಲ.

ತಾನಾದರೂ ಇವಳಿಗಾಗಿ ಏಕೆ ಇಷ್ಟು ಹಂಬಲಿಸಬೇಕು! ಮೀರ ಚೆಲುವೆ. ಆದರೆ ಇವಳಿಗಿಂತ ಚೆಲುವೆಯರು ಸಿಕ್ಕಲಾರರೇ? ಯಾವುದೊಂದು ರೀತಿಯಲ್ಲೂ ತನ್ನನ್ನು ಅನುಸರಿಸದೇ, ತನಗೆ ವಿರುದ್ಧವಾಗಿ ದಂಗೆ ಏಳುವ ಹುಡುಗಿ ತನಗೆ ಅದಾವ ಮಾಟ ಮಾಡಿರುವಳೋ? ಬಹುಶಃ ಅವಳ ದಂಗೆ ಏಳುವ ಸ್ವಭಾವಕ್ಕೆ ತಾನು ಮುಗ್ಧನಾಗಿರಬಹುದು. ಆ ಪುಂಡುಮನಸ್ಸಿನ ಮೇಲೆ ವಿಜಯ ಸಾಧಿಸುವ ಹಠ ತನಗಿರಬಹುದು. ಅವಳನ್ನು ಪಳಗಿಸಿ ತನ್ನ ಪ್ರೇಮದ ಸರಪಳಿಯಿಂದ ಬಿಗಿದುಹಾಕುವ ಆಸೆಯಿರಬಹುದು.

ಒಂದು ಬಗೆಯ ಹೋರಾಟ ಶಾಮುವಿನ ಮುಖದ ಮೇಲೆ ಒಡೆದು ಮೂಡಿತು. ಅವನು ಮೀರಳ ಕಡೆ ನೋಡಿದ. ಅವಳು ಕೈಲಿ ದಪ್ಪ ಇಂಗ್ಲಿಷ್ ಪುಸ್ತಕವೊಂದನ್ನು ನೆಪಮಾತ್ರಕ್ಕೆ ಹಿಡಿದು, ಶಾಮುವಿನ ಮುಖವನ್ನೇ ನೋಡು ತ್ತಿದ್ದಳು. ಅವನೇನು ಹೇಳುವನೋ ಎಂದು ಮೈಯೆಲ್ಲಾ ಕಿವಿಯಾಗಿತ್ತು.

"ಅದು ಸರಿ. ಆದರೆ ನನಗೆ ಹೆಣ್ಣು ಯಾರು ಕೊಡುತ್ತಾರೆ?"

"ನೀವು ಮೊದಲು ಮದುವೆಯಾಗಲು ಒಪ್ಪಿ. ನಿಮಗೆ ನಾಲ್ಕು ಮದುವೆಗಳನ್ನು ಮಾಡಲು ನಾನು ತಯಾರು."

"ಸದ್ಯ, ಕೈ ಮುಗಿದೆ ದೇವಿ. ಒಂದು ಮದುವೆ ಮಾಡಿಕೊಂಡು ಈ ಅನುಭವ! ಇನ್ನು ನಾಲ್ಕು ಮದುವೆ ಮಾಡಿಕೊಂಡರೆ ನೀವು ನಾಲ್ಕು ಜನರೂ ಸೇರಿ ನನ್ನ ನಾಲ್ಕು ತುಂಡಾಗಿ ಮಾಡಿಬಿಡ್ತೀರಿ."

"ಮದುವೆ ಎಂದರೆ ನಾನು ನಿಮ್ಮನ್ನು ಹೆದರಿಕೊಳ್ಳುವಹಾಗೆ ಮಾಡಿದೀನಿ. ಆದರೆ ಎಲ್ಲರೂ ನನ್ನಂತಹವರೇ ಇರುತ್ತಾರೆಯೇನು? ಒಳ್ಳೆಯ ಹೆಂಡತಿಯರೂ ಇರ್‍ತಾರೆ."

ಶಾಮು ಮೀರಳೊಡನೆ ಚರ್ಚೆಮಾಡಿ ದಣಿದ. ಮೂರುವರೆ ವರ್ಷಗ ಅವಳ ಸತತ ಹಿಂಸೆಯ ಫಲವಾಗಿ ಶಾಮು ಎರಡನೆಯ ಮದುವೆಗೆ 'ಹೂಂ' ಎನ್ನಲೇಬೇಕಾಯಿತು.

"ಏನಾದರೂ ಮಾಡಿಕೋ. ನಾನು ನಿನ್ನ ಕೈಗೊಂಬೆಯಾಗಿದ್ದೇನೆ" ಎಂದು ಶಾಮು ಹೇಳಿದಾಗ ಮೀರ ಆಶ್ಚರ್ಯ, ಆನಂದದಿಂದ,

"ಒಪ್ಪಿಕೊಂಡಿರಾ?" ಎಂದಳು.

"ನಿನ್ನ ಹಿಂಸೆ ತಡೆಯಲಾರದೆ 'ಹಾಳಾಗಿ ಹೋಗಲಿ, ನಿನ್ನ ಹಿಂಸೆ ತಪ್ಪಲಿ' ಎಂದು ಒಪ್ಪಿಕೊಂಡಿದ್ದೇನೆ."

ಮೀರ ಕುಳಿತಿದ್ದ ಜಾಗದಿಂದ ಎದ್ದು ಬಂದು ಶಾಮುವಿನ ಕೆನ್ನೆ ತಟ್ಟಿ. "ಒಳ್ಳೆಯ ಹುಡುಗ" ಎಂದಳು.

ಶಾಮು ಒರಟಾಗಿ ಅವಳ ಕೈ ತಳ್ಳಿ ಹೇಳಿದ, "ಸಾಕು ಈ ನಾಟಕ."

"ನೀವು ಇನ್ನು ಕೋಪಿಸಿಕೊಂಡು ಹೊಡೆದರೂ ನನಗೆ ವ್ಯಥೆಯಿಲ್ಲ."

"ನಿನ್ನ ಹೊಡೆಯುವುದರಲಿ, ನಿನ್ನ ಕೈಲಿ ಹೊಡೆಸಿಕೊಳ್ಳದಿದ್ದರೆ ಸಾಕು."

"ನನ್ನಿಂದ ಹೊಡೆಸಿಕೊಂಡೋರಿಗಿಂತ ಹೆಚ್ಚಾಗಿ ಹೇಳ್ತಿದೀರಿ" ಮೀರ ಮುನಿಸಿನಿಂದ ಕೇಳಿದಳು.

"ಕೈನಿಂದ ಹೊಡೆಸಿಕೊಂಡರೇ ಏಟೇ? ನೀನು ಬಾಯಿಂದಲೂ ಹೊಡೆಯ ಬಲ್ಲೆ. ಮಾತಿನಿಂದಲೂ ಹೊಡೆಯುತ್ತೀಯಾ."

ಶಾಮುವಿನ ಮಾತಿನಲ್ಲಡಗಿದ್ದ ಗೂಢಾರ್ಥ ಮೀರಳನ್ನು ನೋಯಿಸಿತು. ತಾನು ಅವನಿಗೆ ಮದುವೆಯಾಗುವಂತೆ ಒತ್ತಾಯ ಮಾಡುತ್ತಿರುವುದು ಯಾರ ಸುಖಕ್ಕಾಗಿ? ತನ್ನಿಂದ ಅವನಿಗೆ ಮನಶ್ಶಾಂತಿಯಾಗಲಿ, ವಂಶದ ಬೆಳಕಾಗಲಿ ಸಿಕ್ಕಲಿಲ್ಲ. ಈ ನ್ಯೂನತೆಯನ್ನು ಹೋಗಲಾಡಿಸಲೆಂದೇ ಅವಳು ಅವನಿಗೆ ಮದುವೆ ಯಾಗಲು ಬಲವಂತ ಮಾಡಿದ್ದಳು.

ಮೀರ ತನ್ನ ಜೀವನದ ಪರಮ ಗುರಿಯನ್ನು ಸಾಧಿಸ ಹೊರಟಿದ್ದಳು. ಚಿಕ್ಕಂದಿನಿಂದ ವೈದ್ಯಳಾಗಬೇಕೆಂದು ಅವಳು ಕಾಣುತ್ತಿದ್ದ ಕನಸು ನನಸಾಗ ತೊಡಗಿತ್ತು.

ಆದರೆ ಶಾಮು?

ವೈದ್ಯವೃತ್ತಿಯಲ್ಲಿ ಅವಳಿಗೆ ತೃಪ್ತಿ, ಶಾಂತಿ, ಸಮಾಧಾನ ಸಿಕ್ಕುವುದೆಂಬ ಪೂರ್ಣ ಭರವಸೆಯಿತ್ತು.

ಆದರೆ ಶಾಮುವಿಗೋ? ಕತ್ತೆಯಂತೆ ದುಡಿದು, ತಿಂದು, ಹಣ ಶೇಖರಿಸುವುದೇ ಅವನ ಗುರಿಯಾಗಬೇಕೆ?

ತಾನಂತೂ ಒಂದು ದಿನ ಹಳ್ಳಿಯಲ್ಲಿದ್ದರೆ ಒಂದು ವರ್ಷ ನಗರದಲ್ಲಿರು ವವಳು. ಅವಳಿಗೆ ವೈದ್ಯಳಾಗಿ ಹಳ್ಳಿಯಲ್ಲಿಯೇ ನೆಲಸಿ ಜನಸೇವೆ ಮಾಡುವ ಆಸೆಯಿದ್ದರೂ, ಶಾಮು ಅವಳನ್ನೇ ನೆಚ್ಚುವಂತಿರಲಿಲ್ಲ. ಅವನ ಅಪಾರ ಆಸ್ತಿ ಅನ್ಯರ ಪಾಲಾಗಬೇಕೆ? ಅದು ಶಾಮುವಿನ ಮಗುವಿಗೇ ಏಕೆ ಹೋಗಬಾರದು?

ಶಾಮುವಿನ ಮಗು ತನ್ನ ಮಗುವಾಗುವುದರಲ್ಲಿ ಅನುಮಾನವಿತ್ತು. ಆದರೂ ಅವನ ಹೆಂಡತಿಯಾಗಿ ಬರುವಾಕೆಯೊಡನೆ ತಾನು ಸಹಕರಿಸಿದರೆ, ಸವತಿಯರಾಗದೆ ಅಕ್ಕತಂಗಿಯರಾಗುವುದು ಸಾಧ್ಯವೇ ಇಲ್ಲವೇ? ಶಾಮುವಿನ ಸುಖಕ್ಕಾಗಿ, ಹಿತಕ್ಕಾಗಿ,

ಆಸ್ತಿಗಾಗಿ ತಾನು ಅವನಿಗೆ ಮದುವೆಯಾಗಲು ಹೇಳಿದರೆ ತನಗೆ ದೊರೆತ ಮಾತಾದರೂ ಎಂಥದು?

ಮೀರಳಿಗೆ ಅದೇಕೋ ಅಳು ಬಂತು.

ತನ್ನ ವೀಣ ಬದುಕಿದ್ದರೆ?

ಮೀರ ಮೊಳಕಾಲ ಮೇಲೆ ತಲೆಯಿಟ್ಟು ಬಿಕ್ಕಿ ಬಿಕ್ಕಿ ಅತ್ತಳು. ಅವಳು ಅಳುವುದನ್ನು ನೋಡಿ ಶಾಮು ಚಕಿತನಾದ. ಸೋಮಾರಿತನದಿಂದ ಒರಗಿದ್ದ ಶಾಮು ತಟ್ಟನೆ ಎದ್ದು ಬಂದು, ಅವಳ ಭುಜ ಅಲುಗಿಸಿ ಮೃದುವಾಗಿ "ಮೀರಾ" ಎಂದು ಕೂಗಿದ.

"ವೀಣ ಇದ್ದಿದ್ದರ ನಾನು ನಿಮ್ಮನ್ನು ಪೀಡಿಸುತ್ತಿರಲಿಲ್ಲ. ಆ ಒಂದು ಬೆಳಕು ಹತ್ತು ದೀಪಗಳನ್ನು ಹೊತ್ತಿಸುತ್ತಿತ್ತು" ಎಂದು ಮೀರ ಬಿಕ್ಕಿದಳು. ವೀಣಳ ಪ್ರಸ್ತಾಪ ಬಂದೊಡನೆ ಶಾಮು ಮತ್ತಷ್ಟು ತಗ್ಗಿದ.

"ಹೋಗಲಿ ಅಳಬೇಡ, ಮೀರ. ಕಳೆದುಹೋದುದನ್ನು ಚಿಂತಿಸಿ ಫಲವಿಲ್ಲ. ನೀನು ಹೇಳಿದ ಹಾಗೇ ಕೇಳ್ತೀನಂತ ಹೇಳಿದೆನಲ್ಲಾ....."

"ನಾನು ನಿಮಗೋಸ್ಕರ ಹೇಳಿದರೆ ನೀವು ನನ್ನೇ ತಪ್ಪಿತಸ್ಥಳನ್ನಾಗಿ ಮಾಡ್ತೀರಿ."

"ಹೆಂಗಸರು ಅಳಬೇಕಾದರೆ ಗಂಡಸರ ಎದೆಯ ಮೇಲೆ ತಲೆಯಿಟ್ಟು ಅಳಬೇಕು. ಅದು ನಿನಗೆ ಗೊತ್ತಿಲ್ಲವೇ?" ಶಾಮು ನಗೆಯಾಡಿದ.

"ನಿಮ್ಮದು ಕಲ್ಲೆದೆ, ನನ್ನ ಕಣ್ಣೀರಿಗೆ ಕರಗೋದಿಲ್ಲ."

"ಆಗಲೇ ಕರಗಿ ಹೋಗಿದೀನಿ. ಇನ್ನು ಹೊಸದಾಗಿ ಕರಗೋದೆಲ್ಲಿಂದ ಬಂತು? ನನ್ನ ಮದುವೆ ವಿಷಯದಲ್ಲಿ ಇನ್ನೊಂದು ಮಾತು. ಮುಂದೆ ಯಾವ ವಿಧವಾದ ತೊಡಕು ಬಂದರೂ ಅದನ್ನು ಸರಿಮಾಡುವ, ಸರಿಹೊಂದಿಸಿಕೊಳ್ಳುವ ಜವಾಬ್ದಾರಿ ನಿನ್ನದು. ಆಮೇಲೆ ನನ್ನ ದೂರಬಾರದು."

"ಆಗಲಿ."

"ಇನ್ನೊಂದು ಮಾತು. ನೀನು ತಪ್ಪು ಭಾವಿಸಬೇಡ. ನನಗೆ ಪಟ್ಟಣದ ಹುಡುಗಿ ಬೇಡ. ಹಳ್ಳಿಯಲ್ಲಿಯೇ ಹುಟ್ಟಿ ಬೆಳೆದ ಹುಡುಗಿಯಾಗಬೇಕು."

ಮೀರಳ ಮನಸ್ಸಿನಲ್ಲಿಯೂ ಹಳ್ಳಿಯ ಹುಡುಗಿಯನ್ನೇ ಶಾಮುವಿಗೆ ತರುವ ಯೋಚನೆಯಿತ್ತು. ಪಟ್ಟಣದ ಹುಡುಗಿಯಾದ ತನ್ನನ್ನು ಅವನು ಕಟ್ಟಿಕೊಂಡು ಸುಖಪಟ್ಟಿದ್ದು ಅಷ್ಟರಲ್ಲಿಯೇ ಇತ್ತು. ಹಳ್ಳಿಯ ವಾತಾವರಣಕ್ಕೆ ಒಗ್ಗಿರುವ ಹುಡುಗಿಯನ್ನೇ ತರಲು ಅವಳು ನಿಶ್ಚಯಿಸಿದ್ದಳು. ಶಾಮುವಿನ ಮಾತು ಅವಳ

ನಿಶ್ಚಯವನ್ನು ಮತ್ತಷ್ಟು ದೃಢಪಡಿಸಿತು.

ಕೆನ್ನೆಯ ಮೇಲೆ ಕಂಬನಿ ಇದ್ದಂತೆಯೇ ಮೀರ ಶಾಮುವಿಗೆ ಮುತ್ತಿಟ್ಟು "ಥ್ಯಾಂಕ್ಸ್" ಎಂದಳು.

ತನ್ನನ್ನು ಅಪ್ಪಿಕೊಂಡಿದ್ದ ಕೈಗಳನ್ನು ಕಿತ್ತೆಸೆದು ಶಾಮು, "ನನಗೇನೂ ನೀನು ಲಂಚ ಕೊಡಬೇಕಾಗಿಲ್ಲ" ಎಂದ.

"ಇದು ಲಂಚವಲ್ಲ. ನಮ್ಮಿಬ್ಬರಿಗೂ ರಾಜಿಯಾಯಿತೆಂದು ತೋರಿಸುವ ಕುರುಹು" ಎನ್ನುತ್ತಾ ಮೀರ ಕೆನ್ನೆ ಒರೆಸಿಕೊಂಡಳು.

ವೆಂಕಮ್ಮನವರಿಗೆ ಈ ಸಮಾಚಾರ ತಿಳಿಯುತ್ತಲೇ ಅವರಿಗೆ ದುಃಖ ಸಂತೋಷ ಎರಡೂ ಒಮ್ಮೆಗೇ ಉಂಟಾದವು. ಮೀರಳಂತಹ ಹುಡುಗಿಯನ್ನು ಅವಲಂಬಿಸುವುದರಲ್ಲಿ ಶಾಮುವಿಗೆ ಯಾವ ಸುಖವೂ ಇಲ್ಲವೆಂಬುದು ಅವರಿಗೆ ತಿಳಿದಿತ್ತು. ಆದುದರಿಂದ ಅವನು ಮತ್ತೊಂದು ಮದುವೆಯಾಗುವುದೇ ಸರಿ ಎಂದು ಅವರಿಗೆ ಸಂತೋಷವಾದರೂ, ಎಲ್ಲ ವಿಧದಲ್ಲಿಯೂ ಸರ್ವಗುಣ ಸಂಪನ್ನಳಾದ ಮೀರ ಶಾಮುವಿಗೆ ತಕ್ಕ ಹೆಂಡತಿಯಾಗಲಿಲ್ಲವಲ್ಲಾ ಎಂಬ ದುಃಖವೂ ಆಯಿತು. ಮೀರಳಿಗೆ ಅವರು,

"ದುಡುಕಬೇಡಮ್ಮ. ನಿಧಾನವಾಗಿ ಯೋಚಿಸು, ಆಮೇಲೆ ಪಶ್ಚಾತ್ತಾಪ ಪಡಬೇಕಾದೀತು" ಎಂದರು.

ಮೀರ ನಕ್ಕು "ನಾನೆಲ್ಲಾ ಆಲೋಚಿಸಿ ತೀರ್ಮಾನಕ್ಕೆ ಬಂದಿದ್ದೇನೆ." ಎಂದಳು.

"ಹಾಗಾದರೆ ಸರಿ."

"ಅವರಿಗೆ ಈ ಬಾರಿ ಹಳ್ಳಿಯ ಹುಡುಗಿಯೇ ಆಗಬೇಕಂತೆ. ನೀವು ಕಂಡ ಹಾಗೆ ಒಳ್ಳೆಯ ಮನೆತನದ ಹುಡುಗಿ."

"ಶಾಮು ಸೋದರಮಾವ ಶೀನಪ್ಪನ ಮಗಳು ಸರಸಿಯೇ ಇದ್ದಾಳಲ್ಲಾ. ಅವಳನ್ನು ಶಾಮುವಿಗೆ ಕೊಡಬೇಕೆಂದು ಅವರು ನಿನ್ನ ಮದುವೆಗಿಂತಲೂ ಮೊದಲು ಪ್ರಯತ್ನಪಟ್ಟು ವಿಫಲರಾದರು. ಶಾಮು ಅದೇಕೋ ಸರಸಿಯನ್ನು ಬೇಡ ಎಂದು ಬಿಟ್ಟ. ಅವಳಿಗೆ ಇನ್ನೂ ಮದುವೆ ಆಗಿಲ್ಲ. ಅವಳೂ ಹಳ್ಳಿಯಲ್ಲಿ ಹುಟ್ಟಿ ಬೆಳೆದವಳು. ಬೇಕಾದರೆ ಪ್ರಯತ್ನ ಪಡಬಹುದು" ಎಂದರು ವೆಂಕಮ್ಮ.

"ನಾನು ಇವರನ್ನು ಕೇಳಿ ಮುಂದೆ ಪ್ರಯತ್ನಿಸುತ್ತೇನೆ. ಅವಳು ನನ್ನ ಮದುವೇಲಿ ಬಂದಿದ್ದಳೂಂತ ಕಾಣುತ್ತೆ. ಹುಡುಗಿ ಸುಮಾರಾಗಿ ಇರಬೇಕಲ್ಲವೇ?"

"ಚೆನ್ನಾಗಿರುವವರ ಗುಂಪಿಗೆ ಅವಳನ್ನು ಸೇರಿಸೋಕಾಗಲ್ಲ. ಸುಮಾರಾಗಿ

ದ್ದಾಳೆ. ಒಳ್ಳೆಯ ಹುಡುಗಿ. ಒಳ್ಳೆ ಮನೆತನ."

ರಾತ್ರಿಯೇ ಮೀರ ಶಾಮುವಿನೊಡನೆ ಸರಸಿಯ ವಿಷಯವನ್ನು ಪ್ರಸ್ತಾಪಿಸಿದಳು. ಅವನು ಹಾಸಿಗೆಯ ಮೇಲುರುಳಿ ಆಗತಾನೆ ದೀಪವಾರಿಸಿದ್ದ. ಮೀರಳಿಗಿನ್ನೂ ನಿದ್ದೆ ಬಂದಿರಲಿಲ್ಲ. ಅವಳು ಶಾಮುವಿಗೆ,

"ನಿದ್ದೆ ಬಂತೇ?" ಎಂದಳು.

"ಇಲ್ಲ."

"ನಾನೊಂದು ವಿಷಯ ಹೇಳಬೇಕೂಂತ ಇದ್ದೀನಿ."

"ಸರಿ, ಅಪ್ಪಣೆಯಾಗಲಿ."

"ನಿಮ್ಮ ಸೋದರಮಾವನ ಮಗಳು ಸರಸಿ ಹೇಗಿದ್ದಾಳೆ?"

"ಇದಾಳೆ, ನಾಲ್ಕು ಜನರಂತೆ."

"ಅವಳಾದರೆ ಪರವಾಗಿಲ್ಲವೇ? ನೀವು ಒಪ್ಪಿಕೊಂಡರೆ ಮುಂದೆ ನಾನೂ ಪ್ರಯತ್ನಿಸುತ್ತೇನೆ."

"ಸರಸಿಯೇ? ಅವಳಲ್ಲಿ ನನಗೆ ಯಾವತ್ತೂ ಮೆಚ್ಚಿಗೆಯಿಲ್ಲ."

"ಮೆಚ್ಚಿ, ಮೆಚ್ಚಿ ನನ್ನ ಕೈಹಿಡಿದು ನೀವು ಪಡ್ತಿರೋ ಸುಖ ಅಷ್ಟರಲ್ಲಿಯೇ ಇದೆ. ಯೋಚನೆ ಮಾಡಿ ಹೇಳಿ."

"ನನ್ನ ಯೋಚನೆಗೆ ನೀನು ಏನು ಬೆಲೆ ಕೊಡ್ತೀಯಾ?"

"ನಿಮ್ಮ ವರಸೆ ತೆಗೆದಿರಲ್ಲಾ. ಏನು ಹೇಳ್ತೀರಿ?"

"ನಂಗೆ ನಿದ್ದೆ ಬಂತು."

"ನಿಮ್ಮ ಅಭಿಪ್ರಾಯ ಏನು ಹೇಳಿ" ಮೀರ ಗೋಗರೆದಳು.

ಶಾಮು ನಿದ್ದೆ ಬಂದವನಂತೆ ನಟಿಸಿ ಮಾತನಾಡಲಿಲ್ಲ. ಮೀರ ಎರಡು ನಿಮಿಷ ಕಾದು ಶಾಮುವಿನ ಹಾಸಿಗೆಯ ಮೇಲೆ ಬಂದು ಕುಳಿತು,

"ನಿಮ್ಮ ನಾಟಕ ಸಾಕು, ಯಾವುದೂ ಹೇಳಬಾರದೇ?" ಎಂದಳು.

ಶಾಮು ಮಾತನಾಡಲಿಲ್ಲ. ಮೀರ ರೇಗಿಕೊಂಡು ಎದ್ದಳು. ಶಾಮು ಅವಳ ಸೆರಗನ್ನು ಬಿಗಿಯಾಗಿ ಹಿಡಿದಿದ್ದ.

"ಬಿಡಿ. ನಿದ್ದೆ ಬಂದಿದ್ದರೂ ಕೈ ಮಾತ್ರ ಸೆರಗು ಹಿಡಿಯುತ್ತದೆ. ಇದು ಎಂತಹ ನಿದ್ದೆಯಪ್ಪ!"

ಶಾಮು ಸೆರಗನ್ನು ಮಾತ್ರ ಬಿಡಲಿಲ್ಲ.

ಮಾರನೆಯ ದಿನ ಬೆಳಿಗ್ಗೆ .ಶಾಮು ತನ್ನ ಅಭಿಪ್ರಾಯವನ್ನು ಮೀರಳಿಗೆ ತಿಳಿಸಿದ.

"ನೋಡು ಮೀರ, ನಿನ್ನ ಮದುವೆಯಾಗೋದಕ್ಕೆ ಮುಂಚೆ ನಾನು ಬಹಳ ಯೋಚನೆಗಳನ್ನು ಹಾಕಿಕೊಂಡಿದ್ದೆ. ಇಂತಹ ಹುಡುಗೀನೆ ಆಗಬೇಕು, ರೂಪದಲ್ಲಿ ರಂಭೆಯೇ ಬರಬೇಕು ಅಂದುಕೊಂಡಿದ್ದೆ. ಈಗ ನನಗೆ ಯಾವ ಯೋಚನೆಯೂ ಇಲ್ಲ. ಇಂತಹ ಹುಡುಗಿಯೇ ಆಗಬೇಕೆಂದೂ ಇಲ್ಲ. ಸರಸಿಯಾದರೂ ಆಯಿತು, ಇಲ್ಲದಿದ್ದರೆ ಯಾರಾದರೂ ಆಯಿತು. ಆ ಹುಡುಗಿಯೇ ಬೇಕು, ಹೀಗೆ ಇರಬೇಕು ಎಂದು ಹೇಳುವ ಕಾಲ ಕಳೆದುಹೋಯಿತು. ನಿನಗೆ ಸರಸಿ ಸರಿ ಎನಿಸಿದರೆ ನನಗೂ ಸರಿ. ಮುಂದೆ ಹೊಂದಿಕೊಂಡು ಹೋಗಬೇಕಾಗುವವರು ನೀವು. ನೀವು ಒಪ್ಪಿದರೆ ನನಗೂ ಒಪ್ಪಿಗೆ."

ಶಾಮು ಮಾತು ಕೇಳಿ ಮೀರ ಸರಸಿಯನ್ನೇ ವಿಚಾರಿಸುವುದಾಗಿ ನಿರ್ಧಾರ ಮಾಡಿದಳು.

* * * *

ಎಂದೂ ಬಾರದಿದ್ದ ಮೀರ ಈಗ ತಮ್ಮಲ್ಲಿಗೆ ಇದ್ದಕ್ಕಿದಂತೆಯೇ ಬಂದುದನ್ನು ನೋಡಿ ಸರಸಿಯ ತಾಯಿ ಸಾವಿತ್ರಮ್ಮನಿಗೆ ಆಶ್ಚರ್ಯವಾಯಿತು. ಮದುವೆಯಾದ ತರುಣದಲ್ಲಿ ವೀಣ ಹುಟ್ಟುವುದಕ್ಕೆ ಮುಂಚೆ ಮೀರ ಶಾಮುವಿ ನೊಡನೆ ಅವರ ಹಳ್ಳಿಗೆ ಹೋಗಿದ್ದಳು. ವೀಣ ಹುಟ್ಟಿದ ಮೇಲೆ ಸಾವಿತ್ರಮ್ಮ, ಶೀನಪ್ಪ ಶಾಮುವಿನ ಮನೆಗೆ ಬಂದಿದ್ದರೂ ಸರಸಿ ಬಂದಿರಲಿಲ್ಲ. ಶಾಮುವಿನ ಮದುವೆಯಾದ ಮೇಲೆ ಸರಸಿ ಶಾಮುವಿನ ಮನೆಯ ಕಡೆ ತಿರುಗಿ ಸಹ ನೋಡಿರಲಿಲ್ಲ. ತನ್ನನ್ನು ಶಾಮುವಿಗೆ ಮದುವೆ ಮಾಡಲು ತಾಯಿ, ತಂದೆ ನಡೆಸಿದ ಪ್ರಯತ್ನ ಅವಳಿಗೆ ತಿಳಿದಿತ್ತು. ಆದರೆ ಶಾಮು ತನ್ನನ್ನು ತಿರಸ್ಕರಿಸಿ ಮೀರಳಿಗೆ ಮರುಳಾಗಿ ಮದುವೆಯಾದಾಗ, ಸರಸಿಗೆ ಶಾಮುವಿಗಿಂತಲೂ ಮೀರಳ ಮೇಲೆ ಹೆಚ್ಚು ಕೋಪಬಂದಿತ್ತು.

'ಪಟ್ಟಣದ ಹುಡುಗಿ. ನಮ್ಮ ಶಾಮು ಮಾವನಿಗೆ ಮಾಟ ಮಾಡಿದ್ದಾಳೆ. ಅವಳ ಬೆಡಗಿಗೆ ಶಾಮು ಬಲಿಯಾಗಿಬಿಟ್ಟ' ಎಂಬುದೇ ಅವಳ ಸಿದ್ಧಾಂತವಾಗಿತ್ತು. ಶಾಮುವಿನ ಅಪಾರ ಐಶ್ವರ್ಯಕ್ಕೆ ಮೀರ ಒಡತಿಯಾದಾಗ, ಸರಸಿಯ ಒಡಲು ಉರಿದುಹೋಗಿತ್ತು. ವೀಣ ಸತ್ತು, ಮೀರ ಮತ್ತೆ ಓದಲು ಮೊದಲು ಮಾಡಿದಾಗ ಸರಸಿ ವ್ಯಂಗ್ಯನಗೆ ಬೀರಿ,

"ನಾಯಿಬಾಲ ಎಂದಿದ್ದರೂ ಡೊಂಕು" ಎಂದು ಅಣಕವಾಡಿದ್ದಳು.

"ಶಾಮುವಿಗೆ ಹಾಗೆಯೇ ಆಗಬೇಕು" ಎಂದು ಸಹ ಅವಳಿಗೆ ಎನಿಸಿತ್ತು.

ಶಾಮುವಿಗೆ ಮದುವೆಯಾಗಿ ಹಲವಾರು ವರ್ಷಗಳು ಕಳೆದಿದ್ದರೂ, ಸರಸಿಗೆ

ಮಾತ್ರ ಮದುವೆಯಾಗಿರಲಿಲ್ಲ. ಸರಸಿ ಮೀರಳಿಗಿಂತ ಮೂರು ನಾಲ್ಕು ವರ್ಷ ಚಿಕ್ಕವಳಾಗಿದ್ದರೂ ಅವಳಿಗೆ ಮದುವೆಯಾಗಿರಲಿಲ್ಲ. ಸರಸಿಯ ಜಾತಕದ ಪ್ರಕಾರ ಅವಳಿಗೆ ಮಾವನಿಲ್ಲದ ಮನೆ ಬೇಕಾಗಿತ್ತು. ಅವಳು ಹುಟ್ಟಿದ ಕೆಟ್ಟ ಗಳಿಗೆಯಿಂದಾಗಿ ಸರಸಿಯ ಮದುವೆ ಮುಂದುವರಿಯುತ್ತಲೇ ಇತ್ತು. ಸರಸಿ ಅವಳ ತಾಯಿ, ತಂದೆಗೆ ದೊಡ್ಡ ಭಾರವಾಗಿದ್ದಳು. ಅವಳ ಮದುವೆ ಹೇಗಾದರೂ ಮುಗಿಸಿದರೆ ಸಾಕೆಂದು ಅವರು ಹಗಲಿರುಳೂ ಪ್ರಯತ್ನಿಸುತ್ತಿದ್ದರು.

ಮೀರ ಬಸ್ಸಿಳಿದು ಶೀನಪ್ಪನ ಮನೆಗೆ ಬಂದಾಗ ಸಂಜೆ ಆರು ಗಂಟೆಯಾಗಿತ್ತು. ಮನೆಯ ಮುಂಭಾಗದಲ್ಲಿ ಯಾರೂ ಇರಲಿಲ್ಲ. ಮೀರ ಒಳಗೆ ಹೋದಳು. ಕೊಟ್ಟಿಗೆಯಲ್ಲಿ ಸಾವಿತ್ರಮ್ಮ ಹಾಲು ಕರೆಯುತ್ತಿದ್ದರು. ಸರಸಿ ಕರುವನ್ನು ಹಿಡಿದು ನಿಂತಿದ್ದಳು.

ಮೀರಳನ್ನು ನೋಡಿ ಸಾವಿತ್ರಮ್ಮ ಆನಂದದಿಂದ,

"ಬಾಮ್ಮ, ಶಾಮು ಬರಲಿಲ್ಲವೇ?" ಎಂದರು.

"ಅವರು ಬರಲಿಲ್ಲ. ನಾನೊಬ್ಬಳೇ ಬಂದೆ" ಎನ್ನುತ್ತಾ ಮೀರ ಸರಸಿಯ ಕಡೆ ತಿರುಗಿ ಮುಗುಳ್ನಗೆ ಬೀರಿದಳು. ಸರಸಿಯೂ ಬಲವಂತದ ನಗು ನಕ್ಕಳು. ಸರಸಿಯ ಕಣ್ಣುಗಳು ಅಸೂಯೆಯಿಂದ ಮೀರಳ ಉಡುಗೆ ತೊಡಿಗೆಯನ್ನು ಪರೀಕ್ಷಿಸುತ್ತಿದ್ದವು.

ಮೀರ ಬಿಳಿ ಷಿಫಾನ್ ಸೀರೆಯ ಮೇಲೆ ಪುಟ್ಟ ಹಸಿರು ಎಲೆಗಳಿದ್ದ ಸೀರೆಯನ್ನುಟ್ಟು ಕಡುಹಸುರಿನ ಚೋಲಿ ಧರಿಸಿದ್ದಳು. ಬಸ್ಸಿನಲ್ಲಿ ಆಗತಾನೆ ಬಂದಿಳಿದಿದ್ದರಿಂದ ಅವಳ ಗುಂಗುರುಕೂದಲು ಜಡೆಯಿಂದ ತಪ್ಪಿಸಿಕೊಂಡು ಹಾರಾಡುತ್ತಿತ್ತು. ಎಡಗೈಗೆ ರಿಸ್ಟ್‌ವಾಚು, ಬಲಗೈಲಿ ನಾಲ್ಕು ಚಿನ್ನದ ಬಳೆಗಳು, ಕೊರಳಲ್ಲಿ ಚಿನ್ನದಲ್ಲಿ ಸುತ್ತಿದ ಕರಿಮಣಿ, ಕಿವಿಯಲ್ಲಿ ಪುಟ್ಟವಜ್ರದ ಬೆಂಡೋಲೆ, ಕಾಲಿನಲ್ಲಿ ನವೀನ ಮಾದರಿಯ ಚಪ್ಪಲಿ, ಕೈಲಿ ಚರ್ಮದ ಸೂಟ್‌ಕೇಸು.

ಅವಳನ್ನು ನೋಡಿದಷ್ಟೂ ಸರಸಿಯ ಕಣ್ಣು ಕೆಂಪಾಯಿತು.

'ಇವಳೇನು ಮಹಾ ಚೆನ್ನಾಗಿದಾಳೆ' ಎಂದು ನಾಲಿಗೆ ಹೇಳಿದರೂ, ಮನಸ್ಸು 'ಚೆನ್ನಾಗಿದಾಳೆ, ತುಂಬಾ ಚೆನ್ನಾಗಿದಾಳೆ' ಎಂದು ನುಡಿಯುತ್ತಲೇ ಇತ್ತು.

ಸರಸಿ ಒರಟಾದ ನೂಲಿನ ಸೀರೆಯುಟ್ಟಿದ್ದಳು. ಕೈಗಳಲ್ಲಿ ಬಣ್ಣ ತಿರುಗಿದ ಮಾಸಲು ಗಾಜಿನ ಬಳೆಗಳು, ಕೊರಳಲ್ಲಿ ಗಾಜಿನ ಮಣಿಯ ಸರ, ಕಿವಿಯಲ್ಲಿ ಒಂದು ಕೆಂಪಿನ ಚಿನ್ನದ ತಟ್ಟು ಹಾಕಿದ್ದಳು ಸರಸಿ.

ಮೀರಳ ವೇಷಭೂಷಣಕ್ಕೆ ತನ್ನವನ್ನು ಹೋಲಿಸಿದಾಗ ಸರಸಿಗೆ ನಿರಾಶೆ.

ಅಪಮಾನದಿಂದ ಅಳು ಬರುವಂತಾಯಿತು. ತಾಯಿ ಹಾಲು ಕರೆದಾಗುತ್ತಲೇ ಸರಸಿ ಕರುವನ್ನು ಕಟ್ಟಿಹಾಕಿ ಒಳಗೆ ಹೊರಟುಹೋದಳು. ಸಾವಿತ್ರಮ್ಮ ಸಂಭ್ರಮದಿಂದ ಆಗತಾನೆ ಕರೆದ ಹಾಲಿನಲ್ಲಿ ಕಾಫಿ ಮಾಡಿಕೊಟ್ಟರು.

"ಶಾಮಣ್ಣ ಯಾಕಮ್ಮ ಬರಲಿಲ್ಲ?"

"ನಿಮ್ಮಿಂದ ಒಂದು ಕೆಲಸವಾಗಬೇಕಾಗಿತ್ತು. ಆದ್ದರಿಂದ ನಾನೇ ಬಂದೆ."

"ನನ್ನಿಂದ ಕೆಲಸವೇ!"

"ಹೂ. ನೀವು ಆಗಲಿ ಎಂದರೆ ಹೇಳ್ತೀನಿ."

"ಅದೇನು ಹೇಳು."

"ಸರಸಿಗೆ ಎಲ್ಲಾದರೂ ಗಂಡು ಗೊತ್ತಾಗಿದೆಯೇ?"

ಸಾವಿತ್ರಮ್ಮ ನಿಟ್ಟುಸಿರುಬಿಟ್ಟು "ಅವಳ ಹಣೇಲಿ ಮದುವೆಯಾಗುವ ಯೋಗ ಬರೆದಿದೆಯೋ ಇಲ್ಲವೋ ಗೊತ್ತಿಲ್ಲ. ಅವಳ ಜಾತಕದ ಪ್ರಕಾರ ಅತ್ತೆ ಮಾವ ಇಲ್ಲದ ಮನೆಯಾಗಬೇಕು...."

"ಅತ್ತೆ ಮಾವ ಇಲ್ಲದ ಮನೆ ನಾನು ಹುಡುಕಿಕೊಟ್ಟರೆ ನೀವು ಅವಳಿಗೆ ಮದುವೆ ಮಾಡ್ತೀರಾ?"

"ನಾವು ಕಾಣದ ಹಾಗೆ ಯಾರಿದಾರಮ್ಮಾ?"

"ನೀವು ಕಂಡವರೇ ಇದಾರೆ."

ಸಾವಿತ್ರಮ್ಮನಿಗೆ ಮತ್ತಷ್ಟು ಆಶ್ಚರ್ಯವಾಯಿತು. ಅವರು ಕುತೂಹಲದಿಂದ "ಯಾರಿರಬಹುದು? ನೆಮ್ಮದಿಯಾಗಿದಾರೆಯೇ?" ಎಂದರು.

ಮೀರ ನಕ್ಕು, "ಹೂ. ತುಂಬಾ ಅನುಕೂಲವಾಗಿದಾರೆ. ಬಹಳ ಆಸ್ತಿ ಇದೆ. ಆದರೆ ಎರಡನೇ ಮದುವೆ." ಎಂದಳು.

"ತುಂಬಾ ವಯಸ್ಸಾಗಿದೆಯೇನು?"

"ಇಲ್ಲ. ನಿಮ್ಮ ಸಗಸಿಯ ವಯಸ್ಸಿಗೆ ಸರಿಯಾಗಿದಾರೆ ಅವರು ಇನ್ನೊಂದು ವಿಶೇಷ ಏನೊಂದ್ರೆ ಅವರ ಮೊದಲನೆ ಹೆಂಡತಿ ಬಂದುಕಿದಾರೆ."

"ಹಾಗಾದ್ರೆ ಅವರು ಯಾಕೆ ಇನ್ನೊಂದು ಮದುವೆ ಮಾಡ್ಕೋತಾರೆ?"

"ಮೊದಲನೆ ಹೆಂಡತಿಗೆ ಮಕ್ಕಳಿಲ್ಲ. ಮಕ್ಕಳಾಗುವುದೂ ಇಲ್ಲ. ಆದುದರಿಂದ ಆಸ್ತಿ ಅನ್ಯಾಯವಾಗಿ ಕಂಡವರ ಪಾಲಾಗಬಾರದೆಂದು ಇನ್ನೊಂದು ಮದುವೆ ಮಾಡಿಕೊಳ್ಳಬೇಕೆಂದಿದಾರೆ."

"ಅವನ ಮೊದಲನೆ ಹೆಂಡತಿ ಇದಕ್ಕೆ ಒಪ್ಪಿಕೊಂಡಿದಾರೆಯೇ?"

"ಹೂಂ. ಅವರೇ ಗಂಡನಿಗೆ ಬಲವಂತಮಾಡಿ ಇನ್ನೊಂದು ಮದುವೆ

ಮಾಡಿಸೋಕೆ ಹೊರಟಿದಾರೆ."

"ಯಾರಪ್ಪಾ ಆ ಪುಣ್ಯಾತ್ಮರು! ತಾನು ಬದುಕಿರುವ ಹಾಗೇ ಗಂಡನಿಗೆ ಮಕ್ಕಳಾಗಲೀಂತ ಇನ್ನೊಂದು ಮದುವೆ ಮಾಡಿಸೋರು ಯಾರು? ನಾನು ಆಕೇನ ನೋಡಿದೇನೆಯೇ?"

"ಓಹೋ. ಈಗಲೂ ನೋಡ್ತೀದೀರಿ."

ಸಾವಿತ್ರಮ್ಮ ಚಕಿತರಾಗಿ, "ಮೀರಾ!" ಎಂದು ಕೂಗಿಕೊಂಡರು. ಒಂದು ಗಳಿಗೆ ಅವರಿಗೆ ಮಾತನಾಡುವುದಾಗಲಿಲ್ಲ. ಮೀರಳ ಹೃದಯ ಅವರಿಗೆ ಅರ್ಥ ವಾಯಿತು. ಅವರು ಗದ್ಗದ ದನಿಯಿಂದ,

"ಈಗಲೇ ಅವಸರ ಏನಮ್ಮ ಮೀರಾ? ನಿನಗೆ ಮಕ್ಕಳಾಗುವ ವಯಸ್ಸು ಆಗಲೇ ಮೀರಿಹೋಯಿತೇ? ಇನ್ನೂ ಚಿಕ್ಕ ವಯಸ್ಸು. ಇವತ್ತಿಲ್ಲದಿದ್ದರೆ ನಾಳೇ ಮಕ್ಕಳು ಆಗೇ ಆಗುತ್ತವೆ. ದುಡುಕಬೇಡ" ಎಂದರು.

"ಊಹೂಂ. ನನಗೆ ಆಗೋದಿಲ್ಲ. ನನಗೆ ಗೊತ್ತು. ನೀವು ನಿಮ್ಮ ಯಜಮಾನರು, ಸರಸಿ ಎಲ್ಲರೂ ಯೋಚನೆ ಮಾಡಿ ನಾನು ನಾಳೆ ಹೊರಡುವುದರೊಳಗೆ ಯಾವುದನ್ನೂ ತಿಳಿಸಬೇಕು."

ಸಾವಿತ್ರಮ್ಮನವರು ಮೀರಳ ಸರಳ ಸ್ವಭಾವಕ್ಕೆ ಆಶ್ಚರ್ಯ ವ್ಯಕ್ತಪಡಿಸಿ.

"ಮೀರಾ, ನಾವಾಗುವ ಹೊತ್ತಿಗೆ ಸರಿಯಾಯಿತು. ನೀನು ಮೂರನೆಯವರೊಬ್ಬರ ಮುಖಾಂತರ ಈ ಸಮಾಚಾರ ತಿಳಿಸೋದು ಬಿಟ್ಟು 'ಹೆಣ್ಣು ಕೊಡಿ' ಎಂದು ನೀನಾಗಿಯೇ ಬಂದು ಕೇಳಬಹುದೇ?" ಎಂದರು.

"ಹಾಗೆ ಕೇಳಿದರೆ ಏನು ತಪ್ಪು?"

"ತಪ್ಪೇನಿಲ್ಲ, ಆದರೆ ಮೊದಲಿನಿಂದಲೂ ರೂಢಿ ಬಂದಿಲ್ಲ."

"ರೂಢಿ ಯಾರಿಗೆ ಬೇಕಾಗಿದೆ? ನಮ್ಮ ಕೆಲಸ ಆಗೋದು ಮುಖ್ಯ. ಈಗ ನಿಮ್ಮ ಅಭಿಪ್ರಾಯ ಏನು?"

"ಸರಸಿ ಶಾಮುವಿನ ಹೆಂಡತಿಯಾಗಲೀಂತ ನನಗೆ ಮೊದಲಿನಿಂದಲೂ ಆಸೆ ಇತ್ತು. ನಾನು ಹೇಳೋದೇನಿದೆ? ಬಡವನ ಕಾಲಿಗೆ ಕಲ್ಪವಲ್ಲಿ ತೊಡರಿ ಹಾಕಿಕೊಂಡ ಹಾಗಾಗಿದೆ."

"ಸರಸಿ ಏನಂತಾಳೋ?"

"ರಾಣಿ ಆಗ್ತೀಯಾ ಅಂದರೆ ಯಾವ ಹುಡುಗಿ ತಾನೆ ಬೇಡಾಂತಾಳೆ. ಅವಳು ದಮ್ಮಯ್ಯಾಂತ ಒಪ್ಪಿಕೊಳ್ಳುತ್ತಾಳೆ. ಮುಂದೆ ನೀವಿಬ್ಬರೂ ಸರಿ ಹೊಂದಿಕೊಂಡು ಅಕ್ಕ-ತಂಗಿಯರ ಹಾಗಿದ್ದರೆ ನನಗೂ ಸಂತೋಷ."

"ಸರಿಹೊಂದಿಕೊಂಡು ಹೋಗುವ ವಿಚಾರ ನಮಗೆ ಬಿಟ್ಟುಬಿಡಿ. ಸರಸಿ ಎಲ್ಲಿ? ಅವಳಿಗೆ ನಾನೇ ಈ ವಿಷಯ ಹೇಳ್ತೀನಿ."

"ಸರಸೀ ಸರಸಿ..."

ಬಾಗಿಲ ಹಿಂದೆಯೇ ನಿಂತು ತಾಯಿ, ಮೀರಳ ಮಾತು ಕೇಳಿಸಿಕೊಳ್ಳುತ್ತಿದ್ದ ಸರಸಿ ತಾಯಿ ಕೂಗಿದುದನ್ನು ಕೇಳಿ ಕೊಟ್ಟಿಗೆಗೆ ಓಡಿಹೋದಳು. ಅವಳ ಹೃದಯ ಸಂತೋಷದಿಂದ ಬಿರಿದುಹೋಗುತ್ತಿತ್ತು.

ಇನ್ನು ಮೇಲೆ ತಾನು ಶಾಮುವಿನ ಹೆಂಡತಿ! ಶಾಮುವಿನಂತಹ ಚೆಲುವ ತನ್ನ ಪತಿ! ಎಲ್ಲಕ್ಕಿಂತಲೂ ಮೀಗಿಲಾಗಿ ಅವನ ಐಶ್ವರ್ಯಕ್ಕೆಲ್ಲಾ ಇನ್ನು ಮುಂದೆ ತಾನು, ತನ್ನ ಮಕ್ಕಳು ಉತ್ತರಾಧಿಕಾರಿಗಳು!

ಮೀರ ತನ್ನನ್ನರಸಿ ಕೊಟ್ಟಿಗೆಗೆ ಬರುವಳೆಂಬುದು ಸರಸಿಗೆ ತಿಳಿದಿತ್ತು. ಆದುದರಿಂದ ಅವಳು ಏನೂ ಕಾಣದವಳಂತೆ ಹಸುವಿಗೆ ಹುಲ್ಲು ಹಾಕತೊಡಗಿದಳು.

"ಸರಸೀ" ಮೀರ ಕೊಟ್ಟಿಗೆಯ ಬಾಗಿಲಿನಲ್ಲಿ ನಿಂತಳು.

ಅವಳ ನಿಷ್ಕಪಟ ಮುಖ, ತುಂಬುಗಾಂಭೀರ್ಯ, ಠೀವಿ ಸರಸಿಗೆ ತುಂಬಾ ಮೆಚ್ಚುಗೆಯಾದುವು. ಆದರೆ ಈ ಮುಖವಲ್ಲವೇ ತಾನು ಮೊದಲಿನಿಂದ ಬಯಸುತ್ತಿದ್ದ ಶಾಮುವನ್ನು ತನ್ನಿಂದ ಸೆಳೆದುಕೊಂಡಿದ್ದು?

"ನಮ್ಮ ಹಳ್ಳಿಗೆ ಬರ್ತೀಯಾ ಸರಸೀ?"

"ಬಂದರೆ ಏನು ಕೊಡ್ತೀರಿ?" ಸರಸಿ ಪ್ರಶ್ನಿಸಿದಳು.

"ನಿಮ್ಮ ಶಾಮು ಮಾವನನ್ನು ನಿನಗೇ ಕೊಡ್ತೀನಿ" ಎಂದು ನಕ್ಕಳು ಮೀರಾ.

ಅವಳ ನಗುವಿನಲ್ಲಿ ಸ್ವಲ್ಪವಾದರೂ ಮತ್ಸರವಿರಲಿಲ್ಲ. ಎಳೆಯ ಮಗುವಿನ ತಿಳಿನಗೆ ಅವಳ ನಗು. ತನ್ನ ಗಂಡನನ್ನು ಮತ್ತೊಬ್ಬಳಿಗೆ ಒಪ್ಪಿಸುವ ಈ ಹೆಣ್ಣಿನ ಮನಸ್ಸು ಸರಸಿಗೆ ಅರ್ಥವಾಗಲಿಲ್ಲ.

ಶಾಮು ಮಾವ, ಅವನ ವಿಸ್ತಾರವಾದ ಎದೆ, ಉಕ್ಕಿನಂತಹ ತೋಳುಗಳು. ಆರೋಗ್ಯದಿಂದ ಕೆಂಪುಗೂಡಿದ ಚೆಲುವಾದ ಮುಖ, ಅವನ ಜಮೀನುಗಳು.

ಮುಗುಳ್ನಗೆಯಿಂದ ಸರಸಿ ಮೀರಳ ಕಡೆ ನೋಡಿ ತಲೆ ಅಲುಗಿಸಿದಳು.

* * * *

ಮೀರ, ಹಳ್ಳಿಗೆ ಹಿಂತಿರುಗಿ ಬಂದಾಗ ಪತ್ರ ಒಂದು ಅವಳ ಬರವನ್ನೇ ಎದುರು ನೋಡುತ್ತಾ ಮೇಜಿನ ಮೇಲೆ ಮಲಗಿತ್ತು. ಶಾಮು ಮನೆಯಲ್ಲಿರಲಿಲ್ಲ. ಮೀರ ಪತ್ರದ ಮೇಲೆ ಬರೆದಿದ್ದ ಅಕ್ಷರವನ್ನು ಕೂಡಲೇ ಗುರುತಿಸಿದಳು. ವಿಜಯಳ ಅಕ್ಷರವೆಂದು ತಿಳಿದ ಕೂಡಲೇ ಅತುರದಿಂದ ಪತ್ರ ಒಡೆದಳು.

"ಮೀರ,

ನಾನು ನಿನಗೆ ಯಾವತ್ತೂ ಕಾಗದ ಬರೆದಿರಲಿಲ್ಲ. ಆದರೆ ಈ ನನಗೆ ಏನು ಮಾಡುವುದಕ್ಕೂ ತೋರದಾಗಿದೆ. ಆದ್ದರಿಂದ ನಿನಗೆ ಈಗ ಕಾಗದ ಬರೆದಿದ್ದೇನೆ. ನನ್ನ ಭಾವುಕತೆ ನಿನಗೆ ಹಿಡಿಸುವುದಿಲ್ಲವೆಂದು ನನಗೆ ಗೊತ್ತು. ನಾನಾದರೂ ಏನೂ ಮಾಡಲಿ? ದೇವರು ನನ್ನ ಹೃದಯವನ್ನು ಕಲ್ಲಾಗಿ ಮಾಡಿದ್ದರೆ ಚೆನ್ನಾಗಿತ್ತು.

ಕಾಲೇಜಿಗೆ ರಜಾ ಬಂದಾಗಿನಿಂದ ನಾನು ಗೋಪಿಯನ್ನು ನೋಡಿರಲಿಲ್ಲ. ಅವರನ್ನು ನೋಡುವ, ಮಾತನಾಡಿಸುವ ಆಸೆ ದಿನದಿನಕ್ಕೆ ಉತ್ಕಟವಾಗಿ ಬೆಳೆಯಿತು. ಅದಿ ಅಂತ್ಯವಿಲ್ಲದ ಹೆಮ್ಮರವಾಯಿತು, ನನ್ನಾಸೆ.

ಒಂದು ದಿನ ಬೆಳಿಗ್ಗೆ ಗೆಳತಿಯೊಬ್ಬಳ ಮನೆಗೆ ಹೊರಟು ನಾನು ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೆ. ಆಗ ನನ್ನ ಕಿರಿಯ ತಂಗಿ ಉಷಾ ರೂಮಿಗೆ ಬಂದು, 'ಅಕ್ಕ ಯಾರೋ ಬಂದಿದಾರೆ. ಡ್ರಾಯಿಂಗ್ ರೂಮಿನಲ್ಲಿ ಕೂರಿಸಿದೀನಿ' ಎಂದಳು.

'ಯಾರದು? ಹೆಂಗಸರೇ?'

'ಅಲ್ಲ, ಯಾರೋ ನಿನ್ನ ಕ್ಲಾಸಂತೆ. ಉದ್ದವಾಗಿ ಚೆಂದಾಗಿದ್ದಾರೆ ಎಂದಳು ಆ ತುಂಟಿ. ಅವಳ ಕೆನ್ನೆಗೆ ಒಂದೇಟು ಕೊಟ್ಟು, ಡ್ರಾಯಿಂಗ್ ರೂಮಿನೊಳಗೆ ಓಡಿಹೋದೆ.

ಅಲ್ಲಿ ಕುರ್ಚಿಯ ಮೇಲೆ ಗೋಪಿ ಕುಳಿತಿದ್ದರು. ನನ್ನನ್ನು ನೋಡುತ್ತಲೆ ಎದ್ದು 'ನಮಸ್ಕಾರ' ಎಂದರು.

ನನ್ನ ತಂದೆ ಮನೆಯಲ್ಲಿರಲಿಲ್ಲ. ಅವರು ಬೆಳಿಗ್ಗೆ ಎಂಟು ಗಂಟೆಗೇ ಕೆಲಸಕ್ಕೆ ಹೊರಟುಹೋಗಿದ್ದರು. ಹನ್ನೆರಡು ಗಂಟೆಯವರೆವಿಗೆ ಅವರು ಬರುವುದಿಲ್ಲವೆಂಬುದು ನನಗೆ ತಿಳಿದಿತ್ತು.

'ಉಷಾ ಓವಲ್ಟೀನ್ ಮಾಡಿಸಿಕೊಂಡು ಬಾಮ್ಮ' ಎಂದು ತಂಗಿಗೆ ಕೂಗಿ ಹೇಳಿ, ಎದುರಿಗಿದ್ದ ಕುರ್ಚಿಯ ಮೇಲೆ ಕುಳಿತೆ.

'ನಾನೇನು ಈಗ ನಿನ್ನ ಹತ್ತಿರ ಬರಲಿಲ್ಲ. ಅಲ್ವೇ?'

'ಯಾಕೆ ನಾನು ಆಶ್ಚರ್ಯದಿಂದ ಕೇಳಿದೆ.

ಅವರು ಮಾತನಾಡದೇ ತಮ್ಮ ಕೆನ್ನೆಯನ್ನು ಮುಟ್ಟಿತೋರಿಸಿದರು.

'ನನ್ನ ಆಸೆ ನಿಮಗೆ ಹೇಗೆ ತಿಳಿಯಿತು?' ನಾನು ಕೇಳಿದೆ.

'ಇಬ್ಬರ ಆಸೆಯೂ ಒಂದೇ. ಆದ್ದರಿಂದ ತಿಳಿಯಿತು.'

'ಅಬ್ಬ! ನಿಮಗಿಲ್ಲಿ ಬರೋಕೆ ಎಷ್ಟು ಧೈರ್ಯ. ಯಾವ್ನೋನೋ ಪುಂಡ ಬಂದು ಸತಾಯಿಸುತ್ತಿದ್ದಾನೇಂತ ಅಮ್ಮನಿಗೆ ಹೇಳಿ ನಿಮ್ಮನ್ನು ಹೊರಕ್ಕೆ ದಬ್ಬಿಸ್ತೇನೆ.'

'ಹಾಗೇ ಆಗಲಿ, ನಾನು ಸಿದ್ಧ' ಎಂದರು ಅವರು, ನನ್ನ ಹವಳದ ಸರ ನೋಡುತ್ತಾ.

'ನೀವು ಸುಮ್ಮನೆ ನನ್ನ ಸರ ಯಾಕೆ ನೋಡುತ್ತೀರಿ! ನಾನೂ ಗಮನಿಸಿದೀನಿ, ನೀವು ಯಾವಾಗ಼್ೂ ನನ್ನ ಸರನೇ ನೋಡುತ್ತಿರುತ್ತೀರಿ ಯಾಕೆ?'

'ನಾನೇ ಆ ಸರ ಆಗಿದ್ದಿದ್ದರೇಂತ.......'

ಉಷಾ ಓವಲ್ಟೀನ್ ತಂದಿರಿಸಿ ಹೋದಳು. ನಾನು ಕಪ್ಪನ್ನು ಅವರ ಮುಂದಿಟ್ಟು, 'ತಗೋಳಿ' ಎಂದೆ.

ಅವರು ಕುಡಿದ ಬಟ್ಟಲನ್ನು ಕೆಳಗಿರಿಸಿ 'ನಾನಿನ್ನು ಬರ್ತೀನಿ' ಎಂದರು.

"ನೀವು ಬಂದಿದ್ದು ಯಾಕೆ?'

'ನಿನ್ನ ನೋಡಬೇಕೆನಿಸಿತು ಬಂದೆ.'

'ಇಲ್ಲಿಗೆ ಬಂದರೆ ನಮ್ಮ ಮನೇಲಿ ನಮ್ಮ ತಂದೆ ಏನಾದರೂ ಅನ್ನಬಹುದು ಎನಿಸಲಿಲ್ಲವೇ?'

'ಹೂಂ. ಆದರೆ ಎಲ್ಲಕ್ಕಿಂತಲೂ ನಿನ್ನ ನೋಡುವ ಆಸೆ ಬಲವಾಗಿತ್ತು. ನಿಮ್ಮ ತಂದೆ ಬಹಳ ಹಳೆಯ ಕಾಲದವರ ತರಹವೇನು?'

'ಸುಮಾರಾಗಿ ಹಳೆಯ ಕಾಲದವರು. ನಾನು ನಿಮ್ಮೊಡನೆ ಮಾತುಕತೆ ಆಡ್ತೀನೆಂದು ತಿಳಿದರೆ ನನ್ನ ಸಿಗಿದುಬಿಡ್ತಾರೆ.'

'ನನ್ನ ಜೊತೆ ಬರೀ ಮಾತುಕತೆಯೇ? ಇನ್ನೇನು ಇಲ್ಲವೇ?'

'ಇನ್ನೇನೂ ಇಲ್ಲ.'

'ವಿಜಯ್, ನೀನೊಬ್ಬ ಸುಂದರ ಸುಳ್ಳುಗಾತಿ.'

'ಹಾಗೆಲ್ಲಾ ಮಾತನಾಡಬೇಡಿ. ನನಗೆ ತುಂಬಾ ಕಷ್ಟ ಆಗುತ್ತೆ.'

'ಕಷ್ಟ ಯಾಕೆ?'

ನಾನು ಕೊರಳಿನಲ್ಲಿದ್ದ ಹವಳದ ಸರವನ್ನು ತೋರಿಸಿ, 'ಈ ಸರಕ್ಕೆ ನಿಮ್ಮ ತೋಳ ಹಾರ....' ಎನ್ನುವಷ್ಟರಲ್ಲಿ ಅವರು ಎದ್ದು ನಿಂತು.

'ನಿನ್ನಾಸೆಯನ್ನು ಪೂರಯಿಸಿ ಬಿಡುತ್ತೇನೆ ಎನ್ನುತ್ತಾ ಹತ್ತಿರ ಬಂದರು.

ಅಷ್ಟರಲ್ಲಿ ಉಷಾ ಒಳಗೆ ಬಂದು ಅವರು ಕುಡಿದಿರಿಸಿದ್ದ ಬಟ್ಟಲನ್ನು ಎತ್ತಿಕೊಂಡು ಮತ್ತೆ ಹೊರಗೆ ಹೋದಳು.

'ನಿಮ್ಮ ಸಾಹಸ ಈಗ ಬೇಡ' ಎಂದೆ ನಾನು.

'ಮತ್ತೆ ಯಾವಾಗ?'

'ಕೃಪೆ ಒದಗಿ ಬಂದಾಗ.'

ಅವರು ಒಂದು ಗಳಿಗೆ ಯೋಚಿಸುತ್ತಾ ನಿಂತು ಅನಂತರ 'ಬರ್ತೀನಿ, ಆದರೆ ನಿನ್ನ ನೋಡಬೇಕೆನಿಸಿದಾಗ ಯಾರ ಹೆದರಿಕೆಯೂ ನನ್ನನ್ನು ಹಿಡಿದು ನಿಲ್ಲಿಸಲಾರದು' ಎಂದು

*ಹೇಳಿ ಹೊರಟುಹೋದರು.*

*ಅವರಿಗೆ 'ಬರಬೇಡಿ, ನಮ್ಮ ತಂದೆ ಬೆಂಕಿಯಂಥ ಮನುಷ್ಯರು' ಎಂದು ನಾನು ಹೇಗೆ ಹೇಳಲಿ, ಮೀರಾ? ನನ್ನ ಕಾಲ ಮೇಲೆ ನಿಲ್ಲಲು ಇನ್ನೂ ಎರಡು ವರ್ಷಗಳಿವೆ. ಅವರೂ ಒಂದು ವರ್ಷ ವಿದ್ಯಾರ್ಥಿಯಾಗಿರಬೇಕು. ನನ್ನ ಸರ್ವಸ್ವಕ್ಕೆ 'ಬರಬೇಡಿ' ಎಂದು ಹೇಗೆ ಹೇಳಲಿ? ನಮ್ಮ ತಂದೆ ಇರುವಾಗ ಅವರು ಬಂದರೆ ದೊಡ್ಡ ಹಗರಣವೇ ನಡೆದುಹೋಗುತ್ತದೆ. ಈಗಲೇ ಬಿರುಗಾಳಿ ಎಬ್ಬಿಸಲು ನನಗಾಸೆಯಿಲ್ಲ. ನಮ್ಮ ತಾಯಿ ಅವರು ಹೋದಮೇಲೆ ಅನುಮಾನದಿಂದ ಎರಡು ಮೂರು ಬಾರಿ ಅವರ ವಿಷಯವಾಗಿ ಕೇಳಿದರು. ಅವರು ಬರಲಿ ಎಂದು ನನಗೆ ಎಷ್ಟು ಆಸೆಯಿದೆಯೋ, ಅಷ್ಟೇ ಹೆದರಿಕೆಯಿದೆ. ನೀನಾದರೂ ನನಗೆ ಮಾರ್ಗ ತೋರಿಸಲಾರೆಯಾ?*

*ನಿನ್ನ*
*ವಿಜಯ"*

ವಿಜಯಳ ಪತ್ರ ಮುಗಿಸಿ ಮೀರ ತನಗೆ ತಾನೇ ಹೇಳಿಕೊಂಡಳು.

"ಗೋಪಿಯೊಬ್ಬ ಹುಚ್ಚುಹುಡುಗ. ಯಾವ ಗಳಿಗೇಲಿ ನಾನು ಅವರಿಬ್ಬರಿಗೂ ಪರಿಚಯ ಮಾಡಿಸಿದೆನೋ?"

ಕೂಡಲೇ ಅವಳು ವಿಜಯಳಿಗೆ ಪತ್ರಬರೆದಳು:

*"ವಿಜಯ,*

*ಗೋಪಿಯಿಂದ ತಪ್ಪಿಸಿಕೊಳ್ಳಲು ನಿನಗೊಂದು ಮಾರ್ಗವಿದೆ. ಕಾಲೇಜು ಬಾಗಿಲು ತೆಗೆಯುವ ತನಕ ಪೂನಾಕ್ಕೆ ಹೋಗಿಬಿಡು. ಅವನು ನಿನಗಾಗಿ ಪೂನಾಗೆ ಬರಲಾರ. ಬಂದರೂ ನಿನ್ನ ವಿಳಾಸ ಅವನಿಗೆ ಹೇಗೆ ತಿಳಿಯಬೇಕು? ಈಗಲೇ ಅಸಮಾಧಾನದ ಹೊಗೆ ಎಬ್ಬಿಸುವುದು ಜಾಣತನ ಅಲ್ಲ. ನಿಮ್ಮಿಬ್ಬರ ಕೋರ್ಸ್ ಮುಗಿಯುವವರೆಗೆ ಯಾವ ವಿಚಾರಕ್ಕೂ ಎಡೆಬೇಡ. ನಿನ್ನ ಕೆನ್ನೆ, ತುಟಿ ಸುರಕ್ಷಿತವಾಗಿವೆಯೆಂದು ನಂಬಿದ್ದೇನೆ. ನಿನ್ನ ಮುಂದಿನ ಪತ್ರ ಪೂನಾದಿಂದ ನಿರೀಕ್ಷಿಸಬಹುದೇ?*

*ಮೀರ"*

ಕಾಗದ ಬರೆದು ಮುಗಿಸಿ ಮೀರ ಅದನ್ನು ಬೋರನ ಕೈಲಿ ಪೋಸ್ಟಿಗೆ ಹಾಕಿಸಿ ನಿಶ್ಚಿಂತಳಾದಳು. ಸಂಜೆ ಶಾಮು ಮನೆಗೆ ಬಂದಾಗ ಮೀರ ತಾನು ತಂದಿದ್ದ ಶುಭ ಸಮಾಚಾರವನ್ನು ಶಾಮುವಿಗೆ ತಿಳಿಸಿದಳು. ಅವಳು ಹೇಳಿದುದನ್ನು ಕೇಳಿ ಶಾಮು ನಿರ್ವಿಕಾರಚಿತ್ತನಾಗಿ ನುಡಿದ.

"ಸರಿ, ನೀರೊಳಗೆ ಬಿದ್ದಾಯಿತು. ಇನ್ನು ಮುಳುಗುವುದೂ ತೇಲುವುದೂ ಅವರವರ ಬಲವನ್ನವಲಂಬಿಸಿದೆ."

"ಏನೋ ಆಗಬಾರದ್ದು ಆಗಿಹೋಗಿದೆ ಎನ್ನುವ ಹಾಗೆ ಆಡ್ತೀರಲ್ಲಾ." ಎಂದು ಮೀರ ಗದರಿಸಿದಳು.

ಶಾಮುವಿನ ಮರುಮದುವೆ ನಿರಾಡಂಬರವಾಗಿ, ಸರಳವಾಗಿ ನಡೆಯಿತು. ಎರಡನೆಯ ಬಾರಿ ಕಂಕಣ ಧರಿಸಿ ಮದುವಣಗನಾಗಿದ್ದ ಶಾಮು ಮದುವೆಯಲ್ಲಿ ಯಾವ ಉತ್ಸಾಹವನ್ನೂ ತೋರಿಸಲಿಲ್ಲ. ಈ ಮದುವೆ ತನ್ನ ಸೋಲು ಎಂದು ನುಡಿಯುತ್ತಿತ್ತು ಅವನ ಮನಸ್ಸು. ಪುರೋಹಿತರು ಹೇಳಿದಂತೆ ಶಾಮು ಯಾಂತ್ರಿಕ ವಾಗಿ ತನ್ನ ಕೆಲಸಗಳನ್ನು ಮುಗಿಸಿದ.

ಶಾಮುವಿನ ಔದಾಸೀನ್ಯ ಸರಸಿಯನ್ನು ಕೆರಳಿಸಿತ್ತು. ಶಾಮುವಿಗದು ಎರಡನೆ ಮದುವೆಯಾದರೂ ಸರಸಿಗದು ಮೊದಲ ಮದುವೆ ಎಂಬುದನ್ನು ಶಾಮು ಮರೆತಂತಿತ್ತು. ತಾಳಿ ಕಟ್ಟುವಾಗ, ಕೈ ಹಿಡಿದು 'ಸಪ್ತಪದಿ' ನಡೆಯುವಾಗ, ಕುಂಕುಮ, ಗಂಧ ಬಳಿಯುವಾಗ ಶಾಮು ಒಂದು ಬಾರಿಯಾದರೂ ಮುಖದಲ್ಲಿ ಉಲ್ಲಾಸ ತೋರಿಸಲಿಲ್ಲ. ತನ್ನಲ್ಲಿರುವ ಉತ್ಸಾಹ, ಹುಮ್ಮಸ್ಸು ಅವನಲ್ಲಿಲ್ಲವೆಂದು ತಿಳಿದು ಸರಸಿಯ ಆಸೆಗಳೆಲ್ಲಾ ಮಂಕಾದವು.

ಮೀರಳನ್ನು ಮದುವೆಯಾಗುವಾಗ ಅವನಿಗೆ ಅದೆಷ್ಟು ಉತ್ಸಾಹವಿತ್ತು. "ಮೀರ" ಎಂಬ ನುಡಿ ಕಿವಿಗೆ ಬಿದ್ದರೆ ಸಾಕು ಶಾಮುವಿನ ಮುಖ ಹಸಿರು ಹುಲ್ಲುಕಂಡ ಕರುವಿನಂತಾಗಿಬಿಡುತ್ತಿತ್ತು. ಅವಳ ಮದುವೆಯಲ್ಲಿ ತನ್ನ ತಾಯಿಯೇ ಶಾಮುವಿನ ತಾಯಿಯ ಒಡವೆಗಳಿಂದ ಮೀರಳನ್ನು ಅಲಂಕರಿಸಿದ್ದರು. ಆ ಒಡವೆಗಳೆಲ್ಲಾ ಏನಾದವೊ? ಅವುಗಳಲ್ಲಿ ತನಗೆ ಏನೇನೂ ಪಾಲಿಲ್ಲವೇ?

ಧಾರೆಗೆ ಮುಂಚೆ ಮೀರಳೇ ಸರಸಿಯ ಬಳಿಗೆ ಬಂದು, ಅವಳ ಕೈಗಳಿಗೆ ಒಂದು ಜೊತೆ ಚಿನ್ನದ ಬಳೆ, ಕೊರಳಿಗೆ ಎರಡೆಳೆಯ ಚೈನು ಹಾಕಿಹೋಗಿದ್ದಳು.

"ಉಳಿದ ಒಡವೆಗಳೆಲ್ಲಾ ಏನಾದವು?" ಎಂದು ಕೇಳುವ ಆತುರವಾಯಿತು ಸರಸಿಗೆ ಅವಳು ಕಷ್ಟಪಟ್ಟು ತನ್ನ ನಾಲಿಗೆಯನ್ನು ಬಿಗಿಹಿಡಿದಳು.

ಧಾರೆ ಮುಗಿಯಿತು. ತನ್ನ ಮದುವೆ ಆಗುವಾಗಲೂ ಶಾಮುವಿನ ಕಣ್ಣುಗಳು ಎದುರಿಗೆ ಕುಳಿತಿದ್ದ ಸರಸಿಯ ಮೇಲಿರಲಿಲ್ಲ. ಮದುವೆಯ ಚಪ್ಪರದಲ್ಲಿ ಉತ್ಸಾಹದ ಸೋಗು ಹಾಕಿ, ತುಟಿಗಳಿಗೆ ನಗುವಿನ ಬಣ್ಣಮೆತ್ತಿಕೊಂಡು ಓಡಾಡು ತ್ತಿದ್ದ ಮೀರಳನ್ನು ಅವಳ ಕಣ್ಣುಗಳು ಅನುಸರಿಸುತ್ತಿದ್ದವು. ಸರಸಿ ಒಂದೆರಡು ಬಾರಿ ಶಾಮುವಿನ ಕಡೆ ಓರೆನೋಟ ಬೀರಿದಾಗ ಅವನು ಮೀರಳನ್ನು ನೋಡುತ್ತಿರು ವುದನ್ನರಿತು ಕುಪಿತಳಾದಳು.

ಮೀರಳಿಗೆ ತನ್ನ ಮದುವೆಯಲ್ಲಿ ನಿಜವಾಗಿಯೂ ಉತ್ಸಾಹ ಇದೆಯೋ

ಇಲ್ಲವೋ ಎಂಬುದನ್ನು ಪರೀಕ್ಷಿಸಲು ಶಾಮು ಅವಳನ್ನೆ ನೋಡುತ್ತಿದ್ದ.

ಶಾಮುವಿನ ಮರುಮದುವೆ ತನ್ನ ಸೋಲು ಎಂದು ಮೀರಳಿಗೂ ತಿಳಿದಿತ್ತು. ಮೇಲೆ ಅವಳೇ ಗೆದ್ದಿರುವಂತೆ ತೋರುತ್ತಿದ್ದರೂ, ಅಂತರಂಗದಲ್ಲಿ ಅವಳೇ ಸೋತಿದ್ದಳು. ವಿಧಿಯಿಲ್ಲದೇ ಮೀರ ತನ್ನ ಸೋಲನ್ನು ಸ್ವಾಗತಿಸಿದ್ದಳು. ಶಾಮು ಸರಸಿಯ ಕೊರಳಿಗೆ ತಾಳಿ ಕಟ್ಟುವಾಗ ಅವಳ ಮನಸ್ಸು ಒಂದೇ ಒಂದು ಕ್ಷಣ ಚುರುಕ್ಕೆಂದಿತು.

ರಾತ್ರಿ ಮಲಗುವ ಮನೆಯನ್ನು ಮೀರ ತಾನೆ ಶೃಂಗರಿಸಿದ್ದಳು. ಮೀರ, ಶಾಮು ಮಲಗುತ್ತಿದ್ದ ರೂಮು ಇಂದು ವಧೂವರರ ಶಯ್ಯಾಗೃಹವಾಗಿತ್ತು. ಮೀರಳ ಕೈವಾಡದಿಂದ ಹಾಸಿಗೆ ಹೂವಿನ ಹಾಸಿಗೆಯಾಗಿತ್ತು. ಮೀರ ಸರಸಿಯನ್ನು ತಾನೇ ಕರೆದುಕೊಂಡು ಬಂದು ಶಾಮುವಿಗೊಪ್ಪಿಸಿದಳು.

"ನಮ್ಮ ಹುಡುಗೀನ ನಿಮಗೊಪ್ಪಿಸಿದ್ದೀನಿ" ಎಂದವಳು ನಕ್ಕು ಹೇಳುವಾಗ ಶಾಮು ಮೀರಳ ಮುಖವನ್ನೇ ನೋಡುತ್ತಿದ್ದ. ಸರಸಿ ಅಲ್ಲಿರದಿದ್ದರೆ ಶಾಮು ಮೀರಳನ್ನೇ ಹೂವಿನ ಹಾಸಿಗೆಯ ಬಳಿ ಎಳೆದುಕೊಂಡು ಹೋಗುತ್ತಿದ್ದ. ಅವನ ಅಂತರಂಗ ಕಣ್ಣುಗಳಲ್ಲಿ ಸ್ಪಷ್ಟವಾಗಿ ಮೂಡಿತ್ತು. ಇನ್ನೊಂದು ಗಳಿಗೆ ತಾನಿಲ್ಲಿ ನಿಂತರೂ ಈ ವಕ್ರಗಂಡ ತನ್ನನ್ನೇ ರೂಮಿನೊಳಗೆಳೆದುಕೊಂಡು ಹೋಗಬಹು ದೆನಿಸಿತು ಮೀರಳಿಗೆ. ಮೀರ ಅಲ್ಲಿಂದ ಜಾಗ್ರತೆಯಾಗಿ ಬೇರೊಂದು ಕೊಠಡಿಗೆ ಹೋಗಿ ಕುಳಿತಳು.

ಕಾರಣವಿಲ್ಲದೆ ಅವಳ ಮನಸ್ಸು ವ್ಯಗ್ರಗೊಂಡಿತ್ತು. ತಾನು ಶಾಮುವನ್ನು ಪ್ರೀತಿಸುವುದಿಲ್ಲ. ಆದುದರಿಂದ ಅವರು ಬೇರೊಂದು ಮದುವೆಯಾದರೂ ಅವರಿಂದ ತನಗೇನೂ ಹಾನಿಯಾಗಲಾರದು ಎಂದವಳು ಭಾವಿಸಿದ್ದಳು. ಶಾಮು ಹತ್ತು ಮದುವೆಯಾದರೂ ತನ್ನ ಮನಸ್ಸು ಅಣುಮಾತ್ರವೂ ಚಲಿಸುವುದಿಲ್ಲವೆಂದು ಮೀರ ಬಾವಿಸಿದ್ದಳು. ಆದರೆ ಈ ದಿನ ತನ್ನ ಮನಸ್ಸೇಕೆ ಖಿನ್ನವಾಗಬೇಕು?

ಮೀರ ಲಾಂದ್ರವನ್ನು ದೊಡ್ಡದು ಮಾಡಿ ಬೀರುವಿನಿಂದ "ಅನಾಟಮಿ" ಯನ್ನೆಳೆದುಕೊಂಡಳು. ಮನಸ್ಸಿನ ಅಸ್ಥಿರತೆ ಮಾಯವಾಗಿ, ಮೀರ ಅನಾಟಮಿಯಲ್ಲಿ ಸಂಪೂರ್ಣ ಮಗ್ನಳಾದಳು.

ಬೆಳಿಗ್ಗೆ ಆರು ಗಂಟೆಗೆ ಶಾಮು ಬಂದು ಅವಳ ಕೈಯಿಂದ ಪುಸ್ತಕ ಕಸಿದು ಕೊಂಡಾಗ, ಮೀರ ಬೆಚ್ಚಿ ಶಾಮುವಿನ ಕಡೆ ನೋಡಿದಳು. ಬಲವಂತದ ನಗುವಿನಿಂದ ಅವಳ ತುಟಿಗಳು ಅರಳಿದವು.

"ರಾತ್ರಿಯೆಲ್ಲಾ ಮಲಗಲೇ ಇಲ್ಲವೇನು?"

"ಯಾಕೋ ನಿದ್ದೆ ಬರಲಿಲ್ಲ. ಓದುತ್ತಾ ಕುಳಿತುಬಿಟ್ಟೆ. ಸರಸಿ ಎಲ್ಲಿ?"

"ಇನ್ನೂ ನಿದ್ದೆ ಮಾಡ್ತಿದಾಳೆ. ನನಗೆ ಬೇಗ ಎಚ್ಚರವಾಗಿ ಹೋಯಿತು."

"ರಾತ್ರಿಯೆಲ್ಲಾ ಜಾಗರಣೆ ಮಾಡ್ಲಿಲ್ಲ ತಾನೆ?" ಮೀರ ಕೊಂಕುನಗೆ ಬೀರಿದಳು.

"ನಾನೇನು ಹೊಸ ಮದುವಣಿಗ ಅಲ್ಲವಲ್ಲ. ನೀನು ಯಾಕೆ ನಿದ್ದೆ ಮಾಡಲಿಲ್ಲ? ಹೇಳು."

"ನನಗೆ ನಿದ್ದೆಬರಲಿಲ್ಲ. ಸರಸಿ ಎಂತಹ ಹುಡುಗಿ?"

"ಒಳ್ಳೆಯ ಹುಡುಗಿ. ನಾನು ಹೇಳಿದ ಹಾಗೆ ಕೇಳ್ತಾಳೆ. ನಿನ್ನ ಹಾಗೆ ಅವಳು ಹಠಮಾರಿಯಲ್ಲ, ಮೊಂಡಿಯಲ್ಲ, ಹೆಡ್ಡಿಯಲ್ಲ, ಮೂರ್ಖಿಳಲ್ಲ....."

ಮೀರಳಿಗೆ ಅದುಮಿ ಹಿಡಿದಿದ್ದ ಅಳು ಉಕ್ಕಿ ಬಂತು. ಅವಳ ಕಣ್ಣುಗಳಲ್ಲಿ ಗಂಗೆ ಯಮುನೆ ಅವತರಿಸಿದರು. ಶಾಮು ಮೀರಳನ್ನು ಕೀಟಲೆ ಮಾಡಲು ಯತ್ನಿಸಿದ್ದ. ಆದರೆ ತನ್ನ ಕೀಟಲೆ ಅವಳನ್ನು ಅಳಿಸುತ್ತದೆ ಎಂದವನು ತಿಳಿದಿರಲಿಲ್ಲ. ಮೀರ ಅಳಲು ಮೊದಲು ಮಾಡುತ್ತಲೇ, ಶಾಮು ರೂಮಿನ ಬಾಗಿಲನ್ನು ಹಾಕಿ ಅವಳ ಬಳಿಗೆ ಬಂದು.

"ಮೀರಾ, ನೀನೇ ಗೆದ್ದಿರುವೆ. ಆದರೂ ಯಾಕೆ ಅಳುತ್ತೀಯ?" ಎಂದ.

"ಉಹೂಂ, ಸೋತಿರುವವಳು ನಾನೆ. ನಿಮ್ಮನ್ನು ಅಗ್ಗವಾಗಿ ಮಾರಿಬಿಟ್ಟೆ."

"ನನ್ನ ಬೆಲೆ ಎಷ್ಟು ಗೊತ್ತೆ? ಒಂದೇ ಒಂದು ಸಿಹಿ ಮುತ್ತು."

"ಸರಸಿ ನಿಮಗೆ ಸಾಕಷ್ಟು ಕೊಡಲಿಲ್ಲವೇನೋ?"ಮೀರ ಕಂಬನಿ ಒರೆಸಿಕೊಂಡು ಕೇಳಿದಳು.

ಶಾಮು ಮೀರಳ ಹಾಸಿಗೆಯನ್ನು ಹಾಸಿ, ಲಾಂದ್ರವನ್ನು ಊದಿ ಆರಿಸಿ,

"ಮೀರ, ಈಗ ನಿದ್ದೆ ಮಾಡು. ನಾನೇನೂ ನಿನ್ನ ದ್ವೇಷಿಸುವುದಿಲ್ಲ. ಅದು ನಿನಗೆ ತಿಳಿದಿದೆ ತಾನೇ?" ಎಂದ.

ಮೀರ ಹಾಸಿಗೆ ಮೇಲೆ ಮಲಗಿ 'ಊ' ಎಂದಳು.

"ಹನ್ನೆರಡು ಗಂಟೆಯವರೆವಿಗೆ ಮಿಸುಕಾಡಬಾರದು" ಎನ್ನುತ್ತಾ ಶಾಮು ಕುರ್ಚಿಯ ಮೇಲೆ ಕುಳಿತ.

"ನೀವು?"

"ನಿನಗೆ ನಿದ್ದೆ ಬರುವವರೆಗೆ ನಾನಿಲ್ಲೇ ಇರ್ತೀನಿ. ಆಮೇಲೆ ನಾನು ಎದ್ದು ಹೋದರೆ ನೀನು ಪುಸ್ತಕ ಹಿಡಿಯುತ್ತಿಯೇನೋ?" ಎಂದ ಶಾಮು.

ಐದು ನಿಮಿಷಗಳಲ್ಲಿ ಮೀರಳಿಗೆ ನಿದ್ದೆ ಬಂತು. ಶಾಮು ಅವಳನ್ನೇ ನೋಡುತ್ತಾ ಕುಳಿತಿದ್ದ. ಅವನ ಮುಖ ಅನೇಕ ಭಾವನೆಗಳ ರಣರಂಗವಾಗಿತ್ತು.

ಮೀರ ನಿದ್ರಿಸಿದ ಮೇಲೆ ರೂಮಿನ ಬಾಗಿಲನ್ನು ಮೆಲ್ಲನೆ ಮುಂದಕ್ಕೆಳೆದು ಕೊಂಡು ಶಾಮು ಹೊರಗೆ ಬಂದ. ಸರಸಿ ಶಾಮು ಬರುವುದನ್ನೇ ನೋಡುತ್ತಾ ಹಾಲಿನಲ್ಲಿ ಕುಳಿತಿದ್ದಳು.

ಹೊಸ ಹೆಂಡತಿ ಬಂದಿರುವಾಗಲೂ ಇವರು ಮೊದಲ ಹೆಂಡತಿಯನ್ನು ಒಂದು ದಿನದ ಮಟ್ಟಿಗಾದರೂ ಬಿಡಲಾರರೇ? ಸರಸಿಯ ಕಣ್ಣುಗಳಲ್ಲಿ ಅಸಮಾಧಾನವಿತ್ತು. ತನ್ನ ಬಾಹುಬಂಧನವನ್ನು ಮೆಲ್ಲನೆ ಅವರು ಬಿಡಿಸಿಕೊಂಡಾಗಲೇ ತನಗೆ ಎಚ್ಚರವಾಗಿತ್ತು. ದಾಂಪತ್ಯ ಜೀವನದಲ್ಲಿ ಮೀರ ಸೋತು ತನಗೆ ಶರಣಾಗತಳಾಗಿದ್ದಾಳೆ ಎಂದು ನನ್ನ ಭಾವನೆ. ಆದರೆ ಈಗ ತನಗೆ ತೋರತೊಡಗಿತ್ತು 'ಅವಳು ಸೋತಿಲ್ಲ, ತನ್ನ ಪ್ರತಿಸ್ಪರ್ಧಿ' ಎಂದು. ಈ ಗಳಿಗೆಗೂ, ಇನ್ನೊಂದು ಗಳಿಗೆಗೂ ಪತಿಯ ಒಲವು ಅವಳ ಕಡೆಗೇ ಹರಿಯುತ್ತಿದೆ. ಹಾಗಾದರೆ ಈ ಮನೆಯಲ್ಲಿ ತನ್ನ ಸ್ಥಾನವಾದರೂ ಏನು?

ಶಾಮು ಸರಸಿಯ ಮುಖ ನೋಡಿ ನಸುನಕ್ಕು, "ಆಗಲೇ ಎಚ್ಚರವಾಗಿ ಹೋಯಿತೇ?" ಎಂದ.

ಸರಸಿ ತನ್ನ ಅಸಮಾಧಾನ ಅವನಿಗೆ ತಿಳಿಯಬಾರದೆಂದು ಬೇರೆಕಡೆ ತಿರುಗಿ "ಹೂಂ" ಎಂದಳು.

ಅದೇ ದಿನ ಮಧ್ಯಾಹ್ನದ ಬಸ್ಸಿಗೆ ಸರಸಿಯ ತಾಯಿ, ತಂದೆ ತಮ್ಮ ಹಳ್ಳಿಗೆ ಹೊರಟುಹೋದರು. ಅವರು ಬಸ್ಸಿಗೆ ಹೊರಟು ನಿಂತಾಗಲೂ ಮೀರಳಿಗೆ ಎಚ್ಚರವಿರಲಿಲ್ಲ. ರಾತ್ರಿಯೆಲ್ಲಾ ನಿದ್ದೆ ಮಾಡದಿದ್ದರಿಂದ ಮೀರ ಗಾಢ ನಿದ್ರೆಯಲ್ಲಿದ್ದಳು.

ತನ್ನ ತಾಯಿ, ತಂದೆ ಹೊರಟು ನಿಂತಾಗ ಸರಸಿ ಮುಚ್ಚಿದ ಬಾಗಿಲಿನ ಕಡೆ ನೋಡಿ:

'ಎಲ್ಲಾ ಬರೀ ಬೂಟಾಟ. ನಮ್ಮ ತಾಯಿ ತಂದೆಯನ್ನು ಕಳಿಸಿಕೊಡೋಕೆ ಎಚ್ಚರವಾಗದಷ್ಟು ನಿದ್ದೆಯೇ? ಅಹಂಕಾರ' ಎಂದು ಮನಸ್ಸಿನಲ್ಲಿಯೇ ಹೇಳಿಕೊಂಡಳು.

ಸಾವಿತ್ರಮ್ಮ ಶಾಮುವಿಗೆ "ಬರ್ತೀನಿ ಶಾಮಣ್ಣ, ಇನ್ನು ಸರಸಿಯ ಸುಖ ದುಃಖ ನಿಮಗೇ ಸೇರಿದ್ದು. ಅವಳು ದುಡುಕಿದರೆ ನೀನು, ಮೀರ ಕ್ಷಮಿಸಬೇಕು. ಮೀರಾ ಎಲ್ಲಿ? ಅವಳಿಗೆ ಹೇಳಿಹೋಗಬೇಕು...."

"ಮೀರ ನಿದ್ದೆ ಮಾಡ್ತಿದಾಳೆ. ನಾನೇ ಅವಳಿಗೆ ಹೇಳುತ್ತೇನೆ."

"ಹುಷಾರಾಗಿದಾಳೆ ತಾನೆ?"

"ಹೂಂ, ಏನೋ ಮದುವೆ ಗದ್ದಲದಲ್ಲಿ ಎರಡು ದಿನ ಚೆನ್ನಾಗಿ ನಿದ್ದೆ ಬರಲಿಲ್ಲವಂತೆ, ಪರವಾಗಿಲ್ಲ, ನಿಮ್ಮ ಪರವಾಗಿ ನಾನೇ ಅವಳಿಗೆ ಹೇಳುತ್ತೇನೆ."

ಸರಸಿಗೆ ಗಂಡನ ಮೇಲೂ ಕೋಪ ಬಂತು.

ಮೀರಳನ್ನು ಎಬ್ಬಿಸಬಾರದೆ? ಅವಳ ನಿದ್ದೆ ಅಷ್ಟೊಂದು ಅಮೂಲ್ಯವೇ? ಸಾವಿತ್ರಮ್ಮ, ಸೀನಪ್ಪ ಹೊರಟುಹೋದರು. ಸರಸಿಗೆ ಒಂದೇ ಕಡೆ ಕುಳಿತು ಬೇಸರವಾಯಿತು. ತಾಯಿಯ ಮನೆಯಲ್ಲಿದ್ದಂತೆ ಇಲ್ಲಿ ಅವಳಿಗೆ ಮನೆಗೆಲಸಗಳಿರಲಿಲ್ಲ. ಪ್ರತಿಯೊಂದು ಕೆಲಸವನ್ನೂ ಇತರರು ಮಾಡುತ್ತಿದ್ದರು. ಸರಸಿ ರೂಮಿನ ಕಿಟಕಿಯಿಂದ ಹೊರಗೆ ನೋಡುತ್ತಾ ಕುಳಿತಳು. ಶಾಮು ಅತ್ತೆ, ಮಾವನನ್ನು ಕಳುಹಿಸಿ ಒಳಗೆ ಬಂದ. ಗಂಡ ಒಳಗೆ ಬಂದೊಡನೆ ಸರಸಿ ಎದ್ದುನಿಂತಳು. ಶಾಮು ಅವಳ ಪಕ್ಕದಲ್ಲಿ ಕುಳಿತು ಹೇಳಿದ,

"ಸರಸೀ, ನಾನು ನಿನಗೆ ಒಂದು ಮಾತು ಹೇಳಬೇಕೆಂದಿದ್ದೇನೆ. ಮೀರಳ ಮನಸ್ಸು ನೋಯಿಸದಂತೆ ನೀನು ಎಚ್ಚರವಾಗಿರು."

"ನಾನೇನೂ ಈಗ ಅವರನ್ನು ನೋಯಿಸಿಲ್ಲವಲ್ಲಾ."

"ನಾನು ಈಗಿನ ಮಾತು ಹೇಳಲಿಲ್ಲ. ಮೀರ ಬಹಳ ನೊಂದಿದ್ದಾಳೆ. ಮೇಲೆ ನಗುತ್ತಿದ್ದರೂ ಅವಳು ಜಾನೀನ ಕಳೆದುಕೊಂಡಾಗಿನಿಂದಲೂ ಸುಖವಾಗಿಲ್ಲ. ನೀವಿಬ್ಬರೂ ಅನ್ಯೋನ್ಯವಾಗಿರಬೇಕೆಂದು ನನ್ನಾಸೆ."

"ನಾನೇನೂ ಜಗಳಗಂಟಿಯಲ್ಲ."

"ಏನೇ ಹುಡುಗಿ, ಈಗಲೇ ನನ್ನ ಕೈಲಿ ಜಗಳಕ್ಕೆ ಶುರುಮಾಡಿಬಿಟ್ಟೆ" ಎನ್ನುತ್ತಾ ಶಾಮು ಸರಸಿಯ ಕೆನ್ನೆಗೆ ಮೃದುವಾಗಿ ಹೊಡೆದು ಹೊರಗೆಬಂದ.

ಮೀರ ಅದೇ ತಾನೇ ತನ್ನ ನಿದ್ದೆಯನ್ನು ಮುಗಿಸಿ ಎದ್ದಿದ್ದಳು.

"ಅವರೆಲ್ಲಾ ಹೊರಟುಹೋದರೇನು?"

"ಹೂಂ. ನಾನೇ ನಿನ್ನ ಎಬ್ಬಿಸುವುದು ಬೇಡ ಎಂದೆ."

"ಛೇ, ಅವರೇನು ತಿಳಿದುಕೊಂಡರೋ? ನನ್ನ ಎಬ್ಬಿಸಿದ್ದರೆ ಪ್ರಪಂಚ ಮುಳುಗಿಹೋಗುತ್ತಿರಲಿಲ್ಲ."

"ಮೊದಲು ಊಟ ಮುಗಿಸಿ ಬಾ. ನಮ್ಮದಾಯಿತು."

'ನಮ್ಮದು' ಎನ್ನುವ ಪದ ಮೀರಳಿಗೆ ವಿಚಿತ್ರವಾಗಿ ತೋರಿತು. ಹೃದಯದಲ್ಲಿ ಏನೋ ಒಂದು ಬಗೆಯ ಸಂಕಟವಾಯಿತು. ಆದರೂ ಕೊರಳು ಕೊಂಕಿಸಿ ಮೀರ ಕೇಳಿದಳು.

"ನಮ್ಮದು ಎಂದರೇ?"

"ನಾನೂ, ಸರಸಿ. ನೀನು ಈಗ ನಡಿ. ನಾನೂ ಬರುತ್ತೇನೆ."

"ನನ್ನ ಜೊತೆ ಒಂದು ಸಲ ಊಟ ಮಾಡ್ತೀರೇನು?"

"ಇಲ್ಲ ಸುಮ್ಮನೆ ನೋಡುತ್ತಾ ಇರುತ್ತೇನೆ. ನೀನು ಸರಿಯಾಗಿ ಊಟ ಮಾಡ್ತೀಯೋ ಇಲ್ಲವೋಂತ."

"ನಾನೇನು ಅನ್ನ ಸತ್ಯಾಗ್ರಹ ಹೂಡಿರುವ ಖೈದಿಯಲ್ಲ" ಎನ್ನುತ್ತ ಮೀರ ಒಳಗೆ ಹೋದಳು.

ಮೀರ ಊಟ ಮುಗಿಸಿ ಬರುತ್ತಲೇ ಶಾಮು ಅವಳ ಕೈಗೆ ಪತ್ರವೊಂದನ್ನು ಕೊಟ್ಟ. ಮೀರ ಆತುರದಿಂದ ಕಾಗದ ಒಡೆದಳು.

*"ಮೀರ,*

*ನಿನ್ನ ಮಾತಿನಂತೆ ಗೋಪಿಗೆ ಹೆದರಿ ಪೂಣೆಗೆ ಓಡಿಬಂದಿದ್ದೇನೆ. ಆದರೆ ಅವರ ನೆನಪು ನನ್ನ ಬೆನ್ನಟ್ಟಿ ಬಂದಿದೆ. ಇಲ್ಲಿಗೆ ಬಂದ ಕೂಡಲೇ ವಾಪಸು ಮೈಸೂರಿಗೆ ಹೊರಟು ಹೋಗೋಣವೆನಿಸಿತು. ನಾನು ಊರಲ್ಲಿಲ್ಲದಿರುವುದನ್ನು ತಿಳಿದು ಅವರಿಗೆಷ್ಟು ನಿರಾಶೆಯಾಗುವುದೋ? ಗೋಪಿಯಿಲ್ಲದ ಊರು ನನಗೆ ತುಂಬಾ ಶೂನ್ಯವಾಗಿ ತೋರುತ್ತಿದೆ. ನಾನು ಎಂದಿಗೆ ಊರಿಗೆ ಬರುತ್ತೇನೆಯೋ? ಸದ್ಯ ಕಾಲೇಜು ಬಾಗಿಲು ತೆಗೆದುಬಿಟ್ಟರೆ ಸಾಕು. ಮೀರಾ, ನೀನು ಯಾರನ್ನಾದರೂ ಪ್ರೀತಿಸಿದ್ದೇ ಆದರೆ ನನ್ನ ಕಷ್ಟ ನಿನಗೆ ಗೊತ್ತಾಗುತ್ತದೆ-*

*ವಿಜಯ"*

ಕಾಗದ ಓದಿ ಮೀರಳಿಗೆ ಸಂತಾಪವಾಯಿತು. ವಿಜಯಳ ಹೃದಯವನ್ನು ಸೂರೆಗೊಂಡ ಗೋಪಿಯ ಮೇಲೆ ಅವಳಿಗೆ ಕೋಪ ಬಂತು. ಅವನಿಂದ ಅವಳಿಗೆಷ್ಟು ಹಿಂಸೆ ಎಂದು ನುಡಿಯಿತು ಮನಸ್ಸು. ಮೀರ ಕೂಡಲೇ ಕಾಗದ ಪೆನ್ನು ಹಿಡಿದು ಬರೆದಳು:

*"ವಿಜಯಾ,*

*ನೀನು ಯಾರನ್ನೂ ಪ್ರೀತಿಸಿಲ್ಲವೇ ಎಂದು ನನ್ನನ್ನು ಕೇಳಿರುವೆ. ಇದುವರೆಗೂ ನಾನು ಯಾರನ್ನು ಪ್ರೀತಿಸಿಲ್ಲ ಎಂದೇ ಭಾವಿಸಿದ್ದೆ. ನನ್ನ ಮಿತಿಮೀರಿದ ಅಭಿಮಾನ, ಪ್ರತಿಷ್ಠೆ, ಹೆಮ್ಮೆ, ಅಹಂಕಾರದ ತುಳಿತಕ್ಕೆ ನನ್ನ ಹೃದಯದಲ್ಲಿದ್ದ ಪ್ರೇಮ ತಲೆಬಾಗಿಸಿತ್ತು. ನಾನು ಯಾರನ್ನೂ ಪ್ರೀತಿಸುವುದಿಲ್ಲ ಎಂದು ತಿಳಿದಿದ್ದೆ. ಆದರೆ ಈಗೀಗ ಅರಿವಾಗುತ್ತಿದೆ. 'ನಾನೂ ಪ್ರೀತಿಸುತ್ತೇನೆ' ಎಂದು. ಆದರೆ ಯಾರನ್ನು ಎಂಬ ಪ್ರಶ್ನೆ ಹಾಕಬೇಡ. ಹಾಕಿದರೂ ನಿನಗೆ ಉತ್ತರ ಸಿಗುವುದಿಲ್ಲ. ನಿನ್ನ ಗೋಪಿಯನ್ನೇನೂ ಪ್ರೀತಿಸುವುದಿಲ್ಲ. ಧೈರ್ಯವಾಗಿರು.*

*ಮೀರ"*

* * * *

ಕಾಲೇಜು ಮತ್ತೆ ಪ್ರಾರಂಭವಾದ ದಿನ ವಿಜಯ ಮೀರಳನ್ನು ನೋಡಿ ಗಾಬರಿಯಾಗಿ,

"ಯಾಕೆ ಬಹಳ ಇಳಿದುಹೋಗಿದೀಯ?" ಎಂದಳು.

"ನನ್ನ ವಿಷಯ ಇರಲಿ, ನೀನು ಪುಣೆಯಿಂದ ಯಾವಾಗ ಬಂದೆ?"

"ನಿನ್ನೆ ರಾತ್ರಿ."

"ಗೋಪಿ ನಿಮ್ಮ ಮನೆಗೆ ಪುನಃ ಹೋಗಿದ್ದನಂತೇನು?"

"ಹೂಂ. ಉಷಾ ಹೇಳಿದಳು 'ನೀನಿಲ್ಲದಾಗ ಅವತ್ತು ಬಂದಿದ್ದರಲ್ಲಾ ಅವರು ನಿನ್ನ ಕೇಳಿಕೊಂಡು ಬಂದಿದ್ದರು. ನಾನು ಪುಣೆಗೆ ಹೋದೆ ಎಂದು ಹೇಳಿದೆ' ಅಂತ"

"ಅವನು ಸಿಕ್ಕಿದರೆ ಚೆನ್ನಾಗಿ ದಬಾಯಿಸಿಬಿಡ್ತೀನಿ-ಮನೆಗೆ ಯಾಕೆ ಹೋಗಿದ್ದೇಂತ."

"ನನ್ನಾಣೆಯಿದೆ. ಇವತ್ತು ಅವರನ್ನು ನೋಡುವವರೆಗೆ ನನಗೆ ಸಮಾಧಾನವಿಲ್ಲ. ಈ ಪ್ರವಾಹಕ್ಕೆ ಅಣೆಕಟ್ಟು ಹಾಕಲು ಸಾಧ್ಯವಿಲ್ಲ ಮೀರ."

ಮೀರ ಅಕ್ಕರೆಯಿಂದ, "ನೀನು, ನಿನ್ನ ಗೋಪಿ ಎಲ್ಲಾದರೂ ಹಾಳಾಗಿ ಹೋಗಿ" ಎಂದು ಬೈದಳು.

ಆಸ್ಪತ್ರೆಯ ಕಾಂಪೌಂಡಿಗೆ ಕಾಲಿಡುತ್ತಿದ್ದಂತೆಯೇ ವಿಜಯಳಿಗೆ ಗೋಪಿಯ ಭೇಟಿಯಾಯಿತು. ಗೋಪಿ ಕಂದು ಬಣ್ಣದ ಫ್ಲಾನಲ್ ಶರಾಯಿ ಹಾಕಿ, ಅದೇ ಬಣ್ಣದ ಕೋಟು ತೊಟ್ಟು, ಕೊರಳಿಗೆ ಸ್ಟೆತಾಸ್ಕೋಪಿನ ಹಾರಹಾಕಿಕೊಂಡು ನಿಂತಿದ್ದ. ವಿಜಯಳನ್ನು ಕಂಡರೂ ಕಾಣದವನಂತೆ ತಿರುಗಿ, ಮೀರಳಿಗೆ ಮಾತ್ರ ಪರಿಚಯದ ನಗೆಬೀರಿ, ಗೋಪಿ ತನ್ನ ಸಹಪಾಠಿ ಕಾಂತಳೊಡನೆ ಮಾತನಾಡತೊಡಗಿದ.

"ಏನು ಮಾಡಲೇ ಮೀರಾ, ಗೋಪಿ ಕೋಪಿಸಿಕೊಂಡಿದ್ದಾರೆ."

"ನೀನೂ ಸುಮ್ಮನಿದ್ದುಬಿಡು."

"ಅವರು ಕಾಂತಾ ಕೈಲಿ ನಗ್ತಾ ಮಾತಾಡ್ತಿದಾರೆ. ನಾನು ಹೇಗೆ ಸುಮ್ಮನಿರಲಿ."

"ಅಷ್ಟೊಂದು ಹೊಟ್ಟೆ ಕಿಚ್ಚಿರಬಾರದು ಹೆಂಗಸರಿಗೆ."

"ಈಗ ಅವರನ್ನು ಹೇಗೆ ಸಮಾಧಾನ ಮಾಡಲಿ?"

"ಹಾಗಿದ್ದರೆ ಹೋಗಿ ಕ್ಷಮಾಪಣೆ ಕೇಳಿಕೋ."

"ಹೇಗೆ ಕೇಳಲಿ?"

ಮೀರ ದಡದಡನೆ ಗೋಪಿಯ ಬಳಿಗೆ ಹೋಗಿ, "ಈಗ ನೀವು ಯಾವ ವಾರ್ಡಿಗೆ ಹೋಗುವಿರಿ?" ಎಂದಳು.

"ಕಾಂತರಾಜ ವಾರ್ಡಿಗೆ."

"ನಾನು ಚೆಲುವಾಂಬಾ ಆಸ್ಪತ್ರೆಗೆ ಹೋಗಬೇಕು, ನಮ್ಮಗಳ ಪೈಕಿ ಈ ದಿನ ಕಾಂತರಾಜ ವಾರ್ಡಿಗೆ ಯಾರೂ ಇಲ್ಲ. ವಿಜಯ ಒಬ್ಬಂಟಿಗಳಾಗಿದ್ದಾಳೆ. ದಯವಿಟ್ಟು ಅವಳೊಡನೆ..."

ಗೋಪಿ ವಿಜಯಳ ಕಡೆ ನೋಡಿದ. ಅವಳ ಮಗುವಿನಂತಹ ಮುಖ ನೋಡಿದ ಕೂಡಲೇ ಗೋಪಿಯ ಮನಸ್ಸು ಪ್ರಸನ್ನಗೊಂಡಿತು. ವಿಜಯ ಅಳುಕುತ್ತಾ ಗೋಪಿಯೊಡನೆ ಹೊರಟಳು. ವಾರ್ಡಿನಲ್ಲಿದ್ದ ರೋಗಿಗಳ ರೋಗಗಳ ಇತಿಹಾಸ, ಲಕ್ಷಣ, ಟೆಂಪರೇಚರು, ಕೊಡುವ ಆಹಾರ ಎಲ್ಲವನ್ನೂ ತನಿಖೆ ಮಾಡಿದ್ದಾಯಿತು. ವಾರ್ಡಿನಿಂದ ಹೊರಗೆ ಬರುವವರೆಗೆ ಇಬ್ಬರೂ ಒಂದೂ ಮಾತನಾಡಲಿಲ್ಲ. ಹೊರಗೆ ಬರುತ್ತಲೇ ಗೋಪಿ ಬಿಗುವಾಗಿ ಹೇಳಿದ.

"ನಾನಿನ್ನು ಹೊರಡಲೇ?"

ಅವನ ಬಿಗು ನೋಡಿ ವಿಜಯಳಿಗೆ ಅಳು ಬಂತು. ಅವಳ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು.

"ಹೋಗಿ ಬೇಕಾದರೆ."

"ಬೇಕಾದರೆ ಹೋಗಬಹುದು, ಬೇಡದಿದ್ದರೆ?"

"ನಿಮ್ಮಿಷ್ಟ."

"ನಾನೇಕೆ ಇರಲಿ? ನನ್ನಿಂದ ತಪ್ಪಿಸಿಕೊಳ್ಳೋದಕ್ಕೆ ಜನ ಪೂನಾವರೆಗೆ ಓಡಿಹೋಗ್ತಾರೆ...ವಿಜಯ್ ಡಾರ್ಲಿಂಗ್, ಓ ನೀನಿಲ್ಲಿ ಅತ್ತರೆ ನಾನೇನೂ ಮಾಡುವ ಹಾಗಿಲ್ಲ. ಹೀಗೆ ದೂರ ನಿಂತು ಸುಮ್ಮನೆ ನೋಡಬೇಕಾಗುತ್ತದೆ. ಇಲ್ಲಿ ಕರ್‌ಚೀಫ್ ತಗೋ."

"ನನಗೇನೂ ಬೇಕಾಗಿಲ್ಲ."

"ಹಾಗಾದರೆ ನಾನೇ ಕಣ್ಣೀರು ಒರೆಸುತ್ತೇನೆ" ಎನ್ನುತ್ತ ಗೋಪಿ ಮುಂದಾದ. ವಿಜಯ ಸರಿದು, "ಸದ್ಯ ಸುಮ್ಮನಿರಿ"ಎಂದಳು.

"ಹೇಗಿರಲಿ" ಎನ್ನುತ್ತಾ ಅವನು ಅವಳ ಸರದ ಕಡೆ ನೋಡಿದ.

ವಿಜಯ ನಕ್ಕುಬಿಟ್ಟಳು. "ನಿಮಗೆ ನನ್ನ ಸರದ ಮೇಲೆ ಕಣ್ಣು. ನಾಳೆಯಿಂದ ನಾನದನ್ನು ತೆಗೆದುಬಿಡುತ್ತೇನೆ."

"ಹಾಗೆ ಮಾತ್ರ ಮಾಡಬೇಡ."

"ನನ್ನ ಮೇಲಿನ ಕೋಪ ಹೋಯಿತೇ?"

"ಇಲ್ಲ. ಇಷ್ಟು ಸುಲಭವಾಗಿ ಕೋಪ ಹೋಗೋದಿಲ್ಲ."

"ಹಾಂ. ಏನಾಗಬೇಕೋ ಕೋಪ ಹೋಗೋಕೆ?"

"ಹೇಳಿ ಏನು ಪ್ರಯೋಜನ? ನನಗದು ಸಿಕ್ಕುವುದಿಲ್ಲ."

"ದೂರದಿಂದಲೇ ಕೊಡುವಂತಹದಾದರೆ ಕೊಡುತ್ತೇನೆ."

ಗೋಪಿ ನಕ್ಕು "ಕಿಲಾಡಿ" ಎಂದ.

"ಆ ದಿನ ನೀವು ನಮ್ಮ ಮನೆಗೆ ಬಂದಾಗ ನನಗೆಷ್ಟು ದಿಗಿಲಾಯಿತು ಗೊತ್ತೇ?"

"ನಾನೇನು ಮಾಡಲಿ? ನಿನ್ನ ನೋಡಿ ಬಹಳ ದಿನಗಳಾಗಿದ್ದವು. ನಿನ್ನನ್ನು ಒಂದು ಕ್ಷಣವೂ ನೋಡದಿರಲು ನನಗಾಗಲಿಲ್ಲ. ಆಮೇಲೆ ನನ್ನ ಧೈರ್ಯ ನೋಡಿ ನನಗೇ ಆಶ್ಚರ್ಯವಾಯಿತು."

"ಈ ವರ್ಷವೇನೋ ಪರವಾಗಿಲ್ಲ. ಹೌಸ್ ಸರ್ಜನ್ ಕೆಲಸ ಮುಗಿದು ನೀವು ಬೇರೆ ಎಲ್ಲಾದರೂ ಕೆಲಸಕ್ಕೆ ಹೋದಾಗ ಏನು ಮಾಡ್ತೀರಿ?"

"ನನ್ನ ಹುಡುಗೀನೂ ಕರ್ಕೊಂಡು ಹೋಗ್ತೀನಿ. ಅವಳ್ನ ಇಲ್ಲೇ ಬಿಟ್ಟು ಹೋಗೋದಿಲ್ಲ."

"ನಾನು ನಿಮ್ಮ ಜೊತೆ ಬರೋದಿಲ್ಲಾ."

"ನೀನೇ ಏನು ನನ್ನ ಹುಡುಗಿ?"

ಅವನ ಮಾತು ಕೇಳಿ ವಿಜಯಳ ಮುಖ ಕೆಂಪಾಗಿಹೋಯಿತು.

"ನನ್ನ ಜೊತೆ ಬರೋಲ್ಲವೇ ನೀನು?" ಗೋಪಿ ಕೇಳಿದ.

"ನಿಮ್ಮ ಜೊತೆ ಎಲ್ಲಿಗೆ ಬೇಕಾದರೂ ಬರುತ್ತೇನೆ."

"ನಮ್ಮಿಬ್ಬರ ಕೋರ್ಸ್ ಮುಗಿದುಬಿಟ್ಟರೆ ಸಾಕು. ಆಮೇಲೆ ಈ ಜಗತ್ತೇ ನಮ್ಮದು."

"ನಾನಿನ್ನು ಹೊರಡುತ್ತೇನೆ" ಎಂದು ವಿಜಯ ಫುಟ್‌ಪಾತಿನ ಮೇಲೆ ನಿಂತಳು.

"ಹೊರಡು. ನಿನ್ನ ಕಟ್ಟಿಹಾಕಿರುವವರು ಯಾರು?"

"ನೀವೇ" ಎಂದು ನಕ್ಕು ಹೊರಟಳು ವಿಜಯಾ.

ಮತ್ತೆ ಏನನ್ನೋ ಯೊಚಿಸಿ, ಮುಂದಿಟ್ಟ ಹೆಜ್ಜೆಯನ್ನು ಹಿಂದಿಟ್ಟು ವಿಜಯ ಕೇಳಿದಳು: "ಒಂದು ಮಾತು."

ಗೋಪಿ ನಿಂತಲ್ಲಿಯೇ ನಿಂತಿದ್ದ.

"ಆ ದಿನ ನೀವು ನನ್ನ ಕೈ ಮೊದಲ ಬಾರಿಗೆ ನೋಡಿದಾಗ ಏನೋ ಒಂದು ವಿಷಯ ಹೇಳಿದ್ದಿರಿ...."

"ಯಾರ ವಿಷಯ?"

"ನೀನು ಈ ಕಾಲೇಜಿನಲ್ಲಿರುವ ವಿದ್ಯಾರ್ಥಿಯೊಬ್ಬನನ್ನು ಮದುವೆ ಮಾಡಿ

ಕೊಳ್ಳುತ್ತೀಯಾ ಎಂದು ಹೇಳಿದ್ದಿರಿ. ಹಾಗೆ ನಿಜವಾಗಿಯೂ ಹೇಳಿದ್ದಿರೋ ಅಥವಾ ತಮಾಷೆ ಮಾಡಿದ್ದಿರೋ?"

ಗೋಪಿ ನಗುತ್ತಾ ಹೇಳಿದ, "ನಿನ್ನ ಕೀಟಲೇ ಮಾಡೋಕೆ ಹಾಗೆ ಹೇಳಿದ್ದೆ. ಆದರೆ ಅದು ನಿಜವಾಗುತ್ತೆ ಅಂತ ನನಗೆ ತಿಳಿದಿರಲಿಲ್ಲ."

"ನೀವು ಹೇಳಿದ್ದು ನಿಜವಾಯಿತು ಎಂದು ಈಗ ಹೇಳಿದವರು ಯಾರು? ನಿಮ್ಮ ಮಾತನ್ನು ಸುಳ್ಳು ಮಾಡಕ್ಕೋಸ್ಕರವಾದರೂ..... "

"ಊಂ....ಅಷ್ಟೊಂದು ಧೈರ್ಯ ನಿನಗಿದೆಯೇ?"

"ಯಾಕಿರಬಾರದೂಂತೀನಿ."

"ನಿನ್ನ 'ಕಡ್ನಾಪ್' ಮಾಡಿಕೊಂಡು ಹೋಗಿ..." ಎಂದು ಗೋಪಿ ವಿವರಿಸು ವಷ್ಟರಲ್ಲಿ ವಿಜಯ ನಕ್ಕು "ಅಷ್ಟೊಂದು ಸಾಹಸ ಮಾಡಬೇಡಿ, ಮಹಾಶಯರೇ" ಎಂದಳು.

"ಯಾಕೆ?"

"ನಿಮ್ಮ ಜೊತೆ 'ಎಲೋಪ್' ಮಾಡೋಕೆ ನಾನು ತಯಾರು."

ತಾವು ನಿಂತಿರುವುದು ನಡುರಸ್ತೆಯಲ್ಲಿ ಎಂದು ನೆನೆದು ಗೋಪಿ ದೀರ್ಘ ವಾಗಿ ಉಸಿರೆಳೆದು,

"ಹೂಂ, ಹೋಗು, ನೀನು ನನ್ನೆದುರಿಗೆ ಇದ್ದಷ್ಟೂ ಕಣ್ಣುರಿ ನನಗೆ" ಎಂದ.

"ಒಳ್ಳೇ ಮಾತಾಡ್ತೀರಿ. ನಿಮ್ಮ ಕಣ್ಣಿಗೆ ತಂಪು ಮಾಡಲೆಂದೇ ಬೆಳಿಗ್ಗೆ ಒಂದು ಗಂಟೆ ಕನ್ನಡಿ ಮುಂದೆ ಕುಳಿತಿದ್ದೆ. ನಿಮ್ಮನ್ನು ಕೇಳಿದರೆ ನನ್ನ ಕಣ್ಣುರಿ ಎಂದು ಹೇಳ್ತೀರಿ."

"ಕಣ್ಣಿಗೆ ಕಾಣ್ತರೋದು ಕೈಗೆ ಸಿಕ್ಕೋಲ್ಲವಲ್ಲಾಂತ ಅಷ್ಟೆ."

ವಿಜಯ ಕೊರಳು ಕೊಂಕಿಸಿ, "ನನ್ನನ್ನು ಅಶರೀರಳೂಂತ ತಿಳ್ಕೊಂಡಿದಿರಾ?" ಎಂದಳು.

"ಯಾರಿಗೆ ಗೊತ್ತು? ನೀನು ಅಶರೀರಳೋ ಅಲ್ಲವೋ ಅನ್ನೋದನ್ನ ಪರೀಕ್ಷೆ ಮಾಡೋಕೆ ಸಹ ನನಗೆ ಬಿಟ್ಟಿಲ್ಲ."

"ನಿಮ್ಮ ಮಾತು ಕೇಳುತ್ತಾ ನಿಂತರೆ ಮುಗಿದೇಹೋಯಿತು" ಎನ್ನುತ್ತಾ ವಿಜಯ ಮತ್ತೆ ಮುಂದೆ ಹೆಜ್ಜೆಯಿಟ್ಟಳು.

* * * *

ರಜೆಯಲ್ಲಿ ಹಳ್ಳಿಗೆ ಹೋಗಲೋ ಬೇಡವೋ ಎಂದು ಮೀರ ಯೋಚಿಸು ತ್ತಿದ್ದಳು. ಈ ಬಾರಿ ಹಳ್ಳಿಗೆ ಹೋಗಲು ಅವಳು ಮೊದಲಿನಂತೆ ಆತುರಳಾಗಿರಲಿಲ್ಲ.

'ಹೇಗಿದ್ದರೂ ಸರಸಿಯಿದ್ದಾಳೆ' ಎನ್ನು ಸಮಾಧಾನ ಮತ್ತು ಔದಾಸೀನ್ಯ ಒಂದು ಕಡೆಯಾದರೆ ಶಾಮು, ಸರಸಿಯರ ಜೀವನವಾಹಿನಿಗಳ ಸಂಗಮ ಹೇಗಿದೆಯೋ ನೋಡಬೇಕೆನ್ನುವ ಕುತೂಹಲ ಮತ್ತೊಂದು ಕಡೆ.

ಮೀರಳ ಮನಸ್ಸು ಹೊಯ್ದಾಡುತ್ತಿರುವಾಗಲೇ ಶಾಮುವಿನಿಂದ ಕಾಗದ ಬಂತು. ಕಾಗದದಲ್ಲಿ ಶಾಮು ಮೀರಳಿಗೆ ಹಳ್ಳಿಗೆ ಬರುವಂತೆ ನಿರ್ಬಂಧ ಮಾಡಿ ಬರೆದಿದ್ದ.

ಸರಸಿ ಇಲ್ಲದೇ ಇದ್ದಾಗಲೂ ಶಾಮು ಅವಳನ್ನು ಅಷ್ಟೊಂದು ಬಲವಂತ ಮಾಡಿ ಕರೆದಿರಲಿಲ್ಲ.

ಪ್ರಾಕ್ಟಿಕಲ್ ಪರೀಕ್ಷೆ ಸಹ ಮುಗಿದಿತ್ತು. ಹಳ್ಳಿಗೆ ಹಿಂತಿರುಗುವ ಹಿಂದಿನ ಸಂಜೆ ಮೀರ, ಗೋಪಿ, ವಿಜಯ ವಾಕಿಂಗಿಗೆ ಹೊರಟರು. ಮೀರ, ವಿಜಯ ಇಬ್ಬರೇ ವಾಕಿಂಗಿಗೆ ಹೊರಡಬೇಕೆಂದು ನಿಶ್ಚಯಿಸಿದ್ದರು. ಆಮೇಲೆ ಮನಸ್ಸು ಬದಲಾಯಿಸಿ ಮೀರ ಗೋಪಿಯನ್ನು ತಮ್ಮೊಡನೆ ಬರುವಂತೆ ಆಹ್ವಾನಿಸಿದ್ದಳು. ಗೋಪಿಯನ್ನು ಕರೆಯಬೇಕೇ ಬೇಡವೇ ಎಂದು ಮೀರ ಯೋಚಿಸುತ್ತಿದ್ದಾಗ ವಿಜಯ,

"ಅವರು ಬಂದರೆ ನಾನು ಬರೋದಿಲ್ಲ" ಎಂದಳು.

"ಬಿಡು. ನಾನು, ಗೋಪಿ ಇಬ್ಬರೇ ಹೋಗ್ತೀವಿ."

"ಗೋಪಿ ಬೇಡ ಮೀರ."

"ನಾನು ಬಂದರೆ ನಿಮಗದ್ದಿ ಏನೋ?"

"ಅವರು ಬೇಡವೇ ಬೇಡ. ನಾವಿಬ್ಬರೇ ಹೋಗೋಣ."

"ಗೋಪಿ ನನ್ನ ಮಿತ್ರ. ಅವನನ್ನು ನಾನು ಕರೆದರೆ ತಪ್ಪಿಲ್ಲ" ಎಂದಿದ್ದಳು ಮೀರ.

ಸಂಜೆ ಮೂವರು ಉದ್ದಕ್ಕೆ ದಾರಿ ಸಾಗಿದ್ದರು. ಮೀರ ಗೋಪಿ ಮಾತನಾಡು ತ್ತಿದ್ದರು. ವಿಜಯ ಮಾತ್ರ ಮೌನವಾಗಿ ತಲೆತಗ್ಗಿಸಿ, ಗೋಪಿ ಹೆಜ್ಜೆಹಾಕುವುದನ್ನೇ ನೋಡುತ್ತಾ ಬರುತ್ತಿದ್ದಳು.

ಊರಿಂದ ಬಹುದೂರ ಬಂದಮೇಲೆ ಅವರು ಮರಗಳ ಕೆಳಗೆ ಕುಳಿತು ಕೊಂಡರು.

"ನಾಳೇನೇ ಊರಿಗೆ ಹೋಗ್ತೀರೇನು ನೀವು?" ಗೋಪಿ ಕೇಳಿದ.

"ಹೂಂ, ನೀವು ಈ ರಜದಲ್ಲಿ ಎಲ್ಲೂ ಹೋಗೋಲ್ಲವೇ?"

"ಇಲ್ಲ. ಮಿಸ್ ವಿಜಯ ಪರಾಂಜಪೆ ಹೋದ ಸಲದ ಹಾಗೆ ಪೂನಾಗೆ ಹೋಗಬಹುದೂಂತ ಕಾಣುತ್ತೆ" ಗೋಪಿಯ ದನಿಯಲ್ಲಿ ಚೇಷ್ಟೆಯಿತ್ತು.

ಹಲ್ಲುಕಚ್ಚಿ ಅಗಿಯುತ್ತಿದ್ದ ವಿಜಯ ಮಾತನಾಡದೇ ಒಂದು ಕ್ಷಣ ಕುಳಿತಿದ್ದು, ನಂತರ ಹೇಳಿದಳು:

"ನೀವು ಇದ್ದಕ್ಕಿದ್ದ ಹಾಗೆ ಮನೆಗೆ ದಾಳಿ ಇಟ್ಟರೆ ನಾನು ತಾನೇ ಏನು ಮಾಡಲಿ? ಒಂದು ಕಡೆಯಿಂದ ನೀವು, ಮತ್ತೊಂದು ಕಡೆಯಿಂದ ಅಪ್ಪ ನನ್ನ ಮುತ್ತಿಗೆ ಹಾಕಿದರೆ ಗತಿಯೇನು? ಇಂತಹ ಸಮಯದಲ್ಲಿ ಪಲಾಯನ ಮಾಡುವುದೇ ಸರಿಯಾದುದು."

"ಈ ಸಲ ಮಾತ್ರ ಹಾಗೆ ಮಾಡಬೇಡಿ ಗೋಪಿನಾಥ್. ಹೋದ ಸಲ ಪೂನಾಗೆ ಹೋಗುವ ಸಲಹೆ ಕೊಟ್ಟಿದ್ದು ನಾನು. ನಿಮ್ಮಿಬ್ಬರ ಕೋರ್ಸ್ ಮುಗಿಯುವವರೆಗೆ ಯಾವ ಗಲಾಟೇನೂ ಎಬ್ಬಿಸಬೇಡಿ."

"ಆಮೇಲಾದರೂ ಮನೆ ರಣರಂಗವಾಗುತ್ತದೇನೋ?" ಗೋಪಿ ಅನುಮಾನಿಸುತ್ತಾ ಹೇಳಿದ.

"ನಿಮ್ಮ ಮನೆಯವರು ಬಹಳ ಹಳೆಯ ಕಾಲದವರೇನೋ?" ಮೀರ ಕೇಳಿದಳು.

"ಹೂಂ. ಅದರಲ್ಲೂ ಮರಾಟಿ ಹುಡುಗೀನ ಮದುವೆ ಮಾಡ್ಕೋತೀನೀಂದ್ರೆ ಅವರು ಖಂಡಿತ ಒಪ್ಪೋದಿಲ್ಲ. ನನಗದು ಗೊತ್ತು. ನನ್ನ ವಿದ್ಯಾಭ್ಯಾಸವೇನೋ ಮುಗಿಯಿತು. ಒಂದು ಸರಿಯಾದ ಕೆಲಸ ಸಿಗುವವರೆಗೆ ಇಲ್ಲೇ ಹೌಸ್ ಸರ್ಜನ್ ಆಗಿರುತ್ತೇನೆ. ವಿಜಯಾನೂ ಇಲ್ಲೇ ಇರ್ತಾಳೆ ಅನ್ನೋದೊಂದು ಸಮಾಧಾನವಾದರೂ ನನಗಿರುತ್ತದೆ."

"ನೀನು ಏನು ಹೇಳ್ತೀಯ ವಿಜಯ?" ಮೀರ ಕೇಳಿದಳು.

"ಗೋಪಿ ಹೇಗೆ ಹೇಳಿದರೆ ಹಾಗೆ. ನಾನು ಓದುವುದು ಬೇಡಾಂತ ಅವರು ಹೇಳಿದರೆ ಈಗಲೂ ಓದು ನಿಲ್ಲಿಸಲು ನಾನು ತಯಾರು."

"ಈಗ ಓದು ನಿಲ್ಲಿಸಿದರೆ ನಾಲ್ಕೂವರೆ ವರ್ಷ ಓದಿದ್ದೂ ದಂಡ."

"ಈಗ ವ್ಯಾಸಂಗ ನಿಲ್ಲಿಸೋದು ಸರಿಯಲ್ಲ, ವಿಜಯ್. ನೀನು ವಿದ್ಯೆ ಪೂರ್ಣಗೊಳಿಸಬೇಕಂತ ನನ್ನಾಸೆ. ಆಮೇಲೆ ಇಬ್ಬರೂ ವೈದ್ಯರಾಗಿ ಮಿಡಿಯೋಣ."

"ನನಗೇಕೋ ಏನೂ ಬೇಡವಾಗಿದೆ" ಎಂದಳು ವಿಜಯ.

"ಗೋಪಿಯೊಬ್ಬನನ್ನು ಬಿಟ್ಟು" ಎಂದು ಮೀರ ಕೆಣಕಿದಳು.

"ಕೆರಿಯರ್ ಗರ್ಲ್‌ನ ಕೈಯಲ್ಲ ನಿನ್ನದು ಎಂದು ನಾನು ಅವತ್ತೇ ಹೇಳಿದ್ದೆ. ನಾಲ್ಕೇಟು ಬಿಗಿದಾದರೂ ನಿನ್ನ ಓದಿಸುತ್ತೇನೆ. ನಾನು ಬಿಡುವುದಿಲ್ಲ."

"ಮಾತಿನಲ್ಲಾದರೂ ಹೊಡೆಯುತ್ತೇನೆ ಎಂದಿರಲ್ಲಾ, ನನಗೆ ಅದೇ

ಸಂತೋಷ. ನಿಮ್ಮ ಅತೀ ಮುದ್ದಿನಿಂದಾಗಿ ವಿಜಯಳಿಗಂತೂ ರೆಕ್ಕೆ ಪುಕ್ಕ ಕೂಡ ಬಂದಿದೆ."

"ಮುದ್ದೆಲ್ಲಿಂದ ಬರಬೇಕು?" ಎನ್ನುತ್ತಾ ಗೋಪಿ ವಿಜಯಳ ಕಡೆ ನೋಡಿದ. ಆ ಗಳಿಗೆಗೆ ಅವರಿಬ್ಬರೂ ಮೀರ ಅಲ್ಲಿರುವುದನ್ನೇ ಮರೆತಿದ್ದರು.

"ಈ ಸಲ ಮಾತ್ರ ಹೋದಸಲದ ಹಾಗೆ ಮಾಡಬೇಡಿ" ಮೀರ ಹೇಳಿದಳು.

"ಏನೆಂದಿರಿ?" ಎಂದ ಗೋಪಿ ಮೀರಳ ಕಡೆ ತಿರುಗಿ,

"ಹೋದ ಸಲದ ಹಾಗೆ ಅವಳ ಮನೆಗೆ ಭೇಟಿ ಕೊಡಬೇಡಿ. ಅವರ ತಂದೆ ತಪ್ಪು ತಿಳಿದುಕೊಳ್ಳುತ್ತಾರೆ."

"ಕಾಲೇಜು ಬಾಗಿಲು ತೆಗೆಯುವವರೆಗೆ ನನ್ನ ಗತಿ?"

"ನಿಮಗೂ ಕಾಲೇಜಿಗೂ ಈ ವರ್ಷ ಸಂಬಂಧ ಮುಗಿಯಿತು."

"ಹೌಸ್ ಸರ್ಜನ್ ಆಗಿರುವಾಗ ವಿಜಯಾನ ನೋಡಲು ಏನಡ್ಡಿ?ಅವಳಿಗೆ ಕಾಲೇಜು ತೆಗೆಯುವವರೆಗೆ...."

"ಪೋಸ್ಟ್‌ಮ್ಯಾನ್ ಇರೋದು ಯಾಕೆ?"

ವಿಜಯಾನೇ ಪರಿಹಾರ ಸೂಚಿಸಿದಳು.

"ಒಂದೇ ಊರಿನಲ್ಲಿ ಓದಿಕೊಂಡು ಕಾಗದ ಬರೆಯೋದ?" ಮೀರ ಕೇಳಿದಳು.

"ಒಂದೇ ಕಾಲೇಜಿನಲ್ಲಿ ಓದಿಕೊಂಡು ಕಾಗದ ಬರೆಯೋದಿಲ್ಲವೇ?" ಎನ್ನುತ್ತಾ ಗೋಪಿ ಅರ್ಥಗರ್ಭಿತವಾಗಿ ನಕ್ಕ.

ಅಲ್ಲಲ್ಲಿ ನಕ್ಷತ್ರಗಳು ಮಿನುಗುವುದನ್ನು ನೋಡಿ ಮೀರ ಎದ್ದಳು. ಗೋಪಿ ಅವಳನ್ನು ಹಾಸ್ಟೆಲಿನಲ್ಲಿ ಬಿಟ್ಟು ವಿಜಯಳೊಡನೆ ಹೊರಟ.

"ಸುರಕ್ಷಿತವಾಗಿ ವಿಜಯಳನ್ನು ತಲುಪಿಸಬೇಕು" ಮೀರ ಹೇಳಿದಳು.

"ಈ ಮಾತನ್ನು ನನಗೆ ಹೇಳಬೇಕು ನೀವು. ವಿಜಯ್ ಜೊತೆ ನಾನಿರುವಾಗ ನನಗೆ ಅಪಾಯವೇ ಹೊರತು ಅವಳಿಗೇನಲ್ಲ" ಎನ್ನುತ್ತಾ ಗೋಪಿ ನಕ್ಕ.

"ನಾನೇನೂ ನಿಮ್ಮನ್ನು ತಿಂದುಬಿಡುವುದಿಲ್ಲ."

"ಹೊರಡಿ ಹೊತ್ತಾಯಿತು" ಎಂದು ಮೀರಳೇ ಅವರಿಬ್ಬರಿಗೂ ಸೂಚನೆ ಯಿತ್ತಳು.

* * * *

ಮೀರಳನ್ನು ಎದುರುಗೊಳ್ಳಲು ಶಾಮುವೇ ಸ್ಟೇಷನ್ನಿಗೆ ಬಂದಿದ್ದ. 'ಇನ್ನೊಬ್ಬಳು ಬಂದಿದ್ದರೂ ತನ್ನನ್ನು ಕಡೆಗಾಣಿಸಲಿಲ್ಲ ಎಂದು ತೋರಿಸಿಕೊಳ್ಳಲು

ಬಂದಿದ್ದಾರೋ ಏನೋ?'

ಗಾಡಿಯಲ್ಲಿ ಕುಳಿತ ಕೂಡಲೇ ಶಾಮು ಕೇಳಿದ, "ಪರೀಕ್ಷೇಲಿ ಹೇಗೆ ಮಾಡಿದೀಯಾ?"

"ಚೆನ್ನಾಗಿ ಮಾಡಿದ್ದೀನಿ. ಸರಸಿ ಹೇಗಿದಾಳೆ?"

"ನೀನೇ ನೋಡ್ತೀಯಲ್ಲಾ ಹೇಳು."

ಮನೆ ತಲುಪುವವರೆಗೆ ಶಾಮು ಮೀರಳ ಪರೀಕ್ಷೆಯ ವಿಚಾರವನ್ನೇ ಕೇಳುತ್ತಿದ್ದ. ಗಾಡಿ ಮನೆಯನ್ನು ತಲುಪಿದಾಗ ಸರಸಿ ಮನೆಯ ಮುಂಬಾಗಿಲಿನಲ್ಲಿ ನಿಂತಿದ್ದಳು. ಸರಸಿ ನಿಂತಿರುವುದನ್ನು ಮೀರ ದೂರದಿಂದಲೇ ನೋಡಿದಳು.

ಮನಸ್ಸಿಗುಂಟಾದ ನೆಮ್ಮದಿಯಿಂದ, ಸಂತೋಷದಿಂದ ಸರಸಿ ಮೈತುಂಬಿ ಕೊಂಡಿದ್ದಳು. ಮೊದಲಿನ ಸಾದುಗಪ್ಪು ಬಣ್ಣ ಈಗ ನಸುಕೆಂಪು ಬಣ್ಣಕ್ಕೆ ತಿರುಗಿದ್ದಿತು. ಶಾಮುವಿನ ಕೈಹಿಡಿದ ಮೇಲೆ, ಮೀರಳ ಉಡಿಗೆ ತೊಡಿಗೆಗಳನ್ನು ಅವಳೂ ಅನುಕರಿಸಲು ಪ್ರಯತ್ನಿಸಿದ್ದುದರಿಂದ ಅವಳ ಉಡುಪೂ ಬಹಳ ಸುಧಾರಿಸಿತ್ತು. ಸರಸಿಗೆ ದೊರೆತಿದ್ದ ತೃಪ್ತಿ, ಶಾಂತಿ, ಸಮಾಧಾನದಿಂದ ಅವಳ ಮೊಗದ ಮೇಲೆ ಅಪೂರ್ವ ಕಳೆಯಿತ್ತು.

"ಹೇಗಿದಾಳೆ ಸರಸಿ?" ಶಾಮು ಮೀರಳನ್ನು ಕೇಳಿದ.

"ತುಂಬಾ ಚೆನ್ನಾಗಿ ಆಗಿದಾಳೆ. ಅವಳು ಇಷ್ಟರಮಟ್ಟಿಗಾಗಬಹುದು ಎಂದು ನಾನು ಎಣಿಸಿರಲಿಲ್ಲ."

ಮೀರಳಿಗೆ ಮನೆ ತುಂಬಾ ಬದಲಾಯಿಸಿರುವಂತೆ ತೋರಿತು. ತಾನು ಕೆಲವು ಕಾಲ ಅಲ್ಲಿ ಉಳಿದಿರಲು ಬಂದಿರುವ ಅತಿಥಿ ಎಂದು ಮನಸ್ಸಿಗೆ ಭಾಸವಾಯಿತು. ವೆಂಕಮ್ಮನವರು ಹಿಂದಿನ ಮಮತೆಯಿಂದಲೇ,

"ಬಾಮ್ಮ, ನೀನು ಬಂದದ್ದು ಮನೆ ಎಷ್ಟೋ ತುಂಬಿದ ಹಾಗಾಯಿತು." ಎಂದು ಸ್ವಾಗತಿಸಿದರು.

ಊಟ ಮುಗಿದ ಮೇಲೆ ಮೀರ ತನ್ನ ರೂಮಿಗೆ ಬಂದಳು. ಹಿಂದೆ ಅವಳದಾಗಿದ್ದ ರೂಮು ಈಗ ಶಾಮು, ಸರಸಿಯರದಾಗಿತ್ತು. ಮಂಚದ ಮೇಲೆ ತನ್ನ ಹಾಸಿಗೆಯನ್ನು ಬಿಡಿಸುತ್ತಿದ್ದಾಗ ವೆಂಕಮ್ಮನವರು ಬಂದು ಕೇಳಿದರು.

"ಮಧ್ಯಾಹ್ನದ ತಿಂಡಿಗೇನು ಮಾಡಲಿ?"

ಮೀರ ನಸುನಕ್ಕು, "ಇಷ್ಟು ದಿನ ನಾನೇ ಇದ್ದೆನೇನೋ ತಿಂಡಿ ಏನು ಮಾಡಲೀಂತ ಹೇಳೋಕೆ?" ಎಂದಳು.

"ಇಷ್ಟು ದಿನದ ಮಾತಿರಲಿ. ಮನೆ ಯಜಮಾನಿ ನೀನು. ಏನು ಹೇಳಿದರೆ

ಅದು ಮಾಡ್ತೀನಿ."

"ಬಾಳೇಕಾಯಿ ಇದ್ದರೆ ಬೋಂಡ ಮಾಡಿ."

ವೆಂಕಮ್ಮನವರು ಹಿಂತಿರುಗಿ ಹೊರಟುಹೋದರು. ಮೀರ ಹಾಸಿಗೆ ಉರುಳಿಸಿ ಕೈಲಿ, 'ಮೂಲಾನ್ ರೂಜ್' ಹಿಡಿದು ಹಾಸಿಗೆಯೊರಗಿದಳು.

ಬಾಗಿಲ ಮೇಲೆ ಯಾರೋ ಬೆರಳುಗಳಿಂದ ಸದ್ದು ಮಾಡಿದಂತಾಯಿತು.

"ಯಾರು?" ಎನ್ನುತ್ತಾ ಮೀರಾ ಎದ್ದು ಅಗುಳಿಯನ್ನು ತೆಗೆದಳು. ಶಾಮು ಒಳಗೆ ಬಂದ.

"ಊಟವಾದ ಕೂಡಲೇ ಮಲಗುವ ಪದ್ಧತಿ ಬಿಟ್ಟುಬಿಟ್ಟಿರೇನು?"

"ಇಲ್ಲ."

"ಮಲಗೋಲ್ಲವೇ?"

"ಮಲಗೋಣಾಂತಾನೇ ಇಲ್ಲಿಗೆ ಬಂದಿದ್ದು."

"ಓ!" ಎಂದಳು ಮೀರ. ಮುಂದೇನೋ ಹೇಳಲು ಹೋಗಿ ಅವಳು ನಾಲಿಗೆ ಬಿಗಿಹಿಡಿದಳು.

ಅವಳ ಆಶ್ಚರ್ಯವನ್ನು ಗಮನಿಸುವಂತೆ ಶಾಮು ತಾನೇ ಮುಂದಾಗಿ ಹೋಗಿ ಅವಳ ಹಾಸಿಗೆಯ ಮೇಲೆ ಉರುಳಿಕೊಂಡ.

"ಸರಸಿ ಏನು ಮಾಡ್ತಿದ್ದಾಳೆ?"

"ಏನು ಮಾಡ್ತಿದಾಳೋ ನಾನು ನೋಡಲಿಲ್ಲ" ಎಂದ ಶಾಮು. ಮೀರ ಕುರ್ಚಿಯ ಮೇಲೆ ಕುಳಿತು ಪುಸ್ತಕವನ್ನು ಮುಂದುವರಿಸಿದಳು. ಶಾಮು ಕಣ್ಣು ಮುಚ್ಚಿಕೊಂಡು ನಿದ್ರಿಸಲು ಯತ್ನಿಸಿದ.

ತಾನು ಊರಿಗೆ ಬಂದಕೂಡಲೇ ಸರಸಿಯನ್ನು ಅವಳ ಪಾಡಿಗೆ ಬಿಟ್ಟು, ತನ್ನ ಹಿಂದೆ ಶಾಮು ಓಡಿಬಂದರೆ ಅವಳಾದರೂ. ಏನು ಭಾವಿಸುತ್ತಾಳೋ? ಶಾಮು ಮಾಡಿದ್ದು ಖಂಡಿತ ಸರಿಯಲ್ಲ.

ಮೀರ ಎದ್ದು ಶಾಮುವಿನ ಬಳಿಗೆ ಹೋಗಿ, "ನನಗೆ ನಿದ್ದೆ ಬರುತ್ತಿದೆ" ಎಂದಳು.

"ನೀನು ಮಲಗಲು ನನ್ನಡ್ಡಿಯೇನೂ ಇಲ್ಲ."

"ನೀವಿಲ್ಲಿದ್ದರೆ ನನಗೆ ನಿದ್ದೆ ಬರೋದಿಲ್ಲ. ನೀವು... ನಿಮ್ಮ ರೂಮಿಗೇ ಹೋಗ್ತೀರಾ?"

"ಇದೇ ನನ್ನ ರೂಮು" ಶಾಮು ಮೊಂಡನಾಗಿ ಹೇಳಿದ.

"ನೀವು ಈ ಕ್ಷಣ ಹೊರಕ್ಕೆ ಹೋಗದಿದ್ದರೆ ನಿಮ್ಮನ್ನು ನನ್ನ ರೂಮಿನಿಂದಾಚೆ

ತಳ್ಳಿಬಿಡುತ್ತೇನೆ" ಮೀರ ಮುನಿಸಿನಿಂದ ಹೇಳಿದಳು.

"ತಳ್ಳು ನೋಡೋಣ."

ಮೀರ ಶಾಮುವಿನ ತೋಳು ಹಿಡಿದು ಎಳೆದಳು. ಶಾಮು ನಗುತ್ತಾ ಬಲಗೈಯಿಂದ ಅವಳನ್ನು ಹತ್ತಿರಕ್ಕೆಳೆದುಕೊಂಡು,

"ಸಾಧ್ಯವಾದರೆ, ಬಲವಿದ್ದರೆ ಬಿಡಿಸಿಕೋ" ಎಂದ.

ಸರಸಿಗೂ ಮೀರಳಿಗೂ ಎಷ್ಟು ಅಂತರ! ಶಾಮು ಹಾಕಿದ ಗೆರೆಯನ್ನು ಸರಸಿ ದಾಟುತ್ತಿರಲಿಲ್ಲ. ಅತ್ಯಂತ ನಮ್ರಳಾಗಿ, ವಿಧೇಯಳಾಗಿ ಶಾಮು ಹೇಳಿದ ಕೆಲಸವನ್ನು ಕೂಡಲೇ ಸರಸಿ ಮಾಡುತ್ತಿದ್ದಳು. ಸರಸಿಗೆ ಸ್ವಂತ ಅಭಿಪ್ರಾಯ, ಸಲಹೆಗಳಿವೆಯೇ ಎಂದು ಶಾಮು ಆಗಾಗ್ಗೆ ಯೋಚಿಸುತ್ತಿದ್ದ. ಶಾಮುವಿನ ಅಪೇಕ್ಷೆ, ಆಸೆಗಳು ಅವಳ ಆಸೆ ಅಪೇಕ್ಷೆಗಳಾಗಿದ್ದವು. ಅವಳ ಯಾಂತ್ರಿಕ ಚಲನವಲನ, ಹೇಳಿದಂತೆ ಕೇಳುವ ಸ್ವಭಾವ ಕೆಲವು ಸಲ ಶಾಮುವಿಗೆ ಬೇಸರವನ್ನುಂಟುಮಾಡಿದ್ದವು.

"ಸರಸಿ, ನಿನಗೆ ಇದು ಇಷ್ಟವೇ?"

"ಹೂಂ."

"ಅಲ್ಲಿಗೆ ಹೋಗೋದು ಬೇಡ."

"ಆಗಲಿ."

"ಈ ಸೀರೆ ಚೆನ್ನಾಗಿದೆಯಲ್ಲವೇ?"

"ಹೌದು."

ಸರಸಿ ತಾನು ಹೇಳುವುದಕ್ಕೆಲ್ಲಾ ಮೂಕ ಬಸವನಂತೆ ತಲೆತೂಗಿದಾಗ, ಶಾಮುವಿನ ಮನಸ್ಸು ಮೀರಳನ್ನು ನೆನೆಯುತ್ತಿತ್ತು. ಶಾಮುವಿನ, ತನ್ನ ಅಭಿಪ್ರಾಯಗಳು ಭಿನ್ನವಾದಾಗ ಮೀರ ಶಾಮುವಿನೊಡನೆ ಜಗಳವಾಡಿ ಚರ್ಚೆ ಮಾಡುತ್ತಿದ್ದಳು. ಮೀರಳೊಡನೆ ಜಗಳವಾಡಿ ಅವಳನ್ನು ರೇಗಿಸುವುದೆಂದರೆ ಶಾಮುವಿಗೆ ಬಹಳ ಪ್ರಿಯವಾದ ಕೆಲಸ. ಪ್ರತಿಭಟನೆ ಹೆಚ್ಚಿದಷ್ಟೂ ಶಾಮುವಿನ ಮನಸ್ಸಿಗೆ ಅಪಾರ ಆನಂದವಾಗುತ್ತಿತ್ತು. ಮೀರ ಸಿಟ್ಟಿನಿಂದ ಉನ್ಮತ್ತಳಾದಾಗ ಅವಳನ್ನು ಕೈವಶ ಮಾಡಿಕೊಂಡು, ಅವಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸುತ್ತಿದ್ದ. ಕೆಲವು ಬಾರಿ ಅವಳು ರೇಗಿದಷ್ಟೂ ತಾನೂ ದೈನ್ಯವಾಗಿ ಅವಳ ಒಲವನ್ನು ಪಡೆಯುತ್ತಿದ್ದ. ಪ್ರೇಮಕದನದಲ್ಲಿ ಶಾಮು ಸೋತರೂ ಸುಖಿ, ಗೆದ್ದರೂ ಸುಖಿ.

ಸರಸಿಯೊಡನೆ ಯುದ್ಧದ ಪ್ರಶ್ನೆಯೇ ಇರಲಿಲ್ಲ. ಸರಸಿ ಸಂಪೂರ್ಣ ಶರಣಾಗತಳು. ಪ್ರತಿಯೊಂದು ಕೆಲಸದಲ್ಲಿಯೂ ಸರಸಿ ಶಾಮುವಿನ ಅಡಿಯಾಳು. ಮೀರ ತೆರೆಯ ಮೇಲೆ ತೆರೆಯನ್ನು ಉತ್ಪನ್ನ ಮಾಡುವ ಸಮುದ್ರವಾದರೆ, ಸರಸಿ

ಶಾಂತವಾಗಿ ಹರಿಯುವ ನದಿ. ಶಾಮುವಿನದು ಸಾಹಸ ಪ್ರಕೃತಿ. ಬಿರುಗಾಳಿಯಲ್ಲಿ ಭೋರ್ಗರೆಯುತ್ತಿರುವ ಸಮುದ್ರದೊಳಗೆ ಧುಮುಕಿ ತೆರೆಗಳನ್ನು ಸೀಳಿ, ಅವುಗಳ ಮೇಲೆ ತನ್ನ ವಿಜಯಪತಾಕೆ ಹಾರಿಸುವುದರಲ್ಲಿ ಅವನಿಗೆ ಹೆಚ್ಚು ಆನಂದ. ಶಾಂತವಾಗಿರುವ ನದಿಯಲ್ಲಿ ಈಜುವುದೆಂದರೆ ಅದರಲ್ಲಿ ಅವನಿಗೆ ಯಾವ ವಿಧವಾದ ರೋಮಾಂಚನವೂ ಇರಲಿಲ್ಲ.

ಈ ಬಾರಿಯೂ ಹಾಗೆಯೇ ಆಯಿತು. ಶಾಮುವಿನ ತೋಳಿನಲ್ಲಿ ಸೋತು ಒರಗಿದವಳು ಮೀರ. ಅವಳ ಮೇಲೆ ವಿಜಯ ಸಾಧಿಸಿದಾಗ ಶಾಮುವಿಗೆ ಎಲ್ಲಿಲ್ಲದ ತೃಪ್ತಿ.

ತನ್ನ ಕಣ್ಣು ತಪ್ಪಿಸಿ ಹೊರಗೆ ಹೋದ ತಾಯಿ ಮನೆಗೆ ಬಂದಕೂಡಲೇ ಮಗು ಎಡೆಬಿಡದೆ ತಾಯಿಯನ್ನು ಹಿಂಬಾಲಿಸಿ ಅವಳೊಡನೆಯೇ ಇರುವಂತೆ, ಶಾಮು ಮೀರಳೊಡನೆ ಕಾಲ ಕಳೆಯುತ್ತಿದ್ದ. ತಾನು ಒಂದು ಗಳಿಗೆ ಕಾಣದಿದ್ದರೆ 'ಮೀರಾ' ಎಂದು ಕೂಗಿ ಗಲಾಟೆ ಮಾಡಿಬಿಡುತ್ತಿದ್ದ. ಒಂದು ದಿನ ಇದರ ವಿಷಯ ವಾಗಿಯೇ ಅವರಿಬ್ಬರಿಗೂ ಚರ್ಚೆ ನಡೆಯಿತು.

ಆ ದಿನ ಊಟವಾದ ಕೂಡಲೇ ಶಾಮುವಿನ ಕಣ್ಣು ತಪ್ಪಿಸಿ ಮೀರ ಜೋಯಿಸರ ಮನೆಗೆ ಹರಟೆ ಹೊಡೆಯಲು ಹೋಗಿದ್ದಳು. ಊಟವಾದ ಮೇಲೆ ಸರಸಿಯೇ ಎಲೆ ಅಡಿಕೆ ತಂದುಕೊಟ್ಟಳು.

"ಮೀರ ಎಲ್ಲಿ ಕಾಣ್ತೋದೆ ಇಲ್ಲವಲ್ಲಾ?" ಎಂದ ಶಾಮು.

ಸರಸಿಗೆ ಅವನ ಮಾತು ಕೆನ್ನೆಗೆ ಹೊಡೆದಂತಾಯಿತು. ಅವಳು ಸಿಟ್ಟು ಮತ್ಸರವನ್ನು ನುಂಗಿಕೊಂಡು,

"ಎಲ್ಲೋ ಹೋಗಿರಬೇಕು. ನಾನು ನೋಡಲಿಲ್ಲ" ಎಂದಳು.

ಶಾಮು ಸುಮ್ಮನಾದ. ಸರಸಿಯೇ ಕೇಳಿದಳು.

"ಎಲೆ ಅಡಿಕೆ ಮಡಿಸಿಕೊಡಲೇನು?"

"ಏನೂ ಬೇಡ ಬಿಡು."

ಸರಸಿಗೆ ಎಲೆ ಅಡಿಕೆ ಮಡಿಸಿಕೊಡುವ ಪ್ರಕರಣ ಇಷ್ಟವಿಲ್ಲದಿದ್ದರೆ ಶಾಮು ಅವಳಿಗೆ ಒತ್ತಾಯ ಮಾಡುತ್ತಿದ್ದನೋ ಏನೋ?

ಗಂಡನ ಮಾತು ಕೇಳಿ ಸರಸಿಗೆ ತಡೆಯಲಾರದಷ್ಟು ಕೋಪಬಂತು. ಪ್ರತಿ ಯೊಂದು ಕೆಲಸದಲ್ಲೂ, ವಿಷಯದಲ್ಲೂ ಶಾಮುವಿಗೆ ತನ್ನನ್ನು ಕಂಡರೆ ತಾತ್ಸಾರವೇಕೆ? ರಜಕ್ಕೆ ಮೀರ ಬಂದಾಗಿನಿಂದ ಶಾಮು ಹಗಲಿರುಳೂ ಅವಳ ಬಳಿಯೇ ಕಾಲ ಕಳೆಯುತ್ತಿದ್ದ. ಮೀರ ಊರಲ್ಲಿ ಇಲ್ಲದಾಗ ಮಾತ್ರ ನಾನು ಬೇಕು.

ಅವಳು ಹಳ್ಳಿಗೆ ಬಂದಾಗ ಮಾತ್ರ ನನ್ನನ್ನು ಕಣ್ಣೆತ್ತಿಯೂ ನೋಡುವುದಿಲ್ಲ. ಇದಾವ ನ್ಯಾಯ? ತನ್ನನ್ನು ಅವಮಾನಿಸಲೆಂದೇ ಶಾಮು, ಮೀರ ಈ ಮನೆಗೆ ಕರೆತಂದಿರ ಬೇಕು. ತನಗೆ ಅಪ್ಪನ ಮನೆಯಲ್ಲಿ ತಿನ್ನಲು ಹಿಟ್ಟಿರಲಿಲ್ಲವೇ?

"ನಾನು ಮಡಿಸಿಕೊಟ್ಟರೆ ನಿಮಗೆ ಸೇರುವುದಿಲ್ಲವೇನೋ?" ಅವಳ ಮಾತಿನಲ್ಲಿ ವ್ಯಂಗ್ಯವಿತ್ತು.

ಶಾಮು ಕತ್ತೆತ್ತಿ ಸರಸಿಯನ್ನು ನೋಡಿದ. ಸರಸಿ ಅವನನ್ನು ಮೊದಲನೆಯ ಬಾರಿ ಎದುರಿಸಿದ್ದಳು. ಅವಳ ಮುಖದಲ್ಲಿ ಮತ್ಸರ ಮನೆಮಾಡಿತ್ತು. ಶಾಮುವಿಗೆ ಅವಳನ್ನು ಮತ್ತಷ್ಟು ರೇಗಿಸಬೇಕೆನಿಸಿತು.

"ಹೌದು. ನೀನು ಮಡಿಸಿಕೊಟ್ಟರೆ ನನಗೆ ಸೇರೋದಿಲ್ಲ."

"ಮೀರ ಮಡಿಸಿಕೊಟ್ಟರೆ?"

"ಅದರ ರುಚಿಯೇ ಬೇರೆ."

"ವರ್ಷವೆಲ್ಲಾ ಅವರೇ ಇರುತ್ತಾರೇನೋ?"

"ಇಲ್ಲ, ಆದುದರಿಂದ ಅವಳು ಬಂದಾಗಲೇ ಅವಳಿಂದ ಆದಷ್ಟು ಸೇವೆ ಮಾಡಿಸಿಕೊಳ್ಳೋಣಾಂತ....." ಶಾಮು ನಗುತ್ತಲೇ ಇದ್ದ.

"ಅವರಿಲ್ಲದೇ ಇದ್ದಾಗ ಮಾತ್ರ ನಾನು ಬೇಕು. ಈ ಸಂಭ್ರಮಕ್ಕೆ ನನ್ನ ಯಾಕೆ ಮದುವೆ ಮಾಡಿಕೋಬೇಕಾಗಿತ್ತೋ" ಎನ್ನುತ್ತಾ ಸರಸಿ ಹೊರಟು ಹೋದಳು. ಮೀರ ಬಂದಾಗಿನಿಂದ ಅವಳಿಗೆ ಅವನು ತೋರುತ್ತಿದ್ದ ವಿಶ್ವಾಸ, ಸ್ನೇಹ ಕಂಡು ರೋಸಿಹೋದ ಮನಸ್ಸು ನುಡಿದ ಮಾತದು. ಈ ಮನೆಯಲ್ಲಿ ತಾನು ಎಲ್ಲರಿಗಿಂತಲೂ ನಿಕೃಷ್ಟ ಎಂಬ ಭಾವನೆ ಎಲ್ಲರಿಗೂ.

ವೆಂಕಮ್ಮನವರು ಹೇಳಿದ್ದರು, 'ನೀನು ಮನೆ ಯಜಮಾನಿ. ನೀನು ಏನು ಹೇಳಿದರೆ ನಾನು ಅದನ್ನು ಮಾಡ್ತೀನಿ' ಎಂದು. ಹಾಗೆ ಅವರು ಹೇಳಿದ್ದು ತನಗೆ... ಮೀರಾಗೆ. ಮನೆಯ ಆಳುಕಾಳುಗಳಿಗೆಲ್ಲಾ ಮೀರ, "ಅಮ್ಮಾ" ಆದರೆ ತಾನು ಕೇವಲ "ಸರಸವ್ವ" ಮಾತ್ರ. ಶಾಮುವಿನ ತುಟಿಯ ಮೇಲಿನಿಂದ ಮೀರಳ ಹೆಸರು ಮರೆಯಾಗುತ್ತಲೇ ಇರಲಿಲ್ಲ. ಎಲ್ಲ ವಿಷಯದಲ್ಲೂ ಅವಳಿಗೆ ಪ್ರಥಮ ಸ್ಥಾನ. ಮನೆಯಲ್ಲಿ ಎಲ್ಲರೂ ಅವಳನ್ನು ಮೆಚ್ಚಿಸಲು, ಅವಳಿಂದ ಒಂದು ಒಳ್ಳೆಯ ಮಾತನ್ನು ಕೇಳಲು ಪ್ರಯತ್ನಿಸುತ್ತಿದ್ದರು. ಆದರೂ ಅವಳು ಸ್ವಲ್ಪವಾದರೂ ಕೃತಜ್ಞತೆ ತೋರಿಸುತ್ತಿದ್ದಳೇ? ಊಹೂಂ. ಅವಳಿಗೆ ಕೃತಜ್ಞತೆ ಇರಲಿಲ್ಲ. ತಾನು ರಾಣಿ, ಇತರರೆಲ್ಲಾ ತನ್ನ ಸಂತೋಷ, ಸುಖಕ್ಕಾಗಿ ದುಡಿಯುತ್ತಿರುವ ಆಳುಗಳು ಎನ್ನುವಂತೆ ಠೀವಿಯಿಂದ ಇರುತ್ತಿದ್ದಳು. ಇಷ್ಟು ದಿನ ತಾನು ಹೇಗೋ ಸಹಿಸಿದ್ದಾಯಿತು.

ಇನ್ನು ಮುಂದೆ ಸಹಿಸುವುದು ತನ್ನಿಂದಂತೂ ಸಾಧ್ಯವೇ ಇರಲಿಲ್ಲ.

ಸರಸಿಗೆ ಅಳು ಬರಲಿಲ್ಲ. ಅದರ ಬದಲು ಏನೋ ಒಂದು ಬಗೆಯ ದೃಢನಿಶ್ಚಯತೆ ಅವಳ ಮುಖದ ಮೇಲೆ ಒಡೆದು ಮೂಡಿತ್ತು.

ಮೀರ ಮೈಸೂರಿನ ಕಾಲೇಜಿನಲ್ಲಿ ಓದುವಾಗ ತಾವೆಲ್ಲರೂ ಅಲ್ಲಿ ಎಷ್ಟು ಸಂತೋಷ, ಶಾಂತಿಯಿಂದಿದ್ದರು? ಅವಳು ರಜೆಯಲ್ಲಿ ಊರಿಗೆ ಬಂದೊಡನೆ ತನ್ನ ಮನಸ್ಸಿನ ಶಾಂತಿ ದೂರವಾಗಿತ್ತು. ಸದ್ಯ ಈ ರಜ ಎಂದಿಗೆ ಕಳೆಯುವುದೋ?

ಜೋಯಿಸರ ಮನೆಯಿಂದ ಮೀರ ಬಂದಾಗ ಮನೆಯಲ್ಲಿ ಅವಳು ನಿರೀಕ್ಷಿಸಿದ್ದ ವಾತಾವರಣ ಇರಲಿಲ್ಲ.

ಶಾಮು ಉಯ್ಯಾಲೆಯ ಮೇಲೆ ಕುಳಿತು ಎಲೆ ಅಡಿಕೆ ಹಾಕಿಕೊಳ್ಳುತ್ತಿದ್ದ ಸರಸಿ ತನ್ನ ರೂಮಿನ ಬಾಗಿಲನ್ನು ಹಾಕಿಕೊಂಡು ಮಲಗಿದ್ದಳು. ಮೀರ ಬರುತ್ತಲೇ ಶಾಮು ಕೇಳಿದ.

"ಎಲ್ಲಿಗೆ ಹೋಗಿದ್ದೆ, ಮೀರಾ?"

"ಜೋಯಿಸರ ಮನೆಗೆ ಹೋಗಿದ್ದೆ. ಒಂದು ಗಳಿಗೆ ಎಲ್ಲಾದರೂ ಹೋದರೆ ಮುದುಕ ಗಂಡನಂತೆ ಇದೇನು ಇಷ್ಟು ತನಿಖೆ ಮಾಡ್ತೀರಾ? ಸದ್ಯ ನನಗೆ ನಿಮ್ಮೊಬ್ಬರ ಕಾಟವೇ ಸಾಕಾಗಿದೆ."

"ಈ ಬಿಸಿಲಿನಲ್ಲಿ ಯಾಕೆ ಹೋದೆ?"

"ನಿಮ್ಮ ಮುಂದೆ ಕುಳಿತುಕೊಂಡು ಲಲ್ಲೆ ಹೊಡೀಬೇಕೇನೋ?ಸರಸಿ ಇದ್ದಳಲ್ಲಾ ಆ ಕೆಲಸಕ್ಕೆ" ಎನ್ನುತ್ತಾ ಮೀರ ಹೊರಟಳು.

"ಸರಸಿ ಬರಲೇ ಇಲ್ಲ."

"ಎಲ್ಲಿ ಅವಳು?" ಮೀರ ಕೇಳಿದಳು.

"ಮಲಗಿರಬೇಕು. ಇಲ್ಲಿ ಒಂದು ಮಾತು ಕೇಳು...."

ಮೀರ ತನ್ನ ರೂಮಿಗೆ ಹೋಗಿ ರಪ್ಪನೆ ಬಾಗಿಲನ್ನು ಹಾಕಿಕೊಂಡಳು. ಹಿಂದಿ ಗೀತೆಯನ್ನು ಮೀರ ಗುಣಗುಣಿಸುತ್ತಿರುವುದು ಶಾಮುವಿಗೆ ಕೇಳಿಸಿತು.

ಮಾರನೆಯ ದಿನದಿಂದ ಸರಸಿ ತನ್ನ ಅಸಮಾಧಾನವನ್ನು ಸ್ಪಷ್ಟವಾಗಿ ವ್ಯಕ್ತಪಡಿಸತೊಡಗಿದಳು. ಶಾಮುವಿನಿಂದ ಹಿಡಿದು ಮನೆಯ ಆಳುಗಳವರೆವಿಗೂ ಎಲ್ಲರೂ ತನ್ನನ್ನು ಮೀರಳಿಗಿಂತ ಕಡೆಯಾಗಿ ಕಾಣುತ್ತಿರುವುದು ಅವಳ ಮನಸ್ಸಿಗೆ ಹಿಡಿಸದಾಗಿತ್ತು. ತನ್ನ ಮದುವೆಯಾದ ಹೊಸದರಲ್ಲಿ ಈ ಬಗೆಯ ವ್ಯತ್ಯಾಸವನ್ನು ಅವಳು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಂಡಿರಲಿಲ್ಲ. ಸಾಲದುದಕ್ಕೆ ಮದುವೆಯಾದ ಸ್ವಲ್ಪ ದಿನಗಳಿಗೇ ಮೀರ ಮೈಸೂರಿಗೆ ಹೊರಟುಹೋಗಿದ್ದುದರಿಂದ, ಅವಳು

ಈ ಅಂತರವನ್ನು ಗುರುತಿಸಿರಲಿಲ್ಲ. ಮೀರ ಮತ್ತೆ ಹಳ್ಳಿಗೆ ಬಂದಮೇಲೆ ಅವಳು ಈ ವ್ಯತ್ಯಾಸವನ್ನು ಗುರುತಿಸಿ ಕುಪಿತಳಾಗಿದ್ದಳು. ಅದುವರೆವಿಗೂ ಮೀರಳೊಡನೆ ಸ್ನೇಹ, ವಿಶ್ವಾಸದಿಂದಿದ್ದ ಸರಸಿ ಈಗ ಅವಳನ್ನು ಕಂಡರೆ ಮುಖ ತಿರುಗಿಸುತ್ತಿದ್ದಳು. ಸಾಲದುದಕ್ಕೆ ಶಾಮು ತನ್ನನ್ನು ಮೊದಲು ತಿರಸ್ಕರಿಸಿ ಮೀರಳ ಕೈಹಿಡಿದಾಗಲೇ ಅವಳಿಗೆ ಮೀರಳಲ್ಲಿ ಅಸೂಯೆ ಉಂಟಾಗಿತ್ತು. ಶಾಮು ತನ್ನನ್ನೇ ಮೊದಲು ಮದುವೆಯಾಗಿದ್ದರೆ ತಾನು ಈ ಮನೆಯ ಏಕೈಕ ಒಡತಿಯಾಗಬಹುದಿತ್ತು. ಶಾಮುವಿನ ಹೃದಯಸಾಮ್ರಾಜ್ಯದ ಏಕಮಾತ್ರ ಸಾಮ್ರಾಜ್ಞಿಯಾಗಿರಬಹುದಿತ್ತು.

ಸರಸಿಯ ಸ್ವಭಾವದಲ್ಲುಂಟಾದ ವ್ಯತ್ಯಾಸವನ್ನು ಮೊದಲು ಗಮನಿಸಿದವಳು ಮೀರ.

ಒಂದು ದಿನ ಅಡುಗೆಯಾಗುತ್ತಲೇ ವೆಂಕಮ್ಮನವರು ಎಲ್ಲರನ್ನೂ ಊಟಕ್ಕೆ ಎಬ್ಬಿಸಿದರು. ಶಾಮು, ಮೀರ ಒಳಗೆ ಬಂದರೂ ಸರಸಿ ಮಾತ್ರ ಬರಲಿಲ್ಲ. ಮೀರ ಅವಳನ್ನು ಪುನಃ ಬಂದು ಕರೆದಾಗ,

"ನನಗೆ ಹಸಿವಿಲ್ಲ. ನೀವು ಊಟ ಮಾಡಿಬಿಡಿ. ನಾನು ನಿಧಾನವಾಗಿ ಮಾಡುತೇನೆ" ಎಂದಳು ಸರಸಿ.

"ಸೇರಿದಷ್ಟೇ ಮಾಡುವಿಯಂತೆ."

"ಬೇಡ. ನನಗೆ ಈಗ ಖಂಡಿತ ಬೇಡ."

ಮೀರ ನಿರುಪಾಯಳಾಗಿ ಒಳಗೆ ಹೋಗಿ ಶಾಮುವಿಗೆ-

"ಅವಳಿಗೆ ಹೇಗೆ ಬೇಕೋ ಹಾಗೆ ಮಾಡಲಿ" ಎಂದ ಶಾಮು.

"ನೀವೇ ಹೋಗಿ ಕರೆಯಿರಿ. ಆಗ ಬಂದರೂ ಬರಬಹುದು."

"ಹಾಗೇ ಅಕ್ಷತೆ ಬಟ್ಟಲನ್ನೂ ತಗೊಂಡು ಹೋಗಲೇನು?" ಎಂದು ಶಾಮು ನಗೆಯಾಡಿದ.

ಶಾಮುವೇ ಬಂದು ತನ್ನನ್ನು ಕರೆಯಬಹುದೆಂದು ಸರಸಿ ನಿರೀಕ್ಷಿಸಿದ್ದಳು. ಆದರೆ ಅವಳ ನಿರೀಕ್ಷೆ ವ್ಯರ್ಥವಾಯಿತು. ಹಿಂದೊಮ್ಮೆ ಮೀರ, 'ಈಗಲೇ ಹಸಿವಿಲ್ಲ' ಎಂದಾಗ ಶಾಮು, 'ಎಲ್ಲರೂ ಒಟ್ಟಿಗೆ ಕುಳಿತುಕೊಳ್ಳೋಣ' ಎಂದಿರಲಿಲ್ಲವೇ?

ಮೀರಳಿಗಿರುವ ಕಿರೀಟವಾದರೂ ಏನು?

ಸರಸಿ ಏನಾದರೂ ನೆಪ ಹೇಳಿ ಊಟ, ತಿಂಡಿಗೆ ಕೂರುವುದನ್ನು ತಪ್ಪಿಸಿ ಕೊಳ್ಳುತ್ತಿದ್ದಳು.

ಒಂದು ಘಟನೆಯಿಂದ ಸರಸಿಯ ಮನಸ್ಸು ಒಡೆದುಹೋಯಿತು. ನಡೆದ ಪ್ರಸಂಗವಾದರೋ ಬಹಳ ಸಣ್ಣದು.

ಒಂದು ದಿನ ಸರಸಿ ದೇವಸ್ಥಾನದಿಂದ ಮನೆಗೆ ಬರುವಾಗ ಬೋರ ಕಾಂಪೌಂಡಿನಲ್ಲಿದ್ದ 'ನಿಶಾರಾಣಿ'ಯ ಪೊದೆಯನ್ನು ಬುಡದ ಸಮೇತ ಕತ್ತರಿಸಿ ಹಾಕುತ್ತಿದ್ದ. ಬೋರನ ಅಧಿಕ ಪ್ರಸಂಗತನ ಕಂಡು ಸರಸಿ ಕೆರಳಿದಳು.

ಸರಸಿಗೆ ನಿಶಾರಾಣಿಯ ಹೂವಿನ ವಾಸನೆಯೆಂದರೆ ಬಹಳ ಪ್ರೀತಿ. ಆದುದರಿಂದಲೇ ಅವಳು ತವರುಮನೆಯಿಂದ ಗಂಡನ ಮನೆಗೆ ಬರುವಾಗ ತಮ್ಮ ಹಳ್ಳಿಯಲ್ಲಿದ್ದ ಪೊದೆಯನ್ನು ತರಿಸಿ ಕಾಂಪೌಂಡಿನಲ್ಲಿ ಹಾಕಿಸಿದ್ದಳು. ರಾತ್ರಿಯ ಹೊತ್ತು ಗಾಳಿ ಬೀಸಿದಾಗಲೆಲ್ಲಾ ಹೂವಿನ ಉಗ್ರವಾಸನೆ ಅವಳ ಕೊಠಡಿಗೆ ಹರಿದುಬರುತ್ತಿತ್ತು.

ಮೀರ ಹುಲುಸಾಗಿ ಬೆಳೆದಿದ್ದ ಪೊದೆಯನ್ನು ನೋಡಿ ಬೋರನಿಗೆ,

"ಬೋರಾ. ಅದನ್ನು ಕತ್ತರಿಸಿ ಹಾಕಿಬಿಡೋ. ಇಲ್ಲದಿದ್ದರೆ ಹಾವುಗಳು ಅದರ ವಾಸನೆಗೆ ಬಂದುಬಿಡುತ್ತವೆ" ಎಂದಳು.

ಬೋರ ಅಮ್ಮನವರ ಅಪ್ಪಣೆಯನ್ನು ಪರಿಪಾಲಿಸುತ್ತಿದ್ದ.

ಸರಸಿ ಕಣ್ಣು ಕೆಂಪು ಮಾಡಿಕೊಂಡು ಗದರುವ ದನಿಯಲ್ಲಿ-

"ಯಾಕೋ ಪೊದೇನ ಕೀಳ್ತಿದೀಯಾ? ಬುದ್ಧಿ ಸರಿಯಾಗಿದೆಯೋ ಇಲ್ಲವೋ?" ಎಂದು ಕೂಗಿದಳು.

"ಅಮ್ಮನವರು ಕತ್ತರಿಸಿ ಆಕ್ಬಿಡೂಂತ ಅಂದ್ರು ಸರಸವ್ವ."

"ನಾನು ಹೇಳಿರಲಿಲ್ಲವೇನೋ ಕತ್ತರಿಸಬೇಡಾಂತ."

"ದೊಡ್ಡಮ್ಮಾವರು ತೆಗೆದು ಆಕ್ಬಿಡೂಂದ್ರು" ಎನ್ನುತ್ತಾ ಬೋರ ಪೊದೆಯನ್ನು ಬೇರುಸಮೇತ ಕಿತ್ತು ಹೊರತೆಗೆದ.

ನಿಶಾರಾಣಿಯನ್ನು ಸರಸಿ ತವರು ಮನೆಯಿಂದ ತಂದು ಹಾಕಿದ್ದಳೆಂಬ ವಿಷಯ ಮೀರಳಿಗೆ ತಿಳಿದಿರಲಿಲ್ಲ. ಕಾಡಾಗಿ ಬೆಳೆಯತೊಡಗಿದ್ದ ಆ ಪೊದೆ ಹಾವುಗಳಿಗೆ ಆಶ್ರಯವಾಗಬಹುದೆಂದು ಹೆದರಿ ಅವಳು ಬೋರನಿಗೆ ಕಿತ್ತುಹಾಕುವಂತೆ ಹೇಳಿದ್ದಳು.

ಆದರೆ ಸರಸಿ ಅದನ್ನು ತಪ್ಪಾಗಿ ಭಾವಿಸಿದಳು. ಮೀರ ತನ್ನನ್ನು ಅವಮಾನಪಡಿಸುವುದಕ್ಕಾಗಿಯೇ ಪೊದೆಯನ್ನು ಕೀಳಿಸಿರಬೇಕೆಂದು ಅವಳು ಭಾವಿಸಿದಳು.

ಗಿಡ ಹೋಯಿತಲ್ಲಾ ಎಂಬ ದುಃಖದಿಂದ ಸರಸಿಗೆ ತುಂಬ ಅಳು ಬಂತು.

ಶಾಮು ಗದ್ದೆಯ ಕಡೆಯಿಂದ ಬರುವ ಹೊತ್ತಿಗೆ ಅತ್ತು ಅತ್ತು ಸರಸಿಯ ಕಣ್ಣುಗಳು ಕೆಂಪಗೆ ಊದಿಕೊಂಡಿದ್ದವು. ಮೀರ ಅವಳನ್ನು ಮಾತನಾಡಿಸಲು ಪ್ರಯತ್ನಪಟ್ಟಿದ್ದರೂ ಸರಸಿ ಮಾತನಾಡಿರಲಿಲ್ಲ. ಶಾಮು ಬರುತ್ತಲೇ ಮೀರ

ಹೇಳಿದಳು.

"ಸರಸಿ ಯಾಕೋ ತುಂಬ ಅತ್ತಿರುವ ಹಾಗಿದೆ. ಯಾಕೆಂದು ಕೇಳಿದರೆ ಹೇಳೋದಿಲ್ಲ."

ಶಾಮು ತಾನೇ ಹೋಗಿ ಸರಸಿಯನ್ನು ವಿಚಾರಿಸಿದ.

"ಬೋರ ರಾತ್ರಿರಾಣಿ ಗಿಡಾನೆಲ್ಲಾ ಕತ್ತರಿಸಿಹಾಕಿದಾನೆ. ನಾನದನ್ನು ಆಸೆಪಟ್ಟು ಹಳ್ಳಿಯಿಂದ ತರಿಸಿಹಾಕಿದ್ದೆ."

"ನೀನವನಿಗೆ ಕತ್ತರಿಸಬೇಡಾಂತ ಹೇಳಬೇಕಾಗಿತ್ತು."

"ನಾನೇನೋ ಹೇಳಿದ್ದೆ. ಆದರೆ...." ಸರಸಿ ಉಗುಳು ನುಂಗಿದಳು.

"ಹಾಗಾದರೂ ಯಾಕೆ ಕಡಿದ ಅವನು?"

"ಮೀರ ಕಡಿದುಬಿಡು ಎಂದರಂತೆ..."

ಶಾಮು ಅಪ್ರತಿಭನಾಗಿ ನಿಂತುಬಿಟ್ಟ. ಮೀರ, ಸರಸಿ ಸ್ನೇಹದಿಂದಿರುವರೆಂದೇ ಅವನು ಭಾವಿಸಿದ್ದ. ಸರಸಿ ಒಂದು ಸಣ್ಣ ವಿಷಯವನ್ನು ದೊಡ್ಡದು ಮಾಡಿ ಅತ್ತಿರುವ ಕಾರಣವಾದರೂ ಏನು? ಗಳಿಗೆಯಲ್ಲಿ ಚೇತರಿಸಿಕೊಂಡು ಶಾಮು ನುಡಿದ.

"ಅವಳಿಗೆ ನೀನು ಹಾಕಿಸಿದೀಯಾಂತ ತಿಳಿದಿರಲಾರದು. ತಿಳಿದಿದ್ದರೆ ಖಂಡಿತ ಕಡಿಸುತ್ತಿರಲಿಲ್ಲ."

"ಏನೋ ಯಾರಿಗೆ ಗೊತ್ತು?"

"ಸರಸೀ!" ಶಾಮು ರೇಗಿದ.

"ನಿಮಗೆ ಅವರೇನು ಮಾಡಿದರೂ ಸರಿ. ನಾನು ಒಂದು ಮಾತನಾಡಿದರೆ ಅದು ನಿಮಗೆ ತಪ್ಪಾಗಿ ಕಾಣುತ್ತೆ, ಅಲ್ವೇ?"

"ಮೀರಾನ ಇಲ್ಲಿಗೇ ಕರೆದುಕೇಳಲೇ?" ಶಾಮು ಕೇಳಿದ.

"ನಿಮ್ಮೆದುರಿಗೆ ಅವರು ತಮ್ಮ ತಪ್ಪು ಒಪ್ಕೋತಾರೆಯೇ? ಇನ್ನು ಒಪ್ಪಿ ಕೊಂಡರೆ ತಾನೇ ಏನು ಪ್ರಯೋಜನ? ಗಿಡವಂತೂ ಹಾಳಾಯಿತು."

ಸರಸಿಯ ಮಾತನ್ನು ಲಕ್ಷಿಸದೆ ಶಾಮು-

"ಮೀರಾ" ಎಂದು ಕೂಗಿದ. ಸಂದರ್ಭ ತಿಳಿಯದೆ ಮೀರ ಒಳಗೆ ಬಂದಳು.

"ರಾತ್ರಿರಾಣಿ ಗಿಡ ಯಾಕೆ ಕಡಿಸಿದೆ, ಮೀರಾ?" ಶಾಮು ಕೇಳಿದ.

"ಹಾವುಗಳು ಬರುತ್ತವೇಂತ ತೆಗೆಸಿಹಾಕಿದೆ."

"ಅದನ್ನು ಸರಸಿ ಊರಿಂದ ತರಿಸಿ ಹಾಕಿಸಿದ್ದಳಂತೆ...."

"ಹಾಗೇನು? ನನಗದು ಗೊತ್ತಿರಲಿಲ್ಲ. ಬೇಕಾದರೆ ಬೇರೆ ತರಿಸಿ ಹಾಕಿಸಿದ

ರಾಯಿತು. ಬೋರನಿಗೆ ಹೇಳಿದರೆ ನಾಳೇನೇ ತಂದುಹಾಕುತ್ತಾನೆ."

"ಮಾಡುವ ಕೆಲಸ ಮಾಡಿಬಿಟ್ಟು, ಈಗ ಬೇರೆ ತರಿಸೋಣ ಎಂದರೆ ಏನು ಪ್ರಯೋಜನ?" ಸರಸಿ ವ್ಯಂಗ್ಯವಾಗಿ ಹೇಳಿದಳು.

ಮೀರ ಚಕಿತಳಾದಳು. ಅವಳಿಗೆ ಸರಸಿಯಲ್ಲಿ ಸ್ನೇಹವಿಲ್ಲದಿದ್ದರೂ ತಿರಸ್ಕಾರವಂತೂ ಖಂಡಿತ ಇರಲಿಲ್ಲ. ಅವಳ ವಿಷಯಕ್ಕೆ ಹೆಚ್ಚು ಪ್ರವೇಶಿಸದೆ ತನ್ನ ಪಾಡಿಗೆ ಇದ್ದುಬಿಡುತ್ತಿದ್ದಳು. ಸರಸಿಯೂ ಯಾವತ್ತೂ ಅವಳನ್ನು ಚುಚ್ಚುವಂತಹ ಮಾತುಗಳಿಂದ ನೋಯಿಸಿರಲಿಲ್ಲ. ಆದರೆ ಒಳಗೇ ಹೊಗೆಯಾಡುತ್ತಿದ್ದ ಮತ್ಸರದ ಕಿಡಿ ಈ ದಿನ ಭಗ್ಗನೆ ಹತ್ತಿಕೊಂಡಿತ್ತು.

"ನಾನು ಅದನ್ನು ಮನಃಪೂರ್ವಕವಾಗಿ ಕಡಿಸಿದೀನೀಂತ ತಿಳ್ಕೊಂಡಿದೀಯಾ?"

ಸರಸಿ ಅವಳ ಪ್ರಶ್ನೆಗೆ ಉತ್ತರ ಹೇಳಲಿಲ್ಲ. ಶಾಮು ಅವರಿಬ್ಬರ ನಡುವೆ ಮಾತನಾಡದೆ ಮೂಗನಂತೆ ನಿಂತಿದ್ದ. ಸರಸಿ ಪ್ರಸಂಗವನ್ನು ಮನಃಪೂರ್ವಕವಾಗಿ ಬೆಳೆಸುತ್ತಿದ್ದಾಳೆ ಎಂಬುದು ಅವನಿಗೆ ತಿಳಿಯಿತು.

"ನಂಬಿದರೆ ನಂಬು, ಬಿಟ್ಟರೆ ಬಿಡು. ನಾನು ತಿಳಿಯದೆ ಆ ಕೆಲಸ ಮಾಡಿಸಿದೆ. ತಪ್ಪಾಗಿದ್ದರೆ ಕ್ಷಮಿಸು" ಎಂದವಳೇ ಮೀರ ರೂಮಿನಿಂದ ಹೊರಗೆ ಹೊರಟುಹೋದಳು. ಅವಳ ಕಣ್ಣುಗಳಲ್ಲಿನ ಹನಿ ಶಾಮುವಿನ ಚುರುಕು ಕಣ್ಣುಗಳಿಗೆ ಕಾಣಿಸದೆ ಇರಲಿಲ್ಲ.

ಮೀರಳ ಕಂಬನಿ ಶಾಮುವಿನ ಮನಸ್ಸನ್ನು ಕಲ್ಲುಮಾಡಿತು.

ಇಪ್ಪತ್ತೆರಡು ಇಪ್ಪತ್ಮೂರು ವರ್ಷಗಳಾದರೂ ಗಂಡನನ್ನು ಕಾಣದೆ ಹಳ್ಳಿಯಲ್ಲಿ ಕೊಳೆಯುತ್ತಿದ್ದ ಸರಸಿಯನ್ನು ತನ್ನ ವಂಶ ಬೆಳೆಯಲೆಂದು ತಂದು ನನಗೆ ಮದುವೆ ಮಾಡಿಸಿದರೆ, ಅವಳಿಗೆ ಇವಳು ಕೊಡುವ ಪುರಸ್ಕಾರ ಎಂತಹದು! ಸ್ವಾರ್ಥವನ್ನು ಬಿಟ್ಟು ತನಗಾಗಿ ಮರುಮದುವೆ ಮಾಡಿಸಿದ್ದಕ್ಕೆ ಅವಳಿಗೆ ಸಿಕ್ಕ ಉಡುಗೊರೆ ಯಾವುದು?

ಗದ್ದೆಯಲ್ಲಿ ನೆತ್ತಿ ಸುಡುವವರೆಗೆ ಕೆಲಸಮಾಡಿ ದುಡಿದುಬಂದಿದ್ದ ಶಾಮು ಬಹಳವಾಗಿ ಹಸಿದಿದ್ದ. ಆಯಾಸ, ಹಸಿವು, ಕೋಪ ಇವುಗಳಿಂದ ರುದ್ರನಾಗಿ ಮುನ್ನುಗ್ಗಿ, ಸರಸಿಯ ಕೆನ್ನೆಗೆ ಛಟೀರನೆ ಹೊಡೆದು,

"ದೊಡ್ಡೋರು ಚಿಕ್ಕವರು ಎನ್ನುವ ತಾರತಮ್ಯವಿಲ್ಲ. ಅವಳ ದೊಡ್ಡ ಮನಸ್ಸಿನಿಂದಾನೇ ಈಗ ನೀನು ನನ್ನ ಮನೆಯಲ್ಲಿರೋದು" ಎಂದು ಗುಡುಗಿ ಶಾಮು ಹೊರಗೆಬಂದ. ಸರಸಿ ಬಿಕ್ಕಿ ಬಿಕ್ಕಿ ಅಳುತ್ತಾ ಊಟ ಸಹ ಮಾಡದೆ

ಮಲಗಿದಳು.

ಕೊನೆಗೂ ಶಾಮು ಮೀರಳನ್ನೇ ವಹಿಸಿಕೊಂಡನಲ್ಲಾ ಎಂಬ ಆಕ್ರೋಶದಿಂದ ಅವಳ ಹೃದಯ ಬಿರಿಯಿತು.

ಶಾಮು ಸರಸಿಯ ಕೆನ್ನೆಗೆ ಹೊಡೆದುದನ್ನು ಕೇಳಿ ಮೀರ ಶಾಮುವನ್ನು ತರಾಟೆಗೆ ತೆಗೆದುಕೊಂಡಳು.

"ನಾಚಿಕೆಯಾಗೋಲ್ಲ್ವೇ ನಿಮಗೆ? ಹೆಣ್ಣಿನ ಮೇಲೆ ಕೈಮಾಡ್ತೀರಲ್ಲಾ."

ಕೋಪದಲ್ಲಿ ಶಾಮು ಸರಸಿಯ ಕೆನ್ನೆಗೆ ಹೊಡೆದಿದ್ದರೂ ಆಮೇಲೆ ಅವನಿಗೂ ಪಶ್ಚಾತ್ತಾಪ ಉಂಟಾಗಿತ್ತು. ಮೀರ ತನ್ನನ್ನು ಮೂದಲಿಸಿದಾಗ ಶಾಮು ದೈನ್ಯವಾಗಿ,

"ನಾನೇನು ಮಾಡಬೇಕಿತ್ತು, ನೀನೇ ಹೇಳು ಮೀರಾ? ನಾನು ಎಂದಾದರೂ ನಿನ್ನ ಮೇಲೆ ಕೈಮಾಡಿದ್ದೇನೆಯೇ? ಅವಳಿಗೆ ಹೊಡೆಯದೇ ಇರೋದು ನನಗೆ ಸಾಧ್ಯವಾಗಲಿಲ್ಲ."

"ನೀವು ಏನು ಹೇಳಿದರೂ ನೀವು ಮಾಡಿದ್ದು ಸರೀಂತ ನಾನು ಒಪ್ಪೋದಿಲ್ಲ. ನೀವು ಹೊಡೆದಿದ್ದು ತಪ್ಪು."

"ಹೌದು ತಪ್ಪು."

"ಅವಳೊಡನೆ ಕ್ಷಮಾಪಣೆ ಕೇಳಿಕೊಂಡು ನೀವು ಅವಳಿಗೆ ಊಟ ಮಾಡಿಸಿದರೇನೇ ನಾನು ನಿಮ್ಮ ಕೈಲಿ ಮಾತನಾಡೋದು."

"ಇಲ್ಲದಿದ್ದರೆ...."

"ಇಲ್ಲದಿದ್ದರೆ, ಈಗಲೇ ಮೈಸೂರಿಗೆ ನಾನು ಹೊರಟುಹೋಗ್ತೀನಿ."

"ಮೀರಾ..."

"ನಾನು ಹತ್ತು ಎಣಿಸುತ್ತೇನೆ. ಅಷ್ಟರಲ್ಲಿ ನೀವು ಅವಳ ಕ್ಷಮೆ ದೊರಕಿಸಿ ಕೊಂಡಿರಬೇಕು."

"ಮೀರಾ."

"ಒಂದು, ಎರಡು, ಮೂರು, ನಾಲ್ಕು...."

ಶಾಮು ಬಲವಂತದಿಂದ ತಳ್ಳಲ್ಪಟ್ಟವನಂತೆ ಸರಸಿಯ ರೂಮಿನೊಳಗೆ ಹೋದ.

ಸುರುಳಿ ಸುತ್ತಿದ್ದ ಹಾಸಿಗೆಯ ಮೇಲೆ ತಲೆಯಿರಿಸಿಕೊಂಡು ಸರಸಿ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು.

ಶಾಮು ಮಂಚದ ತುದಿಯಲ್ಲಿ ಕುಳಿತು ಮೃದುವಾಗಿ,

"ಸರಸೀ" ಎಂದ.

ಸರಸಿ ತಲೆ ಎತ್ತಲಿಲ್ಲ. ಶಾಮು ಅವಳ ಭುಜ ಹಿಡಿದೆತ್ತಿ ಅವಳನ್ನು ಬಲವಂತವಾಗಿ ತನ್ನ ಕಡೆ ತಿರುಗಿಸಿಕೊಂಡು,

"ಸರಸೀ, ನನ್ನದು ತಪ್ಪಾಯಿತು. ಊಟಮಾಡು ಏಳು" ಎಂದ.

ತನ್ನ ಗಲ್ಲ ಹಿಡಿದಿದ್ದ ಶಾಮುವಿನ ಕೈಯನ್ನು ಸರಸಿ ಕೋಪದಿಂದ ಕಿತ್ತೆಸೆದು,

"ನಾನಿದ್ದರೆಷ್ಟು, ಸತ್ತರೆಷ್ಟು? ನೀವು, ನಿಮ್ಮ ಮೀರ ಸುಖವಾಗಿರಿ" ಎಂದಳು ಅವಳು ಮೀರಳ ಹೆಸರನ್ನು ಹೇಳುತ್ತಲೇ ಶಾಮು ಕೆಣಕಿದ ಫಣಿಯಂತಾದ. ಅವನು ತಟ್ಟನೆ ಅವಳಿಂದ ದೂರಸರಿದು,

"ನೀನು ಅವಳ ಹೆಸರು ಎತ್ತಬೇಡ. ಅನ್ಯಾಯವಾಗಿ ಅವಳನ್ನು ಯಾಕೆ ದೂರುತ್ತೀಯಾ?" ಎಂದ.

"ನಿಮ್ಮ ಪಾಲಿಗೆ ಅವರು ಸರ್ವಗುಣಸಂಪನ್ನೆ."

"ಹೌದು."

"ನೀವು ಅವರನ್ನು ತಲೆ ಮೇಲೆ ಕೂರಿಸಿಕೊಂಡು ಮೆರೆಸಿದರೂ, ಅವರು ಮಾತ್ರ ನಿಮ್ಮನ್ನು ಬಿಟ್ಟು ಓಡೋಕೆ ಯಾಕೆ ಹೋಗ್ತಾರೆ? ಗಂಡನ್ನ ಬಿಟ್ಟು ಹೋಗೋಳು ಸರ್ವಗುಣಸಂಪನ್ನೆ."

"ಸರಸಿ, ಬಾಯಿ ಮುಚ್ಚು."

"ಇದ್ದಿದ್ದು ಇದ್ದ ಹಾಗೆ ಹೇಳಿದರೆ ಕೆಂಡದಂತಹ ಕೋಪ."

"ಸರಸೀ, ಈಗ ನಾನು ನಿನ್ನಲ್ಲಿ ಕ್ಷಮಾಪಣೆ ಕೇಳಿದ್ದು ಮೀರಳಿಗಾಗಿ. ಪುನಃ ನನ್ನ ರೇಗಿಸಿ ಏಟು ತಿನ್ನಬೇಡ. ಸುಮ್ಮನೆ ಊಟ ಮಾಡು ಬಾ."

"ನನಗೇನೂ ಬೇಕಿಲ್ಲ. ನೀವು ಮಾಡಿ."

ಮಾತಿಗೆ ಮಾತು ಜೋಡಿಸುತ್ತಿರುವ ಸರಸಿಯನ್ನು ಕಂಡು ಶಾಮು ಕ್ಷಣಕಾಲ ಬೆಪ್ಪಾಗಿ ನಿಂತು ರುದ್ರನಾಗಿ ಹೇಳಿದ.

"ಬರ್ತೀಯೋ ಇಲ್ವೋ?"

"ಊಹೂಂ." ಎಂದಳು ಸರಸಿ ಮೊಂಡುತನದಿಂದ.

ಶಾಮು ಅವಳಿಗೆ ಮತ್ತೆರಡು ಏಟನ್ನು ಬಿಗಿದ. ಸರಸಿ ಮುಖ ಬಿಗಿದುಕೊಡು ಹಲ್ಲುಕಚ್ಚಿ, ಕಲ್ಲಿನಂತೆ ನಿಂತಿದ್ದಳು.

ಮೀರ ಓಡಿಬಂದು ಗಂಡ ಹೆಂಡಿರ ನಡುವೆ ನಿಂತು, ಶಾಮುವಿನ ಕೈಯನ್ನು ಬಿಗಿಯಾಗಿ ಹಿಡಿದಳು.

"ನೀವು ಅವಳನ್ನು ಹೊಡೆದರೆ ನನ್ನಾಣೆಯಿದೆ."

"ಹೊಡೆಸೋದು ಹೊಡಿಸಿಬಿಟ್ಟು, ಈಗ ಏನೂ ಕಾಣದವರ ಹಾಗೆ ಬರಬೇಡಿ" ಎಂದಳು ಸರಸಿ.

'ಹುಚ್ಚನನ್ನು ಪಳಗಿಸಬಹುದು ಆದರೆ ಮೂರ್ಖರೊಡನೆ ಸೆಣಸಾಡುವುದು ಕಷ್ಟ' ಎಂದುಕೊಂಡಳು ಮೀರ.

"ನಡಿ ಮೀರ. ನಾವು ಹೋಗೋಣ. ಗಾದೆ ಕೇಳಿಲ್ಲವೇ 'ಸಗಣಿಯವನ ಕೂಡ ಸಗಸವಾಡೋದಕ್ಕಿಂತ ಗಂಧದವನ ಕೂಡ ಗುದ್ದಾಡುವುದು ಮೇಲು' ಅಂತ. ಹೋಗೋಣ ಬಾ" ಎಂದು ಶಾಮು ಮೀರಳ ಕೈಹಿಡಿದೆಳೆದು ಹೊರಟ.

"ಹೌದು ನಾನು ಸಗಣಿ, ಅವರು ಗಂಧ. ನೀವು ಅವರ ಜೊತೇನೆ ಗುದ್ದಾಡಿ" ಎಂದವಳೇ ಸರಸಿ ಬಾಗಿಲು ಹಾಕಿಕೊಂಡಳು.

ಆ ದಿನ ಸರಸಿ ಊಟ ಮಾಡಲಿಲ್ಲ. ವೆಂಕಮ್ಮನವರು ಸರಸಿಯನ್ನು ಮತ್ತೆ ಬಲವಂತ ಮಾಡಿ ವಿಫಲರಾದರು. ಇಡೀ ದಿನ ಸರಸಿ ತನ್ನ ರೂಮಿನ ಬಾಗಿಲನ್ನು ಸಹ ತೆರೆಯಲಿಲ್ಲ. ಅದನ್ನು ನೋಡಿ ಮೀರ ಗಾಬರಿಯಾಗಿ,

"ರೂಮಿನ ಬಾಗಿಲನ್ನಾದರೂ ತೆಗೆಸಿ. ನಮ್ಮ ಮೇಲಿನ ಕೋಪಕ್ಕೆ ಏನಾದರೂ ಮಾಡಿಕೊಂಡಾಳು" ಎಂದಳು ಗಂಡನಿಗೆ.

"ಮಾಡಿಕೊಂಡರೆ ಕಾಟವೇ ಕಳೆಯಿತು. ಎರಡನೇ ಮದುವೆ ಬೇಡಾಂತ ನಿನ್ನ ಮುಂದೆ ಬಚ್ಚಿಕೊಂಡೆ. ನನ್ನ ಮಾತು ಕೇಳದೆ ಈ ಶನೀನ ಗಂಟು ಹಾಕಿದೆಯಲ್ಲಾ, ಈಗ ಅನುಭವಿಸು" ಎಂದು ಶಾಮು ಮೀರಳ ಮೇಲೆ ರೇಗಿದ.

ಗಂಡನಿಗೆ ಮತ್ತೊಂದು ಮದುವೆ ಮಾಡಿಸಿದ ಮಾತ್ರಕ್ಕೆ ಇಂತಹ ಪರಿಸ್ಥಿತಿಯನ್ನೆದುರಿಸಬೇಕಾಗಬಹುದು ಎಂದು ಮೀರ ಕನಸಿನಲ್ಲಿಯೂ ಎಣಿಸಿರಲಿಲ್ಲ. ಸವತಿಯರಾದ ಮಾತ್ರಕ್ಕೆ ಯಾವಾಗಲೂ ಜಗಳವಾಡಬೇಕೆಂದಿದೆಯೇ? ಸವತಿಯರು ಅಕ್ಕತಂಗಿಯರಂತೆ ಹೊಂದಿಕೊಂಡು ಸಂಸಾರ ನಡೆಸುವುದು ಸಾಧ್ಯವೇ ಇಲ್ಲವೇ?

ಮೀರ ತಾನೇನೋ ಯೋಚಿಸಿದ್ದಳು. ಆದರೆ ನಡೆದದ್ದೇನು?

ಒಂದೆರಡು ದಿನ ಮನೆ ಅಶಾಂತಿಯಲ್ಲಿ ಮುಳುಗಿತ್ತು. ಮನೆಯ ವಾತಾವರಣವನ್ನು ಸರಿಪಡಿಸಲು ಸರಸಿ ಸ್ವಲ್ಪವೂ ಪ್ರಯತ್ನಿಸಲಿಲ್ಲ. ಆದರೆ ಶಾಮು ಮೀರ ಸತತವಾಗಿ ಪ್ರಯತ್ನಿಸಿ ಸರಸಿಯೊಡನೆ ಮೊದಲಿನಂತೆ ಮಾತುಕತೆಯಾಡುತ್ತಿದ್ದರು.

ಸರಸಿಗೆ ಶಾಮುವಿನ ಮೇಲೆ ಸ್ವಲ್ಪವೂ ಕೋಪವಿರಲಿಲ್ಲ. ಮೀರಳಿಂದಲೇ ಶಾಮು ಮೊದಲು ತನ್ನನ್ನು ನಿರಾಕರಿಸಿದುದು. ಅವಳಿಂದಾಗಿಯೇ ಈಗಲೂ

ತನ್ನನ್ನು ವನು ಕಡೆಗಣಿಸುತ್ತಿದ್ದಾನೆ ಎಂದಳು ದೃಢವಾಗಿ ನಂಬಿದ್ದಳು.

ಆದುದರಿಂದ ಸರಸಿ, ಶಾಮುವಿಗೆ ಮತ್ತೆ ಹೊಂದಿಕೆಯಾದರೂ ಮೀರ, ಸರಸಿಗೆ ಮಾತ್ರ ಹೊಂದಿಕೆಯಾಗಲಿಲ್ಲ. ಮೀರ ಪ್ರಯತ್ನಿಸಿದಷ್ಟೂ ಸರಸಿ ಅವಳಿಂದ ದೂರವಿರಲು ಪ್ರಯತ್ನಿಸುತ್ತಿದ್ದಳು.

ರಜ ಕಳೆದರೆ ಸಾಕೆಂದು ಮೀರ ಹಲುಬಿದಳು. ಮುಳ್ಳು ಮೇಲೆ ನಿಂತವಳಂತೆ ರಜ ಕಳೆದು. ಕಾಲೇಜು ಬಾಗಿಲು ತೆಗೆಯಲು ಎರಡು ದಿನವಿರುವಾಗಲೇ ಮೀರ ಮೈಸೂರಿಗೆ ಧಾವಿಸಿದಳು.

ಕೊನೆಯ ವರ್ಷದ ಪರೀಕ್ಷೆಯಾದುದರಿಂದ ಮೀರ ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ ವ್ಯಾಸಂಗದಲ್ಲಿ ಮಗ್ನಳಾದಳು. ಆಸ್ಪತ್ರೆಯಲ್ಲಿ ಹೌಸ್ ಸರ್ಜನ್ ಆಗಿದ್ದ ಗೋಪಿ ವಿಜಯಳಿಗೆ ಎಚ್ಚರಿಕೆ ಹೇಳಿದ್ದ.

"ಇನ್ನೊಂದು ವರ್ಷ ಮನಸ್ಸಿಟ್ಟು ಓದಿ ಪಾಸು ಮಾಡಬೇಕು, ವಿಜಯ್. ನಿನ್ನ ಪರೀಕ್ಷೆ ಮುಗಿದ ಮೇಲೆ ನಾವಿಬ್ಬರೂ ಕಾಳಗದ ಕಹಳೆ ಊದಬೇಕಾಗುತ್ತದೆ."

ವಿಜಯ ಗೋಪಿಯ ಮಾತನ್ನು ಮನ್ನಿಸುವುದಕ್ಕಾಗಿ ಓದುತ್ತಿದ್ದಳೇ ಹೊರತು, ಮೆಡಿಕಲ್ ಪರೀಕ್ಷೆಯಲ್ಲಿ ಅವಳಿಗೆ ಸೇರುವಾಗ ಇದ್ದ ಆಸಕ್ತಿ ಇರಲಿಲ್ಲ.

"ಓದಲೇಬೇಕೆ ಗೋಪಿ" ಎಂದು ಅವಳು ಕೇಳಿದ್ದಳು.

"ಹೀಗೆ ಕೇಳಿದರೆ ನಾನೇನು ಹೇಳಲಿ? ಈಗ ನೀನು ಕಾಲೇಜಿನಲ್ಲಿ ಇಷ್ಟು ವರ್ಷ ಓದಿದ್ದೆಲ್ಲಾ ದಂಡವಾಗುತ್ತೆ. ನೀನು ಮೆಡಿಕಲ್ ಪಾಸ್ ಮಾಡದೇ ಇದ್ದರೆ...."

"ಏನ್ಮಾಡ್ತೀರಿ?" ವಿಜಯ ತುಂಟತನದಿಂದ ಕೇಳುತ್ತಿದ್ದಳು.

"ನನಗೆ ಹೆಣ್ಣುಕೊಡ್ತೀನೀಂತ ಯಾರ್‍ಯಾರೋ ಬರ್‍ತಿದ್ದಾರೆ. ಅವರ ಪೈಕಿ ಯಾವುದಾದರೂ ಒಂದು ಹುಡುಗೀನ ಮದುವೆ ಮಾಡಿಕೊಳ್ಳುತ್ತೀನಿ."

"ಬಹಳ ಸಂತೋಷ. ಮದುವೆ ಯಾವಾಗ?" ವಿಜಯ ಅವನ ಬೆದರಿಕೆಯನ್ನು ಸ್ವಲ್ಪವೂ ಲಕ್ಷಿಸುತ್ತಿರಲಿಲ್ಲ.

"ನಿನ್ನ ಪರೀಕ್ಷೆ ಮುಗಿದ ಮೇಲೆ."

"ನಿಮ್ಮ ಮದುವೆಗೂ, ನನ್ನ ಓದಿಗೂ ಏನು ಸಂಬಂಧ?"

"ನಿನ್ನ ಕೈಲಿ ಸರಸ ಆಡೋಕೆ ಸಮಯವಿಲ್ಲ ನನಗೆ" ಎಂದು ಗೋಪಿ ಮುನಿಯುತ್ತಿದ್ದ.

"ಯಾರ ಕೈಲಿ ಸರಸ ಆಡೋಕೆ ಸಮಯವಿದೆ? ಆ ನರ್ಸ್...."

"ಬೇಡಾ ವಿಜಯ್. ನನ್ನ ರೇಗಿಸಬೇಡ."

"ಏನ್ಮಾಡ್ತೀರಿ ರೇಗಿಸಿದರೆ?"

"ಇಲ್ಲಿ ಯಾರಿದ್ದಾರೆ ಯಾರಿಲ್ಲಾಂತ ನೋಡೋದಿಲ್ಲ. ಈ ನರ್ಸುಗಳು, ಪೇಷೆಂಟುಗಳ ಎದುರಿಗೇ ನಿನ್ನ ಹಿಡಿದು ಮುತ್ತಿಟ್ಟುಬಿಡುತ್ತೇನೆ."

"ಸದ್ಯ ಅದೊಂದು ಬಾಕಿ. ನೀವು ನಿಮ್ಮ ತಂದೆಗೆ ಏನು ಹೇಳಿದಿರಿ?"

"ನಾನು ಸದ್ಯಕ್ಕೆ ಮದುವೆ ಆಗೋದಿಲ್ಲಾಂತ ಹೇಳಿದೀನಿ. ನನಗೆ ಕೆಲಸ ಸಿಗುವವರೆಗೂ ಮದುವೆ ಮಾತು ಎತ್ತಬೇಡಿ ಎಂದು ಹೇಳಿದ್ದೇನೆ" ಎನ್ನುತ್ತಿದ್ದ ಗೋಪಿ.

ಗೋಪಿಗಾಗಿಯಾದರೂ ವಿಜಯ ತನ್ನ ವ್ಯಾಸಂಗವನ್ನು ಪೂರ್ಣಗೊಳಿಸ ಬೇಕಿತ್ತು. ಆದುದರಿಂದ ಅವಳು ಮೊದಲಿನಂತೆ ಗೋಪಿಯೊಡನೆ ಹರಟೆಗೆ ನಿಲ್ಲದೆ ತನ್ನ ಕೆಲಸವನ್ನು ಮುಗಿಸುತ್ತಿದ್ದಳು.

ಒಂದು ಮಧ್ಯಾಹ್ನ ಮೀರ ಆಗ ತಾನೇ ಕಾಲೇಜಿನಿಂದ ಹಾಸ್ಟೆಲಿಗೆ ಬಂದಿದ್ದಳು. ಅವಳ ಹೆಸರಿಗೆ ಬಂದಿದ್ದ ಕಾಗದ ಮೇಜಿನ ಮೇಲಿತ್ತು. ಮೀರ ಆತುರದಿಂದ ಕಾಗದವನ್ನು ಒಡೆದಳು: ಶಾಮು ಮೀರಳಿಗೆ ಕಾಗದ ಬರೆದಿದ್ದ,

*"ಮೀರಾ,*

*ಇತ್ತೀಚೆಗೆ ಸರಸಿಯ ಆರೋಗ್ಯ ಅಷ್ಟೇನೂ ಚೆನ್ನಾಗಿಲ್ಲ. ಆದುದರಿಂದ ಅವಳನ್ನು ಮೈಸೂರಿಗೆ ಕರೆದುಕೊಂಡು ಬರೋಣವೆಂದುಕೊಂಡಿದ್ದೇನೆ. ಅವಳನ್ನು ಸರಿಯಾದ ವೈದ್ಯರಿಗೆ ತೋರಿಸುವ ಜವಾಬ್ದಾರಿ ನಿನ್ನದು.*

*ಶಾಮು"*

ಕಾಗದ ಓದಿ ಮೀರಳ ಮನಸ್ಸು ಕಳವಳಗೊಂಡಿತು. ಅವಳು ಕೂಡಲೇ ಸರಸಿಯನ್ನು ಕರೆದುಕೊಂಡು ಬರುವಂತೆ ಶಾಮುವಿಗೆ ಕಾಗದ ಬರೆದಳು.

ಶಾಮು ಸರಸಿಯನ್ನ ಕರೆದುಕೊಂಡು ಬಂದ ಮೇಲೆ ಅವನ ಕಳವಳ ಕಂಡು ಮೀರಾಗೆ ನಗು ಬಂತು. ದುರ್ಬಲಳಾಗಿದ್ದ ಸರಸಿಯನ್ನು ತಾನೇ ಎಂ.ಒ.ಗೆ ಸೇರಿಸಿ ಅವರಿಂದ ಸಲಹೆ ಪಡೆದಳು.

"ಏನೂ ಯೋಚನೆಪಡಬೇಡಿ. ಎರಡು ತಿಂಗಳಾಗಿದೆ. ಹಾಲು, ಹಣ್ಣು ಧಾರಾಳವಾಗಿ ತೆಗೆದುಕೊಳ್ಳಿ" ಎಂದು ಸರಸಿಗೆ ಹೇಳಿ ಎಂ.ಒ. ಮೀರಳ ಕಡೆ ತಿರುಗಿ,

"ಇವರು ನಿನಗೇನಾಗಬೇಕು?" ಎಂದರು.

ಮೀರಳ ನಾಲಿಗೆ ಒಂದು ಕ್ಷಣಮಾತ್ರ ತಡೆಯಿತು. ಅನಂತರ ಅವಳು ಅಳುಕದೆ ಉತ್ತರ ಕೊಟ್ಟಳು-"ಇವಳು ನನ್ನ ತಂಗಿ."

ಅಲ್ಲದೇ ಸಂಜೆ ಶಾಮು ಸರಸಿಯೊಡನೆ ಹಳ್ಳಿಗೆ ಹೊರಟುಹೋದ.

ವೈದ್ಯರಿಂದ ಸರಸಿಗೆ ಎರಡು ತಿಂಗಳಾಗಿದೆ ಎಂದು ಕೇಳಿ ಮೀರಳಿಗೆ ಹರ್ಷವಾಯಿತು. ತಾನು ಯಾವ ಉದ್ದೇಶಕ್ಕಾಗಿ ಶಾಮುವಿಗೆ ಮದುವೆ ಮಾಡಿಸಿದ್ದಳೋ ಅದು ಫಲಪ್ರದವಾದುದನ್ನು ಕಂಡು ಅವಳಿಗೆ ಅಪರಿಮಿತ ಆನಂದವಾಯಿತು. ಆದರೂ ಅಂತರಂಗದ ಆಳದಲ್ಲಿ ನೋವಿನ ನರವೊಂದು ಮಿಡಿಯಿತು.

"ನನ್ನ ವೀಣಾ ಬದುಕಿದ್ದರೆ..."

ಆದರೆ ಮೀರ ಈ ನೋವನ್ನು ಬೇಗ ನುಂಗಿಕೊಂಡಳು. ಸರಸಿ ಗರ್ಭಿಣಿಯೆಂದು ತಿಳಿದ ಒಂದೆರಡು ದಿನ ಮೀರಳಿಗೆ ಎಲ್ಲೆಲ್ಲಿಯೂ ವೀಣಾಳ ಮೂರ್ತಿಯೆ ಕಾಣಿಸುತ್ತಿತ್ತು. ವೀಣಾಳ ರೂಪ, ಆಟ, ತುಂಟತನ ಅವಳ ನೆನಪಿನಲ್ಲಿ ಕಿಚ್ಚಿನಂತೆ ಉರಿದುವು. ಎರಡೇ ದಿನ, ಅನಂತರ ಎಲ್ಲವೂ ಮತ್ತೆ ಶಾಂತವಾಯಿತು.

ಸರಸಿಯ ಯೋಗಕ್ಷೇಮವನ್ನು ವಿಚಾರಿಸಿ, ಅವಳಿಗೆ ಕೆಲವು ಸಲಹೆಗಳನ್ನು ಕೊಡಲು ಮೀರಾ ಆಗಾಗ್ಗೆ ಕಾಗದಗಳನ್ನು ಬರೆಯುತ್ತಿದ್ದಳು. ಸರಸಿ ಮೀರಳಿಂದ ಸಲಹೆಗಳನ್ನು ಸ್ವೀಕರಿಸಿದರೂ ಅವಳಿಗೆ ಕೃತಜ್ಞತೆಯನ್ನರ್ಪಿಸಿ ಕಾಗದ ಬರೆಯುವ ಔದಾರ್ಯವನ್ನು ತೋರಿಸಲಿಲ್ಲ. ಮೀರ ಸರಸಿಯಿಂದ ಯಾವ ಬಗೆಯ ಪತ್ರವನ್ನು ನಿರೀಕ್ಷಿಸಿಯೂ ಇರಲಿಲ್ಲ. ತನಗೆ ತಿಳಿದ ಮಟ್ಟಿಗೆ ವೈದ್ಯದ ಬಗ್ಗೆ ಸರಸಿಗೆ ಸಲಹೆ ಕೊಡುವುದು ತನ್ನ ಕರ್ತವ್ಯ ಎಂದು ಮೀರ ಭಾವಿಸಿದ್ದಳು.

ಸರಸಿ ಗರ್ಭಿಣಿಯೆಂದು ತಿಳಿದ ಕೂಡಲೇ ಶಾಮು ಅವಳನ್ನು ತುಂಬಾ ಆದರದಿಂದ ನೋಡಿಕೊಳ್ಳುತ್ತಿದ್ದ. ಅವನಿಗೆ ಮಕ್ಕಳೆಂದರೆ ತುಂಬಾ ಆಸೆಯಿತ್ತು. ಅವನ ಆಸೆಯೆಲ್ಲಾ ರೂಪುಗೊಂಡಂತೆ ಜಾನಿ ಅವನ ಮನೆಯ ಬೆಳಕಾಗಿ ಬಂದು ಐದು ವರ್ಷಗಳು ಮರೆಯಾಗಿದ್ದಳು.

ಈಗ ಮತ್ತೆ ತಾನು ತಂದೆಯಾಗಲಿರುವೆನೆಂದು ತಿಳಿದು ಶಾಮುವಿನ ಹೃದಯ ಸಂತಸದಿಂದ ನಲಿಯಿತು.

ಪರೀಕ್ಷೆ ಮುಗಿಸಿಕೊಂಡು ಮೀರ ಹಳ್ಳಿಗೆ ಬಂದಾಗ ಸಗಸಿ ಒಂದು ತಿಂಗಳ ಗಂಡುಮಗುವಿನ ತಾಯಿಯಾಗಿದ್ದಳು. ಸರಸಿಯನ್ನು ಅವರ ತಾಯಿ ಬಾಣಂತನಕ್ಕೆ ಕರೆದೊಯ್ದಿದ್ದರು. ಪರೀಕ್ಷೆಯ ಸಮಯವಾಗಿದ್ದುದರಿಂದ ಮೀರ ಮಗುವಿನ ನಾಮಕರಣಕ್ಕೆ ಹೋಗಲಿಲ್ಲ. ತಾನು ಹೋಗದಿದ್ದರೂ ಅವಳು ರೆಡಿಮೇಡ್ ಸ್ವೆಟರು, ಕುಲಾಪಿ, ಕಾಲುಚೀಲಗಳನ್ನು ಮಗುವಿಗೆ ಉಡುಗೊರೆಯಾಗಿ ಕಳುಹಿಸಿದ್ದಳು.

ಪರೀಕ್ಷೆ ಮುಗಿಸಿಕೊಂಡು ಮೀರ ಹಳ್ಳಿಗೆ ಬಂದಾಗ ಸರಸಿ ತವರುಮನೆಗೆ ಹೋಗಿದ್ದಳು. ಮೀರ ಬಸ್ಸಿನಿಂದಿಳಿದು ಮನೆಗೆ ಬಂದವಳೇ ಮೊದಲು ಮಗುವಿನ

ವಿಷಯ ಕೇಳಿದಳು.

"ಹೇಗಿದ್ದಾನೆ ಸರಸಿಯ ಕುಮಾರ ಕಂಠೀರವ?"

"ಹುಷಾರಾಗಿದ್ದಾನೆ."

"ಯಾರ ಹಾಗಿದ್ದಾನೆ? ನಿಮ್ಮ ಹಾಗೋ, ಸರಸಿಯ ಹಾಗೋ?"

"ಎಲ್ಲರೂ ನನ್ನ ಹಾಗೇ ಇದ್ದಾನೆ ಅಂತಾರೆ. ನಾಡಿದ್ದು ಅಲ್ಲಿಗೆ ಹೋಗಿ ಬರೋಣ. ಆಗ ನೀನೇ ಹೇಳುವಿಯಂತೆ."

"ಹೆಸರೇನು ಇಟ್ಟಿರಿ?"

"ನಮ್ಮ ತಂದೆಯ ಹೆಸರು ಇಟ್ಟಿದ್ದೀವಿ. ಸುಬ್ರಹ್ಮಣ್ಯಾಂತ." ಮೀರ ತಾನು ಮಗುವಿಗಾಗಿ ತಂದಿದ್ದ ರೆಡಿಮೇಡ್ ಅಂಗಿಗಳು, ಆಟದ ಸಾಮಾನುಗಳನ್ನು ಒಂದೊಂದಾಗಿ ತೆಗೆದು ಶಾಮುವಿಗೆ ತೋರಿಸಿದಳು. ಶಾಮು ಆಟದ ಸಾಮಾನು ಗಳನ್ನು ನೋಡದೆ ಮೀರಳನ್ನು ನೋಡುತ್ತಿದ್ದ.

"ಮೀರಾ, ನಿನ್ನ ನೋಡಿದರೆ ನನಗೆ ತುಂಬಾ ವ್ಯಥೆಯಾಗುತ್ತದೆ. ಜಾನಿ ಇದ್ದಿದ್ದರೆ...."

"ಹಳೆಯದನ್ನೆಲ್ಲಾ ಜ್ಞಾಪಿಸಬೇಡಿ."

"ಸುಬ್ರಹ್ಮಣ್ಯನಿಗೆ ಆಟದ ಸಾಮಾನುಗಳನ್ನು ತಂದು ನೀನು ಸಂತೋಷ ಪಡ್ತಿರೋದನ್ನ ನೋಡಿ ನನಗೆ ಸಂಕಟವಾಯಿತು."

ಮೀರ ಗಂಭೀರ ದನಿಯಿಂದ "ಜೀವನದಲ್ಲಿ ನಾನು ಯಾವುದಕ್ಕೆ ಮಹತ್ತರ ವಾದ ಸ್ಥಾನವನ್ನು ಕೊಟ್ಟಿದ್ದೆನೋ ಆ ಆದರ್ಶವನ್ನು ಸಾಧಿಸಲು ನೀವು ನನಗೆ ಸಹಾಯವನ್ನು ಮಾಡಿದ್ದಿರಿ. ನಾನು ಬದುಕಿನಿಂದ ಮತ್ತೇನನ್ನೂ ಬಯಸುವುದಿಲ್ಲ" ಎಂದಳು.

ಅವಳು ಕೊಟ್ಟ ಉತ್ತರ ಶಾಮುವನ್ನು ಮೂಕನನ್ನಾಗಿಸಿತು.

ಮೀರ, ಶಾಮು ಸರಸಿಯ ಮಗುವನ್ನು ನೋಡಲು ಹಳ್ಳಿಗೆ ಹೊರಟರು. ಮನೆಗೆ ಹೋಗುತ್ತಲೇ ಮೀರ ಸರಸಿ ಮಲಗಿದ್ದ ರೂಮಿಗೆ ಧಾವಿಸಿ ಹೋಗಿ, ತೊಟ್ಟಿಲಿನಲ್ಲಿ ಆಡುತ್ತ ಮಲಗಿದ್ದ ಮಗುವನ್ನು ಎತ್ತಿಕೊಂಡು ಬಂದು ಶಾಮುವಿನ ಕೈಗೆ ಕೊಟ್ಟು-

"ಇವತ್ತಿಗೆ ನನಗೆ ತೃಪ್ತಿಯಾಯಿತು" ಎಂದಳು.

ಶಾಮು ಹೇಳಿದ್ದಂತೆ ಸುಬ್ರಹ್ಮಣ್ಯ ಶಾಮುವಿನ ಪಡಿಯಚ್ಚಾಗಿದ್ದ. ಸಾವಿತ್ರಮ್ಮನವರಂತೂ ಮೊಮ್ಮಗನನ್ನು ಪುಟ್ಟಶಾಮ ಎಂದೇ ಕರೆಯುತ್ತಿದ್ದರು. ಮೀರ ಮಗುವನ್ನು ಎತ್ತಿಕೊಂಡಾಗ ಸಾವಿತ್ರಮ್ಮ ಹೇಳಿದರು-

"ಶಾಮು ಮಗುವಾದಾಗ ಹೀಗೆ ಇದ್ದ."

ಮೀರ ಮಗುವಿಗಾಗಿ ತಂದಿದ್ದ ಅಂಗಿಗಳನ್ನು ನೋಡಿ ಸಾವಿತ್ರಮ್ಮ,

"ಯಾಕಮ್ಮ ಅಷ್ಟೊಂದು ಅಂಗಿಗಳನ್ನು ತಂದೆ? ಎಲ್ಲಾ ಎರಡು...."

"ಆದರೇನಂತೆ ಸುಬ್ರಹ್ಮಣ್ಯನ ತಂಗಿಗೋ, ತಮ್ಮನಿಗೋ ಆಗುತ್ತದೆ" ಎಂದಳು ಮೀರ.

ಮೀರಳ ಮಾತನ್ನು ಕೇಳಿ ಮಂಚದ ಮೇಲೆ ಮಲಗಿದ್ದ ಸರಸಿ ಕಿಲಕಿಲನೆ ನಕ್ಕಳು. ಸರಸಿಯಲ್ಲಿದ್ದ ಸವತಿ ಮಾತ್ಸರ್ಯ ಈಗ ಸ್ವಲ್ಪ ದೂರವಾಗಿ, ಅವಳು ಮಗುವಿನ ತಾಯಿಯಾಗಿದ್ದಳು.

ಎರಡು ದಿನಗಳ ನಂತರ ಮೀರ, ಶಾಮು ತಮ್ಮ ಹಳ್ಳಿಗೆ ಹಿಂತಿರುಗಿದರು.

ಸುಬ್ರಹ್ಮಣ್ಯನಿಗೆ ಮೂರು ತಿಂಗಳು ತುಂಬುವುದರಲ್ಲಿ ಶಾಮು ಹಳ್ಳಿಗೆ ನಾಲ್ಕಾರು ಬಾರಿ ಹೋಗಿ ಬಂದಿದ್ದ. ಮಗುವಿಗೆ ಮೂರು ತಿಂಗಳು ತುಂಬುತ್ತಲೇ ಅವನು ಅತ್ತೆ, ಮಾವನನ್ನು ಹಿಂಸೆ ಮಾಡಿ, ಹೆಂಡತಿ, ಮಗುವನ್ನು ತನ್ನೂರಿಗೆ ಹೊರಡಿಸಿಯೇಬಿಟ್ಟ.

ಸರಸಿ ಮಗುವಿನೊಡನೆ ಬರುವುದನ್ನೇ ನಿರೀಕ್ಷಿಸುತ್ತಾ ಮೀರಾ ಮುಂಬಾಗಿಲಿನಲ್ಲಿ ನಿಂತಿದ್ದಳು. ತಾನು ವೀಣಳೊಡನೆ ಟ್ಯಾಕ್ಸಿಯಲ್ಲಿ ಮನೆಗೆ ಬಂದ ದೃಶ್ಯ ಅವಳ ಅಂತರಂಗ ಪಟಲದ ಮೇಲೆ ಸ್ಪಷ್ಟವಾಗಿ ಮೂಡಿತ್ತು. ಹಳ್ಳಿಯ ಹೆಂಗಸರು, ಮಕ್ಕಳು ಆ ದಿನದಂತೆಯೇ ಈ ದಿನವೂ ಶಾಮುವಿನ ಮಗನನ್ನು ನೋಡಲು ಗುಂಪುಕಟ್ಟಿ ನಿಂತಿದ್ದರು.

ಸರಸಿ, ಶಾಮು, ಮಗು ಸಾವಿತ್ರಮ್ಮ ಎಲ್ಲರೂ ಗಾಡಿಯಿಂದಿಳಿದರು. ಶಾಮುವಿನ ರೈತರುಗಳು ಮಗುವನ್ನು ನೋಡಿ ತೃಪ್ತಿಪಟ್ಟು ಹೊರಟುಹೋದರು. ಮೀರ ಮಾತ್ರ ನಿಂತಲ್ಲಿಯೇ ಪ್ರತಿಮೆಯಂತೆ ನಿಂತಿದ್ದಳು.

ಗುಂಗುರು ತಲೆಯ, ಸುಳಿಗಲ್ಲದ, ಮಿಂಚುಗಣ್ಣಿನ, ತಿಳಿ ದೇಹಕಾಂತಿಯ ಪುಟ್ಟ ವೀಣ ಮೀರಳ ಮನಸ್ಸಿನಲ್ಲಿ ದುಃಖದ ತೆರೆಗಳನ್ನು ಎಬ್ಬಿಸಿದ್ದಳು. ನೆನಪಿನ ಬಿರುಗಾಳಿಯಿಂದಾಗಿ ಮೀರ ತತ್ತರಿಸಿದಳು. ಎಲ್ಲರೂ ಒಳಗೆ ಹೋದನಂತರವೂ ಮೀರ ಅಲ್ಲಿಯೇ ನಿಂತಿದ್ದಳು. ಅವಳು ನಿಶ್ಚಲವಾಗಿ ನಿಂತಿರುವುದನ್ನು ನೋಡಿ ಶಾಮು ಹೊರಗೆ ಬಂದು, "ಮೀರಾ" ಎಂದು ಕೂಗಿದ. ಅವಳ ತೊಳಲಾಟ ಅವನಿಗೆ ಅರ್ಥವಾಯಿತು. ಅವನ ಮನಸ್ಸು ಮಗಳ ನೆನಪಿನಿಂದ ವ್ಯಥೆಗೊಂಡಿತು.

ಮೀರ ತುಟಿ ಕಚ್ಚಿ ಅಳು ನುಂಗಲು ಯತ್ನಿಸಿದಳು. ಆದರೆ ಅದು ಸಾಧ್ಯವಾಗಲಿಲ್ಲ. ಶಾಮು ಅವಳನ್ನು ಸಮಾಧಾನಪಡಿಸುತ್ತಾ ನಿಂತ.

ಶಾಮುವನ್ನು ಹುಡುಕಿಕೊಂಡು ಬಂದ ಸರಸಿ ಈ ದೃಶ್ಯ ನೋಡಿ ಸ್ತಬ್ಧಳಾಗಿ ನಿಂತುಬಿಟ್ಟಳು. ಅವಳ ಮನಸ್ಸಿನಲ್ಲಿ ಅಸಮಾಧಾನದ ಹೊಗೆ ಭುಗಿಲ್ ಎಂದು ಹೊತ್ತಿಕೊಂಡಿತು.

ತಾನು ಗಂಡು ಮಗುವಿನೊಡನೆ ಲಕ್ಷಣವಾಗಿ ಮನೆಗೆ ಬಂದಿರುವಾಗ ಸತ್ತವರ ಮನೆಯಂತೆ ಮೀರ ಅಳುವುದೇಕೆ? ಅವಳು ಅತ್ತರೆ ಮುತ್ತು ಸುರಿಯುವುದು ಎನ್ನುವಂತೆ ಶಾಮು ಅವಳನ್ನು ಸಂತಯಿಸುವುದಾದರೂ ಏಕೆ? ಒಟ್ಟಿನಲ್ಲಿ ಗಂಡು ಮಗುವಿನ ತಾಯಿಯಾಗಿ ತಾನು ಮನೆಗೆ ಬಂದಿರುವುದು ಮೀರಳಿಗೆ ತಾಳಿಕೆಯಿಲ್ಲ.

ಸರಸಿ ತಕ್ಷಣ ಆ ಸ್ಥಳದಿಂದ ಹೊರಟುಹೋದಳು.

ಸುಬ್ರಹ್ಮಣ್ಯ ಅಳುವುದನ್ನು ಕೇಳಿ ಮೀರ ತನ್ನ ದುಃಖ ಮರೆತು-

"ಮಗು ಅಳ್ತಾ ಇದೆ. ಸರಸಿ ಎಲ್ಲಿ ಹೋದಳೋ?" ಎನ್ನುತ್ತಾ ಕಂಬನಿ ಒರೆಸಿಕೊಂಡು ಮಗುವಿನ ಬಳಿಗೆ ಬಂದಳು.

ಮಗು ಹಾಸಿಗೆಯ ಮೇಲೆ ಕೈಕಾಲು ಬಡಿಯುತ್ತಾ ಹಸಿವಿನಿಂದ ಚೀರಾಡುತ್ತಿತ್ತು.

ಮೀರ ಮಗುವನ್ನು ಎತ್ತಿಕೊಂಡು "ಸರಸೀ.....ಸರಸೀ" ಎಂದು ಕೂಗಿದಳು. ಮನೆಯ ಹಿಂಭಾಗದಲ್ಲಿ ಸಾವಿತ್ರಮ್ಮನೊಡನೆ ಮೀರಳ ಮೇಲೆ ಚಾಡಿ ಹೇಳುತ್ತಾ ನಿಂತಿದ್ದ ಸರಸಿ ಕೂಗನ್ನು ಕೇಳಿ ಒಳಗೆ ಬಂದಳು. ಮೀರ ತನ್ನ ಮಗುವನ್ನು ಎತ್ತಿಕೊಂಡಿರುವುದನ್ನು ನೋಡಿ ಸರಸಿ ಎತ್ತಿಕೊಳ್ಳಲು ಮುಂದೆ ಬಂದಳು.

"ಮಗು ಅಷ್ಟೊಂದು ಅಳ್ತಾ ಇದ್ದರೂ ಎಲ್ಲಿಗೆ ಹೋಗಿದ್ದೆ?"

ಸರಸಿ ಅವಳ ಮಾತಿಗೆ ಉತ್ತರ ಕೊಡದೆ ಮೀರಳನ್ನು ತಿರಸ್ಕಾರದಿಂದ ನೋಡಿ, ಮಗುವನ್ನು ಎತ್ತಿಕೊಂಡು ಹೊರಟುಹೋದಳು.

"ನನ್ನ ಮಗು ಕಂಡರೆ ನಿನಗಿರೋ ಪ್ರೀತಿ ಅಷ್ಟರಲೇ ಇದೆ" ಎಂದು ಕೂಗಿ ಹೇಳಿದ ಆ ನೋಟ ಮೀರಳ ಹೃದಯಕ್ಕೆ ಬರೆ ಹಾಕಿತು.

* * * *

ಚೆಲುವಾಂಬ ಆಸ್ಪತ್ರೆಯಲ್ಲಿ ಹೌಸ್‌ಸರ್ಜನ್ ಕೆಲಸ ಸಿಕ್ಕಿದೊಡನೆ ಮೀರ ಮೈಸೂರಿಗೆ ಹೊರಟಳು.

ಡಾಕ್ಟರ್ ಪರೀಕ್ಷೆಯಾದ ಮೇಲೂ ಮೀರ ಮೈಸೂರಿಗೆ ಹೊರಟಿದ್ದು ಶಾಮುವಿಗೆ ಸ್ವಲ್ಪವೂ ಹಿಡಿಸಲಿಲ್ಲ. ಅವನು ತನ್ನ ಅಭಿಪ್ರಾಯವನ್ನು ಬಾಯಲ್ಲಿ ಆಡಿದ:

"ಪರೀಕ್ಷೆ ಮುಗಿದ ಮೇಲೆ ಇಲ್ಲೇ ಇರ್ತೀನಿ ಅಂತ ಹೇಳಿದ್ದೆಯಲ್ಲಾ, ಈಗ ಯಾಕೆ ಮತ್ತೆ ಮೈಸೂರಿಗೆ ಹೋಗಬೇಕು?"

"ಆರು ತಿಂಗಳು ಶಿಕ್ಷಣ ಪಡೆದು ಮತ್ತೆ ಇಲ್ಲಿಗೇ ಬರುತ್ತೇನೆ" ಎಂದು ಶಾಮುವಿಗೆ ಮೀರ ಸಮಾಧಾನ ಹೇಳಿ ಹೊರಟುಹೋದಳು.

ಮೀರ ಹೊರಟ ಮೇಲೆ ಸರಸಿ ಸರಾಗವಾಗಿ ಉಸಿರಾಡಿದಳು.

ಮೀರ ಮೈಸೂರಿಗೆ ಬರುವ ವೇಳೆಗೆ ಅವಳ ಗೆಳೆಯ. ಗೆಳತಿಯ ಮನೆಗಳಲ್ಲಿ ಕ್ರಾಂತಿ ಎದ್ದಿತ್ತು.

ಗೋಪಿಯ ತಂದೆ ಮಗನ ಮದುವೆ ಮಾಡಲು ಸರ್ವ ವಿಧದಲ್ಲೂ ಪ್ರಯತ್ನಿಸಿ ವಿಫಲರಾಗಿದ್ದರು. ಗೋಪಿಯ ಸೋದರತ್ತೆಯ ಮಗಳು ಶಾಂತಳನ್ನು ಅವಳು ಹುಟ್ಟಿದ ಗಳಿಗೆಯಿಂದಲೇ ಗೋಪಿಗೆ ಮೀಸಲಾಗಿರಿಸಿದ್ದರು. ಗೋಪಿಯ ಪರೀಕ್ಷೆ ಮುಗಿದ ಗಳಿಗೆಯಿಂದಲೇ ಅವನ ತಂದೆ, ಸೋದರಮಾವ ಅವನಿಗೆ ಶಾಂತಳನ್ನು ಮದುವೆ ಮಾಡಿಕೊಳ್ಳಬೇಕೆಂದು ಹಿಂಸೆ ಮಾಡುತ್ತಿದ್ದರು.

"ನನಗೆ ಕೆಲಸ ಸಿಗಲಿ" ಎಂದು ಗೋಪಿ ತನ್ನ ಮದುವೆಯನ್ನು ಆರು ತಿಂಗಳ ಮಟ್ಟಿಗೆ ಮುಂದೂಡಿದ. ಮೆಡಿಕಲ್ ಕಾಲೇಜಿನ ಲೆಕ್ಚರರ್ ಕೆಲಸ ಸಿಕ್ಕುತ್ತಲೇ ಮತ್ತೆ ಮನೆಯಲ್ಲಿ ತಗಾದೆ ಆರಂಭವಾಯಿತು, ಮತ್ತೇನಾದರೂ ನೆಪ ಹೇಳಿ ಮದುವೆಯನ್ನು ತಡೆಯುವುದು ಗೋಪಿಗೆ ಸಾಧ್ಯವಾಗಲಿಲ್ಲ. ತಾಯಿ ಉಪವಾಸ ಮಾಡಿದರು. ತಂದೆ ಮಗನನ್ನು ಹೀನಾಮಾನ ಬಯ್ದರು. ಈ ರಂಪಾಟ ನೋಡಲಾರದೆ ಗೋಪಿ ತನ್ನ ಮನಸ್ಸಿನ ಆಸೆಯನ್ನು ತಂದೆಗೆ ಹೇಳಿದ.

"ಆಗಲಿ ಅಣ್ಣ. ನಾನು ನೀನು ಹೇಳಿದ ಹಾಗೆ ಮದುವೆ ಮಾಡ್ಕೋತೀನಿ. ಆದರೆ ಶಾಂತಾನ ಮಾತ್ರ ಆಗಲಾರೆ."

ತಂದೆ ಹುಚ್ಚರಾಗಿ ಕೂಗಿದರು, "ಶಾಂತಾ ಏನಾಗಿದಾಳೆ? ಚೆನ್ನಾಗಿಲ್ಲವೇ? ವಿದ್ಯಾವತಿಯಲ್ಲವೇ?"

"ಅವಳಲ್ಲಿ ನನಗೆ ಪ್ರೀತಿಯಿಲ್ಲ."

"ಮದುವೆ ಮಾಡಿಕೊಂಡರೆ ಪ್ರೀತಿ ತಾನಾಗಿಯೇ ಬರುತ್ತದೆ."

"ಅವಳನ್ನು ನಾನು ಖಂಡಿತ ಮಾಡಿಕೊಳ್ಳುವುದಿಲ್ಲ."

"ಹಾಗಾದರೆ ಯಾರನ್ನು ಮಾಡಿಕೊಳ್ಳುತ್ತೀಯಾ?"

"ನಮ್ಮ ಕಾಲೇಜಿನಲ್ಲಿ ವಿಜಯಾಂತ ಒಬ್ಬಳು ಹುಡುಗಿ ಇದಾಳೆ. ಈಗ ಅವಳು ಹೌಸ್‌ಸರ್ಜನ್ ಆಗಿದಾಳೆ, ಅವಳನ್ನು ಮದುವೆ ಮಾಡಿಕೋತೀನಿ."

"ಬ್ರಾಹ್ಮಣರ ಹುಡುಗಿಯೇ?"

"ಮರಾಟಿ ಬ್ರಾಹ್ಮಣರು. ಅವಳ ತಂದೆ ಪರಾಂಜಪೆ....."

ಗೋಪಿಯ ಮಾತು ಕೇಳಿ ತಾಯಿ ಜೋರಾಗಿ ಅಳಲು ಮೊದಲು ಮಾಡಿದರು.

"ಗೋಪಿ ಹೊತ್ತು ಹೆತ್ತಿದ್ದಕ್ಕೆ ಸಾರ್ಥಕವಾಯಿತು. ಮರಾಟಿ ಹುಡುಗಿ ಸೊಸೆಯಾದರೆ ನನ್ನ ಪುಣ್ಯಕ್ಕೆ ಎಲ್ಲಿ ಹೋಗಿ ಸಾಯಲಿ? ಹಬ್ಬ, ಹರಿದಿನ, ತಿಥಿ ಗಿನಗಳಲ್ಲಿ ಆ ಹುಡುಗೀನ ಅಡಿಗೆ ಮನೆಗೆ ಬಿಡಬಹುನೇನೋ? ಅವಳ ಕೈಲಿ ನೀರು ಹೇಗೆ ಕುಡಿಯಲೋ?"

"ನಾನು ಮದುವೆ ಮಾಡಿಕೊಳ್ಳುವುದಾದರೆ ಅವಳನ್ನೇ ಮಾಡಿಕೊಳ್ಳುತ್ತೇನೆ" ಗೋಪಿ ಖಂಡಿತವಾಗಿ ಹೇಳಿಬಿಟ್ಟ.

"ನಾನು ನಿನ್ನ ತಂದೆಯಲ್ಲ, ನೀನು ನನ್ನ ಮಗನಲ್ಲ."

ಗೋಪಿ ಮೌನವಾಗಿ ನಿಂತಿದ್ದ. ತಂದೆ ಗುಡುಗಿದರು:

"ಕೊನೇ ಮಾತು ಹೇಳಿಬಿಡು. ನಾನು ಹೇಳಿದ ಹಾಗೆ ಕೇಳದಿದ್ದರೆ ನಿನ್ನ ಮುಖ ಸಹಿತ ನಾನು ನೋಡೋದಿಲ್ಲ."

"ನಾನು ಹೇಳಬೇಕಾದುದನ್ನೆಲ್ಲಾ ಆಗಲೇ ಹೇಳಿಯಾಗಿದೆ" ಎಂದ ಗೋಪಿ ದೃಢವಾಗಿ.

"ಹಾಗಾದರೆ ನನ್ನ ಮನೆ ಬಿಟ್ಟು ಹೊರಡು, ಇನ್ನು ಈಕಡೆ ಸುಳಿಯಬೇಡ."

"ಅಪ್ಪಣೆ" ಎಂದ ಗೋಪಿ.

ಅಂದಿನಿಂದ ಅವನ ವಾಸಸ್ಥಾನ ಬದಲಾಯಿತು. ಗೆಳೆಯನೊಬ್ಬನ ರೂಮಿಗೆ ತನ್ನ ಸಾಮಾನು ಸಾಗಿಸಿ, ಗೋಪಿ ಹೋಟೆಲಿನಲ್ಲಿ ಊಟ ಮಾಡುತ್ತಿದ್ದ.

ಒಂದು ದಿನ ಗೆಳೆಯ ಯಾವುದೋ ಚಿತ್ರಕ್ಕೆ ಹೋಗಿದ್ದ. ಭಾನುವಾರ ವಾಗಿದ್ದುದರಿಂದ ಗೋಪಿಗೆ ಕಾಲೇಜಿರಲಿಲ್ಲ. ಮಧ್ಯಾಹ್ನ ನಾಲ್ಕು ಗಂಟೆಯಲ್ಲಿ ಯಾರೋ ಬಾಗಿಲು ಬಡಿದಂತಾಯಿತು. ಮಲಗಿದ್ದ ಗೋಪಿ ಎದ್ದು ಬಾಗಿಲು ತೆಗೆದ.

ಹೊಸಲಿನ ಆಚೆ ಚಿಕ್ಕ ಚರ್ಮದ ಸೂಟುಕೇಸು ಹಿಡಿದು ವಿಜಯ ನಗುತ್ತಾ ನಿಂತಿದ್ದಳು. ಅವಳನ್ನು ನೋಡಿದ ಕೂಡಲೇ ಗೋಪಿಗೆ ಎಲ್ಲವೂ ಅರ್ಥವಾಯಿತು. ಅವನು ಗಲಿಬಿಲಿಯಿಂದ ನೆಟ್‌ಬನೀನ ಮೇಲೆ ಶರಟು ಹಾಕಿಕೊಂಡು, ಹಾಸಿಗೆ ಸುತ್ತಿಟ್ಟು ಕ್ರಾಪು ಬಾಚಿ, "ದಯಮಾಡಿಸಿ" ಎಂದ. ವಿಜಯ ನಗುತ್ತಲೇ ಒಳಗೇ ಬಂದಳು.

"ನನ್ನ ರೂಮಿಗೆ ಬರೋಕೆ ನಿಂಗೆ ಎಷ್ಟು ಧೈರ್ಯ? ಯಾರೂ ಇಲ್ಲದೇ

ಇರೋವಾಗ..."

"ಬಂದರೆ ಏನು ಮಾಡ್ತೀರಿ?" ವಿಜಯ ಮತ್ತೆ ನಕ್ಕಳು.

ಗೋಪಿ ತೆಗೆದಿದ್ದ ಬಾಗಿಲಿನ ಕಡೆ ಒಂದು ಬಾರಿ ನೋಡಿ ಮತ್ತೆ ವಿಜಯಳ ಕಡೆ ತಿರುಗಿದ.

"ಬಾಗಿಲು ತೆಗೆದಿದೆ. ಇಲ್ಲದೇ ಇದ್ದರೆ...." ಎಂದ ಗೋಪಿ.

ವಿಜಯ ತಾನಾಗಿಯೇ ಬಾಗಿಲು ಮುಚ್ಚಿ "ಈಗ" ಎಂದಳು.

"ಇನ್ನು ನೀನು ಸಿಂಹದ ಕೈಗೆ ಸಿಕ್ಕ ಹರಿಣಿ" ಎನ್ನುತ್ತಾ ಗೋಪಿ ಮುಂದೆ ಬಂದ.

"ಊಹೂಂ" ಎಂದಳು ವಿಜಯ. ಗೋಪಿ ಅಲ್ಲೇ ನಿಂತ.

"ವಿಜಯ, ಏನಾಯಿತು ಹೇಳಬಾರದೇ?"

"ನಿನಗಾದ ಗತಿಯೇ ನನಗೂ ಆಯಿತು."

"ಅಂದರೆ?"

"ನಿಮ್ಮ ತಂದೆ ಇವತ್ತು ಬೆಳಿಗ್ಗೆ ನಮ್ಮ ಮನೆಗೆ ಬಂದು ನಮ್ಮ ತಂದೆಗೆ ಇದ್ದ ವಿಷಯ ಹೇಳಿದರು. ನಮ್ಮ ತಂದೆ ನನ್ನ ಕರೆಸಿ, 'ನಿಜವೇ?' ಎಂದರು. ನಾನು ಒಪ್ಪಿಕೊಂಡೆ. ನಮ್ಮ ತಂದೆಯೂ ಸಂಪ್ರದಾಯಸ್ಥರು. ಮಾತಿಗೆ ಮಾತು ಬೆಳೆಯಿತು. ಅದರ ಪರಿಣಾಮ ನಾನು ಇಲ್ಲಿ ನನ್ನ ಗೋಪಿಯ ಬಳಿ."

"ನಮ್ಮ ತಂದೆ ನಿಮ್ಮ ಮನೆಗೆ ಯಾಕೆ ಬಂದಿದ್ದರು?"

"ನನ್ನ ಹತೋಟಿಯಲ್ಲಿಟ್ಟುಕೊಳ್ಳಲಿ ಎಂದು ನಮ್ಮ ತಂದೆಗೆ ಹೇಳಲು ಬಂದಿದ್ದರು. ಆದರೆ ನಾವಿಬ್ಬರೂಈಗ ಯಾರ ಹತೋಟಿಯಲ್ಲೂ ಇಲ್ಲ ಎನ್ನುವುದು ಅವರಿಗೆ ತಿಳಿದಿರಲಾರದು."

"ಮತ್ತೆ ನೀನು ನಗುತ್ತಾ ಒಳಗೆ ಬಂದೆ...?"

"ಮನೇಲಿ ಅತ್ತರೆ ನಾನೊಬ್ಬಳೇ ಅಳಬೇಕು. ಇಲ್ಲಿ ಬಂದು ನಿಮ್ಮ ಹತ್ತಿರ, ನಿಮ್ಮ ಎದೆಯ ಮೇಲೆ ತಲೆ ಇಟ್ಟು ಅಳೋಣಾಂತ ಅಳುವೆಲ್ಲಾ ಕೂಡಿಹಾಕಿಕೊಂಡು ಬಂದಿದ್ದೇನೆ."

ಹಾಗೆ ಹೇಳುವಾಗ ವಿಜಯಳ ದನಿ ನಡುಗಿತು.

"ವಿಜಯ್, ಡಾರ್ಲಿಂಗ್" ಎನ್ನುತ್ತಾ ಗೋಪಿ ವಿಜಯಳನ್ನು ಅಪ್ಪಿಕೊಂಡ. ಅವಳು ಅವನ ಎದೆಯ ಮೇಲೆ ತಲೆಯಿಟ್ಟು ಬಿಕ್ಕಿಬಿಕ್ಕಿ ಅತ್ತಳು. ಗೋಪಿ ಅವಳನ್ನು ಸಮಾಧಾನ ಮಾಡಿದ. ತನ್ನ ತುಟಿಯಿಂದ ಗೋಪಿ ಅವಳ ಕೆನ್ನೆಯ ಮೇಲೆ ಹರಿಯುತ್ತಿದ್ದ ಕಂಬನಿಯನ್ನು ಒರೆಸಿದ. ದುಃಖದ ಆವೇಗದಿಂದ ನಡುಗುತ್ತಿದ್ದ

ಅವಳ ತುಟಿಗಳನ್ನು ಮುದ್ದಿಸಿ,

"ಇದಕ್ಕೆ ಯಾಕೆ ಅಳಬೇಕು ವಿಜಯ್? ಈ ಪ್ರಸಂಗದಿಂದ ನಾವಿಬ್ಬರೂ ಒಟ್ಟಿಗೆ ಇರುವಂತಾಯಿತು" ಎಂದ.

"ಹಾಗೆಂದರೆ?"

"ನೀನು ಮೊದಲು ಅಳೋದಿಲ್ಲಾಂತ ಪ್ರಾಮಿಸ್ ಮಾಡು."

"ಆಗಲಿ."

"ಹೀಗೆ ಹೇಳಿದರೆ ಆಗುವುದಿಲ್ಲ. ನನಗೆ ಮುತ್ತಿನ ಭಾಷೆ ಬೇಕು."

"ಥೂ ನೀವೊಬ್ಬರು ಕೆಟ್ಟ ಹುಡುಗ" ಎಂದಳು ವಿಜಯ.

"ನೀನೇನಾದರೂ ಬೈದುಕೋ. ನಾನು ಕೇಳುವವನಲ್ಲ."

"ನಂಗೆ ತೆಗೆದುಕೊಳ್ಳುವುದು ಗೊತ್ತೇ ಹೊರತು ಕೊಡುವುದು ಗೊತ್ತಿಲ್ಲ."

"ಜಿಪುಣೆ ನೀನು. ದಾನಿ ನಾನು."

"ಪಾಪ! ಇಂತಹ ದಾನ ಮಾಡೋಕೆ ನೀವೇ ಆಗಬೇಕು. ಅಲ್ಲವೇ?"ವಿಜಯ ಗೋಪಿಯನ್ನು ಅಣಕಿಸಿದಳು.

"ನಿನ್ನಂತಹ ಭಿಕ್ಷುಕಿ ಸಿಕ್ಕಿರೋದು ನನ್ನ ಪುಣ್ಯ" ಎಂದ ಗೋಪಿ.

"ಪುಣ್ಯದ ಮಾತು ಹಾಗಿರಲಿ. ಈಗ ಏನು ಮಾಡೋಣ" ವಿಜಯ ಕಳವಳದಿಂದ ಕೇಳಿದಳು.

"ನಮ್ಮಿಬ್ಬರಿಗೂ ಈಗ ಯಾರ ಆತಂಕವೂ ಇಲ್ಲ. ಇಬ್ಬರೂ ಮೆಜಾರಿಟಿಗೆ ಬಂದಿದ್ದೇವೆ. ರಿಜಿಸ್ಟರ್ಡ್...."

"ಊಹೂಂ. ನನಗದರಲ್ಲಿ ನಂಬಿಕೆಯಿಲ್ಲ" ಎಂದು ವಿಜಯ ರಾಗ ಎಳೆದಳು.

"ನನ್ನಲ್ಲಿ ನಂಬಿಕೆ ಇಲ್ಲವೇ?"

"ಹಾಗಲ್ಲ. ನಮ್ಮಿಬ್ಬರ ಪ್ರೇಮಬಾಧನಕ್ಕೆ ಕೋರ್ಟಿನ ಮುದ್ರೆ ಬೀಳುವುದು ನನಗಿಷ್ಟವಿಲ್ಲ. ಮನೆ, ಭೂಮಿ, ಆಸ್ತಿನ ರಿಜಿಸ್ಟರ್ ಮಾಡಿಸಿದ ಹಾಗೆ ನಮ್ಮ ಮದುವೇನ....."

"ನೀನು ಹೇಳಿದ ಹಾಗೆ ಆಗಲಿ ವಿಜಯ್" ಎಂದ ಗೋಪಿ.

"ಅದುವರೆಗೆ ನಾನೆಲ್ಲಿರಲಿ?"

"ಮೀರಳ ಜೊತೆ ಹಾಸ್ಟೆಲಿನಲ್ಲಿರು."

"ನೀವು?"

"ನಾನಿಲ್ಲೇ ಇರ್ತೀನಿ."

"ತುಂಬಾ ದಿವಸ ನಿಮ್ಮನ್ನು ಬಿಟ್ಟು ದೂರ ಇರೋಕಾಗೋದಿಲ್ಲ. ನಂಗೆ ಯಾಕೋ ತುಂಬಾ ಬೇಜಾರಾಗುತ್ತೆ" ವಿಜಯ ಮತ್ತೆ ಅಳುಮುಖ ಮಾಡಿದಳು.

"ಅಮ್ಮನ್ನ ಬಿಟ್ಟಿರಲಾರೆಯಾ ಚಿನ್ನ?" ಗೋಪಿ ಕೇಳಿದ.

ವಿಜಯ ತಲೆ ಅಲುಗಿಸಿದಳು. ಅವಳ ಕಣ್ಣಿನಿಂದ ಒಂದು ಹನಿ ಪಳಕ್ಕನೆ ಜಾರಿ ಬೀಳುವುದರಲ್ಲಿತ್ತು.

"ಊ. ನಾನು ಒಂದು ದಿನಷ್ಟೂ ಅಮ್ಮನ್ನ ಬಿಟ್ಟವಳಲ್ಲ. ಈಗ ಅವಳನ್ನ ಬಿಟ್ಟಿರೋದು ಅಂದ್ರೆ ತುಂಬಾ ಕಷ್ಟ."

"ವಿಜಯ್, ನೀನಿನ್ನೂ ಮಗು. ಅದುದರಿಂದ ಇನ್ನೆರಡು ವರ್ಷ ಅಮ್ಮನ ಬಳಿಯೇ ಇದ್ದು ಆಮೇಲೆ ನನ್ನಲ್ಲಿಗೆ ಬಾ."

"ನಿಮ್ಮನ್ನ ಬಿಟ್ಟಿರೋದಂತೂ ಸಾಧ್ಯವೇ ಇಲ್ಲ. ಅಮ್ಮನ್ನಾದರೂ ಬಿಟ್ಟುಬಿಡುತ್ತೇನೆ."

"ನಾನೇ ನಿನ್ನ ಬಿಟ್ಟರೆ ಏನು ಮಾಡ್ತೀಯಾ?" ಗೋಪಿ ಹಾಸ್ಯವಾಗಿ ಕೇಳಿದ.

"ನನ್ನಂತಹ ಭಗ್ನ ಪ್ರೇಮಿಗಳಿಗೆ ಕೆರೆಯಲ್ಲಿ ನೀರು ತುಂಬಿದೆ."

"ವಿಜಯ್, ನೀನು ಹುಚ್ಚಿಯಾಗ್ತಿದೀಯಾ!"

ಗೋಪಿ ದೀರ್ಘವಾಗಿ ಉಸಿರೆಳೆದು ಹೇಳಿದ

"ನಾವಿಬ್ಬರೂ ಪರಸ್ಪರ ಮೆಚ್ಚಿ ಸುಖವಾಗಿರ್ತೀನಿ ಎಂದು ನಂಬಿರುವಾಗ ಹಿರಿಯರು ಯಾಕೆ ಹೀಗೆ ಮಾಡ್ತಾರೋ?"

"ಈ ಸಂಕುಚಿತಭಾವನೆ ಹೋಗಬೇಕಾದರೆ ಇನ್ನೂ ಎಷ್ಟು ಕಾಲ ಬೇಕೋ?"

ಗೋಪಿ ರೂಮಿಗೆ ಬೀಗ ಹಾಕಿ ವಿಜಯಳೊಡನೆ ಮೀರಳ ಬಳಿಗೆ ಹೋದ. ಮೀರ ಅದೇ ತಾನೇ ಆಸ್ಪತ್ರೆಯಿಂದ ಮರಳಿ ರೂಮಿಗೆ ಬಂದಿದ್ದಳು. ಜೊತೆಯಲ್ಲಿ ಬಂದ ಗೋಪಿ, ವಿಜಯಳನ್ನು ನೋಡಿ ನಸುನಕ್ಕಳು.

ಗೋಪಿ ವಿಜಯಳನ್ನು ಮೀರಳಿಗೆ ತೋರಿಸಿ,

"ಈ ಮಗೂನ ನಿಮಗೆ ಒಪ್ಪಿಸಿದ್ದೇನೆ. ಅವಳನ್ನು ನಾನು ಕೈಹಿಡಿಯುವ ವರೆಗೆ ಅವಳು ನಿಮ್ಮಲ್ಲಿರಲಿ" ಎಂದ.

ವಿಜಯ ಮನೆಯಲ್ಲಿ ನಡೆದ ಸಂಗತಿಗಳನ್ನು ಮೀರಳಿಗೆ ವಿವರಿಸಿದಳು.

ಮೀರ ಬಹಳ ಹೊತ್ತು ಸುಮ್ಮನೆ ಕುಳಿತಿದ್ದು ಅನಂತರ ಕೇಳಿದಳು

"ಮುಂದೆ ಏನು ಮಾಡ್ಬೇಕೂಂತಿದೀರಿ?"

ವಿಜಯ ಗೋಪಿಯ ಕಡೆ ನೋಡಿದರು. ಗೋಪಿ ಹೇಳಿದ:

"ವಿಜಯಾಗೆ ರಿಜಿಸ್ಟರ್ಡ್ ಮದುವೆ ಬೇಡವಂತೆ. ಹಿಂದೂ ಸಂಪ್ರದಾಯ

ದಂತೆಯೇ ಮದುವೆಯಾಗಬೇಕಂತೆ."

"ಸರಿ."

"ಅದಕ್ಕೆ ಯಾರಾದರೂ ಮುಂದೆ ಬರದೆ ನಾವು ಹೇಗೆ....."

"ನೀವು ಯೋಚನೆ ಮಾಡಬೇಡಿ. ಇನ್ನು ನಾಲ್ಕು ದಿನಗಳಲ್ಲಿ ನಿಮ್ಮ ಸಮಸ್ಯೆ ಪರಿಹಾರವಾಗುತ್ತದೆ" ಎಂದಳು ಮೀರ.

ವಿಜಯಳನ್ನು ಮೀರಳ ಬಳಿ ಬಿಟ್ಟು ಗೋಪಿ ಹೊರಟುಹೋದ. ಅವನು ಹೋದ ಕೂಡಲೇ ವಿಜಯ ಹಾಸಿಗೆಯ ಮೇಲೆ ಉರುಳಿ ಅತ್ತಳು.

"ಯಾಕೆ ಅಳ್ತೀಯಾ?" ಮೀರ ಅವಳ ಭುಜ ಅಲುಗಿಸಿದಳು.

"ನನಗೆ ತುಂಬಾ ಕಷ್ಟ ಆಗುತ್ತೆ, ಮೀರ."

"ಯಾಕಮ್ಮ?'

"ಗೋಪಿ ನನ್ನ ಎಷ್ಟು ಪ್ರೀತಿಸುತ್ತಾರೆ! ನನಗಾಗಿ ತಾಯಿ ತಂದೇನೂ ದೂರ ಮಾಡಿಕೊಂಡಿದ್ದಾರೆ."

"ನೀನೂ ಈಗ ದೂರ ಮಾಡಿಕೊಂಡಿಲ್ಲವೇ?"

"ಆದ್ರೂ ಅವರು ನನ್ನ ಪ್ರೀತಿಸುವಷ್ಟು ನಾನು ಅವರನ್ನು ಪ್ರೀತಿಸೋದಿಲ್ಲ. ನನಗಂತೂ ಏನೂ ತೋಚದೆ ಹುಚ್ಚು ಹಿಡಿದ ಹಾಗಾಗಿದೆ."

"ನಾನೆಲ್ಲಾ ಸರಿಮಾಡ್ತೇನೆ. ಅಳಬೇಡ ವಿಜಯಾ."

ಮೀರಳ ಸಮಾಧಾನದ ಮಾತುಗಳನ್ನು ಕೇಳಿ ವಿಜಯ ಕಣ್ಣೊರೆಸಿಕೊಂಡಳು.

ಮಾರನೆಯ ದಿನ ಮೀರ ಒಂದು ದಿನದ ಮಟ್ಟಿಗೆ ರಜ ತೆಗೆದುಕೊಂಡು ಹಳ್ಳಿಗೆ ಹೊರಟಳು. ಮೀರ ಏಕಾಏಕಿ ಬಂದುದನ್ನು ಕಂಡು ಶಾಮು, ಸರಸಿ ಚಕಿತರಾದರು.

"ರಾಣಿಯವರು ಒಂದು ಮಾತೂ ಹೇಳದೆ ಬಂದುಬಿಟ್ಟಿರಲ್ಲಾ" ಎಂದು ಶಾಮು ಊದ್ಗಾಗ ತೆಗೆದ.

"ನಿಮ್ಮ ಕೈಲಿ ನಾನು ಮಾತನಾಡಬೇಕಿತ್ತು" ಎಂದು ಮೀರ ಮೊದಲು ಮಾಡಿ ಗೋಪಿ, ವಿಜಯರ ಸ್ನೇಹ, ಅವರ ಮನೆಯವರ ವಿರೋಧ ಎಲ್ಲವನ್ನೂ ವಿವರಿಸಿದಳು. ಶಾಮು, ಸರಸಿ ಎಲ್ಲವನ್ನೂ ಮೌನವಾಗಿ ಕೇಳಿದರು. ಮೀರ ಮಾತು ನಿಲ್ಲಿಸುತ್ತಲೇ ಸರಸಿ ಹೇಳಿದಳು:

"ಬ್ರಾಹ್ಮಣರ ಹುಡುಗ ಮರಾಠಿಯವಳನ್ನು ಮದುವೆಯಾಗೋಣಾಂದ್ರೆ ಶುದ್ಧ ಅನ್ಯಾಯ. ಇದಕ್ಕೆ ನಾವು ಎಂದಿಗೂ ಪ್ರೋತ್ಸಾಹಿಸಬಾರದು."

ಮೀರ ಅವಳ ಮಾತಿಗೆ ಬೆಲೆ ಕೊಡದೆ ಶಾಮುವಿನ ಕಡೆ ತಿರುಗಿ,

"ನೀವೇನು ಹೇಳ್ತೀರಿ?" ಎಂದಳು.

"ಅವರಿಬ್ಬರಿಗೂ ನಿಜವಾದ ಪ್ರೀತಿಯಿದ್ದರೆ ಮದುವೆಯಾಗುವುದರಲ್ಲಿ ತಪ್ಪೇನಿಲ್ಲ."

ಮೀರಳ ಮುಖ ಹಿಗ್ಗಿನಿಂದ ಅಗಲವಾಯಿತು. ಅವಳು ಅತ್ಯಂತ ಹರ್ಷದಿಂದ ಕೇಳಿದಳು-

"ಹಾಗಾದರೆ ನಾನು ಅವರಿಗೆ ಸಹಾಯ ಮಾಡಲು ನಿಮ್ಮ ಅಡ್ಡಿಯಿಲ್ಲವೇ?"

"ಅಂದರೆ?"

"ನಾವು ಅವರನ್ನು ಇಲ್ಲಿಗೆ ಕರೆಸಿ ಹಿಂದೂ ಪದ್ಧತಿಯ ಪ್ರಕಾರ ಅವರಿಗೆ ಮದುವೆ ಮಾಡಿಬಿಡೋಣ."

"ಅವರ ತಾಯಿ, ತಂದೆ ಗಲಾಟೆ ಮಾಡಿದರೆ?"

"ಇವರಿಬ್ಬರೂ ಮೆಜಾರಿಟಿಗೆ ಬಂದಿದ್ದಾರೆ. ಹಿರಿಯರು ಏನೂ ಮಾಡುವ ಹಾಗಿಲ್ಲ."

"ನಾನಂತೂ ಈ ಮದುವೇನ ಖಂಡಿತ ಒಪ್ಪೋದಿಲ್ಲ" ಎಂದಳು ಸರಸಿ.

ಶಾಮುವಿನ ಕಿವಿಗೆ ಸರಸಿಯ ಮಾತುಗಳು ಬೀಳಲಿಲ್ಲ. ಅವನು ಯಾವುದೋ ಗಾಢವಾದ ಆಲೋಚನೆಯಲ್ಲಿ ಮುಳುಗಿದಂತೆ ತೋರಿತು.

ಮದುವೆ! ಬಹಳ ದೊಡ್ಡ ಜವಾಬ್ದಾರಿ. ಆದರೆ ಅದರಲ್ಲಿ ಎಂತಹ ಆತ್ಮತೃಪ್ತಿಯಿದೆ! ತನ್ನಿಂದ ಸ್ವಲ್ಪ ಹಣ ಖರ್ಚಾಗಬಹುದು. ಆದರೆ ಅದರಿಂದ ತನಗೇನೂ ನಷ್ಟವಿಲ್ಲ. ಯಾಕೆ ಹಾಗೆ ಮಾಡಬಾರದು? ಇದರಿಂದ ಮೀರಳಿಗೂ ತುಂಬಾ ಸಮಾಧಾನವಾಗುತ್ತದೆ.

"ಹಾಗೇ ಆಗಲಿ" ಎಂದ ಶಾಮು.

ಸರಸಿ ಮಾತ್ರ ತಾವೇ ಖರ್ಚು ಹಾಕಿ ಈ 'ಅನ್ಯಾಯದ ಮದುವೆ' ನಡೆಸುವುದನ್ನು ಸ್ವಲ್ಪವೂ ಒಪ್ಪಲಿಲ್ಲ. ಆದರೆ ಮೀರಳಿಗಾಗಿ ಶಾಮು ತನ್ನ ಮನಸ್ಸನ್ನು ಗಟ್ಟಿಮಾಡಿದ್ದ. ಗಂಡ ತನ್ನ ಮಾತನ್ನು ತಳ್ಳಿ ಮೀರಳ ಮಾತಿಗೆ ಮನ್ನಣೆ ಕೊಡುತ್ತಿರುವುದನ್ನು ಕಂಡು ಸರಸಿ,

"ನೀವು ಹೀಗೆ ಖರ್ಚು ಮಾಡಿದರೆ ಮಗನಿಗೆ ಮೂರು ಕಾಸೂ ಉಳಿಸುವುದಿಲ್ಲ" ಎಂದಳು.

ಮೀರ, ಶಾಮು ಚಕಿತರಾಗಿ ಅವಳ ಕಡೆ ನೋಡಿದರು. ಮದುವೆಯಾಗಿ ಇಷ್ಟು ವರ್ಷಗಳಾಗಿದ್ದರೂ ಮೀರ ಶಾಮುವಿನೊಡನೆ ಒಂದು ದಿನವೂ ಆಸ್ತಿಯ ಬಗ್ಗೆ ಮಾತನಾಡಿರಲಿಲ್ಲ. ಆಸ್ತಿ ಅನ್ಯರ ಪಾಲಾಗಬಾರದೆಂದೇ ಮೀರ ಸರಸಿಯನ್ನು

ಶಾಮುವಿಗೆ ಮದುವೆ ಮಾಡಿಸಿದ್ದಳೇ ಹೊರತು ಇಂತಹ ಸಣ್ಣ ಮಾತು ಎಂದೂ ಮೀರಳ ಬಾಯಲ್ಲಿ ಬಂದಿರಲಿಲ್ಲ.

ಶಾಮು ಗಡುಸಾಗಿ ಹೇಳಿದ: "ಒಂದು ಸಾವಿರ ರೂಪಾಯಿ ಖರ್ಚಾದರೆ ನನ್ನ ಆಸ್ತಿಯೇನೂ ಕಡಿಮೆಯಾಗುವುದಿಲ್ಲ."

"ಹಿರಿಯರೊಪ್ಪದ ಮದುವೆ ನೀವು ಮಾಡಿ ಪಾಪಕ್ಕೆ ಗುರಿಯಾಗಬೇಡಿ."

"ಕನ್ಯಾದಾನ ಮಾಡುವುದು ಪಾಪವೇ?" ಎಂದು ಕೇಳಿಗ.

"ಇಷ್ಟೆಲ್ಲಾ ಆಟವಾಡಿರುವವಳು ಕನ್ಯೆಯೇ?" ಸರಸಿ ವ್ಯಂಗ್ಯವಾಗಿ ಕೇಳಿದಳು.

"ಸರಸೀ ಬಾಯಿಗೆ ಬಂದ ಹಾಗೆ ಮಾತಾಡಬೇಡ" ಮೀರ ಕೋಪದಿಂದ ಹೇಳಿದಳು.

"ಇದ್ದ ಸಂಗತಿ ಇದ್ದಹಾಗೆ ಹೇಳಿದರೆ ಕೋಪ ಯಾಕೆ? ಈ ಮದುವೆ ನನ್ನ ಮನೆಯಲ್ಲಿ ನಡೆಯಗೊಡಲಾರೆ."

"ಇದು ನನ್ನ ಮನೆ ಎಂಬುದು ನೆನಪಿರಲಿ. ಮೀರ, ನೀನು ಎಲ್ಲವನ್ನೂ ಸಿದ್ಧಪಡಿಸು. ನಾವೇ ಹುಡುಗಿಯನ್ನು ಗೋಪಿಗೆ ಧಾರೆ ಎರೆಯೋಣ" ಶಾಮು ರೊಚ್ಚಿನಿಂದ ಹೇಳಿದ.

ಸುಬ್ರಹ್ಮಣ್ಯ ಅಳುತ್ತಿದ್ದರೂ ಸರಸಿ ಯಾವುದನ್ನೂ ಲೆಕ್ಕಿಸದೆ ಎದ್ದು ಒಳಗೆ ಹೊರಟುಹೋದಳು.

ಮೀರ ಶುಭಸಮಾಚಾರವನ್ನು ತೆಗೆದುಕೊಂಡು ಮೈಸೂರಿಗೆ ಹೊರಟಳು. ವಿಜಯಳನ್ನು ನೋಡುತ್ತಲೇ ತಾನು ತಂದಿದ್ದ ಸಮಾಚಾರವನ್ನು ತಿಳಿಸಿದಳು. ವಿಜಯ ಕಂಬನಿದುಂಬಿ ಹೇಳಿದಳು.

"ನೀನು ಯಾವ ಜನ್ಮದ ತಾಯಿಯೋ"

ಗೋಪಿ ಮಾತ್ರ ಮೀಗಳ ಸಲಹೆಯನ್ನು ಒಪ್ಪಲಿಲ್ಲ. ಅವನು

"ನೀವು ನಮಗಾಗಿ ಖರ್ಚು ಮಾಡುವುದನ್ನು ನಾನೊಪ್ಪುವುದಿಲ್ಲ" ಎಂದ. ಮೀರ ಹೇಳಿದಳು.-

"ನಮ್ಮ ಸ್ನೇಹಕ್ಕೆ ನೀವು ಕಟ್ಟುವ ಬೆಲೆ ಇಷ್ಟೇನೆ?"

ಅವಳ ಮಾತು ಕೇಳಿ ಗೋಪಿ ಸುಮ್ಮನಾದ.

ಜೋಯಿಸರು ಮುಹೂರ್ತವಿಟ್ಟರು. ಮದುವೆಗೆ ಹಿಂದಿನ ದಿನ ಮೀರ, ಗೋಪಿ, ವಿಜಯ ಮತ್ತು ನಾಲ್ಕಾರು ಗೆಳೆಯರು ಹಳ್ಳಿಗೆ ಹೊರಟರು. ಗಡಿಗೆಯ ಗಾತ್ರದ ಮುಖ ಮಾಡಿಕೊಂಡು ಸರಸಿ ಎಲ್ಲರನ್ನೂ ಸ್ವಾಗತಿಸಿದಳು. ಶಾಮು

ಮಾತ್ರ ತುಂಬಾ ಹರ್ಷದಿಂದ ಓಡಾಡುತ್ತಿದ್ದ. ಮೀರ ತನ್ನ ಗಂಡನ ಪರಿಚಯ ಮಾಡಿಕೊಟ್ಟಳು.

ವಿಜಯ ಮೆಚ್ಚುಗೆಯ ದನಿಯಿಂದ, "ನಿನ್ನ ಗಂಡ ತುಂಬಾ ಲಕ್ಷಣ ವಾಗಿದ್ದಾರೆ" ಎಂದಳು.

"ಮದುವೆಗೆ ಮುಂಚೆಯೇ ನೀನು ಹೀಗೆ ಹೇಳಿದರೆ ನನ್ನ ಗತಿಯೇನು?" ಎಂದ ಗೋಪಿ.

"ಈ ಹುಡುಗೀನ ಆದಷ್ಟು ಬೇಗ ಕರಿಮಣಿ ಸೂತ್ರದಿಂದ ಕಟ್ಟಿಹಾಕಿ ಬಿಡುವುದು ಕ್ಷೇಮ" ಎಂದಳು ಮೀರ.

ಸರಸಿ ಯಾರೊಡನೆಯೂ ಮುಖಕೊಟ್ಟು ಮಾತನಾಡಲಿಲ್ಲ. ಅವಳಿಗೆ ವಿಜಯಳನ್ನು ನೋಡಿದಾಗ ರೋಷ ಉಕ್ಕುತ್ತಿತ್ತು. ಗೋಪಿಯಂತ ಹುಡುಗನನ್ನು ತನ್ನ ಬಲೆಯಲ್ಲಿ ಕೆಡವಿದ ಮೋಸಗಾತಿ ಎನ್ನಿಸಿತು ಸರಸಿಗೆ. ಬ್ರಾಹ್ಮಣರ ಹುಡುಗ ಮರಾಠಿ ಹುಡುಗಿಯನ್ನು ಮದುವೆಯಾಗುವುದೆಂದರೆ?

ಮಾರನೆಯ ದಿನ ಗೋಪಿ ವಿಜಯರ ಮದುವೆ ಸರಳವಾಗಿ, ನಿರಾಡಂಬರ ವಾಗಿ ನಡೆಯಿತು. ಮೀರ, ಶಾಮು ವಿಜಯಳನ್ನು ಅಗ್ನಿ ಸಾಕ್ಷಿಯಾಗಿ ಗೋಪಿಗೆ ಧಾರೆ ಎರೆದುಕೊಟ್ಟರು. ಮದುವೆಯಲ್ಲಿ ನಡೆಯಬೇಕಾದ ಯಾವ ಶಾಸ್ತ್ರವನ್ನೂ ಶಾಮು ತಪ್ಪಿಸಲಿಲ್ಲ.

ಮದುವೆಯಾದ ಮೂರು ದಿನಗಳ ಮೇಲೆ ವಿಜಯ, ಗೋಪಿ, ಮೀರ ಮೈಸೂರಿಗೆ ಹೊರಟರು. ನೂತನ ದಂಪತಿಗಳು ಹಳ್ಳಿಯಲ್ಲಿ ತಮ್ಮ ಮಧುಚಂದ್ರ ವನ್ನು ಸಂತೋಷವಾಗಿ ಕಳೆದರು. ಕೆರೆಯ ತೀರದಲ್ಲಿ ಬೆಳದಿಂಗಳೂಟ, ಕಬ್ಬಿನ ಗದ್ದೆಗಳಲ್ಲಿ ವಾಯುವಿಹಾರ, ತೋಪುಗಳಲ್ಲಿ ಕಣ್ಣಾಮುಚ್ಚಾಲೆ, ಎತ್ತಿನ ಗಾಡಿಗಳ ಪಿಕ್‌ನಿಕ್, ಆಲೆಮನೆಯಲ್ಲಿ ಕಬ್ಬಿನ ಹಾಲು ಎಂದು ಎಳೆಯ ಮಕ್ಕಳಂತೆ ಸಮಯ ಕಳೆದರು.

ಮೀರ, ಶಾಮುಅವರಿಗೆ ಎಲ್ಲ ವಿಧವಾದ ಸೌಕರ್ಯಗಳನ್ನೂ ಒದಗಿಸಿ ಕೊಟ್ಟಿದ್ದರು.

ಮೈಸೂರಿಗೆ ಹೊರಡುವುದಕ್ಕೆ ಮುಂಚೆ ಗೋಪಿ ಶಾಮುವಿಗೆ ಕೃತಜ್ಞತೆ ಯನ್ನರ್ಪಿಸಿ-

"ನಿಮ್ಮ ಉಪಕಾರ ನಾನು ಮರೆಯುವುದಿಲ್ಲ" ಎಂದ.

"ನನ್ನ ಉಪಕಾರವೇನೂ ಇದರಲ್ಲಿ ಇಲ್ಲ. ಈ ಏರ್ಪಾಡೆಲ್ಲಾ ಮೀರಳದು" ಎಂದ ಶಾಮು.

"ನೀವು ಒಪ್ಪದಿದ್ದರೆ ಇವೆಲ್ಲಾ ಹೇಗೆ ಸಾಧ್ಯವಾಗುತ್ತಿತ್ತು?"

"ಹಳ್ಳಿಯಲ್ಲಿ ನಿಮಗೆ ಎಲ್ಲಾ ಅನುಕೂಲವಾಗಿತ್ತೇ?" ಎಂದ ಶಾಮು. ಗೋಪಿ ವಿಜಯಳ ಕಡೆ ನೋಡಿದ. ಅವಳು ನಗುತ್ತಾ

"ನಮ್ಮಿಬ್ಬರನ್ನೂ ನೋಡಿದರೆ ನಿಮಗೇನು ತೋರುತ್ತದೆ?" ಎಂದಳು.

ವಿಜಯ ಹರ್ಷದ ಹೊನಲಾಗಿದ್ದಳು, ಗೋಪಿ ನಗುವಿನ ಚಿಲುಮೆಯಾಗಿದ್ದ. ಅದೇ ತಾನೆ ಯೌವನದಲ್ಲಿ ಪಾದಾರ್ಪಣೆ ಮಾಡಿದ. ಎರಡು ಗಿಳಿಯ ಪಾರಿವಾಳಗಳಂತೆ ಅವರು ಶಾಮುವಿಗೆ ತೋರಿದರು. ಅವರ ನಿರ್ಮಲ, ನಿಷ್ಕಪಟ ಪ್ರೇಮದಲ್ಲಿ ಯಾವ ವಿಧವಾದ ಸಂಕೋಚವೂ ಇರಲಿಲ್ಲ. ಸುತ್ತಲೂ ಜನರಿರುವುದನ್ನು ಮರೆತು ಒಬ್ಬರನ್ನೊಬ್ಬರು ನೋಡುತ್ತಾ ಮೈಮರೆಯುತ್ತಿದ್ದರು. ಸರಸಿಯಂತೂ ಅದನ್ನು ನೋಡಿ ಕಿಡಿಕಿಡಿಯಾಗುತ್ತಿದ್ದಳು.

ಒಂದು ಸಲ ಎಲ್ಲರೂ ಊಟಮಾಡುತ್ತಿದ್ದಾಗ ಗೋಪಿ, ವಿಜಯ ಒಬ್ಬರನ್ನೊಬ್ಬರು ನಗೆಗಣ್ಣಿನಿಂದ ನೋಡುತ್ತಿದ್ದುದನ್ನು ಕಂಡು ಸರಸಿ-

"ಬೂಟಾಟದ ಮೊಟ್ಟೆಗಳು" ಎಂದು ಮೀರಳೆದುರಿಗೆ ಅವರನ್ನು ಜರಿದಳು. ಬಾಯಿಗೆ ಬಂದಿದ್ದ ಮಾತುಗಳನ್ನು ಮೀರ ಹಾಗೆಯೇ ಕಷ್ಟಪಟ್ಟು ನುಂಗಿದಳು.

"ಒಬ್ಬರನ್ನೊಬ್ಬರು ನೋಡಿ ನಗೋದು, ಕಣ್ಸನ್ನೆ ಮಾಡೋದು, ಪಿಸಿಪಿಸೀಂತ ಮಾತಾಡೋದು ಇವೆಲ್ಲಾ ಏನು ಚೆನ್ನವೋ?"

"ಅವರಿಬ್ಬರಿಗೂ ಮದುವೆಯಾಗಿ ಎರಡು ದಿನಗಳಾಗಿವೆ ಅನ್ನೋದನ್ನ ಮರೆಯಬೇಡ ಸರಸಿ."

"ಹೊಸದಾಗಿ ಮದುವೆಯಾದ ಮಾತ್ರಕ್ಕೆ ಹಾಗಾಡಬೇಕೆ? ನಿನ್ನೆ, ಬೆಳದಿಂಗಳಿನ ಊಟಕ್ಕೆ ಕೆರೆ ಹತ್ತಿರ ಬುತ್ತಿ ತೆಗೆದುಕೊಂಡು ಹೋಗಿದ್ದರಲ್ಲಾ. ಆಗ ವಿಜಯ ಹುಲ್ಲಿನ ಮೇಲೆ ಕುಳಿತಿದ್ದಳಂತೆ, ಗೋಪಿ ಅವಳ ತೊಡೆ ಮೇಲೆ ತಲೆ ಇಟ್ಟುಕೊಂಡು ಮಲಗಿದ್ದನಂತೆ. ಕೆರೆ ಹತ್ತಿರ ಹೋಗಿದ್ದ ತಿಮ್ಮಮ್ಮ ಅವರನ್ನು ನೋಡಿ ನಾಚಿಕೊಂಡು ಹಾಗೇ ಬಂದುಬಿಟ್ಟಳಂತೆ."

"ಅವರಿಬ್ಬರೂ ಗಂಡ ಹೆಂಡತಿ ತಾನೆ? ಗೋಪಿ ಅವನ ಹೆಂಡತಿ ತೊಡೆ ಮೇಲೆ ತಲೆ ಇಟ್ಟುಕೊಂಡು ಮಲಗಿದರೆ ತಪ್ಪೇನು?"

"ಬಯಲಿನಲ್ಲಿ ಇವರ ಪ್ರೇಮಪ್ರದರ್ಶನವೇ?"

"ಸೊಗಸಾದ ಬೆಳದಿಂಗಳಿತ್ತು. ಕೆರೆಯ ಸುತ್ತಲೂ ಯಾರೂ ಜನರಿರಲಿಲ್ಲ. ಯಾರೂ ಅಲ್ಲಿಗೆ ಬರಲಾರರೆಂದು ಅವರು ಅಂದುಕೊಂಡಿರಬೇಕು. ಅವರಿಬ್ಬರೂ ಎಳೆಯ ಪ್ರೇಮಿಗಳು ಎನ್ನುವುದನ್ನು ಮರೆಯಬೇಡ ಸರಸಿ. ಒಬ್ಬರನ್ನೊಬ್ಬರು

ಮೆಚ್ಚಿ ಬಯಸಿ ಮದುವೆಯಾಗಿದಾರೆ. ಆದುದರಿಂದ ಅವರ ಪ್ರೇಮ ಕೊಂಚ ಕುರುಡಾಗಿದ್ದಿರಬಹುದು."

"ಆದರೆ ಅವರ ಸುತ್ತಲೂ ಇರುವವರಿಗೆ ಕಣ್ಣುಗಳಿವೆ."

"ಈಗ ಅವರು ಮಾಡಿದ ತಪ್ಪಿಗೆ ನನ್ನ ಏನು ಮಾಡೊಂತೀಯಾ? ಗೋಪಿ, ವಿಜಯಾನ ಕರೆದು ಬೈಯಲೇನು?" ಮೀರ ಜುಗುಪ್ಸೆಯಿಂದ ಕೇಳಿದಳು.

"ಎಲ್ಲಾದರೂ ಹಾಳಾಗಲಿ ನನಗೇನು?"

"ಶಾಂತಂ ಪಾಪಂ. ಎಲ್ಲಾದರೂ ಸುಖವಾಗಿರಲಿ ಎನ್ನಬಾರದೆ?"

"ಅವರಿಬ್ಬರೂ ಇಲ್ಲಿರುವವರೆಗೆ ನಾನು ಊರಲ್ಲಿ ತಲೆ ಎತ್ತಿಕೊಂಡು ತಿರುಗಾಡಲಾರೆ. ನಿನ್ನೇ ಬೆಳಿಗ್ಗೆ ಆಲೆಮನೇಲಿ ಕಬ್ಬಿನ ಹಾಲು ಕುಡಿಯುವಾಗ, ವಿಜಯ ಕುಡಿಯುತ್ತಿದ್ದ ಬಟ್ಟಲನ್ನು ಕಿತ್ತುಕೊಂಡು ಗೋಪಿ ತಾನು ಕುಡಿದನಂತೆ."

"ಈ ವಿಷಯ ಇನ್ನು ಚರ್ಚೆಮಾಡೋಕೆ ನನಗಿಷ್ಟವಿಲ್ಲ" ಎಂದಳು ಮೀರ.

"ಯಾರೂ ಕಾಣದ ಹೆಂಡತಿ. ತಲೆ ಮೇಲೆ ಕೂರಿಸಿಕೊಂಡು ಮೆರೆಸಿ..." ಸರಸಿಯ ಮಾತು ಮುಗಿಯುವುದಕ್ಕೆ ಮುಂಚೆಯೇ ಮೀರ ಅಲ್ಲಿಂದ ಎದ್ದು ಹೋದಳು.

ಸರಸಿಯ ಮಾತುಗಳನ್ನು ಕೇಳಿ ಮೀರಳ ಮನಸ್ಸು ವ್ಯಗ್ರವಾಗಿತ್ತು. ಆದುದರಿಂದಲೇ ಅವಳು ಮೂರು ದಿನಗಳ ನಂತರ ಗೆಳೆಯರನ್ನು ಹೊರಡಿಸಿ ತಾನೂ ಅವರೊಡನೆ ಮೈಸೂರಿಗೆ ಬಂದುಬಿಟ್ಟಳು.

ಮೈಸೂರಿಗೆ ಬಂದೊಡನೆ ಗೋಪಿ ಸ್ವಂತ ಮನೆಯನ್ನು ನೋಡತೊಡಗಿದ. ಅವನ ತಾಯಿ ತಂದೆಯಿಂದಾಗಲಿ, ವಿಜಯಳ ತಾಯಿ ತಂದೆಯಿಂದಾಗಲಿ ಅವರಿಗೆ ಯಾವ ವಿಧವಾದ ಸಹಾಯವೂ ದೊರೆಯುವಂತಿರಲಿಲ್ಲ.

"ಅವನು ನಮ್ಮ ಭಾಗಕ್ಕೆ ಸತ್ತಹಾಗೆ" ಎಂದು ಗೋಪಿಯ ತಂದೆ ತಮ್ಮ ಸ್ನೇಹಿತರೊಬ್ಬರ ಕೈಲಿ ಹೇಳಿಕಳುಹಿಸಿದ್ದರು.

"ಮನೆಗೆ ವಿಜಯಳನ್ನೂ ಕರೆದುಕೊಂಡು ಬರಲೇ?" ಎಂದು ಗೋಪಿ ತಂದೆಗೆ ಹೇಳಿಕಳುಹಿಸಿದ್ದ ಪ್ರಶ್ನೆಗೆ ಸಿಕ್ಕಿದ ಉತ್ತರ ಅದು.

ವಿಜಯಳ ತಂದೆ "ಅವಳು ಮನೆಗೆ ಬಂದರೆ ಕಾಲು ಮುರಿದು ಕಳಿಸುತ್ತೇನೆ" ಎಂದು ಎಲ್ಲರ ಎದುರಿಗೆ ಹಾರಾಡಿದ್ದರು.

ಪುಟ್ಟ ಸಂಸಾರ ಹೂಡಲು ಚಿಕ್ಕದೊಂದು ಮನೆ ಸಿಕ್ಕುವವರೆಗೆ ವಿಜಯ ಮೀರಳ ರೂಮಿನಲ್ಲಿದ್ದಳು. ಎರಡು ರೂಮಿದ್ದ ಸಣ್ಣ ಮನೆಸಿಕ್ಕಿದ ಕೂಡಲೇ ಗೋಪಿ ಮೀರಳ ಬಳಿಗೆ ಬಂದು-

"ನನ್ನ ಹುಡುಗೀನ ಕಳಿಸುತ್ತೀರಾ?" ಎಂದ.

"ಮನೆ ಎಲ್ಲಿ ಮಾಡಿದ್ದೀರ?" ಮೀರಾ ಕೇಳಿದಳು.

"ಶಿವರಾಮ ಪೇಟೇಲಿದೆ. ಮನೆ ಚೆನ್ನಾಗಿಲ್ಲ. ಆದರೆ ಎಷ್ಟು ದಿವಸ ಹೀಗಿರೋದು?"

"ಧಾರಾಳವಾಗಿ ಕರೆದುಕೊಂಡು ಹೋಗೀಪ್ಪ. ನನ್ನದೇನು ಅಡ್ಡಿ."

"ನಾಳೆ ಬೆಳಿಗ್ಗೆ ಬಂದು ಕರ್‍ಕೊಂಡು ಹೋಗ್ತೀನಿ. ಜೊತೆಗೆ ನೀವೂ ಬಂದು ನಾನು ಮಾಡಿಕೊಡುವ ಟೀ ಕುಡಿದು ಬರಬೇಕು."

"ಟೀ ನನಗೆ ಸೇರೋಲ್ಲ."

"ವಿಜಯಾಗೆ ಕಾಫಿ ಸೇರೋದಿಲ್ಲ. ಆದುದರಿಂದ ನಾನೂ ಈಗ ಟೀ ಅಭ್ಯಾಸ ಮಾಡಿಕೊಂಡಿದೀನಿ."

"ಅವಳಿಗೇ ಕಾಫಿ ಅಭ್ಯಾಸ ಮಾಡಿಸಬೇಕಿತ್ತು."

"ಅವಳು ಚಪಾತಿಗೆ ಬದಲು ಅನ್ನ ಅಭ್ಯಾಸ ಮಾಡಿಕೊಳ್ತೀನೀಂತ ಹೇಳಿದಾಳೆ. ಈಗ ಸರಿಯಾಯಿತಲ್ಲವೆ?"

"ಹೂಂ."

"ವಿಜಯ ಎಲ್ಲಿ?"

"ಅವಳಿಗೆ ರಾತ್ರಿ ಡ್ಯೂಟಿ ಇದೆ. ಸಂಜೆ ನಾನು ಬರುವ ಹೊತ್ತಿಗೆ ರೂಮಿಗೆ ಬೀಗ ಹಾಕಿಕೊಂಡು ಆಸ್ಪತ್ರೆಗೆ ಹೊರಟುಹೋಗಿದ್ದಳು."

"ಹಾಗಾದರೆ ಆ ಹುಡುಗಿ ಬೆಳಿಗ್ಗೆ ಬೇಗ ಏಳುವಳೇ?"

"ನಾನು ಎಬ್ಬಿಸಿರುತ್ತೇನೆ, ಏನೂ ಆತಂಕ ಪಡಬೇಡಿ."

"ಬೇಡ. ಅವಳು ನಿದ್ದೆ ಮಾಡ್ತಿದ್ದರೆ ಎಬ್ಬಿಸಬೇಡಿ. ರಾತ್ರಿಯೆಲ್ಲಾ ನಿದ್ದೆ ಗೆಟ್ಟಿರುತ್ತಾಳೆ. ಬೆಳಿಗ್ಗೆ ಚೆನ್ನಾಗಿ ನಿದ್ದೆ ಮಾಡಲಿ. ನಾನು ಮಧ್ಯಾಹ್ನ ಹನ್ನೊಂದು ಗಂಟೆಗೆ ಬರ್ತೀನಿ. ನೀವು ರಜಾ ತಗೊಂಡಿರಿ."

"ಆಗಲಿ" ಎಂದಳು ಮೀರ.

ಬೆಳಿಗ್ಗೆ ಎಂಟು ಗಂಟೆಯ ಹೊತ್ತಿಗೆ ರಾತ್ರಿ ಡ್ಯೂಟಿ ಮುಗಿಸಿಕೊಂಡು ವಿಜಯ ರೂಮಿಗೆ ಬಂದಳು. ಅವಳು ಬಂದೊಡನೆ ಮೀರ ಗೋಪಿ ಹೇಳಿದ್ದ ಸಮಾಚಾರವನ್ನು ತಿಳಿಸಿದಳು.

"ಊಂ.....ಊಂ....." ಎಂದು ತೂಕಡಿಸುತ್ತಾ ವಿಜಯ ಹಾಯಾಗಿ ಮಲಗಿಕೊಂಡು ಕಣ್ಣು ಮುಚ್ಚಿದಳು.

ಗೋಪಿ ಹನ್ನೊಂದು ಗಂಟೆಗೆ ಬಂದಾಗಲೂ ವಿಜಯ ನಿದ್ದೆ ಮಾಡು

ತ್ತಿದ್ದಳು. ಮೀರ ಗೋಪಿಯ ಮುಂದೆ ಕುರ್ಚಿಯನ್ನು ತಳ್ಳಿ,

"ಕುಳಿತುಕೊಳ್ಳಿ" ಎಂದಳು. ಗೋಪಿ ಕುಳಿತುಕೊಂಡ.

"ಎಬ್ಬಿಸಲೇನು ವಿಜಯಾನ?" ಮೀರ ಕೇಳಿದಳು.

"ಬೇಡಿ. ಅವಳಾಗಿಯೇ ಏಳಲಿ."

"ಈ ಪುಸ್ತಕ ನೋಡ್ತಿರಿ..." ಎನ್ನುತ್ತಾ ಮೀರಾ ಗೋಪಿಯ ಕೈಗೆ ಪುಸ್ತಕವೊಂದನ್ನು ಕೊಟ್ಟು, ರೂಮಿನಿಂದ ಹೊರಗೆ ಬಂದು, ಯಶೋಧೆಯ ರೂಮಿಗೆ ಹೋಗಿ ಹರಟೆ ಹೊಡೆಯತೊಡಗಿದಳು.

ಒಂದೂವರೆ ಗಂಟೆಯ ನಂತರ ಮೀರ ಮತ್ತೆ ತನ್ನ ಕೊಟಡಿಗೆ ಬಂದಾಗ ಗೋಪಿ ಕೈಲಿ ಪುಸ್ತಕ ಹಿಡಿದು ಕುಳಿತೇ ಇದ್ದ. ವಿಜಯ ಎಂದಿನಂತೆ ಗಾಢ ನಿದ್ದೆಯಲ್ಲಿದ್ದಳು.

"ಇನ್ನೂ ಏಳಲಿಲ್ಲವೇ?"

"ಇಲ್ಲ. ಮಲಗಿರಲಿ ಬಿಡಿ."

ಮೀರ ಸದ್ದು ಮಾಡುತ್ತಾ ಕಿಟಕಿ ಬಾಗಿಲನ್ನು ಬಡಿದಳು. ಪುಸ್ತಕವಿರಿಸಿದ್ದ ಮೇಜನ್ನು ಎಳೆದಳು. ಸದ್ದಿಗೆ ಎಚ್ಚರಗೊಂಡ ವಿಜಯ ಕಣ್ಣು ಬಿಟ್ಟಳು. ಎದುರಿಗೆ ಗೋಪಿ!

ವಿಜಯ ಕನಸು ಕಾಣುತ್ತಿರುವೆನೆಂದು ಬಗೆದಳೇನೋ?

"ಗೋಪಿ" ಎಂದು ಅಸ್ಪಷ್ಟವಾಗಿ ಹೇಳುತ್ತಾ ಅವನ ಕಡೆಗೆ ತನ್ನೆರಡು ಕೈಗಳನ್ನೂ ನೀಡಿದಳು.

ಮೀರ ಅದಾವ ಮಾಯದಲ್ಲೋ ಹೊರಗೆ ಜಾರಿ ಹೋಗಿದ್ದಳು.

ಅವಳು ಮತ್ತೆ ಹಿಂದಿರುಗಿ ಬಂದಾಗ ವಿಜಯ ತನ್ನ ಮನೆಗೆ ಹೊರಡಲು ಸಿದ್ಧವಾಗಿದ್ದಳು. ಮೀರ ಎರಡು ನಿಮಿಷಗಳಲ್ಲಿ ಸಿದ್ಧಳಾದಳು. ರೂಮಿಗೆ ಬೀಗ ಹಾಕಿಕೊಂಡು ಮೂವರೂ ಹೊರಟರು.

ಗೋಪಿಯ ಮನೆ ಚಿಕ್ಕದಾದರೂ ಅಚ್ಚುಕಟ್ಟಾಗಿತ್ತು. ಮನೆಗೆ ಹೀಟಿಂಗ್ ಸರ್ಕ್ಯೂಟ್ ಹಾಕಿಸಿದ್ದುದರಿಂದ ಮನೆಗೆಲಸದ ಭಾರ ಬಹಳ ಕಡಿಮೆಯಾಗಿತ್ತು. ತನ್ನ ಅಭಿರುಚಿಗೆ ತಕ್ಕಂತೆ ಗೋಪಿ ಮನೆಯನ್ನು ಸಿಂಗರಿಸಿದ್ದ.

ವಿಜಯ ಮನೆಯನ್ನು ಬಹಳ ಮೆಚ್ಚಿಕೊಂಡಳು. ದಂಪತಿಗಳ ನಿರ್ಮಲ ಆನಂದವನ್ನು ಕಂಡು ಮೀರಳ ಹೃದಯ ಹೂವಾಯಿತು. ವಿಜಯ ಟೀ ಬೆರೆಸಿ ಬಿಸ್ಕತ್ತಿನೊಡನೆ ಎಲ್ಲರಿಗೂ ಟೀ ಹಂಚಿದಳು. ಮನೆಯ ಸಾಮಾನುಗಳನ್ನು ಜೋಡಿಸುವುದರಲ್ಲಿ ಮೀರ ವಿಜಯಳಿಗೆ ಸಹಾಯ ಮಾಡಿದಳು. ಅವರಿಗೆ ದಿಕ್ಕು

ತೋಚದಂತೆ ಗೋಪಿ ತಾನೂ ಸಹಾಯ ಮಾಡಲು ಹೋಗುತ್ತಿದ್ದ.

"ಎಳೇ ಮಗು ಹಾಗೆ ಕೈಕಾಲಿಗೆ ಸುತ್ತಿಹಾಕಿಕೊಂಡು ಸುಮ್ಮನೆ ತೊಂದರೆ ಕೊಡಬೇಡಿ. ನೀವು ಹೋಗಿ" ಎಂದು ವಿಜಯ ಗೋಪಿಯನ್ನು ಗದರಿಸಿದಳು.

"ಈಗಿಂದ ಎಲ್ಲಾ ಅಭ್ಯಾಸವಾಗಿದ್ದರೆ ಒಳ್ಳೆಯದು" ಎಂದ ಗೋಪಿ.

"ನಿಮ್ಮನ್ನು ನೋಡಿಕೊಂಡು ಸುಧಾರಿಸುವುದೇ ನನಗೆ ಕಷ್ಟವಾಗಿದೆ. ಇನ್ನು ಸದ್ಯ ಮಗು ಬೇರೆ ಆಗಿಬಿಟ್ಟರೆ ನನ್ನ ಗತಿ ಮುಗಿಯಿತು."

ಮನೆಯ ಶೃಂಗಾರ ಮುಗಿದ ಮೇಲೆ ಮೀರ ತನ್ನ ರೂಮಿಗೆ ಹೊರಟಳು.

"ಇವತ್ತೊಂದು ದಿನ ಇಲ್ಲೇ ಇರಿ" ಎಂದ ಗೋಪಿ.

"ಇಲ್ಲಪ್ಪ ಮತ್ತೆ ಯಾವಾಗಲಾದರೂ ಬರುತ್ತೇನೆ" ಎಂದು ಮೀರ ಹೊರಟುಬಿಟ್ಟಳು.

* * * *

ಆರು ತಿಂಗಳಿನ ಶಿಕ್ಷಣ ಮುಗಿದ ಕೂಡಲೇ ಮೀರ ಹಳ್ಳಿಯಲ್ಲಿ ಹೋಗಿ ನೆಲೆಸಬೇಕೆಂದು ನಿರ್ಧರಿಸಿದಳು. ಅವಳ ನಿರ್ಧಾರವನ್ನು ಗೋಪಿ, ವಿಜಯ ಒಪ್ಪಲಿಲ್ಲ. ವಿಜಯ,

"ಹಳ್ಳೀಲಿ ಏನು ಮಾಡುತ್ತೀಯ ಮೀರ?" ಎಂದಾಗ ಮೀರ,

"ಹಳ್ಳಿಯಲ್ಲೂ ರೋಗಿಗಳಿದ್ದಾರೆ" ಎಂದು ನುಡಿದಿದ್ದಳು. ದಂಪತಿಗಳು ಅವಳ ಮನಸ್ಸನ್ನು ಅಲುಗಿಸಲು ಪ್ರಯತ್ನಿಸಿ ನಿರಾಶರಾದರು.

"ಅಲ್ಲಿ ಔಷಧಾಲಯ ತೆಗೆಯುತ್ತೀಯಾ?"

"ಇಲ್ಲಿರುವ ಶಾಪುಗಳಂತೆ ಅಲ್ಲಿ ನಾನು ಅಂಗಡಿ ಇಡುವುದಿಲ್ಲ. ಮಂಡ್ಯ ಡಿಸ್ಟ್ರಿಕ್ಟು ಮತ್ತು ಸುತ್ತಲೂ ಇರುವ ಹಳ್ಳಿಗಳಲ್ಲಿ ಸಾಮಾನ್ಯವಾಗಿರುವ ಮಲೇರಿಯಾ, ಲಿವರ್ ಖಾಯಿಲೆ, ಅನೀಮಿಯಾ, ಹೆಂಗಸರ ಖಾಯಿಲೆಗಳು ಇವುಗಳನ್ನು ದೂರಮಾಡಲು ನನ್ನ ಕೈಲಾದಷ್ಟು ಪ್ರಯತ್ನಿಸುತ್ತೇನೆ. ಗ್ರಾಮ ನೈರ್ಮಲ್ಯ, ಸಂತಾನ ನಿರೋಧ ಇವುಗಳ ಮೇಲೆ ಅವರಿಗೆ ಸಾಕಷ್ಟು ತಿಳಿವಳಿಕೆ ಕೊಡಲು ಅಪೇಕ್ಷಿಸುತ್ತೇನೆ. ಹಳ್ಳಿಗಳು ದೇಶದ ಬೆನ್ನುಮೂಳೆ. ರೈತರು ಅನ್ನ ಕಾಣಿಸುವ ದೇವರು ಎಂಬುದನ್ನು ಮರೆಯಬೇಡ ವಿಜಯ."

"ನೀನು ಹಳ್ಳಿಗೆ ಹೋದಮೇಲೆ ಇಲ್ಲಿಗೆ ಬರ್ತೀಯೋ ಇಲ್ವೋ."

"ಇಲ್ಲಿಗೆ ಬರದೇ ಇದ್ರೆ ಹೇಗಾಗುತ್ತೆ. ನಾನು ಔಷಧಿ, ಇಂಜಕ್ಷನ್ನುಗಳನ್ನು ಇಲ್ಲಿಂದಾನೇ ವಾರಕ್ಕೊಂದು ಸಲ ಬಂದು ತಗೊಂಡುಹೋಗ್ತೀನಿ."

"ಆಗ ನಿನ್ನ ತಂಗಿ ಮನೆ ಈ ಊರಲ್ಲೇ ಇದೆ ಎನ್ನುವುದನ್ನು ಮರೆಯಬೇಡ

ಮೀರ."

ಮೀರ ತಲೆ ಅಲುಗಿಸಿದಳು. ಗೋಪಿ, ವಿಜಯ ಅವಳನ್ನು ಸ್ಟೇಷನ್ನಿಗೆ ಹೋಗಿ ಬೀಳ್ಕೊಟ್ಟರು. ಮೀರ ತನ್ನೊಡನೆ ಸಾಕಷ್ಟು ಸಾಮಗ್ರಿಗಳನ್ನು ತೆಗೆದುಕೊಂಡು ಹಳ್ಳಿಗೆ ಹೊರಟಳು.

ಮೀರ ಇನ್ನು ಮೇಲೆ ಹಳ್ಳಿಯಲ್ಲಿಯೇ ಉಳಿಯುವಳೆಂದು ತಿಳಿದ ಶಾಮು ಹರ್ಷಗೊಂಡ. ಆದರೆ ಸರಸಿಯ ಮುಖ ಒಣಗಿಹೋಯಿತು. ಮೀರ ಹಳ್ಳಿಗೆ ಬರುವ ಹಿಂದಿನ ದಿನ ಶಾಮು ಅವಳಿಗಾಗಿ ಒಂದು ರೂಮು ತೆರವು ಮಾಡಿಸಿದ. ಆ ರೂಮಿನಲ್ಲಿ ಅವಳು ತನ್ನ ಕೆಲಸಕ್ಕೆ ಬೇಕಾದ ಸಮಾನುಗಳನ್ನು ಇಟ್ಟುಕೊಳ್ಳಲು ಅವನು ಅನುಕೂಲ ಮಾಡಿದ.

ಶಾಮುವೇ ಹೋಗಿ ಮೀರಳನ್ನು ಎದುರುಗೊಂಡು ಕರೆತಂದ. ಶಾಮು ತನಗಾಗಿ ಕಲ್ಪಿಸಿಕೊಟ್ಟಿದ್ದ ಸೌಲಭ್ಯಗಳನ್ನು ನೋಡಿ ಮೀರಳ ಗಂಟಲು ಉಬ್ಬಿ ಬಂತು.

ಮೀರ ವೈದ್ಯಳಾಗಿ ಹಳ್ಳಿಗೆ ಬಂದ ಸಮಾಚಾರ ಹಳ್ಳಿಯಲ್ಲಿ ಬಹುಬೇಗ ಹರಡಿತು.

"ಶಾಮಪ್ನೋರ ಯೆಡ್ತಿ ಡಾಕ್ಟರಾಗಿ ಬಂದವ್ರಂತೆ. ಚೂಜಿಮದ್ದು ಕೊಡ್ತಾರಂತೆ" ಎಂಬ ವಿಷಯ ಸುತ್ತಲಿನ ಹಳ್ಳಿಗಳಲ್ಲಿ ಹರಡಿತು. ಅದುವರೆಗೂ ಹಳ್ಳಿಯ ಜನರಿಗೆ ಪಂಡಿತರ ಕಷಾಯ ಮಾತ್ರ ತಿಳಿದಿತ್ತು. ಆಸ್ಪತ್ರೆಯ ಕಹಿ ಔಷಧಿ, ಸೂಜಿಮದ್ದು ಅವರಿಗೆ ತೀರ ಹೊಸದು. ಅವರಿಗೆ ಅದರಲ್ಲಿ ನಂಬಿಕೆಯೂ ಇರಲಿಲ್ಲ. ಆದುದರಿಂದ ಮೀರ ಹಳ್ಳಿಗೆ ಬಂದ ತರುಣದಲ್ಲಿ ಅವಳ ಕೆಲಸ ಅಷ್ಟು ಯಶಸ್ವಿಯಾಗುವಂತೆ ತೋರಲಿಲ್ಲ.

ವೆಂಕು ತಂದೆಯನ್ನು ನೋಡಿಕೊಂಡು ಹೋಗಲು ಮಂಡ್ಯದಿಂದ ಹಳ್ಳಿಗೆ ಬಂದಿದ್ದಳು. ಆಗ ಅವಳ ಮಗ ಮೂರು ವರ್ಷದ ನಂಜುಂಡಿಗೆ ಡಿಫ್ತೀರಿಯಾ ತಗುಲಿತು. ಮಗುವಿನ ಸಂಕಟ, ಯಾತನೆ ನೋಡಿ ಪಂಡಿತರು ತಲೆಯ ಮೇಲೆ ಕೈಹೊತ್ತುಕೊಂಡು ಕುಳಿತರು. ಲೇಹ, ಕಷಾಯದಿಂದ ಗಂಟಲುನೋವು ಕಡಿಮೆ ಯಾಗಲಿಲ್ಲ.

ವೆಂಕು ಗಾಬರಿಯಾಗಿ ಮೀರಳ ಬಳಿಗೆ ಅಳುತ್ತಾ ಓಡಿಬಂದಳು.

"ಮೀರಾ ನನ್ನ ಮಗೂನ ಉಳಿಸಿಕೊಡಿ" ಎಂದು ಅವಳು ಅಂಗಲಾಚಿದಳು. ಮೀರ ತಾಯಿಯೊಡನೆ ಅವರ ಮನೆಗೆ ಹೋಗಿ ಮಗುವನ್ನು ಪರೀಕ್ಷೆ ಮಾಡಿದಳು. ಮಗುವಿಗೆ ಡಿಫ್ತೀರಿಯಾ ತಗುಲಿದೆ ಎಂದು ಅವಳಿಗೆ ತಿಳಿಯಿತು.

"ವೆಂಕೂ, ಈ ಕೂಡಲೇ ಮೈಸೂರಿಗೆ ಹೊರಡೋಣ. ನೀನು ತಯಾರು ಮಾಡಿಕೋ, ನಾನು ಮನೆಗೆ ಹೋಗಿ ಬರುತ್ತೇನೆ" ಎಂದಳು ಮೀರ.

"ಈಗ ರೈಲು ಯಾವುದೂ ಇಲ್ಲವಲ್ಲ" ವೆಂಕು ಅಳುತ್ತಾ ಹೇಳಿದಳು.

"ನೀನು ಸಿದ್ಧಳಾಗು" ಎಂದು ನುಡಿದವಳೇ ಮೀರ ಮನೆಗೆ ಹೊರಟು ಹೋದಳು. ಶಾಮುವಿಗೆ ಸುದ್ದಿ ತಿಳಿಯಿತು. ಅವನು ಮೀರಳ ಸಲಹೆಯಂತೆ ಟೈರು ಚಕ್ರಗಳಿದ್ದ ಗಾಡಿಯನ್ನು ಸಿದ್ಧಪಡಿಸಿ, ವೇಗವಾಗಿ ಓಡುವುದೆಂದು ಹೆಸರು ಪಡೆದಿದ್ದ ಒಂದು ಜೊತೆ ಎತ್ತುಗಳನ್ನು ಗಾಡಿಗೆ ಹೂಡಿಸಿದ. ಐದು ನಿಮಿಷಗಳಲ್ಲಿ ಶಾಮು, ಮೀರ, ವೆಂಕು, ನಂಜುಂಡಿ, ಪಂಡಿತರು ಮೈಸೂರಿಗೆ ಹೊರಟರು. ನಿಂಗನ ಕೈಚಳಕದಿಂದ ಗಾಡಿ ಮೈಸೂರನ್ನು ಎರಡೂವರೆ ಗಂಟೆಯೊಳಗೆ ತಲುಪಿತು.

ಸಮಯಕ್ಕೆ ಸರಿಯಾಗಿ ದೊರೆತ ಚಿಕಿತ್ಸೆ, ಉಪಚಾರದಿಂದ ವೆಂಕುವಿನ ಮಗು ಉಳಿದುಕೊಂಡಿತು. ತನ್ನ ಮಗುವನ್ನು ಉಳಿಸಿಕೊಟ್ಟ ಮೀರಳ ಕೈಹಿಡಿದು ವೆಂಕು ಕೃತಜ್ಞತೆಯಿಂದ,

"ಹಿಂದೆ ನೀವು ಓದುವಾಗ ನಾನು ಏನೇನೋ ಟೀಕೆ ಮಾಡಿದ್ದೆ. ಆ ಟೀಕೆಗಳನ್ನೆಲ್ಲಾ ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ. ನೀವು ಇನ್ನೂ ಎಷ್ಟು ಜನರಿಗೆ ಪ್ರಾಣದಾನ ಮಾಡಬೇಕಾಗಿದೆಯೋ. ಈ ಪುಣ್ಯ ಕೆಲಸ ಎಂದಿಗೂ ನಿಲ್ಲಿಸಬೇಡಿ. ನನ್ನ ಕ್ಷಮಿಸಿ" ಎಂದಳು.

"ನಾನು ಮಾಡಿದ್ದೇನು? ಇಂಜೆಕ್ಷನ್ನುಗಳು ನನ್ನ ಹತ್ತಿರ ಇರಲಿಲ್ಲ. ಇಲ್ಲಿಗೆ ಕರೆದುಕೊಡು ಬಂದೆ ಅಷ್ಟೇ."

"ನೀವು ಡಿಫ್ತೀರಿಯಾಂತ ಹೇಳಿ ಕರ್ಕೊಂಡು ಬರದಿದ್ದರೆ..."

"ಅಷ್ಟೊಂದು ಹೊಗಳಬೇಡ ವೆಂಕು. ಆಮೇಲೆ ಮೀರಳ ತಲೆ ತಿರುಗಿ ಬಿಡುತ್ತದೆ" ಎಂದ ಶಾಮು.

ಈ ಪ್ರಸಂಗದ ನಂತರ ಹಳ್ಳಿಯವರು ಮೀರಳನ್ನು ನಂಬತೊಡಗಿದರು. ತಮ್ಮಲ್ಲಿ ಯಾರಿಗೆ ಯಾವ ಕಾಯಿಲೆಯಾದರೂ, ಸೀಸೆ ಹಿಡಿದು ಮೀರಳ ಬಳಿಗೆ ಓಡಿಬರುತ್ತಿದ್ದರು. ಸುತ್ತಮುತ್ತಲಿನ ಹಳ್ಳಿಗಳಿಂದಲೂ ಜನ ಗಾಡಿ ಕಟ್ಟಿಕೊಂಡು ಮೀರಳನ್ನು ನೋಡಿ ಅವಳಿಂದ ತಕ್ಕ ಚಿಕಿತ್ಸೆ ಪಡೆಯಲು ಬರುತ್ತಿದ್ದರು.

ತನ್ನ ರೈತರುಗಳಿಂದ ಫೀಸನ್ನಾಗಲಿ, ಔಷಧದ ಹಣವನ್ನಾಗಲೀ ಪಡೆಯ ಬಾರದೆಂದು ಶಾಮು ಮೀರಳಿಗೆ ಹೇಳಿದ್ದ. ಆದರೆ ಉಳಿದ ರೈತರುಗಳಿಂದ ಹಣ ಪಡೆಯಲು ಅವನ ಅಭ್ಯಂತರವೇನೂ ಇರಲಿಲ್ಲ. ಸರಸಿಗೆ ಶಾಮುವಿನ ಏರ್ಪಾಡು ಹಿಡಿಸಲಿಲ್ಲ. ಅವಳು ಅಸಮಾಧಾನದಿಂದ,

"ಹಣ ತಗೊಳ್ಳದೆ ಬಿಟ್ಟಿ ಔಷಧಿ ಕೊಡೋದು ನ್ಯಾಯವಲ್ಲ" ಎಂದು ಶಾಮುವನ್ನು ಪ್ರತಿಭಟಿಸಿದಳು.

"ನನ್ನ ರೈತರಿಂದ ಹಣ ಪಡೆಯಬೇಡ ಎಂದು ಮಾತ್ರ ಹೇಳಿದೆ. ಉಳಿದವರಿಂದ ಧಾರಾಳವಾಗಿ ಫೀಸು ತೆಗೆದುಕೊಳ್ಳಲಿ."

"ನಿಮ್ಮ ರೈತರಿಗೆ ತಾನೇ ಯಾಕೆ ಬಿಟ್ಟಿ ಔಷಧಿ ಕೊಡಬೇಕು? ಹೀಗೆ ದಾಂಧಲೆ ನಡೆಸಿದರೆ ನಿಮ್ಮ ಮಗನ ಕೈಗೆ ಕರಟ ಕೊಡುತ್ತೀರಿ."

"ಸರಸಿ, ನಾನಿವತ್ತು ಶ್ರೀಮಂತನಾಗಿರುವುದು ನನ್ನ ರೈತರುಗಳಿಂದ. ಅವರು ಆರೋಗ್ಯವಾಗಿದ್ದಷ್ಟೂ ಅವರಿಂದ ನನಗೆ ಉಪಕಾರವಿದೆಯೇ ಹೊರತು ನಷ್ಟವೇನಿಲ್ಲ. ಅವರಿಗೆ ಬಿಟ್ಟಿ ಔಷಧಿ ಕೊಡುವುದರಲ್ಲೂ ಸ್ವಾರ್ಥವಿದೆ. ಹಸುವಿಗೆ ಹುಲ್ಲು ಹಿಂಡಿ ಹೆಚ್ಚು ಹಾಕಿದಷ್ಟೂ ಹಾಲು ಸಿಗುತ್ತದೆ."

"ನೀವೂ ಸಂಸಾರೊಂದಿಗರು. ನಮ್ಮನ್ನು ಕಾಪಾಡಲು ಮರೆಯಬೇಡಿ."

"ಅದು ನನಗೂ ಗೊತ್ತು. ನನಗೆ ಇಬ್ಬರು ಹೆಂಡತಿಯರಿದ್ದಾರೆ. ಒಬ್ಬ ಮಗನಿದ್ದಾನೆ. ಮತ್ತೊಂದು ಮಗು ಆಗುವುದರಲ್ಲಿದೆ ಎನ್ನೋದನ್ನ ನಾನು ಮರೆತಿಲ್ಲ. ಆದರೆ ನನ್ನ ಹೊಲ ಜಮೀನುಗಳಲ್ಲಿ ದುಡಿಯುವವರಿಂದ ನಾನು ಹಣ ಹೀರಲಾರೆ."

ಅವನ ಮಾತು ಕೇಳಿ ಸರಸಿ ಕೋಪಿಸಿಕೊಂಡು ಹೋದಳು.

ಬೆಳಿಗ್ಗೆಯಿಂದ ಸಂಜೆಯವರೆಗೆ ಮೀರ ತನ್ನಲ್ಲಿಗೆ ಬರುತ್ತಿದ್ದ ರೋಗಿಗಳನ್ನು ನೋಡುತ್ತಿದ್ದಳು. ಸಂಜೆ ಐದು ಗಂಟೆಯ ನಂತರ ಹಳ್ಳಿಯಲ್ಲಿ ಸುತ್ತಾಡಿ ರೈತರ ಹೆಂಗಸರಿಗೆ ಮಲೇರಿಯಾ ರೋಗವನ್ನು ತಡೆಗಟ್ಟುವುದು ಹೇಗೆಂದು ತಿಳಿಸುತ್ತಿದ್ದಳು. ಗುಡಿಸಲುಗಳ ಬಳಿ ನೀರು ನಿಲ್ಲಲು ಅವಕಾಶ ಕೊಡದೆ ಇರುವಂತೆ ಅವರಿಗೆ ಅವಳು ಎಚ್ಚರಿಕೆ ಕೊಡುತ್ತಿದ್ದಳು. ಮೈಸೂರಿನಿಂದ ಲ್ಯಾಂಟ್ರನ್ ಲೆಕ್ಚರ್ ಕೊಡುವವರನ್ನು ಕರೆಸಿ ಮಲೇರಿಯಾ ರೋಗವನ್ನು ತಡೆಗಟ್ಟುವ ವಿಧಾನವನ್ನು ತೆರೆಯ ಮೇಲೆ ತೋರಿಸಿದಳು.

ಮಲೇರಿಯಾ, ಲಿವರ್ ಖಾಯಿಲೆಯ ಜೊತೆಗೆ ಅವಳು ಮಿತ ಸಂತಾನವನ್ನು ಹಳ್ಳಿಯವರಿಗೆ ತಿಳಿಸಲು ಪ್ರಯತ್ನಿಸಿದಳು. ಆದರೆ ಮೊದಲು ಈ ವಿಚಾರದಲ್ಲಿ ಅವಳಿಗೆ ಸೋಲಾಯಿತು.

ಒಂದು ದಿನ ಮೀರ ಒಡ್ಡರನ್ನು, ರೈತರ ಹೆಂಗಸರನ್ನು ಕೂರಿಸಿಕೊಂಡು ಹೇಳಿದಳು.

"ಒಬ್ಬೊಬ್ಬರಿಗೆ ಎಂಟು ಹತ್ತು ಮಕ್ಕಳಾಗೋದು ತುಂಬಾ ಅನ್ಯಾಯ.

ಇದರಿಂದ ನಿಮ್ಮ ಆರೋಗ್ಯ, ಶಕ್ತಿ ಹಾಳಾಗುವುದಲ್ಲದೆ ಮಕ್ಕಳಿಗೂ ಏನೂ ಸುಖವಿಲ್ಲ. ಈಗ ಬೋರನ್ನ ನೋಡಿ. ಅವನಿಗೆ ಒಂಬತ್ತು ಮಕ್ಕಳಿವೆ. ಯಾರಿಗೂ ಹೊಟ್ಟೆ ತುಂಬ ಹಿಟ್ಟು ಹಾಕುವ ಶಕ್ತಿ ಅವನಿಗಿಲ್ಲ. ಅದಕ್ಕೆ ಬದಲು ಎರಡೇ ಮಕ್ಕಳಿದ್ದಿದ್ದರೆ....."

"ಬಿಡವ್ವ. ಹುಟ್ಸಿಸಿದ ದ್ಯಾವರು ಹುಲ್ಲು ಮೇಯಿಸೋಕಿಲ್ಲ" ಎಂದು ಅವರು ಹೇಳಿದರು.

"ನೀವು ಯೇಳ್ದಂಗೆ ಮಾಡೋದು ತುಂಬಾ ಅನ್ಯಾಯದ ಪಾಪ. ಸಿವ ಮೆಚ್ತಾನಾ?' ರಾಮಕ್ಕ ಪ್ರತಿಭಟಿಸಿದಳು.

"ಎಂಟು ಹತ್ತು ಮಕ್ಕಳನ್ನು ಹೆತ್ತು ಅವರಿಗೆ ಅನ್ನ ಹಾಕದಿದ್ದರೆ ಅದು ಪಾಪವಲ್ಲವೇ ರಾಮಕ್ಕ? ಹುಟ್ಟಿಸೋದಿಕ್ಕೆ ಮಾತ್ರ ನಾವು ಜವಾಬ್ದಾರರು, ಸಾಕೋಕೆ ದೇವರು ಅಂದರೆ ಯಾರು ಮೆಚ್ಚುವ ಮಾತು?"

"ನೀವು ಯೋಳೋ ಮಾತು ನಿಜ" ಎಂದಳು ಮಾದವ್ವ.

ಚಿಕ್ಕ ವಯಸ್ಸಿಗೇ ಐದಾರು ಮಕ್ಕಳನ್ನು ಪಡೆದಿದ್ದ ಹೆಂಗಸು ಆಕೆ. ಮಕ್ಕಳು ಅವಳನ್ನು ಜೀವಂತವಾಗಿ ಹರಿದು ತಿನ್ನುತ್ತಿದ್ದವು. ಹಸಿವು ಎಂದು ಅಳಲು ತೆರೆದ ಬಾಯನ್ನು ಅವು ಮುಚ್ಚುತ್ತಲೇ ಇರಲಿಲ್ಲ. ಮಕ್ಕಳಿಂದಾಗಿ ಅವಳಿಗೆ ತನ್ನ ಜೀವನ ರೋಸಿಹೋಗಿತ್ತು. ಅವಳ ಗಂಡ ಹನುಮನೂ 'ಹಾಳು ಮಕ್ಕಳು' ಸಾಕೆಂದು ಗೊಣಗುತ್ತಿದ್ದ. ಆದರೆ ಎರಡು ವರ್ಷಕ್ಕೊಂಜು ಮಕ್ಕಳಾಗುವುದು ಅವರಿಗೆ ತಪ್ಪಿರಲಿಲ್ಲ.

"ನೀನೊಬ್ಬಳಾದರೂ ನನ್ನ ಮಾತು ಒಪ್ಪಿಯ ಮಾದವ್ವ?" ಮೀರ ಉತ್ಸಾಹದಿಂದ ಕೇಳಿದಳು.

"ಹೂಂ ಏನಾರ ಮಾಡಿ ನನಗೆ ಮಕ್ಕಳಾಗೋದನ್ನ ತಪ್ಪಿಸು ನನ್ನವ್ವ ಇವುಗಳಿಂದ ನನ್ನ ಜೀವನ ಬೆಂಡಾಗಿ ಓಯ್ತು."

"ನಾಳೆ ನೀನು, ಹನುಮ ಮನೆ ಹತ್ತಿರ ಬನ್ನಿ."

"ಆಗಲಿ."

ಉಳಿದ ಹೆಂಗಸರು ಮಾದವ್ವನನ್ನು 'ಪಾಪಿ' ಎಂದು ನಿಂದಿಸಿದರು. 'ಪ್ರಪಂಚದ ರೀತೀನೇ ತಲೆಕೆಳಗು ಮಾಡೋಕೆ ಒಂಟವ್ಳೆ' ಎಂದು ಅಪಹಾಸ್ಯ ಮಾಡಿದರು. ಆದರೆ ಮಾದವ್ವ ಸೋಲಲಿಲ್ಲ.

ಮಾದವ್ವ, ಹನುಮ ಮೀರಳ ಸಲಹೆಯನ್ನು ಪಡೆದರು. ಅದರ ಪರಿಣಾಮವಾಗಿ ಮಾದವ್ವನ ಚಿಕ್ಕ ಮಗುವಿಗೆ ನಾಲ್ಕು ವರ್ಷಗಳಾದರೂ ಅವಳು ಮತ್ತೆ

ಗರ್ಭಿಣಿಯಾಗಲಿಲ್ಲ. ಮಾದವ್ವನ ಮುಖದ ಮೇಲೆ ಮತ್ತೆ ಎಳೆತನದ ಕಾಂತಿ ಮೂಡಿತು. ಚಿಕ್ಕ ಮಗು ನಾಲ್ಕು ವರ್ಷದವನಾದುದರಿಂದ, ಯಾವ ಕೆಲಸಕ್ಕೂ ತನ್ನನ್ನೇ ಅವಲಂಬಿಸಿರುತ್ತಿದ್ದ ಕೈಗೂಸು ಇಲ್ಲದ್ದರಿಂದ, ಮಾದವ್ವ ಒಂದು ಗಳಿಗೆ ಕಾಲು ಚಾಚಿ ಸುಮ್ಮನೆ ಕುಳಿತುಕೊಳ್ಳುವಂತಾಯಿತು. ಹನುಮನೂ ಹೊಸ ಹರೆಯದವನಂತೆ ತೃಪ್ತಿಯಿಂದಿರುತ್ತಿದ್ದ.

ಮಾದವ್ವನನ್ನು ಅಪಹಾಸ್ಯ ಮಾಡಿದ ಬಾಯಿಗಳು ತೆಪ್ಪಗಾದವು. ಮಾದವ್ವನಿಗೆ ದೊರೆತ ನೆಮ್ಮದಿ, ತೃಪ್ತಿ ನೋಡಿ ಈರಮ್ಮ ತಾನೂ ಅವಳ ಮೇಲ್ಪಂಕ್ತಿಯನ್ನು ಅನುಸರಿಸಲು ಯತ್ನಿಸಿದಳು. ಮದುವೆಯಾದ ಐದು ವರ್ಷಕ್ಕೆ ಈರಮ್ಮ ಐದು ಮಕ್ಕಳ ತಾಯಿಯಾಗಿದ್ದಳು.

ಒಂದು ದಿನ ಮಾದವ್ವನ ಎದುರಿಗೆ ಈರಮ್ಮ ತನ್ನ ಸ್ಥಿತಿ ಹೇಳಿಕೊಂಡು ಅತ್ತಾಗ ಮಾದವ್ವ,

"ಅಮ್ಮಾವರ ತಾವು ಕರ್ಕೊಂಡು ಓಗ್ತೀನಿ ಬಾ. ನಾಳೆ ನಿನ್ನ ಗಂಡನ್ನೂ ಕರ್ಕೊಂಡು ಬಾ. ನಾನು ಈಗ ಮಕ್ಕಳ ಕಾಟವಿಲ್ಲದೆ ಸುಖವಾಗಿದೀನಿ" ಎಂದಳು.

ಈರಮ್ಮ, ಅವಳ ಗಂಡನಿಗೂ ಮೀರಳ ಉಪದೇಶ ಸಿಕ್ಕಿತು. ತಾನು ಹೇಳಬೇಕಾದುದನ್ನೆಲ್ಲಾ ತಿಳಿಸಿ ಮೀರ,

"ಮುಂದೆ ಮಕ್ಕಳು ಆಗೋದೆ ಇಲ್ಲ ಎನ್ನುವ ಭರವಸೆ ನಾನು ಕೊಡಲಾರೆ. ಆದರೆ ನಾಲ್ಕು ಮಕ್ಕಳಾಗುವ ಕಡೆ ಒಂದು ಆದರೆ ಎಷ್ಟೋ ವಾಸಿ ಅಲ್ಲವೇ? ನೀವು ಯಾವಾಗಲೂ ಎಚ್ಚರಿಕೆಯಿಂದಿರಿ" ಎಂದು ಹೇಳಿದಳು.

ಮೀರಳ ಮಾತುಗಳನ್ನು ಕೇಳಿ ಸರಸಿ ಅಸಹ್ಯಪಟ್ಟುಕೊಂಡಳು. ಹನುಮ, ರಂಗ ಮೊದಲಾದ ಅನ್ಯ ಪುರುಷರೆದುರಿಗೆ ಗಂಡು, ಹೆಣ್ಣಿನ ದಾಂಪತ್ಯಜೀವನವನ್ನು ನಿರ್ಭಯವಾಗಿ, ನಿಸ್ಸಂಕೋಚವಾಗಿ ಮೀರ ಚರ್ಚೆ ಮಾಡಿ ಅವರಿಗೆ ಸಲಹೆ ಕೊಡುವುದನ್ನು ಒಂದು ದಿನ ಕೇಳಿದ ಸರಸಿ ಅಪಮಾನದಿಂದ ತಲೆತಗ್ಗಿಸಿದಳು. ಹನುಮ, ರಂಗ ಹೋದಮೇಲೆ ಮೀರಳಿಗೆ ಚೆನ್ನಾಗಿ ಬುದ್ಧಿ ಕಲಿಸಬೇಕೆಂದು ಅವಳು ನಿಶ್ಚಯಿಸಿದಳು. ಅವರು ಹೋಗುತ್ತಲೇ ಸರಸಿ ಮೀರಳ ಬಳಿಗೆ ಬಂದು,

"ನೀವು ಮಾಡ್ತಿರೋ ಕೆಲಸ ಸರಿಯೇ?"

"ಯಾವ ಕೆಲಸ?"

"ಸಂತಾನ ನಿರೋಧದ ಬಗ್ಗೆ ಸಲಹೆ ಕೊಡುವುದು ತಪ್ಪಲ್ಲವೇ? ಪ್ರಕೃತಿ ನಿಯಮಕ್ಕೆ ನಾವು ವಿರುದ್ಧ ಹೋಗುವುದು ಪಾಪವಲ್ಲವೇ?"

"ಅಲ್ಲ."

"ಗಂಡಸರೆದುರಿಗೆ ಹಾಗೆ ಮಾತನೋಡೋದು..." ಅವಳ ಮಾತು ಮುಗಿಯುವುದಕ್ಕೆ ಮುಂಚೆಯೇ ಮೀರ ಜೋರಾಗಿ ನಕ್ಕು ಹೇಳಿದಳು,

"ವೈದ್ಯ ಶಿಕ್ಷಣ ಪಡೆಯಲು ಕಾಲೇಜು ಸೇರಿದಾಗ ನಾನು ಹೆಣ್ಣು ಎನ್ನುವುದನ್ನು ಮರೆತು ಸೇರಿದ್ದೇನೆ."

ಅಷ್ಟರಲ್ಲಿ ತಾಯಿಯೊಬ್ಬಳು ತನ್ನ ಮಗುವನ್ನು ತೋರಿಸಲು ಮೀರಳ ಬಳಿಗೆ ಕರೆದುಕೊಂಡು ಬಂದಳು. ಸರಸಿ ಗೊಣಗುತ್ತಾ ಹೊರಟುಹೋದಳು.

ಮೀರಳ ಕೆಲಸ ದಿನದಿನಕ್ಕೆ ಜಾಸ್ತಿಯಾಯಿತು. ಆಗಾಗ್ಗೆ ಅವಳು ಹೆರಿಗೆ ಕೇಸುಗಳಿಗಾಗಿ ಸುತ್ತಲಿನ ಹಳ್ಳಿಗಳಿಗೆ ಹೋಗಿ ಬರಬೇಕಾಗಿತ್ತು. ಈ ಓಡಾಟದಿಂದ ಅವಳಿಗೆ ಯಾವಾಗಲೂ ಬಳಲಿಕೆ, ಆಯಾಸವಿರುತ್ತಿತ್ತು.

ಒಂದು ದಿನ ಹೆರಿಗೆ ಕೇಸೊಂದನ್ನು ಮುಗಿಸಿಕೊಂಡು ಮೀರ ಮೂರು ಮೈಲಿಯಿದ್ದ ಹಳ್ಳಿಯಿಂದ ನಡೆದುಕೊಡು ಮನೆಗೆ ಬಂದಳು. ಚರ್ಮದ ಸೂಟು ಕೇಸನ್ನು ಮೇಜಿನ ಮೇಲಿರಿಸಿ ಆಯಾಸದಿಂದ ಮೀರ ಹಾಸಿಗೆಯ ಮೇಲೆ ಉರುಳಿ ಕೊಂಡಳು. ಸರಸಿಯ ಚಿಕ್ಕ ಮಗು ಕಾಮಾಕ್ಷಿ ತಪ್ಪು ಹೆಜ್ಜೆ ಇಡುತ್ತಾ ಮೀರಳ ಬಳಿಗೆ ಓಡಿಬಂದಳು. ಮೀರ ಅವಳನ್ನೆತ್ತಿ ಮಂಚದ ಮೇಲೆ ಕೂರಿಸಿದಳು. ಕಾಮಾಕ್ಷಿ ಸರಸಿ ತನ್ನನ್ನು ತಟ್ಟಿ ಮಲಗಿಸುತ್ತಿದ್ದಂತೆ, ಮೀರಳನ್ನು ತಟ್ಟಿದಳು.

ಮೀರ ಮಲಗಿರುವುದನ್ನು ನೋಡಿ ಶಾಮು ಗಾಬರಿಯಾದ. ಹತ್ತಿರ ಬಂದು,

"ಯಾಕೆ ಹುಷಾರಿಲ್ಲವೇ?" ಎಂದು ಕೇಳಿದ.

"ತುಂಬಾ ಆಯಾಸವಾಗದೆ. ಹಳ್ಳಿಯಿಂದ ನಡೆದುಕೊಂಡು ಬಂದೆ. ಸುತ್ತಲಿನ ಹಳ್ಳಿಗಳಿಗೆ ಹೋಗಿಬರುವುದು ನನಗೆ ತುಂಬಾ ಕಷ್ಟವಾಗಿದೆ."

"ಸುತ್ತಲಿನ ಹಳ್ಳಿಗಳಿಗೆ ಹೋಗಿ ಕೆಲಸ ಮಾಡುವುದನ್ನು ಬಿಟ್ಟುಬಿಡುವುದು ಒಳ್ಳೆಯದು. ಇದರಿಂದ ವೃಥಾ ಖರ್ಚಿದೆಯೇ ಹೊರತು ಮೂರು ಕಾಸಿನ ಪ್ರಯೋಜನವಿಲ್ಲ" ಎಂದಳು ಸರಸಿ.

ಮೀರ ಮಾತನಾಡಲಿಲ್ಲ. ಅವಳ ಪರವಾಗಿ ಶಾಮುವೇ ಉತ್ತರಕೊಟ್ಟ.

"ಅದು ಸರಿಯಲ್ಲ. ಅವಳಿಂದ ನಾಲ್ಕು ಜನರಿಗೆ ಉಪಯೋಗವಾಗಲೀಂತ ನಾನು ಮೀರಾನ ಡಾಕ್ಟರ್ ಪರೀಕ್ಷೆಗೆ ಓದಿಸಿದೆನೇ ಹೊರತು, ಸಂಪಾದಿಸಿ ನನ್ನ ಆಸ್ತಿ ಅಭಿವೃದ್ಧಿಪಡಿಸಲಿ ಎನ್ನುವ ಅಭಿಪ್ರಾಯ ನನಗೆ ಎಂದೂ ಇರಲಿಲ್ಲ. ದೇವರು ನನಗೆ ಯಾವುದಕ್ಕೂ ಕಡಿಮೆ ಮಾಡಿಲ್ಲ."

"ದೇವರು ಕಡಿಮೆ ಮಾಡಿಲ್ಲಾಂತ ರೂಪಾಯಿಗಳನ್ನು ಹೀಗೆ ಚೆಲ್ಲಾಡಿದರೆ ಮಕ್ಕಳ ಗತಿಯೇನು? ಕಂಡವರನ್ನ ಉದ್ಧಾರ ಮಾಡೋದರಲ್ಲಿ ನಮ್ಮ ಮನೆ ತೊಳೆದುಬಿಡಬೇಡಿ" ಸರಸಿ ಶಾಮುವನ್ನು ವಿರೋಧಿಸಿದಳು.

ಅವಳಿಗೆ ಮೀರಳಿಂದ ವೃಥಾ ಹಣ ಖರ್ಚಾಗುತ್ತಿದೆಯೆಂದು ಭಾವನೆ. ಮೀರ ಸಂಪಾದಿಸಿದ ಹಣ ಮತ್ತೆ ಔಷಧಿಗಳನ್ನು ಕೊಳ್ಳುವುದಕ್ಕಾಗಿ ಖರ್ಚಾಗುತ್ತಿದ್ದುದಲ್ಲದೆ ಹಲವು ಬಾರಿ ಕೈಯಿಂದಲೂ ಅವಳು ಹಣ ತರಬೇಕಾಗಿತ್ತು.

ಸರಸಿಯ ಮಾತು ಕೇಳಿ ಶಾಮು, "ನಿನ್ನ ಯಾರು ಇಲ್ಲಿಗೆ ಕರೆದೋರು?" ಎಂದ. ಸರಸಿ ಹುಬ್ಬು ಗಂಟಿಕ್ಕಿ,

"ನನಗೂ ಈ ಮನೆಗೂ ಸಂಬಂಧವಿದೆ. ನನ್ನ ಮಕ್ಕಳನ್ನು ಪರದೇಶಿಗಳನ್ನಾಗಿ ಮಾಡಬೇಡಿ" ಎಂದಳು.

"ಸುಬ್ರಹ್ಮಣ್ಯ, ಕಾಮಾಕ್ಷಿ ನನ್ನ ಮಕ್ಕಳಲ್ಲವೇ?" ಶಾಮು ಕೇಳಿದ.

"ನನ್ನ ಹೆಂಡತಿ, ನನ್ನ ಮಕ್ಕಳು ಎನ್ನುವ ವ್ಯಾಮೋಹ ನಿಮಗಿದ್ದಿದ್ದರೆ ನಾನೇಕೆ ಹೀಗೆ ಒದ್ದಾಡುತ್ತಿದ್ದೆ" ಎನ್ನುತ್ತಾ ಸರಸಿ ಒಳಗೆ ಹೋದಳು.

ಮೀರ ಜಗಳದಲ್ಲಿ ಭಾಗವಹಿಸದೆ ಸುಮ್ಮನೆ ಮಲಗಿದ್ದಳು. ಸರಸಿಯ ಮಾತಿನಿಂದ ಕೋಪಗೊಂಡಿದ್ದ ಶಾಮು ಹುಬ್ಬುಗಂಟಿಕ್ಕಿ,

"ಇದೆಲ್ಲಾ ನೀನು ಮಾಡಿದ್ದು.....ಇವಳನ್ನ ನನಗೆ ಗಂಟುಹಾಕಿ" ಎಂದು ಮೀರಳ ಮೇಲೆ ಹಾರಾಡಿದ.

ಮೀರ ನಗುತ್ತಾ ಕಾಮಾಕ್ಷಿಯ ಕಡೆ ಕೈ ತೋರಿಸಿ,

"ಇವಳನ್ನ ಎತ್ತಿಕೊಂಡು ಆ ಮಾತನಾಡಿ" ಎಂದಳು. ಶಾಮುವಿನ ಮುಖ ಮೃದುವಾಯಿತು. ಅವನು ಕಾಮಾಕ್ಷಿಯನ್ನೆತ್ತಿಕೊಂಡು,

"ನಿನಗೊಂದು ಕಾಗದ ಬಂದಿದೆ. ನನಗೆ ಕೊಡೋದು ಮರೆತುಹೋಯಿತು" ಎನ್ನುತ್ತಾ ಜೇಬಿನಿಂದ ಕಾಗದವೊಂದನ್ನು ತೆಗೆದು ಮೀರಳ ಕೈಗೆ ಕೊಟ್ಟ. ಮೀರ ಮಲಗಿಕೊಂಡೇ ಕಾಗದ ಒಡೆದು ಓದತೊಡಗಿದಳು.

*"ಮೀರ, ನೀವು ನಿಮ್ಮ ತಂಗಿಯ ಮನೆ ಮರೆತಿರುವಂತಿದೆ. ಚಿಂತೆಯಿಲ್ಲ. ನಾವು ಮಾತ್ರ ನಿಮ್ಮನ್ನು ಮರೆಯುವಂತಿಲ್ಲ. ಕಾಲೇಜಿನ ಲೆಕ್ಚರರ್ ಕೆಲಸಕ್ಕೆ ನಾನು ರಾಜೀನಾಮೆ ಕೊಟ್ಟು ಸ್ವಂತವಾಗಿ 'ವಿಜಯ ಫಾರ್ಮಸಿ'ಯನ್ನು ತೆರೆಯಲಿದ್ದೇನೆ. ಇಷ್ಟೊಂದು ಕಾರುಬಾರು ನಡೆಸಲು ಹಣ ಎಲ್ಲಿಂದ ಬಂತೆಂದು ನಿಮಗೆ ಆಶ್ಚರ್ಯವಾಗಬಹುದು. ನಾನು, ವಿಜಯ ಕಾಸಿಗೆ ಕಾಸು ಕೂಡಿಹಾಕಿದುದರ ಜೊತೆಗೆ ನಮ್ಮನ್ನೇ ಒತ್ತೆಯಾಗಿಟ್ಟು ಹಣವನ್ನು ಸಾಲವಾಗಿ ಪಡೆದಿದ್ದೇವೆ. ನರ್ಸಿಂಗ್ ಹೋಂ ಮತ್ತು ಫಾರ್ಮಸಿಯ ಪ್ರಾರಂಭೋತ್ಸವ ಶುಕ್ರವಾರ ನಡೆಯಲಿದೆ. ನೀವು, ನಿಮ್ಮ ಯಜಮಾನರು ನಮ್ಮ ಮೇಲೆ ಕೃಪೆ ಮಾಡಿ ದಯಮಾಡಿಸಿ ಈ ಸಮಾರಂಭ ಯಶಸ್ವಿಯಾಗಿ ನೆರವೇರುವಂತೆ ಮಾಡಬೇಕೆಂದು ನಾನು, ವಿಜಯ ಕೇಳಿಕೊಳ್ಳುತ್ತೇವೆ.*

*ಗೋಪಿ."*

ಮೀರ ಕಾಗದವನ್ನು ಓದಿ ಶಾಮುವಿನ ಕೈಗೆ ಕೊಟ್ಟಳು. ಶಾಮು ಕಾಗದ ಓದಿ "ಆಗಲಿ" ಹೋಗಿಬರೋಣ" ಎಂದ.

ಗುರುವಾರ ಶಾಮು, ಮೀರ ಮೈಸೂರಿಗೆ ಹೊರಟರು. ಗೋಪಿ, ವಿಜಯ ಅವರನ್ನು ನಿಲ್ದಾಣದಲ್ಲಿ ಎದುರುಗೊಂಡರು.

ಮೀರಳನ್ನು ಕಂಡೊಡನೆ ವಿಜಯ ಗೋಪಿಯ ಮೇಲೆ ದೂರು ಹೇಳಲು ಪ್ರಾರಂಭಮಾಡಿದಳು.

"ನೋಡು ಮೀರಾ, ಫಾರ್ಮೆಸಿಗೆ, ನರ್ಸಿಂಗ್ ಹೋಂಗೆ ನನ್ನ ಹೆಸರನ್ನೇ ಇಟ್ಟಿದ್ದಾರೆ. ನನಗದು ಸ್ವಲ್ಪವೂ ಇಷ್ಟವಲ್ಲ. ಗೋಪಿನಾಥ್ ಫಾರ್ಮೆಸಿ ಎಂದು ಇಡಬಾರದೇ? ನೀನಾದರೂ ಅವರಿಗೆ ಹೇಳು."

"ಯಾರು ಹೇಳಿದರೂ ನಾನು ಒಪ್ಪೋದಿಲ್ಲ" ಎಂದ ಗೋಪಿ.

"ಮೊನ್ನೆಯಿಂದ ನನಗೂ, ಅವರಿಗೂ ಅದೇ ಜಗಳ" ಎಂದಳು ವಿಜಯ.

"ಹೆಸರು ಯಾವುದಿಟ್ಟರೇನಂತೆ? ನಿಮ್ಮ ಕೆಲಸದಲ್ಲಿ ನೀವು ಸಂಪೂರ್ಣ ಯಶಸ್ಸು, ವಿಜಯ ಗಳಿಸೋದು ಮುಖ್ಯ" ಎಂದು ಮೀರ ಅವರ ಜಗಳವನ್ನು ಕೊನೆಗಾಣಿಸಿದಳು.

ಶುಕ್ರವಾರ ಸಂಜೆ ಐದು ಗಂಟೆಗೆ ನರ್ಸಿಂಗ್ ಹೋಂ, ಫಾರ್ಮೆಸಿಯ ಪ್ರಾರಂಭೋತ್ಸವ ವೈಭವದಿಂದ ನೆರವೇರಿತು. ಗೋಪಿ, ವಿಜಯರ ಗೆಳೆಯರು ಆತ್ಮೀಯರು ಉತ್ಸಾಹದಲ್ಲಿ ಭಾಗವಹಿಸಿದ್ದರು. ಆಹ್ವಾನ ಪತ್ರಿಕೆ ಅವರ ತಾಯಿ ತಂದೆಗಳಿಗೆ ತಲುಪಿದ್ದರೂ ಅವರಲ್ಲಿ ಯಾರೂ ಬಂದಿರಲಿಲ್ಲ.

ಶಾಮು ಶನಿವಾರವೇ ಹಳ್ಳಿಗೆ ಹಿಂತಿರುಗಬೇಕೆಂದಿದ್ದರೂ ಗೋಪಿ ಅವನನ್ನು ಹೋಗಗೊಡಲಿಲ್ಲ. ಅವನ ಒತ್ತಾಯಕ್ಕೆ ಕಟ್ಟುಬಿದ್ದು ಶಾಮು ಮತ್ತೊಂದು ದಿನ ಅಲ್ಲಿ ನಿಲ್ಲಬೇಕಾಯಿತು.

ಶನಿವಾರ ರಾತ್ರಿ ಊಟಮುಗಿಸಿ ಎಲ್ಲರೂ ವರಾಂಡದಲ್ಲಿ ಮಾತನಾಡುತ್ತ ಕುಳಿತಿದ್ದರು. ಮಾತಿಗೆ ಮಾತು ಬಂದು ಶಾಮು ಹೇಳಿದ.

"ಮೀರ ಇತ್ತೀಚೆಗೆ ತುಂಬಾ ದುರ್ಬಲಳಾಗಿದ್ದಾಳೆ. ಹಳ್ಳಿಗಳಲ್ಲಿ ಸುತ್ತಾಡುವುದು ಅವಳಿಂದ ಸಾಧ್ಯವಿಲ್ಲ. ಈಚೇಚೆಗೆ ಕೆಲಸವೂ ಜಾಸ್ತಿಯಾಗುತ್ತಿದೆ. ನನಗೇನು ಮಾಡಬೇಕೋ ತಿಳಿಯುವುದಿಲ್ಲ"

"ಅದಕ್ಕೆ ಯಾಕೆ ಇಷ್ಟೊಂದು ಯೋಚನೆ ಮಾಡಬೇಕು ಶಾಮಣ್ಣ? ನೀವು ಸ್ವಲ್ಪ ಹಣ ಖರ್ಚುಮಾಡಲು ಮನಸ್ಸು ಮಾಡಲು ತಯಾರಿದ್ದರೆ ನಾನು ನಿಮಗೊಂದು ಸಲಹೆ ಕೊಡ್ತೀನಿ. ನೀವು ಮನಸ್ಸು ಮಾಡಿದರೆ ಅದೇನೂ ಅಷ್ಟು

ದೊಡ್ಡದಲ್ಲ" ಎಂದ ಗೋಪಿ.

"ಏನದು ಹೇಳಿ?"

"ನೀವೇಕೆ ಒಂದು ಕಾರು ತೆಗೆದುಕೊಳ್ಳಬಾರದು ಮೀರಾ? 'ಡ್ರೈವಿಂಗ್' ಕಲಿತುಕೊಂಡರೆ ಡ್ರೈವರನ್ನು ಇಟ್ಟುಕೊಳ್ಳಬೇಕಾಗೇ ಇಲ್ಲ. ಅಲ್ಲವೇ?"

ಶಾಮು ಮಾತನಾಡಲಿಲ್ಲ.

"ಹೌದು. ಅದೇ ಸರಿಯಾದ ಯೋಚನೆ. ಆಗೀಗ್ಗೆ ಮೀರ ತುಂಬಾ ಇಳಿದು ಹೋಗಿದ್ದಾರೆ. ಒಂದು ಕಾರು ತೆಗೆದುಕೊಳ್ಳುವುದು ನಿಮಗೇನೂ ಕಷ್ಟವಲ್ಲ. ಹಾಗೆ ಮಾಡಿ" ಎಂದಳು ವಿಜಯ.

"ಒಂದು ಕಾರು ಎಷ್ಟಾಗಬಹುದು?" ಶಾಮು ಕೇಳಿದ.

"ಒಂದು ಒಳ್ಳೆಯ ಕಾರಿಗೆ ಸುಮಾರು ಹತ್ತು ಸಾವಿರ ಆಗಬಹುದು. ನಿಮಗೆ ಅದೇನು ದೊಡ್ಡ ಖರ್ಚಲ್ಲ."

ಹತ್ತು ಸಾವಿರ! ನಿಜ. ಶಾಮುವಿಗೆ ಅದು ದೊಡ್ಡ ಖರ್ಚಾಗಿರಲಿಲ್ಲ. ಮೊನ್ನೆ ಹನ್ನೆರಡು ಸಾವಿರ ಕೊಟ್ಟು ಒಂದು ತೆಂಗಿನ ತೋಟ ತೆಗೆದುಕೊಳ್ಳಲಿಲ್ಲವೇ? ತೆಂಗಿನ ತೋಟದಿಂದ ಮತ್ತೆ ಹಣ ಸಂಪಾದಿಸಬಹುದು. ಆದರೆ ಕಾರಿನಿಂದಲೋ? ಆದರೆ ಮೀರಳಿಗೆ ಕಾರಿನಿಂದ ಬಹಳ ಸೌಕರ್ಯ ಸಿಕ್ಕಬಹುದು. ಅವಳ ಸುತ್ತಾಟ, ಕೆಲಸ ನೋಡಿದಾಗ ತನಗೆ ಅಯ್ಯೋ ಎನಿಸುತ್ತಿರಲಿಲ್ಲವೇ? ಮೀರಳಿಗೆ ಕಾರನ್ನು ತೆಗೆದುಕೊಡುವುದೇ ಸರಿಯಾದ ಯೋಚನೆ. ಆದರೆ ಸರಸಿ ಏನನ್ನುವಳೋ? ಈ ವಿಷಯ ತೆಗೆದ ಕೂಡಲೇ ಇನ್ನು ಎಷ್ಟು ರಂಪ, ಪಂಚಾಯಿತಿ, ಜಗಳಗಳೋ?ಏನಾದರಾಗಲಿ. ಸರಸಿಯನ್ನು ಎದುರಿಸಿಯಾದರೂ....

"ನೀವೇನು ಹೇಳ್ತೀರಾ ಮೀರಾ?" ಗೋಪಿ ಕೇಳಿದ.

ಮೀರಳ ಮನಸ್ಸೂ ಶಾಮುವಿನ ಯೋಚನೆಯ ದಿಕ್ಕಿನಲ್ಲಿ ಓಡುತ್ತಿತ್ತು. ತನ್ನ ಬಗ್ಗೆ ಶಾಮು ಎಂದೂ ಕೈಬಿಗಿಮಾಡಿರಲಿಲ್ಲ. ತನಗಾಗಿ ಅವನು ಹಣವನ್ನು ನೀರಿನಂತೆ ಖರ್ಚು ಮಾಡುತ್ತಿದ್ದ. ಆದರೆ ಸರಸಿ? ಈಗಾಗಲೇ ಅವಳು ಮನೆಯಲ್ಲಿ ಹೆಜ್ಜೆಹೆಜ್ಜೆಗೂ ಸರಸಿಯ ವ್ಯಂಗ್ಯ ಮಾತುಗಳು, ಅಣಕದ ನುಡಿಗಳನ್ನು ಕೇಳಿ ಜುಗುಪ್ಸೆಗೊಂಡಿದ್ದಳು. ಆಗ ಅವಳು ಯಾವ ಮಾತೂ ಆಡದೆ ಎಲ್ಲವನ್ನೂ ಮೂಕಿಯಂತೆ ಸಹಿಸಿಕೊಂಡಿದ್ದಳು.

ಹತ್ತು ಸಾವಿರ ಖರ್ಚು ಮಾಡಿ ತನಗಾಗಿ ಶಾಮು ಒಂದು ಕಾರನ್ನು ಕೊಳ್ಳಲಿರುವನೆಂದು ಸರಸಿ ಕೇಳಿದರೆ ಮನೆ ರಣರಂಗವಾಗಬಹುದಲ್ಲವೇ?

"ಗಂಡ, ಹೆಂಡತಿ ಇಬ್ಬರೂ ಯೋಚನೆ ಮಾಡುತ್ತಾ ಕುಳಿತುಬಿಟ್ಟರು"

ಎಂದು ವಿಜಯ ಅವರನ್ನು ಹಾಸ್ಯಮಾಡಿದಳು.

ಶಾಮು, ಮೀರ ಎಚ್ಚರಗೊಂಡರು.

ಶಾಮುವಿನ ಮನಸ್ಸಿನಲ್ಲಿ ಗೋಪಿಯ ಸಲಹೆ ಬಲವಾಗಿ ನಾಟಿಬಿಟ್ಟಿತು. ಹಳ್ಳಿಗೆ ಹಿಂತಿರುಗುವಾಗ ಅವನ ಮನಸ್ಸನ್ನು ಆಕ್ರಮಿಸಿದ್ದ ಯೋಚನೆ ಅದೊಂದೇ. ಸರಸಿಯನ್ನು ಎದುರಿಸಿ ಹತ್ತು ಸಾವಿರ ಖರ್ಚು ಮಾಡಲು ಅವನು ಸ್ವಲ್ಪವಾದರೂ ಹಿಂಜರಿಯುತ್ತಿರಲಿಲ್ಲ. ಅದು ತನ್ನ ಹಣವಲ್ಲವೇ? ಆದರೆ ಮನೆಯಲ್ಲಿ ಮುಸುಗುವ ಅಸಮಾಧಾನ, ಜಗಳ, ವಾಗ್ವಾದಗಳನ್ನು ನೆನಸಿಕೊಂಡರೇ ಅವನಿಗೆ ಬೇಸರವಾಗುತ್ತಿತ್ತು. ಈಗಾಗಲೇ ಸರಸಿ ಮೀರಳ ಕೆಲಸದ ಬಗ್ಗೆ, ಅದಕ್ಕಾಗಿ ಆಗಾಗ್ಗೆ ಕೈಯಿಂದ ತೆರಬೇಕಾಗಿರುವ ದಂಡದ ಬಗ್ಗೆ ಹಲವಾರು ಕಟುನುಡಿಗಳನ್ನಾಡಿದ್ದಳು.

ಶಾಮು ಮೀರಳ ಕಡೆ ನೋಡಿದ. ಟ್ರೈನಿನ ಕಿಟಕಿಗೊರಗಿ ಮೀರ ಕಣ್ಣು ಮುಚ್ಚಿಕುಳಿತಿದ್ದಳು. ಶಾಮುವಿಗೆ ಅವಳನ್ನು ನೋಡಿ ಕನಿಕರವಾಯಿತು.

ಬಿಸಿಲಿನಲೆದಾಟದಿಂದ ಅವಳ ಮೊದಲಿನ ದೇಹಕಾಂತಿ ಮಾಯವಾಗಿತ್ತು. ತನ್ನ ಶಕ್ತಿಮೀರಿ ದುಡಿಯುತ್ತಿದ್ದರಿಂದ ಅವಳು ತನ್ನ ಹಿಂದಿನ ಆರೋಗ್ಯ, ಮೈಕಟ್ಟನ್ನು ಕಳೆದುಕೊಂಡು ಕೃಶವಾಗಿದ್ದಳು.

"ಮೀರಾ."

ಮೀರ ಕಣ್ಣುಬಿಟ್ಟಳು.

"ಇನ್ನೊಬ್ಬರಿಗೆ ಆರೋಗ್ಯ ಕೊಡುವವರು ತಮ್ಮ ಆರೋಗ್ಯ ನೋಡಿಕೊಳ್ಳಬಾರದೇ?"

ಮೀರ ಬದಲು ಹೇಳದೇ ನಕ್ಕಳು. ಶಾಮು ಪುನಃ ಕೇಳಿದ,

"ಕಾರಿನ ವಿಷಯಕ್ಕೆ ಏನು ಹೇಳ್ತೀಯಾ?'

"ಮನೇನ ಯುದ್ಧರಂಗ ಮಾಡಬೇಕೂಂತಿದ್ದರೆ ಆ ವಿಷಯ ಮಾತನಾಡಿ. ಅನಾವಶ್ಯಕವಾಗಿ ಜಗಳ ತೆಗೆಯುವುದು ನನಗಾಸೆಯಿಲ್ಲ."

"ಆದರೆ ನೀನು ಹೇಗಾಗಿದೀಯ ಗೊತ್ತೆ?"

"ಅದು ಬೇರೆಯ ವಿಷಯ. ನೀವು ನನಗಾಗಿಯಾದರೂ ಮನೆಯಲ್ಲಿ ಕಾರಿನ ವಿಷಯ ಎತ್ತಬೇಡಿ."

"ಹಣವನ್ನೇನೂ ಸರಸಿ ತನ್ನ ಕೈಯಿಂದ ಕೊಡಬೇಕಾಗಿಲ್ಲ. ನನ್ನ ಹಣವನ್ನು ನಾನು ಮನಸ್ಸು ಬಂದ ಹಾಗೆ ಖರ್ಚುಮಾಡಲು ಅವಳದೇನು ಅಡ್ಡಿ?"

"ಅವಳು ಮಕ್ಕಳಿಗೆ ಅನ್ಯಾಯವಾಗಬಾರದೆಂದು ಹಾಗೆ ಹೇಳುತ್ತಾಳೆ. ಅವಳು ಹೇಳುವುದರಲ್ಲಿ ತಪ್ಪೇನಿಲ್ಲ. ನೀವು ಕಾರಿನ ವಿಷಯ ಅವಳೆದುರಿಗೆ ಆಡಿದರೆ

ನನ್ನಾಣೆಯಿದೆ."

ಶಾಮು ಸುಮ್ಮನಾದ. ಆದರೆ ಮನಸ್ಸು ಮಾರ್ಗವನ್ನು ಹುಡುಕುತ್ತಲೇ ಇತ್ತು.

ಮೀರಳ ಮಾತಿಗ ಬೆಲೆ ಕೊಟ್ಟು, ಶಾಮು ಮನೆಯಲ್ಲಿ ಕಾರು ತೆಗೆದು ಕೊಳ್ಳುವ ವಿಷಯವನ್ನು ಎತ್ತಲಿಲ್ಲ.

ದಿನಗಳು ಉರುಳಿ ತಿಂಗಳುಗಳಾದವು.

ಮೀರ ಮೊದಲಿನಂತೆ ದುಡಿಯುತ್ತಿದ್ದಳು. ನಾಲ್ಕು ಐದು ಮೈಲಿಯಿರುವ ಹಳ್ಳಿಗೆ ನಡೆದುಕೊಡು ಹೋಗುತ್ತಿದ್ದಳು. ಇತರ ರೋಗಿಗಳು ಅವಳಿದ್ದಲ್ಲಿಗೇ ಬಂದರೂ, ಹೆರಿಗೆ ಕೇಸುಗಳಿಗೆ ಅವಳು ಅವರಿದ್ದ ಸ್ಥಳಕ್ಕೇ ಹೋಗಿ ಬರಬೇಕಾಗಿತ್ತು. ತನ್ನ ಜೀವನವನ್ನೇ ಒತ್ತೆಯಿಟ್ಟು ಅವಳು ಕೆಲಸ ಮಾಡುತ್ತಿದ್ದುದನ್ನು ನೋಡಿ ಶಾಮುವಿನ ಮರುಕ ಉಕ್ಕಿ ಬರುತ್ತಿತ್ತು.

"ಗಾಡಿಯಲ್ಲಿ ಹೋಗಿ ಬಾ" ಎಂದು ಶಾಮು ಹೇಳಿದಾಗ ಮೀರ,

"ಪರವಾಗಿಲ್ಲ, ಹಳ್ಳಿ ಮೂರುಮೈಲಿ ಇದೆ. ಕುಲುಕಾಡಿಕೊಂಡು ಗಾಡಿಯಲ್ಲಿ ಹೋಗುವ ಬದಲು ನಡೆದುಕೊಂಡೇ ಹೋಗಿ ಬರುತ್ತೇನೆ. ನನಗೆ ಅದೇ ಅನುಕೂಲ" ಎನ್ನುತ್ತಿದ್ದಳು.

ಒಂದು ಮಧ್ಯಾಹ್ನ ಮೀರ ತಿಂಡಿ ತಿನ್ನುತ್ತಿದ್ದಾಗ ಚಿಕ್ಕ ಹುಡುಗನೊಬ್ಬ ಓಡಿಬಂದು ಗಾಬರಿಯಿಂದ,

"ಈಗಲೇ ಬರಬೇಕಂತೆ. ನಮ್ಮ ಅಕ್ಕನಿಗೆ ಜ್ವರ ಜಾಸ್ತಿಯಾಗಿ ಹೇಗೇಗೋ ಮಾತಾಡ್ತಿದಾಳೆ" ಎಂದ.

ಮೀರ ತಿಂಡಿಯನ್ನು ಬಿಟ್ಟು ತನ್ನ ಬ್ಯಾಗನ್ನು ತೆಗೆದುಕೊಂಡು ಹೊರಟಳು. ಉಸಿರಾಡಲು ಕಷ್ಟಪಡುತ್ತಿದ್ದ ಹುಡುಗಿಗೆ ಇಂಜಕ್ಷನ್ ಕೊಟ್ಟು, ಮೀರ ಅವಳ ಬಳಿಯೇ ಸ್ವಲ್ಪ ಹೊತ್ತು ಕುಳಿತಿದ್ದಳು. ಅನಂತರ ಹುಡುಗಿ ಸಲೀಸಾಗಿ ಉಸಿರಾಡಲು ಪ್ರಾರಂಭಿಸಿದಳು. ಹುಡುಗಿಯ ತಾಯಿಯಂತೂ ಮೀರಳ ಕಾಲುಗಳನ್ನು ಹಿಡಿದುಕೊಳ್ಳುವುದೊಂದು ಬಾಕಿ.

"ನಿಮಗಿಂತ ನಾನು ಚಿಕ್ಕವಳು. ನನ್ನ ಕಾಲು ಹಿಡಿಯಬೇಡಿ. ಆಯಸ್ಸಿದ್ದರೆ ನಾನು ಬರದಿದ್ದರೂ ನಿಮ್ಮ ಹುಡುಗಿ ಬದುಕಿಕೊಳ್ಳುತ್ತಿದ್ದಳು" ಎಂದು ಹೇಳಿ ಅಲ್ಲಿಂದ ಹೊರಬಿದ್ದಳು.

ನೆತ್ತಿಯ ಮೇಲೆ ಸೂರ್ಯ ಸುಡುತ್ತಿದ್ದ. ಹೊರಡುವ ಅತುರದಲ್ಲಿ ಮೀರ ತಾನು ಸಾಧಾರಣವಾಗಿ ತೆಗೆದುಕೊಂಡು ಹೋಗುತ್ತಿದ್ದ ಛತ್ರಿಯನ್ನು ಮರೆತು

ಬಿಟ್ಟಿದ್ದಳು. ಹಿಂದಿನ ದಿನ ಆರು ಮೈಲಿ ದೂರದಲ್ಲಿದ್ದ ಹಳ್ಳಿಯೊಂದಕ್ಕೆ ಅವಳು ಹೋಗಿಬಂದಿದ್ದಳು. ಗಾಡಿಯಲ್ಲಿಯೇ ಹೋಗಿ ಬಂದಿದ್ದರೂ ಅತಿ ಕುಲುಕಾಟದಿಂದಾಗಿ ತುಂಬಾ ಆಯಾಸವಾಗಿತ್ತು.

ಮೀರಳ ಕಣ್ಣಿಗೆ ಕತ್ತಲು ಕವಿದಂತಾಯಿತು. ಅವಳ ಹೆಜ್ಜೆ ತಡೆಯಿತು. ಮೀರ ನಿಧಾನವಾಗಿ ಕುಸಿದಳು.

ಅವಳಿಗೆ ಎಚ್ಚರವಾದಾಗ ಅವಳೊಡನೆ ಬಂದಿದ್ದ ಹುಡುಗ 'ಡಾಕ್ಟರೇ' ಎಂದು ಕೂಗುತ್ತಾ ಅಳುತ್ತಿದ್ದ. ಒಂದು ಕ್ಷಣದಲ್ಲಿ ಚೇತರಿಸಿಕೊಂಡು ಮೀರ ಮೇಲೆದ್ದಳು.

"ತುಂಬಾ ಹೊತ್ತು ಮಲಗಿಬಿಟ್ಟಿದ್ದೇನಾ?"

"ಇಲ್ಲ ಡಾಕ್ಟರ್, ಒಂದು ಕ್ಷಣ ಹಾಗೇ ಮಲಗಿದ್ದಿರಿ ಅಷ್ಟೆ."

ಮನೆ ತಲುಪಿದ ಕೂಡಲೇ ಆ ಹುಡುಗ ವರಾಂಡದಲ್ಲಿದ್ದ ಶಾಮುವಿಗೆ ಮೀರ ಬವಳಿ ಬಂದಂತಾಗಿ ಬಿದ್ದುದನ್ನು ವರದಿ ಮಾಡಿದ. ಆ ಗಳಿಗೆಯೇ ಶಾಮು ಕಾರನ್ನು ತೆಗೆದುಕೊಳ್ಳುವುದಾಗಿ ನಿಶ್ಚಯ ಮಾಡಿದ. ಈ ಬಾರಿ ಮೀರಳೂ ಶಾಮುವನ್ನು ಮೊದಲಿನಂತೆ ವಿರೋಧಿಸಲಿಲ್ಲ. ಅವಳು,

"ಕಾರು ತಗೊಂಡರೂ ಕುಲುಕಾಡೋದು ತಪ್ಪೋದಿಲ್ಲ" ಎಂದು ಮಾತ್ರ ಹೇಳಿದಳು.

"ಬಸ್ ರೂಟಿನಲ್ಲಿ ಹೋದರೆ ಏನೂ ಆಗೋದಿಲ್ಲ. ಹತ್ತಿರದ ದಾರಿ ಅಂತ ನೀನು ಅಡ್ಡದಾರೀಲಿ ಹೋಗೋದರಿಂದ ಹಾಗಾಗುತ್ತದೆ. ಬಸ್ ರೂಟ್ ಸ್ವಲ್ಪ ಬಳಸಾದರೂ ರಸ್ತೆಗಳು ಚೆನ್ನಾಗಿವೆ" ಎಂದ ಶಾಮು.

ಸರಸಿಯ ಕಿವಿಗೆ ಕಾರಿನ ಸುದ್ದಿ ಬಿದ್ದ ಕೂಡಲೇ ಅವಳು ಕೆದರಿದ ಕೆಂಡವಾದಳು.

"ನೀವು ಏನಾದರೂ ಮಾಡಿಕೊಳ್ಳಿ. ನಾನು ಮಕ್ಕಳನ್ನು ಕರೆದುಕೊಂಡು ತವರು ಮನೆಗೆ ಹೋಗುತ್ತೇನೆ" ಎಂದು ಸರಸಿ ಶಾಮುವನ್ನು ಹೆದರಿಸಿದಳು

"ನೀನು ಧಾರಾಳವಾಗಿ ಹೋಗು. ಆದರೆ ಸುಬ್ರಹ್ಮಣ್ಯ, ಕಾಮಾಕ್ಷಿಯರನ್ನು ನೀನು ಕನಸಿನಲ್ಲಿಯೂ ಕರೆದುಕೊಡು ಹೋಗಲಾರೆ" ಎಂದು ಶಾಮು ಅವಳಷ್ಟೇ ಖಂಡಿತವಾಗಿ ನುಡಿದ.

"ಮಕ್ಕಳ ಮೇಲೆ ನಿಮಗಿರುವ ಪ್ರೀತಿ ಅಷ್ಟರಲ್ಲಿಯೇ ಇದೆ. ಪ್ರೀತಿ ಇದ್ದಿದ್ದರೆ ನೀವು ಹೀಗೆ ಹಣಾನ ಹಾಳುಮಾಡುತ್ತಿದ್ದಿರಾ?"

"ನೋಡು ಸರಸಿ, ಮೀರಾ ನಿನಗಿಂತಲೂ ಮೊದಲು ನನ್ನ ಕೈಹಿಡಿದವಳು.

ಮಗುವನ್ನು ಕಳೆದುಕೊಂಡ ತಾಯಿ ಅವಳು. ಅದೊಂದನ್ನು ನಾನು ದೃಷ್ಟಿಯಲ್ಲಿಟ್ಟುಕೊಂಡು ಅವಳನ್ನು ಓದಿಸಿದೆ. ನನ್ನ ಆಸ್ತಿಯಲ್ಲಿ ಅರ್ಧಭಾಗ ನ್ಯಾಯವಾಗಿ ಅವಳಿಗೇ ಸೇರಬೇಕಾಗಿದೆ."

"ಪೂರ್ತಿ ಅವಳಿಗೇ ಬರೆದುಕೊಡಿ. ನಾನೇನು ಬೇಡ ಎನ್ನಲಿಲ್ಲ. ಅಮ್ಮನ ಮನೇಲಿ ಹಿಟ್ಟು, ಅಂಬಲಿ ಕುಡಿದುಕೊಂಡು ನಾನು, ನನ್ನ ಮಕ್ಕಳು ಕಾಲ ಹಾಕುತ್ತೇನೆ."

"ಮಕ್ಕಳ ವಿಷಯ ಬಿಟ್ಟುಬಿಡು. ನೀನೇನಾದರೂ ತವರು ಮನೆಗೆ ಹೋದರೆ ಅಲ್ಲಿಯೇ ಸಾಯುವವರೆಗೆ ಇರಬೇಕಾಗುತ್ತದೆ. ನಿನಗೂ ಮಕ್ಕಳಿಗೂ ಮುಖ ತೋರಿಸಿಬಿಡುತ್ತೇನೆ. ನಾನು ನಿನಗಿಂತಲೂ ಹಟವಾದಿ ಎಂಬುದನ್ನು ಮರೆಯಬೇಡ."

ಅಂದಿನಿಂದ ಮೀರಳನ್ನು ನೋಡಿದರೆ ಸರಸಿ ಮುಖ ತಿರುಗಿಸಿಕೊಂಡು ಹೋಗುತ್ತಿದ್ದಳು. ಮೀರ ತಾನಾಗಿಯೇ ಅವಳನ್ನು ಮಾತನಾಡಿಸಿದರೂ ಸರಸಿ ಮಾತನಾಡದೇ ಇರುತ್ತಿದ್ದಳು. ಆದರೆ ತನ್ನ ಮೇಲಿನ ಸಿಟ್ಟನ್ನು ಅವಳು ಮಕ್ಕಳ ಮೇಲೆ ತೋರಿಸುವುದನ್ನು ನೋಡಿದಾಗ ಮಾತ್ರ ಮೀರಳಿಗೆ ಯಾತನೆಯಾಯಿತು. ಒಂದು ಸಂಜೆ ಮೀರ ಹೊರಗೆ ಹೊರಟಾಗ ಸುಬ್ರಹ್ಮಣ್ಯ,

"ದೊಡ್ಡಮ್ಮ, ನಾನು ಬರ್ತೀನಿ" ಎಂದ.

ಮಕ್ಕಳಿಗೆ ದೊಡ್ಡಮ್ಮನಲ್ಲಿ ಸಲಿಗೆಯಿತ್ತು. ಅವಳು ಸರಸಿಯಂತೆ ಅವರನ್ನು ಎಂದೂ ದಂಡಿಸುತ್ತಿರಲಿಲ್ಲ. ಮಗುವಿನ ಮಾತು ಕೇಳಿ ಮೀರ,

"ಆಗಲಿ. ತಲೆ ಬಾಚುತ್ತೇನೆ ಬಾ" ಎಂದಳು.

ಸುಬ್ರಹ್ಮಣ್ಯನಿಗಿನ್ನೂ ಜುಟ್ಟು ಬಿಡಿಸಿರಲಿಲ್ಲವಾದ್ದರಿಂದ ಅವನ ತಲೆಯಲ್ಲಿ ಹುಡುಗಿಯ ತಲೆಯಲ್ಲಿರುವಂತೆ ಹೇರಳವಾಗಿ, ನೀಳವಾಗಿ ಕೂದಲು ಬೆಳೆದಿತ್ತು. ತಿರುಪತಿಯಲ್ಲಿಯೇ ಅವನ ಚೌಲವಾಗಬೇಕೆಂದು ಹರಕೆಯಿದ್ದುದರಿಂದ ಅವನಿಗೆ ನೆತ್ತಿಯ ಮೇಲೆ ಜಡೆ ಹೆಣೆದು ಹೂ ಮುಡಿಸುತ್ತಿದ್ದರು.

ಮೀರ ಬಾಚಣಿಗೆ ತೆಗೆದುಕೊಂಡು ಹುಡುಗನ ನೆತ್ತಿಯ ಮೇಲೆ ಜಡೆಹೆಣೆದು ಹೂ ಮುಡಿಸಿ, ಶುಭ್ರವಾದ ಬಟ್ಟೆಗಳನ್ನು ಹಾಕಿದಳು. ದೊಡ್ಡಮ್ಮನ ಜೊತೆ ತಿರುಗಾಡುವುದೆಂದರೆ ಸುಬ್ರಹ್ಮಣ್ಯನಿಗೆ ಎಲ್ಲಿಲ್ಲದ ಆನಂದ. ಅವನು ಕೇಳಿದ ಪ್ರಶ್ನೆಗಳಿಗೆ ಸ್ವಲ್ಪವೂ ಬೇಜಾರುಪಟ್ಟುಕೊಳ್ಳದೇ ಮೀರ ಉತ್ತರ ಹೇಳುತ್ತಿದ್ದಳು. ಸುತ್ತಲಿನ ಪದಾರ್ಥಗಳಲ್ಲಿ ಅವನ ಕುತೂಹಲ ಜಾಗೃತಗೊಂಡಿತ್ತು. ಆದರೆ ಸರಸಿ ಅವನ ಕುತೂಹಲವನ್ನು 'ನಿನ್ನ ಯಾಕೆ, ಏನು ಎನ್ನುವುದಕ್ಕೆ ನಾನು ಉತ್ತರ

ಹೇಳಲಾರೆ' ಎಂದು ಹೇಳಿ ಚಿವುಟಿಹಾಕುತ್ತಿದ್ದಳು. ಆದರೆ, ಮೀರ ಎಂದೂ ಅವನ ಉತ್ಸಾಹವನ್ನು ತುಳಿದಿರಲಿಲ್ಲ. ಆದುದರಿಂದಲೇ ಅವನಿಗೆ ದೊಡ್ಡಮ್ಮನೊಡನೆ ಹೊರಡುವುದೆಂದರೆ ಹಬ್ಬ.

ಮೀರಳ ಕಿರುಬೆರಳನ್ನು ಹಿಡಿದು ಅವನು ಹೊರಟಾಗ ಸರಸಿ ಎದುರಿಗೆ ಬಂದಳು. ಮೀರಳ ಕಡೆ ನೋಡದೇ ಸರಸಿ,

"ಎಲ್ಲಿಗೆ ಹೋಗ್ತಿಯೋ?" ಎಂದಳು.

"ಬೊಬ್ಬ ಹೋಗ್ತೀನಿ."

"ಏನೂ ಬೇಡ. ಮನೆಯಲ್ಲಿ ಸುಮ್ಮನೆ ಬಿದ್ದಿರು."

"ಊಹೂಂ" ಮುದ್ದಿನಿಂದ ಸುಬ್ರಹ್ಮಣ್ಯ ಮೊಂಡನಾಗಿದ್ದ.

"ನಾನು ಕರ್‍ಕೊಂಡು ಹೋಗ್ತೀನಿ" ಸರಸಿ ಕರೆದಳು.

"ಬೇಡ, ನೀನು ಬೇಡಾ" ಸುಬ್ರಹ್ಮಣ್ಯ ರಾಗ ಎಳೆದ.

ಮಗು ತನ್ನನ್ನು ದೂರಮಾಡಿ ಮೀರಳೊಡನೆ ಹೊರಟಿರುವುದನ್ನು ಕಂಡು ಸರಸಿ ಕುಪಿತಳಾದಳು. ಉಕ್ಕಿ ಬಂದ ಕ್ರೋಧದಲ್ಲಿ ಸರಸಿ ಸುಬ್ರಹ್ಮಣ್ಯನಿಗೆ ಎರಡೇಟು ಹಾಕಿದಳು. ಸುಬ್ರಹ್ಮಣ್ಯ ನೆಲದ ಮೇಲೆ ಬಿದ್ದು ಉರುಳಾಡಿದ. ಅವನ ತಲೆಯ ಮೇಲಿದ್ದ ಹೂವು ನಲುಗಿ ಉದುರಿತು. ಶುಭ್ರವಾದ ಬಟ್ಟೆ ಕೊಳೆಯಾಯಿತು. ಕಣ್ಣಿಗೆ ಹಚ್ಚಿದ್ದ ಕಪ್ಪು ಕಣ್ಣೀರೊಡನೆ ಕೆನ್ನೆಯ ಮೇಲಿಳಿದು ಬಂತು.

"ಹಾಳಾದೋವು ಎಲ್ಲಾ ನನ್ನ ಶತ್ರುಗಳು. ಹೇಳಿದ ಹಾಗೆ ಕೇಳದಿದ್ದ ಮೇಲೆ ಎಂತಹ ಮಕ್ಕಳು. ನನ್ನ ಭಾಗಕ್ಕೆ ಎಲ್ಲಾ ಮಾರಿಗಳು" ಎಂದು ಸರಸಿ ಮಗನಿಗೆ ಮತ್ತೊಂದು ಏಟು ಹಾಕಿದಳು. ತನ್ನ ಮೇಲಿನ ರೋಷಕ್ಕಾಗಿ ಮಗುವನ್ನು ದಂಡಿಸುವುದು ನೋಡಲಾರದೆ ಮೀರ ಸುಬ್ರಹ್ಮಣ್ಯನನ್ನು ಎತ್ತಿಕೊಂಡಳು.

"ನನ್ನ ಮೇಲಿನ ಕೋಪಕ್ಕೆ ಅವನನ್ನು ಯಾಕೆ ಹೊಡೆಯುತ್ತೀಯಾ?"

"ನನ್ನ ಮಗನ್ನ ನಾನು ಏನಾದರೂ ಮಾಡ್ಕೋತೀನಿ. ಅವನು ಇವತ್ತು ನಿಮ್ಮ ಜೊತೆ ಹೋದರೆ ಕಾಲು ಮುರಿಯುತ್ತೀನಿ."

"ಅಷ್ಟೊಂದು ಸಾಹಸದ ಕೆಲಸ ಬೇಡಮ್ಮ" ಎನ್ನುತ್ತಾ ಮೀರ ಸುಬ್ರಹ್ಮಣ್ಯನನ್ನು ಕೆಳಗಿಳಿಸಿ ಹೊರಟುಹೋದಳು.

ಮೀರ ಯಾವುದನ್ನೂ ಶಾಮುವಿಗೆ ತಿಳಿಸದಿದ್ದರೂ, ವೆಂಕಮ್ಮನವರು ಅವನು ಮನೆಗೆ ಬಂದಕೂಡಲೇ ಎಲ್ಲ ವಿಷಯಗಳನ್ನು ತಿಳಿಸುತ್ತಿದ್ದರು. ವೆಂಕಮ್ಮನವರಿಗೂ, ಸರಸಿಗೂ ಎಂದೂ ಸರಿಬಂದಿರಲಿಲ್ಲ. ಮೀರ ಅವರನ್ನು ಕಾಣುವ ದೃಷ್ಟಿಗೂ, ಸರಸಿ ಅವರನ್ನು ಕಾಣುವ ದೃಷ್ಟಿಗೂ ಬಹಳ ವ್ಯತ್ಯಾಸವಿತ್ತು. ಹಿಂದೆ

ಯಾವಾಗಲೋ ಒಂದು ಬಾರಿ ಯಾವುದೋ ಸಣ್ಣ ಕಾರಣಕ್ಕಾಗಿ ವೆಂಕಮ್ಮನವರ ಮೇಲೆ ರೇಗಿಕೊಂಡಿದ್ದಳು ಸರಸಿ.

"ಅಡಿಗೆಯವರನ್ನು ಎಲ್ಲಿಟ್ಟಿರಬೇಕೋ ಅಲ್ಲಿಟ್ಟಿರಬೇಕು. ಅತೀ ಸಲಿಗೆ ಕೊಟ್ಟರೆ ಹೀಗೆ ಆಗೋದು" ಎಂದು ಮೂದಲಿಸಿದ್ದಳು. ಆ ಮಾತು ವೆಂಕಮ್ಮನವರ ಕಿವಿಗೆ ಬಿದ್ದಾಗ ವೆಂಕಮ್ಮನವರಿಗೆ ತಳಮಳವಾಯಿತು. ಅವರು ಸರಸಿಯ ಎದುರಿಗೆ ಬಂದು,

"ತಾಯೀ, ನೀನು ನಿನ್ನ ಸ್ವಭಾವಕ್ಕನುಗುಣವಾದ ಮಾತನ್ನಾಡಿದೆ. ಶಾಮು ವಾಗಲಿ, ಮೀರಳಾಗಲಿ ಒಂದು ದಿನ ಇಂತಹ ಮಾತನಾಡಿರಲಿಲ್ಲ. ಅವರು ಎಷ್ಟಾಗಲೀ ದೊಡ್ಡ ಮನುಷ್ಯರು" ಎಂದರು.

ಅವರ ಮಾತಿನಿಂದ ಸರಸಿಗೆ ರೇಗಿದರೂ ಅವಳು ಅದನ್ನೇ ದೊಡ್ಡ ಹಗರಣ ಮಾಡಲು ಹಿಂಜರಿದಳು. ಶಾಮುವಿಗೆ ವೆಂಕಮ್ಮನವರನ್ನು ಕಂಡರೆ ಎಷ್ಟು ಗೌರವವಿದೆಯೆಂಬುದು ಅವಳಿಗೆ ತಿಳಿದಿತ್ತು.

ಅಂದಿನಿಂದ ವೆಂಕಮ್ಮನವರಿಗೂ, ಸರಸಿಗೂ ಎಣ್ಣೆ ಸೀಗೆಕಾಯಿ. ಅವರು ಸರಸಿಯದುರಿಗೆ ಬೇಕೆಂದು ಮೀರಳನ್ನು ಹೊಗಳಿ ಹಾಡುತ್ತಿದ್ದರು. 'ನೀನು ಮನೆಯ ಯಜಮಾನಿ' ಎಂದು ಅವರು ಹೇಳಿದಾಗಲೆಲ್ಲಾ ಸರಸಿಗೆ ಹೊಟ್ಟೆಯಲ್ಲಿ ಮೆಣಸಿನಕಾಯಿ ಕಿವುಚಿದಂತಾಗುತ್ತಿತ್ತು.

ವೆಂಕಮ್ಮನವರಿಂದ ನಡೆದ ಸಂಗತಿ ತಿಳಿದು ಶಾಮು ಕಾಲಭೈರವನಾದ. ಮಕ್ಕಳ ಮೇಲೆ ಅವನು ಎಂದೂ ಕೈ ಮಾಡಿರಲಿಲ್ಲ. ನಡೆದರೆ ಸವೆಯುವರು ಎನ್ನುವಂತೆ ಅವರನ್ನು ತಾನು ನೋಡಿಕೊಳ್ಳುತ್ತಿರುವಾಗ ಸರಸಿ ಹೊಡೆಯ ಬಹುದೇ?

ಪರಿಣಾಮ ಆ ರಾತ್ರಿ ಸರಸಿಗೆ ಎರಡು ಏಟುಗಳು ಬಿದ್ದವು.

ಮನೆಯಲ್ಲಿ ಹೊಗೆ ದಿನದಿನಕ್ಕೂ ಹೆಚ್ಚುತ್ತಿತ್ತು. ಉಸಿರು ಕಟ್ಟಿಸುವ ವಾತಾವರಣದಲ್ಲಿ ಸಿಕ್ಕಿಬಿದ್ದು ಮೀರ ಚಡಪಡಿಸಿದಳು.

ಮತ್ತೊಮ್ಮೆ ಮೀರ ಕಾಮಾಕ್ಷಿಗೆ ಪೆಪ್ಪರುಮೆಂಟನ್ನು ಕೊಟ್ಟಾಗ ಸರಸಿ ಮುಂದೆ ನುಗ್ಗಿ ಬಂದು ಮಗುವಿನ ಬಾಯಿಂದ ಪೆಪ್ಪರ್‌ಮೆಂಟನ್ನು ತೆಗೆದು,

"ವಿಷ ಕೊಡೋಕೂ ಹೇಸೋಳಲ್ಲ" ಎಂದು ಗೊಣಗಿ ಮಗುವಿನ ಬಾಯನ್ನು ಒದ್ದೆಬಟ್ಟೆಯಿಂದ ಶುದ್ಧಿ ಮಾಡಿದಳು.

ಅವಳ ಮಾತು ಗುಂಡಿನಂತೆ ಮೀರಳ ಎದೆಗೆ ತಗುಲಿತು. ಮೀರ ರೂಮಿಗೆ ಹೋಗಿ ಮುಸುಕು ಹಾಕಿಕೊಂಡು ಮಲಗಿದಳು.

ಶಾಮು-ಅವರಿಬ್ಬರ ನಡುವೆ ಸಿಕ್ಕಿ ನುಗ್ಗಾಗಿ ಹೋಗಿದ್ದ. ಅವನಿಗೆ ಮೀರಳನ್ನು ಬಿಟ್ಟುಕೊಡುವುದು ಸಾಧ್ಯವಿರಲಿಲ್ಲ. ಮಕ್ಕಳಿಗಾಗಿ ಅವನು ಸರಸಿಯನ್ನು ಸಹಿಸಿಕೊಳ್ಳುತ್ತಿದ್ದ. ಆದರೆ ದಿನದಿನಕ್ಕೆ ಶಾಂತಿಯ ವಾತಾವರಣ ಮಾಯವಾಗಿ ಮುನಿಸು, ಜಗಳ ತಲೆದೋರುತ್ತಿದ್ದವು. ಶಾಮು ಏನೂ ಮಾಡಲಾರದೆ ಎಷ್ಟೋ ಬಾರಿ ಹಣೆಯನ್ನು ಚಚ್ಚಿಕೊಂಡಿದ್ದ. ಅವನ ನಿಸ್ಸಹಾಯಕ ಸ್ಥಿತಿ ಕಂಡು ಮೀರಳಿಗೆ ದುಃಖವಾಗುತ್ತಿತ್ತು.

ಸುಬ್ರಹ್ಮಣ್ಯ ದೊಡ್ಡಮ್ಮನನ್ನು ತಾಯಿಗಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದ. ಆದರೆ ಮೀರಳಿಂದಾಗಿ ಆ ಹಸುಳೆ ತಾಯಿಯ ಶಿಕ್ಷೆಯನ್ನು ಅನುಭವಿಸಬೇಕಾಗುತ್ತಿತ್ತು.

ಅಳಿದ ಮುದ್ದಿನ ಮಗಳು ವೀಣಳನ್ನೇ ನೆನಪಿಗೆ ತರುತ್ತಿದ್ದ ಕಾಮಾಕ್ಷಿ ಮೀರಳಿಗೆ ಜೀವದ ಜೀವವಾಗಿದ್ದಳು. ಎಷ್ಟೋ ಬಾರಿ ಕಾಮಾಕ್ಷಿಯನ್ನು ತನ್ನ ಹೃದಯಕ್ಕೆ ಒತ್ತಿಕೊಂಡು ಮೀರಾ ಅವಳನ್ನು 'ವೀಣಾ' ಎಂದು ಕರೆದು ಮುದ್ದಿಸಿದ್ದಳು. ವೀಣಳೇ ಕಾಮಾಕ್ಷಿಯಾಗಿ ಬಂದಿರುವಳೆಂದು ಶಾಮು, ಮೀರಾ ನಂಬಿದ್ದರು. ಸರಸಿ ಅದಕ್ಕೂ ಮೀರಳೆದುರು ನಂಜಿನ ಮಾತನ್ನಾಡಿದ್ದಳು.

"ಅಲ್ಪಾಯುಸ್ಸಿನ ಮಗಳು ಅಂತ ಹರಸಬೇಡಿ."

ಮೀರ ತನ್ನಲ್ಲಿದ್ದ ಚೈತನ್ಯವನ್ನೆಲ್ಲಾ ಒಟ್ಟುಗೂಡಿಸಿ ಸರಸಿಯ ಮಾತನ್ನು ಜೀರ್ಣಿಸಿಕೊಂಡಿದ್ದಳು.

ಆದರೆ ಸರಸಿ ತನ್ನ ಮೇಲೆ ಆರೋಪಿಸಿದ ಕೊನೆಯ ಅಪರಾಧ 'ವಿಷ ಕೊಡೋಕೂ ಹೇಸೋಳಲ್ಲ'.

ಬೀಸಿಬಂದ ಗಾಳಿ ಪಿಸುಗುಟ್ಟುತ್ತಿತ್ತು 'ವಿಷಕೊಡೋಕೂ ಹೇಸುವವಳಲ್ಲ.'

ಮಧುರವಾಗಿ ಉಲಿದ ಕೋಗಿಲೆಯ ಹಾಡಿನಲ್ಲಿ ಅವಳಿಗೆ ಕೇಳಿಬರುತ್ತಿದ್ದ ಮಾತುಗಳು-'ವಿಷ ಕೊಡೋಕು ಹೇಸುವವಳಲ್ಲ.'

ಎಲೆಗಳ ಮರ್ಮರದ ಸದ್ದಿನಲ್ಲಿ, ಎತ್ತಿನ ಕೊರಳಿನ ಗಂಟೆಯಲ್ಲಿ, ಬೀಸುಕಲ್ಲಿನ ಸದ್ದಿನಲ್ಲಿ, ಕರುವಿನ 'ಅಂಬಾ' ಎಂಬ ಕೂಗಿನಲ್ಲಿ, ರೈತ ಹೆಂಗಸರ ಕಡಗದ ದನಿಯಲ್ಲಿ, ಗಾಡಿಯ ಚಕ್ರದ ಸದ್ದಿನಲ್ಲಿ, ಎಳೆ ಮಕ್ಕಳ ರೋಧನದಲ್ಲಿ, ಅವಳಿಗೆ ಕೇಳಿ ಬರುತ್ತಿದ್ದ ಮಾತು-'ವಿಷ ಕೊಡೋಕೂ ಹಿಂತೆಗೆಯುವವಳಲ್ಲ.'

ಕನಸಿನಲ್ಲಿಯೂ ಸರಸಿಯ ಮಾತುಗಳು ಅವಳನ್ನು ಕಾಡುತ್ತಿದ್ದವು.-ಕಾಮಾಕ್ಷಿ ಔಷಧಿಗಳಿರಿಸಿದ್ದ ಬೀರುವಿನ ಬಾಗಿಲು ತೆಗೆದು ಆಟವಾಡುತ್ತಿದ್ದಾಳೆ. ಆಟಮಾಡುತ್ತಾ 'ವಿಷ' ಎಂದು ಬರೆದಿದ್ದ ಸೀಸೆಯೊಂದನ್ನು ತೆಗೆದುಕೊಂಡು

ಬಾಯಿಗೆ ಹಾಕಿಕೊಳ್ಳಲು ಪ್ರಯತ್ನಿಸುತ್ತಾಳೆ. ಅದನ್ನು ನೋಡಿದ ಮೀರ 'ವಿಷ ಕುಡಿಯಬೇಡ' ಎಂದು ಚೀರಿದಳು.

"ಎಚ್ಚರ ಮಾಡಿಕೋ ಮೀರಾ" ಎಂದು ಶಾಮು ಅವಳನ್ನು ಅಲುಗಿಸಿದ.

"ಕಾಮಾಕ್ಷಿ ವಿಷ ಕುಡಿದುಬಿಟ್ಟಳು" ಎಂದು ನಿದ್ದೆಗಣ್ಣಿನಲ್ಲಿದ್ದ ಮೀರ ಬಿಕ್ಕಿ ಅತ್ತಳು.

"ಕಾಮಾಕ್ಷಿ ನಿದ್ದೆ ಮಾಡ್ತಿದಾಳೆ."

"ಇಲ್ಲ, ಇಲ್ಲ. ವಿಷ ಕುಡಿದಿದಾಳೆ."

"ಹುಚ್ಚಿ" ಎಂದು ನಗುತ್ತಾ ಶಾಮು ಎದ್ದು ಹೋಗಿ, ನಿದ್ದೆಮಾಡುತ್ತಿದ್ದ ಕಾಮಾಕ್ಷಿಯನ್ನೆತ್ತಿಕೊಂಡು ಬಂದು ಮೀರಳ ಪಕ್ಕದಲ್ಲಿ ಮಲಗಿಸಿದ. ಮೀರ ಕಣ್ಣು ಬಿಟ್ಟು, ಬಿರಬಿರನೆ ಕಾಮಾಕ್ಷಿಯನ್ನು ನೋಡಿ ಅವಳನ್ನು ತಬ್ಬಿಕೊಂಡು ಮತ್ತೆ ಮಲಗಿದಳು.

ಆದರೆ ನಿದ್ದೆ ಅವಳಿಂದ ಬಹು ದೂರವಾಗಿತ್ತು.

ಸರಸಿಯ ಚುಚ್ಚುಮಾತುಗಳನ್ನು ಅರಗಿಸಿಕೊಳ್ಳುವುದು ಇನ್ನು ಅವಳಿಗೆ ಸಾಧ್ಯವಿರಲಿಲ್ಲ. ಸರಸಿಯನ್ನು ಶಾಮುವಿಗೆ ಮದುವೆ ಮಾಡಿದ ತರುಣದಲ್ಲಿ ಅವನ ಎರಡನೆಯ ವಿವಾಹ ತನ್ನ ಜೀವನದ ಆದರ್ಶವನ್ನು ಈ ರೀತಿ ಮುಂದುವರಿಸ ಬಹುದು ಎಂದು ಅವಳು ನೆನೆಸಿರಲಿಲ್ಲ. ವರ್ಷದ ಬಹುಭಾಗವನ್ನು ಮೈಸೂರಿ ನಲ್ಲಿಯೇ ಕಳೆಯುತ್ತಿದ್ದವಳಾದುದರಿಂದ ಅವಳಿಗೆ ಸರಸಿಯ ಗುಣಗಳ ಪರಿಚಯವೂ ಆಗಿರಲಿಲ್ಲ.

ಆದರೆ ವಿದ್ಯಾಭ್ಯಾಸ ಮುಗಿಸಿ ತಾನು ವೈದ್ಯಳಾಗಿ ಹಳ್ಳಿಯಲ್ಲಿಯೇ ನೆಲಸಿ ದಾಗ ಸರಸಿಯಲ್ಲಿಎಂತಹ ಮಾರ್ಪಾಡಾಗಿತ್ತು! ಮಾತು ಮಾತಿನಲ್ಲಿಯೂ, ಹೆಜ್ಜೆ ಹೆಜ್ಜೆಗೂ ಸರಸಿ ತನ್ನನ್ನು ವ್ಯಂಗ್ಯವಾಗಿ ನೋಡುತ್ತಿದ್ದಳು. ಮೊನಚಾದ ಮಾತಿನ ಬಾಣಗಳು ಸರಸಿಯ ಬಾಯಿಂದ ಹಾರಿಬಂದು ಮೀರಳ ಎದೆಯಲ್ಲಿ ನಾಟು ತ್ತಿದ್ದವು. ಅವಳ ಮಾತಿನ ಬಾಣದ ಆವೇಗಕ್ಕೆ ಸಿಕ್ಕಿದ ಮೀರ ತತ್ತರಿಸುತ್ತಿದ್ದಳು.

ಶಾಮುವಿಗಾಗಿ, ಹಳ್ಳಿಯ ಜನರಿಗಾಗಿ, ತನಗಾಗಿ ಮೀರ ನಗುಮುಖದಿಂದ ಸರಸಿಯ ವಾಗ್ಬಾಣಗಳನ್ನು ಸ್ವೀಕರಿಸಿದ್ದಳು.

ಮದುವೆಯಾದ ಹೊಸದರಲ್ಲಿ ಮೀರಳಿಗೆ ಶಾಮುವಿನಲ್ಲಿ ಸ್ವಲ್ಪವೂ ಪ್ರೀತಿಯಿರಲಿಲ್ಲ. ತಾನು ವೈದ್ಯಳಾಗಬೇಕೆಂಬ ಹಂಬಲದ ಬಳ್ಳಿಯನ್ನು ಕಡಿದ ಖಳ ಶಾಮು ಎಂದೇ ಅವಳ ಭಾವನೆಯಾಗಿತ್ತು. ತನ್ನ ಆದರ್ಶವನ್ನು ಮಣ್ಣು ಗೂಡಿಸಿದ ಶಾಮುವನ್ನು ಪ್ರೀತಿಸುವುದು ಸಾಧ್ಯವಿಲ್ಲವೆಂದು ನಿಶ್ಚಯಿಸಿಯೇ ಮೀರ

ಶಾಮುವಿನ ಗೃಹದೇವತೆಯಾಗಿ ಬಂದಿದ್ದಳು.

ವೀಣಳ ಆಗಮನ ಮೀರಳ ಮನೋಮಂದಿರದಲ್ಲಿ ಹೊಸದೊಂದು ಪ್ರಪಂಚವನ್ನೇ ಸೃಷ್ಟಿಸಿತ್ತು. ಗಂಡ ಹೆಂಡತಿಯರಿಗೆ ವೀಣಳ ಮೇಲಿದ್ದ ಪ್ರೀತಿ ಅವರಿಬ್ಬರನ್ನೂ ಬಹಳ ಹತ್ತಿರ ತಂದಿತ್ತು. ಐದು ವರ್ಷ ಅವರ ಬದುಕಿನ ಬೆಳ್ಳಿಯಾಗಿ ಬೆಳಗಿದ ವೀಣ ಕರ್ಪೂರದಂತೆ ಮಾಯವಾದ ನಂತರ ಮೀರ, ಶಾಮು ಮತ್ತೆ ದೂರವಾಗಿದ್ದರು.

ಮೀರಳ ತೊಳಲಾಟ, ತಳಮಳ ಶಾಮುವಿಗೂ ಅರ್ಥವಾಗಿತ್ತು. ಆದುದ ರಿಂದಲೇ ಅವನು ದೊಡ್ಡ ಮನಸ್ಸು ಮಾಡಿ ಮೀರಳನ್ನು ಓದಿಸಲು ನಿರ್ಧರಿಸಿದ್ದ.

ಅವನ ನಿರ್ಧಾರ ಮೀರಳ ಹೃದಯದಲ್ಲಿ ಮಲಗಿ ನಿದ್ರಿಸುತ್ತಿದ್ದ ಕೋಮಲ ಭಾವನೆಗಳನ್ನು ತಟ್ಟಿ ಎಬ್ಬಿಸಿತ್ತು.

ಮೀರಳ ಮನಸ್ಸು ಶಾಮುವಿನ ಕಡೆಗೆ ಬಾಗತೊಡಗಿತ್ತು. ಪ್ರೀತಿಯ ಕಾವಿನಲ್ಲಿ ಮೆದುವಾಗಿದ್ದ ಅವಳ ಮನಸ್ಸು ತನ್ನವನ ವಂಶಾಭಿವೃದ್ಧಿಗಾಗಿ ಸ್ವಾರ್ಥವನ್ನು ಮರೆತು ಅವನಿಗೆ ಮರುಮದುವೆಯನ್ನು ಮಾಡಿಸಿತ್ತು.

ಎಂತಹ ಸಂದರ್ಭ ಬಂದರೂ ತಾನು ಅದಕ್ಕೆ ಹೊಂದಿಕೊಂಡು ಹೋಗುವ ಭರವಸೆಯನ್ನು ಮೀರ ಶಾಮುವಿಗೆ ನೀಡಿದ್ದಳು. ಅವಳ ಭರವಸೆಯನ್ನು ನೆಚ್ಚಿ ಶಾಮು ಸರಸಿಯ ಕೈಹಿಡಿದಿದ್ದ.

ಅದರಲ್ಲಿ ತನ್ನ ತಪ್ಪಾದರೂ ಏನು?

ಸರಸಿ ಮೀರಳಿಂದ ದೂರ ಸಿಡಿದಿದ್ದಳು. ಮೀರಳಲ್ಲಿಯೇ ಹೆಚ್ಚು ವಾತ್ಸಲ್ಯ ಪ್ರೀತಿಯನ್ನು ಶಾಮು ವ್ಯಕ್ತಪಡಿಸುತ್ತಿದ್ದುದು ಅವಳಿಗೆ ಕಣ್ಣುರಿಯಾಗಿತ್ತು.

ನ್ಯಾಯವಾಗಿ ತನ್ನ ಮಕ್ಕಳಿಗೆ ಸಲ್ಲಬೇಕಾಗಿದ್ದ ಆಸ್ತಿಯನ್ನು ಮೀರ ದುರುಪಯೋಗಪಡಿಸುವುದು ಸರಸಿಗೆ ಹಿಡಿಸಿರಲಿಲ್ಲ.

ಅದರಲ್ಲಿ ತನ್ನ ತಪ್ಪಾದರೂ ಏನು?

ಹಳ್ಳಿಯಲ್ಲಿದ್ದ ಮುಕ್ಕಾಲುಪಾಲು ರೈತರು ಶಾಮುವಿನ ಒಕ್ಕಲು ಮಕ್ಕಳಾಗಿ ದ್ದರು. ಅವರು ಹೊಲಗದ್ದೆಗಳಲ್ಲಿ ಸುರಿಸಿದ ಬೆವರು, ರಕ್ತ ಶಾಮುವಿನ ಬಂಗಾರ ವಾಗಿತ್ತು. ಅವರ ದುಡಿಮೆಯಿಂದ ಶಾಮು ಶ್ರೀಮಂತನಾಗಿದ್ದ.

ಮಣ್ಣನ್ನು ಹೊನ್ನು ಮಾಡುತ್ತಿದ್ದ ರೈತರ ಆರೋಗ್ಯಕ್ಕಾಗಿಯೇ ಮೀರ ಪ್ರಯತ್ನಿಸುತ್ತಿದ್ದಳು. ಅವಳ ಪ್ರಯತ್ನ ಶಾಮುವಿನ ಪ್ರೋತ್ಸಾಹದಿಂದಾಗಿ ರೆಕ್ಕೆ ಪಡೆದಿತ್ತು.

ತನ್ನನ್ನು ನಂಬಿದ್ದ ರೈತರನ್ನು ಒಂದೇ ಸಲಕ್ಕೆ ಬಿಟ್ಟು ಹೊರಟುಹೋಗುವುದು

ಮೀರಳಿಗೆ ಹಿಡಿಸಲಿಲ್ಲ.

ಆದರೆ ಬೇರೆ ದಾರಿ ಯಾವುದಿದೆ?

ಹಳ್ಳಿಯಲ್ಲೇ ಉಳಿದು ಜನಸೇವೆ ಮಾಡಬೇಕೆಂಬ ಆಸೆ ಅವಳಲ್ಲಿ ಉತ್ಕಟವಾಗಿತ್ತು. ಆದರೆ ಹಳ್ಳಿಯಲ್ಲಿ ತನ್ನ ಇರುವಿಕೆಯಿಂದಾಗಿ ಸರಸಿ, ಶಾಮುವಿನ ಮನಸ್ಸಿಗೆ ಸ್ವಲ್ಪವಾದರೂ ಶಾಂತಿ, ತೃಪ್ತಿ ಸಿಕ್ಕುವಂತೆ ತೋರಲಿಲ್ಲ.

ಮೀರಳಿಂದಾಗಿ ಶಾಮು, ಸರಸಿ ದೂರವಾಗಿದ್ದರು. ಇಬ್ಬರು ಹೆಂಡಿರ ಮನಸ್ತಾಪದಲ್ಲಿ ಶಾಮು ಬೆಂಡಾಗಿದ್ದ.

ಈಗ ಅವನ ಬಳಲಿದ ಮನಸ್ಸನ್ನು ಸಂತಯಿಸುವುದು ತನ್ನ ಕರ್ತವ್ಯವಲ್ಲವೇ?

ಸಬಲನಾದ ಶಾಮುವಿಗೆ ಮೀರ ಸೋತಿರಲಿಲ್ಲ. ಅವನನ್ನು ಒಪ್ಪಿಸಿ ಅವಳು ವೈದ್ಯಳಾದಳು. ಆದರೆ ಹೆಣ್ಣಿನಿಂದಲೇ ತಾನು ಸೋಲಬೇಕಾಗುವುದೆಂದು ಮೀರ ಎಂದೂ ಎಣಿಸಿರಲಿಲ್ಲ.

ಹಳ್ಳಿಯಲ್ಲಿಯೇ ಉಳಿದು ಎಲ್ಲರ ಮನಸ್ಸನ್ನು ಕದಡಿ, ಅಸಮಾಧಾನದ ಕಾರ್ಮೋಡ ಹಬ್ಬುವಂತೆ ಮಾಡುವುದರಲ್ಲಿ ಯಾವ ಅರ್ಥವೂ ಇಲ್ಲವೆಂಬುದು ಮೀರಳಿಗೆ ತಿಳಿದಿತ್ತು.

ಉಳಿದಿದ್ದು ಒಂದೇ ಮಾರ್ಗ.

ಶಾಮುವನ್ನು ಸರಸಿಗೆ, ಮಕ್ಕಳಿಗೆ ಒಪ್ಪಿಸಿ ಕಣ್ಣರೆಯಾಗುವುದೊಂದೇ ತನಗೆ ಉಳಿದಿದ್ದ ಮಾರ್ಗ.

ವೀಣ ತನ್ನಿಂದ ದೂರವಾಗಿದ್ದಳು. ಈಗ ತಾನು ಶಾಮುವಿನಿಂದ ದೂರವಾಗಬೇಕು. ಮೀರಳ ಹೃದಯ ನೋವಿನಿಂದ ಬಿರಿಯಿತು.

'ಅಪಸ್ವರ'ದೊಂದಿಗೆ ಪ್ರಾರಂಭವಾದ ತನ್ನ ಬಾಳು 'ಅಪಜಯ'ದಲ್ಲಿ ಮುಕ್ತಾಯವಾಗಲೇಬೇಕಿತ್ತು.

ಮುದ್ದಿನ ಕಂದನನ್ನು ಕಳೆದುಕೊಂಡು ಮೀರ ಮೆಚ್ಚಿನ ಪತಿಯನ್ನು ತೊರೆಯಲೇಬೇಕಿತ್ತು.

ಮೀರ ನರಳುತ್ತಾ ಹಾಸಿಗೆಯ ಮೇಲೆ ಹೊರಳಾಡಿದಳು.

ಮಾರನೆಯ ದಿನ ಮೀರ ಮೈಸೂರಿಗೆ ಹೊರಟಳು. ಯಾವ ಸಮಾಚಾರವೂ ಇಲ್ಲದೆ ಅವಳು ಏಕಾಏಕಿ ಹೊರಟಿರುವುದನ್ನು ಕಂಡು ಶಾಮುವಿಗೆ ಆಶ್ಚರ್ಯವಾಯಿತು.

"ಔಷಧಿ ತರೋಕೆ ಹೋಗ್ತೀಯೇನು?'

"ಇಲ್ಲ, ವಿಜಯಾ ತಾಯಿಯಾಗಲಿದ್ದಾಳೆ. 'ನರ್ಸಿಂಗ್ ಹೋಂ'ನ ಕೆಲಸ ನೋಡಿಕೊಳ್ಳುವವರು ಯಾರೂ ಇಲ್ಲ. ನೀನು ಬಂದು ನನ್ನ ಕೆಲಸವನ್ನು ಹಗುರ ಮಾಡು' ಎಂದು ಗೋಪಿ ಕಾಗದ ಬರೆದಿದ್ದಾನೆ. ಆದುದರಿಂದ ಅಲ್ಲಿಗೆ ಹೋಗುತ್ತಿದ್ದೇನೆ."

"ಬರೋದು ಎಷ್ಟು ದಿನವಾಗಬಹುದು?"

"ಬಹುಶಃ ನಾನಿನ್ನು ಬರಲಾರೆ ಎಂದು ತೋರುತ್ತದೆ" ಮೀರ ಶಾಂತಳಾಗಿಯೇ ಹೇಳಿದಳು.

"ಮೀರಾ?"

"ನನ್ನ ತಡೆಯಬೇಡಿ. ನಾನಿನ್ನು ಇಲ್ಲಿ ಒಂದು ಗಳಿಗೆಯೂ ಇರಲಾರೆ."

"ನಿನ್ನನ್ನೇ ನಂಬಿಕೊಂಡಿರುವ ಈ ಜನರ ಗತಿಯೇನು?"

"ಕಾಪಾಡುವ ದೇವರು ಹೇಗೋ ಕಾಪಾಡುತ್ತಾನೆ. ಹಿಂದೆ ನಾನು ಇರಲಿಲ್ಲ, ಆಗ ಅವರು ಬದುಕಿರಲಿಲ್ಲವೇ?"

"ಈಗ ಹೊರಡೋಕೆ ಕಾರಣವಾದರೂ ಏನು ಮೀರಾ?"

"ಕಾರಣ ನಾನು ಹೇಳಲಾರೆ. ನಾನು ಹೋದ ಮೇಲೆ......"

"ಸರಸಿ ಏನಾದರೂ....."

"ಸರಸಿಯನ್ನು ಮಾತ್ರ ನನ್ನ ವಿಷಯಕ್ಕೆ ದಂಡಿಸಬೇಡಿ. ಹಾಗೆಂದು ಭಾಷೆ ಕೊಡಿ."

"ಅವಳನ್ನೇ ಕರೆದು ಕೇಳುತ್ತೇನೆ........"

"ನನ್ನಾಣೆಯಿದೆ. ಅವಳು ಕಾಮಾಕ್ಷಿ, ಸುಬ್ರಹ್ಮಣ್ಯನ ತಾಯಿ ಅಲ್ಲವೇ?" ಅವಳ ಮಾತು ಕೇಳಿ ಶಾಮು ಮೆತ್ತಗಾದ.

"ನೀನು ಹೋದ ಮೇಲೆ ನಾನು ಹೇಗಿರಲಿ ಮೀರಾ?"

"ಕಾಮಾಕ್ಷಿ, ಸುಬ್ರಹ್ಮಣ್ಯ ಇದಾರೆ."

"ನೀನು ಯಾಕೆ ಹೋಗ್ತೀಯ ಹೇಳಬಾರದೆ?"

ಮೀರಾ ನಿಧಾನವಾಗಿ ತಲೆ ಅಲುಗಿಸಿ ನುಡಿದಳು.

"ಊಹುಂ. ಅದೊಂದು ಮಾತು ಮಾತ್ರ ನಾನು ಹೇಳಲಾರೆ. ಮೊದಲ ಬಾರಿ ನನಗಾಗಿಯೇ ನಾನು ಹಳ್ಳಿ ಬಿಟ್ಟು ವಿದ್ಯೆ ಕಲಿಯಲು ಹೋದೆ. ಈ ಬಾರಿ ನಿಮಗಾಗಿ ಹೋಗುತ್ತಿದ್ದೇನೆ."

"ಆಗಾಗ್ಗೆ ಹಳ್ಳಿಗೆ ಬರುತ್ತೀಯಾ?"

"ಇಲ್ಲ. ನನ್ನ ನೋಡಬೇಕೆನಿಸಿದರೆ ನೀವೇ ಅಲ್ಲಿಗೆ ಬನ್ನಿ. ಬರುವಾಗ ಕಾಮಾಕ್ಷಿ, ಸುಬ್ರಹ್ಮಣ್ಯನ್ನ ಕರೆದುಕೊಂಡು ಬನ್ನಿ."

ಶಾಮುವಿಗೆ ಅವಳ ನಿರ್ಧಾರವನ್ನು ಕದಲಿಸಲಾಗಲಿಲ್ಲ. ಮೀರ ಹೊರಟು ಹೋಗುವುದು ಅವನಿಗೆ ಅತ್ಯಂತ ವ್ಯಥೆಯ ವಿಷಯವಾಗಿದ್ದರೂ ಅವನ ಅಂತರಂಗ ನುಡಿಯುತ್ತಿತ್ತು. 'ಒಳ್ಳೆಯದೇ ಆಯಿತು. ಬೆಂಕಿಗೆ ಕೈಚಾಚಿ ಸುಡಿಸಿಕೊಳ್ಳುವುದಕ್ಕಿಂತಲೂ, ಜ್ವಾಲಾಮುಖಿಯನ್ನೇರಿ ಅದರ ಕಾವಿಗೆ ಆಹುತಿಯಾಗುವುದಕ್ಕಿಂತಲೂ ದೂರ ಇರುವುದೇ ಮೇಲು. ಇದರಿಂದ ಅವಳು ಸುಖವಾಗಿರುತ್ತಾಳೆ.'

ಆದುದರಿಂದಲೇ ಶಾಮು ಮೀರಳನ್ನು ಹಳ್ಳಿಯಲ್ಲಿಯೇ ಇರುವಂತೆ ಹೆಚ್ಚು ನಿರ್ಬಂಧಿಸಲಿಲ್ಲ.

"ಗೋಪಿಗೆ ಕಾಗದ ಬರೆದು ನಾಳೆ ಹೋಗಬಹುದು."

"ಪರವಾಗಿಲ್ಲ. ಅವನು ನನ್ನನ್ನು ಎಂದೂ ಹೊರಗಿನವಳಂತೆ ಕಂಡಿಲ್ಲ. ತಂಗಿಯ ಮನೆಗೆ ಕಾಗದ ಬರೆದು ಹೋಗಬೇಕೆ?"

ಅವಳ ಪ್ರಶ್ನೆಗೆ ಶಾಮು ಉತ್ತರ ಕೊಡಲಿಲ್ಲ.

"ಪೆಟ್ಟಿನ ಮೇಲೆ ಪೆಟ್ಟು ತಿಂದರೂ ನಾನು ಸೋಲುವುದಿಲ್ಲ ಎಂದು ಭಾವಿಸಿದ್ದೆ. ನಿಮ್ಮನ್ನು ಗೆಲ್ಲುವಷ್ಟೇ ಸುಲಭವಾಗಿ ಸರಸಿಯನ್ನೂ ಗೆಲ್ಲುವೆನೆಂದು ತಿಳಿದಿದ್ದೆ. ಆದರೆ ಈ ಬಾರಿ ಮಾತ್ರ ಸೋಲು ನನ್ನದಾಯಿತು" ಎಂದಳು ಮೀರ ನಗುತ್ತಾ.

"ನೀನು ನಗಬೇಡ. ಅಳುವ ಹಾಗಿದ್ದರೆ ಅತ್ತುಬಿಡು" ಎಂದ ಶಾಮು.

ಅವಳ ಕಲ್ಪನೆಯಲ್ಲಿದ್ದುದು ಸುಂದರವಾದ ಸಂಸಾರ, ತಾನು ಸರಸಿ ಅಕ್ಕ ತಂಗಿಯರಂತೆ, ಗೆಳತಿಯರಂತೆ ಹೊಂದಿಕೊಂಡಿರುವ ತೃಪ್ತಿಯ ಸಂಸಾರ. ಎಂತಹ ಸಂದರ್ಭ ಬಂದರೂ ತಾನು ಹೊಂದಿಸಿಕೊಂಡು ಹೋಗುವೆನೆಂಬ ಆತ್ಮಭರವಸೆ ಅವಳಿಗಿತ್ತು.

ಆದರೆ ಅವಳ ನಂಬಿಕೆ ಸುಳ್ಳಾಗಿತ್ತು. ಮುಳ್ಳಿನ ಚಾವಟಿಯಿಂದ ಹೊಡೆಸಿಕೊಳ್ಳುವುದು ಅವಳಿಗೆ ಇನ್ನು ಸಾಧ್ಯವಿರಲಿಲ್ಲ.

ಹತ್ತಿರ ಓಡಿ ಬಂದು ಸೀರೆಯ ನಿರಿ ಹಿಡಿದು ತೊದಲಿದ ಕಾಮಾಕ್ಷಿಯನ್ನೆತ್ತಿಕೊಂಡು ಮುತ್ತಿಟ್ಟಳು ಮೀರಾ.

"ನನಗೇನು ಸಮಾಧಾನ ಹೇಳ್ತೀಯಾ ಮೀರಾ" ಎಂದು ಶಾಮು ನಡುಗುವ ದನಿಯಲ್ಲಿ ಕೇಳಿದ.

ಅವನ ಪ್ರಶ್ನೆಗೆ ಉತ್ತರವಾಗಿ ಮೀರಾ ಕಾಮಾಕ್ಷಿಯನ್ನು ಶಾಮುವಿನ ಕೈಗೆ ಕೊಟ್ಟಳು.

* * * * *